# ಶ್ರೀಮದ್ವಿಷ್ಣು ತತ್ತ್ವವಿನಿರ್ಣಯದಲ್ಲಿ ಉದಾಹೃತ ಶ್ರುತಿವಾಕ್ಯಗಳು

## ಒಂದು ಅಧ್ಯಯನ


ಲೇಖಕರು ಮತ್ತು ಸಂಪಾದಕರು

ಡಾ. ಪಾರ್ಥಸಾರಥಿಆಚಾರ್ಯ ರಾ. ಪಂಚಮುಖಿ




ಪ್ರಕಾಶಕರು

ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ

ಶ್ರೀರಾಘವೇಂದ್ರಸ್ವಾಮಿಗಳವರ ಮಠ, ಮಂತ್ರಾಲಯ

॥ ಶ್ರೀಮೂಲರಾಮೋ ವಿಜಯತೇ ॥ ॥ ಶ್ರೀಗುರುರಾಜೋ ವಿಜಯತೇ ॥

ಶ್ರೀರಘುನಂದನರಾಘವೇಂದ್ರಮಾಲಾ - ೫೭

# ಶ್ರೀಮದ್ವಿಷ್ಣುತತ್ವವಿನಿರ್ಣಯದಲ್ಲಿ ಉದಾಹೃತ ಶ್ರುತಿವಾಕ್ಯಗಳು

## ಒಂದು ಅಧ್ಯಯನ

ಪ್ರಧಾನ ಸಂಪಾದಕರು
ರಾಜಾ. ಎಸ್. ರಾಜಗೋಪಾಲಾಚಾರ್ಯ

ಲೇಖಕರು ಮತ್ತು ಸಂಪಾದಕರು
ಡಾ॥ ಪಾರ್ಥಸಾರಥಿಆಚಾರ್ಯ ರಾ. ಪಂಚಮುಖಿ

ಪ್ರಕಾಶಕರು
ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ
ಶ್ರೀರಾಘವೇಂದ್ರಸ್ವಾಮಿಗಳವರ ಮಠ, ಮಂತ್ರಾಲಯ

Rarest Archiver

ಗ್ರಂಥನಾಮ : ಶ್ರೀಮದ್ವಿಷ್ಣುತತ್ತ್ವವಿನಿರ್ಣಯದಲ್ಲಿ ಉದಾಹೃತ ಶ್ರುತಿವಾಕ್ಯಗಳು

SRIMAD VISHNUTATVA VINIRNAYADALLI
UDAHRUTHA SHRUTHIVAKYAGALU
By Dr. Parthasarathi Acharya R. Panchamukhi

ಪ್ರಥಮ ಮುದ್ರಣ : ೨೦೦೪

ಹಕ್ಕು : ಲೇಖಕರದ್ದು

ಪ್ರತಿಗಳು : ೧೦೦೦

ಪುಟ : xviii + 239

ಮುದ್ರಕರು : ಶ್ರೀವರ್ಣ ಪ್ರಿಂಟರ್ಸ್
ಬೆಂಗಳೂರು



Rarest Archiver

# ಗ್ರಂಥ ಸಮರ್ಪಣೆ

ಶ್ರೀಹಂಸನಾಮಕ ಪರಮಾತ್ಮನಿಂದ ಪ್ರವರ್ತಿತವಾದ

ಪರಂಪರೆಯಲ್ಲಿ ಬಂದಿರುವ ಸರ್ವಜ್ಞರಾದ

ಶ್ರೀಪಾವನಪವನಾಂಶಸಂಭೂತರಾದ

**ಜಗದ್ಗುರು ಶ್ರೀಮಧ್ವಾಚಾರ್ಯರ**

ಮೂಲಮಹಾಸಂಸ್ಥಾನಾಧೀಶ್ವರರಾದ ವೇದಾಂತ ಸಾಮ್ರಾಜ್ಯ

ದಿಗ್ವಿಜಯ ವಿದ್ಯಾಸಿಂಹಾಸನಾಧೀಶ್ವರರಾದ ಶ್ರೀಜಿತಾಮಿತ್ರತೀರ್ಥರ

ಕರಕಮಲಸಂಜಾತರಾದ **ಶ್ರೀರಘುನಂದನತೀರ್ಥ**ರ

ಹಾಗೂ ಕಲಿಯುಗದ ಕಾಮಧೇನು ಎಂದು ಪ್ರಸಿದ್ಧರಾದ

**ಶ್ರೀರಾಘವೇಂದ್ರಗುರುಸಾರ್ವಭೌಮ**ರ ಚರಣಾರವಿಂದಗಳಲ್ಲಿ

ಈ ಗ್ರಂಥವನ್ನು ಶ್ರೀರಘುನಂದನತೀರ್ಥರ ೫೦೦ ನೇ ವರ್ಷದ

ಆರಾಧನಾ ಸಂದರ್ಭದಲ್ಲಿ "ಏಕೋತ್ತರಶತಗ್ರಂಥ ಯೋಜನೆ"ಯ

ಅಡಿಯಲ್ಲಿ ಭಕ್ತಿಶ್ರದ್ಧಾದರಪೂರ್ವಕವಾಗಿ ಸಮರ್ಪಿಸಲಾಗಿದೆ.

**ಸಂಪಾದಕಮಂಡಲಿ**



Rarest Archiver

# ಆಶೀರ್ವಚನ

ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ಪದವಾಕ್ಯಪ್ರಮಾಣಪಾರಾವಾರಪಾರಂಗತ
ಸರ್ವತಂತ್ರಸ್ವತಂತ್ರ ಶ್ರೀಮದ್ವೈಷ್ಣವಸಿದ್ಧಾಂತಪ್ರತಿಷ್ಠಾಪನಾಚಾರ್ಯ
ಶ್ರೀಮನ್ಮೂಲರಘುಪತಿವೇದವ್ಯಾಸದೇವದಿವ್ಯಶ್ರೀಪಾದಪದ್ಮಾರಾಧಕ ಜಗದ್ಗುರು ಶ್ರೀಮನ್ಮಧ್ವಾಚಾರ್ಯ
ಮೂಲಮಹಾಸಂಸ್ಥಾನಾಧೀಶ್ವರರಾದ ಶ್ರೀರಾಘವೇಂದ್ರಸ್ವಾಮಿಗಳವರ ಮಠದ
ವೇದಾಂತಸಾಮ್ರಾಜ್ಯದಿಗ್ವಿಜಯವಿದ್ಯಾಸಿಂಹಾಸನಾಧೀಶ್ವರರಾದ
ಶ್ರೀಮತ್ಸುಯಮೀಂದ್ರತೀರ್ಥ ಶ್ರೀಪಾದಂಗಳವರ ಕರಕಮಲಸಂಜಾತರಾದ
ಶ್ರೀಮತ್ಸುಜಯೀಂದ್ರತೀರ್ಥ ಶ್ರೀಪಾದಂಗಳವರ ವರಕುಮಾರಕರಾದ

## ಶ್ರೀಮತ್ಸುಶಮೀಂದ್ರತೀರ್ಥ ಶ್ರೀಪಾದಂಗಳವರು

ಮಾಡುವ ನಾರಾಯಣ ಸ್ಮರಣೆಗಳು

ಪ್ರಕೃತ, ನಮ್ಮ ಪೂರ್ವೀಕರಾದ ಶ್ರೀಮನ್ಮಧ್ವಾಚಾರ್ಯರಿಂದ ಹರಿದು ಬಂದ ಈ ಸತ್ಸಂಪ್ರದಾಯ ಪರಂಪರೆಯಲ್ಲಿ ಅನೇಕ ಗ್ರಂಥಕಾರರು ಪೀಠಾಧಿಪತಿಗಳಾಗಿ ಮಧ್ವಸಿದ್ಧಾಂತ ಸೇವೆಯನ್ನು ಮಾಡಿರುತ್ತಾರೆ. ಅಂತೆಲೇ ನಮ್ಮ ಮಹಾಸಂಸ್ಥಾನವನ್ನು ವಿದ್ಯಾಸಿಂಹಾಸನವೆಂದು ಕರೆಯಲಾಗಿದೆ. ಇಂತಹ ವಿದ್ಯಾಮಠದ ಪರಂಪರೆಯಲ್ಲಿ ಆಚಾರ್ಯರಿಂದ ಹನ್ನೆರಡನೇ ಪೀಠಾಧೀಶ್ವರರಾಗಿ ಮೆರೆದು, ಬ್ರಹ್ಮಕರಾರ್ಚಿತವಾದ ಶ್ರೀಮೂಲರಾಮದೇವರನ್ನು ಪುನಃ ಮಹಾಸಂಸ್ಥಾನಕ್ಕೆ ತಂದುಕೊಟ್ಟು ಅಜರಾಮರರಾದ ಶ್ರೀರಘುನಂದನತೀರ್ಥರ ೫೦೦ನೇ ವರ್ಷದ ಆರಾಧನೆ ಹಾಗೂ ಶ್ರೀರಾಘವೇಂದ್ರ ಗುರುಸಾರ್ವಭೌಮರ ೩೩೩ನೇ ಆರಾಧನೆಯ ಸವಿನೆನಪಿಗಾಗಿ ಡಾ।। ಪಾರ್ಥಸಾರಥಿಆಚಾರ್ಯ ಪಂಚಮುಖಿ ಅವರಿಂದ ರಚಿತವಾದ **'ಶ್ರೀಮದ್ವಿಷ್ಣುತತ್ತ್ವವಿನಿರ್ಣಯದಲ್ಲಿ ಉದಾಹೃತ ಶ್ರುತಿವಾಕ್ಯಗಳು** - ಒಂದು ಅಧ್ಯಯನ' ಎನ್ನುವ ಗ್ರಂಥವನ್ನು ಏಕೋತ್ತರಶತಗ್ರಂಥಗಳ ಯೋಜನೆಯಲ್ಲಿ **ಸಪ್ತಪಂಚಾಶತ್ತಮ** ಕುಸುಮವಾಗಿ ಶ್ರೀಮಠದಿಂದ ಪ್ರಕಾಶಿಸುತ್ತಿರುವುದು ನಮಗೆ ಅತೀವ ಸಂತೋಷವನ್ನುಂಟುಮಾಡಿದೆ.

ಈ ಜ್ಞಾನಕಾರ್ಯ ನಿರಂತರವಾಗಿ ನಡೆಯುತ್ತಿರಲಿ ಹಾಗೂ ನಮ್ಮ ಪೂರ್ವೀಕರ ಅನೇಕ ಗ್ರಂಥಗಳು ಹೊರಬರುವಂತಾಗಲಿ ಎಂದು ನಮ್ಮ ಉಪಾಸ್ಯಮೂರ್ತಿಯಾದ ಮೂಲರಘುಪತಿ ವೇದವ್ಯಾಸದೇವರಲ್ಲಿ ತಥಾ ಶ್ರೀರಾಘವೇಂದ್ರಗುರುಸಾರ್ವಭೌಮರಲ್ಲಿ ಪ್ರಾರ್ಥಿಸುತ್ತೇವೆ.

ಇತಿ ನಾರಾಯಣ ಸ್ಮರಣೆಗಳು.



Rarest Archiver

# ಪ್ರಕಾಶಕರ ನುಡಿ

ಹಂಸನಾಮಕ ಪರಮಾತ್ಮನ ಭವ್ಯ ಪರಂಪರೆಯಲ್ಲಿ ವಿರಾಜಮಾನರಾದ ಜಗದ್ಗುರುಗಳೆನಿಸಿದ ಹನುಮ-ಭೀಮಾವತಾರಿಗಳಾದ ಶ್ರೀಮಧ್ವಾಚಾರ್ಯ ಪರಂಪರೆಯಲ್ಲಿ ಕಂಗೊಳಿಸಿ, ಶ್ರೀಮದಾಚಾರ್ಯರಿಂದ ೧೨ನೇ ಪೀಠಾಧೀಶ್ವರರಾಗಿ ಬ್ರಹ್ಮಕರಾರ್ಚಿತ-ವಾದ ಶ್ರೀಮೂಲರಾಮದೇವರನ್ನು ಪುನಃ ಮಹಾಸಂಸ್ಥಾನಕ್ಕೆ ತಂದು ಅಜರಾಮರರಾದ ಶ್ರೀರಘುನಂದನತೀರ್ಥರ ೫೦೦ನೇ ವರ್ಷದ ಆರಾಧನಾ ಮಹೋತ್ಸವ ಹಾಗೂ ಶ್ರೀರಾಘವೇಂದ್ರಗುರುಸಾರ್ವಭೌಮರ ೩೩೩ನೇ ಆರಾಧನೆಯು ಬಂದ ಈ ತಾರಣನಾಮ ಸಂವತ್ಸರವನ್ನು ಪೂಜ್ಯ ಶ್ರೀಸುಶಮೀಂದ್ರತೀರ್ಥ ಶ್ರೀಪಾದಂಗಳವರು **'ಶ್ರೀರಘುನಂದನರಾಘವೇಂದ್ರವರ್ಷ'** ಎಂದು ಘೋಷಿಸಿ, ತನ್ಮೂಲಕ ಅನೇಕ ಉದ್ಗ್ರಂಥಗಳ ಪ್ರಕಾಶನವನ್ನು ಮಾಡಬೇಕೆಂದು ತೀರ್ಮಾನಿಸಿ, ಶತಗ್ರಂಥಗಳನ್ನು ಸಂಶೋಧಿಸಿ, ಮುದ್ರಿಸಬೇಕೆಂದು ಆದೇಶಿಸಿದ್ದರು. ಶ್ರೀಶ್ರೀಪಾದಂಗಳವರ ಆಜ್ಞಾನುಸಾರ ಶ್ರೀರಘುನಂದನತೀರ್ಥರ ಆರಾಧನೆಯ ಸಂದರ್ಭದಲ್ಲಿ ೧೦೧ ಗ್ರಂಥಗಳನ್ನು ಬಿಡುಗಡೆ-ಗೊಳಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡು ಈ ಗ್ರಂಥವನ್ನು **ಶ್ರೀರಘುನಂದನರಾಘವೇಂದ್ರ-ಮಾಲೆಯ** ಕುಸುಮವಾಗಿ ಜಿಜ್ಞಾಸುಗಳ ಮುಂದೆ ಅನಾವರಣಗೊಳಿಸುತ್ತಿದ್ದೇವೆ.

ಶ್ರೀಯುತ ಡಾ|| ಪಾರ್ಥಸಾರಥಿಆಚಾರ್ಯ ಪಂಚಮುಖಿಯವರು ಶ್ರೀವಿಷ್ಣುತತ್ತ್ವವಿನಿರ್ಣಯ ಗ್ರಂಥದ ಮೇಲೆ ಉತ್ತಮವಾದ ಗ್ರಂಥವೊಂದವನ್ನು ಈ ಹಿಂದೆಯೇ ಪ್ರಕಟಿಸಿದ್ದಾರೆ. ಪ್ರಸ್ತುತ ಶ್ರೀಮಠದಿಂದ ಪ್ರಕಾಶಿಸಲು ನಮಗೆ ಶ್ರೀವಿಷ್ಣುತತ್ತ್ವವಿನಿರ್ಣಯದಲ್ಲಿ ಉದಾಹೃತ ಶ್ರುತಿವಾಕ್ಯಗಳು - ಒಂದು ಅಧ್ಯಯನ ಎನ್ನುವ ಗ್ರಂಥವನ್ನು ಸಂಶೋಧಿಸಿಕೊಟ್ಟಿರುತ್ತಾರೆ. ಈ ಮಹತ್ಕಾರ್ಯದಲ್ಲಿ ನಮ್ಮೊಂದಿಗೆ ಸಹಕರಿಸಿದ ಪಂಚಮುಖಿ ಆಚಾರ್ಯರಿಗೆ ನನ್ನ ಅನಂತ ವಂದನೆಗಳು ಹಾಗೂ ಗ್ರಂಥ ಪ್ರಕಾಶನ ಮತ್ತು ಮುದ್ರಣದಲ್ಲಿ ನಮ್ಮೊಂದಿಗೆ ಸಹಕರಿಸಿದ ಶ್ರೀಗುರುಸಾರ್ವಭೌಮ ಸಂಸ್ಕೃತ ವಿದ್ಯಾಪೀಠದ ಅಧ್ಯಾಪಕವೃಂದಕ್ಕೂ, ವಿಶೇಷ ಮುತುವರ್ಜಿ ವಹಿಸಿ ಗ್ರಂಥ ಹೊರಬರಲು ಶ್ರಮಿಸಿದ



Rarest Archiver

ರಾಜಾ. ಎಲ್. ಸೂರೀಂದ್ರಾಚಾರ್ಯ ಅವರಿಗೂ, ಅಂದವಾಗಿ ಮುದ್ರಿಸಿಕೊಟ್ಟ ಶ್ರೀವರ್ಣ ಪ್ರಿಂಟರ್ಸ್‌ನ ಸಿಬ್ಬಂದಿ ವರ್ಗದವರಿಗೂ ಶ್ರೀರಾಘವೇಂದ್ರಗುರುಸಾರ್ವಭೌಮರು ಸಕಲ ಸನ್ಮಂಗಳವನ್ನುಂಟುಮಾಡಲಿ ಎಂದು ಪ್ರಾರ್ಥಿಸುತ್ತೇನೆ.

ಮಂತ್ರಾಲಯ
೩೧-೮-೨೦೦೪
ಮಧ್ವಾರಾಧನಾ

ಇತಿ ಸಜ್ಜನ ವಿಧೇಯ

**ರಾಜಾ. ಎಸ್. ರಾಜಗೋಪಾಲಾಚಾರ್ಯ**

ಶ್ರೀಪಾದಂಗಳವರ ಆಪ್ತ ಕಾರ್ಯದರ್ಶಿಗಳು
ಶ್ರೀರಾಘವೇಂದ್ರಸ್ವಾಮಿಗಳವರ ಮಠ
ಮಂತ್ರಾಲಯ



Rarest Archiver

Rarest Archiver

## ಶ್ರೀ

## ಮೊದಲ ಮಾತು

ಪ್ರಸ್ತುತ ಗ್ರಂಥವನ್ನು ಶ್ರೀರಾಘವೇಂದ್ರಸ್ವಾಮಿಮಠದ ಪೀಠಾಧೀಶರೂ ನಮಗೆ ಕುಲಗುರುಗಳು ಆದ ಪರಮಪೂಜ್ಯ ಶ್ರೀ ಶ್ರೀ ೧೦೦೮ ಶ್ರೀ ಶ್ರೀಮತ್ ಸುಶಮೀಂದ್ರತೀರ್ಥ-ಶ್ರೀಪಾದಂಗಳವರ ಆಜ್ಞೆಯ ಮೇರೆಗೆ ರಚಿಸಿ ಸಮರ್ಪಿಸಿದ್ದೇನೆ. ಪರಮಪೂಜ್ಯ ಶ್ರೀಪಾದಂಗಳವರು ತಮ್ಮ ಸಿದ್ಧಹಸ್ತದಿಂದ ಮಂತ್ರಾಕ್ಷತೆ ಕೊಟ್ಟ ಮೇಲೆಯೇ ಶ್ರೀಮದ್ವಿಷ್ಣು-ತತ್ತ್ವವಿನಿರ್ಣಯ ಅಧ್ಯಯನ ಮಾಲೆಯ ಪುಷ್ಪಗಳು ಹೊರಬರುತ್ತಿದ್ದು ಅವರು ಕೊಟ್ಟ ಮಂತ್ರಾಕ್ಷತೆಯ ಮಹಿಮೆಗೆ ಇದು ಇನ್ನೊಂದು ನಿದರ್ಶನವೆಂದು ನನ್ನ ದೃಢವಾದ ವಿಶ್ವಾಸವಾಗಿದೆ. ಸಂಸ್ಕೃತದಲ್ಲಿ ಅಣುಸುಧಾಸಾರಃ ಎಂಬ ತತ್ತ್ವನಿರ್ಣಯ ಕಾರಿಕಾ, ಇಂಗ್ಲೀಷನಲ್ಲಿ ವಿವರಣೆ, ವ್ಯಾಕರಣ ವಿಷಯಗಳು, ಪ್ರಮಾಣಗಳ ಸಂಗ್ರಹ, ಸೂಕ್ತಿಗಳು ಹಾಗೂ ಶಬ್ದಾನುಕ್ರಮಣಿಕಾದ ಸಹಿತವಾಗಿ ಟೀಕೆ, ಶ್ರೀರಾಯರ ಭಾವದೀಪದಿಂದ ಕೂಡಿ ಹೊಸರೀತಿಯಿಂದ ಸಂಪಾದಿಸಲ್ಪಟ್ಟ ಶ್ರೀಮದ್ವಿಷ್ಣುತತ್ತ್ವ ವಿನಿರ್ಣಯದ ೯೬೬ ಪುಟಗಳ ಪ್ರಥಮ ಪುಷ್ಪ ಗ್ರಂಥವನ್ನು ಸ್ವತಃ ಪೂಜ್ಯ ಶ್ರೀಪಾದಂಗಳವರೇ ಶ್ರೀಮಂತ್ರಾಲಯದಲ್ಲಿ ಪೂಜ್ಯ ಶ್ರೀ ಸುಜಯೀಂದ್ರತೀರ್ಥರ ೧೮ನೆಯ ಮಹಾಸಮಾರಾಧನೆಯಂದು (೨೫-೧-೨೦೦೪) ಶ್ರೀರಾಯರ ಸನ್ನಿಧಿಯಲ್ಲಿ ಬಂಗಾರದ ರಥದಲ್ಲಿಟ್ಟು ಪ್ರದಕ್ಷಿಣೆ ಮಾಡಿಸಿ ಅನುಗ್ರಹಿಸಿ ಬಿಡುಗಡೆಮಾಡಿ ಮಂತ್ರಾಕ್ಷತೆ ಅನುಗ್ರಹಿಸಿದ್ದರಿಂದ ನಾನು ಕೃತ-ಕೃತ್ಯತೆಯಿಂದ ಗುರುಗಳ ಪಾದಾರವಿಂದದಲ್ಲಿ ಭಕ್ತಿಪುರಸ್ಸರವಾಗಿ ಅನಂತದಂಡ ಪ್ರಣಾಮಗಳನ್ನು ಸಮರ್ಪಿಸುತ್ತೇನೆ. ಶ್ರೀಗುರುರಾಜರ ಸೇವೆಯು ನನ್ನಿಂದ ಇನ್ನೂ ಹೆಚ್ಚು ಹೆಚ್ಚು ಘಟಿಸಲಿ ಎಂದು ಪರಮಪೂಜ್ಯ ಶ್ರೀಪಾದಂಗಳವರು ಅನುಗ್ರಹಿಸಲೆಂದು ಅವರಲ್ಲಿ ಪ್ರಾರ್ಥಿಸುತ್ತೇನೆ.

ಆದರಣೀಯ ಶ್ರೀಪಾದಪುತ್ರರಾದ ಶ್ರೀ ರಾಜಗೋಪಾಲಾಚಾರ್ಯರು ಈ ಕೃತಿಯನ್ನು ನೋಡಿ ಪ್ರಶಂಸಿಸಿ ಇದನ್ನು ಶ್ರೀ ಶ್ರೀ ರಘುನಂದನತೀರ್ಥರ ೩೦೦ನೆಯ ಆರಾಧನೆಯ ಸಂದರ್ಭದಲ್ಲಿ ಪ್ರಕಟಿಸಲ್ಪಡುವ ೧೦೧ ಕೃತಿಗಳಲ್ಲಿ ಸೇರಿಸಿದ್ದೂ ಕೂಡ ನನ್ನ ಭಾಗ್ಯವೆಂದೇ ಎಣಿಸಿದ್ದೇನೆ. ಅವರಿಗೆ ನನ್ನ ಸಾದರ ಪ್ರಣಾಮಗಳನ್ನು ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ.

ಮಾಧ್ವ ಇತಿಹಾಸದಲ್ಲಿಯೇ ಅವಿಸ್ಮರಣೀಯ ಕೀರ್ತಿ ಹೊಂದಿದ ಶ್ರೀ ಶ್ರೀ ರಘುನಂದನತೀರ್ಥರ ೩೦೦ನೆಯ ಆರಾಧನೆಯ ಸಂದರ್ಭದಲ್ಲಿ ಅವರ ಸನ್ನಿಧಿಯಲ್ಲಿ ನಾನು ಈ ಸೇವೆಯನ್ನು ಅನಂತ ದಂಡಪ್ರಣಾಮಪೂರ್ವಕ ಸಮರ್ಪಿಸುತ್ತಿದ್ದೇನೆ. ಶ್ರೀ ರಾಘವೇಂದ್ರಸ್ವಾಮಿಮಠದ ಪ್ರಕಾಶನಮಾಲೆಯಲ್ಲಿ ಈ ಕೃತಿಯ ಸೇರ್ಪಡೆಯಿಂದ ಇದಕ್ಕೆ ಒಂದು ಸ್ಥಾನ ಲಭಿಸಿದೆಯೆಂದು ನನ್ನ ಭಾವನೆ.

ಇದೇ ಸಂದರ್ಭದಲ್ಲಿ ಈ ಪ್ರಕಾಶನಮಾಲೆಗೆ ಮುಂಚೂಣಿಯಲ್ಲಿದ್ದು ಉತ್ಸಾಹ-ದಿಂದ ಕಾರ್ಯನಿರ್ವಹಿಸುತ್ತಿರುವ ಶ್ರೀ ಸೂರೀ ಆಚಾರ್ಯರಿಗೂ ಅಭಿನಂದನೆಯ

Rarest Archiver

ಸಹಿತವಾದ ವಿಶೇಷ ವಂದನೆಗಳು.

ನನಗೆ ಚಿಕ್ಕಂದಿನಿಂದಲೇ ವಿದ್ಯೆಗಲಿಸಿ ಮಧ್ವಶಾಸ್ತ್ರದಲ್ಲಿ ಪ್ರವೇಶ ಮಾಡಿಸಿ ನಿರಂತರ ಪಾಠ ಹೇಳಿ ವಿಶೇಷತಃ ಶ್ರೀಮದ್ವಿಷ್ಣುತತ್ವವಿನಿರ್ಣಯಗ್ರಂಥದಲ್ಲಿ ವಿಶೇಷ ಆಸಕ್ತಿ ಅಭಿರುಚಿಗಳನ್ನು ಹುಟ್ಟಿಸಿದ ಹಾಗೂ ಸಂಶೋಧನೆಯ ದೃಷ್ಟಿಯನ್ನು ಕೊಟ್ಟು ದಾರಿತೋರಿಸಿದ ನನ್ನ ಪೂಜ್ಯ ತಂದೆಯವರಾದ ವಿದ್ಯಾರತ್ನ ವಿದ್ಯಾಭೂಷಣ ಶ್ರೀ ರಾಘವೇಂದ್ರಾಚಾರ್ಯ ಪಂಚಮುಖಿ ಇವರಿಗೆ ಅವರ ಜನ್ಮಶತಾಬ್ದಿಯ ಅಂಗವಾಗಿ ಈ ಕೃತಿಯ ಮೂಲಕ ವಿಶೇಷ ನಮನಗಳನ್ನು ಸಲ್ಲಿಸುತ್ತಿದ್ದೇನೆ

ಶ್ರೀಮದಾಚಾರ್ಯರು ಅನಾದಿಕಾಲದಿಂದ ಬಂದ ವಿಷ್ಣುಸರ್ವೋತ್ತಮತ್ವ ಪಂಚ-ಭೇದಗಳ ಸಿದ್ಧಾಂತದ ಪ್ರತಿಷ್ಠಾಪನಾಚಾರ್ಯರು; ಅನಾದಿಕಾಲದಿಂದ ಬಂದ ಈ ಸಿದ್ಧಾಂತಕ್ಕೆ ಬಹಳ ಪೂರ್ವದಲ್ಲಿಯೇ ಶ್ರೀವೇದವ್ಯಾಸರು ಶ್ರುತಿಗಳ ಆಧಾರಗಳನ್ನು ಸುಸಜ್ಜಿತವಾದ ರೀತಿಯಲ್ಲಿ ಒದಗಿಸಿಕೊಟ್ಟಿದ್ದರು. ಕೇವಲ ಸದಾಗಮಗಳಿಂದ ಮಾತ್ರ ಸರ್ವೋತ್ತಮನಾದ ವಿಷ್ಣುವನ್ನು ತಿಳಿಯಬೇಕೆಂಬುದನ್ನು ಈ ಮೂಲಕ ತಿಳಿಸಿಕೊಡುವದೇ ಶ್ರೀಮನ್ನಾರಾಯಣಾ-ವತಾರಿಗಳಾದ ವೇದವ್ಯಾಸರ ಹಾರ್ದವಾಗಿತ್ತೆಂದು ಇದರಿಂದ ತಿಳಿಯುವದು. ಇದನ್ನೇ ಅವರು ಸ್ಪಷ್ಟವಾದ ರೀತಿಯಲ್ಲಿ ತಮ್ಮ ೫೬೪ ಬ್ರಹ್ಮಸೂತ್ರಗಳಲ್ಲಿ ಸೂಚಿಸಿದ್ದಾರೆ. ಆದರೆ ವಿಜ್ಞಾನ ಸೂರ್ಯನು ಕಾಲಬಲದಿಂದ ಹಾಗೂ ಅನೇಕ ಅಪವ್ಯಾಖ್ಯಾನಗಳ ಕಾರ್ಮೋಡ-ಗಳಲ್ಲಿ ಕಣ್ಮರೆಯಾದಾಗ ಆ ಕಾರ್ಮೋಡಗಳನ್ನು ಚದುರಿಸಿ ಪುನಃ ಆ ವಿಜ್ಞಾನಸೂರ್ಯನ ಪ್ರಕಾಶವು ಮುಮುಕ್ಷುಗಳಿಗೆ ದೊರೆಯುವಂತೆ ಮಾಡಿದವರೇ ವಾಯುದೇವರ ಅವ-ತಾರಿಗಳಾದ ಶ್ರೀಮನ್ಮಧ್ವಾಚಾರ್ಯರು. ಅವರು ಮಾಡಿದ ಉಪಕಾರವನ್ನು ಎಣಿಸಲು ಅಸಾಧ್ಯ.

ಶ್ರೀ ವೇದವ್ಯಾಸರು ತತ್ವಜ್ಞಾನಕ್ಕೆ ಆಧಾರವಾದ ವೇದಗಳನ್ನು ವಿಭಾಗ ಮಾಡಿ ಮಹಾಭಾರತ ಪುರಾಣಗಳನ್ನು ರಚಿಸಿ ವೇದಾರ್ಥ ನಿರ್ಣಾಯಕವಾದ ಬ್ರಹ್ಮಸೂತ್ರಗಳನ್ನು ರಚಿಸಿಕೊಟ್ಟು ತತ್ವಜ್ಞಾನವು ಗೋಚರಿಸುವಂತೆ ಮಾಡಿದ ರೀತಿಯಲ್ಲಿಯೇ ಶ್ರೀಮನ್ಮಧ್ವಾ-ಚಾರ್ಯರು ತತ್ವನಿರ್ಣಯಕ್ಕೋಸ್ಕರವೇ ಈ ಆಧಾರಗಳನ್ನು ಸ್ಪಷ್ಟವಾಗಿ ಉಲ್ಲೇಖಿಸುತ್ತ ಅವುಗಳ ಅರ್ಥಗಳನ್ನು ತಮ್ಮದೇ ಆದ ಗಂಭೀರವಾದ ಶೈಲಿಯಲ್ಲಿ ವಿವರಿಸುತ್ತ ಗ್ರಂಥ-ರಚನೆ ಮಾಡಿದುದನ್ನು ನೋಡಿದಾಗ ಇವರು ಶ್ರೀ ವೇದವ್ಯಾಸರ ಕಾರ್ಯವನ್ನೇ ಮುಂದು-ವರಿಸಿದ ಅವರ ಪ್ರಧಾನ ಪ್ರತಿಬಿಂಬರಾಗಿರುವರೆಂಬುದು ಸ್ಪಷ್ಟವಾಗುವದು. ಅದಕ್ಕೇ 'ಆಭಾಸಕೋಽಸ್ಯಪವನಃ' ಎಂದು ಶ್ರೀಮದಾಚಾರ್ಯರೇ ಮಹಾಭಾರತತಾತ್ಪರ್ಯ-ನಿರ್ಣಯದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ.

ಶ್ರೀಮದಾಚಾರ್ಯರು ರಚನೆ ಮಾಡಿದ ಸರ್ವಮೂಲಗ್ರಂಥಗಳಲ್ಲಿ ದಶಪ್ರಕ-ರಣಗಳು ಪ್ರಧಾನವಾದ ಪಾತ್ರವನ್ನು ವಹಿಸುವವು. ಅವುಗಳಲ್ಲಿಯೂ ಶ್ರೀಮದ್ವಿಷ್ಣು-ತತ್ವ ವಿನಿರ್ಣಯವೆಂಬುದು ಅಪ್ರತಿಮವಾದ ಕೃತಿ. ತಮ್ಮ ಎಲ್ಲ ಕೃತಿಗಳಲ್ಲಿ ಶ್ರೀಮದಾಚಾರ್ಯರು ಸದಾಗಮಗಳನ್ನು ಉದಾಹರಿಸುತ್ತ ಸಿದ್ಧಾಂತದ ರಹಸ್ಯವನ್ನು ಸ್ಪಷ್ಟಪಡಿಸುತ್ತಿದ್ದರೂ ಶ್ರೀಮದ್ವಿಷ್ಣುತತ್ವ ವಿನಿರ್ಣಯಕ್ಕೆ ಈ ವಿಷಯದಲ್ಲಿ ಅವರದೇ



Rarest Archiver

ಆದ ವೈಶಿಷ್ಟ್ಯವಿದೆ. ಇದರಲ್ಲಿ ವಿಷ್ಣುತತ್ತ್ವದ ವಿಶಿಷ್ಟವಾದ ರೀತಿಯಲ್ಲಿಯ ನಿರ್ಣಯವು ವೇದಾದಿಪ್ರಮಾಣಗಳ ಆಧಾರದ ಮೇಲೆ ಮಾಡಲ್ಪಟ್ಟಿದೆ. ಪರಮತಗಳಿಗೆ ವೇದಾದಿ ಪ್ರಮಾಣಗಳ ಆಧಾರವು ಇಲ್ಲವೆಂಬುದೂ ಇಲ್ಲಿ ಸ್ಪಷ್ಟವಾಗಿ ಪ್ರತಿಪಾದಿಸಲ್ಪಟ್ಟಿರುವದರಿಂದ ಜಿಜ್ಞಾಸುಗಳಿಗೆ ವಿಷ್ಣುತತ್ತ್ವ ವಿನಿರ್ಣಯದ ವಿಷಯಕ್ಕೆ ದಾರ್ಢ್ಯ ಬರುವದು. ಪರಮತೀಯರು ಉದಾಹರಿಸುವ ಆಗಮ ವಾಕ್ಯಗಳಿಗೂ ಕೂಡ ಶ್ರೀವೇದವ್ಯಾಸರು ಸೂಚಿಸಿದ ವೇದಾರ್ಥ-ನಿರ್ಣಾಯಕ ನಿಯಮಗಳನ್ನನುಸರಿಸಿ ಅರ್ಥ ಹೇಳುವದರಿಂದ ಶ್ರುತ್ಯರ್ಥನಿರ್ಣಯವು ಈ ಗ್ರಂಥದಲ್ಲಿ ಬಹಳ ವಿಮರ್ಶಾತ್ಮಕವಾಗಿ ಮತ್ತು ಸ್ಪಷ್ಟವಾಗಿ ಮಾಡಲ್ಪಟ್ಟಿದೆ.

ಶ್ರೀಮದಾಚಾರ್ಯರು ಶ್ರುತಿಗಳಿಗೆ ಅರ್ಥ ಹೇಳುವ ರೀತಿಯೇ ಬಲು ವೈಶಿಷ್ಟ್ಯಪೂರ್ಣವಾದುದು. ಅನಂತವಾದ ವೇದವಾಕ್ಯಗಳನ್ನು ಬಹಳ ಸಮರ್ಪಕವಾದ ರೀತಿಯಲ್ಲಿ ಪರಸ್ಪರ ಸಂವಾದಿಯಾಗುವಂತೆ ಉದಾಹರಿಸುತ್ತ ಅವುಗಳ ತಾತ್ಪರ್ಯಗಳು ಇನ್ನುಳಿದ ಸದಾಗಮಗಳಲ್ಲಿ ಹೇಗೆ ವಿವರಿಸಲ್ಪಟ್ಟಿವೆ ಎಂಬುದನ್ನು ತೋರಿಸುತ್ತ ಅವಶ್ಯ-ವಿದ್ದಾಗ ಅವುಗಳ ವಿವರಣೆಯನ್ನು ತಮ್ಮ ಪದಗಳಿಂದ ಅರ್ಥವು ಸ್ಪಷ್ಟವಾಗುವ ರೀತಿಯಲ್ಲಿ ಕೊಡುತ್ತ ಹೋಗಿರುವದರಿಂದ ವಿಷ್ಣುತತ್ತ್ವವಿನಿರ್ಣಯವು ಜಿಜ್ಞಾಸುಗಳಿಗೆ ಅಪ್ರತಿಮವಾದ ದಾರಿದೀಪ, ಸಾಧಕರಿಗೆ ಶ್ರೇಷ್ಠವಾದ ಮಾರ್ಗದರ್ಶಕವಾದ ಗ್ರಂಥವಾಗಿದೆಯೆಂಬುದು ಈ ಗ್ರಂಥದ ಅಧ್ಯಯನ ಮಾಡುವವರಿಗೆ ಸ್ಪಷ್ಟವಾಗಿ ತಿಳಿಯುವದು. ಈ ಗ್ರಂಥದಲ್ಲಿ ತತ್ತ್ವವನ್ನು ತಿಳಿಯಲು ಅವಶ್ಯವಾಗಿ ಬೇಕಾಗುವ ಬೇರೆ ಬೇರೆ ಅನೇಕ ವಿಷಯಗಳ ಬಗ್ಗೆ ವಿಶ್ಲೇಷಣೆ ಇದ್ದರೂ ಇಲ್ಲಿ ಉದಾಹೃತವಾದ ಶ್ರುತಿವಾಕ್ಯಗಳನ್ನು ಮಾತ್ರ ಏಕತ್ರ ತಂದು ಅವುಗಳ ವಿವರಣೆಯನ್ನು ಶ್ರೀಮದಾಚಾರ್ಯರು ಹೇಗೆ ಸಮರ್ಪಕವಾದ ರೀತಿಯಲ್ಲಿ ಕೊಟ್ಟಿದ್ದಾರೆಂಬುದನ್ನು ತೋರಿಸುವದೇ ಪ್ರಸ್ತುತ ಕೃತಿಯ ಮುಖ್ಯ ಉದ್ದೇಶವಾಗಿದೆ.

'ಶ್ರೀಮದ್ವಿಷ್ಣುತತ್ತ್ವವಿನಿರ್ಣಯದಲ್ಲಿ ಉದಾಹೃತ ಶ್ರುತಿವಾಕ್ಯಗಳು: ಒಂದು ಅಧ್ಯಯನ' ಇದು 'ಶ್ರೀಮದ್ವಿಷ್ಣುತತ್ತ್ವವಿನಿರ್ಣಯ ಅಧ್ಯಯನಮಾಲಾ' ಎಂದು ಪರಮಪೂಜ್ಯ ಶ್ರೀ ಶ್ರೀ ಸುಶಮೀಂದ್ರತೀರ್ಥಶ್ರೀಪಾದಂಗಳವರ ಮಂತ್ರಾಕ್ಷತೆ ಪಡೆದು ನಾನು ಪ್ರಾರಂಭಿಸಿದ ಗ್ರಂಥಮಾಲೆಯಲ್ಲಿಯ ಆರನೆಯ ಪುಷ್ಪವು. ಈ ಗ್ರಂಥಮಾಲೆಯಲ್ಲಿಯ ಪುಷ್ಪಗಳು ಇಂತಿವೆ :

ಪುಷ್ಪ ೧. ಶ್ರೀಮದ್ ವಿಷ್ಣುತತ್ತ್ವ ವಿನಿರ್ಣಯ ಮೂಲ ಟೀಕಾ ಭಾವದೀಪ ಸಹಿತ (ವಿಷಯ ಸಂಗ್ರಹ, ಶಬ್ದಾನುಕ್ರಮಣಿಕಾ ಹಾಗೂ ಇತರ ಉಪಯುಕ್ತ ವಿವರಣೆಗಳೊಂದಿಗೆ)

ಪುಷ್ಪ ೨. ಕರ್ನಾಟಕ ತತ್ತ್ವನಿರ್ಣಯ ಷಟ್ಪದಿ (ಕನ್ನಡದಲ್ಲಿ ಭಾಮಿನಿ ಷಟ್ಪದಿಯಲ್ಲಿ ವಿಷ್ಣುತತ್ತ್ವನಿರ್ಣಯದ ಸಾರಸಂಗ್ರಹ)

ಪುಷ್ಪ ೩. ಶ್ರೀಮದಣುಸುಧಾಸಾರಃ (೬೯೭ ಸರಳ ಸಂಸ್ಕೃತ ಶ್ಲೋಕಗಳಲ್ಲಿ ಶ್ರೀಮದ್ ವಿಷ್ಣುತತ್ತ್ವವಿನಿರ್ಣಯದ ವಿಷಯ ಸಂಗ್ರಹ)

ಪುಷ್ಪ ೪. Shrimad Vishnutattva Vinirnaya : A Summary in English and an Appraisal



Rarest Archiver

ಪುಷ್ಪ ೫. ಶ್ರೀ ರಾಯರ ಶ್ರೀಮದ್ ವಿಷ್ಣುತತ್ವವಿನಿರ್ಣಯ ಟೀಕಾ ಭಾವದೀಪ : ಒಂದು ಅಧ್ಯಯನ

ಪುಷ್ಪ ೬. ಶ್ರೀಮದ್ ವಿಷ್ಣುತತ್ವ ವಿನಿರ್ಣಯದಲ್ಲಿ ಉದಾಹೃತ ಶ್ರುತಿವಾಕ್ಯಗಳು : ಒಂದು ಅಧ್ಯಯನ

ಪ್ರಸ್ತುತ ಕೃತಿಯಲ್ಲಿ ವಿಷ್ಣುತತ್ವವಿನಿರ್ಣಯ ಗ್ರಂಥದಲ್ಲಿ ಶ್ರೀಮನ್ಮಧ್ವಾಚಾರ್ಯರು ಹಾಗೂ ಅದರ ಟೀಕೆಯಲ್ಲಿ ಶ್ರೀಮಟ್ಟೀಕಾಕೃತ್ಪಾದರು ಉದಾಹರಿಸಿದ ಪ್ರಧಾನ ಶ್ರುತಿವಾಕ್ಯಗಳನ್ನು ಏಕತ್ರ ಸಂಗ್ರಹಿಸಿ ಅವುಗಳಿಗೆ ಶ್ರೀಮದಾಚಾರ್ಯರು ವಿವರಿಸಿದ ತಾತ್ಪರ್ಯವನ್ನು ಕನ್ನಡದಲ್ಲಿ ವಿವರಿಸಲು ಪ್ರಯತ್ನಿಸಲಾಗಿದೆ. ಟಿಪ್ಪಣೀಕಾರರೂ ವಿಶೇಷವಾಗಿ ಶ್ರೀ ರಾಯರು ಇನ್ನೂ ಅನೇಕ ಶ್ರುತಿಗಳನ್ನು ತಮ್ಮ ಟಿಪ್ಪಣಿಗಳಲ್ಲಿ ಉದಾಹರಿಸಿದ್ದಾರೆ. ಆದರೆ ಆ ಎಲ್ಲ ಶ್ರುತಿಗಳನ್ನೂ ಈ ಅಧ್ಯಯನದ ಕೃತಿಯಲ್ಲಿ ಸೇರಿಸಲು ಆಗಿಲ್ಲ. ಅದೂ ಕೂಡ ಈ ದಿಶೆಯಲ್ಲಿಯ ಇನ್ನೊಂದು ಹೊಸ ಪ್ರಯತ್ನಕ್ಕೆ ವಿಷಯವಾಗಬಹುದು.

ಶ್ರುತಿಗಳ ಅಧ್ಯಯನದ ಈ ಸಂದರ್ಭದಲ್ಲಿ ಈ ಕೆಳಗಿನ ಯೋಜನೆಯನ್ನು ಅನುಸರಿಸಲಾಗಿದೆ.

೧. ಉದಾಹರಿಸಲ್ಪಟ್ಟ ಶ್ರುತಿಗಳನ್ನು ಅವುಗಳ ಪ್ರಧಾನ ವಿಷಯುಗಳಿಗನುಗುಣವಾಗಿ ವಿಂಗಡಿಸುವದು, ಆಕರಗಳ ವಿಷಯದಲ್ಲಿ ವಿವಿಧ ಅಭಿಪ್ರಾಯಗಳನ್ನು ವಿಮರ್ಶಿಸುವದು.

೨. ಶ್ರುತಿವಾಕ್ಯಗಳ ಅನ್ವಯವನ್ನು ಶ್ರೀಮದಾಚಾರ್ಯರು ಸೂಚಿಸಿದಂತೆ ಹಾಗೂ ಟೀಕೆ ಮತ್ತು ವಿಶೇಷತಃ ಶ್ರೀರಾಯರ ಭಾವದೀಪ ಖಂಡಾರ್ಥಗಳಿಗನುಗುಣವಾಗಿ ಕೊಡುವದು.

೩. ಶ್ರುತಿಗಳ ಅರ್ಥವನ್ನು ತಿಳಿಯಾದ ಕನ್ನಡದಲ್ಲಿ ಕೊಡುವದು. ಈ ವಿಷಯದಲ್ಲಿ ಅವಶ್ಯವಿದ್ದ ವಿವರಣೆಯನ್ನು ವಿವಿಧ ಟೀಕಾ ಟಿಪ್ಪಣಿಗಳ ಆಧಾರದ ಮೇಲೆ ಕೊಡುವದು.

೪. ಶ್ರುತಿಗಳ ಭಾವವನ್ನು ಶ್ರುತ್ಯರ್ಥ ಷಟ್ಪದಿಯೆಂಬ ಸರಳ ಭಾಮಿನೀ ಷಟ್ಪದಿಯ ಕನ್ನಡ ಪದ್ಯಗಳಲ್ಲಿ ಸಂಗ್ರಹಿಸುವದು. ಮತ್ತು

೫. ಉದಾಹೃತ ಶ್ರುತಿಗಳನ್ನು ಅಕ್ಷರಾನುಗುಣವಾಗಿ ಕೊನೆಗೆ ಸಂಗ್ರಹಿಸುವದು.

ಪ್ರಸ್ತುತ ಕೃತಿಯು ಶ್ರೀಮದಾಚಾರ್ಯರ ಸಿದ್ಧಾಂತದ ಅಧ್ಯಯನ, ವಿವರಣೆಯ ನಿಟ್ಟಿನಲ್ಲಿ ಒಂದು ಹೊಸ ರೀತಿಯ ಪ್ರಯತ್ನವಷ್ಟೆ. ಈ ಪ್ರಯತ್ನದ ಸಂದರ್ಭದಲ್ಲಿ ಶ್ರೀಮದ್ವಿಷ್ಣುತತ್ವ ವಿನಿರ್ಣಯದ ಮೆಲೆ ಇಲ್ಲಿಯ ವರೆಗೆ ಪ್ರಕಾಶಿತವಾದ ಶ್ರೀ ನಾರಾಯಣ ಪಂಡಿತಾಚಾರ್ಯರ ತತ್ವಮಂಜರೀ ಟೀಕೆ, ಶ್ರೀಮಟ್ಟೀಕಾಕೃತ್ಪಾದರ ಟೀಕೆ ಹಾಗೂ ಅದರ ಮೇಲಿನ ಐದು ಟಿಪ್ಪಣಿಗಳು ಮತ್ತು ಶ್ರುತ್ಯರ್ಥಕಾಗಿ ಶ್ರೀ ಮಧ್ವಮುನಿಗಳ ಋಕ್ ಭಾಷ್ಯ, ಉಪನಿಷದ್ ಭಾಷ್ಯ,, ಶ್ರೀ ಜಯತೀರ್ಥರ ಟೀಕೆ, ಶ್ರೀವ್ಯಾಸರಾಯರ ನ್ಯಾಯಾಮೃತ, ಶ್ರೀವಾದಿರಾಜತೀರ್ಥರ ಉಪನಿಷತ್ಪ್ರಕಾಶಿಕಾ, ಶ್ರೀರಾಯರ ಉಪನಿಷತ್‌ಖಂಡಾರ್ಥಗಳು, ಇತ್ಯಾದಿ ಗ್ರಂಥಗಳ ಲಾಭವನ್ನು ಪಡೆಯಲಾಗಿದೆ. ಎಲ್ಲ ಗುರುಗಳು ನನಗೆ ಅನುಗ್ರಹಿಸಬೇಕೆಂದು ಪ್ರಾರ್ಥಿಸುತ್ತಿದ್ದೇನೆ.



Rarest Archiver

ಶ್ರೀಪೂರ್ಣಪ್ರಜ್ಞ ವಿದ್ಯಾಪೀಠದ ಅನೇಕ ಪ್ರಕಾಶನಗಳು, ವಿಶೇಷತಃ ಪೂಜ್ಯ ಪೇಜಾವರಮಠಾಧೀಶರಾದ ಶ್ರೀ ಶ್ರೀ ವಿಶ್ವೇಶತೀರ್ಥಶ್ರೀಪಾದಂಗಳವರ ಕೃತಿಯ ವಿಶೇಷ ಲಾಭವನ್ನು ನಾನು ಪಡೆದಿದ್ದೇನೆ. ಪರಮಪೂಜ್ಯ ಶ್ರೀಪದಂಗಳವರಿಗೆ ನನ್ನ ಕೃತಜ್ಞತಾಪೂರ್ವಕ ದಂಡಪ್ರಣಾಮಗಳು. ಪ್ರೊ. ಕೆ.ಟಿ. ಪಾಂಡುರಂಗಿಯವರ ಈ ವಿಷಯಕ್ಕಿರುವ ಆಂಗ್ಲ ಮತ್ತು ಕನ್ನಡ ಕೃತಿಗಳ ಲಾಭವನ್ನೂ ನಾನು ಪಡೆದಿದ್ದೇನೆ. ಎಲ್ಲ ಕೃತಿಕರ್ತರಿಗೆ ನನ್ನ ವಿಶೇಷ ಕೃತಜ್ಞತಾಪೂರ್ವಕವಾದ ನಮನಗಳನ್ನು ಸಲ್ಲಿಸುತ್ತೇನೆ.

ಪ್ರಸ್ತುತ ಕೃತಿಯಲ್ಲಿ ಏನು ಲೋಪದೋಷಗಳಿದ್ದರೂ ಅವುಗಳಿಗೆ ನಾನೇ ಹೊಣೆ. ಅವುಗಳನ್ನು ಮುಂದಿನ ಆವೃತ್ತಿಯಲ್ಲಿ ಸರಿಪಡಿಸಿಕೊಳ್ಳಲಾಗುವದು. ಗುಣಾಂಶ ತೋಷಿ-ಗಳಾದ ಸಜ್ಜನರು ಈ ಕೃತಿ ರಚನೆಯ ಪ್ರಯತ್ನದಲ್ಲಿಯ ಗುಣಾಂಶಗಳನ್ನು ಗ್ರಹಿಸಬೇಕೆಂದು ನನ್ನ ಸವಿನಯ ವಿಜ್ಞಾಪನೆ.

ಈ ಕೃತಿಯು ಸಂಕಲದನ ಕರಡುಪ್ರತಿಯನ್ನು ಕಂಪ್ಯೂಟರ್‌ದ ಮೇಲೆ ಸಿದ್ಧಪಡಿಸಲು ಹಾಗೂ ಮುದ್ರಣಕ್ಕಾಗಿ ಟ್ರೇಸಿಂಗ್ ಶೀಟ್ಸ್ ತಯಾರಿಸಲು ಶ್ರೀ ಮುಕುಂದ ಕಲ್ಲಾಪುರ ಇವರು ಬಹಳ ಶ್ರಮವಹಿಸಿ ಕೆಲಸ ಮಾಡಿದ್ದಾರೆ. ಇವರಿಗೆ ನನ್ನ ಅಭಿನಂದನೆಗಳೊಂದಿಗೆ ಕೃತಜ್ಞತೆಗಳು. ಈ ಕೃತಿಯು ಹೊರಗೆ ಬರಲು ಸಹಕರಿಸಿದ ಶ್ರೀ ರಘುನಂದನ ಶರ್ಮಾ, ಶ್ರೀ ವೇದವ್ಯಾಸ ಹುನಗುಂದ, ಶ್ರೀ ಬಾಳಾಚಾರ್ಯ ಬಾಗಲಕೋಟ ಹಾಗೂ ಇತರರಿಗೆ ನನ್ನ ಕೃತಜ್ಞತೆಗಳು.

**ತಾರಣನಾಮ ಸಂವತ್ಸರ**
**ಕಾರ್ತಿಕ ಶುದ್ಧ ದ್ವಾದಶಿ**
**ಮಂಗಳವಾರ, ೨೩-೧೧-೨೦೦೪**

**ಶ್ರೀಪಾದಂಗಳವರ ಆಜ್ಞಾಧಾರಕ**
**ಡಾ.ಪಾರ್ಥಸಾರಥಿ ಆಚಾರ್ಯ ರಾ. ಪಂಚಮುಖಿ**



Rarest Archiver

ಶ್ರೀ

# ಶ್ರೀಮದ್ ವಿಷ್ಣುತತ್ತ್ವವಿನಿರ್ಣಯದಲ್ಲಿ ಉದಾಹೃತ ಶ್ರುತಿವಾಕ್ಯಗಳು : ಒಂದು ಅಧ್ಯಯನ

## ಪ್ರಕರಣ ೧

### ಉಪೋದ್ಘಾತ

ಶ್ರೀ ಮಧ್ವಾಚಾರ್ಯರು ರಚಿಸಿದ ದಶಪ್ರಕರಣಗಳೆಂಬ ಗ್ರಂಥಗಳ ಗುಂಪಿನಲ್ಲಿ ***ಶ್ರೀಮದ್‌ವಿಷ್ಣುತತ್ತ್ವವಿನಿರ್ಣಯ***ವೆಂಬ ಗ್ರಂಥವು ವಿವಿಧ ಮತಗಳ ವಿಮರ್ಶನ-ದೊಂದಿಗೆ ವಿಷ್ಣುಸರ್ವೋತ್ತಮತ್ವವನ್ನು ಪ್ರತಿಪಾದಿಸುವ ಶ್ರೇಷ್ಠ ಕೃತಿಯಾಗಿದೆ.

ಶ್ರೀಮಧ್ವಾಚಾರ್ಯರು ತಮ್ಮ ಯಾವ ಕೃತಿಯಲ್ಲಿಯೂ ಕೂಡ ಕೇವಲ ತಮ್ಮ ಮತವನ್ನು ಪ್ರತಿಪಾದಿಸಿ ಅದನ್ನು ಒಪ್ಪಲು ಜನರ ಮನಸ್ಸಿನ ಮೇಲೆ ಒತ್ತಾಯ ತರುವ ದಾರ್ಶನಿಕರಲ್ಲ. ಪ್ರಾಚೀನ ಕಾಲದಿಂದಲೂ ಪ್ರಚಲಿತವಿರುವ ಅನೇಕ ಮತಗಳನ್ನು ಕೂಲಂಕಷವಾಗಿ ವಿಮರ್ಶಿಸಿ ಅವುಗಳಲ್ಲಿಯ ನ್ಯೂನತೆಗಳನ್ನು ಜಿಜ್ಞಾಸುಗಳ ಮುಂದೆ ಬಿಡಿಸಿ ತೋರಿಸಿದ ಅನಂತರವೇ ಪ್ರಮಾಣ ಪುರಸ್ಸರವಾಗಿ ತಮ್ಮ ಮತವನ್ನು ಪ್ರತಿಪಾದಿಸುವ ವಿಮರ್ಶಕ ಸಂಶೋಧಕ ದಾರ್ಶನಿಕರೆಂದೇ ಅವರ ಕೀರ್ತಿ. ಅವೈದಿಕ ಮತಗಳನ್ನು ವಿಮರ್ಶಿಸುವಾಗ ಅವರ ಪ್ರತಿಪಾದನ ಶೈಲಿ ವೈಶಿಷ್ಟ್ಯಪೂರ್ಣ. ತರ್ಕದ ಬಲದಿಂದ ಅವೈದಿಕಮಲ್ಲರೂ ಕೂಡ ವೇದ ಪುರಾಣಗಳ ಆಧಾರವನ್ನು ಏಕೆ ಒಪ್ಪಬೇಕೆಂಬುದನ್ನು ಪ್ರತಿಪಾದಿಸುವರು. ವೇದವನ್ನು ಒಪ್ಪುವವರ ಮತವನ್ನು ವಿಮರ್ಶಿಸುವಾಗಲೂ ಕೂಡ ಅವರ ವಿಮರ್ಶನ ಶೈಲಿ ಇನ್ನೂ ಗಂಭೀರ. ತಮ್ಮ ಸ್ವಂತ ಅಭಿಪ್ರಾಯವನ್ನು ಹೇಳುವುದೇ ಇಲ್ಲ. ವೇದ, ಉಪನಿಷತ್ತು, ಪುರಾಣೇತಿಹಾಸದ ವಾಕ್ಯಗಳನ್ನು ಉದಾಹರಿಸುತ್ತ ಅವುಗಳಿಂದಲೇ ಹೊರಬಂದ ಮತವನ್ನು ಸ್ಪಷ್ಟಪಡಿಸಿ ಅದೇ ತಮ್ಮ ಅಭಿಪ್ರಾಯವೆಂದು ಪ್ರತಿಪಾದಿಸುವರು. ಅವರ ಯಾವ ಅಭಿಪ್ರಾಯವೂ ಕೂಡ ಸ್ವಕಪೋಲಕಲ್ಪಿತವಾಗಿಲ್ಲ. ಉಳಿದ ಮತಗಳು ಹೇಗೆ ಶ್ರುತಿ ಸ್ಮೃತಿ ಪುರಾಣೇತಿಹಾಸ ಪ್ರಮಾಣಗಳ ಆಧಾರವನ್ನು ಪಡೆದಿರುವುದಿಲ್ಲವೆಂಬುದನ್ನು ಎತ್ತಿ ತೋರಿಸುವರು. ಹೀಗಾಗಿ ಅವರ ಕೃತಿಗಳಲ್ಲಿ 'ಇದಮಿತ್ಥಮ್' ಎಂದು ಸಿದ್ಧಾಂತ ಪ್ರತಿಷ್ಠಾಪಿತವಾಗುವುದು. ಅವೈದಿಕ ಮತಗಳನ್ನು ಹಾಗೂ ಇನ್ನುಳಿದ ಅನೇಕ

Rarest Archiver

ಮತಗಳನ್ನೂ ವಿಮರ್ಶಿಸಿ ವೇದ ಪುರಾಣಾದಿ ಪ್ರಮಾಣಗಳ ಆಧಾರದ ಮೇಲೆ ತಮ್ಮ ಮತವನ್ನು ವಿವರಿಸಿರುವುದರಿಂದ ಅವರ ಮತಕ್ಕೆ 'ಅಂತೇ ಸಿದ್ಧಸ್ತು ಸಿದ್ಧಾಂತಃ', ಎಂಧರೆ ಎಲ್ಲ ಮತಗಳ ವಿಮರ್ಶೆಯಾದ ಮೇಲೆ ಮೂಡಿ ಬಂದ ಮತ, ಪ್ರಮಾಣ ಪುರಸ್ಸರವಾಗಿ ಸಿದ್ಧವಾದ ಮತ – ಸಿದ್ಧಾಂತವೆಂಬ ಪ್ರಸಿದ್ಧಿ ಬಂದಿದೆ. ಈ ಒಂದು ವೈಶಿಷ್ಟ್ಯವು ಶ್ರೀಮದಾಚಾರ್ಯರ ಎಲ್ಲ ಕೃತಿಗಳಲ್ಲಿಯೂ ಎದ್ದು ತೋರುವುದು. ಅದರಲ್ಲಿಯೂ ***ಅನುವ್ಯಾಖ್ಯಾನ, ನ್ಯಾಯವಿವರಣ***ಗಳಲ್ಲಿಯೂ ಹಾಗೂ ***ದಶಪ್ರಕರಣ***ಗಳಲ್ಲಿ ಅದರಲ್ಲೂ ವಿಶೇಷವಾಗಿ ***ಶ್ರೀಮದ್‌ವಿಷ್ಣುತತ್ವವಿನಿರ್ಣಯ*** ಗ್ರಂಥದಲ್ಲಿ ನಿಖರವಾಗಿ ತೋರುವದು.

ಶ್ರೀಮನ್ಮಧ್ವಾಚಾರ್ಯರು ಉದಾಹರಿಸಿರುವ ಪ್ರಮಾಣಗಳು ಹೇರಳವಾಗಿವೆ. ಅವರು ಸೂಚಿಸಿದ ಹಾಗೂ ಅವರ ಗ್ರಂಥಗಳ ಮೇಲಿನ ಟೀಕೆ ಟಿಪ್ಪಣಿಗಳಿಂದ ಸ್ಪಷ್ಟವಾಗಿ ಹೇಳಲ್ಪಟ್ಟ ಪ್ರಮಾಣಗಳು ಇನ್ನೂ ಅನೇಕ. ಈ ಎಲ್ಲ ಪ್ರಮಾಣಗಳನ್ನೂ ಸಂಗ್ರಹಿಸಿ ಅವುಗಳ ಆಕರಗಳನ್ನು ಸಂಶೋಧಿಸಿ ಪ್ರಕಾಶಿಸಿದರೆ ಜಿಜ್ಞಾಸುಗಳಿಗೆ ಮಹದುಪ–ಕಾರವಾಗುವುದು. ಈ ನಿಟ್ಟಿನಲ್ಲಿ ಪಾಠ ಪ್ರವಚನಗಳಲ್ಲಿ ನಿರತರಾದ ವಿದ್ವಾಂಸರು ಪ್ರಯತ್ನಿಸುವದವಶ್ಯವಿದೆ. ಎಲ್ಲ ಮಾಧ್ವ ಸಂಸ್ಥೆಗಳೂ ಈ ಪ್ರಯತ್ನಗಳಿಗೆ ಪ್ರೋತ್ಸಾಹ ನೀಡುವರೆಂದು ಆಶಿಸುತ್ತೇನೆ. ***ಬರ್ಕಶ್ರುತಿ, ಪೈಂಗೀಶ್ರುತಿ,*** ಹೀಗೆ ಮುಂತಾಗಿ ಈಗ ಪ್ರಚಲಿತವಿರದ ಅನೇಕ ಶ್ರುತಿವಾಕ್ಯಗಳು ಶ್ರೀಮದಾಚಾರ್ಯರ ಗ್ರಂಥಗಳಲ್ಲಿ ಉದಾಹರಿಸಲ್ಪಟ್ಟಿವೆ. ಅಪರೂಪದ ಅನೇಕ ಶ್ರುತಿಗಳನ್ನು ಕಂಡು ಪರಮತೀಯರು ಈ ಶ್ರುತಿಗಳಿಲ್ಲವೇ ಇಲ್ಲವೆಂದು ಆಪಾದಿಸಿದ್ದೂ ಉಂಟು! ಆದರೆ, **'ಅನಂತಾ ವೈ ವೇದಾಃ'** ಎಂದಿರುವದರಿಂದ ಈಗ ಪ್ರಚಲಿತವಿಲ್ಲವೆಂದು ತಿಳಿಯಲ್ಪಟ್ಟ ವೇದವಾಕ್ಯಗಳು ಇಲ್ಲವೇ ಇಲ್ಲವೆಂದು ಹೇಳುವದು ಸಮರ್ಪಕವಾಗಲಾರದು. ಕಾಲ ಕ್ರಮೇಣ ರೂಢಿಯಲ್ಲಿ ಬರದೆ ಅನೇಕ ಲೌಕಿಕ ಗ್ರಂಥಗಳೂ ಜನರ ಗಣನೆಗೆ ಬರದೇ ಇರುವದೂ ಕಂಡು ಬಂದಿರುವಾಗ ಅನಂತ ಕಾಲದಿಂದಿರುವ ವೇದವಾಕ್ಯಗಳಲ್ಲಿಯ ಕೆಲವು ಪ್ರಚಲಿತವಾಗದಿರುವದು ಸ್ವಾಭಾವಿಕವಾಗಿದೆ. ಈ ಸಂದರ್ಭದಲ್ಲಿ ಅಂಥ ಶ್ರುತಿ ಪ್ರಮಾಣಗಳನ್ನು ಹುಡುಕಿ ತೆಗೆದು ಜನರ ಗಮನಕ್ಕೆ ತಂದು ಕೊಟ್ಟು ಮಹದುಪಕಾರ ಮಾಡಿದ ಶ್ರೀಮನ್ಮಧ್ವಾಚಾರ್ಯರನ್ನು ಸರ್ವಜ್ಞರೆಂದೇ ಹೇಳಬೇಕಾಗುವುದು. ಅವರು ಮಾಡಿದ ಉಪಕಾರವನ್ನು ಸ್ಮರಿಸಬೇಕೆಯೇ ಹೊರತು ಉದಾಹರಿಸಲ್ಪಟ್ಟ ಆದರೆ ಅಪರೂಪದ ವಾಕ್ಯಗಳು ಇಲ್ಲವೇ ಇಲ್ಲವೆಂದು ಹೇಳುವ ಅಪಸ್ವರದ ಮಾತು ಯೋಗ್ಯವಲ್ಲವೆಂಬುದು ಮುಕ್ತಮನದ ಜಿಜ್ಞಾಸುಗಳಿಗೆ ಹೊಳೆಯುವುದು. ಅಲ್ಲದೆ ಶ್ರೀಮದಾಚಾರ್ಯರು ಉದಾಹರಿಸಿದ, ಈಗ ಅಪರೂಪವೆಂದು ತಿಳಿಯಲ್ಪಟ್ಟ ಶ್ರುತಿವಾಕ್ಯಗಳಿಗೆ ತಾವೇ ಸಂವಾದಿ ರೂಪವಾಗಿ 'ಪ್ರಸಿದ್ಧ' ಶ್ರುತಿವಾಕ್ಯಗಳನ್ನೂ

Rarest Archiver

ಕೊಡುವುದರಿಂದ 'ಅಪರೂಪ' ಶ್ರುತಿಗಳ ಅಸ್ತಿತ್ವವನ್ನೇ ಪ್ರಶ್ನಿಸುವುದು ಸರಿಯಲ್ಲ. ಶ್ರೀಮದಾಚಾರ್ಯರ ಸಮಕಾಲೀನ ಗ್ರಂಥಗಳಲ್ಲಿ ಇಂಥ ಪ್ರಶ್ನೆಗಳು ಕಂಡಿಲ್ಲವಾದ್ದರಿಂದ ಆಗ ಈ ಶ್ರುತಿಗಳು ಪ್ರಚಲಿತವಿದ್ದಿರಬೇಕೆಂದು ಸ್ಪಷ್ಟವಾಗುವುದು. ಅಲ್ಲದೆ, ಇತರ ಮತೀಯರ ಗ್ರಂಥಗಳಲ್ಲಿಯೂ ಕೂಡ ಅಪರಿಚಿತವಾದ ಶ್ರುತಿವಾಕ್ಯಗಳು ಉದಾಹರಿಸಲ್ಪಟ್ಟಿರುವುದರಿಂದ ಕಾಲಗರ್ಭದಲ್ಲಿ ಅಡಗಿರುವ ಆದರೆ 'ಇರುವ' ಶ್ರುತಿಗಳ ಅಸ್ತಿತ್ವದ ಪ್ರಶ್ನೆಯು ಅಪ್ರಸಕ್ತ ಹಾಗೂ ಇತ್ತಂಡವಾದದ ಮಾತಾಗಬಹುದೆಂದು ಅನಿಸುವುದು.

ಇನ್ನು, ಶ್ರುತಿ, ಪುರಾಣೇತಿಹಾಸಪ್ರಮಾಣಗಳ ಅರ್ಥದ ಬಗೆಗೂ ಕೂಡ ವಾದವಿರುವದು ಸ್ವಾಭಾವಿಕ. ಆದರೆ ಶ್ರುತ್ಯರ್ಥ ನಿರ್ಣಾಯಕ ನಿಯಮಗಳನ್ನು ಚಾಚೂ ತಪ್ಪದಂತೆ ಅನುಸರಿಸಿದರೆ ಈ ವಾದದ ಬಲವೂ ಕಡಿಮೆಯಾಗುವದು. ವೇದಾರ್ಥ–ನಿರ್ಣಾಯಕವಾದ ಹಾಗೂ ನಿರ್ಣಾಯಕಗ್ರಂಥಗಳಲ್ಲಿಯೇ ಪರಮಪ್ರಮಾಣವೆಂದು ಗಣಿಸಲ್ಪಟ್ಟ ಮತ್ತು ಸ್ವತಃ ತಮ್ಮಿಂದಲೇ ರಚಿಸಲ್ಪಟ್ಟ *ಬ್ರಹ್ಮಸೂತ್ರ*ಗಳಲ್ಲಿ ನಾಲ್ಕನೆಯ ಸಮನ್ವಯಾಧಿಕರಣದ ಸೂತ್ರವಾದ '**ಓಂ ತತ್ತು ಸಮನ್ವಯಾತ್ ಓಂ**' ಎಂಬ ಸೂತ್ರದಲ್ಲಿ ಶ್ರೀವೇದವ್ಯಾಸರೇ ಈ ನಿಯಮಗಳನ್ನು ಸೂಚಿಸಿದ್ದಾರೆ. **ಉಪಕ್ರಮೋಪ–ಸಂಹಾರೋ ಅಭ್ಯಾಸೋ ಅಪೂರ್ವತಾ ಫಲಂ, । ಅರ್ಥವಾದೋಪಪತ್ತೀ ಚ ಲಿಂಗಂ ತಾತ್ಪರ್ಯ ನಿರ್ಣಯೇ॥** ಎಂಬ ತಾತ್ಪರ್ಯನಿರ್ಣಾಯಕ ಯುಕ್ತಿಗಳನ್ನೂ ಮತ್ತು '**ಶ್ರುತಿರ್ಲಿಂಗಂ ಸಮಾಖ್ಯಾ ಚ ವಾಕ್ಯಂ ಪ್ರಕರಣಂ ತಥಾ । ಪೂರ್ವಂ ಪೂರ್ವಂ ಬಲೀಯಃ ಸ್ಯಾತ್ ಏವಂ ಆಗಮ ನಿರ್ಣಯಃ ॥** ಎಂಬ ವಾಕ್ಯದಿಂದಲೂ ಯುಕ್ತಿ ಪ್ರಮಾಣಗಳ ಬಲಾಬಲವನ್ನು ಹೇಗೆ ನಿರ್ಧರಿಸ ಬೇಕೆಂದು ಶ್ರೀ ವೇದವ್ಯಾಸರು ಸೂಚಿಸಿದ್ದಾರೆಂಬುದು ಸಮನ್ವಯಾಧಿಕರಣದ ಭಾಷ್ಯ, ಟೀಕಾ ಟಿಪ್ಪಣಿಗಳಿಂದ ವ್ಯಕ್ತವಾಗುವದು.

*ಶ್ರೀಮದ್‌ವಿಷ್ಣುತತ್ತ್ವವಿನಿರ್ಣಯ*ದ ಮಂಗಳಶ್ಲೋಕದಲ್ಲಿ ಹಾಗೂ ಪ್ರತಿಜ್ಞಾಶ್ಲೋಕದಲ್ಲಿ ಶ್ರೀಮದಾಚಾರ್ಯರು ತಮ್ಮ ಗ್ರಂಥದಲ್ಲಿ ಪ್ರಮಾಣ ಪುರಸ್ಸರವಾಗಿ ವಿಷ್ಣುವೇ ಸರ್ವೋತ್ತಮನೆಂಬುದನ್ನು ಸ್ಥಾಪಿಸುವದಾಗಿ ತಿಳಿಸಿದ್ದಾರೆ. '**ವಿಶೇಷಣಾನಿ ಯಾನೀಹ ಕಥಿತಾನಿ ಸದುಕ್ತಿಭಿಃ । ಸಾಧಯಿಷ್ಯಾಮಿ ತಾನ್ಯೇವ ಕ್ರಮಾತ್ ಸಜ್ಜನಸಂವಿದೇ ॥**' ಎಂದು ಪ್ರತಿಜ್ಞೆಮಾಡಿ ಈ ಗ್ರಂಥದಲ್ಲಿ ಸದಾಗಮಗಳ ಆಧಾರದ ಮೇಲೆ ಹಾಗೂ ಸದಾಗಮಗಳಿಂದ ಅನುಗೃಹೀತವಾದ ಅನುಮಾನಾದಿಗಳ ಆಧಾರದ ಮೇಲೆ ನಾರಾಯಣನು ದೋಷದೂರನೂ ಹಾಗೂ ಸಕಲ ಗುಣಗಣ ಪರಿಪೂರ್ಣನೂ ಆಗಿದ್ದು ಅವನೇ ಹೇಗೆ ಸರ್ವೋತ್ತಮನೆಂಬುದನ್ನು ಸಿದ್ಧಪಡಿಸಿದ್ದಾರೆ. ಇಂದ ಮೇಲೆ *ಶ್ರೀ ವಿಷ್ಣುತತ್ತ್ವವಿನಿರ್ಣಯ*ದಲ್ಲಿ ಸದಾಗಮಗಳನ್ನು ಉದಾಹರಿಸುವದೂ

Rarest Archiver

ಕೂಡ ವಿಶೇಷವಾದ ಉದ್ದೇಶವಾಗಿದೆಯೆಂದೆನಿಸುವುದು. ಸದಾಗಮಗಳು ಯಾವವು ಎಂಬುದನ್ನು ಶ್ರೀಮದಾಚಾರ್ಯರೇ ಸ್ಪಷ್ಟಪಡಿಸಿದ್ದಾರೆ. **ಋಗಾದ್ಯಾ ಭಾರತಂ ಚೈವ ಪಂಚರಾತ್ರಮಥಾಖಿಲಂ । ಮೂಲರಾಮಾಯಣಂ ಚೈವ ಪುರಾಣಂ ಚೈತದಾತ್ಮಕಮ್। ಯೇ ಚಾನುಯಾಯಿನಸ್ತ್ವೇಷಾಂ ಸರ್ವೇ ತೇ ಚ ಸದಾಗಮಾಃ ॥ ದುರಾಗಮಾಸ್ತದನ್ಯೇ ಯೇ ತೈರ್ನಜ್ಞೇಯೋ ಜನಾರ್ದನಃ ।**'ಎಂಬ ***ಬ್ರಹ್ಮಾಂಡ ಪುರಾಣ***ದ ವಾಕ್ಯದಿಂದ ಸದಾಗಮಗಳಾವವೆಂಬುದನ್ನು ಸ್ಪಷ್ಟಪಡಿಸಿದ್ದಾರೆ. ***ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ***ಗಳೆಂಬ ನಾಲ್ಕು ವೇದಗಳು, ಪಂಚಮ ವೇದವೆಂದೇ ಖ್ಯಾತವಾದ ***ಶ್ರೀಮನ್ಮಹಾಭಾರತ,*** ಸ್ವತಃ ನಾರಾಯಣನೇ ರಚಿಸಿದ ***ಪಂಚರಾತ್ರ, ಮೂಲರಾಮಾಯಣ,*** ವೇದವ್ಯಾಸರು ರಚಿಸಿದ ಪುರಾಣಗಳು, ಇವೆಲ್ಲವಗಳನ್ನು ಅರ್ಥತಃ ಅನುಸರಿಸುವ ಎಲ್ಲ ಮನುಸ್ಮೃತ್ಯಾದಿ ಋಷಿಮುನಿಗಳಿಂದ ಕೃತವಾದ ಪೌರುಷೇಯ ಗ್ರಂಥಗಳು, ಇವೆಲ್ಲವುಗಳೂ ಸದಾಗಮಗಳು. ಕೇವಲ ಸದಾಗಮಗಳಿಂದಲೇ ಪರಮಾತ್ಮನ ಜ್ಞಾನವಾಗುವದೇ ಹೊರತು ಉಳಿದ ಯಾವ ಮಾರ್ಗದಿಂದಲೂ ಅವನ ಜ್ಞಾನವಾಗಲಾರದೆಂಬುದು ಶ್ರೀಮದಾಚಾರ್ಯರ ಖಚಿತ ಮತ. ಅಂತೆಯೇ ಅವರು ಈ ಸದಾಗಮಗಳನ್ನು ಆಲೋಚನೆ ಮಾಡಿ, ಮಥಿಸಿ, ಮನನ ಮಾಡಿ, ವಿಶ್ಲೇಶಿಸಿ ಅವುಗಳಲ್ಲಿಯ ವಾಕ್ಯಗಳನ್ನು ಅಲ್ಲಲ್ಲಿ ಉದಾಹರಿಸುತ್ತ, ಅವುಗಳಲ್ಲಿಯ ತತ್ವನವನೀತವನ್ನು ತೆಗೆದು ಜಿಜ್ಞಾಸುಗಳಿಗೆ ಹಂಚಿದ್ದಾರೆ. ಅವರ ಗ್ರಂಥಗಳಲ್ಲಿ ಅವರದೇ ಆದ ವಾಕ್ಯಗಳು ಕಡಿಮೆಯೇ. **'ಇತಿ ವಚನಾತ್', 'ಇತ್ಯುಕ್ತೇಃ'** ಇತ್ಯಾದಿ ಪ್ರಕಾರದ ವಚನಗಳು ಮಾತ್ರ ಅವರವು. ಶ್ರುತಿ, ಪುರಾಣ ಸ್ಮತಿ ಇತಿಹಾಸ-ಗಳಲ್ಲಿಯ ವಾಕ್ಯಗಳೇ ಬಹಳಷ್ಟು ಕಂಡು ಬರುವವು. ಒಂದೊಂದು ಸಲ ಅವರೇ ಆ ಉದಾಹೃತ ವಾಕ್ಯಗಳ ಅರ್ಥವನ್ನು ತಮ್ಮ ಇತಿಮಿತಿಯಾದ ವಾಕ್ಯಗಳಿಂದ ವಿವರಿಸುವರು. ಆ ಸಂದರ್ಭದಲ್ಲಿಯೂ ಕೂಡ ಮೊದಲು ಉದಾಹರಿಸಲ್ಪಟ್ಟ ವಾಕ್ಯಗಳಿಗೆ ಸಂವಾದಿಯಾದ ಬೇರೆ ಬೇರೆ ಗ್ರಂಥಗಳಲ್ಲಿಯ ವಾಕ್ಯಗಳನ್ನೇ ಕೊಟ್ಟು ಅರ್ಥವನ್ನು ಸೂಚಿಸುವರು. ಹೀಗಿರುವದರಿಂದಲೇ ಶ್ರೀನಾರಾಯಣ ಪಂಡಿತಾಚಾರ್ಯರು ಅವರ ಶೈಲಿಯನ್ನು ***'ಬಾಲ ಸಂಘಮಪಿ ಬೋಧಯದ್ಭೃಶಂ, ದುರ್ನಿರೂಪವಚನಂ ಚ ಪಂಡಿತೈಃ'*** – 'ಬಾಲಕರಿಗೂ ತಿಳಿಯಲು ಸಲುಭ, ಆದರೆ ಅದೇ ಪಂಡಿತರಿಗೂ ಕಬ್ಬಿಣದ ಕಡಲೆಯಂತೆ ಕಠಿಣ' ಎಂಬ ಚಿಕ್ಕ ಹಾಗೂ ಗಂಭೀರವಾದ ಮಾತುಗಳಿಂದ ವರ್ಣಿಸಿದ್ದಾರೆ. ಆದ್ದರಿಂದಲೇ ಶ್ರೀ ಪದ್ಮನಾಭತೀರ್ಥರ ಆದ್ಯ ಟೀಕೆಗಳು ಹಾಗೂ ಶ್ರೀ ಟೀಕಾಕೃತ್ಪಾದರ ಗಂಭೀರಮನೊಹರವಾದ ಟೀಕೆಗಳು, ಅವುಗಳ ಮೇಲೆ ಹೊರಟ ಟಿಪ್ಪಣಿಗಳು, ಶ್ರೀರಾಯರ ಸಂಗ್ರಹರೂಪದ ಅನೇಕ ಕೃತಿಗಳು ಬಲು ಅವಶ್ಯಕವೆಂದು ತೋರುತ್ತಿವೆ. ಸಂಸ್ಕೃತ ಭಾಷೆಯಲ್ಲಿ ಹಾಗೂ ಶಾಸ್ತ್ರದ ಪರಿಭಾಷೆಯಲ್ಲಿ

Rarest Archiver

ಪ್ರವೇಶವಿದ್ದ ಜಿಜ್ಞಾಸುಗಳಿಗೆ ಶ್ರೀಮದಾಚಾರ್ಯರ ಗ್ರಂಥಗಳ ಮೇಲಿನ ಟೀಕಾ ಟಿಪ್ಪಣಿ, ವಿವರಣಾತ್ಮಕ ಗ್ರಂಥಗಳು ಅವರ ಹಾರ್ದವನ್ನು ತಿಳಿಸಿ ಅಲೌಕಿಕ ಆನಂದವನ್ನು ಕೊಡುವ ಅನುಪಮ ಸಾಧನಗಳಾಗಿ ಅತೀವ ಉಪಕಾರಕವಾಗಿರುವುದು ಅನುಭವ ವೇದ್ಯವಾದ ವಿಷಯ.

ಆದರೆ, ಈ ರೀತಿಯ ಲಾಭವು ಸಂಸ್ಕೃತ ಭಾಷೆಯಲ್ಲಿ ಪರಿಣತಿ ಇಲ್ಲದ, ಶಾಸ್ತ್ರದಲ್ಲಿ ಸಾಕಷ್ಟು ಪ್ರವೇಶವಿರದ ಆದರೆ ಶಾಸ್ತ್ರಜ್ಞಾನವನ್ನು ಪಡೆಯುವ ಹಂಬಲವಿದ್ದ ಜಿಜ್ಞಾಸುಗಳಿಗೆ ಸಿಗಲಾರದೆಂಬುದೂ ಸ್ಪಷ್ಟ. ಆದ ಕಾರಣ ಸರಳವಾದ ಕನ್ನಡ, ಇಂಗ್ಲೀಷ ಹಾಗೂ ಉಳಿದ ಪ್ರಾದೇಶಿಕ ಭಾಷೆಗಳಲ್ಲಿ ಆಚಾರ್ಯರ ಹಾಗೂ ಟೀಕಾ ಟಿಪ್ಪಣೀಕಾರರ ಕೃತಿಗಳ ಶುದ್ಧ ಅನುವಾದವಲ್ಲದೆ ಅವುಗಳ ಭಾವವನ್ನು ತಿಳಿಯ ಪಡಿಸುವ ಕೃತಿಗಳು ಹೊರಬರಬೇಕಾದುದರ ಅವಶ್ಯಕತೆ ತೋರುವದು. ***'ಶ್ರೀಮದ್ವಿಷ್ಣುತತ್ವವಿನಿರ್ಣಯ ಅಧ್ಯಯನಮಾಲೆ***ಯು ಈ ಉದ್ದೇಶವನ್ನು ಇಟ್ಟುಕೊಂಡಿದ್ದು ಪ್ರಸ್ತುತ ಅಧ್ಯಯನದಲ್ಲಿ ***ಶ್ರೀಮತ್ ವಿಷ್ಣುತತ್ವವಿನಿರ್ಣಯ*** ಗ್ರಂಥದಲ್ಲಿ ಉದಾಹೃತ ಹಾಗೂ ಸೂಚಿತ ಶ್ರುತಿ, ಪುರಾಣೇತಿಹಾಸವಾಕ್ಯಗಳ ಮುಖ್ಯವಾಗಿ ಶ್ರುತಿಗಳ ಭಾವವನ್ನು ತಿಳಿಗನ್ನಡದಲ್ಲಿ ವಿವರಿಸಲು ಪ್ರಯತ್ನಿಸಲಾಗಿದೆ. ಕೇವಲ ಅರ್ಥ ವಿವರಿಸುವದಲ್ಲದೆ ಯಾವ ಸಂದರ್ಭಕ್ಕೆ ನಿರ್ದಿಷ್ಟ ವಾಕ್ಯಗಳು ಪ್ರಸ್ತುತವಾಗಿವೆಯೆಂಬುದನ್ನು ವಿವರಿಸಿದಾಗ ಅರ್ಥ ಇನ್ನೂ ಹೆಚ್ಚು ಸ್ಪಷ್ಟವಾಗುವದೆಂದು ಸಂಕ್ಷೇಪದಲ್ಲಿ 'ಪ್ರಕರಣ' ಭಾಗವನ್ನೂ ವಿವರಿಸಲಾಗಿದೆ.

ಪ್ರಸ್ತುತ 'ಅಧ್ಯಯನ'ದಲ್ಲಿ ಶ್ರೀಮದಾಚಾರ್ಯರು ಉದಾಹರಿಸಿದ – ಸೂಚಿಸಿದ ಶ್ರುತಿವಾಕ್ಯಗಳ ಭಾವವನ್ನು ಮಾತ್ರ ವಿವಾರಿಸಲಾಗಿದೆ. ಈ ಶ್ರುತಿಗಳನ್ನು ಕೆಳಗೆ ಸೂಚಿಸಿದ ರೀತಿಯಿಂದ ಮೂರು ಭಾಗಗಳಲ್ಲಿ ವಿಂಗಡಿಸಬಹುದು. ಈ ಮೂರು ಭಾಗಗಳನ್ನು ಮೂರು ಪ್ರಕರಣಗಳನ್ನಾಗಿ ವಿಭಾಗಿಸಲಾಗಿದೆ

## ಭಾಗ ೧

ವಿಷ್ಣುವು ವೇದೈಕ ವೇದ್ಯನು ಎಂದು ಪ್ರತಿಪಾದಿಸುವ ಹಾಗೂ ವೇದಗಳ ಸ್ವರೂಪವನ್ನು ನಿರೂಪಿಸುವ ಶ್ರುತಿವಾಕ್ಯಗಳು.

## ಭಾಗ ೨

ಪರಮಪುರುಷನಾದ ವಿಷ್ಣುವಿನ ಸ್ವರೂಪವನ್ನು ಹೇಳುವ ಹಾಗೂ ಅವನೇ ಸರ್ವೋತ್ತಮನೆಂದೂ ಪರಮಪುರುಷಾರ್ಥಪ್ರದನೆಂದೂ ಅವನು ಜಗತ್ತಿಗೆ ಉಪಾದಾನ ಕಾರಣನಾಗದೆ ಮಕ್ಕಳಿಗೆ ತಂದೆಯಂತೆ ಅಪಾದಾನ ಕಾರಣನೆಂದೂ ಪ್ರತಿಪಾದಿಸುವ ಶ್ರುತಿವಾಕ್ಯಗಳು.

Rarest Archiver

## ಭಾಗ ೩

ಜಗತ್ತು ಸತ್ಯವೆಂದೂ ಮಿಥ್ಯಾ ಅಲ್ಲವೆಂದೂ ಸ್ವಪ್ನವೂ ಕೂಡ ಸತ್ಯವೇ ಆಗಿದೆ ಮತ್ತು ಪರಮಾತ್ಮಾಧೀನವಾಗಿದೆ ಎಂದೂ ಹೇಳುವ ಶ್ರುತಿಗಳು.ಎಲ್ಲ ವೇದಗಳೂ ಭೇದವನ್ನೇ ಪ್ರತಿಪಾದಿಸುವವು. ಅಭೇದವನ್ನಲ್ಲ ಎಂದು ಹೇಳುವ ಶ್ರುತಿಗಳು. ಪಂಚಭೇದಗಳ ವಿಷಯಕ್ಕಿರುವ ಶ್ರುತಿಗಳು. ಭೇದವು ಸತ್ಯಹಾಗು ನಿತ್ಯವೆಂದು ಹೇಳುವ ಶ್ರುತಿಗಳು. ಭೇದವು ಅಸತ್ಯವಲ್ಲ. ವ್ಯಾವಹಾರಿಕ ಸತ್ಯವಾದುದಲ್ಲ. ಪಾರಮಾರ್ಥಿಕವಾಗಿಯೇ ಸತ್ಯವಾದುದು. ಎಂದು ಹೇಳುವ ಶ್ರುತಿಗಳು.

ಶ್ರೀಮದಾಚಾರ್ಯರು ಮೂರು ಪರಿಚ್ಛೇದಗಳಲ್ಲಿ ನಾರಾಯಣನಿಗೆ ತಾವು ಮಂಗಳಾಚರಣದಲ್ಲಿ ಕೊಟ್ಟ ವಿಶೇಷಣಗಳನ್ನು ವಿವರಿಸಲು ಅನೇಕ ಶ್ರುತಿಗಳನ್ನು ಉದಾಹರಿಸಿದ್ದಾರೆ. ಈ ವಿವರಣೆಯ ಸಂದರ್ಭದಲ್ಲಿ ಅನೇಕ ಅವಾಂತರ ವಿಷಯಗಳ ವಿವರಣೆಯೂ ಇರುವದರಿಂದ ಮೇಲೆ ಸೂಚಿಸಿದ ರೀತಿಯಲ್ಲಿ ಶ್ರುತಿಗಳನ್ನು ವಿಭಾಗಿಸಲಾಗಿದೆ. ಇದು ಅಧ್ಯಯನಕ್ಕೆ ಅನುಕೂಲವೆಂದು ಭಾವಿಸಲಾಗಿದೆ.

ಇಲ್ಲಿ ಈ ವಿಭಾಗಗಳಲ್ಲಿಯ ಪ್ರಧಾನವಾದ ಶ್ರುತಿಗಳನ್ನು ಸಂಗ್ರಹಿಸಿ ಅವುಗಳ ಭಾವವನ್ನು ವಿವರಿಸಲು ಪ್ರಯತ್ನಿಸಲಾಗಿದೆ. ಈ ಉದಾಹೃತ ಶ್ರುತಿಗಳ ಅಭಿಪ್ರಾಯವು ಎಲ್ಲರಿಗೂ ವಿದಿತವಾಗಬೇಕೆಂಬ ಉದ್ದೇಶದಿಂದ ಅವುಗಳ ಭಾವವನ್ನು ಗೇಯವಾದ ಭಾಮಿನೀ ಷಟ್ಪದಿಯಲ್ಲಿ ಪ್ರಸ್ತುತಪಡಿಸಲು ಪ್ರಯತ್ನಿಸಲಾಗಿದೆ. ಈ ಕೆಳಗಿನ ನಾಲ್ಕು ಪ್ರಕರಣಗಳಲ್ಲಿ ಮೇಲೆ ಸೂಚಿಸಿದ ಕ್ರಮದಲ್ಲಿ ಶ್ರುತಿವಾಕ್ಯಗಳನ್ನು ಸಂಗ್ರಹಿಸಿ ಅವುಗಳ ವಿಮರ್ಶಾತ್ಮಕವಾದ ಅಧ್ಯಯನವನ್ನು ಕೈಕೊಳ್ಳಲಾಗಿದೆ. ಈ ಅಧ್ಯಯನದಲ್ಲಿ ಶ್ರೀಮದಾಚಾರ್ಯರ ಹಾಗೂ ವಿವಿಧ ಟೀಕಾ ಟಿಪ್ಪಣೀಕರ್ತರ ಕೃತಿಗಳನ್ನು ಆಧಾರ-ವಾಗಿಟ್ಟುಕೊಳ್ಳಲಾಗಿದೆ.

Rarest Archiver

## ಪ್ರಕರಣ ೨.

## ವಿಷ್ಣುವು ಸದಾಗಮೈಕವೇದ್ಯನೆಂದು ಹೇಳುವದಲ್ಲದೆ ವೇದಗಳ ಸ್ವರೂಪವೆಂಥದೆಂದು ಪ್ರತಿಪಾದಿಸುವ ಶ್ರುತಿಗಳು:

**ಈ ವಿಭಾಗದಲ್ಲಿ ಮುಖ್ಯವಾಗಿ ಈ ಕೆಳಗಿನ ಒಂಬತ್ತು ಶ್ರುತಿಗಳು ಉದಾಹೃತವಾಗಿವೆ.**

೧. **'ನಾವೇದವಿತ್ ಮನುತೇದಂ ಬೃಂಹಂತಂ ಸರ್ವಾನುಭುಂ ಆತ್ಮಾನಂ ಸಾಂಪರಾಯೇ'** *–ತೈತ್ತಿರೀಯಶ್ರುತಿಯೆಂದು ಉದಾಹರಿಸಲ್ಪಟ್ಟಿದೆ.*

ಇದು ***ತೈತ್ತಿರೀಯ ಶ್ರುತಿ***ಯೆಂದು ಉದಾಹರಿಸಲ್ಪಟ್ಟ ಶ್ರುತಿವಾಕ್ಯವು. ಇಡೀ ಶ್ರೀಮದ್‌ವಿಷ್ಣು ತತ್ವವಿನಿರ್ಣಯ ಗ್ರಂಥದಲ್ಲಿಯೇ ಶ್ರೀಮನ್ಮಧ್ವಾಚಾರ್ಯರು ಉದಾಹರಿಸಿದ ಶ್ರುತಿಗಳಲ್ಲಿ ಪ್ರಪ್ರಥಮ ಶ್ರುತಿ ಇದು. ಮಂಗಳಾಚರಣ ಶ್ಲೋಕದಲ್ಲಿಯ **ಸದಾಗಮೈಕ ವಿಜ್ಞೇಯಂ** ಎಂದರೆ ನಾರಾಯಣನು ಸದಾಗಮಗಳಿಂದ ಮಾತ್ರ ವಿಜ್ಞೇಯ ನಾಗಿದ್ದಾನೆ ಎಂಬುದಕ್ಕೆ ಸ್ಪಷ್ಟವಾದ ಶ್ರುತಿ ಪ್ರಮಾಣವಿದು. 'ನ ಅವೇದವಿತ್ ಮನುತೆ ಇದಂ ಬೃಂಹಂತಂ ಸರ್ವಾನುಭುಂ ಆತ್ಮಾನಂ ಸಾಂಪರಾಯೇ' ಇದು **ಪದಚ್ಛೇದ.** 'ಅವೇದವಿತ್ ಇದಂ ಬೃಂಹಂತಂ ಸರ್ವಾನುಭುಮ್ ಆತ್ಮಾನಂ ಸಾಂಪರಾಯೇ ನ ಮನುತೆ' **ಇದು ಅನ್ವಯ.** 'ಸದಾಗಮಗಳ ಜ್ಞಾನಿಯಾಗದವನು ಮೋಕ್ಷಕ್ಕೋಸ್ಕರವಾಗಿ ಸರ್ವಗುಣಸಂಪೂರ್ಣನೂ, ಸರ್ವಜ್ಞನೂ ಆದ ಪರಮಾತ್ಮ–ನನ್ನು –ಸ್ವಾಮಿಯನ್ನು–ತಿಳಿಯಲಾರನು. ಮೋಕ್ಷಕ್ಕೋಸ್ಕರವೇ ಪರಮಾತ್ಮನ ಜ್ಞಾನವನ್ನು ಶ್ರುತಿಯು ಉಪದೇಶಿಸುವುದು.' **ಇದು ಈ ವಾಕ್ಯದ ಅರ್ಥವು.** ಇಲ್ಲಿ **ಅವೇದವಿತ್** ಎಂಬಲ್ಲಿಯ ವೇದ ಶಬ್ದಕ್ಕೆ ಎಲ್ಲ ಸದಾಗಮಗಳು ಎಂದು ಅರ್ಥ ಮಾಡಬೇಕೆಂದು ಶ್ರೀ ಟೀಕಾಕೃತ್ಪಾದರು ತಿಳಿಸಿದ್ದಾರೆ. ಇದು ರೂಢ್ಯರ್ಥವೆಂದು ಶ್ರೀ ವ್ಯಾಸತತ್ವಜ್ಞ–ತೀರ್ಥರು **ಋಗ್ಯಜುಃ ಸಾಮಾಥರ್ವಾಖ್ಯಾ ಮೂಲರಾಮಾಯಣಂ ತಥಾ । ಭಾರತಂ ಪಂಚರಾತ್ರಂ ಚ ವೇದಾ ಇತ್ಯೇವ ಶಬ್ದಿತಾಃ** ಎಂಬ ವಚನದ ಆಧಾರ ಕೊಟ್ಟಿದ್ದಾರೆ. **ಸರ್ವಾನುಭುಂ** ಎಂದರೆ ಸರ್ವಸ್ಯ ಅನುಭವಿತಾರಂ, ಜ್ಞಾತಾರಂ ಎಂದು ಶ್ರೀ ನಾರಾಯಣ ಪಂಡಿತಾಚಾರ್ಯರ ತತ್ವಮಂಜರೀ ಟೀಕೆ. ಶ್ರೀರಾಯರು ಈ ಪದದ ವ್ಯುತ್ಪತ್ತಿಯನ್ನು ಕೊಟ್ಟು ವ್ಯಾಕರಣದ ನಿಯಮಕ್ಕನುಗುಣವಾಗಿ ಶ್ರುತಿಯಲ್ಲಿ 'ಸರ್ವಾನುಭೂಂ' ಎಂದು (ದೀರ್ಘ) ಇರಬೇಕಾಗಿದ್ದಿತು. ಆದರೆ ಸರ್ವಾನುಭುಂ ಎಂದು ಹ್ರಸ್ವದಲ್ಲಿದ್ದುದು ಛಾಂದಸ ಪ್ರಯೋಗವು ಎಂದು ವಿವರಿಸಿದ್ದಾರೆ. **'ಅನೂಪಸರ್ಗಪೂರ್ವಕಾತ್ ಭೂ ಸತ್ತಾಯಾಂ ಇತ್ಯತೋ ವಾ,' ಭೂ ಪ್ರಾಪ್ತೌ, ಭೂಕ್ ಶುದ್ಧಿ ಚಿಂತಯೋಃ ಇತಿ ಕವಿಕಲ್ಪದ್ರುಮೋಕ್ತ್ಯಾ, ಭೂ ಚಿಂತಾಯಾಂ ಇತ್ಯತೋ ವಾ ಕ್ವಿಪಿ ರೂಪಮ್.**

Rarest Archiver

**ಶ್ರುತೌ ಸರ್ವಾನುಭುಮಿತಿ ಛಾಂದಸಂ ಹ್ರಸ್ವತ್ವಮಿತಿ ಭಾವಃ** ಎಂಬುದು *ಭಾವದೀಪ.* 'ಸರ್ವಾನುಭೂಂ' ಎಂಬುದು ಅನು ಉಪಸರ್ಗಪೂರ್ವಕ ಭೂ (ಭೂಕ್) ಧಾತುವಿನ ರೂಪವು. ಭೂ ಧಾತುವಿಗೆ ಇರುವಿಕೆಯೆಂದು, ಪಡೆಯುವಿಕೆಯೆಂದೂ, (ಭೂಕ್ ಧಾತುವಿಗೆ) ಶೋಧಿಸುವುದು, ವಿಚಾರಿಸುವುದು ಎಂಬ ಅರ್ಥಗಳಿದ್ದು ಇಲ್ಲಿ ಸರ್ವಾನುಭೂಂ ಎಂಬುದರ ಒಟ್ಟರ್ಥವೆಂದರೆ ಸರ್ವಜ್ಞನಾದಂಥ ಎಂದು. ಶ್ರೀ ವ್ಯಾಸತತ್ವಜ್ಞತೀರ್ಥರು ಸರ್ವಾನುಭುವಮ್ ಎಂಬುದರ ಬದಲು ಸರ್ವಾನುಭುಮ್ ಎಂಬುದು ಛಾಂದಸ ರೂಪವೆಂದು ತಿಳಿಸಿದ್ದಾರೆ.

*ಈ ಶ್ರುತಿಯು ಪರಮಾತ್ಮನು ಸದಾಗಮಗಳಿಂದ ಮಾತ್ರ ವಿಜ್ಞೇಯನು ಉಳಿದಾವ ಪ್ರಮಾಣಗಳಿಂದಲೂ ತಿಳಿಯಲ್ಪಡಲಾರನು ಎಂದು ಸ್ಪಷ್ಟಪಡಿಸುತ್ತದೆ.* **'ದ್ವೌ ನಞೌ ಪ್ರಕೃತಮರ್ಥಂ ಸಾತಿಶಯಂ ಗಮಯತಃ'** ಎಂಬ ಉಕ್ತಿಯಂತೆ (Two negatives make one affirmative), ಅವೇದವಿತ್ ನ ಮನುತೆ ಎಂದು ಹೇಳಿ ವೇದವಿತ್ ಏವ ಮನುತೆ ನಾನ್ಯಃ ಎಂದು ಒತ್ತು ಕೊಟ್ಟು ಹೇಳಲ್ಪಟ್ಟ ಮಾತು ಇದಾಗುವದು.

*ಶ್ರುತ್ಯರ್ಥಷಟ್ಪದಿಯಲ್ಲಿ* ಈ ಶ್ರುತಿಯ ಭಾವವನ್ನು ಹೀಗೆ ಹೇಳಬಹುದು;

*ಸರುವಗುಣಗಣಪೂರ್ಣನಾಗಿಹ,*
*ಸರುವ ತಿಳಿದಿಹ ಪರಮಪುರುಷನ*
*ಅರಿವುದಸದಳ ವೇದವೇದಾಂತಾದಿ ತೊರೆಯುತಲಿ;*
*ಪರಮಗುರಿ ಮೋಕ್ಷವನು ಪಡೆಯಲು*
*ಪರಮಪುರುಷಜ್ಞಾನಸಾಧನ,*
*ಅರಿವುದೆಂದಿತು ತೈತ್ತಿರೀಯಶ್ರುತಿಯ ವಾಕ್ಯವಿದು* // //

೨. **'ನೈಷಾ ತರ್ಕೇಣ ಮತಿರಾಪನೇಯಾ ಪ್ರೋಕ್ತಾನ್ಯೇನೈವ ಸುಜ್ಞಾನಾಯ ಪ್ರೇಷ್ಠ॥'** *ಕಠೋಪನಿಷತ್, ೧, ೨-೯*

ಇದು ಶ್ರೀಮದಾಚಾರ್ಯರು ಉದಾಹರಿಸಿದ ಎರಡನೆಯ ಶ್ರುತಿಯು. ಇದು ಕಠೋಪನಿಷತ್ತಿನ ವಾಕ್ಯವು. *ಕಠೋಪನಿಷತ್ತಿನ ಪ್ರಥಮಾಧ್ಯಾಯದ ದ್ವಿತೀಯ ವಲ್ಲಿಯಲ್ಲಿ* ಬರುವ ಶ್ಲೋಕದ ಭಾಗವಿದಾಗಿದ್ದು ಯಮನು ನಚಿಕೇತನಿಗೆ ಮಾಡಿದ ಉಪದೇಶದಲ್ಲಿ ಸೇರಿದೆ. ಸಂಪೂರ್ಣ ಶ್ಲೋಕ ಇಂತಿದೆ :-

*ನೈಷಾ ತರ್ಕೇಣ ಮತಿರಾಪನೇಯಾ ಪ್ರೋಕ್ತಾಽನ್ಯೇನೈವ ಸುಜ್ಞಾನಾಯ ಪ್ರೇಷ್ಠ । ಯಾಂ ತ್ವಮಾಪಃ ಸತ್ಯಧೃತಿರ್ಬತಾಸಿ ತಾದೃಙ್ ನೋ ಭೂಯಾನ್ನಚಿಕೇತಃ ಪ್ರಷ್ಟಾ॥* *-ಕಠೋಪನಿಷತ್ ೧-೨-೯*

Rarest Archiver

**ಉಪನಿಷತ್ತಿನಲ್ಲಿ ಈ ವಾಕ್ಯಕ್ಕೆ ಹಿನ್ನೆಲೆ:–** ಬಡಕು ಆಕಳು, ಬಂಜರು ಭೂಮಿಗಳನ್ನು ದಾನ ಮಾಡುತ್ತಿದ್ದ ತನ್ನ ತಂದೆ ಉದ್ದಾಲಕರಿಗೆ ನನ್ನನ್ನು ಯಾರಿಗೆ ದಾನ ಮಾಡುವಿರಿ ಎಂದು ಕೇಳಿದ ನಚಿಕೇತನಿಗೆ ಅವನ ತಂದೆ ಸಿಟ್ಟಿನಿಂದ ನಿನ್ನನ್ನು ಯಮನಿಗೇ ದಾನ ಮಾಡುವುದು ಎಂದು ಹೇಳಿಬಿಟ್ಟರು. ಇದನ್ನು ಅಂಗೀಕರಿಸಿದ ನಚಿಕೇತ ಬಾಲಕನು ಯಮಲೋಕಕ್ಕೆ ಬಂದು ಯಮಧರ್ಮರಾಜನ ಮನೆಯ ಬಾಗಿಲಿನ ಹೊರಗಿನ ಜಗಲಿಯ ಮೇಲೆ ಕುಳಿತುಕೊಳ್ಳುವನು. ಯಮಧರ್ಮನು ಮನೆಯಲ್ಲಿರದಿರುವುದರಿಂದ ಬಾಲಕ ನಚಿಕೇತನು ಒಳಗೆ ಹೋಗಲೇ ಇಲ್ಲ. ಯಮಧರ್ಮನ ಪತ್ನಿ ಶಾಮಲಾ ದೇವಿಯು ಒಳಗೆ ಬಂದು ವಿಶ್ರಮಿಸಬೇಕೆಂದು ಕರೆದರೂ ಯಜಮಾನರು ಇಲ್ಲದಿದ್ದಾಗ ಮನೆಯೊಳಗೆ ಹೊಗಬಾರದೆಂಬ ನಿಯಮದಂತೆ ಹೊರಗೇ ಕುಳಿತಿದ್ದನು. ಶ್ಯಾಮಲಾದೇವಿಯ ಆತಿಥ್ಯವನ್ನೂ ಕೂಡ ಸ್ವೀಕರಿಸಲಿಲ್ಲ. ಯಮಧರ್ಮನು ಮನೆಗೆ ಬಂದ ಬಳಿಕ ಶ್ಯಾಮಲಾ ದೇವಿಯು ತನ್ನ ಪತಿ ಯಮಧರ್ಮನಿಗೆ ಋಷಿಕುಮಾರನು ಯಾವ ಆತಿಥ್ಯ ಸ್ವೀಕರಿಸದೆಯೇ ಹೊರಗೇ ಕುಳಿತ ವಿಷಯ ತಿಳಿಸಿದಳು. ಆಗ ಯಮಧರ್ಮನು ಲಗುಬಗೆಯಿಂದ ಹೊರಗೆ ಬಂದು ಋಷಿಕುಮಾರನಾದ ನಚಿಕೇತನನ್ನು ಅರ್ಘ್ಯ ಪಾದ್ಯಗಳೊಡನೆ ಮನೆಯೊಳಗೆ ಕರೆತಂದು ಅವನ ನಿಯಮನಿಷ್ಠೆ, ಸತ್ಯನಿಷ್ಠುರತೆಗಳಿಗೆ ಒಲಿದು ಯಾವ ವರವನ್ನು ಕೇಳಿದರೂ ಕೊಡುವುದಾಗಿ ಹೇಳಿದನು. ಆ ಋಷಿಕುಮಾರನು ಯಾವ ವರವೂ ಬೇಡೆಂದರೂ ಮೂರು ವರ ಕೊಡಲು ಸಿದ್ಧನಾದ ಯಮಧರ್ಮನಿಗೆ ವರಗಳನ್ನು ಕೊಡುವದಾದರೆ ಈ ವರಗಳನ್ನು ಕೊಡು ಎಂದು ಕೇಳಿದನು. ಮೊದಲನೆಯ ವರವಾಗಿ ತನ್ನ ತಂದೆಯ ಕೋಪ ಹಿಂಗಲೆಂದೂ ಎರಡನೆಯ ವರವಾಗಿ ಸ್ವರ್ಗಪ್ರಾಪ್ತಿಗೆ ಸಾಧನವಾದ ಅಗ್ನಿಯನ್ನು ಹೇಗೆ ಪ್ರತಿಷ್ಠಿಸಿ ಪ್ರಸನ್ನೀಕರಿಸಿಕೊಳ್ಳಬೇಕೆಂದೂ ಕೇಳಿ ಆ ವರಗಳನ್ನು ಪಡೆದನು. ಮೂರನೆಯ ವರವಾಗಿ ಮುಕ್ತ ಜೀವ ನಿಯಾಮಕನೂ ಆದ ಪರಮಾತ್ಮನ ಸ್ವರೂಪವನ್ನೇ ವಿವರಿಸಬೇಕೆಂದು ಕೇಳಿದನು. ಪರಮಶ್ರೇಷ್ಠ ಸಾಧಕರಿಗೂ ತಿಳಿಯಲಾರದ ವಿಷಯವಿದು. ನಿನಗೆ ಐಶ್ವರ್ಯ ಸಂಪತ್ತುಗಳ ವರವನ್ನು ಕೊಡುವೆನು. ತೆಗೆದುಕೊಂಡು ತಿರುಗಿ ಹೋಗಿ ಸುಖದಿಂದ ಇರು ಎಂದು ಎಷ್ಟು ಪ್ರಲೋಭನೆ ಮಾಡಿದರೂ ಪಟ್ಟು ಹಿಡಿದ ನಚಿಕೇತನಿಗೆ ಪರಮಾತ್ಮನ ಸ್ವರೂಪದ ಬಗ್ಗೆ ಉಪದೇಶಿಸುವ ಪುರ್ವಪೀಠಿಕೆಯ ಭಾಗದಲ್ಲಿ ಬರುವ ಶ್ಲೋಕವಿದು. ಬ್ರಹ್ಮಜ್ಞಾನೋಪಾಯ ನಿರೂಪಣೆ, ಪರಮಾತ್ಮನ ಮಹಿಮೆಯ ವರ್ಣನೆ, ಹಾಗೂ ಬ್ರಹ್ಮಸ್ವರೂಪ ವರ್ಣನೆ ಈ ಕ್ರಮದಲ್ಲಿ ಉಪದೇಶವಿದ್ದು ಬ್ರಹ್ಮಜ್ಞಾನೋಪಾಯ ನಿರೂಪಣೆಯ ಭಾಗದಲ್ಲಿ 'ನೈಷಾತರ್ಕೇಣ...' ಎಂಬ ಶ್ಲೋಕವು ಬಂದಿದೆ.

Rarest Archiver

**ಪದಚ್ಛೇದ:– ನ ಏಷಾ ತರ್ಕೇಣ ಮತಿ: ಆಪನೇಯಾ ಪ್ರೋಕ್ತಾ ಅನ್ಯೇನ ಏವ ಸುಜ್ಞಾನಾಯ ಪ್ರೇಷ್ಠ**

**ಅನ್ವಯ:–** ಪ್ರೇಷ್ಠ, ಏಷಾ (ಪರಮಾತ್ಮವಿಷಯಾ) ಮತಿಃ (ಶುಷ್ಕೇಣ) ತರ್ಕೇಣ ಆನೇಯಾ ಅಪನೇಯಾ (ಚ) ನ (ಭವತಿ) (ಆಪನೇಯಾ ಎಂಬುದನ್ನು ಆ+ಅಪ ಉಪಸರ್ಗಗಳನ್ನು ಕ್ರಮವಾಗಿ ನೇಯಾ ಎಂಬ ಪದಕ್ಕೆ ಹಚ್ಚಿದರೆ ಆನೇಯಾ, ಅಪನೇಯಾ ಎಂದು ಎರಡು ಪದಗಳಾದವು). (ಕಿಂತು) ಅನ್ಯೇನ ಪ್ರೋಕ್ತಾ ಏವ ಸುಜ್ಞಾನಾಯ (ಭವತಿ).

**ಅರ್ಥ:–** ನನಗೆ ಅತ್ಯಂತ ಪ್ರೀತ್ಯಾಸ್ಪದನಾದ ಬಾಲಕ ನಚಿಕೇತನೆ, ಪರಮಾತ್ಮ ವಿಷಯಕಜ್ಞಾನವು ಶುಷ್ಕತರ್ಕದಿಂದ ಹುಟ್ಟಲಾರದು. ಅಲ್ಲದೆ ಪರಮಾತ್ಮನ ಬಗ್ಗೆ ಇರುವ ಜ್ಞಾನವನ್ನು ಶುಷ್ಕತರ್ಕದಿಂದ ನಿರಾಕರಿಸಲೂ ಸಾಧ್ಯವಾಗುವದಿಲ್ಲ. ತರ್ಕವು ಪರಮಾತ್ಮನ ತಿಳಿವಿಗೆ ಸಾಧಕವೂ ಆಗದು, ಬಾಧಕವೂ ಆಗದು. ಹಾಗಾದರೆ ಯಾವುದರಿಂದ ಪರಮಾತ್ಮನನ್ನು ತಿಳಿಯಬಹುದು ಎಂದರೆ ಅನ್ಯೇನ, ಎಂದರೆ ಜೀವೇಶ್ವರ ಭೇಧ ಜ್ಞಾನಿಯೂ ಭಕ್ತಿಯುಳ್ಳವನೂ ಆದ ಆಚಾರ್ಯ ಪುರುಷನು ಮಾಡಿದ ವೇದ ಪ್ರವಚನದಿಂದ ಮಾತ್ರ ಪರಮಾತ್ಮನನ್ನು ತಿಳಿಯಬಹುದು ಎಂದರ್ಥ. ಅನ್ಯೇನ ಎಂದರೆ ಯೋಗ್ಯತೆಯುಳ್ಳ ಆಚಾರ್ಯನು ಮಾಡಿದ ವೇದ ಪ್ರವಚನ ಎಂಬ ಅರ್ಥವು ಹೇಗೆ ಬರುವುದು ಎಂಬುದನ್ನು ಶ್ರೀರಾಯರು ಖಂಡಾರ್ಥದಲ್ಲಿ ಬಿಡಿಸಿ ಹೇಳಿದ್ದಾರೆ. '**ಅನ್ಯೇನ** ಬ್ರಹ್ಮಣಃ ಅನ್ಯೋಽಹಂ ಇತಿ ಜಾನತಾ **ಪ್ರೋಕ್ತಾ ಮತಿಃ,** ತದುಪದೇಶಜನ್ಯಾ ಬುದ್ಧಿಃ **ಸುಜ್ಞಾನಾಯ** ಸಮ್ಯಗ್‌ಜ್ಞಾನಾಯ ಭವತಿ' ಎಂದು ***ಖಂಡಾರ್ಥ***ವು. ಶ್ರೀ ವಾದಿರಾಜಸ್ವಾಮಿಗಳು ತಮ್ಮ '***ಪ್ರಕಾಶಿಕೆ***' ಯಲ್ಲಿಇದಕ್ಕೆ ಸ್ವಾರಸ್ಯವಾದ ವಿವರಣೆ ಕೊಟ್ಟಿದ್ದಾರೆ. ಹಿಂದಿನ ವಾಕ್ಯದ ಅನನ್ಯಪ್ರೋಕ್ತೇ ಎಂಬ ಪದಕ್ಕೆ ಶ್ರೀಮದಾಚಾರ್ಯರ ಭಾಷ್ಯ ಇಂತಿದೆ. '**ಅನ್ಯೋ ಭಗವಾನ್ ಅನ್ಯೋಽಹಮಿತಿ ಅಜಾನನ್ನನನ್ಯಃ, ತೇನ ಪ್ರೋಕ್ತೇ ಗತಿಃ ಜ್ಞಾನಂ ನಾಸ್ತಿ । ಪ್ರೋಕ್ತಾಽನ್ಯೇನೈವ ಸುಜ್ಞಾನಾಯ ಪ್ರೇಷ್ಠೇತಿ ವಾಕ್ಯಶೇಷಾತ್**' ಎಂದು. ಇದರ ಹಿನ್ನೆಲೆಯಲ್ಲಿ ಶ್ರೀ ವಾದಿರಾಜರ ಟೀಕೆ – '**ಅನ್ಯೇನ ಭೇದ ಜ್ಞಾನಿಕಾ ಇತ್ಯತ್ರ ಶ್ರೋತುಃ ಅನ್ಯಃ ಪ್ರವಕ್ತಾ ಇತಿ ಸರ್ವಜನಸಿದ್ಧಮ್ । ಏವಮಪ್ಯನ್ಯೇನೈವ ಪ್ರೋಕ್ತಾ ಇತಿ ವದನ್ ವಿಷಯೇಣ ವಿಷಯಿಣಂ ಉಪಲಕ್ಷಯನ್ ತಾವದಪ್ರಧಾನನಿರ್ದೇಶಸ್ಯಾಪಿ ದ್ವ್ಯೇಕಯೋರ್ದ್ವಿವಚನೈಕವಚನೇ ಇತ್ಯಾದೌ ಬಹುಲಮುಪಲಂಭಾತ್ ಅದ್ವೈತೋಪದೇಷ್ಟೃಕುಸುಮುಯಿವ್ಯಾವರ್ತನಾಯ ಜೀವೇಶಯೋಃ ಅನ್ಯತ್ವಜ್ಞಾನವತಾ ಇತ್ಯರ್ಥಂ ಅಭಿಪ್ರೈತಿ ಇತಿಜ್ಞೇಯಮ್**' । ಹೀಗಿದೆ, ಇದರ ಒಟ್ಟಭಿಪ್ರಾಯವೆಂದರೆ – ಉಪದೇಶಿಸುವ ವಕ್ತೃವು ಉಪದೇಶ ಪಡೆಯುವ

Rarest Archiver

ಶ್ರೋತೃವು ಬೇರೆ ಇರುವರಷ್ಟೆ. ಈ ಲೌಕಿಕ ದೃಷ್ಟಾಂತದಿಂದ ಪರಮಾತ್ಮ ಜೀವರಲ್ಲಿಯ ಭೇದ ತಿಳಿದ ಬೇದಜ್ಞಾನಿಯು ಪರಮಾತ್ಮನ ಜ್ಞಾನಕ್ಕಾಗಿ ಪ್ರತ್ಯಕ್ಷಾನುಮಾನಗಳನ್ನು ಬಿಟ್ಟು ವೇದದಿಂದಲೇ ತಿಳಿಯುವದರಿಂದ ಅವನ ಉಪದೇಶವೇ ತಾರಕವಾಗುವದು. ತರ್ಕಾದಿಗಳಿಂದ ಪರಮಾತ್ಮಜ್ಞಾನವಾಗಲಾರದು ಎಂದು. ಈ ಉಪದೇಶವನ್ನು ಯಮಧರ್ಮನು ತನಗೆ ಅತ್ಯಂತ ಪ್ರೀತ್ಯಾಸ್ಪದನಾದ (ಪ್ರೇಷ್ಠ) ನಚಿಕೇತನಿಗೆ ಮಾಡಿರುವುದರಿಂದ ಇದು ಪ್ರತಾರಕನ ಉಪದೇಶವಲ್ಲವೆಂಬುವುದು ಸಿದ್ಧವಾಗುವದು. ಹೀಗೆ ವೇದವೇ ಪರಮಾತ್ಮನ ಜ್ಞಾನಕ್ಕೆ ಸಾಧನವಾಗುವುದೆಂಬುದು ಪ್ರಾಮಾಣಿಕವಾದ ವಿಷಯವೆಂದು ಈ ಶ್ರುತಿವಾಕ್ಯದಿಂದ ತಿಳಿಯುವುದು. ಏಷಾ – ಎಂದರೆ ಈ ಎಂದು ಹೇಳಿದುದೂ ಕೂಡ ಪೂರ್ವಪ್ರಸಕ್ತವಾದ ಹಾಗೂ ಪ್ರಾಮಾಣಿಕವಾದ ಜ್ಞಾನವು ಎಂದು ಸೂಚಿಸುವದಕ್ಕಾಗಿಯೇ ಎಂದು ತಿಳಿಯುವುದು. ಯಮಧರ್ಮರಾಯನು ಹಿಂದಿನ ವಾಕ್ಯದಲ್ಲಿ **ಅನನ್ಯ ಪ್ರೋಕ್ತೇ ಗತಿರತ್ರ ನಾಸ್ತಿ** ಎಂದು ಹೇಳಿದ್ದಾನೆ. ಜೀವೇಶರಲ್ಲಿ ಭೇದವನ್ನು ತಿಳಿಯದವನಿಂದ ಉಪದಿಷ್ಟವಾದರೆ ಪರಮಾತ್ಮ ವಿಷಯಕವಾದ ಜ್ಞಾನವು (ಗತಿಃ) ದೊರೆಯಲಾರದು ಎಂದು ಸ್ಪಷ್ಟವಾಗಿ ಹೇಳಿ **ನೈಷಾ ತರ್ಕೇಣ ಮತಿಃ ಆಪನೇಯಾ** ಎಂದು ಹೇಳಿದ್ದಾನೆ. ಹೀಗೆ ಯಮಧರ್ಮನ ಉಪದೇಶಲ್ಲಿ ಒಂದು ಸಾತತ್ಯ ಹಾಗೂ ಹಿಂದು ಮುಂದಿನದರ ಸಂಬದ್ಧತೆ ಇದೆಯಾದ್ದರಿಂದ ಅದು ತೋರಿಕೆಯ ಮಾತಾಗಿಲ್ಲ. ಗಾಂಭೀರ್ಯದ ತತ್ವಚಿಂತನೆಯ ಮಾತಾಗಿದೆಯೆಂಬುದು ಸ್ಪಷ್ಟ-ವಾಗುವುದು.

*ಶ್ರುತ್ಯರ್ಥಷಟ್ಪದಿ*ಯಲ್ಲಿ ಇದರ ಭಾವವು ಹೀಗೆ;

*ಬರಿಯ ತರ್ಕಾದಿಗಳ ಮಾಡುತ*
*ಹರಿಯನರಿವುದು ಸಾಧ್ಯವಿಪ್ಪುದೆ?*
*ಬರಿಯ ತರ್ಕಾದಿಗಳು ತಿಳಿವನು ಸರಿಸಲಸದಳವು,*
*ಪರಮಪುರುಷನ ವೇದದಿಂದಲಿ*
*ಅರಿತ ಭೇದಜ್ಞಾನಿ ತಿಳಿಸಲು*
*ಪರಮಗತಿಯನು ನರನು ಪಡೆವನು, ತಿಳಿಯೊ, ನಚಿಕೇತ.* ॥

### ೩. 'ನೇಂದ್ರಿಯಾಣಿ ನಾನುಮಾನಂ ವೇದಾ ಹ್ಯೇವೈನಂ ವೇದಯಂತಿ ತಸ್ಮಾದಾಹುಃ ವೇದಾಃ' – *ಪಿಪ್ಪಲಾದಶ್ರುತಿಃ*

(*ಉಪನಿಷದ್ವಾಕ್ಯಮಹಾಕೋಷಃ* – ಚೌಖಂಬಾ ಪ್ರಕಾಶನದಲ್ಲಿ ಇದರ ಉಲ್ಲೇಖವಿಲ್ಲ)

**ಅನ್ವಯ ಮತ್ತು ಅರ್ಥ:–** ಏನಂ ನ ಇಂದ್ರಿಯಾಣಿ ವೇದಯಂತಿ ನ ಅನುಮಾನಂ (ವೇದಯತಿ)। ವೇದಾಃ ಏವ ಏನಂ ವೇದಯಂತಿ । ತಸ್ಮಾತ್ (ತಾನ್) ವೇದಾಃ (ಇತಿ) ಆಹುಃ (ಜ್ಞಾನಿನಃ) । ವೇದಗಳೇ ಪರಮಾತ್ಮನನ್ನು ತಿಳಿಸಿಕೊಡುವ

Rarest Archiver

ಸಾಧನಗಳೆಂಬ ವಿಷಯಕ್ಕೆ ಈ ಶ್ರುತಿಯು ಸ್ಪಷ್ಟವಾಗಿ ಹೇಳುವ ಪ್ರಮಾಣವಾಗಿದೆ. ಇಂದ್ರಿಯಗಳಲ್ಲ (ಪ್ರತ್ಯಕ್ಷವಲ್ಲ), ಅನುಮಾನವಲ್ಲ, ವೇದಗಳೇ ಇವನನ್ನು ತಿಳಿಸಿಕೊಡುವುದರಿಂದಲೇ ಇವುಗಳಿಗೆ ವೇದಗಳೆನ್ನುವರು.

**ವಿಶೇಷ ವಿಷಯಗಳು:–** ವೇದಯಂತಿ ಎಂಬ ಕ್ರಿಯಾಪದವು ವಿದ್ ವೇತ್ತಿ (ತಿಳಿದು–ಕೊಳ್ಳು) ಎಂಬ ಎರಡನೆಯ ಗಣದ ಧಾತುವಿನ ಪ್ರಯೋಜಕದ ರೂಪವು. ವೇದ ಎಂದರೆ ತಿಳಿಸಿಕೊಡುವಂಥಹದು ಎಂದಿದ್ದಾಗ ಏನನ್ನು ಎಂಬ ಪ್ರಶ್ನೆ ಬರುವದು. ಅಸಾಧಾರಣ್ಯೇನ ವ್ಯವದೇಶಾ ಭವಂತಿ – ಸಾಧಾರಣವಾಗ (ಸಾಮಾನ್ಯವಿರ)ದಿದ್ದರ ವಿಷಯಕ್ಕೇ ಶಬ್ದಗಳು ಪ್ರಯೋಗಿಸಲ್ಪಡುತ್ತವೆಯೆಂಬುದು ನಿಯಮ. ಉದಾಹರಣೆಗೆ ಕೃಷ್ಣ ಎಂದರೆ ಕಪ್ಪು ಎಂಬರ್ಥವಿದ್ದರೂ ಯಾವ ವಿಶೇಷಣವಿರದಿದ್ದರೆ ಕೃಷ್ಣ ಪದದಿಂದ ಯಾದವಕುಲಲಲಾಮ ಶ್ರೀ ಕೃಷ್ಣನೆಂದೇ ಅರ್ಥ ಆಗುವದು. ವ್ಯಾಸ ಎಂದರೆ ಅಶ್ವತ್ಥಾಮ, ವೇದವ್ಯಾಸ ಎಂಬ ಅರ್ಥಗಳಿದ್ದರೂ ಅಸಾಧಾರಣವಾದ ವೇದವ್ಯಾಸ ಎಂಬ ಅರ್ಥದಲ್ಲಿಯೇ ವ್ಯಾಸ ಶಬ್ದವನ್ನು ಗ್ರಹಿಸುವೆವು. ಅದೇ ರೀತಿ ಸೂತ್ರವೆಂದಾಗ ಕಾಮಸೂತ್ರ, ಚಾಣಕ್ಯಸೂತ್ರ, ಗೃಹ್ಯಸೂತ್ರ, ಗೌತಮಸೂತ್ರ, ಬ್ರಹ್ಮಸೂತ್ರ ಇತ್ಯಾದಿ ಅರ್ಥ ಬಂದರೂ ಅತಿ ಶ್ರೇಷ್ಠವಾದ ಬ್ರಹ್ಮಸೂತ್ರವೆಂದೇ ಸೂತ್ರ ಶಬ್ದದ ಅರ್ಥವನ್ನು ತಿಳಿಯಬೇಕು. ಹಾಗೆಯೇ ಅತಿ ಶ್ರೇಷ್ಠವಾದ ವಿಷಯವನ್ನು ತಿಳಿಸುವಂಥದ್ದಕ್ಕೇ ವೇದ ಎಂದು ಸಾರ್ಥಕ ಹೆಸರಾಗುವದು. ತಿಳಿಸಿ ಕೊಡುವುದನ್ನು ಪ್ರತ್ಯಕ್ಷ, ಅನುಮಾನಗಳು ಮಾಡುತ್ತಿದ್ದರೂ ಅತಿಶ್ರೇಷ್ಠವಾದ ಬ್ರಹ್ಮನನ್ನು ಅವು ತಿಳಿಸಲಾರವಾದಕಾರಣ ಅವುಗಳಿಗೆ ವೇದವೆಂಬ ಹೆಸರು ಬರಲಿಲ್ಲ. ವೇದವೆಂದರೆ ಅಪೌರುಷೇಯವಾದ ಗ್ರಂಥರಾಶಿಗೇ ಈ ಹೆಸರು ಪ್ರಾಪ್ತವಾಗಿದೆ. ಪ್ರಕೃತ ಸಂದರ್ಭದಲ್ಲಿ ವಿಶಿಷ್ಟವಸ್ತು ವೇದನಕರಣವಾದ ಸದಾಗಮಗಳಿಗೆ ವೇದವೆನ್ನಬೇಕೆಂದು ಪ್ರಸ್ತುತ ***ಪಿಪ್ಪಲಾದ ಶ್ರುತಿ***ಯಲ್ಲಿ ಸ್ಪಷ್ಟಪಡಿಸಲಾಗಿದೆ.

ಪಿಪ್ಪಲಾದರು ಮಹಾಜ್ಞಾನಿಗಳಾದ ವೇದದ್ರಷ್ಟಾರರು. ***ಷಟ್ಪ್ರಶ್ನೋಪ–ನಿಷತ್ತಿ***ನಲ್ಲಿ ಇವರ ಉಲ್ಲೇಖ ಬರುವುದು. **‘ಸುಕೇಶಾ ಚ ಭಾರದ್ವಾಜಃ ಶೈಬ್ಯಶ್ಚ ಸತ್ಯಕಾಮಃ ಸೌರ್ಯಾಯಣೀ ಚ ಗಾರ್ಗ್ಯಃ ಕೌಸಲ್ಯಶ್ಚಾಶ್ವಲಾಯನಃ ಭಾರ್ಗವೋ ವೈದರ್ಭಿಃ ಕಬಂಧಿ ಕಾತ್ಯಾಯನಃ ತೇ ಹೈತೇ ಬ್ರಹ್ಮಪರಾ ಬ್ರಹ್ಮನಿಷ್ಠಾಃ ಪರಂ ಬ್ರಹ್ಮ ಅನ್ವೇಷಮಾಣಾಃ ಏಷ ಹ ವೈ ತತ್ಸರ್ವಂ ವಕ್ಷ್ಯತೀತಿ ತೇ ಹ ಸಮಿತ್ಪಾಣಯಃ ಭಗವಂತಂ ಪಿಪ್ಪಲಾದಂ ಉಪಸನ್ನಾಃ’** ***ಷ.ಪ್ರ.ಉ. ೧–೧.*** ಇಷ್ಟೆಲ್ಲ ಋಷಿಗಳು ಬ್ರಹ್ಮಜ್ಞಾನಕ್ಕೋಸ್ಕರ ಪೂಜ್ಯರಾದ ಪಿಪ್ಪಲಾದರನ್ನು ಕಂಡರು. ಪಿಪ್ಪಲಾದರಾದರೋ ಬಹಳ ವಿನಯಗುಣಭೂಷಿತರು, ಪ್ರಾಮಾಣಿಕರು. ತಮಗೆ ತಿಳಿದಿದ್ದರೆ ನಿಮಗೆ ತಿಳಿಸುವೆವು ಎಂದು ಪ್ರಾಮಾಣಿಕವಾಗಿ ಹೇಳಿಯೇ ಉಪದೇಶಿಸಲು ಪ್ರಾರಂಭಿಸುವರು.

Rarest Archiver

ಇಂಥ ಪಿಪ್ಪಲಾದರ ಶ್ರುತಿಯಲ್ಲಿ ವೇದದಿಂದಲೇ ಪರಮಾತ್ಮನ ಜ್ಞಾನವಾಗಬಹುದು ಎಂದು ಹೇಳಿದುದನ್ನು ಶ್ರೀಮದಾಚಾರ್ಯರು ಇಲ್ಲಿ ಉಲ್ಲೇಖಿಸಿದುದು ಬಹಳ ಸಮರ್ಪಕವಾಗಿದೆ.

*ಶ್ರುತ್ಯರ್ಥಷಟ್ಪದಿ*ಯಲ್ಲಿ ಇದರ ಭಾವವು ಹೀಗೆ;

*ಕರಣಗಳಿಗಿವ ಸಿಗನು ಯುಕ್ತಿಯ-*
*ನರಸಿ ಯೋಜಿಸೆ ನಿಲುಕದಾತನು,*
*ಅರಿವುದೀತನ ವೇದಮಾತ್ರದಿ ಎಂದು ತಿಳಿಯುವುದು.*
*ಪರಮಪುರುಷನ ವಿದಿತಗೊಳಿಸುವ*
*ಪರಮಸಾಧನವೆಂಬ ಕಾರಣ*
*ಕರೆವರಿದ ತಾವರಿತ ಸಂತರು ವೇದವೆಂತೆಂದು.* ॥

**೪. 'ವಾಚಾ ವಿರೂಪ ನಿತ್ಯಯಾ ।' -** *ಋಗ್ವೇದ.*

ಶ್ರುತಿಯ ಇಷ್ಟು ಭಾಗವನ್ನು ಮಾತ್ರ ಆಚಾರ್ಯರು ಉದಾಹರಿಸಿದ್ದು ಶ್ರೀ ಟೀಕಾಕೃತ್ಪಾದರು ಶ್ರುತಿಯ ಪೂರ್ಣ ಪಾಠವನ್ನು ಕೊಟ್ಟಿದ್ದಾರೆ. **ತಸ್ಮೈ ನೂನಂ ಅಭಿದ್ಯವೇ ವಾಚಾ ವಿರೂಪ ನಿತ್ಯಯಾ । 'ವೃಷ್ಣೇ ಚೋದಸ್ವ ಸುಷ್ಟುತಿಮ್ ॥'*** *ಇದು ಋಗ್ವೇದದ ೮ ನೆಯ ಮಂಡಲದ ೭೫ ನೆಯ ಸೂಕ್ತದ ೬ ನೆಯ ಋಕ್ ಆಗಿದೆ. ಹಾಗೂ ೮ ನೆಯ ಮಂಡಲದ ೧೩೬೪ ನೆಯ ಋಕ್* ಆಗಿದೆ. ಈ ಸೂಕ್ತಕ್ಕೆ ಋಷಿಯು ವಿರೂಪನು (ಆಂಗಿರಸ) ಅಗ್ನಿ ದೇವತೆಯು ಹಾಗೂ ಗಾಯತ್ರೀ ಛಂದಸ್ಸು.

**ಅನ್ವಯ:- (ಹೇ) ವಿರೂಪ, ಅಭಿದ್ಯವೇ ತಸ್ಮೈ ವೃಷ್ಣೇ ನೂನಂ ನಿತ್ಯಯಾ ವಾಚಾ ಸುಷ್ಟುತಿಮ್ ಚೋದಸ್ವ ।**

**ಅರ್ಥ :-** 'ಎಲೈ ವಿರೂಪ ಋಷಿಯೆ, ಸರ್ವತ್ರ ಪ್ರಕಾಶಮಾನನಾದ, ಪರ್ಜನ್ಯಾದಿ-ಗಳನ್ನು ಕರೆಯುವ, ಆ ಪರಮಾತ್ಮನನ್ನು ನಿಶ್ಚಿತವಾಗಿಯೂ ನಿತ್ಯವಾದ ವೇದರೂಪವಾಣಿಯಿಂದ ಸ್ತುತಿಸು.'

**ವಿಶೇಷ ವಿಷಯಗಳು :-** ಇಲ್ಲಿ ನಿತ್ಯಯಾ ವಾಚಾ ಎಂಬುದರಿಂದ ನಿತ್ಯವಾದ ಅಂದರೆ ಅಬಾಧಿತವಾದ ವಾಕ್ ಎಂದರೆ ವೇದವೇ ಎಂದು ಸೂಚಿಸಲ್ಪಟ್ಟಿದೆ. ಹಾಗೂ ಪರಮಾತ್ಮನ ಸ್ತೋತ್ರವನ್ನು ಇಂಥ ವೇದವಾಣಿಯಿಂದಲೇ ಮಾಡಲು ಸಾಧ್ಯವೆಂಬ ವಿಷಯವೂ ತಿಳಿಸಲ್ಪಟ್ಟಿದೆ. ಸುಷ್ಟುತಿಯೆಂದರೆ ಸಮೀಚನವಾದ ಸ್ತುತಿ. ಪರಮಾತ್ಮನ

---

* ಋಗ್ವೇದ ಕಾ ಸುಬೋಧ ಭಾಷ್ಯ ಭಾಗ ೩ – ಪಂ. ಶ್ರೀಪಾದ ದಾಮೋದರಸಾತವಳೇಕರ. ಸ್ವಾಧ್ಯಾಯ ಮಂಡಲ. ೧೯೭೮

Rarest Archiver

ಬಗ್ಗೆ ಸಮೀಚೀನವಾದ ಜ್ಞಾನದಿಂದ ಕೂಡಿದ ವರ್ಣನೆಯೇ ಸ್ತುತಿಯೆಂದು ಕರೆಯಿಸಲ್ಪಡುವದರಿಂದ ನಿತ್ಯವಾದ ವೇದವೇ ನಿಶ್ಚಿತವಾಗಿಯೂ ಇಂಥ ವರ್ಣನೆ ಮಾಡಲು ಸಾಧ್ಯ. ಇಂಥ ವರ್ಣನೆಯಿಂದಲೇ ಆ ಪರಮಾತ್ಮನು ಹೃದಯದಲ್ಲಿ ಪ್ರಕಾಶಮಾನನಾಗಿ ಫಲಗರೆಯುವನು ಎಂಬೀ ವಿಷಯಗಳು ಸೂಚಿಸಲ್ಪಟ್ಟಿವೆ. ಜ್ಞಾನಿಯಾದ ವಿರೂಪ ಋಷಿಗೆ ವೇದಪುರುಷನ ಈ ಉಪದೇಶವು ಪ್ರಾಮಾಣಿಕ-ವಾದುದು ಎಂಬುದೂ ಇಲ್ಲಿಯ ಒಳಗುಟ್ಟು. ಈ ಸೂಕ್ತದಲ್ಲಿ ಉಳಿದಾವ ಋಕ್ಕಿ-ನಲ್ಲಿಯೂ ಸೂಕ್ತದ ಋಷಿಯ ಹೆಸರು ಕಂಠತಃ ಹೇಳಲ್ಪಡದೆ ಈ ಋಕ್ಕಿನಲ್ಲಿ ಮಾತ್ರ ಹೇಳಲ್ಪಟ್ಟಿದ್ದೂ ಕೂಡ ವೈಶಿಷ್ಟ್ಯಪೂರ್ಣವಾಗಿದೆ. ಈ ಸೂಕ್ತದ ದೇವತೆಯಾದ ಅಗ್ನಿಯ ಸ್ತೋತ್ರ ಮಾಡಲು ಪ್ರೇರಣೆ ನೀಡುವ ಸೂಕ್ತವಿದು. ಇಲ್ಲಿ ಭೌತಿಕ ಅಗ್ನಿಯ ಸ್ತೋತ್ರವಿರದೆ ಪರಮ ಮುಖ್ಯವೃತ್ತಿಯಿಂದ ಅಗ್ನಿ ಪದದಿಂದ ಪರಮಾತ್ಮನೇ ನಿರ್ದೇಶಿಸಲ್ಪಟ್ಟಿದ್ದಾನೆ. (**ಓಂ, ವೈಶ್ವಾನರಃ ಸಾಧಾರಣ ಶಬ್ದಾತ್ ಓಂ** ಎಂಬ ಸೂತ್ರದಲ್ಲಿ ಶ್ರೀ ವೇದವ್ಯಾಸರು ಈ ವಿಷಯವನ್ನು ವಿವರಿಸಿದ್ದಾರೆ. ಅಗಂ ನಯತಿ ಇತಿ ಅಗ್ನಿಃ ಎಂದು ನಿರ್ವಚನ. ಯಾಸ್ಕರ *ನಿರುಕ್ತ*ದಲ್ಲಿ ಅಗ್ರಣೀರ್ಭವತಿ, ಅಂಗಂ ನಯತಿ ಎಂದು ವಿವರಣೆ ಕೊಟ್ಟಿದ್ದಾರೆ.** ಇದಕ್ಕೆ ಎಲ್ಲರಗಿಂತಲೂ ಅಗ್ರಗಣ್ಯನಾದ ಪರಮಾತ್ಮನೇ ಸೂಚಿಸಲ್ಪಟ್ಟು ಅವನೇ ಉಳಿದ ಎಲ್ಲದಕ್ಕೂ ಪ್ರೇರಕನಾಗಿದ್ದಾನೆ. ಉಳಿದುದೆಲ್ಲವೂ ಅವನ ಅಂಗ ಎಂಬ ಪರಮ ಮುಖ್ಯಾರ್ಥ ಸೂಚಿತವಾಗುವದು.)

*ಶ್ರುತ್ಯರ್ಥಷಟ್ಪದಿ*ಯಲ್ಲಿ ಇದರ ಭಾವವು ಹೀಗೆ;

*ತುತಿಸು, ದೇವನ ಋಷಿ ವಿರೂಪನೆ,*
*ಅತುಳವಾಗಿಹ ನಿತ್ಯವೇದದ*
*ವಿತತ ವಚನದ ರಾಶಿಯಿಂದಲಿ ನಿರುತ ಭಕುತಿಯಲಿ,*
*ಸತತ ವರಗಳ ಮಳೆಯ ಸುರಿಸುವ*
*ಅತುಳ ಮಹಿಮೆಯ ಪರಮಪುರುಷನ*
*ಅತುಲ ವಚನಗಳಿಂದ ಮಾತ್ರವೆ ತುತಿಸಿ ಸುಖಿಸುವುದು. ॥*

## ೫. 'ನಿತ್ಯಯಾಽನಿತ್ಯಯಾ ಸ್ತೌಮಿ ಬ್ರಹ್ಮ ತತ್ಪರಮಂ ಪದಮ್'

ಇದು ***ಪೈಂಗೀ ಶ್ರುತಿಯು*** ಎಂದು ಶ್ರೀ ನಾರಾಯಣ ಪಂಡಿತಾಚಾರ್ಯರು ತಮ್ಮ *ತತ್ತ್ವಮಂಜರಿ*ಯಲ್ಲಿ ಹೇಳಿದ್ದಾರೆ. ಆಚಾರ್ಯರು ಈ ಮೊದಲು ಉದಾಹರಿಸಿದ

---

** ಅಗ್ನಿಃ ಕಸ್ಮಾತ್ । ಅಗ್ರಣೀರ್ಭವತಿ ಅಗ್ರಂಯಜ್ಞೇಷು ಪ್ರಣೀಯತೆ ॥ ಅಂಗಂ ನಯತಿ ಸನ್ನಮಮಾನಃ॥ ಯಾಸ್ಕಮುನಿ ಪ್ರಣೀತಮ್ ನಿರುಕ್ತಮ್ – ಮೆಹರಚಂದ ಲಛಮನದಾಸ, ನ್ಯೂದಿಲ್ಲಿ. ೧೯೮೨. ಪುಟ ೩೬೮.

Rarest Archiver

ಶ್ರುತಿಯಲ್ಲಿ 'ನಿತ್ಯಯಾ ವಾಚಾ' ಎಂದು ಪದಗಳಿದ್ದು ಅಲ್ಲಿ 'ವಾಚಾ' ಎಂದರೆ ವೇದದಿಂದ ಎಂದು ಅರ್ಥ ಮಾಡಲಾಗಿದೆ. ಆದರೆ 'ವಾಕ್' ಎಂಬ ಶಬ್ದವು ವಾಗಿಂದ್ರಿಯದಲ್ಲಿಯೂ ಪ್ರಸಿದ್ಧವಾಗಿರುವುದರಿಂದ ವೇದವೆಂಬ ಅರ್ಥವನ್ನು ಹೇಗೆ ಹೇಳುವುದು ಎಂದು ಪ್ರಶ್ನೆ ಮಾಡಿಕೊಂಡು ಈ ಋಕ್ಕಿನ ಅರ್ಥವನ್ನೇ ಪೈಂಗೀ ಶ್ರುತಿಯೂ ಹೇಳುತ್ತಿದೆಯೆಂದು ಆ ಶ್ರುತಿಯನ್ನೇ ಇಲ್ಲಿ ಉದಾಹರಿಸಿದ್ದಾರೆ.

**ಈ ವಾಕ್ಯದ ಅರ್ಥ ಹೀಗಿದೆ** –ನಿತ್ಯವಾದ ವೇದ ಹಾಗೂ ಅನಿತ್ಯವಾದ ವಚನಗಳೆಂದರೆ ಅಪೌರುಷೇಯುವಾದ ವೇದ ವಚನಗಳನ್ನು ಅನುಸರಿಸಿಕೊಂಡಿರುವ ಸ್ಮೃತಿ ಪುರಾಣಾದಿಗಳು. ಒಟ್ಟಿಗೆ, ನಿತ್ಯವಾದ ವೇದ ವಚನಗಳಿಂದ ಹಾಗೂ ಅನಿತ್ಯವಾದ ಸ್ಮೃತಿ ಪುರಾಣಾದಿಗಳ ವಾಕ್ಯಗಳಿಂದ –ಅಪೌರುಷೇಯ ಹಾಗೂ ಪೌರುಷೇಯ ಆಗಮಗಳಿಂದ– ಆ ಪರಮ ಪ್ರಾಪ್ಯನಾದ ಪರಮಾತ್ಮನನ್ನು ಸ್ತುತಿಸುತ್ತೇನೆ. ಇದರಲ್ಲಿ ನಿತ್ಯವಾದ ಅಪೌರುಷೇಯು ವಾಕ್ಯಗಳು, ಅನಿತ್ಯವಾದ ವಚನಗಳೆಂದರೆ ಪುರುಷಕೃತವಾದ ವಾಕ್ಯಗಳು, ಪೌರುಷೇಯ ಆಗಮಗಳು. ಈ ವಿಷಯವನ್ನು ವಿವರಿಸುವ ಪೈಂಗೀ ಶ್ರುತಿಯ ಇನ್ನೊಂದು ವಾಕ್ಯವು ಈ ಕೆಳಗೆ ಹೇಳಲ್ಪಟ್ಟಿದೆ.

*ಶ್ರುತ್ಯರ್ಥಷಟ್ಪದಿ*ಯಲ್ಲಿ ಇದರ ಭಾವವು ಹೀಗೆ;

*ನಿತ್ಯವಾಗಿಹ ಪರಮಪುರುಷನ*
*ನಿತ್ಯವಾಗಿಹ ವೇದದಿಂದಲ–*
*ನಿತ್ಯವಾಗಿಹ ಪೌರುಷೇಯಾಗಮದ ವಚನಗಳಿಂ*
*ಅತ್ಯಧಿಕ ಸದ್ಭಕ್ತಿಯಿಂದಲಿ*
*ನಿತ್ಯ ತುತಿಸುವೆ ಸಕಲಗುಣಗಣ–*
*ಸ್ತುತ್ಯ ಪರಮಪ್ರಾಪ್ಯನೀತನೆ ಸ್ತುತ್ಯನೆಂದರಿತು.* ॥

**೬. 'ಶ್ರುತಿರ್ವಾವ ನಿತ್ಯಾ ಅನಿತ್ಯಾವಾವ ಸ್ಮೃತಯೋ ಯಾಶ್ಚಾನ್ಯಾ ವಾಚಃ'**
*–ಪೈಂಗೀ ಶ್ರುತಿ.*

**ಅನ್ವಯ:–** ನಿತ್ಯಾ ಶ್ರುತಿಃ ವಾ ವ. ಯಾಶ್ಚ ಅನಿತ್ಯಾ ವಾ ವ ಅನ್ಯಾವಾಚಃ ಸ್ಮೃತಯಃ
**ಅರ್ಥ :–** 'ನಿತ್ಯವಾದ ವಚನವೆಂದರೆ ಶ್ರುತಿಯು ಇನ್ನು ಬೇರೆ ಅನಿತ್ಯವಾದ ವಚನಗಳೇ ಸ್ಮೃತಿಗಳು.'

**ವಿಶೇಷ ವಿಷಯಗಳು:–** ಈ ವಾಕ್ಯದಲ್ಲಿ ವಾ. ವ ಎಂಬ ಎರಡು ಪದಗಳು ಎರಡು ಸಲ ಪ್ರಯೋಗಿಸಲ್ಪಟ್ಟಿವೆ. **ಸ್ಯುರೇವಂ ತು ಪುನರ್ವೈವೇತ್ಯವಧಾರಣವಾಚಕಾಃ** (ಏವಂ, ತು, ಪುನಃ, ವಾ, ಏವ ಇವು ಐದು ಒತ್ತು ಕೊಟ್ಟು ನಿಶ್ಚಯಾರ್ಥಕವಾಗಿ ಹೇಳುವ ಸಂದರ್ಭದಲ್ಲಿ ಪ್ರಯೋಗಿಸಲ್ಪಡುತ್ತವೆ) ಎಂದು ಅವ್ಯಯ ವರ್ಗದಲ್ಲಿ

Rarest Archiver

*ಅಮರಕೋಶ*ವಿದೆ. ವಾ ಎಂಬ ಪದವು ಪಾದಪೂರಣಕ್ಕಾಗಿಯೂ ಪ್ರಯೋಗಿಸಲ್ಪಡ-ಬಹುದೆಂದೂ ಹೇಳಲಾಗಿದೆ. ಎರಡು ಸಲ ಒತ್ತು ಕೊಟ್ಟಿರುವುದು ಶ್ರುತಿಯು ನಿತ್ಯವೇ ಆದ ವಚನವು, ಹಾಗೂ ಸ್ಮೃತಿಯು ಮುಂತಾದ ಬೇರೆ ವಚನಗಳು ಅನಿತ್ಯವೇ ಆದ ವಚನಗಳು ಎಂದು ಖಡಾಖಂಡಿಯಾಗಿ ಹೇಳಿ ಅನ್ಯಯೋಗವ್ಯವಚ್ಛೇದವನ್ನು ಈ ಬ್ರಾಹ್ಮಣವು ಮಾಡುತ್ತಿದೆ. ಅಂತು, ವೇದಪುರುಷನು ವೇದವು ನಿಶ್ಚಯವಾಗಿಯೂ ನಿತ್ಯವಾದ ವಚನವು ಎಂದು ಹೇಳಿರುವನೆಂದಾಯಿತು.

ಇನ್ನು, *ಮೇದಿನೀ* ಎಂಬ ಕೋಶವು **'ವಃ ಸಾಂತ್ವನೇ ಚ ವಾತೇ ಚ ವರುಣೇ ಚ ನಿಗದ್ಯತೆ'** ಎಂದು ಹಾಗೂ **'ವಂ ಪ್ರಚೇತಸಿ ಜಾನೀಯಾತ್ ಇವಾರ್ಥೇ ಚ ತದವ್ಯಯಮ್'** ಎಂದು ಹೇಳುತ್ತದೆ. ವ ಎಂಬ ಪದವನ್ನು ವಾಯು, ವರುಣ ಎಂಬರ್ಥದಲ್ಲಿ ಮತ್ತು ಅವ್ಯಯವಿದ್ದಾಗ ಅಂತೆ ಎಂಬರ್ಥದಲ್ಲಿಯೂ ಉಪ-ಯೋಗಿಸುವರು ಎಂದು ಇದೆ. **'ವ ವಾ ಯಥಾತಥೈವೈವಂ ಸಾಮ್ಯೇ' ('ಷಟ್ ಸಾಮ್ಯೇ' –ಟಿಪ್ಪಣಿ)** ಎಂದು *ಅಮರಕೋಶ.* ಅಂದರೆ ಸಾಮ್ಯಾರ್ಥದಲ್ಲಿ ವ ವಾ ಪದಗಳನ್ನು ಉಪಯೋಗಿಸಬಹುದು ಎಂದು. ಇವಾರ್ಥ ಮತ್ತು ಏವಾರ್ಥದಲ್ಲಿ ಅಂದರೆ ಒತ್ತುಕೊಟ್ಟು ಹೇಳುವಾಗ ವ ವಾ ಎಂಬ ಪದಗಳು ಪ್ರಯೋಗಿಸಲ್ಪಡುತ್ತವೆ. **ವ ವಾ ಶ್ರುತಿಃ ನಿತ್ಯಾ ।** ಅಂದರೆ **ವ ಇವ ಶ್ರುತಿಃ ನಿತ್ಯಾ, ವರುಣೋಪಲಕ್ಷಿತ ಪ್ರವಾಹವತ್ ನಿತ್ಯಾ** ಎಂಬರ್ಥದಲ್ಲಿ ಸೂಚಿಸಲ್ಪಟ್ಟಿರಬಹುದೆಂದು ಅನಿಸುವದು. **'ನಿತ್ಯಾಃ ವೇದಾ'** ಎಂಬ *ತತ್ವಸಂಖ್ಯಾನ*ದ ವಾಕ್ಯದ ಟೀಕೆಗೆ ಶ್ರೀ ರಾಯರು *ಭಾವದೀಪ*ದಲ್ಲಿ **'ಯದ್ಯಪಿ ಆನುಪೂರ್ವ್ಯಾಃ ಕೃತ್ರಿಮತ್ವೇನ ಸಜಾತೀಯಾನು-ಪೂರ್ವೀಕತ್ವಮಾತ್ರೇಣ ಪ್ರವಾಹತಃ ಅನಾದಿತ್ವಮೇವ ನ ಕೂಟಸ್ಥತ್ವಮ್ । ತಥೈವ ತತ್ವನಿರ್ಣಯಟೀಕೋಕ್ತೇಃ । ತಥಾಪಿ ಅಧ್ಯಾಪಕಾದ್ಯುಚ್ಚರಿತವೇದಸ್ಯ ತಥಾತ್ವೇಽಪಿ ಈಶ್ವರಬುದ್ಧಿಸ್ಥಕ್ರಮಾಪೇಕ್ಷಯಾ ಏತದುಕ್ತಿಃ' ( ಅತ್ರ ನಿತ್ಯತ್ವಂ ನಾಮ ಕೂಟಸ್ಥತಯಾ ಆದ್ಯಂತಶೂನ್ಯತ್ವಮ್** ಎಂಬ ಟೀಕೋಕ್ತಿಯು), ಎಂದು ಹೇಳಿದ್ದಾರೆ. **ಶ್ರುತಿರ್ವಾವ ನಿತ್ಯಾ** ಎಂಬ **ಬ್ರಾಹ್ಮಣ**ದ ವಾಕ್ಯವು ಈ ಅಭಿಪ್ರಾಯವನ್ನೇ (ಪ್ರವಾಹದಂತೆ ಅಥವಾ ಗಾಳಿಯಂತೆ ವೇದವು ಅನಾದಿನಿತ್ಯವಾಗಿದೆಯೇ ಹೊರತು ಕೂಟಸ್ಥನಿತ್ಯವಾಗಿಲ್ಲ ಎಂದು) ಸೂಚಿಸುತ್ತಿರಬಹುದು ಎಂದು ತೋರುವದು. ಇನ್ನು ಸ್ಮೃತಿ ಮತ್ತು ಇತರ ಪೌರುಷೇಯ ವಚನಗಳಿಗೆ **ವ ವಾ ಅನಿತ್ಯಾಃ** ಎಂದು ಅನ್ವಯಿಸಿದರೆ ವರುಣೋಪಲಕ್ಷಿತವಾದ ನೀರಿನ ತೆರೆಗಳಂತೆ ಅಥವಾ ವಾ (ವಾಯು) ವ (ಇವ) ಗಾಳಿಯ ಅಲೆಗಳಂತೆ ಅನಿತ್ಯವಾದವುಗಳು (ಅನಿತ್ಯತ್ವವಿವಕ್ಷೆಯು *ಒಂದು ನಿರ್ದಿಷ್ಟವಾದ ತೆರೆ ಅಥವಾ ಅಲೆಯನ್ನ*ನುಲಕ್ಷಿಸಿ) ಎಂದು ಹೇಳಿರಬಹುದೇ? *

---

*ಕೋಶಗಳ ಆಧಾರದ ಮೇಲೆ ಶ್ರುತ್ಯರ್ಥವನ್ನು ನಿರ್ಣಯಿಸಬಾರದಾದರೂ ಈ ಅಭಿಪ್ರಾಯ ಬರಬಹುದೇ ಎಂದು ಜಿಜ್ಞಾಸೆಯಿಂದ ಈ ವಿವರಣೆ ಕೊಡಲಾಗಿದೆ

Rarest Archiver

**'ಶ್ರುತಿರ್ವಾವ ನಿತ್ಯಾ....'** ಇತ್ಯಾದಿ ವಾಕ್ಯವು ವೇದಗಳ ಭಾಗವಾಗಿದ್ದ ಬ್ರಾಹ್ಮಣದಲ್ಲಿಯದೆಂಬುದನ್ನು ಟೀಕೆಯು ಸ್ಪಷ್ಟಪಡಿಸುತ್ತದೆ. [**'ಇತಿ ಮಂತ್ರಂ ಉದಾಹೃತ್ಯ ಬ್ರಾಹ್ಮಣಂ ನಿತ್ಯಾನಿತ್ಯ ಶಬ್ದ ವಿಷಯಮ್ ನಿರ್ದಿಶತಿ ಶ್ರುತಿರ್ವಾವೇತಿ'** ಇಲ್ಲಿ **ಬ್ರಾಹ್ಮಣಂ ಕರ್ತೃ** (ಅಂದರೆ ದ್ವಿತೀಯಾವಿಭಕ್ತಿ ಏಕವಚನದ ರೂಪವಲ್ಲ) ಎಂದು ಹೇಳಿ ಬ್ರಾಹ್ಮಣವು ವೇದವು ನಿತ್ಯವೆಂಬುದನ್ನು ನಿರ್ದೇಶಿಸುತ್ತದೆ. ಎಂದು ಶ್ರೀರಾಯರು ವಿವರಿಸಿದ್ದಾರೆ. ಪ್ರಥಮಾ ವಿಭಕ್ತಿಯು ಆಚಾರ್ಯರ **ಇತಿ ಪೈಂಗೀ ಶ್ರುತಿಃ** ಎಂಬುದಕ್ಕನುಗುಣವಾಗಿ ಇದೆ ಎಂಬುದನ್ನು ತಿಳಿಯಬೇಕು]. ಶ್ರೀಮದಾಚಾರ್ಯರು **ನಿತ್ಯಾ ವೇದಾಃ ಸಮಸ್ತಾಶ್ಚ ....**ಇತ್ಯಾದಿ ***ಬ್ರಹ್ಮಾಂಡಪುರಾಣದ*** ವಾಕ್ಯವನ್ನೂ ಕೂಡ *ವಿಷ್ಣುತತ್ವವಿನಿರ್ಣಯದಲ್ಲಿ ಮುಂದೆಯೇ* ಉದಾಹರಿಸಿದ್ದನ್ನು ಗಮನಿಸಬೇಕು.

***ಶ್ರುತ್ಯರ್ಥಷಟ್ಪದಿ***ಯಲ್ಲಿ ಇದರ ಭಾವವು ಹೀಗೆ;

*ವೇದ ನಿತ್ಯವೆ ಇಹುದ ತಿಳಿವುದು,*
*ಬಾದರಾಯಣಬುದ್ಧಿಗತವದು,*
*ಬಾದರಾಯಣ ವಿಷ್ಣುರೂಪನು ನಿತ್ಯವಿರುತಿಹನು,*
*ಶೋಧಿಸಲು ತಾ ಸ್ಮೃತಿಯನಿತ್ಯವು,*
*ವೇದದರ್ಥವ ಕೊಡುವುದಾದರು*
*ಆದಿಯಂತ್ಯವು ತೋರುತಿರಲದು ನಿತ್ಯವಿರದಿರದು.* // //

೭. **'ವಿಜ್ಞೇಯಂ ಪರಮಂ ಬ್ರಹ್ಮ ಜ್ಞಾಪಿಕಾ ಪರಮಾ ಶ್ರುತಿಃ । ಅನಾದಿನಿತ್ಯಾ ಸಾ ತಚ್ಚ ವಿನಾ ತಾಂ ನ ಸ ಗಮ್ಯತೆ'** ಇತಿ ***ಕಾತ್ಯಾಯನ ಶ್ರುತಿ:***

ಈ ಮೇಲೆ ಉದಾಹರಿಸಿದ ಶ್ರುತಿಗಳು ವೇದವು ನಿತ್ಯವಾದುದು ಎಂದಿಷ್ಟೇ ಹೇಳುತ್ತಿವೆಯೇ ಹೊರತು ವೇದವು ಅಪೌರುಷೇಯವೆಂದು ಹೇಳುತ್ತಿಲ್ಲವಲ್ಲ ಎಂಬ ಪ್ರಶ್ನೆಗೆ ಕಾತ್ಯಾಯನ ಶ್ರುತಿಯು ಹಾಗೂ ಮುಂದೆ ಉದಾಹರಿಸಲ್ಪಟ್ಟ ಶ್ರುತಿಗಳು ಸಮಾಧಾನ ನೀಡುತ್ತಿವೆ.

**ಅನ್ವಯ ಹಾಗೂ ಅರ್ಥ:- ಬ್ರಹ್ಮ ಪರಮಂ ವಿಜ್ಞೇಯಂ:-** ಬ್ರಹ್ಮವೇ ಮುಮುಕ್ಷುಗಳು ತಿಳಿಯಬೇಕಾದ ಅತಿ ಶ್ರೇಷ್ಠವಾದ ವಿಷಯವು. **ಶ್ರುತಿಃ ಪರಮಾ ಜ್ಞಾಪಿಕಾ** – ಶ್ರುತಿಯೇ ಬ್ರಹ್ಮನನ್ನು ತಿಳಿಸಿಕೊಡಲು ಪ್ರಧಾನವಾದ ಪ್ರಮಾಣವು. **ಸಾ ಅನಾದಿನಿತ್ಯಾ.** ಶ್ರುತಿಯು ಅನಾದಿ ಹಾಗೂ ನಿತ್ಯವಾಗಿದೆ. **ತಚ್ಚ (ಅನಾದಿ ನಿತ್ಯಮ್)** ಆ ಬ್ರಹ್ಮವೂ ಅನಾದಿ ನಿತ್ಯವಾದದ್ದಾಗಿದೆ. **ತಾಂ ವಿನಾ ಸ ನ ಗಮ್ಯತೆ** – ಆ ಅನಾದಿ ನಿತ್ಯವಾದ ಶ್ರುತಿಯನ್ನು ಬಿಟ್ಟರೆ ಬ್ರಹ್ಮಶಬ್ದೋಕ್ತನಾದ ಆ ಪರಮಾತ್ಮನನ್ನು (ಮೊದಲು

Rarest Archiver

ತತ್ ಎಂದು ನಪುಂಸಕ-ಲಿಂಗದಲ್ಲಿ ಬ್ರಹ್ಮನನ್ನು ನಿರ್ದೇಶಿಸಿದ್ದರೂ ಈಗ ಪುಲ್ಲಿಂಗದಲ್ಲಿ ನಿರ್ದೇಶಿಸಲ್ಪಟ್ಟಿದೆಯಾದ್ದರಿಂದ ಬ್ರಹ್ಮಶಬ್ದೋಕ್ತನಾದ ಪರಮಾತ್ಮ ಎಂದು ಅರ್ಥವನ್ನು ಟೀಕೆಯಲ್ಲಿ ಹೇಳಿದ್ದಾರೆ.) ತಿಳಿಯುವದು ಶಕ್ಯವಿಲ್ಲ.

ಹೀಗೆ ಹೇಳುವದರಿಂದ ***ಅನಾದಿ ನಿತ್ಯವಾದ ಪ್ರಮಾಣದಿಂದ ಮಾತ್ರ ಅನಾದಿ ನಿತ್ಯನಾದ ಪರಮಾತ್ಮನನ್ನು ತಿಳಿಯಬಹುದು ಎಂಬ ನಿಯಮವು*** ಸೂಚಿತವಾಗಿದೆ.

***ಶ್ರುತ್ಯರ್ಥಷಟ್ಪದಿ***ಯಲ್ಲಿ ಇದರ ಭಾವವು ಹೀಗೆ;

*ಪರಮಪುರುಷನೆ ಪರಮಗವ್ಯನು,*
*ಪರಮ ಸಾಧನ ವೇದವೇ ಸರಿ*
*ಪರಮಪುರುಷಜ್ಞಾನಕೆಂಬುದನರಿವುದನವರತ,*
*ಪರಮಪುರುಷನ ತಿಳಿವ ಮನವಿರೆ*
*ಪರಮಸಾಧನ ವೇದಮಾತ್ರದಿ*
*ಅರಿವುದೀ ಸಾಧನವು ನಿತ್ಯಾನಾದಿಯಾಗಿಹುದು.* // //

**೮. 'ಸಹಸ್ರಧಾ ಮಹಿಮಾನಃ ಸಹಸ್ರಂ ಯಾವದ್ ಬ್ರಹ್ಮವಿಷ್ಠಿತಂ ತಾವತೀ ವಾಕ್' -(?)**

ಈ ಮೊದಲು ಉದಾಹರಿಸಲ್ಪಟ್ಟ ಕಾತ್ಯಾಯನ ಶ್ರುತಿಯಲ್ಲಿಯ ನಿಯಮವು ಈ ಶ್ರುತಿಯಲ್ಲಿ ಸ್ಪಷ್ಟಪಡಿಸಲ್ಪಟ್ಟಿದೆ. ಆ ನಿಯಮವೆಂದರೆ ಬ್ರಹ್ಮನು ಅನಾದಿ ನಿತ್ಯನಾಗಿದ್ದಾಗ ಅವನನ್ನು ಪ್ರತಿಪಾದಿಸುವ ಪ್ರಮಾಣವೂ ಕೂಡ ಅನಾದಿ ನಿತ್ಯವಾಗಿರಲೇ ಬೇಕು ಎಂಬುದು.

**ಅನ್ವಯ :-** (ಯಸ್ಯ) **ಸಹಸ್ರಂ** (ಅಪರಿಮಿತಾಃ) **ಮಹಿಮಾನಃ** (ಪ್ರತ್ಯೇಕಮಪಿ) **ಸಹಸ್ರಧಾ** (ಸಂತಿ) (ತದ್) **ಬ್ರಹ್ಮ ಯಾವತ್** (ದೇಶಕಾಲವ್ಯಾಪಿತಯಾ) **ವಿಷ್ಠಿತಂ** (ವಿಶೇಷೇಣ ಸ್ಥಿತಂ) **ವಾಕ್** (ಅಪಿ) (ವೇದವಾಕ್ ಅಪಿ) **ತಾವತೀ** (ತಾವದ್ದೇಶಕಾಲ-ವ್ಯಾಪಿನೀ).

**ಅರ್ಥ :-** ಯಾರ ಅನಂತವಾದ ಮಹಿಮೆಗಳು ಪ್ರತ್ಯೇಕವೂ ಅನಂತವಾದ ಪ್ರಕಾರದ್ದಾಗಿವೆಯೋ ಅಂಥ ಬ್ರಹ್ಮನು ಹೇಗೆ ದೇಶ ಕಾಲಗಳಲ್ಲಿ ವ್ಯಾಪ್ತನಾಗಿ ವೈಶಿಷ್ಟ್ಯದಿಂದ ಇರುವನೋ ಹಾಗೆಯೇ ವೇದವೂ ಕೂಡ ದೇಶ ಕಾಲವ್ಯಾಪ್ತವಾಗಿದೆ.

ಅಂದರೆ ವೇದಗಳು ಅನಂತ. ಅವು ಎಲ್ಲ ಕಾಲದಲ್ಲಿಯೂ ಇವೆ. ಎಲ್ಲ

Rarest Archiver

ಕಡೆಗೂ ಇವೆ. ಅನಂತಾ ವೈ ವೇದಾಃ ಎಂಬ ಉಕ್ತಿಯೂ ಇದನ್ನೇ ಹೇಳುವದು. ವೇದಗಳು ಅನಂತವಿದ್ದಾಗ ಒಂದೇ ಕಾಲದಲ್ಲಿ ಹಾಗೂ ಒಂದೇ ಸ್ಥಳದಲ್ಲಿ ಅವು ಇವೆಯೆಂಬುದು ಹೇಗೆ ಕೂಡುವದು?

*ಶ್ರುತ್ಯರ್ಥಷಟ್ಪದಿ*ಯಲ್ಲಿ ಇದರ ಭಾವವು ಹೀಗೆ;

*ಪರಮಪುರುಷನು ನಿತ್ಯನಾಗಿಹ-*
*ನರವಿದೂರನು ಗುಣಗಣಾಢ್ಯನು,*
*ಇರುವದೀತನ ಮಹಿಮೆ ನಿತ್ಯವು ಮಿತಿಯ ಮೀರಿಹುದು;*
*ನಿರುತವೀತನ ಮಹಿಮೆ ಪೊಗಳುವ*
*ಪರಮವಾಕ್ಯಕೆ ಅಂತವೆಲ್ಲಿದೆ?*
*ನಿರುತವಿರುತಿದೆ ವೇದವೆಂಬುದನರಿವ ಕೋವಿದನು.* // //

### ೯. 'ಕಶ್ಛಂದಸಾಂ ಯೋಗಮಾವೇದ ಧೀರಃ ಕೋ ಧಿಷ್ಣ್ಯಂ ಪ್ರತಿವಾಚಂ ಪಪಾದ'

ಈ ಶ್ರುತಿಯಲ್ಲಿ ವೇದವು ಪುರುಷಕೃತವಾಗಿರಲು ಸಾಧ್ಯವಿಲ್ಲವೆಂಬುದನ್ನು ಸ್ಪಷ್ಟವಾಗಿ ಹೇಳಲಾಗಿದೆ. ಇಂಥ ಅನಂತವಾದ, ಅನಾದಿ ನಿತ್ಯವಾದ ವೇದವನ್ನು ಸರ್ವಜ್ಞನಾದ ಪುರುಷನೊಬ್ಬನು ರಚಿಸಿರಬಹುದಲ್ಲ ಎಂಬ ಪ್ರಶ್ನೆಗೆ ಉತ್ತರರೂಪವಾಗಿ ಈ ಶ್ರುತಿವಾಕ್ಯವು ಹೊರಟಿದೆ.

**ಅನ್ವಯ :– ಛಂದಸಾಂ** (ವೇದಾನಾಂ) **ಯೋಗಂ** (ಅರ್ಥೈಃ ಸಹ ವಾಚ್ಯವಾಚಕಭಾವ ಸಂಬಂಧಂ) **ಕೋ ಧೀರಃ** (ಧೀಮಾನ್) **ಆವೇದ** (ಸಮ್ಯಕ್ ವೇದ? ನ ಕೋಽಪಿ). **ಧಿಷ್ಣ್ಯಂ** (ಬುದ್ಧಿಪೂರ್ವಾಂ) **ವಾಚಂ** (ವೇದವಾಚಂ) **ಕಃ ಪ್ರತಿಪಪಾದ** (?) (ಪರಾನ್ ಪ್ರತಿ ಪ್ರತಿಪಾದಿತವಾನ್ ನ ಕೋಽಪಿ । ವೇದಾರ್ಥಸ್ಯ ಜ್ಞಾತ್ವಾ ವ್ಯಾಖ್ಯಾತಾಽಪಿ ದುರ್ಲಭಃ ಕಿಮುತ ತತ್ಕರ್ತಾ ಇತಿ ಚ ಶ್ರುತಿಃ)

**ಅರ್ಥ :–** ವೇದವಾಕ್ಯಗಳ ಅರ್ಥವನ್ನು ಯಾವ ಜ್ಞಾನಿಯು ಸರಿಯಗಿ ತಿಳಿಯಲು ಸಮರ್ಥನಾದಾನು? ಎಂಥ ಜ್ಞಾನಿಯಾಗಿದ್ದರೂ ಅದು ಸಾಧ್ಯವಿಲ್ಲ. ಜ್ಞಾನದ ಭಾಂಡಾರವಾದ ವೇದವನ್ನು ತಿಳಿಯುವವನೂ ಹಾಗೂ ಇನ್ನೊಬ್ಬರಿಗೆ ಅದರ ಅರ್ಥವನ್ನು ತಿಳಿಸುವವನೇ ದುರ್ಲಭನಿದ್ದಾಗ ವೇದವನ್ನು ಯಾವನೊಬ್ಬನು ರಚಿಸುವನೆಂಬುದು ಸುತರಾಂ ಅಸಾಧ್ಯವಾದುದು.

ಈ ರೀತಿಯಲ್ಲಿ ಕೈಮುತ್ಯನ್ಯಾಯದಿಂದ ವೇದವು ಅಪೌರುಷೇಯವೆಂಬುದನ್ನು ಈ ಶ್ರುತಿವಾಕ್ಯವು ಸಿದ್ಧಪಡಿಸಿ ಸ್ಪಷ್ಟವಾಗಿ ಹೇಳುತ್ತದೆ.

Rarest Archiver

ಕಶ್ಛಂದಸಾಂ ಇತ್ಯಾದಿ ಶ್ರುತಿಯೂ ಕೂಡ ಕಾತ್ಯಾಯನ ಶ್ರುತಿಯೇ ಆಗಿದೆ ಎಂಬುದು ಶ್ರೀ ಟೀಕಾಕೃತ್ಪಾದರ ಅಭಿಪ್ರಾಯವೆಂದು ಶ್ರೀನಿವಾಸತೀರ್ಥರ ವಿವರಣೆ. (ಇತಿ ಚ ಎಂಬ ಟೀಕಾ ಪದಗಳಿಂದ ಇದು ತಿಳಿಯುವುದೆಂದು ವಿವರಿಸಲಾಗಿದೆ).

**ಇನ್ನೊಂದು ಅರ್ಥ :–** ಶ್ರೀಮದಾಚಾರ್ಯರು ತಮ್ಮ *ಅನುವ್ಯಾಖ್ಯಾನ*ದಲ್ಲಿ ಈ ಶ್ರುತಿಗೆ ಸ್ವಲ್ಪ ಬೇರೆಯ ಅರ್ಥವನ್ನೇ ಹೇಳಿದ್ದು ಶ್ರೀವ್ಯಾಸತತ್ವಜ್ಞರು ತಮ್ಮ *ಲಘುಪ್ರಭಾ* ಟಿಪ್ಪಣಿಯಲ್ಲಿ ಇದನ್ನು ಸ್ಪಷ್ಟವಾಗಿ ವಿವರಿಸಿದ್ದಾರೆ.

ಕಃ ಎಂಬ ಪದವು ಕ ಎಂಬ ಅಕಾರಾಂತ ಪದದ ಪ್ರಥಮಾ ವಿಭಕ್ತಿಯ ಏಕವಚನದ ರೂಪವಾಗಿದ್ದು ಅದು 'ಕಿಮ್' ಎಂಬ ಸರ್ವನಾಮದ ಪುಲ್ಲಿಂಗದ ಪ್ರಥಮಾ ವಿಭಕ್ತಿಯ ರೂಪವಾಗಿಲ್ಲ. (ಕಃ ಕೌ ಕೇ ಇತ್ಯಾದಿಯಲ್ಲ. ಕಃ ಕೌ ಕಾಃ (?) ಎಂದು ನಡೆಸುವುದು). ಎಂದು ಅನುವ್ಯಾಖ್ಯಾನದಲ್ಲಿ ಹೇಳಿದ್ದಾರೆ. ಕ ಎಂದರೆ ಚತುರ್ಮುಖ ಬ್ರಹ್ಮನು ಎಂದರ್ಥ. ಇದಕ್ಕೆ 'ಕಸ್ತ್ವಾಯುನಕ್ತೀತ್ಯಾಹ ಪ್ರಜಾಪತಿರ್ವೈ ಕಃ' ಎಂಬ ಬ್ರಾಹ್ಮಣದ ಆಧಾರವನ್ನು ಹೇಳಿದ್ದಾರೆ. ಆಚಾರ್ಯರು ಅನುವ್ಯಾಖ್ಯಾನದಲ್ಲಿ ಹೀಗೆ ಹೇಳಿದ್ದಾರೆ –

**ಕಶ್ಛಂದಸಾಂ ಯೋಗಮಿತಿ ಶ್ರುತೇರ್ಯೋಗಾರ್ಥತತ್ವವಿತ್ । ಬ್ರಹ್ಮೈಕೋ ನೈವ ಚಾನ್ಯೋऽಸ್ತಿ ಕ ಇತ್ಯಸ್ಯೋಭಯಾರ್ಥತಃ ॥**

*– ಅನುವ್ಯಾಖ್ಯಾನ ೧-೪-೧೧,೩೨೪*

ವೇದವಾಕ್ಯಗಳಿಗೆ ವಾಚ್ಯ ವಾಚಕ ಭಾವರೂಪ ಸಂಬಂಧವನ್ನು ಬ್ರಹ್ಮನೊಬ್ಬನನ್ನು ಬಿಟ್ಟು ಬೇರೆ ಯಾರು ತಿಳಿಯಲು ಸಾಧ್ಯ ? ಯಾರಿಗೂ ಸಾಧ್ಯವಿಲ್ಲ.॥ ಕ ಎಂಬ ಪದಕ್ಕೆ ಯಾರು ಎಂಬ ಶ್ರುತಿವಾಕ್ಯದ ಅರ್ಥವನ್ನು ಹೀಗೆಯೂ ಮಾಡಬಹುದು ಎಂಬುದು ಅನುವ್ಯಾಖ್ಯಾನದ ಈ ಶ್ಲೋಕದ ಅಭಿಪ್ರಾಯವಾಗಿದೆ. ಕ ಪದಕ್ಕೆ ಚತುರ್ಮುಖ ಬ್ರಹ್ಮ ಎಂಬ ಅರ್ಥವನ್ನಿಟ್ಟುಕೊಂಡು ಈ ಶ್ರುತಿಯ ವಾಕ್ಯವನ್ನು ಅರ್ಥಮಾಡುವದು ವೇದಾಪೌರುಷೇಯತ್ವವನ್ನು ಹೇಳುತ್ತಿರುವ ಪ್ರಕೃತ ಸಂದರ್ಭಕ್ಕೆ ಸಮರ್ಪಕವಾಗುವದಿಲ್ಲವೆಂಬುದು ಶ್ರೀ ವ್ಯಾಸತತ್ವಜ್ಞತೀರ್ಥರ ಹಾರ್ದವಾಗಿದೆ–ಯೆಂದೆನಿಸುವದು. *ಅನುವ್ಯಾಖ್ಯಾನ*ದ ವಾಕ್ಯವನ್ನು ಉದಾಹರಿಸುವ ಪೂರ್ವದಲ್ಲಿ ಹೇಳಿದ ಅರ್ಥವು ಪ್ರಕೃತ ವಿಷಯಕ್ಕೆ ಉಪಯೋಗಿಯಾಗಿದೆ ಎಂಬುದು ಅವರ ವಾಕ್ಯಗಳಿಂದ ಸ್ಪಷ್ಟವಾಗುವದು. ಆ ಸಂದರ್ಭದಲ್ಲಿ ಅವರು ಹೀಗೆ ಹೇಳಿದ್ದಾರೆ; ***ಇದಂ ಪ್ರಕೃತಾಭಿಪ್ರಾಯೇಣ. ಅನುವ್ಯಾಖ್ಯಾನೇ ತು ......*** ಇತ್ಯಾದಿ. ಅಂತು ಆ ಆ ಪ್ರಕರಣಕ್ಕನುಗುಣವಾಗಿ ಶ್ರುತಿಗಳನ್ನು ಅರ್ಥವಿಸಬೇಕೆಂಬುದೇ ಶ್ರೀಮದಾಚಾರ್ಯರು

Rarest Archiver

ಸೂಚಿಸಿದ ತತ್ವವೆಂದು ಇದರಿಂದ ಸ್ಪಷ್ಟವಾಗುವದು.

*ಶ್ರುತ್ಯರ್ಥಷಟ್ಪದಿ*ಯಲ್ಲಿ ಇದರ ಭಾವವು ಹೀಗೆ;

*ಹರಿಯ ಮಹಿಮೆಯ ಪೇಳ್ವ ನಿಗಮದ*
*ಅರವಿದೂರದ ಪದವ ಹೊಂದಿಸಿ*
*ಸರುವರೊಪ್ಪುವ ಅರ್ಥ ಪೇಳುವ ನರನೆ ದುರ್ಲಭನು,*
*ಇರಲು ತಾನೀ ನಿಗಮವಾಕ್ಯವ*
*ಒರೆವ ಬರೆಯುವ ನರನು ಜಗದೊಳು*
*ಅರಿಸೆ ದೊರೆಯುನು, ತಿಳಿವುದೆಂದಿತು ವೇದ ಒಕ್ಕೊರಲಿ. ॥ ॥*

*ಈ ಪ್ರಕಾರವಾಗಿ ವಿಷ್ಣುತತ್ವವಿನಿರ್ಣಯದಲ್ಲಿ ಉದಾಹೃತವಾದ ಶ್ರುತಿಗಳ ಮೊದಲ ಗುಂಪಿನಲ್ಲಿ ವೇದಗಳು ಅನಾದಿ, ನಿತ್ಯ, ಅಪೌರುಷೇಯವಾಗಿವೆ ಹಾಗೂ ವಿಷ್ಣುವಿನನ್ನು ತಿಳಿಯಲು ಇಂಥ ಅಪೌರುಷೇಯ ವೇದವೇ ಸಾಧನವಾಗುವದು ಎಂದು ಹೇಳಲಾಗಿದೆ.*

Rarest Archiver

# ಪ್ರಕರಣ ೩.

## ವೇದಗಳಿಗೆ ಪರಮತಾತ್ಪರ್ಯವು ಪರಮಾತ್ಮನಾದ ವಿಷ್ಣುವು ಎಂದು ಹೇಳುವ ಶ್ರುತಿಗಳು

ವೇದಗಳೇ ಪರಮಾತ್ಮನನ್ನು ತಿಳಿಸಲು ಪರಮ ಸಾಧನವೆಂದು ಹೇಳಿದಾಗ ಪರಮಾತ್ಮನೇ ವೇದಗಳ ಪರಮ ತಾತ್ಪರ್ಯವೆಂದು ಹೇಳಿದಂತಾಗುವುದಿಲ್ಲ. ವೇದಗಳ ಪರಮತಾತ್ಪರ್ಯವೆಂದು ತಿಳಿಸಲು ಅನೇಕ ಶ್ರುತಿ ಸ್ಮೃತಿ ಪುರಾಣಗಳ ಆಧಾರವನ್ನು ಶ್ರೀಮದಾಚಾರ್ಯರು ಕೊಟ್ಟಿರುತ್ತಾರೆ. ಅವರು ಉದಾಹರಿಸಿದ ಶ್ರುತಿಗಳನ್ನು ಈ ಎರಡನೆಯ ಗುಂಪಿನಲ್ಲಿ ಸೇರಿಸಿ ಅವುಗಳ ಅರ್ಥ ವಿವರಿಸಲು ಇಲ್ಲಿ ಪ್ರಯತ್ನಿಸಲಾಗಿದೆ. ಈ ಗುಂಪಿನಲ್ಲಿ......... ಶ್ರುತಿಗಳು ಉದಾಹೃತವಾಗಿವೆ, ಅವುಗಳಲ್ಲಿ ಸ್ಪಷ್ಟವಾಗಿ ವಿಷ್ಣುವೇ ವೇದಗಳ ಪರಮತಾತ್ಪರ್ಯವೆಂದು ಹೇಳುವ ಪೈಂಗೀ ಶ್ರುತಿಯನ್ನು ಆಚಾರ್ಯರು ಮೊದಲು ಉದಾಹರಿಸಿದ್ದಾರೆ.

**೧೦. ಸರ್ವೋತ್ಕರ್ಷೇ ದೇವದೇವಸ್ಯ ವಿಷ್ಣೋಃ ಮಹಾತಾತ್ಪರ್ಯಂ ನೈವ ಚಾನ್ಯತ್ರ ಸತ್ಯಮ್ । ಅವಾಂತರಂ ತತ್ವರತ್ವಂ ತದನ್ಯತ್ ಸರ್ವಾಗಮಾನಾಂ ಪುರುಷಾರ್ಥಃ ತತೋಽತ: ॥ –** *ಪೈಂಗೀ ಶ್ರುತಿಯು.*

**ಅನ್ವಯ :–** ದೇವದೇವಸ್ಯ ವಿಷ್ಣೋಃ ಸರ್ವೋತ್ಕರ್ಷೇ ಏವ ಸರ್ವಾಗಮಾನಾಂ ಮಹಾತಾತ್ಪರ್ಯಮ್ । ದೇವದೇವಸ್ಯ ವಿಷ್ಣೋಃ ಅನ್ಯತ್ರ ಸರ್ವಾಗಮಾನಾಂ ಮಹಾತಾತ್ಪರ್ಯಂ ನೈವ । ತದನ್ಯತ್ ಸರ್ವಾಗಮಾನಾಮ್ ಅವಾಂತರಂ ತತ್ವರತ್ವಮ್। ತದನ್ಯತ್ ಪುರುಷಾರ್ಥಃ ಅತಃ (ಉಕ್ತಂ ಏತತ್) ಸತ್ಯಮ್ ।

**ಅರ್ಥ :–** ಸರ್ವದೇವತೆಗಳಿಂದಲೂ ಸ್ತುತ್ಯನಾದ ವಿಷ್ಣುವಿನ ಸರ್ವೋತ್ತಮತ್ವವೇ ಎಲ್ಲ ಆಗಮಗಳ ಪರಮ ತಾತ್ಪರ್ಯವಾಗಿದೆ. ವಿಷ್ಣುವಿನನ್ನು ಹೊರತುಪಡಿಸಿ ಬೇರೆ ವಿಷಯಗಳೆಂದಿಗೂ ಎಲ್ಲ ಆಗಮಗಳ ಪರಮತಾತ್ಪರ್ಯವೆಂದು ಆಗುವದೇ ಇಲ್ಲ. ಬೇರೆ ವಿಷಯಗಳೆಲ್ಲವೂ ಆಗಮಗಳ ಅಮುಖ್ಯವಾದ ತಾತ್ಪರ್ಯವೆಂದೆನಿಸುವವು. ಮುಖ್ಯ ತಾತ್ಪರ್ಯವಾದ ವಿಷ್ಣುವಿನ ಜ್ಞಾನ ಮಾಡಿಕೊಡಲು ಅವು (ಬೇರೆ ವಿಷಯಗಳು) ಸಹಾಯಕವಾಗಿರುವುದರಿಂದ ಅವು ಅಮುಖ್ಯ ತಾತ್ಪರ್ಯವೆಂದೆನಿಸಿಕೊಳ್ಳುವವು. ವಿಷ್ಣು ಸರ್ವೋತ್ತಮತ್ವ ಜ್ಞಾನದಿಂದಲೇ ಮೋಕ್ಷವು ಸಾಧ್ಯವಾಗುವದರಿಂದ ವಿಷ್ಣುವೇ ಸರ್ವಾಗಮಗಳ ಪರಮ ತಾತ್ಪರ್ಯವೆಂದು ಹೇಳಿದ್ದು ಶತಶಃ ಸತ್ಯವು.

ಈ ಶ್ರುತಿಯಲ್ಲಿ ಹೇಳಿದ ವಿಷಯಗಳು ಇಂತಿವೆ :

i. ಆಗಮಗಳಿಗೆ ತಾತ್ಪರ್ಯ ಹಾಗೂ ಮಹಾತಾತ್ಪರ್ಯಗಳು ಇರುವವು.

Rarest Archiver

ii. ಆಗಮಗಳ ತಾತ್ಪರ್ಯವು ವಿಧಿ ನಿಷೇಧಾತ್ಮಕವಾದ ಉಪದೇಶವಿರಬಹುದು. ಆದರೆ ಪರಮ ತಾತ್ಪರ್ಯ ಮಾತ್ರ ವಿಷ್ಣುವೇ ಆಗಿರುವನು.

iii. ವಿಷ್ಣುವೇ ಮಹಾತಾತ್ಪರ್ಯನೆಂಬುದಕ್ಕೆ ಯುಕ್ತಿಯನ್ನು ಇಲ್ಲಿ ಹೇಳಿದ್ದಾರೆ. ಪರಮ ಪುರುಷಾರ್ಥವಾದ ಮೋಕ್ಷವು ಪರಮ ಪುರುಷನಾದ ವಿಷ್ಣುವಿನ ಜ್ಞಾನದಿಂದಲೇ ಲಭಿಸುವದು ಎಂಬ ಕಾರಣದಿಂದ ಜೀವರ ಮೇಲಿನ ಪರಮ ಕಾರುಣ್ಯದಿಂದ ವೇದವು ಪರಮಪುರುಷನ ಈ ಜ್ಞಾನವನ್ನು ಮಾಡಿಕೊಡುವದನ್ನೇ ತನ್ನ ಪರಮ ಉದ್ದೇಶವನ್ನಾಗಿ ಇಟ್ಟುಕೊಂಡಿದೆ.

ಅದುಃಖಮಿತರತ್ ಸರ್ವಂ ಜೀವಾ ಏವ ತು ದುಃಖಿನಃ ।
ತೇಷಾಂ ದುಃಖಪ್ರಹಾಣಾಯ ಶ್ರುತಿರೇಷಾ ಪ್ರವರ್ತತೆ ॥

ದುಃಖಿಯಲ್ಲವು ಈಶನೆಂದಿಗು
ದುಃಖವೇ ಜಡಕೆಂದಿಗಾದರು(?)
ದುಃಖವೆಂಬುದು ಜೀವ ಮಾತ್ರಕೆ ತೋರುತಿರಲಾಗಿ ।
ದುಃಖಶಮನದ ಮಾರ್ಗವಾ ಶ್ರುತಿ
ದುಃಖಿಗಳ ಮೇಲ್ಕರುಣೆಯಿಂದಲಿ
ಕಕ್ಕುಲಾತಿಯ ತಾಯಿಯಂದದಿ ತೋರಿ ಪೇಳುತಿದೆ ॥

ಈ ಉಕ್ತಿಯಂತೆ ಪರಮೋಪದೇಶವನ್ನು ಮಾಡುವದರಲ್ಲಿಯೇ ವೇದದ ತಾತ್ಪರ್ಯವಿದೆ.

ಈ ಉದಾಹೃತ ಶ್ರುತಿಯಲ್ಲಿಯ ಪದಗಳಿಗೆ ಈ ಅರ್ಥವಿದೆ.

ಸರ್ವೋತ್ಕರ್ಷವೆಂದರೆ ಸರ್ವೋತ್ತಮತ್ವವು. ದೇವ ದೇವನೆಂದರೆ ದೇವತೆಗಳಿಂದಲೂ ಸ್ತುತ್ಯನಾದವನು ಎಂದರ್ಥ. 'ದಿವು ಕ್ರೀಡಾ ವಿಜಿಗೀಷಾ ವ್ಯವಹಾರ ದ್ಯುತಿ ಸ್ತುತಿ ಮೋದ ಸ್ವಪ್ನ ಕಾಂತಿ ಗತಿಷು' ಎಂಬ ಧಾತುಪಾಠದಂತೆ ದಿವ್ ಧಾತುವಿನ ಅನೇಕ ಅರ್ಥಗಳಲ್ಲಿಯ ಸ್ತುತ್ಯರ್ಥವನ್ನು ತೆಗೆದುಕೊಂಡು ದೇವರಿಂದ ಸ್ತುತ್ಯನು ಎಂದು ಅರ್ಥವನ್ನು ಶ್ರೀರಾಯರು ವಿವರಿಸಿದ್ದಾರೆ. ದೇವ ದೇವನೆಂಬುದು ಸರ್ವೋತ್ತಮತ್ವಕ್ಕೆ ಗಮಕವಾಗಿದೆ. ದೇವತಗಳಿಂದಲೇ ಸ್ತುತ್ಯನೆಂದಮೇಲೆ ಸರ್ವೋತ್ತಮನೇ ಸರಿ ಎಂಬ ತಾತ್ಪರ್ಯ. ಮೊದಲಿನ ದೇವ ಶಬ್ದಕ್ಕೆ ದೇವತೆಗಳೆಂದು ರೂಢ್ಯರ್ಥ ಎರಡನೆಯ ದೇವ ಶಬ್ದಕ್ಕೆ ಯೌಗಿಕಾರ್ಥವನ್ನು ಗ್ರಹಿಸಬೇಕೆಂದು ಯೋಗ ವಿಭಾಗಾತ್ ಸಮಾಸಃ ಎಂದು ಶ್ರೀರಾಯರು ಹೇಳಿದ್ದಾರೆ. ಇದೇ ವಿಷಯುವನ್ನು ಶ್ರೀವ್ಯಾಸತತ್ವಜ್ಞರು ವಿವರಿಸಿದ್ದಾರೆ. ತತ್ಪರತ್ವಮ್ ಎಂದರೆ ಕೇವಲ ತಾತ್ಪರ್ಯವು. ಮಹಾತಾತ್ಪರ್ಯ–

Rarest Archiver

ವೆಂದಲ್ಲ. ಅವಾಂತರಂ ಎಂದರೆ ಪ್ರಧಾನವಾದುದಕ್ಕೆ ಅಂಗಭೂತವಾದ ಅಂದರೆ ಅಮುಖ್ಯವಾದ ಎಂದರ್ಥ.

**ಈ ಶ್ರುತಿವಾಕ್ಯಕ್ಕೆ ಒಟ್ಟು ತಾತ್ಪರ್ಯವಿಷ್ಟು :–** ಸರ್ವೋತ್ತಮನಾದ ವಿಷ್ಣುವಿನ ಸರ್ವೋತ್ತಮತ್ವ ಜ್ಞಾನವನ್ನು ಜೀವರಿಗೆ ಮಾಡಿಕೊಡುವದೇ ವೇದಗಳ ಮುಖ್ಯಗುರಿಯು ವಿಷ್ಣು ಸರ್ವೋತ್ತಮತ್ವವೇ ಅವುಗಳ ಮುಖ್ಯ ತಾತ್ಪರ್ಯವು. ಏಕೆಂದರೆ ಪರಮ ಪುರುಷಾರ್ಥವು ವಿಷ್ಣು ಸರ್ವೋತ್ತಮತ್ವಜ್ಞಾನದಿಂದಲೇ ಲಭಿಸುವುದು. ಇನ್ನು ವೇದವು ಕರ್ಮಾದಿಗಳನ್ನೂ ಹೇಳುತ್ತಿರುವುದೇನೋ ಸರಿ. ಆದರೆ ಕರ್ಮಾದಿಗಳನ್ನು ಹೇಳಲೆಂದೇ ವೇದವು ಪ್ರವೃತ್ತವಾಗಿಲ್ಲ. ಕರ್ಮಾದಿಗಳ ಜ್ಞಾನವು ವಿಷ್ಣು ಸರ್ವೋತ್ತಮತ್ವ ಜ್ಞಾನಕ್ಕೆ ಅಂಗಭೂತವಾಗಿದೆಯಾದ್ದರಿಂದ ಅದು ವೇದದ ಅವಾಂತರ ತಾತ್ಪರ್ಯವು ಮಹಾತಾತ್ಪರ್ಯವಲ್ಲ. ಮಹಾತಾತ್ಪರ್ಯ ಅಮುಖ್ಯ ತಾತ್ಪರ್ಯವೆಂಬ ಪ್ರಭೇದವನ್ನು ತಾತ್ಪರ್ಯ ಜ್ಞಾನದಿಂದ ಬರುವ ಫಲವನ್ನನುಲಕ್ಷಿಸಿ ತಿಳಿದುಕೊಳ್ಳಬೇಕು. ವಿಷ್ಣುಸರ್ವೋತ್ತಮತ್ವ ಜ್ಞಾನದಿಂದಲೇ ಪರಮ ಪುರುಷಾರ್ಥವು ಸಾಧ್ಯವಾಗುವುದ–ರಿಂದ ಕರ್ಮಾದಿಗಳು ಈ ಜ್ಞಾನಕ್ಕೆ ಅಂಗವಾಗುವುದರಿಂದ ವೇದಕ್ಕೆ ಮುಖ್ಯ ತಾತ್ಪರ್ಯವು ವಿಷ್ಣುಸರ್ವೋತ್ತಮತ್ವವು ಹಾಗೂ ಅಮುಖ್ಯ ತಾತ್ಪರ್ಯವು ಕರ್ಮಾದಿಗಳು ಎಂದು ಹೇಳಿದಂತಾಯಿತು.

ಈ ಶ್ರುತಿಯ ಭಾವವು *ಶ್ರುತ್ಯರ್ಥಷಟ್ಪದಿಯಲ್ಲಿ* ಹೀಗೆ :

*ಸರುವವೇದಗಳೊಳಗೆ ಉಕ್ತವು*
*ಹರಿಯೆ ಸರ್ವೋತ್ತಮನು ಎಂತಲೆ*
*ಅರಿವುದಿದುವೆ ಸರುವ ವೇದಕೆ ಪರಮಮುಖ್ಯಾರ್ಥ,*
*ಪರಮಪುರುಷನ ಬಿಟ್ಟು ಅನ್ಯವು*
*ಪರಮಮುಖ್ಯದ ಅರ್ಥವಾಗದು,*
*ಅರಿವುದದನಮುಖ್ಯವೆಂದಿತು ವೇದ ಸತ್ಯವನು.* ‖ ‖

**೧೧. ಧರ್ಮಾರ್ಥಕಾಮಾಃ ಸರ್ವೇಽಪಿ ನ ನಿತ್ಯಾ ಮೋಕ್ಷ ಏವ ಹಿ ।**
**ನಿತ್ಯಸ್ತಸ್ಮಾತ್ ತದರ್ಥಾಯ ಯತೇತ ಮತಿಮಾನ್ ನರಃ ॥**

– *ಭಾಲ್ಲವೇಯ ಶ್ರುತಿ*

ಈ ಮೇಲೆ ಉದಾಹರಿಸಲ್ಪಟ್ಟ ಪೈಂಗೀಶ್ರುತಿಯಲ್ಲಿ ವಿಷ್ಣುವಿನ ಸರ್ವೋತ್ತಮತ್ವವನ್ನು ತಿಳಿಸುವುದೇ ಆಗಮಗಳ ಪರಮ ಉದ್ದಿಷ್ಟವೆಂದು ತಿಳಿಸಲ್ಪಟ್ಟಿದೆ. ಇದಕ್ಕೆ ಯುಕ್ತಿರೂಪವಾಗಿ ಮೋಕ್ಷವೇ ಪರಮ ಪುರುಷಾರ್ಥವೆಂದೂ ಇಂಥ ಪರಮ ಪುರುಷಾರ್ಥವು ವಿಷ್ಣುಸರ್ವೋತ್ತಮತ್ವಜ್ಞಾನದಿಂದಲೇ ಸಾಧ್ಯವಿರುವುದರಿಂದ ಆ ಜ್ಞಾನವೇ ಆಗಮಗಳಿಗೆ ಪರಮ ತಾತ್ಪರ್ಯವೆಂದು ಹೇಳಬೇಕಾಗುವದೆಂದು

Rarest Archiver

ಹೇಳಲಾಗಿದೆ. ಇನ್ನು ಮೋಕ್ಷವೇ ಪರಮ ಪುರುಷಾರ್ಥವು ಏಕೆ ಎಂಬ ಪ್ರಶ್ನೆಗೆ ಭಾಲ್ಲವೇಯ ಶ್ರುತಿಯ ಈ ವಾಕ್ಯವನ್ನು ಆಚಾರ್ಯರು ಉದಾಹರಿಸಿದ್ದಾರೆ.

ಅನ್ವಯವು ಸ್ಪಷ್ಟವಿದೆ.

**ಅರ್ಥವು ಹೀಗೆ :–** ಧರ್ಮ, ಅರ್ಥ, ಕಾಮ ಹಾಗೂ ಮೋಕ್ಷ ಈ ನಾಲ್ಕರಲ್ಲಿ ಧರ್ಮ, ಅರ್ಥ ಹಾಗೂ ಕಾಮ ಇವಲ್ಲೆವುಗಳಿಂದ ಸಾಧ್ಯವಾದ ಸ್ವರ್ಗಾದಿಗಳು ಅನಿತ್ಯ ಸುಖವನ್ನು ಮಾತ್ರ ಕೊಡಬಲ್ಲವು. ಕೇವಲ ಮೋಕ್ಷವೊಂದೇ ನಿತ್ಯಸುಖವನ್ನು ಕೊಡಬಲ್ಲದು. ಆದಕಾರಣ ವಿವೇಕಿಯಾದವನು ಮೋಕ್ಷಕ್ಕೋಸ್ಕರವೇ ಪ್ರಯತ್ನ ಮಾಡಬೇಕೇ ಹೊರತು ಸ್ವರ್ಗಾದಿಗಳಿಗೋಸ್ಕರ ಪ್ರಯತ್ನಿಸುವುದು ಉಚಿತವಲ್ಲ ಎಂದು ಈ ಶ್ರುತಿಯು ವಿಧಿಸುತ್ತಿದೆ.

**ತದರ್ಥಾಯ – ಸಃ ಅರ್ಥಃ ತದರ್ಥ :–** ಆ ಪ್ರಯೋಜನವು . ಅದಕ್ಕೋಸ್ಕರ.

**ಧರ್ಮಾರ್ಥಕಾಮಾ: –** ಧರ್ಮಾರ್ಥ ಕಾಮಗಳು ಪುರುಷಾರ್ಥ ಸಾಧನಗಳು ಆದರೆ ಅವೇ ಪುರುಷಾರ್ಥಗಳಲ್ಲ ಎಂಬುದಿದ್ದರೂ ಲಕ್ಷಣಾ ಮಾಡಿ ಅವುಗಳಿಗೆ ಸ್ವರ್ಗಾದಿರೂಪ ಪುರುಷಾರ್ಥಪರ ಅರ್ಥವನ್ನು ಹೇಳಿದ್ದಾರೆ (ಪಾಂಡುರಂಗಿ ಟಿಪ್ಪಣಿ). ಧರ್ಮಾರ್ಥ ಕಾಮಗಳು ಸಾಧನಗಳು. ಸ್ವರ್ಗಾದಿ ಸಾಧ್ಯ. ಈ ಪ್ರಕಾರದ ಲಕ್ಷಣಾಪ್ರಯೋಜಕೀಭೂತಶಕ್ಯಸಂಬಂಧವನ್ನು ತೋರಿಸಿ ಈ ಪದಗಳಿಗೆ ಸ್ವರ್ಗಾದಿಪರವಾದ ಲಕ್ಷಣಪರ ಅರ್ಥವನ್ನು ಹೇಳಬೇಕು (ಪಾಂ. ಟಿ). ಇದಕ್ಕೆ ವ್ಯಾಸತತ್ವಜ್ಞರು ಆಯುರ್ವೇದಲ್ಲಿಯ ಪ್ರಚಲಿತ ಪ್ರಯೋಗವನ್ನು ದೃಷ್ಟಾಂತವಾಗಿ ಕೊಡುವರು. 'ಆಯುರ್ಘೃತಮ್' 'ತುಪ್ಪವೇ ದೀರ್ಘಾಯುವು' ಎಂಬ ಪ್ರಯೋಗವಿದೆ. ಅಂದರೆ ಘೃತದಿಂದ ಆಯುಷ್ಯವೃದ್ಧಿಯೆಂದರ್ಥ. ಇಲ್ಲಿ ಸಾಧನವು ಸಾಧ್ಯದ ಅರ್ಥದಲ್ಲಿ ಹೇಳಲ್ಪಟ್ಟಂತೆ ಇಲ್ಲಿಯೂ ಕೂಡ ಧರ್ಮಾರ್ಥಕಾಮಗಳೆಂಬ ಸಾಧನದಿಂದ ಸಾಧ್ಯವಾದ ಸ್ವರ್ಗಾದಿಗಳನ್ನು ಗ್ರಹಿಸಬೇಕೆಂದು ತಾತ್ಪರ್ಯ.

**ನ ನಿತ್ಯಾ :–** ಸ್ವರ್ಗಾದಿಗಳು ನಿತ್ಯವಲ್ಲ. ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ ಎಂಬ ಗೀತಾವಾಕ್ಯಕ್ಕನುಗುಣವಾಗಿ ಸ್ವರ್ಗಾದಿಗಳು ಅನಿತ್ಯ. ಹಾಗೂ 'ಓಂ ಅನಾವೃತ್ತಿಃ ಶಬ್ದಾದನಾವೃತ್ತಿಃ ಶಬ್ದಾತ್ ಓಂ' ಎಂಬ ಬ್ರಹ್ಮಸೂತ್ರಕ್ಕನುಗುಣವಾಗಿ ಮೋಕ್ಷವು ನಿತ್ಯವೆಂಬುದು ತಿಳಿಯುವದು.

Rarest Archiver

ಈ ಶ್ರುತಿಯ ಒಟ್ಟರ್ಥ ಇಂತಿದೆ :-

*ಧರ್ಮವರ್ಥವು ಕಾಮವೆಂಬಿವು*
*ಪರಮಪುರುಷಾರ್ಥವನೆ ತಾರವು,*
*ಸ್ವರ್ಗಮಾತ್ರಕೆ ಹೇತುವಿಪ್ಪವು, ನಿತ್ಯಸುಖಕಲ್ಲ ।*
*ಪರಮ ಸಾಧ್ಯವು ಮೋಕ್ಷವಿಪ್ಪುದು,*
*ಪರಮ ಸುಖಕದು ನಿತ್ಯತಾಣವು,*
*ಪರಮ ಪುರುಷನ ದಯದಿ ಮೋಕ್ಷವ ಪಡೆವ ಕೋವಿದನು ॥*

**೧೨. ಯಸ್ಯ ಪ್ರಸಾದಾತ್ ಪರಮಾರ್ತಿರೂಪಾತ್ ಅಸ್ಮಾತ್ಸಂಸಾರಾತ್ ಮುಚ್ಯತೆ ನಾಪರೇಣ। ನಾರಾಯಣೋऽಸೌ ಪರಮೋ ವಿಚಿಂತ್ಯೋ ಮುಮುಕ್ಷುಭಿಃ ಕರ್ಮಪಾಶಾದಮುಷ್ಮಾತ್ ॥** – *ನಾರಾಯಣ ಶ್ರುತಿ*

**ಅನ್ವಯ :–** ಯಸ್ಯ ಪ್ರಸಾದಾತ್ ಅಸ್ಮಾತ್ ಪರಮಾರ್ತಿರೂಪಾತ್ ಸಂಸಾರಾತ್ (ನರಃ) ಮುಚ್ಯತೆ ಅಪರೇಣ ನ (ಮುಚ್ಯತೆ), ಅಸೌ ನಾರಾಯಣಃ ಅಮುಷ್ಮಾತ್ ಕರ್ಮಪಾಶಾತ್ ಮುಮುಕ್ಷುಭಿಃ ಪರಮಃ ವಿಚಿಂತ್ಯಃ ॥

**ಅರ್ಥ :–** ದುಃಖಭೂಯಿಷ್ಠವಾದ ಈ ಸಂಸಾರದಿಂದ ಮನುಷ್ಯನು ಯಾರ ಅನುಗ್ರಹವಿದ್ದರೆ ಮಾತ್ರ ಮುಕ್ತನಾಗುವನೋ ಹಾಗೂ ಇನ್ನಿತರ ಯಾವುದರಿಂದಲೂ ಕೂಡ ಮುಕ್ತನಾಗಲಾರನೋ ಅಂಥ ಶ್ರೀನಾರಾಯಣನೇ ಸರ್ವೋತ್ತಮನೆಂಬ ಅನುಸಂಧಾನ ಮಾಡಿ ವಾಸ್ತವಿಕವಾದ ಈ ಕರ್ಮಬಂಧನದಿಂದ ಮುಕ್ತಿ ಪಡೆಯಲಿಚ್ಛಿಸುವವನು ಧ್ಯಾನ ಮಾಡಬೇಕು.

**ವಿಶೇಷ ವಿಷಯಗಳು :–** ನಾರಾಯಣನು ಸರ್ವೋತ್ತಮನೆಂದು ಧ್ಯಾನಮಾಡಿದಾಗಲೇ ಭಕ್ತನು ಯಥಾರ್ಥವಾದ ಅನುಸಂಧಾನದಿಂದ ಧ್ಯಾನ ಮಾಡುತ್ತಿದ್ದಾನೆ. ತಾನೇ ಸಮರ್ಥನೆಂದು ಅಹಂಕಾರಿಯಾಗಿಲ್ಲವೆಂದು ಗಮನಿಸಿ ಆ ಭಕ್ತನ ಮೇಲೆ ನಾರಾಯಣನು ಪ್ರೀತನಾಗುವನು. ಪರಮಾತ್ಮನು ಯಾರಮೇಲೆ ಅನುಗ್ರಹ ಮಾಡುವನೋ ಅಂಥವರಿಗೇ ಅವನು ಲಭ್ಯನಾಗುವನು. ಸಂಸಾರವೆಂದರೆ ಕರ್ಮಬಂಧವು. ಅದು ವಾಸ್ತವಿಕವಾದದ್ದು. ಭ್ರಮೆಯಲ್ಲವೆಂಬುದನ್ನು ಅಮುಷ್ಮಾತ್ ಎಂದು ಕೈ ಮಾಡಿ ತೋರಿಸಿ ತಿಳಿಸಿದ್ದಾರೆ. ಇದು ದುಃಖಭೂಯಿಷ್ಠವಾದುದೆಂಬುದು ಅನುಭವದಿಂದ ವೇದ್ಯವಾಗಿದ್ದರಿಂದ ಪ್ರಾಮಾಣಿಕವಾದುದು.

ಯಸ್ಯ ಪ್ರಸಾದಾತ್ ಮುಚ್ಯತೆ... ನ ಅಪರೇಣ ಎಂದು ಹೇಳುವದರಿಂದ ಮುಕ್ತಿಗೆ ಪರಮಾತ್ಮನ ಅನುಗ್ರಹವೇ ಅವ್ಯವಹಿತವಾದ ಸಾಧನವೆಂದು ಹೇಳಿದಂತಾಯಿತು. ಪರಮಾತ್ಮಸರ್ವೋತ್ತಮತ್ವಜ್ಞಾನವಿಶಿಷ್ಟವಾದ ಯಜ್ಞಯಾಗಾದಿ

Rarest Archiver

ಕರ್ಮಗಳಿಂದ ಅವನ ಪ್ರಸಾದವಾದ ಬಳಿಕ ಮುಕ್ತಿ ಎಂದು ಸಾಧನದ ಮೆಟ್ಟಿಲುಗಳನ್ನು ನಿರೂಪಿಸಿದ್ದಾರೆ. ಪರಮಃ ವಿಚಿಂತ್ಯಃ ಎಂದು ಹೇಳುವುದರಿಂದ ಜ್ಞಾನವೆಂದರೆ ಪರಮಾತ್ಮಸರ್ವೋತ್ತಮತ್ವಜ್ಞಾನ. ಈ ಜ್ಞಾನದಿಂದ ಪರಮಾತ್ಮನ ಪ್ರಸಾದ, ಅವನ ಅನುಗ್ರಹದಿಂದ ಅಹಮೇನಂ ಮೋಚಯಾಮಿ ಎಂದು ಅವನ ಸಂಕಲ್ಪ, ಅನಂತರ ಮುಕ್ತಿಯೆಂದು ಹೇಳಿದಂತಾಯಿತು. ಜಿಜ್ಞಾಸೋತ್ಥಜ್ಞಾನಜಾತ್ ತತ್ಪ್ರಸಾದಾದೇವ ಮುಚ್ಯತೆ ಎಂದು ಶ್ರೀಮದಾಚಾರ್ಯರು ಹೇಳಿದ್ದಾರೆ.

ಈ ಮೊದಲು ಉದಾಹರಿಸಿದ *ಭಾಲ್ಲವೇಯ ಶ್ರುತಿ*ಯಲ್ಲಿ ಮೋಕ್ಷವು ಪರಮೋದ್ದಿಷ್ಟವೆಂದು ಹೇಳಿದಾಗ ಈ ಮೋಕ್ಷಕ್ಕೆ ಸಾಧನವಾವುದು ಎಂಬ ಆಕಾಂಕ್ಷೆ ಸ್ವಾಭಾವಿಕ. ಅದಕ್ಕೆ ಪರಮಾತ್ಮಪ್ರಸಾದವೇ ಶ್ರೇಷ್ಠ ಸಾಧನ. ಈ ಪರಮಾತ್ಮನು ಸರ್ವೋತ್ತಮನೆಂದು ತಿಳಿಯುವುದೇ ಅವನ ಪ್ರಸಾದಕ್ಕೆ ಕಾರಣವಾಗುವದು ಎಂದು ಹೇಳಿದ್ದು ಪರಸ್ಪರ ಸಂಗತವೆಂದು ತಿಳಿಯುವುದು. ಶ್ರೀಮದಾಚಾರ್ಯರು ಶ್ರುತಿಗಳನ್ನು ಹೇಗೆ ಪರಸ್ಪರ ಸಂಗತವಾಗುವ ರೀತಿಯಲ್ಲಿ ಉದಾಹರಿಸುವರೆಂಬುದು ಇದರಿಂದ ತಿಳಿಯುವದು.

*ಶ್ರುತ್ಯರ್ಥಪಟ್ಟದಿ*ಯಲ್ಲಿ ಇದರ ಭಾವವು ಹೀಗೆ;

*ಆರ ಕೃಪೆಯನು ಪಡೆದು ಮನುಜನು*
*ಘೋರಸಂಸೃತಿ ದುಃಖ ದಾಂಟುವ*
*ಆರು ತಾನೊಬ್ಬ ಮುಕುತಿಯ ದಾರಿ ತೋರಿಸುವ,*
*ಧೀರನಾದವ ನಿರುತವೀತನ*
*ಪಾರುಗಾಣಿಪನೆಂದು ಚಿಂತಿಸಿ*
*ಘೋರಸಂಸೃತಿಸರಳು ದಾಂಟುತ ನಿರುತ ಸುಖಿಸುವುದು.* // //

**೧೩. ನಾಯಮಾತ್ಮಾ ಪ್ರವಚನೇನ ಲಭ್ಯಃ ನ ಮೇಧಯಾ ನ ಬಹುನಾ ಶ್ರುತೇನ । ಯಮೇವೈಷ ವೃಣುತೆ ತೇನ ಲಭ್ಯಃ ತಸ್ಯೈಷ ಆತ್ಮಾ ವಿವೃಣುತೆ ತನೂಂ ಸ್ವಾಮ್** – *ಕಠಶ್ರುತಿ*

– *ಕಠೋಪನಿಷತ್ ಅಧ್ಯಾಯ – ೧ –ವಲ್ಲೀ ೨ ಋಕ್ – ೨೩*

ಕರ್ಮವಾಗಲಿ ಜ್ಞಾನವಾಗಲಿ ಮೋಕ್ಷಕ್ಕೆ ಸಾಕ್ಷಾತ್ ಸಾಧನಗಳಾಗಲಾರವು. ಸಾಕ್ಷಾತ್ ಸಾಧನವೆಂದರೆ ಪರಮಾತ್ಮನ ಪ್ರಸಾದ ಒಂದೇ. ಸಂದರ್ಭ ಪ್ರಾಪ್ತವಾದ ಈ ವಿಷಯವನ್ನು ಯಮ–ನಚಿಕೇತರ ಸಂವಾದ ರೂಪವಾದ ಕಠೋಪನಿಷತ್ತಿನ ವಾಕ್ಯದಿಂದ ಸ್ಪಷ್ಟ ಪಡಿಸುತ್ತಾರೆ. ಯಮಧರ್ಮರಾಜನು ನಚಿಕೇತನಿಗೆ ಬ್ರಹ್ಮ ಹಾಗೂ ಬ್ರಹ್ಮಜ್ಞಾನದ ಮಹಿಮೆಯನ್ನು ಹೇಳಿ ಬ್ರಹ್ಮಸ್ವರೂಪವನ್ನು ವಿವರಿಸುತ್ತಿರುವ ಸಂದರ್ಭದಲ್ಲಿ ಹೇಳಿದ

Rarest Archiver

ವಾಕ್ಯವಿದು.

**ಅನ್ವಯ :-** ಅಯಂ ಆತ್ಮಾ ಪ್ರವಚನೇನ ಲಭ್ಯಃ ನ (ಭವತಿ).ನ ಮೇಧಯಾ (ಲಭ್ಯಃ ಭವತಿ) । ನ ಬಹುನಾ ಶ್ರುತೇನ (ಲಭ್ಯಃ ಭವತಿ) । (ಕಿಂತು) ಯಂ ಏಷಃ ವೃಣುತೆ ತೇನ ಏವ ಲಭ್ಯಃ । ತಸ್ಯ ಏಷ: ಆತ್ಮಾ ಸ್ವಾಂ ತನುಂ ವಿವೃಣುತೆ ॥

**ಅರ್ಥ** (ಶ್ರೀರಾಯರ ಖಂಡಾರ್ಥವನ್ನನುಸರಿಸಿ) :- ವ್ಯಾಖ್ಯಾನದಿಂದ ಈ ಪರಮಾತ್ಮನ ಸಾಕ್ಷಾತ್ಕಾರವಾಗಲಾರದು. ಸ್ವಕೀಯ ಪ್ರಜ್ಞಾಬಲದಿಂದಾಗಲಿ ಈತನ ಸಾಕ್ಷಾತ್ಕಾರ-ವಾಗುವುದಿಲ್ಲ. ಬೇರೆಯವರು ಮಾಡಿದ ತತ್ತ್ವೋಪದೇಶವನ್ನು ಬಹಳ ಶ್ರವಣಮಾಡಿ-ದವರು ಈತನನ್ನು ಸಾಕ್ಷಾತ್ಕರಿಸಿಕೊಳ್ಳಬಹುದೆಂದು ಹೇಳುವದೂ ಕೂಡ ಸರಿಯಲ್ಲ. ಏಕೆಂದರೆ ಅವನ ಸಾಕ್ಷಾತ್ಕಾರವು ಕೇವಲ ಬಹು ಶ್ರವಣದಿಂದಲೂ ಸಾಧ್ಯವಿಲ್ಲ. ಆದರೆ ಭಗವಂತನು ಯಾರನ್ನು ಸ್ವೀಕರಿಸುವನೋ ಅಂದರೆ ಯಾರ ಮೇಲೆ ಅನುಗ್ರಹ ಮಾಡುವನೋ ಅವರಿಗೆ ಮಾತ್ರ ಈತನ ಸಾಕ್ಷಾತ್ಕಾರವಾಗಬಹುದು. ಯಾಕೆಂದರೆ ಅನುಗ್ರಹಕ್ಕೆ ಪಾತ್ರನಾದವರಿಗೆ ಮಾತ್ರ ಭಗವಂತನು ತನ್ನ ರೂಪವು ಗೋಚರವಾಗುವಂತೆ ಮಾಡುತ್ತಾನೆ. ಹೀಗೆ ಹೇಳದಿದ್ದರೆ ಸ್ವತಃ ಅವ್ಯಕ್ತನಾಗಿಯೇ ಇರುವವನಾದ ಪರಮಾತ್ಮನ ಸಾಕ್ಷಾತ್ಕಾರವು ಆಗುವದೆಂದು ಹೇಗೆ ಹೇಳಲು ಸಾಧ್ಯ. ಅವ್ಯಕ್ತನಾಗಿದ್ದರೂ ಕೂಡ ಅವನು ಮನಸ್ಸು ಮಾಡಿದರೆ ತನ್ನ ಸ್ವರೂಪವನ್ನು ಪ್ರಕಾಶಗೊಳಿಸುವನು ಎಂದರ್ಥ. ಆತನ ಅನುಗ್ರಹದಿಂದ ಮಾತ್ರ ಸಾಕ್ಷಾತ್ಕಾರ ಹಾಗೂ ಜೀವನಿಗೆ ಮೋಕ್ಷವೆಂದು ಇದರಿಂದ ತಿಳಿಯುವದು.

ತನ್ನ ಇಚ್ಛೆಯಿಂದಲೇ ತನ್ನ ಸ್ವರೂಪವನ್ನು ಆವೃತವನ್ನಾಗಿ ಮಾಡುವನು ಹಾಗೂ ಪ್ರಕಾಶಗೊಳಿಸುವನು. ಅಂದ ಮೇಲೆ ಅವನ ಪ್ರಸಾದವೇ ಮೋಕ್ಷಕ್ಕೆ ಸಾಕ್ಷಾತ್ ಸಾಧನವೆಂದು ಹೇಳಿದಂತಾಯಿತು.

**ಇದರ ಒಟ್ಟರ್ಥವು ಇಂತಿದೆ :-**

*ಹರಿಯು ಕೀರ್ತನ, ಶಾಸ್ತ್ರ ಮಥನದ,*
*ಸರುವರಲ್ಲಿಯ ಶ್ರವಣ ಮಾತ್ರದಿ*
*ಪರನ ವಾಕ್ಯಾರ್ಥದಲಿ ಜಯಿಸುವ ಭರದಿ ಗೋಚರನೇ ?*
*ತ್ವರದಿ ತನ್ನಯ ತಾನೆ ತೋರ್ಪನು*
*ಸರುವ ರೀತಿಲಿ ಶರಣನಾದಗೆ*
*ಕರಿಗೆ ತೋರಿದ ತೆರದಿ, ಸಿರಿಹರಿಚರಿತವಚ್ಚರಿಯು ।*

**೧೪. ನ ತಾದೃಶೀ ಪ್ರೀತಿರೀಡಸ್ಯ ವಿಷ್ಣೋರ್ಗುಣೋತ್ಕರ್ಷಜ್ಞಾತರಿ**
**ಯಾದೃಶೀ ಸ್ಯಾತ್ । ತತ್ಪ್ರೀಣನಾತ್ ಮೋಕ್ಷಮಾಪ್ನೋತಿ ಸರ್ವಃ**

Rarest Archiver

**ತತೋ ವೇದಾಸ್ತತ್ಪರಾಃ ಸರ್ವ ಏವ ॥** – *ಸೌಪರ್ಣಶ್ರುತಿ*

**ಅನ್ವಯ :–** ಈದ್ಯಸ್ಯ ವಿಷ್ಣೋಃ ಗುಣೋತ್ಕರ್ಷಜ್ಞಾತರಿ (ಪುರುಷೇ) ಯಾದೃಶೀ ಪ್ರೀತಿಃ ಸ್ಯಾತ್ ನ ತಾದೃಶೀ ಪ್ರೀತಿಃ (ಅನ್ಯಸ್ಮಿನ್ ಪುರುಷೇ) ಸ್ಯಾತ್ । ಸರ್ವಃ (ಭಕ್ತ ಜನಃ) ತತ್ಪ್ರೀಣನಾತ್ ಏವ ಮೋಕ್ಷಂ ಆಪ್ನೋತಿ । ತತಃ ಏವ ಸರ್ವೇ ಏವ ವೇದಾಃ ತತ್ಪರಾಃ ಏವ ॥

**ಅರ್ಥ :–** ಪರಮಾತ್ಮನ (ವಿಷ್ಣುವಿನ) ಗುಣೋತ್ಕರ್ಷವನ್ನು ತಿಳಿದ ಪುರುಷನ ಮೇಲೆ ಪರಮ ಪೂಜನೀಯನಾದ ವಿಷ್ಣುವಿನ ಎಷ್ಟು ಪ್ರೀತಿಯು (ಅನುಗ್ರಹವು) ಉಂಟಾಗುವುದೋ ಅಷ್ಟು ಪ್ರೀತಿಯು ಬೇರೆ ಯಾವ ಪುರುಷನ ಮೇಲೆಯೂ ಆಗಲಾರದು. ಎಲ್ಲ ಭಕ್ತಜನರೂ ಕೂಡ ಗುಣೋತ್ಕರ್ಷಜ್ಞಾನರೂಪವಾದ ಉಪಾಸನೆಯಿಂದಲೇ ಈ ಸಂಸಾರದಿಂದ ಮುಕ್ತಿಯನ್ನು ಪಡೆಯುತ್ತಾರೆ. ಆದ್ದರಿಂದಲೇ ಎಲ್ಲ ವೇದಗಳೂ ಕೂಡ ಅವನನ್ನು ಪ್ರತಿಪಾದಿಸುವುದರಲ್ಲಿಯೇ ತಾತ್ಪರ್ಯವನ್ನು ಹೊಂದಿವೆ.

**ತಾತ್ಪರ್ಯ :–** ವಿಷ್ಣುವು ಸರ್ವೋತ್ತಮನು ಎಂದು ತಿಳಿದುಕೊಳ್ಳುವುದೇ ಯಥಾರ್ಥಜ್ಞಾನವು. ಅಧಮನಾದ ಜೀವ ಮತ್ತು ಉತ್ತಮನಾದ ವಿಷ್ಣು ಇವರಲ್ಲಿ ಅಭೇದವಿದೆಯೆಂದು ತಿಳಿಯುವದು ಯಥಾರ್ಥಜ್ಞಾನವಾಗಲಾರದು. ಯಥಾರ್ಥ–ಜ್ಞಾನದಿಂದಲೇ ಪರಮಾತ್ಮನ ಅನುಗ್ರಹವುಂಟಾಗಿ ಮೋಕ್ಷವಾಗುವದೇ ಹೊರತು ಕರ್ಮಾದಿಗಳಿಂದಾಗಲಿ, ಅಭೇದಜ್ಞಾನದಿಂದಾಗಲಿ ಮೋಕ್ಷವಾಗುವದಿಲ್ಲ. ಸಾಧಕ ಜೀವರ ಹಿತವನ್ನು ಬಯಸುವ ವೇದಮಾತೆಯು ಪರಮಾತ್ಮನ ಅನುಗ್ರಹಕ್ಕೆ ಕಾರಣೀಭೂತವಾದ ಅವನ ಸರ್ವೋತ್ತ ಮತ್ವಜ್ಞಾನವನ್ನು ಮಾಡಿಕೊಡುವಳು. ಇದೇ ವೇದಗಳ ಪರಮತಾತ್ಪರ್ಯ ಎಂದು *ಸೌಪರ್ಣಶ್ರುತಿಯು* ಪ್ರತಿಪಾದಿಸುತ್ತದೆ.

ಪರಮಾತ್ಮನ ಅನುಗ್ರಹವೇ ಮೋಕ್ಷಕ್ಕೆ ಅವ್ಯವಹಿತವಾದ ಸಾಧನವೆಂದು ತಿಳಿಸುವ ಕಠೋಪನಿಷತ್ತನ್ನು ಈ ಮೊದಲು ಆಚಾರ್ಯರು ಉದಾಹರಿಸಿರುವರಷ್ಟೆ. ಈ ಅನುಗ್ರಹವನ್ನು ಹೇಗೆ ಪಡೆಯಬೇಕೆಂಬ ಪ್ರಶ್ನೆಯು ಸಾಧಕನ ಮನಸ್ಸಿನಲ್ಲಿ ಮೂಡುವದು ಸ್ವಾಭಾವಿಕ. ಈ ಪ್ರಶ್ನೆಗೆ *ಸೌಪರ್ಣಶ್ರುತಿ*ಯನ್ನು ಉದಾಹರಿಸಿ ಪರಮಾತ್ಮನ ಅನುಗ್ರಹವನ್ನು ಅವನ ಸರ್ವೋತ್ತಮತ್ವಜ್ಞಾನದಿಂದಲೇ ಪಡೆಯಲು ಸಾಧ್ಯ, ಹಾಗೂ ತಾಯಿಯಂತೆ ಪರಮ ಕರುಣಾಳುವಾದ ವೇದವು ಈ ಸರ್ವೋತ್ತಮತ್ವಜ್ಞಾನವನ್ನು ಕೊಡುವುದರ ಸಲುವಾಗಿಯೇ ಪ್ರವೃತ್ತವಾಗಿದೆಯೆಂದು ಶ್ರೀಮದಾಚಾರ್ಯರು ಸ್ಪಷ್ಟಪಡಿಸಿರುವರು.

Rarest Archiver

**ವಿಶೇಷ ವಿಷಯಗಳು :-** ಈ ಸಂದರ್ಭದಲ್ಲಿ ನಮಗೆ ಲೋಕಾನುಭವವನ್ನು ಗಮನಿಸಿದರೆ ಸೌಪರ್ಣಶ್ರುತಿಯ ಈ ವಾಕ್ಯದ ಔಚಿತ್ಯವು ಮನದಲ್ಲಿ ಬಿಂಬಿಸುವದು. ಎಲ್ಲ ದೃಷ್ಟಿಯಿಂದ ದೊಡ್ಡವನಾದ ವ್ಯಕ್ತಿಯೊಬ್ಬನು ತನಗಿಂತ ಕಡಿಮೆ ಯೋಗ್ಯತೆಯುಳ್ಳ ವ್ಯಕ್ತಿಗೆ ಅವನನ್ನು ಪ್ರೋತ್ಸಾಹಿಸಲು 'ನೋಡಪ್ಪ, ನೀನು ನಾನೂ ಒಂದೆಯೇ ! ಏನೂ ಅಂತರವಿಲ್ಲ' ಎಂದು ಹೇಳಿದರೆ ಕಡಿಮೆ ಯೋಗ್ಯತೆಯುಳ್ಳ ವ್ಯಕ್ತಿಯು ತಾನು ಕಡಿಮೆ ಯೋಗ್ಯತೆಯುಳ್ಳವನಾದರೂ ಈ ದೊಡ್ಡ ಮನುಷ್ಯನು ನನ್ನಲ್ಲಿಯ ಗುಣಗಳನ್ನು ಕಿರಿದಾಗಿದ್ದರೂ ಹಿರಿದಾಗಿ ಮಾಡಿ ಬಣ್ಣಿಸುತ್ತಿದ್ದಾನೆ ಎಂದು ಹಿಗ್ಗುತ್ತಾನೆ. ಮತ್ತು ಆ ದೊಡ್ಡ ಮನುಷ್ಯ ಹೇಳಿದ್ದನ್ನೆಲ್ಲ ಮಾಡಲು ಸಿದ್ಧನಾಗುತ್ತಾನೆ. ಆದರೆ ಕಡಿಮೆ ಯೋಗ್ಯತೆಯುಳ್ಳ ಮನುಷ್ಯನು ದೊಡ್ಡ ಯೋಗ್ಯತೆಯ ವ್ಯಕ್ತಿಗೆ 'ನೋಡಪ್ಪ, ನೀನೂ ನಾನೂ ಒಂದೆಯೇ ! ಏನೂ ಅಂತರವಿಲ್ಲ' ಎಂದು ಹೇಳಿದರೆ ದೊಡ್ಡ ಯೋಗ್ಯತೆಯ ಮನುಷ್ಯನಿಗೆ ಅಸಮಾಧಾನವಾಗಿ, ಇದೇನು ಅಸಂಬದ್ಧವಾಗಿ ಮಾತನಾಡುತ್ತಿದ್ದಾನೆ ಎಂದು ಅವನ ಮೇಲೆ ರೋಸಿಗೊಳ್ಳುತ್ತಾನೆ. ಇದು ಈಗಿನ ಆಫೀಸುಗಳಲ್ಲಿ ಹಿರಿಯ ಅಧಿಕಾರಿ ಹಾಗೂ ಅವನ ಕೈಕೆಳಗಿನವರಲ್ಲಿ ಬರುವ ದಿನನಿತ್ಯದ ಅನುಭವವೇ ಆಗಿದೆ. ಉತ್ತಮ ಅಧಮರಲ್ಲಿ ಈ ಪ್ರಕಾರದ ಸಂಬಂಧಗಳ ದೃಷ್ಟಾಂತದಿಂದ ಯಾವುದರಿಂದ ಪ್ರೀತಿ ಉಂಟಾಗುವದು, ಯಾವುದರಿಂದ ರೋಷ ಉಂಟಾಗುವದು ಎಂಬುದು ವಿದಿತವಾಗುವದು. ಉತ್ತಮನ ಉತ್ತಮತ್ವ ಜ್ಞಾನದಿಂದ ಅಧಮನ ಬಗ್ಗೆ ಉತ್ತಮನ ಪ್ರೀತಿ ಹಾಗೂ ಉತ್ತಮನ ಬಗ್ಗೆ ಅಭೇದ ಜ್ಞಾನದಿಂದ ಅಧಮನ ಬಗ್ಗೆ ರೋಷ-ವೆಂಬುದು ಸ್ಪಷ್ಟ. ಲೋಕದಲ್ಲಿಯೇ ಹೀಗಿದ್ದಾಗ ಸರ್ವೋತ್ತಮನಾದ ಪರಮಾತ್ಮನ ಬಗ್ಗೆ ಗುಣೋತ್ಕರ್ಷಜ್ಞಾನದಿಂದ ಪ್ರೀತಿ ಹಾಗೂ ಅನುಗ್ರಹ ಮತ್ತು ಅಭೇದಜ್ಞಾನದಿಂದ ರೋಷ, ಅವಗ್ರಹಗಳು ಉಂಟಾಗುವವೆಂದು ಬೇರೆ ಹೇಳಬೇಕಾಗಿಲ್ಲ. ಪರಮ ಕರುಣಾಮಯಿಯಾದ ವೇದಮಾತೆಯು ಜೀವರಿಗೆ ಪರಮಾತ್ಮನ ರೋಷ, ಅವಗ್ರಹವುಂಟಾಗುವ ಉಪದೇಶವನ್ನು ಹೇಗೆ ಮಾಡಿಯಾಳು? ಹಾಗೆ ಉಪದೇಶ ಮಾಡುವದು ಸಾಧ್ಯವೇ ಇಲ್ಲ.

ಇದರ ಮೇಲೆ ಒಂದು ಆಕ್ಷೇಪ :- ಭಯ ಮತ್ತು ಮಾತ್ಸರ್ಯಗಳಿಂದ ಜಗತ್ತಿನಲ್ಲಿ ಈ ರೀತಿಯ ರೋಷ, ಅವಗ್ರಹ ಮಾಡಬಹುದು. ಆದರೆ ಈ ಪ್ರಕಾರದ ರಾಜಸ ತಾಮಸ ಗುಣಗಳಿಂದ ದೂರನಾದ ಪರಮಾತ್ಮನು ಅವಗ್ರಹ ರೋಷಗಳನ್ನು ಎಂದಿಗೂ ಮಾಡಲಾರನು. ಕಾರಣ ಅಭೇದಜ್ಞಾನ ಹಾನಿಕಾರಕವಾಗಲಾರದು ಎಂದು ಯಾರಾದರೂ ವಾದಿಸಿದರೆ ಅದಕ್ಕೆ ಉತ್ತರವಿಷ್ಟೆ ! ಇದರಿಂದ ಜಗತ್ತಿನಲ್ಲಿ ಅಪರಾಧಮಾಡುವವರಿಗೆ ಶಿಕ್ಷೆ ಇಲ್ಲದಂತಾಗಿ, ಅಪರಾಧ ಮಾಡಕೂಡದು, ಮಾಡಿದರೆ ಅನರ್ಥವಾಗುವದು ಎಂಬ ಎಚ್ಚರಿಕೆಯನ್ನು ಇನ್ನುಳಿದವರು ಪಡೆಯದೆ ಸಮಾಜದಲ್ಲಿ

Rarest Archiver

ಸ್ವಚ್ಛಂದವೃತ್ತಿ ಹಾಗೂ ಅಪರಾಧಗಳ ತಾಂಡವವೇ ನಡೆದು ಸುವ್ಯವಸ್ಥಿತತೆಯೇ ಇಲ್ಲದಂತಾದೀತು ! ಈ ಸುವ್ಯವಸ್ಥಿತತೆ ಬಂದು ಜನರಿಗೆ ಶಾಂತಿ ಸಮಾಧಾನಗಳು ದೊರೆಯಲೆಂದೇ ಭಗವಂತನೂ ಕೂಡ ಅಪರಾಧ ಮಾಡಿದವರಿಗೆ ಶಿಕ್ಷೆ ವಿಧಿಸುವ ಕಟ್ಟುನಿಟ್ಟಿನ ನಿಯಮವನ್ನು ಪಾಲಿಸುವನು. ಆದರೆ ದೋಷದೂರನಾದ ಆತನಿಗೆ ಭಯ, ಅಸೂಯೆಗಳಿಲ್ಲ ಮತ್ತು ಅವನು ಅಪರಾಧಿಗಳಿಗೆ ಶಿಕ್ಷೆ ವಿಧಿಸುವದು ಭಯ ಸಿಟ್ಟು, ಅಸೂಯೆಗಳ ಕಾರಣದಿಂದಲ್ಲ. ಲೋಕಕಲ್ಯಾಣಕ್ಕಾಗಿ ಎಂಬುದನ್ನು ಶ್ರೀಮದ್ ಭಾಗವತದ ಸಪ್ತಮ ಸ್ಕಂಧದ ಈ ಕೆಳಗಿನ ಶ್ಲೋಕದಿಂದ ತಿಳಿಯಬಹುದು :

'ನಿಂದನಸ್ತವ ಸತ್ಕಾರ ನ್ಯಕ್ಕಾರಾರ್ಥಂ ಕಲೇವರಮ್ ।
ಪ್ರಧಾನ ಪರಯೋ ರಾಜನ್ ಅವಿವೇಕೇನ ಕಲ್ಪಿತಮ್ ॥' स्क. ७ अ १.२४
'ಸರ್ವಾತ್ಮನಃ ಸರ್ವದೃಶೋ ಹೃದಯಸ್ಯಾನಹಂಕೃತೇಃ ।
ತತ್ಕೃತಂ ಮತಿವೈಷಮ್ಯಂ ನಿರವದ್ಯಸ್ಯ ನ ಕ್ವಚಿತ್ ॥' ೧-೯-೨೮

(ಶ್ರೀಮದ್ ವಿಷ್ಣುತತ್ತ್ವವಿನಿರ್ಣಯ ಟೀಕೆಯಲ್ಲಿ ಉದಾಹೃತ)

(ಶ್ರೀನಿವಾಸ ತೀರ್ಥರು ಈ ಎರಡನೆಯ ಶ್ಲೋಕವೂ ಸಪ್ತಮ ಸ್ಕಂಧದಲ್ಲಿದೆಯೆಂದು ತಿಳಿಸಿದಂತೆ ತೋರುವದು. ಆದರೆ ಉಪಲಬ್ಧ ಪ್ರತಿಗಳಲ್ಲಿ ಇದು ಸಪ್ತಮ ಸ್ಕಂಧದಲ್ಲಿ ಕಂಡು ಬರುವುದಿಲ್ಲ. ಪಾಠಾಂತರವಿರಬಹುದು. ಇತ್ತೀಚಿಗೆ ಪ್ರಸಿದ್ಧವಾದ ವೈಷ್ಣವ ಪಾಠದಲ್ಲಿ ಕೂಡ ಇದು ಸಪ್ತಮ ಸ್ಕಂಧದಲ್ಲಿರದೆ ಪ್ರಥಮ ಸ್ಕಂಧದಲ್ಲಿಯೇ ಬಂದಿದೆ).

ನಿಂದೆ, ಸ್ತೋತ್ರ, ಸತ್ಕಾರ, ಔದಾಸೀನ್ಯ ಇವೆಲ್ಲ ದೇಹಕ್ಕೆ ಹೊರತು ಆತ್ಮಕ್ಕಲ್ಲ. ದೇಹಾತ್ಮರಲ್ಲಿಯ ಅಭೇದ ಬುದ್ಧಿಯುಳ್ಳವರು ಇದನ್ನೆಲ್ಲ ಆತ್ಮನಲ್ಲಿ ಆರೋಪಿಸಿ-ಕೊಳ್ಳುವರು. ಈ ರೀತಿಯ ಅವಿವೇಕ ಬುದ್ಧಿ ಇಲ್ಲದ ಅಹಂಕಾರಿಯಾಗದ ಜ್ಞಾನಿಗೆ ಈ ರೀತಿಯ ಕಾಲುಷ್ಯವು ಮನಸ್ಸಿನಲ್ಲಿರುವುದಿಲ್ಲ; ಹೀಗಿದ್ದಮೇಲೆ ಭಯ ಅಸೂಯೆಗಳು ಜೀವನಿಗೇ ಹೊರತು ಪರಮಾತ್ಮನಿಗಲ್ಲವೆಂಬುದು ಸ್ಪಷ್ಟವಾಗುವದು.

ಅಂತು, ಭಕ್ತನು ವಿಷ್ಣುವಿನಲ್ಲಿ ವಾಸ್ತವಿಕವಾಗಿ ಇದ್ದ ಗುಣೋತ್ಕರ್ಷ-ಜ್ಞಾನ ಮಾಡಿಕೊಂಡಾಗಲೇ ವಿಷ್ಣುವು ಅವನಿಗೆ ಪ್ರಸನ್ನನಾಗಿ ಮೋಕ್ಷವನ್ನು ಅನುಗ್ರಹಿಸುತ್ತಾನೆ. ಭಕ್ತನು ಮಾಡುವ ಕರ್ಮಾದಿಗಳಿಂದ ವಿಷ್ಣುವಿಗೆ ಮೋಕ್ಷ-ವನ್ನನುಗ್ರಹಿಸುವಷ್ಟು ಪ್ರಸನ್ನತೆಯಾಗುವದಿಲ್ಲ. ಆದ ಕಾರಣ ಪರಮ ಪುರುಷಾರ್ಥದ ಸಾಧನವನ್ನು ಉಪದೇಶಿಸಲು ಪ್ರವೃತ್ತವಾದ ವೇದವು ವಿಷ್ಣುವಿನ ಸರ್ವೋತ್ತಮತ್ವ ಜ್ಞಾನ ಮಾಡಿಕೊಡುವುದರಲ್ಲಿಯೇ ತಾತ್ಪರ್ಯವನ್ನು ಹೊಂದಿರುವದು.

Rarest Archiver

*ಸೌಪರ್ಣ ಶ್ರುತಿವಾಕ್ಯ*ದ ಸಾರ ಇಂತಿದೆ :-

*ದೇವ ದೇವನ ಶುಭಗುಣಂಗಳ*
*ಭಾವ ತುಂಬಿದ ಮನದಿ ಭಜಿಪಗೆ*
*ಕಾವನಯ್ಯನು ಕರುಣೆಯಿಂದಲಿ ಮುಕುತಿ ನೀಡುವನು.*
*ಆವ ರೀತಿಯಲಿಂತು ಭಜಿಸದ*
*ಕೇವಲವೆ ತಾ ಕರ್ಮ ಮಾಳ್ಪಗೆ*
*ಆವ ರೀತಿಯಲಿಂತು ತೋರನು ದೇವ ಕರುಣೆಯನು ॥*

*ಉತ್ತಮನು ತಾನಧಮ ನರನಿಗೆ*
*ಉತ್ತಮನು ನೀನೆಂದು ಪೇಳಲು*
*ಮತ್ತೆಮತ್ತೆಯು ನೆನೆಯುತಧಮನು ಹಿಗ್ಗಿ ಕುಣಿಯುವನು.*
*ಮತ್ತನಾಗಿಪ್ಪಧಮನೊಮ್ಮೆಯು*
*ಉತ್ತಮರು ನಾವಿಬ್ಬರೆನ್ನಲು*
*ಉತ್ತಮನು ಖತಿಗೊಂಡು ಮತ್ತನ ಜರೆದು ಮೆಟ್ಟುವನು ॥ ॥*

ಅಂತು ಶ್ರೀಮನ್ಮಧ್ವಾಚಾರ್ಯರು ಶ್ರೀಮದ್ವಿಷ್ಣುತತ್ವವಿನಿರ್ಣಯದಲ್ಲಿ ಮಂಗಳಶ್ಲೋಕದಲ್ಲಿ ಸದಾಗಮೈಕವಿಜ್ಞೇಯಂ ಎಂದು ವಿಶೇಷಣ ಕೊಟ್ಟಿದ್ದು ನಾರಾಯಣನು ಕೇವಲ ಸದಾಗಮಗಳಿಂದ ಮಾತ್ರ ವಿಜ್ಞೇಯನಾಗಿದ್ದಾನೆ ಎಂದು ಹೇಳುವದಕ್ಕಷ್ಟೇ ಅಲ್ಲ, ನಾರಾಯಣನೇ ಎಲ್ಲ ಸದಾಗಮಗಳ ಪರಮಮುಖ್ಯ-ತಾತ್ಪರ್ಯವೆಂದು ಹೇಳುವದಕ್ಕೂ ಎಂಬುದು ಈ ಪ್ರಕರಣದಲ್ಲಿ ಸಂಗ್ರಹಿಸಲ್ಪಟ್ಟ ಶ್ರುತಿಗಳಿಂದ ತಿಳಿಯುವದು.

Rarest Archiver

# ಪ್ರಕರಣ ೪.

## ಎಲ್ಲ ಆಗಮಗಳು ಭೇದವನ್ನು ಪ್ರತಿಪಾದಿಸುವವು ಜಗತ್ತು ಸತ್ಯ ಭೇದ ಸತ್ಯ ಎಂಬ ಬಗ್ಗೆ ಉದಾಹೃತ ಶ್ರುತಿಗಳು

ಎಲ್ಲ ಆಗಮಗಳಿಗೂ ಕೂಡ ವಿಷ್ಣು ಸರ್ವೋತ್ತಮತ್ವವೇ ತಾತ್ಪರ್ಯವು ಎಂದು ಅನೇಕ ಶ್ರುತಿಸ್ಮೃತಿಗಳನ್ನುದಾಹರಿಸಿ ಶ್ರೀಮದಾಚಾರ್ಯರು ವಿವರಿಸಿದ್ದಾರೆ. ವಿಷ್ಣುವು ಸರ್ವೋತ್ತಮನು ಎಂದು ಹೇಳಿದ ಕೂಡಲೇ ಅವನು ಸರ್ವದಿಂದಲೂ ಭಿನ್ನನು ಎಂಬುದನ್ನು ಹೇಳಿದಂತಾಯಿತು. ತಾರತಮ್ಯವು ಭೇದಘಟಿತವಾದ್ದರಿಂದ ಭೇದದ ಸ್ವರೂಪವನ್ನು ವಿವರಿಸುವದು ಬಹಳ ಮಹತ್ವದ ಘಟ್ಟವಾಗುವದು. ಭೇದವು ಧರ್ಮಿಸ್ವರೂಪ ಹಾಗೂ ಈ ಭೇದವನ್ನು ಸಕಲ ಶ್ರುತಿಸ್ಮೃತಿಗಳು ಪ್ರತಿಪಾದಿ-ಸುತ್ತವೆಯೆಂಬ ವಿಷಯವನ್ನು ಶ್ರೀಮದಾಚಾರ್ಯರು *ಅನೇಕ* ಪ್ರಮಾಣಗಳಿಂದ ತೋರಿಸಿದ್ದಾರೆ. ಇದರಿಂದ ಶ್ರೀಮದಾಚಾರ್ಯರ ಸಿದ್ಧಾಂತವು ಶ್ರುತಿಸ್ಮೃತಿಗಳ ಆಧಾರದ ಮೇಲೆ ಬೆಳೆದು ಬಂದ ಸಿದ್ಧಾಂತವೇ ಹೊರತು ಕಪೋಲಕಲ್ಪಿತವಾದ ಅಭಿಪ್ರಾಯವಲ್ಲವೆಂಬುದು ಮನದಟ್ಟಾಗುವದು.

ಈ ವಿಷಯದಲ್ಲಿ ಶ್ರೀಮದ್ವಿಷ್ಣುತತ್ವವಿನಿರ್ಣಯದಲ್ಲಿ ಅನೇಕ ಶ್ರುತಿಗಳನ್ನು ಉದಾಹರಿಸಿದ್ದು ಅವುಗಳ ಅರ್ಥವನ್ನು ಪೂರ್ವಾಚಾರ್ಯರ ಗ್ರಂಥಗಳ ಆಧಾರದ ಮೇಲೆ ವಿವರಿಸಲು ಇಲ್ಲಿ ಪ್ರಯತ್ನಿಸಲಾಗಿದೆ. ಈ ಭಾಗವು ಹೀಗಾಗಿ ಬಹಳ ದೊಡ್ಡ ಭಾಗವಾಗಿದೆ.

**೧೫. ಸ ಏಷ ನೇತಿ। ನೇತಿ । ಆತ್ಮಾಽಗೃಹ್ಯೋ ನ ಹಿ ಗೃಹ್ಯತೇ । ಅಶೀರ್ಯೋ ನ ಹಿ ಶೀರ್ಯತೇ । ಅಸಂಗೋ ನ ಹಿ ಸಜ್ಜತೇ । ಅಸಿತೋ ನ ವ್ಯಥತೇ । ನ ರಿಷ್ಯತಿ।** *–ಬೃಹದಾರಣ್ಯಕೋಪನಿಷತ್ ಅಧ್ಯಾಯ ೪. ಶಾರೀರ ಬ್ರಾಹ್ಮಣ ಎಂಬ ಹೆಸರಿನ ಌನೆಯ ಬ್ರಾಹ್ಮಣ.* (ಇದು ಶ್ರೀ ಪೂರ್ಣಪ್ರಜ್ಞ ವಿದ್ಯಾಪೀಠದಿಂದ ಪ್ರಕಾಶಿತವಾದ *ಸರ್ವಮೂಲಗ್ರಂಥಗಳು, ಉಪನಿಷತ್ಪ್ರಸ್ಥಾನ ಸಂಪುಟ–೪* ರಲ್ಲಿಯ ಪಾಠದಂತೆ ೧೯೯೧ ನೆಯ ಇಸ್ವಿಯಲ್ಲಿ ಪ್ರಕಾಶಿತವಾದ ಪ್ರತಿಯಲ್ಲಿ ೫೨೩ನೆಯ ಪೇಜಿನಲ್ಲಿ. ಆದರೆ ಶ್ರೀ ಹೃಷೀಕೇಶತೀರ್ಥರ ಪಾಠವೆಂದು ಅಖಿಲಭಾರತ ಮಾಧ್ವಮಹಾಮಂಡಲದಿಂದ *ಸರ್ವಮೂಲಗ್ರಂಥಾ:* ಎಂಬ ಸಂಸ್ಕೃತ ಗ್ರಂಥ ಸಂಪುಟ ೧ ರಲ್ಲಿಯ ಬೃಹದಾರಣ್ಯಕ-ಭಾಷ್ಯದ ಪಾಠದಲ್ಲಿ ಈ ಭಾಗವು ಅಧ್ಯಾಯ ೬ ಶಾರೀರ ಬ್ರಾಹ್ಮಣದಲ್ಲಿ ೨೨ನೆಯ ಋಕ್ ಆಗಿದೆ. ಪೇಜ್ ೩೪೬–೪೭. ಈ ಪ್ರತಿಯಲ್ಲಿ ಈ ಉಪನಿಷತ್ತಿನಲ್ಲಿ ೮ ಅಧ್ಯಾಯಗಳಿವೆ ಎಂದು ಪ್ರಕಾಶಿತವಾಗಿದೆ. ಆದರೆ ಮೇಲೆ ಸೂಚಿಸಿದ ಕನ್ನಡ ಸರ್ವಮೂಲದಲ್ಲಿ ಆರು ಅಧ್ಯಾಯಗಳ ಭಾಷ್ಯ ಮಾತ್ರ ಪ್ರಕಾಶಿತವಾಗಿದೆ.)

Rarest Archiver

ಶ್ರೀಮದಾಚಾರ್ಯರು ಭೇದವು ಧರ್ಮಿಸ್ವರೂಪವಾಗಿದೆಯೆಂಬುದನ್ನು ಯುಕ್ತಿಗಳ ಸಹಿತವಾಗಿ ವಿವರಿಸಿ ಅದರ ಮೇಲೆ ಬರುವ ವಿರೋಧಗಳನ್ನು ಪರಿಹರಿಸುತ್ತ ಪರಮಾತ್ಮನು ಸರ್ವವಿಲಕ್ಷಣನಾಗಿದ್ದಾನೆ ಎಂಬುದನ್ನು ತಿಳಿಸಲು ಈ ಉಪನಿಷ-ದ್ವಾಕ್ಯವನ್ನು ಉದಾಹರಿಸಿದ್ದಾರೆ.

ಜನಕರಾಜನು ಯಾಜ್ಞವಲ್ಕ್ಯರಲ್ಲಿ ಶಿಷ್ಯವೃತ್ತಿಯನ್ನು ಹೊಂದಿ ಅವರಿಂದ ಪಡೆದ ಉಪದೇಶದ ಭಾಗದಲ್ಲಿ ಈ ವಾಕ್ಯವು ಬರುತ್ತದೆ. ಪರಮಾತ್ಮನೇ ಜೀವನ ಅವಸ್ಥಾತ್ರಯ ನಿಯಾಮಕನು, ಮುಕ್ತರನ್ನೂ ಅವನೇ ನಿಯಮನ ಮಾಡುವನು. ಜೀವ ಪರಮಾತ್ಮಭೇದ ನಿತ್ಯ, ಈ ಭೇದ ಸತ್ಯ ಎಂಬೀ ಮೊದಲಾದ ಮೂಲಭೂತವಾದ ತತ್ತ್ವಗಳನ್ನು ಯಾಜ್ಞವಲ್ಕರು ಜನಕರಾಜನಿಗೆ ಉಪದೇಶಿಸಿದ್ದಾರೆ. ಈ ಸಂದರ್ಭದಲ್ಲಿ ಬರುವ ಈ ಉಪನಿಷದ್ವಾಕ್ಯದಲ್ಲಿ ಸನ್ಯಾಸಿಗಳು ಭಗವಂತನನ್ನೇ ಆಶ್ರಯಿಸುವ ಗುರಿಯನ್ನು ಹೊಂದಿದವರಾಗಿ ಅವನು ಸರ್ವವಿಲಕ್ಷಣನು ಸರ್ವೋತ್ತಮನೂ ಆಗಿದ್ದಾನೆಂಬುದನ್ನು ಖಚಿತವಾಗಿ ತಿಳಿದುಕೊಳ್ಳಬೇಕು ಎಂಬ ಉಪದೇಶವಿದೆ. ಈ ವಾಕ್ಯ ಬರುವ ಸಂಪೂರ್ಣ ಭಾಗವು ಇಂತಿದೆ –

**'ಏತಮೇವ ಪ್ರವ್ರಾಜಿನೋ ಲೋಕಮಿಚ್ಛಂತಃ ಪ್ರವ್ರಜಂತಿ ।**
**ಏತದ್ಧಸ್ಮ ವೈ ಪೂರ್ವೇ ವಿದ್ವಾಂಸಃ ಪ್ರಜಾಂ ನ ಕಾಮಯಂತೇ ।**
**ಕಿಂ ಪ್ರಜಯಾ ಕರಿಷ್ಯಾಮೋ ಯೇಷಾಂ ನೋಽಯಮಾತ್ಮಾಯಂ ಲೋಕ ಇತಿ ।ತೇ ಹ ಸ್ಮ ಪುತ್ರೈಷಣಾಯಾಶ್ಚ ವಿತ್ತೈಷಣಾಯಾಶ್ಚ ಲೋಕೈಷಣಾಯಾಶ್ಚ ವ್ಯುತ್ಥಾಯಾಥ ಭಿಕ್ಷಾಚರ್ಯಂ ಚರಂತಿ । ಯಾಹ್ಯೇವ ಪುತ್ರೈಷಣಾ ಸಾ ವಿತ್ತೈಷಣಾ । ಯಾ ವಿತ್ತೈಷಣಾ ಸಾ ಲೋಕೈಷಣಾ । ಉಭೇ ಹ್ಯೇತೇ ಏಷಣೇ ಏವ ಭವತಃ । ಸ ಏಷ ನೇತಿ । ನೇತಿ । ಆತ್ಮಾಽಗೃಹ್ಯೋ ನ ಹಿ ಗೃಹ್ಯತೇ। ಅಶೀರ್ಯೋ ನ ಹಿ ಶೀರ್ಯತೇ। ಅಸಂಗೋ ನ ಹಿ ಸಜ್ಜತೇ । ಅಸಿತೋ ನ ವ್ಯಥತೇ । ನ ರಿಷ್ಯತಿ ।'**

*– ಬೃಹದಾರಣ್ಯಕೋಪನಿಷತ್ ೪. ೪. ೪.*

**ಭಾವಾರ್ಥ :–** ಈ ಪರಮಾತ್ಮನ ಆಶ್ರಯವನ್ನೇ ಪಡೆಯುವ ಇಚ್ಛೆಯುಳ್ಳ ವಿರಕ್ತರು ಸನ್ಯಾಸಿಗಳಾಗುತ್ತಾರೆ. ಪರಮಾತ್ಮನೇ ಸರ್ವೋತ್ತಮನು, ಅವನೇ ಎಲ್ಲರಿಗೂ ಆಶ್ರಯ-ಪ್ರದನು ಎಂಬ ನಿಶ್ಚಯ ಹೊಂದಿದ ಅವರು ಉಳಿದ ಯಾವ ವಿಷಯಗಳ ಬಗೆಗೂ ಇಚ್ಛೆಯುಳ್ಳವರಾಗುವದಿಲ್ಲ. ಪರಮಾತ್ಮನ ಆಶ್ರಯವಿರುವಾಗ ಉಳಿದ ವಿಷಯಗಳು ನಮಗೇಕೆ ಎಂದು ಅವರು ವಿಚಾರಿಸಿಯೇ ಸನ್ಯಾಸಿಗಳಾಗುತ್ತಾರೆ. ಮಕ್ಕಳ ಬಗ್ಯೆ ಮಮತೆ, ಭೌತಿಕ ಸಂಪತ್ತಿನ ಬಗ್ಯೆ ಲಾಲಸೆ, ಜಗತ್ತು ಬಂಧು ಬಾಂಧವರ ಬಗ್ಯೆ ಮಮಕಾರಗಳನ್ನು

Rarest Archiver

ತೊರೆದು ಭಿಕ್ಷಾಟನೆ ಮಾಡುತ್ತ ಪರಮಾತ್ಮನಲ್ಲಿಯೇ ಅಸಕ್ತರಾಗಿರುತ್ತಾರೆ. ಯಾವುದು ಪುತ್ರೈಷಣವೋ ಅದೇ ವಿತ್ತೈಷಣವು. ಯಾವುದು ವಿತ್ತೈಷಣವೋ ಅದೇ ಲೋಕೈಷಣವು. ಅಂದರೆ ಈ ಲಾಲಸೆಗಳು ಪರಸ್ಪರ ಪೂರಕವಾಗಿ ಮನುಷ್ಯನನ್ನು ಪರಮಾತ್ಮನ ಚಿಂತನದಿಂದ ದೂರ ಮಾಡುತ್ತವೆ. ಇವೆರಡು ಏಷಣಗಳು ದುಃಖಕ್ಕೇ ಕಾರಣವಾಗುವವು. ಆದರೆ ಪರಮಾತ್ಮನು ಹಾಗಲ್ಲ. ಹಾಗಲ್ಲವೇ ಅಲ್ಲ. ಅವನು ಶ್ರೀದೇವಿಯಂತೆಯಾಗಲಿ ಬ್ರಹ್ಮಾದಿ ದೇವತೆಗಳಂತೆಯಾಗಲಿ ಅಲ್ಲ. (ಅವ್ಯಕ್ತಾಸಕ್ತ ಚೇತಸರಿಗೆ ದುಃಖವೇ ಬರುವದೆಂಬುದು ಗೀತೆಯಲ್ಲಿ ತಿಳಿಸಲ್ಪಟ್ಟಿದೆ). ಇಂಥ ಪರಮಾತ್ಮನು ನಮ್ಮ ತಿಳುವಳಿಕೆಗೆ ಮೀರಿ ಇದ್ದ ಮಹಾಮಹಿಮನು, ಯಾರೂ ಅವನನ್ನು ಸಾಕಲ್ಯೇನ ತಿಳಿಯಲಾರರು. ಅವನು ಅಜರಾಮರನು. ಅವನು ಕಾಲ ಕಳೆದಂತೆ ಬಲಗುಂದುವುದಿಲ್ಲ. ಅವನಿಗೆ ಯಾವುದೇ ಪ್ರಕಾರದ ಹಿಂಸೆಯಾಗುವದು ಎಂಬುದಕ್ಕೆ ಯಾವ ಪ್ರಮಾಣವೂ ಇಲ್ಲ. ಕಾರಣ ಅವನು ಅಚ್ಯುತನು, ನಿತ್ಯನು. ಪ್ರಪಂಚದ ಜತೆಗೆ ಸಂಬಂಧ, ದೋಷಗಳ ಲೇಪವುಳ್ಳವನು ಪರಮಾತ್ಮ ಎಂಬುದಕ್ಕೆ ಯಾವ ಪ್ರಮಾಣವೂ ಇಲ್ಲ. ಅವನಿಗೆ ಯಾವ ಬಂಧವೂ ಇಲ್ಲ. ಯಾವ ಪ್ರಕಾರದ ನಾಶವೂ ಇಲ್ಲ.

**ವಿಶೇಷ ವಿಷಯಗಳು :–** ಪರಮಾತ್ಮನು ಲೌಕಿಕ ಪ್ರಪಂಚ ಹಾಗೂ ದೇವತೆಗಳಿಗಿಂತ ಹೇಗೆ ಭಿನ್ನನು, ಹಾಗೂ ಉತ್ತಮನು ಎಂಬುದಕ್ಕೆ ಇದು ಸ್ಪಷ್ಟವಾದ ಪ್ರಮಾಣವು. ಪರಬ್ರಹ್ಮನು ಸರ್ವಪದಾರ್ಥಗಳಿಂದಲೂ ವ್ಯಾವೃತ್ತನಾಗಿದ್ದಾನೆ ಎಂಬುದಕ್ಕೆ ಅದ್ವೈತಿಗಳೂ ಕೂಡ **'ನೇತಿ ನೇತಿ'** ಎಂಬ ವಾಕ್ಯವನ್ನೇ ಉದಾಹರಿಸುತ್ತಾರೆ.

ಈ ಶ್ರುತಿಯಲ್ಲಿ ಪರಮಾತ್ಮನು ಸರ್ವವಿಲಕ್ಷಣನು ಎಂಬುದನ್ನು ಪ್ರತಿಪಾದಿಸಿ ಜೀವೇಶ ಭೇದ, ಜಡೇಶಭೇದಗಳನ್ನೂ, (ವಿತ್ತ ಪುತ್ರ, ಲೋಕ, ಎಂದು ಪ್ರತ್ಯೇಕವಾಗಿ ಹೇಳುವ ಮೂಲಕ) ಜೀವ ಜಡ ಭೇದ, ಜೀವ ಜೀವ ಭೇದ, ಜಡಜಡ ಭೇದಗಳನ್ನೂ ಹೇಳಿದಂತೆ ಆಗಿದೆ.

ಇನ್ನು, ಶ್ರುತಿವಾಕ್ಯದಲ್ಲಿ **ಏಷಃ** ಎಂಬುದು ಪರಮಾತ್ಮನನ್ನೇ ಬೋಧಿಸುತ್ತದೆ–ಯೆಂಬುದಕ್ಕೆ ಅಲ್ಲಿಯ ಆತ್ಮ ಶಬ್ದ ಪ್ರಯೋಗವೇ ಆಧಾರ. ಆತ್ಮನೆಂದರೆ ಸರ್ವತ್ರ–ವ್ಯಾಪ್ತನೂ ಸರ್ವಜ್ಞನೂ ಆದ ಪರಮಾತ್ಮನು ಎಂಬ ಬಗ್ಗೆ ವಿವಾದವಿಲ್ಲ. ನೇತಿ ನೇತಿ ಎಂದು ಎರಡು ಸಲ ಹೇಳಿದುದರಿಂದ ಪುನರುಕ್ತಿ ದೋಷ ಬರುವುದಲ್ಲ ಎಂದರೆ ***ಸರ್ವ***ವೈಲಕ್ಷಣ್ಯವನ್ನು ಹೇಳಲು ಹೀಗೆ ಎರಡು ಸಲ ಹೇಳಿದ್ದು ಎಂದು ತಿಳಿಯಬೇಕು. ಇಲ್ಲಿ ಪ್ರಯೋಗಿಸಲ್ಪಟ್ಟ ಆತ್ಮ ಶಬ್ದದಿಂದ ಪ್ರತಿಪಾದ್ಯವಾದ ಬ್ರಹ್ಮ ಹಾಗೂ ನೇತಿ ನೇತಿ ಎಂದು ಸರ್ವವಿಲಕ್ಷಣನಾದವನು ಎಂದು ಹೇಳಲ್ಪಟ್ಟವನಲ್ಲಿ

Rarest Archiver

ಭೇದವನ್ನಾಗಲಿ ಭೇದಾಭೇದವನ್ನಾಗಲಿ ಕಲ್ಪನೆ ಮಾಡಬಾರದು. ಹಾಗೆ ಮಾಡಿದಾಗ ಅಖಂಡ ವಾಕ್ಯಾರ್ಥವು ಬರಲಾರದು. **ಅಭೇದೇ ಭೇದವ್ಯವಹಾರಃ ವಿಶೇಷಬಲಾತ್** ಎಂಬ ಉಕ್ತಿಯಂತೆ ಆತ್ಮಪದವಾಚ್ಯನಾದವನು ಹಾಗೂ ಸರ್ವವೈಲಕ್ಷಣ್ಯಾರ್ಥಕ ನೇತಿ ನೇತಿ ಎಂದು ಹೇಳಲ್ಪಟ್ಟವನಲ್ಲಿ **'ನೇಹ ನಾನಾಸ್ತಿ ಕಿಂಚನ'** (ಈ ಪರಮಾತ್ಮನಲ್ಲಿ ಭೇದವಿಲ್ಲ; ಅವನು ಸ್ವಗತ ಭೇದ ವಿವರ್ಜಿತನು) ಎಂಬಲ್ಲಿಯಂತೆ ವಿಶೇಷದ ಬಲದಿಂದ ಅಭೇದವನ್ನೇ ಹೇಳಬೇಕು. ವಿಶೇಷದ ಬಲದಿಂದ ಅಭೇದದಲ್ಲಿ ಭೇದ ವ್ಯವಹಾರವು ಎಂದು ಹೇಳಿದಂತಾಯಿತು.

ಅಂತು ಈ ಶ್ರುತಿಯ ಭಾವವು **ಶ್ರುತ್ಯರ್ಥಷಟ್ಪದಿ**ಯಲ್ಲಿ ಇಂತಿದೆ. :–

*ಪರಮ ಪುರುಷನ ನಂಬಿದಾತನು*
*ಸರುವ ತೊರೆವನು ವಿತ್ತ, ಲೋಕವ;*
*ಸಿರಿಯು ಬೊಮ್ಮರು ಹರಿಗದೆಂದಿಗು ಸಮರು ತಾನಿಹರೆ ?*
*ಹರಿಯು ತಿಳಿವಿಗೆ ನಿಲುಕದಾತನು;*
*ನರರ ಗುಣಗಳು ಹರಿಯ ಸೋಂಕವು;*
*ಪರಮ ಪುರುಷನು ಹರಿಯೆ ಎಂಬುದ ವೇದ ಸಾರುತಿದೆ ॥*

**೧೬. ಆತತ್ವಮಸಿ :–**

ಐಕ್ಯವು ಆಗಮದಿಂದ ಸಿದ್ಧವಾಗುವುದಿಲ್ಲವೆಂದಿಷ್ಟೇ ಅಲ್ಲ, ಅದು ಆಗಮಕ್ಕೆ ವಿರುದ್ಧವೂ ಆಗಿದೆಯೆಂಬುದನ್ನು ತಿಳಿಸಲು ***ಛಾಂದೋಗ್ಯೋಪನಿಷತ್ತಿನಲ್ಲಿ***ಯ ವಾಕ್ಯವನ್ನು ಶ್ರೀಮದಾಚಾರ್ಯರು ಉದಾಹರಿಸುತ್ತಾರೆ. ಈ ಉಪನಿಷತ್ತಿನ ವಿವಿಧ ಪಾಠಾಂತರಗಳಿವೆ. ವಿವಿಧ ಪಾಠಗಳಲ್ಲಿ ಬೇರೆ ಬೇರೆ ಭಾಗಗಳಲ್ಲಿ ಈ ವಾಕ್ಯವು ಕಂಡುಬರುವುದು.

ಈ ಉಪನಿಷತ್ತಿನಲ್ಲಿ ಒಟ್ಟು ಎಂಟು ಅಧ್ಯಾಯಗಳು (ಪ್ರಪಾಠಕಗಳು) ಇದ್ದು ಒಟ್ಟು ೧೫೪ ಖಂಡಗಳೂ ೬೫೪ ಭಾಗಗಳೂ ಇವೆ.

ಒಂದು ಪಾಠಾಂತರದ ಪ್ರಕಾರ ಮೊಟ್ಟಮೊದಲಿಗೆ ಇದು ಈ ಉಪನಿಷತ್ತಿನ ೬ ನೆಯ ಅಧ್ಯಾಯದ ಎಂಟನೆಯ ಖಂಡದಲ್ಲಿಯ ಏಳನೆಯ ಭಾಗದಲ್ಲಿ ಬರುವ ವಾಕ್ಯವಾಗಿದೆ. ಇದೇ ಖಂಡದಲ್ಲಿ ೨ ನೆಯ ಭಾಗದಿಂದ ೧೬ ನೆಯ ಭಾಗದ ವರೆಗೆ ಅಂದರೆ ಒಟ್ಟು ಒಂಬತ್ತು ಸಲ ಈ ವಾಕ್ಯ ಪಠಿತವಾಗಿದೆ. ವಾಕ್ಯದ **ಪೂರ್ತಿ ಪಾಠವು** ಹೀಗಿದೆ :–***ಸ ಯ ಏಷೋ ಅಣಿಮಾ ಐತದಾತ್ಮ್ಯಮಿದಂ ಸರ್ವಂ ತತ್ಸತ್ಯಂ ಸ ಆತ್ಮಾ ತತ್ವಮಸಿ ಶ್ವೇತಕೇತೋ ॥***

Rarest Archiver

ಛಾಂದೋಗ್ಯೋಪನಿಷತ್ತಿನ ೬ ನೆಯ ಅಧ್ಯಾಯದ ಮೂರನೆಯ ಖಂಡದಲ್ಲಿ ಶ್ವೇತಕೇತು ಉದ್ದಾಲಕರ ಸಂವಾದದಲ್ಲಿ ಉದ್ದಾಲಕರು ಹೇಳಿದ ಮಾತಿನಲ್ಲಿ ೫ ನೆಯ, ೭ ನೆಯ, ೯ ನೆಯ, ೧೧ ನೆಯ, ೧೨ ನೆಯ, ೧೩ ನೆಯ, ೧೪ ನೆಯ, ೧೫ನೆಯ ಹಾಗೂ ೧೬ ನೆಯ ಶ್ಲೋಕಗಳಲ್ಲಿ ಬರುವ ವಾಕ್ಯವಿದು. ಅಂತು ೯ ಸಲ ಈ ವಾಕ್ಯವು ಹೇಳಲ್ಪಟ್ಟಿದೆ.

ಉಪನಿಷತ್ತಿನಲ್ಲಿ ವಾಕ್ಯವು **'ಸ ಆತ್ಮಾತತ್ವಮಸಿ'** ಎಂದು ಇದ್ದು ಶ್ರೀಮದಾಚಾರ್ಯರು ಪ್ರಕರಣ – ಸಂದರ್ಭವನ್ನನುಲಕ್ಷಿಸಿ **'ಸ ಆತ್ಮಾ ಅತತ್ವಮಸಿ'** ಎಂದು ಸವರ್ಣ ದೀರ್ಘ ಸಂಧಿ ವಿಗ್ರಹ ಮಾಡಿ ಅದರ ಅರ್ಥ ತಿಳಿಸಿದ್ದಾರೆ. ಇದಕ್ಕೆ ಸಂದರ್ಭ ಕೆಳಗಿನಂತಿದೆ.

**ಉಪನಿಷತ್ತಿನಲ್ಲಿ ಈ ಶ್ರುತಿವಾಕ್ಯಕ್ಕಿರುವ ಸಂದರ್ಭ:–** ಇದು ಶ್ವೇತಕೇತು ಹಾಗೂ ತಂದೆ ಉದ್ದಾಲಕರ ನಡುವಿನ ಸಂವಾದದಲ್ಲಿ ಬರುವ ವಾಕ್ಯವಾಗಿದೆ. ಶ್ವೇತಕೇತು ಎಂಬ ಬಾಲಕನು ಅರುಣನ ಮೊಮ್ಮಗನೂ ಉದ್ದಾಲಕನ ಮಗನೂ ಆಗಿದ್ದನು. ಇದಕ್ಕೆ **ಪ್ರಕರಣ ( ಸಂದರ್ಭ ) ಹೀಗಿದೆ.** ತಂದೆ ಉದ್ದಾಲಕರು ಒಂದು ಸಲ ಶ್ವೇತಕೇತುವನ್ನು ಕುರಿತು ಹೀಗೆ ಹೇಳುತ್ತಾರೆ. 'ಮಗನೆ, ನೀನಿನ್ನು ಗುರುಕುಲಕ್ಕೆ ಹೋಗಿ ವೇದಾಧ್ಯಯನ ಮಾಡಬೇಕು. ನಮ್ಮ ಮನೆಯಲ್ಲಿ ಹುಟ್ಟಿದವರಾರೂ ವೇದಾಧ್ಯಯನ ಮಾಡದೆ ಕೇವಲ ಹುಟ್ಟಿನಿಂದ ಬ್ರಾಹ್ಮಣನೆಂದೆನಿಸಿಕೊಂಡು ಬ್ರಾಹ್ಮಣಾಧಮರಾಗಿಲ್ಲ. ಕಾರಣ ನೀನೂ ಓದಬೇಕು' ಎಂದು ಹೇಳಿದಾಗ ಶ್ವೇತಕೇತುವು ಹನ್ನೆರಡು ವರ್ಷದವನಿದ್ದಾಗ ಗುರುಕುಲಕ್ಕೆ ತೆರಳಿ ೧೨ ವರ್ಷ ವೇದಾಧ್ಯಯನ ಮಾಡಿದನು. ಅವನು ೨೪ ವರ್ಷದವನಾದಾಗ ತಾನು ಸಾಂಗವಾಗಿ ಎಲ್ಲ ವೇದಾಧ್ಯಯನ ಮಾಡಿದವನು ತಾನು ದೊಡ್ಡವನು ಎಂಬ ಅಭಿಮಾನವುಳ್ಳವನಾದನು. ಹಾಗೂ ಅಹಂಕಾರಿಯಾದ ಅವನು ಅವಿನೀತ ಸ್ತಬ್ಧನಾಗಿಯೇ ('ಗುಮ್ಮನಗುಸುಗನಾಗಿಯೇ') ಇದ್ದು ಮೊದಲಿನಂತೆ ಎಲ್ಲರಡೊನೆ ಸರಳ ವರ್ತನೆ ಮಾಡುತ್ತಿರಲಿಲ್ಲ. ಹೀಗಾಗಿ ಅವನು ಏನೂ ಮಾತನಾಡದೆ ಬಿಂಕದಿಂದ ಇದ್ದಾಗ ಚಿಂತೆಗೊಳಗಾದ ತಂದೆ ಉದ್ದಾಲಕರು ಅವನಿಗೆ *ಉಪಾಯದಿಂದ* ನೀನು ಸರ್ವಜ್ಞನಾಗಲಾರೆ, ಪರಮಾತ್ಮನೇ ಸರ್ವಜ್ಞ, ಸರ್ವಶಕ್ತ, ಸರ್ವನಿಯಾಮಕ, ನೀನು ವಿನೀತನಾಗಿ ಇರಬೇಕು ಇತ್ಯಾದಿ ಹೇಳಲು ಒಂಬತ್ತು ದೃಷ್ಟಾಂತಗಳನ್ನು ಕೊಟ್ಟು ಜೀವ ಪರಮಾತ್ಮರಲ್ಲಿ ಅಭೇದವಿರಲಾರದು, ಭೇದವಿದೆ, ಕಾರಣ ನೀನೇ ಸರ್ವಜ್ಞನೆಂದು ತಿಳಿಯಬಾರದು, ವಿದ್ಯಾ ವಿನಯೇನ ಶೋಭತೆ, ವಿನಯವಿದ್ದಾಗಲೇ ವಿದ್ಯೆಗೆ ಶೋಭೆ, ಅಹಂಕಾರದಿಂದ ವಿದ್ಯಾವಂತನಿಗೆ ಗೌರವವು ನಶಿಸುವದು, ಅವನ ವಿದ್ಯೆಯೂ ಕುಂಠಿತವಾಗುವದು, ಎಂಬ ಅನುಸಂಧಾನದಿಂದ ಉಪದೇಶ ಮಾಡುವ

Rarest Archiver

ಸಂದರ್ಭದಲ್ಲಿ ಈ ವಾಕ್ಯ ಬಂದಿದೆ. ಇದೇ ವಾಕ್ಯ ಒಂಬತ್ತು ಸಲ ಬಂದಿರುವದರಿಂದ **ಅಭ್ಯಾಸ** ಎಂಬ ತಾತ್ಪರ್ಯನಿರ್ಣಾಯಕ ಲಿಂಗ ಸೂಚಿತವಾಗಿದೆ. ಕಾರಣ, ಈ ವಾಕ್ಯದ ಅರ್ಥವನ್ನು **ಪ್ರಕರಣ** (ಸಂದರ್ಭ) ವನ್ನು ಗಮನಿಸಿ ಮಾಡಬೇಕಾದುದು ಅವಶ್ಯವಿದೆ. ಇದೇ ಕಾರಣ ಪ್ರಕರಣವನ್ನನುಸರಿಸಿಯೇ ಈ ವಾಕ್ಯದ ಪದಗಳಿಗೆ ಅನ್ವಯ ಹಚ್ಚಬೇಕು.

**ಪದಚ್ಛೇದ :- ಸ: ಯ: ಏಷ: ಅಣಿಮಾ, ಐತದಾತ್ಮ್ಯಮ್ ಇದಮ್ ಸರ್ವಮ್ । ತತ್ ಸತ್ಯಮ್। ಸ: ಆತ್ಮಾ , ಅತತ್ ತ್ವಮ್ ಅಸಿ ಶ್ವೇತಕೇತೋ ॥**

**ಅನ್ವಯ :- ಸ: ಯ: ಏಷ: ಅಣಿಮಾ । ಇದಮ್ ಸರ್ವಮ್ ಐತದಾತ್ಮ್ಯಮ್। ತತ್ ಸತ್ಯಮ್ । ಸ: ಆತ್ಮಾ । ಶ್ವೇತಕೇತೋ , ತ್ವಮ್ ಅತತ್ ಅಸಿ ।**

**ಅರ್ಥ : –** [ಜೀವರು ಮೃತ್ಯಾದಿಯಲ್ಲಿ ವಾಗಭಿಮಾನಿ ಪಾರ್ವತೀ, ಅವಳ ದ್ವಾರಾ ಮನೋಭಿಮಾನಿ ರುದ್ರ, ಅವರ ಮುಖಾಂತರ ಪ್ರಾಣ, ಶ್ರೀ ತತ್ವ, ಆ ಮೇಲೆ ಕೊನೆಗೆ ಪರಮಾತ್ಮನನ್ನು ಹೊಂದುವರು. ಅವನ ಜೊತೆಗೆ ಐಕ್ಯವಾಗುವದಿಲ್ಲ.] ( ಇಷ್ಟು ಹಿಂದಿನ ವಾಕ್ಯದಲ್ಲಿ ಇದೆ. ಇನ್ನು ಪ್ರಸಕ್ತ ವಾಕ್ಯದ ಅರ್ಥ ) ಜೀವರು ಯಾವ ಪರಮಾತ್ಮನನ್ನು ಹೊಂದುವರೋ ಆ ಪರಮಾತ್ಮ **ಸ:** ಎಂದರೆ ಸಾರಭೂತನಾದವನು ಅಂದರೆ ಸರ್ವೋತ್ತಮನು, ಅವನು **ಯ:** ಅಂದರೆ ನಿಯಾಮಕನು, ಅವನು **ಅಣಿಮಾ** ಎಂದರೆ ಸೂಕ್ಷ್ಮ ಜ್ಞಾನದಿಂದ ತಿಳಿಯಲ್ಪಡುವವನು, **ಇದಮ್ ಸರ್ವಮ್** ಎಂದರೆ ಈ ಜಗತ್ತೆಲ್ಲ, **ಐತದಾತ್ಮ್ಯಮ್** ಅಂದರೆ ಇಂಥ ಪರಮಾತ್ಮನ ಅಧೀನದಲ್ಲಿದೆ, **ತತ್** ಈ ಪರಮಾತ್ಮನು **ಸತ್ಯಮ್** ಪೂರ್ಣಾನಂದಸ್ವರೂಪನಾಗಿದ್ದಾನೆ. **ಸ: ಆತ್ಮಾ** ಎಂದರೆ ಇಂಥ ಪರಮಾತ್ಮನು ಪೂರ್ಣಗುಣನು. ಎಲೈ, ಶ್ವೇತಕೇತುವೇ, **ತ್ವಮ್ (ಸತ್ಯಮ್) ಅತದ್ ಅಸಿ** ನೀನು ನಿಜವಾಗಿಯೂ ಅದಲ್ಲ ಎಂದರೆ ಆ ಪರಮಾತ್ಮನಲ್ಲ. ಕಾರಣ ನೀನು ಹೀಗೆ ಅಹಂಕಾರಿಯಾಗಬಾರದು. ಹೀಗೆ ತಂದೆಗಳಾದ ಉದ್ದಾಲಕರು ಶ್ವೇತಕೇತುವನ್ನು ಕುರಿತು ಹೇಳಿದರು.

**ವಿಶೇಷ ವಿಷಯಗಳು : ಸ ಆತ್ಮಾತತ್ವಮಸಿ** ಎಂಬ ವಾಕ್ಯದಲ್ಲಿ ಪದಚ್ಛೇದವನ್ನು ಶ್ರೀಮದಾಚಾರ್ಯರು ಪ್ರಕರಣಕ್ಕನುಗುಣವಾಗಿ ಒಂದು ವಿಶಿಷ್ಟರೀತಿಯಿಂದ (ಅಂದರೆ ಸವರ್ಣ ದೀರ್ಘ ಸಂಧಿ ಮಾಡಿ) ಮಾಡಿ ಅರ್ಥ ಹೇಳಿದ್ದಾರೆ ಎಂಬುದನ್ನು ಗಮನಿಸ-ಬೇಕು. ಅದ್ವೈತಿಗಳು ಈ ವಾಕ್ಯವನ್ನು ಜೀವ ಬ್ರಹ್ಮರಲ್ಲಿ ಐಕ್ಯವನ್ನು ಹೇಳುವ ಶ್ರುತಿ ಪ್ರಮಾಣವೆಂದು ಗ್ರಹಿಸಿದ್ದಾರೆ. ಅವರು ಇಲ್ಲಿ ಪದಚ್ಛೇದವನ್ನು ಸ: ಆತ್ಮಾ ತತ್ ತ್ವಮ್ ಅಸಿ ಎಂದು (ಆತ್ಮಾ ಅತತ್ ಎಂದು ಸವರ್ಣ ದೀರ್ಘ ಸಂಧಿ ವಿಗ್ರಹ ಮಾಡದೆ) ಮಾಡಿ ಅದಕ್ಕೆ ನೀನು ಆ ಬ್ರಹ್ಮನಾಗಿರುವಿ ಎಂದು ಅರ್ಥ ಮಾಡಿದ್ದಾರೆ. ಆದರೆ ಶ್ರೀಮದಾಚಾರ್ಯರು ಸ: ಆತ್ಮಾ **ಅತತ್** ತ್ವಂ ಅಸಿ ಎಂದು ವಿಗ್ರಹ ಮಾಡಿ

Rarest Archiver

ಅವನು ಸರ್ವಗುಣಪರಿಪೂರ್ಣನೂ ನಿತ್ಯನೂ ಹಾಗೂ ಸರ್ವತ್ರ ವ್ಯಾಪ್ತನೂ ಆದ ಪರಮಾತ್ಮನಾಗಿದ್ದಾನೆ, ನೀನು ಅವನಾಗಿಲ್ಲ, ನೀನು ಅವನಿಗಿಂತ ಭಿನ್ನನಾಗಿರುವಿ, (ಅವನ ಅಧೀನನಾಗಿರುವಿ) ಎಂದು ಅರ್ಥ ಮಾಡಿ ಅಲ್ಲಿಯ ಸಂದರ್ಭಕ್ಕನುಗುಣವಾಗಿ ಈ ರೀತಿ ಪದಚ್ಛೇದ ಹಾಗೂ ಅರ್ಥ ಹೇಳುವದು ಹೇಗೆ ಸಮರ್ಪಕವೆಂದು ತೋರಿಸಿದ್ದಾರೆ. ಯಾವ ತಂದೆಯು ಹನ್ನೆರಡು ವರ್ಷ ಗುರುಕುಲವಾಸ ಮಾಡಿ ಬಂದ ಮೇಲೆ ತಾನೇ ಸರ್ವಜ್ಞನಾಗಿದ್ದೇನೆ ಎಂದು ಜಂಭದಿಂದ ಅವಿನೀತನೂ ಅಹಂಕಾರಿಯೂ ಆದ ಮಗನಿಗೆ ನೀನು ದೇವರೇ ಆಗಿರುವಿ, ನೀನೇ ಸರ್ವಜ್ಞ, ನಿನಗೆ ದೇವರಿಗೆ ಭೇದವಿಲ್ಲ, ಎಂದು ಹೇಳಲು ಸಾಧ್ಯ? ನೀನು ವಿನಯಶೀಲನಾಗಬೇಕು, ನೀನೇ ದೇವರಲ್ಲ, ನೀನು ಸರ್ವಜ್ಞನಲ್ಲ ಎಂದು ಮುಂತಾಗಿ ಹೇಳುವದು ಸಮರ್ಪಕ-ವಾಗುವದು. ಹಾಗಾದರೆ ಹಾಗೆ ಸ್ಪಷ್ಟವಾಗಿ ಅಂದರೆ ಬೇರೆ ಅರ್ಥ ಬಾರದ ರೀತಿಯಲ್ಲಿ ಏಕೆ ಹೇಳಲಿಲ್ಲ ಎಂದು ಪ್ರಶ್ನೆ ಬರುವದು ಸ್ವಾಭಾವಿಕ. ಅದಕ್ಕೆ ಉತ್ತರವಿಷ್ಟೆ; ಬಹಳ ಬಿಂಕ ಅಹಂಕಾರದಿಂದ ಇರುವ ಮಕ್ಕಳನ್ನು ಮೇಲ್ನೋಟಕ್ಕೆ ಅವರಂತೆಯೇ ಮಾತನಾಡಿ ಉಪಾಯದಿಂದ ದಾರಿಗೆ ತರಬೇಕೇ ಹೊರತು ಖಡಾಖಂಡಿಯಾಗಿ ಅವರ ಅಭಿಪ್ರಾಯಕ್ಕೆ ವಿರುದ್ಧ ಮಾತನಾಡಿದರೆ ಪ್ರಯೋಜನವಾಗುವದಿಲ್ಲ, ಹಾಗೆ ಮಾಡಿದರೆ ಮಕ್ಕಳು ಇನ್ನೂ ಹೆಚ್ಚು ಬೀಗುವ ಪ್ರವೃತ್ತಿಯನ್ನು ರೂಡಿಸಿಕೊಳ್ಳುವ ಸಂಭವವಿರುವದು. ಅಥವಾ ಹಿರಿಯರನ್ನು ಧಿಕ್ಕರಿಸಿ ಇನ್ನೂ ಹೆಚ್ಚು ಕಠೋರರಾಗುವ ಸಂಭವವಿರುವದು, ಇದು ಬಹಳಷ್ಟು ಜನರಿಗೆ ಅನುಭವಕ್ಕೆ ಬಂದ ವಿಷಯವೇ ಆಗಿದೆ. ಕಾರಣ, ಉಪಾಯದಿಂದ ಅವರಂತೆಯೇ ನಡೆದು, ಅವರಂತೆಯೇ ಮಾತನಾಡಿದಂತೆ ತೋರಿಸಿ ಅವರನ್ನು ದಾರಿಗೆ ತರುವದೇ ಯೋಗ್ಯವೆಂಬ ವ್ಯಾವಹಾರಿಕವಾದ ಸೂಕ್ಷ್ಮ ತತ್ವವನ್ನು ಆಧರಿಸಿ ತಂದೆ ಉದ್ದಾಲಕರು ಹಾಗೆ ಹೇಳಿದ್ದಾರೆ ಎಂಬುದನ್ನು ಶ್ರೀಮದಾಚಾರ್ಯರು ಸೂಚಿಸಿದ್ದಾರೆ.

ಒಂದು ಕ್ಷಣ ಏಕಾಂತದಲ್ಲಿ ಕುಳಿತು ವಿಚಾರಿಸಿದಾಗ ಬಿಂಕದ ಶ್ವೇತಕೇತುವಿ-ಗೇನೇ ತನ್ನ ತಂದೆಯ ಮಾರ್ಮಿಕ ಮಾತಿನ ಅರ್ಥವಾಗಿ ತನ್ನ ಅಹಂಕಾರ ಸರಿಯಲ್ಲ-ವೆಂಬುದು ಮನದಟ್ಟಾಗುವದು ಎಂಬ ಹಾರ್ದ ಇಲ್ಲಿದೆ. ಶ್ರುತಿರ್ಲಿಂಗಂ ಸಮಾಖ್ಯಾ ಚ ವಾಕ್ಯಂ ಪ್ರಕರಣಂ ತಥಾ... ಎಂಬ ಶ್ರೀ ವೇದವ್ಯಾಸರು ಸೂಚಿಸಿದ ತಾತ್ಪರ್ಯನಿರ್ಣಾಯಕ ಮಾರ್ಗವನ್ನು ಅವಲಂಬಿಸಿ ಪ್ರಕರಣ (ಸಂದರ್ಭ) ಕ್ಕೆ ತಕ್ಕಂತೆ ಪದಚ್ಛೇದ ಮಾಡಿ ಅರ್ಥ ಹೇಳಬೇಕೆಂಬ ತತ್ವವನ್ನು ಶ್ರೀಮದಾಚಾರ್ಯರು ಸ್ಪಷ್ಟಪಡಿಸಿದ್ದಾರೆ.

ಈ ಪ್ರಕಾರದ ಅರ್ಥ ಹೇಳಲು ಶ್ವೇತಕೇತು ಉದ್ದಾಲಕರ ನಡುವಣ ಸಂವಾದದ ವಿವಿಧ ಮೆಟ್ಟಲುಗಳು ಒಳ್ಳೆಯ ಹಿನ್ನೆಲೆಯನ್ನು ಒದಗಿಸುವವು. ಚಿಂತೆಗೀಡಾದ ತಂದೆ ಉದ್ದಾಲಕರು ಜಂಭದಿಂದ ಬೀಗುತ್ತಿರುವ ಮಗ ಉದ್ದಾಲಕನಿಗೆ ತಾವು

Rarest Archiver

ವಿಚಲಿತರಾಗದೆಯೆ ಶಾಂತವಾಗಿ ಒಂದೊಂದೇ ಪ್ರಶ್ನೆ ಕೇಳುತ್ತ ಅವನ ಒಂದೊಂದೇ ಪ್ರಶ್ನೆಗೆ ಸಮಾಧಾನದಿಂದ ಉತ್ತರ ಹೇಳುತ್ತ ಅವನ ಮನದಲ್ಲಿಯ ಅಹಂಕಾರದ ಬಿಗುವನ್ನು ಸಡಿಲಿಸಿ ಅವನನ್ನು ವಾಸ್ತವಿಕತೆಯ ಕಡೆಗೆ ಕರೆದೊಯ್ಯಲು ಪ್ರಯತ್ನಿಸುತ್ತಾರೆ. ಗುರುಕುಲದಿಂದ ಬಂದು ತಾನು ಸರ್ವಜ್ಞನಾಗಿರುವೆ ಎಂದು ಅಹಂಕಾರಿಯಾಗಿ ಕುಳಿತ ಮಗನಿಗೆ ತಂದೆ ಉದ್ದಾಲಕರು ಮೊಟ್ಟ ಮೊದಲು ಒಂದು ಮಾರ್ಮಿಕವಾದ ಪ್ರಶ್ನೆ ಕೇಳಿದರು. ' ಮಗನೆ, ಯಾವನನ್ನು ತಿಳಿದುಕೊಂಡರೆ ಎಲ್ಲವನ್ನೂ ತಿಳಿದಂತಾಗುವದೋ ಅಂಥದರ ಬಗ್ಗೆ ತಿಳಿದುಕೊಂಡಿರುವಿಯಾ?' ಹೀಗೆ ಕೇಳಿದಾಗ ಶ್ವೇತಕೇತುವು ತಂದೆಗೇ ಮರುಪ್ರಶ್ನೆ ಹಾಕಿದನು. 'ತಂದೆಗಳೇ, ಒಂದು ವಿಷಯದ ಜ್ಞಾನವಾದರೆ ಎಲ್ಲ ವಿಷಯದ ಜ್ಞಾನವಾಗುವದೆಂಬುದು ಹೇಗೆ ಕೂಡುವದು?' ಹೀಗೆ ಪ್ರಶ್ನೆಮಾಡಿದಾಗ ತಂದೆ ಉದ್ದಾಲಕರು ಅನೇಕ ಲೌಕಿಕ ದೃಷ್ಟಾಂತ ಹೇಳಿ ಅವನಿಗೆ ಈ ವಿಷಯ ಮನವರಿಕೆ ಮಾಡಿಕೊಡುವರು. ಒಂದು ಮಣ್ಣಿನ ಹೆಂಟೆಯ ಗುಣಧರ್ಮಗಳನ್ನು ತಿಳಿದುಕೊಂಡಾಗ ಅದರಿಂದ ಮಾಡಲ್ಪಟ್ಟ ಘಟಾದಿಗಳು ಆ ಮಣ್ಣಿನ ವಿಕಾರವೆಂದೇ ತಿಳಿಯುವಂತೆ, ಧಾತುಗಳಲ್ಲಿ ಶ್ರೇಷ್ಠ ಬಂಗಾರವನ್ನು ಧಾತುವೆಂದು ತಿಳಿದಾಗ ಉಳಿದ ಧಾತುಗಳೂ ತತ್ಸದೃಶ*ವೆಂದು ಹೇಗೆ ತಿಳಿಯುವವೋ, ಒಂದು ಲೋಹದ ಬಗ್ಗೆ ತಿಳಿದಾಗ ಅದರಂಥ ಲೋಹದಿಂದ ಮಾಡಲ್ಪಟ್ಟ ಚಾಕು, ಚೂರಿ, ಕತ್ತರಿ ಮುಂತಾದವುಗಳಲ್ಲಿ ಆ ಧಾತು ಇರುವುದೆಂದು ತಿಳಿಯುವಂತೆ, ಪ್ರಧಾನವಾದ ವಸ್ತುವು ತಿಳಿದರೆ ಅಪ್ರಧಾನವಾದ ವಸ್ತುಗಳೆಲ್ಲ ತಿಳಿದಂತೆಯೇ ಸರಿ. ಎಂದು ತಿಳಿಸುವರು. ಇದರ ಮೇಲೆ ಶ್ವೇತಕೇತು ಪುನಃ ಪ್ರಶ್ನಿಸುವನು. 'ಪರಮಾತ್ಮನೇ ಪ್ರಧಾನ, ಜಗತ್ತೆಲ್ಲ ಅಪ್ರಧಾನ ಎಂದು ಯಾಕೆ ಹೇಳಬೇಕು?' ಆಗ ತಂದೆಗಳು ಜಗತ್ತಿನ ಸೃಷ್ಟಿಗೆ ಕಾರಣನೇ ಪರಮಾತ್ಮನು. ಕಾರಣ ಅವನೇ ಪ್ರಧಾನನಾಗಿದ್ದಾನೆ ಎಂದು ತಿಳಿಸುವರು. ಸೃಷ್ಟಿಯ ವಿಸ್ತಾರವನ್ನು ತಿಳಿಸಿ ಎಲ್ಲ ಸೃಷ್ಟಿಗೆ ಆ ಪರಮಾತ್ಮನೇ ಕಾರಣನಾಗಿದ್ದಾನೆ ಎಂದು ಹೇಳುವರು. ಸೃಷ್ಟಿ ಮಾಡಿದವನು ಪ್ರಧಾನನಾಗಿರಬಹುದು. ಆದರೆ ನಿದ್ರಾದಿ ಅವಸ್ಥಾನಗಳಲ್ಲಿ ಜೀವ ಪ್ರಮಾತ್ಮನಲ್ಲಿ ಅಭೇದವಿರಬಾರದೇಕೆ ಎಂದು ಶ್ವೇತಕೇತುವಿನ ಮರುಪ್ರಶ್ನೆ. ಇದು ತಾನೇ ಎಲ್ಲ ಬಲ್ಲವನು ಎಂದು ಅಹಂಕಾರಿಯಾದವನಲ್ಲಿ ಬರುವ ಸ್ವಾಭಾವಿಕ ಪ್ರಶ್ನೆ ! ಈ ಪ್ರಶ್ನೆಗೆ ಉತ್ತರರೂಪವಾಗಿ ಉದ್ಧಾಲಕರು ೯ ದೃಷ್ಟಾಂತಗಳನ್ನು ಕೊಟ್ಟು ಜಾಗ್ರತ್ ಸ್ವಪ್ನ, ಸುಷುಪ್ತಿ ಎಲ್ಲ ಅವಸ್ಥೆಗಳೂ ಪರಮಾತ್ಮನ ಅಧೀನವೇ ಆಗಿರುವವು ಎಲ್ಲ ಅವಸ್ಥೆಗಳಲ್ಲಿಯೂ ಜೀವೇಶ ಭೇದವಿದ್ದೇ ಇದೆ ಎಂಬುದನ್ನು ವಿವರಿಸುವರು. (೩ ನೆಯ ಖಂಡ). ಈ ಒಂಬತ್ತು ದೃಷ್ಟಾಂತಗಳು ಅಲ್ಲಿ ಪ್ರಸಕ್ತವಾದ ಉಪನಿಷದ್ವಾಕ್ಯಗಳು ಹೀಗಿವೆ

Rarest Archiver

**i.** ಶಕುನಿ ಸೂತ್ರ ದೃಷ್ಟಾಂತ :-

೧೭. ಸ ಯಥಾ ಶಕುನಿ: ಸೂತ್ರೇಣ ಪ್ರಬದ್ಧೋ ದಿಶಂ ದಿಶಂ ಪತಿತ್ವಾ ಅನ್ಯತ್ರ ಆಯತನಂ ಅಲಬ್ಧ್ವಾ ಬಂಧನಮೇವ ಉಪಾಶ್ರಯತೇ। ಸನ್ಮೂಲಾ: ಸೋಮ್ಯೇಮಾ: ಸರ್ವಾ: ಪ್ರಜಾ: ಸದಾಯತನಾ: ಸತ್ಪ್ರತಿಷ್ಠಾ:॥ *(ಛಾಂದೋಗ್ಯ. ಅ. ೬ ಖಂಡ. ೩)*

ಪಕ್ಷಿಯು ದಾರದಿಂದ ಕಟ್ಟಲ್ಪಟ್ಟು ಎಲ್ಲ ಕಡೆಗೆ ಹರಿದಾಡಿ ಕೊನೆಗೆ ಬಂಧನದಲ್ಲಿಯೇ ಆಶ್ರಯ ಪಡೆಯುವಂತೆ ಜೀವನೂ ಕೂಡ ತನಗೆ ನಿಮಿತ್ತ ಕಾರಣನೂ ನಿಯಾಮಕನೂ ಆದ ಹರಿಯನ್ನೇ ಆಶ್ರಯಿಸುವನು. ಅವನಿಂದ ಭಿನ್ನವಾಗಿದ್ದು ಅವನ ಆಧೀನನಾಗಿರುವನು.

ಅಂತು ಈ ಶ್ರುತಿಯ ಭಾವವು **ಶ್ರುತ್ಯರ್ಥಷಟ್ಪದಿ**ಯಲ್ಲಿ ಇಂತಿದೆ. :-

*ದಾರದಿಂದಲಿ ಬದ್ಧ ಪಕ್ಷಿಯು*
*ಹಾರಿ ಹೋಗುವ ತವಕದಿಂದಲಿ*
*ದೂರ ದೂರದಿ ಚರಿಸಿ ತನ್ನಯ ಮೂಲ ಪಂಜರದಿ ।*
*ಸೇರುವಂದದಿ ಜೀವನಾದರು*
*ಪಾರುಗಾಣದೆ ಜನುಮ ಜನುಮದಿ*
*ಮಾರಜನಕನ ಪಾದಮೂಲಕೆ ಬಂದು ಸೇರುವನು ॥*

**ii.** ವೃಕ್ಷರಸ ದೃಷ್ಟಾಂತ :-

೧೮. ಯಥಾ ಸೋಮ್ಯ ಮಧು ಮಧುಕೃತೋ ನಿಸ್ತಿಷ್ಠಂತಿ ನಾನಾತ್ಯಯಾನಾಂ ವೃಕ್ಷಾಣಾಂ ಸಮವಹಾರಂ ಏಕತಾಂ ಗಮಯಂತಿ ತೇ ಯಥಾ ತತ್ರ ನ ವಿವೇಕಂ ಲಭಂತೆ ಅಮುಷ್ಯ ಅಹಂ ವೃಕ್ಷಸ್ಯ ರಸಃ ಅಸ್ಮಿ ಅಮುಷ್ಯ ಅಹಂ ವೃಕ್ಷಸ್ಯ ರಸಃ ಅಸ್ಮಿ ಇತಿ ಏವಮೇವ ಖಲು ಸೋಮ್ಯ ಇಮಾಃ ಸರ್ವಾಃ ಪ್ರಜಾಃ ಸತಿ ಸಂಪದ್ಯ ನ ವಿದುಃ ಸತಿ ಸಂಪತ್ಸ್ಯಾಮಃ ಇತಿ ॥ ( ಛಾಂ. ಅ. ೬. ಖಂ.೩ ಶ್ಲೋ. ೬)

ತೇ ಇಹ ವ್ಯಾಘ್ರೋ ವಾ ಸಿಂಹೋ ವಾ ವೃಕೋ ವಾ ವರಾಹೋ ವಾ ಕೀಟೋ ವಾ ಪತಂಗೋ ವಾ ದಂಶೋ ವಾ ಮಶಕೋ ವಾ ಯದ್ಯತ್ ಭವಂತಿ ತತ್ತದಾ ಭವಂತಿ ಸ ಯ ಏಷೋ ಅಣಿಮಾ ಏತದಾತ್ಮ್ಯಮ್ ಇದಂ ಸರ್ವಂ ತತ್ ಸತ್ಯಂ ಸ ಆತ್ಮಾ ಅತತ್ ತ್ವಂ ಅಸಿ ಶ್ವೇತಕೇತೋ ಇತಿ ಭೂಯ ಏವ ಮಾ ಭಗವಾನ್ ವಿಜ್ಞಾಪಯತು ಇತಿ ತಥಾ ಸೋಮ್ಯ ಇತಿ ಹ ಉವಾಚ ॥ ( ಛಾಂ. ಅ. ೬. ಖಂ.೩ ಶ್ಲೋ. ೭)

Rarest Archiver

ಜೇನು ಹುಟ್ಟಿನಲ್ಲಿ ಅನೇಕ ಪುಷ್ಪಗಳ ಮಕರಂದಗಳು ಸೇರಿ ಜೇನು ಆಗಿದ್ದರೂ ಆ ಆ ಪುಷ್ಪಗಳ ಮಕರಂದಕ್ಕೆ ನಾವು ಇಂಥ ಗಿಡಗಳ ಪುಷ್ಪಗಳ ರಸವಾಗಿದ್ದೇವೆ ಎಂಬ ಜ್ಞಾನವನ್ನು ಕಳೆದುಕೊಂಡಿರುವವು. ಆದರೆ ಆ ಭೇದ ಇದ್ದೇ ಇರುವದಷ್ಟೆ! ಹಾಗೆಯೇ ಜೀವನೂ ಕೂಡ ತಾನು ತನಗೆ ಆಶ್ರಯವನ್ನು ಕೊಟ್ಟ ಪರಮಾತ್ಮನೂ ಭಿನ್ನರಿರುವೆವೆಂಬ ವಿವೇಕ ಕಳೆದುಕೊಂಡಿರುವನು. ಹೀಗೆ ವಿವೇಕಹೀನರಾಗಿರುವ ಕಾರಣವೇ ಅವನು ಜೀವೇಶಭೇದದ ಬಗ್ಗೆ ವಿಚಾರಮಾಡಲೂ ಶಕ್ತಿ ಇರದ ಹುಲಿ, ಸಿಂಹ, ತೋಳ, ಹಂದಿ, ಕೀಟ, ಪಾತರಗಿತ್ತಿ, ಬೇರೆ ಬೇರೆ ಪ್ರಕಾರದ ನೊಣಗಳೇ ಆದಿಯಾದ ವಿವಿಧ ಹೀನ ಯೋನಿಗಳಲ್ಲಿ ಜನ್ಮ ತಾಳುತ್ತ ಸಂಸಾರದ ಚಕ್ರದಲ್ಲಿ ತಿರುಗುವನು. ಈ ರೀತಿಯ ವಿವೇಕವಿರದಿದ್ದರೂ ಭೇದವಿಲ್ಲವೆಂದಾಗುವದೇ ? ಭೇದವಿದ್ದೇ ಇರುವದು. ಅಂತು ಈ ಶ್ರುತಿಯ ಭಾವವು ಶ್ರುತ್ಯರ್ಥಷಟ್ಪದಿಯಲ್ಲಿ ಇಂತಿದೆ. :-

*ವಿವಿಧ ಸುಮಗಳ ಮಧುವ ಮಧುಕರ*
*ತವಕದಿಂದಲಿ ಗೂಡಿನಲ್ಲಿಡೆ*
*ವಿವಿಧ ಮಧುಗಳು ತವರು ಸುಮವನು ಮರೆತು ಬಿಡುವಂತೆ ।*
*ವಿವಿಧ ಜೀವರು ವಿವಿಧ ದೇಹದಿ*
*ಅನುವು ನೀಡಿದ ಬಳಿಯ ಹರಿಯ*
*ಸ್ತವನ ಮಾಡದೆ ಮರೆತು ಕುತ್ಸಿತಜನುಮ ಪಡೆಯುವರು ॥*

**iii. ನದೀ ಸಮುದ್ರ ದೃಷ್ಟಾಂತ :-**

**೧೯. ಇಮಾಃ ಸೋಮ್ಯ ನದ್ಯಃ ಪುರಸ್ತಾತ್ ಪ್ರಾಚ್ಯಃ ಸ್ಯಂದಂತೆ ಪಶ್ಚಾತ್ ಪ್ರತೀಚ್ಯಃ ತಾಃ ಸಮುದ್ರಾತ್ ಸಮುದ್ರಂ ಏವ ಆಪಿಯಂತಿ ಸ ಸಮುದ್ರಃ ಏವ ಭವತಿ ತಾ ಯಥಾ ತತ್ರ ನ ವಿದುಃ ಇಯಂ ಅಹಂ ಅಸ್ಮಿ ಇತಿ ಏವಂ ಏವ ಖಲು ಸೋಮ್ಯ ಇಮಾಃ ಸರ್ವಾಃ ಪ್ರಜಾಃ ಸತಃ ಆಗಮ್ಯ ಸತಃ ಆಗಚ್ಛಾಮಹೆ ಇತಿ ।।ತೆ ಇಹ ವ್ಯಾಘ್ರೋ ವಾ ಸಿಂಹೋ ವಾ ವೃಕೋ ವಾ ವರಾಹೋ ವಾ ಕೀಟೋ ವಾ ಪತಂಗೋ ವಾ ದಂಶೋ ವಾ ಮಶಕೋ ವಾ ಯದ್ಯತ್ ಭವಂತಿ ತತ್ತದಾ ಭವಂತಿ ಸ ಯ ಏಷೋ ಅಣಿಮಾ ಏತದಾತ್ಮ್ಯಮ್ ಇದಂ ಸರ್ವಂ ತತ್ ಸತ್ಯಂ ಸ ಆತ್ಮಾ ಅತತ್ ತ್ವಂ ಅಸಿ ಶ್ವೇತಕೇತೋ ಇತಿ ಭೂಯ ಏವ ಮಾ ಭಗವಾನ್ ವಿಜ್ಞಾಪಯತು ಇತಿ ತಥಾ ಸೋಮ್ಯ ಇತಿ ಹ ಉವಾಚ ।**

**( ಛಾಂ. ಅ. ೬. ಖಂ.೩ ಶ್ಲೋ. ೮,೯.)**

ಮಕರಂದದಂಥ ಅಚೇತನಗಳಿಗೆ ಈ ವಿವೇಕವಿರದಿರುವದು

Rarest Archiver

ಸ್ವಾಭಾವಿಕವಾಗಿರಬಹುದು. ಆದರೆ ನದ್ಯಭಿಮಾನಿದೇವತೆಗಳಿಗೂ ನದಿಗಳು ಸಮುದ್ರದಲ್ಲಿ ಸೇರಿದಾಗ ಆ ವಿವೇಕವಿರುವುದಿಲ್ಲ. ಸಮುದ್ರದಿಂದಲೇ ಮೋಡಗಳು ಮಳೆಗರೆಯುವ ಮೂಲಕ ಹುಟ್ಟಿದ ಆ ನದಿಗಳು ಸಮುದ್ರದಲ್ಲಿ ಸೇರಿದ ಮೇಲೆ ಆ ಆ ನದೀದೇವತೆಗಳಿಗೆ ನಾನು ಗಂಗೆಯ ನೀರು, ನಾನು ಯಮುನೆಯ ನೀರು ಅಥವಾ ಬೇರೆ ನದಿಯ ನೀರು, ಇತ್ಯಾದಿಯಾಗಿ ಹಾಗೂ ಇದು ಸಮುದ್ರದ ನೀರು ಎಂಬ ವಿವೇಕವಿರುವುದಿಲ್ಲ. ಸಮುದ್ರ ಸಮುದ್ರವಾಗಿಯೇ ಇರುವದು. ಅದೇ ರೀತಿ ಈಶ್ವರನಲ್ಲಿ ಆಶ್ರಯ ಪಡೆದು ಅವನ ಆಶ್ರಯದಿಂದಲೇ ಎಲ್ಲರೂ ಇರುವರು. ಜೀವರು ಮುಂದೆ ಕೂಡ ಅವನೇ ನಮಗೆ ಆಶ್ರಯನು ಎಂಬ ವಿವೇಕವಿಲ್ಲದೆಯೇ ಅನೇಕ ಹೀನಯೋನಿಗಳಲ್ಲಿ ಬಳಲುತ್ತಿರುತ್ತಾರೆ. ವಿವೇಕವಿಲ್ಲದಿದ್ದ ಮಾತ್ರಕ್ಕೆ ಆ ಜೀವರು ಹಾಗೂ ಈಶನಲ್ಲಿ ಭೇದವಿಲ್ಲವೆಂದಾಗಲಾರದು. ಅಂತು, ಈ ಶ್ರುತಿಯ ಭಾವವು **ಶ್ರುತ್ಯರ್ಥಷಟ್ಪದಿ**ಯಲ್ಲಿ ಇಂತಿದೆ. :–

*ಉದಧಿ ಸೇರುವ ಮುನ್ನ ನದಿಗಳು*
*ತದಭಿಮಾನಿಗಳನ್ಯರಿದ್ದರು*
*ಉದಧಿ ಸೇರಿದ ಬಳಿಕ ಭೇದವ ಮರೆತು ಬಿಟ್ಟಿಹರು ।*
*ಉದಧಿಯುದಧಿಯೆ ನದಿಯು ನದಿಯೇ,*
*ಇದನ ಮುನಿಗಳು ತಿಳಿಯುವಂದದಿ*
*ಮದಡ ನರ ಜೀವೇಶಭೇದವ ತಿಳಿವುದಸದಳವು ॥*

## iv. ವೃಕ್ಷ ಜೀವ ದೃಷ್ಟಾಂತ :–

೨೦. ಅಸ್ಯ ಸೋಮ್ಯ ಮಹತೋ ವೃಕ್ಷಸ್ಯ ಯಃ ಮೂಲೇ ಅಭ್ಯಾಹನ್ಯಾತ್ ಜೀವನ್ ಸ್ರವೇತ್ ಯಃ ಮಧ್ಯೇ ಅಭ್ಯಾಹನ್ಯಾತ್ ಜೀವನ್ ಸ್ರವೇತ್ ಯಃ ಅಗ್ರೇ ಅಭ್ಯಾಹನ್ಯಾತ್ ಜೀವನ್ ಸ್ರವೇತ್ ಸಃ ಏಷಃ ಜೀವೇನ ಆತ್ಮನಾ ಅನುಪ್ರಭೂತಃ ಮೋದಮಾನಃ ತಿಷ್ಠತಿಅಸ್ಯ ಯದಾ ಏಕಾಂ ಶಾಖಾಂ ಜೀವಃ ಜಹಾತಿ ಅಥ ಸಾ ಶುಷ್ಯತಿ ತೃತೀಯಾಂ ಜಹಾತಿ ಅಥ ಸಾ ಶುಷ್ಯತಿ ಸರ್ವಂ ಜಹಾತಿ ಸರ್ವಃ ಶುಷ್ಯತಿ ಏವಂ ಏವ ಖಲು ಸೋಮ್ಯ ವಿದ್ಧಿ ಇತಿ ಹ ಉವಾಚ ॥ ತೆ ಇಹ ವ್ಯಾಘ್ರೋ ವಾ ಸಿಂಹೋ ವಾ ವೃಕೋ ವಾ ವರಾಹೋ ವಾ ಕೀಟೋ ವಾ ಪತಂಗೋ ವಾ ದಂಶೋ ವಾ ಮಶಕೋ ವಾ ಯದ್ಯತ್ ಭವಂತಿ ತತ್ತದಾ ಭವಂತಿ ಸ ಯ ಏಷೋ ಅಣಿಮಾ ಏತದಾತ್ಮ್ಯಮ್ ಇದಂ ಸರ್ವಂ ತತ್ ಸತ್ಯಂ ಸ ಆತ್ಮಾ ಅತತ್ ತ್ವಂ ಅಸಿ ಶ್ವೇತಕೇತೋ ಇತಿ ಭೂಯ ಏವ ಮಾ ಭಗವಾನ್ ವಿಜ್ಞಾಪಯತು ಇತಿ ತಥಾ ಸೋಮ್ಯ ಇತಿ ಹ ಉವಾಚ ॥

–( ಛಾಂ. ಅ. ೬. ಖಂ.೩ ಶ್ಲೋ.೧೧)

Rarest Archiver

ಜೀವ ಹಾಗೂ ಈಶರು ಭಿನ್ನರೆಂದು ಈ ಮೊದಲು ಹೇಳಿದ ದೃಷ್ಟಾಂತ–ಗಳಿಂದ ಒಪ್ಪಿದರೂ ಜೀವನು ಈಶನ ಅಧೀನನಾಗಿದ್ದಾನೆ ಎಂಬುದು ಸ್ಪಷ್ಟವಾಗಲಿಕ್ಕಿಲ್ಲ–ವೆಂದು ವೃಕ್ಷ ಜೀವದ ದೃಷ್ಟಾಂತದಿಂದ ತಿಳಿಸಲ್ಪಟ್ಟಿದೆ. ದೊಡ್ಡದಾದ ಗಿಡದ ಕೆಳಗೆ ಅಥವಾ ನಡುವೆ ಅಥವಾ ಮೇಲೆ ಬಲವಾಗಿ ಪೆಟ್ಟು ಕೊಟ್ಟರೂ ಕೂಡ ಆ ಗಿಡವು ರಸ ಸ್ರವಿಸುವದೇ ಹೊರತೂ ಇಡೀ ಗಿಡವು ಸತ್ತುಬಿಡುವದಿಲ್ಲ. ಆ ಗಿಡದಲ್ಲಿ ಜೀವನಾಮಕ ಪರಮಾತ್ಮನು ಇರುವದರಿಂದಲೇ ಮೇಲಿಂದಮೇಲೆ ಸಾಕಷ್ಟು ನೀರನ್ನು ಕುಡಿಯುತ್ತ ಆ ಗಿಡವು ಹಚ್ಚು ಹಸಿರಾಗಿಯೇ ಇರುವದು. ಆದರೆ ಯಾವ ಯಾವ ಟೊಂಗೆಯಿಂದ ಜೀವನಾಮಕ ಪರಮಾತ್ಮನು ಬಿಟ್ಟು ಹೋಗುವನೋ ಆ ಆ ಟೊಂಗೆ ಮಾತ್ರ ಒಣಗಿ ಬಿಡುವದು. ಇಡೀ ಗಿಡದಿಂದಲೇ ಜೀವನಾಮಕ ಪರಮಾತ್ಮನು ಬಿಟ್ಟು ಹೋದರೆ ಇಡೀ ಗಿಡವೆ ಒಣಗಿ ಬಿಡುವದು. ಆದ್ದರಿಂದ ಜೀವನಿಗೆ ಆಧಾರವಾದ ಪರಮಾತ್ಮನ ಆಶ್ರಯ ತಪ್ಪಿದರೆ ಜೀವನು ಮೃತನಾಗುವನು. ಅಂದಮೇಲೆ ಜೀವನು ಪರಮಾತ್ಮನ ಅಧೀನನಾಗಿರುವನೆಂಬುದು ತಿಳಿಯುವದು. ಅಂತು, ಈ ದೃಷ್ಟಾಂತದ ಒಟ್ಟಭಿಪ್ರಾಯವು ಇಂತಿದೆ :–

*ಈಶ ಜೀವನೊಳಿದ್ದುಕೊಂಡಿರೆ*
*ನಾಶ ಪೊಂದದೆ ಜೀವನಿಪ್ಪನು*
*ಈಶ ತೊರೆದರೆ ಜೀವ ಕಳೆಯನು ಕಳೆದುಕೊಂಬುವನು ।*
*ಈಶ ಜೀವನಿಗಿಂಬು ನೀಡುವ–*
*ನೀಶ ನಿತ್ಯನು ತೃಪ್ತನಾಗಿಹ,*
*ಸೂಸಿ ತಿಳಿವುದು ವೃಕ್ಷ ದೃಷ್ಟಾಂತದಲಿ ತತ್ತ್ವವನು ॥*

*ಟೊಂಗೆಯೊಂದನು ಈಶ ತೊರೆದರೆ*
*ಟೊಂಗೆಯದು ತಾ ಕಮರಿ ಪೋಪುದು*
*ಅಂಗದಲಿ ತಾ ರಸವ ಸುರಿಸದು ಈಶನಿರದಿರಲು ।*
*ಕಂಗಳಿಗೆ ತಾ ತೋರದಿದ್ದರು*
*ಟೊಂಗೆ ತರುವಿಗೆ ಚೇತನಪ್ರದ*
*ಮಂಗಳಾತ್ಮನು ನಿತ್ಯತೃಪ್ತನು ಜೀವಗಾಶ್ರಯನು ॥*

## V. ವಟ ಬೀಜ ದೃಷ್ಟಾಂತ :–

೨೧. ನ್ಯಗ್ರೋಧಫಲಂ ಅತಃ ಆಹರ ಇತಿ ಇದಂ ಭಗವ ಇತಿ ಭಿಂಧಿ ಇತಿ ಭಿನ್ನಂ ಭಗವ ಇತಿ ಕಿಂ ಅತ್ರ ಪಶ್ಯಸಿ ಇತಿ ಅಣ್ವ್ಯಃ ಇಮಾಃ ಧಾನಾಃ ಭಗವ ಇತಿ ಆಸಾಂ ಅಂಗ ಏಕಾಂ ಭಿಂಧಿ ಇತಿ ಭಿನ್ನಾ ಭಗವ ಇತಿ ಕಿಂ ಅತ್ರ ಪಶ್ಯಸಿ ಇತಿ ನ ಕಿಂಚನ ಭಗವ ಇತಿ ತಂ ಹ ಉವಾಚ ಯಂ ವೈ ಸೋಮ್ಯ ಏತಂ ಅಣಿಮಾನಂ ನ ನಿಭಾಲಯಸೆ ಏತಸ್ಯ ವೈ ಸೋಮ್ಯ

Rarest Archiver

**ಏಷಃ ಅಣಿಮ್ನಃ ಏವಂ ಮಹಾನ್ ನ್ಯಗ್ರೋಧಃ ತಿಷ್ಠತಿ ಶ್ರದ್ಧಸ್ವ ಸೋಮ್ಯ ಇತಿ ಸಃ ಯಃ ಏಷಃ ಅಣಿಮಾ ಏತದಾತ್ಮ್ಯಂ ಇದಂ ಸರ್ವಂ ತತ್ ಸತ್ಯಂ ಸಃ ಆತ್ಮಾ ಅತತ್ ತ್ವಂ ಅಸಿ ಶ್ವೇತಕೇತೋ ಇತಿ ಭೂಯಃ ಏವ ಮಾ ಭಗವಾನ್ ವಿಜ್ಞಾಪಯತು ಇತಿ ತಥಾ ಸೋಮ್ಯ ಇತಿ ಹ ಉವಾಚ ॥ —(ಛಾಂ. ಅ. ೬. ಖಂ.೩ ಶ್ಲೋ. ೧೨)**

ಈ ಎದುರಿನ ಗಿಡದಿಂದ ಅರಳೆ ಹಣ್ಣನ್ನು ತೆಗೆದುಕೊಂಡು ಬಾ ಎಂದು ತಂದೆ ಉದ್ದಾಲಕರು ಹೇಳಿದರು. ಶ್ವೇತಕೇತುವು, 'ಪೂಜ್ಯರೆ, ಇಗೋ, ತಂದೆನು, ಇಲ್ಲಿದೆ'ಎಂದು ಹೇಳಿದನು. ಉ:– ಮಗನೆ, ಇದನ್ನು ಒಡೆ. ಶ್ವೇ; ಪೂಜ್ಯರೆ, ಒಡೆದಿದ್ದೇನೆ. ಉ: ಇಲ್ಲಿ ಏನನ್ನು ಕಂಡೆ? ಶ್ವೇ: ಸಣ್ಣ ಸಣ್ಣ ಈ ಕಾಳುಗಳನ್ನು ನೋಡುತ್ತಿದ್ದೇನೆ. ಉ:– ಮಗು, ಇವುಗಳ ಪೈಕಿ ಒಂದನ್ನು (ಒಂದು ಕಾಳನ್ನು) ಒಡೆ, ಶ್ವೇ:– ಪೂಜ್ಯರೆ, ಒಡೆದಿದ್ದೇನೆ. ಉ:– ಇಲ್ಲಿ ಏನು ಕಾಣುತ್ತಿದೆ ? ಶ್ವೇ:– ಪೂಜ್ಯರೆ, ಏನೂ ಕಾಣುವದಿಲ್ಲ. ತಂದೆ ಉದ್ದಾಲಕರು ಅವನಿಗೆ ಹೇಳಿದರು: ಮಗನೆ, ಸೂಕ್ಷ್ಮವಾದ ಇದು ನಿನಗೆ ಕಾಣುತ್ತಿಲ್ಲವಲ್ಲ, ಆ ಸೂಕ್ಷ್ಮವಾದ ಬೀಜದಿಂದಲೇ ದೊಡ್ಡದಾದ ಅರಳೆಗಿಡವು ಬೆಳೆದು ನಿಲ್ಲುವದು. ಮಗನೆ, ಇದನ್ನು ನೀನು ನಂಬಲೇಬೇಕಲ್ಲವೆ? (ಇದರಂತೆಯೇ) ಪರಮಸೂಕ್ಷ್ಮನಾದ ಪರಮಾತ್ಮನ ಅಧೀನದಲ್ಲಿ ಸರ್ವವೂ ಇದೆ, ಅದು ನಿತ್ಯ ಸರ್ವತ್ರ ವ್ಯಾಪ್ತ, ನೀನು ಮಾತ್ರ ಅದಲ್ಲ. ಶ್ವೇತಕೇತುವೆ ! ಹೀಗೆ ಉದ್ದಾಲಕರು ಹೇಳಲು ಶ್ವೇತಕೇತುವು ತನ್ನ ತಂದೆಗೆ ಹೇಳಿದನು: ಪೂಜ್ಯರೆ, ನನಗೆ ಮತ್ತೆ ತಿಳಿಸಿಕೊಡಬೇಕು. ಹೀಗೆ ಅಂದ ಬಳಿಕ ತಂದೆಗಳು' ಆಗಲಿ ಮಗನೆ,' ಎಂದು ಅಂದರು

ಈಶನು ಜೀವನ ನಿಯಾಮಕನಾಗಿದ್ದರೂ ಅವನೇಕೆ ಕಾಣುವದಿಲ್ಲ–ವೆಂಬುದನ್ನು ವಟ ಬೀಜ ದೃಷ್ಟಾಂತದಿಂದ ವಿಶದಪಡಿಸುತ್ತಾರೆ. ವಟಬೀಜದಲ್ಲಿ ದೊಡ್ಡ ವಟವೃಕ್ಷವೇ ಅಡಗಿದ್ದರೂ ಆ ವೃಕ್ಷವು ತೋರುವದಿಲ್ಲ. ಹಾಗೆಯೇ ಜೀವನಿಗೆ ನಿಯಾಮಕನಾದ ಈಶನು ಅವನಿಗೆ ಕಾಣದೆ ಅವ್ಯಕ್ತನಾಗಿದ್ದರೂ ಅವನನ್ನು ನಿಯಂತ್ರಿಸು–ತ್ತಿರುವನು. ಅಂತು, ಈ ದೃಷ್ಟಾಂತದ ಒಟ್ಟಭಿಪ್ರಾಯವು ಇಂತಿದೆ :–

*ಅರಳೆ ಹಣ್ಣಿನೊಳಿರುವ ಬೀಜವು*
*ಅರಳೆಮರಕದು ಮೂಲವಾಗಿದೆ*
*ಅರಳೆ ಮರವೆ ಬೀಜದೊಳು ತಾ ದೃಷ್ಟಿಗೋಚರವೆ ? ।*
*ಪರಮ ಸೂಕ್ಷನು ಹರಿಯು ಜೀವರ*
*ಚರಮ ಚಕ್ಷುವಿಗೆಂತು ಗೋಚರ (?)*
*ಹರಿಯೆ ಜೀವರ ಮೂಲವಾಶ್ರಯವೆಂದು ಮರೆಯದಿರು. ॥*

Rarest Archiver

## vi. ಲವಣೋದಕ ದೃಷ್ಟಾಂತ :-

೨೨. ಲವಣಂ ಏತತ್ ಉದಕೇ ದೋಷಾ ಅವಧಾಯ ಮಾ ಪ್ರಾತಃ ಉಪಸೀದಥಾ: ಇತಿ । ತದ್ ಹ ತಥಾ ಚಕಾರ । ತಂ ಹ ಉವಾಚ ಯದ್ ದೋಷಾ ಲವಣಂ ಉದಕೇ ಅವಧಾ: ಅಂಗ ತತ್ ಆಹರ ಇತಿ। ತದ್ ಹ ಅವಮೃಶ್ಯ ನ ವಿವೇದ ಯಥಾ ವಿಲೀನಂ ಏವ । ಅಂಗ ಅಸ್ಯ ಅಂತಾತ್ ಆಚಾಮ ಇತಿ । ಕಥಂ ಇತಿ । ಲವಣಂ ಇತಿ । ಮಧ್ಯಾತ್ ಆಚಾಮ ಇತಿ । ಕಥಂ ಇತಿ । ಲವಣಂ ಇತಿ । ಅಂತ್ಯಾತ್ ಆಚಾಮ ಇತಿ। ಕಥಂ ಇತಿ । ಲವಣಂ ಇತಿ । ಅಭಿಪ್ರಾಸ್ಯ ಏತತ್ ಅಥ ಮಾ ಉಪಸೀದಥಾ: ಇತಿ । ತದ್ ಹ ತಥಾ ಚಕಾರ । ತತ್ ಶಶ್ವತ್ ಸಂವರ್ತತೇ । ತಂ ಹ ಉವಾಚ । ಅತ್ರ ವಾ ವ ಕಿಲ । ಸತ್ ಸೋಮ್ಯ ನ ನಿಭಾಲಯಸೆ । ಅತ್ರ ಏವ ಕಿಲ ಇತಿ । ಸಃ ಯಃ ಏಷಃ ಅಣಿಮಾ । ಏತದಾತ್ಮ್ಯಂ ಇದಮ್ ಸರ್ವಂ । ತತ್ ಸತ್ಯಂ । ಸಃ ಆತ್ಮಾ । ಅತತ್ ತ್ವಂ ಅಸಿ ಶ್ವೇತಕೇತೋ ಇತಿ । ಭೂಯಃ ಏವ ಮಾ ಭಗವನ್ ವಿಜ್ಞಾಪಯತು ಇತಿ । ತಥಾ ಸೋಮ್ಯ ಇತಿ ಹ ಉವಾಚ ।

( ಛಾಂ. ಅ. ೬. ಖಂ.೩ ಶ್ಲೋ. ೧೩)

(ಮೇಲಿನ ವಾಕ್ಯಖಂಡದಲ್ಲಿ ಚರಣರೇಖೇಗಳನ್ನು ಕೋಟ್ಟು ಹಾಗೂ ಸಂಧಿವಿಗ್ರಹ ಮಾಡಿ ಬರೆಯಲಾಗಿದೆ. ಉಪನಿಷತ್ತಿನ ಪಾಠವನ್ನು ಮೂಲ ಗ್ರಂಥದಲ್ಲಿ ನೋಡಬಹುದು.)

**ಕೆಲ ಕಠಿಣ ಪದಗಳ ಅರ್ಥ:**–ಅವಧಾಯ= ಹಾಕಿ, ಮಾ= ಮಾಮ್, ನನ್ನನ್ನು ಕುರಿತು, ಉಪಸೀದಥಾಃ= (ನನ್ನ) ಕಡೆ ನೀನು ಬಾ. ಹ= ಅವನು ಎಂಬರ್ಥದಲ್ಲಿ. ದೋಷಾ=ರಾತ್ರಿಯಲ್ಲಿ, ಅವಧಾ:= ನೀನು ಹಾಕಿದ್ದೆಯಲ್ಲ, ಆಹರ= ತೆಗೆದುಕೊಂಡು ಬಾ, ಅವಮೃಶ್ಯ= ಪರಾಮರ್ಶಿಸಿ, ವಿಲೀನಂ ಏವ ನ ವಿವೇದ=ಸಂಪೂರ್ಣ ನಾಶವಾದ ವಸ್ತುವು ಕಾಣದಿರುವಂತೆ ನೀರಿನಲ್ಲಿ ಉಪ್ಪೂ ಕೂಡ ಕಾಣಲಿಲ್ಲ. ಅಂಗ= ಮಗುವೇ (ಪ್ರೀತಿಯಿಂದ ಸಂಬೋಧಿಸುವಾಗ ಉಪಯೋಗಿಸಲ್ಪಡುವ ಪದ–ಅವ್ಯಯ), ಆಚಾಮ= ನಾಲಿಗೆಗೆ ಹಚ್ಚಿ ರುಚಿ ನೋಡು, (ಉಪ್ಪು ಹಾಕಿಟ್ಟ ನೀರಿನ ಕೊನೆಯ ಭಾಗವನ್ನು, ಮಧ್ಯದ ಭಾಗವನ್ನು ಮತ್ತು ಮೇಲಿನ ಭಾಗವನ್ನು ಆಚಮನ ಮಾಡು), ಅಭಿಪ್ರಾಸ್ಯ= ಚೆಲ್ಲಿ, ಶಶ್ವತ್ ಸಂವರ್ತತೆ=ಸಂಪೂರ್ಣವಾಗಿ ಇದೆ, (ಆ ಉಪ್ಪು ನೀರಿನಲ್ಲಿಯೆ ಪೂರ್ತಿ ಬೆರೆತುಬಿಟ್ಟಿದೆ), ನ ನಿಭಾಲಯಸೆ= ನೀನು ನೋಡುವದಿಲ್ಲ, ಅತ್ರ ವಾ ವ ಕಿಲ= ಇಲ್ಲಿಯೇ, ಈ ನೀರಿನಲ್ಲಿಯೇ ಆ ಉಪ್ಪು ಕಣ್ಣಿಗೆ ಕಾಣದಂತೆ ಇರುವದಲ್ಲ,(ಅದರಂತೆಯೇ) ಸಃ ಯಃ ಏಷಃ ಅಣಿಮಾ= ಪರಮಸೂಕ್ಷ್ಮನಾದ ಆ ಪರಮಾತ್ಮನು, ಇದಂ ಸರ್ವಂ ಏತದಾತ್ಮ್ಯಮ್=ಇದೆಲ್ಲ ಅವನ ಅಧೀನದಲ್ಲಿ ಇದೆ, ಸತ್ಯಮ್=ನಿಜಕ್ಕೂ ಆತ್ಮಾ=ಸರ್ವತ್ರ ವ್ಯಾಪ್ತನು ಅಥವಾ ಸರ್ವಜ್ಞನು, ತ್ವಂ ಅತತ್ ಅಸಿ= ನೀನು ಅವನಲ್ಲ, ಭೂಯ ಏವ

Rarest Archiver

ಮಾ ವಿಜ್ಞಾಪಯತು...= ಮತ್ತೆ ನನಗೆ ಇದರ ರಹಸ್ಯವನ್ನು ತಿಳಿಸಿಕೊಡಬೇಕು ಪೂಜ್ಯರೇ. ತಥಾ= ಹಾಗೆಯೇ ಆಗಲಿ.

ಪರಮಾತ್ಮನು ಜೀವನಲ್ಲಿ ಅದೃಶ್ಯನಾಗಿದ್ದುಕೊಂಡು ನಿಯಂತ್ರಿಸುತ್ತಿರು-ವನೆಂಬ ವಿಷಯವು ಸ್ಪಷ್ಟವಾಗಿ ಗೋಚರಿಸುವದಿಲ್ಲವೆಂದಾಗ ಈ ವಿಷಯವನ್ನು ಸ್ಪಷ್ಟಪಡಿಸಲು ನೀರಿನಲ್ಲಿ ಉಪ್ಪು ಬೆರೆಸಿದಾಗ ಅದು ಅದರಲ್ಲಿ ಕರಗಿ ನೀರು ಉಪ್ಪಾಗುವದು. ಆದರೆ ಉಪ್ಪು ಕಾಣುವುದಿಲ್ಲವಷ್ಟೆ. ಹಾಗೆಯೇ ಜೀವನಲ್ಲಿದ್ದು ಅವನನ್ನು ನಿಯಂತ್ರಿಸುತ್ತಿದ್ದರೂ ಈಶನು ತೋರುವುದಿಲ್ಲ, ಆದರೆ ಅವನು ನಿಯಾಮಕ-ನೆಂಬುದು ಅನುಭವಕ್ಕೆ ಬರುವದು. ಹೀಗೆ ತಂದೆ ಮಗನ ಸಂವಾದದಲ್ಲಿಯ ಉಪ್ಪು ಮತ್ತು ನೀರಿನ ದೃಷ್ಟಾಂತದಿಂದ ತಿಳಿಯುವದು.

ಅಂತು, ಈ ದೃಷ್ಟಾಂತದ ಒಟ್ಟಭಿಪ್ರಾಯವು ***ಶ್ರುತ್ಯರ್ಥಷಟ್ಪದಿಯಲ್ಲಿ*** ಇಂತಿದೆ :-

*ಲವಣ ನೀರೊಳು ಬೆರತುದಾದೊಡೆ*
*ಲವಣ ಕಣ್ಣಿಗೆ ತೋರದಿಪ್ಪದು*
*ಲವಣರುಚಿಯನು ಜಿಹ್ವೆ ತಿಳಿಯುವ ತೆರದಿ ಜೀವನೊಳು ।*
*ಅವನ ಮಾಡುತಲವನ ಜತೆಯೋಳ್*
*ಪವನನೊಂದಿಗೆ ನಿರುತವಿರುತಿಹ*
*ದಿವಿಜವಂದ್ಯನು ಸರುವರೊಳು ತಾನವ್ಯಕ್ತನಾಗಿಹನು ॥*

## vii. ಕಣ್ಣುಪಟ್ಟಿಯನ್ನು ಬಿಡಿಸುವ ದೃಷ್ಟಾಂತ :-

೨೩. ಯಥಾ ಸೋಮ್ಯ ಪುರುಷಂ ಗಂಧಾರೇಭ್ಯಃ ಅಭಿನದ್ಧಾಕ್ಷಂ ಆನೀಯ ತಂ ತತಃ ಅತಿಜನೇ ವಿಸೃಜೇತ್ । ಸಃ ಯಥಾ ತತ್ರ ಪ್ರಾಕ್ ವಾ ಉದಕ್ ವಾ ಅಧರಾಕ್ ವಾ ಪ್ರಧ್ಮಾಯೀತ । ಅಭಿನದ್ಧಾಕ್ಷಃ ಆನೀತಃ । ಅಭಿನದ್ಧಾಕ್ಷಃ ವಿಸೃಷ್ಟಃ ।ತಸ್ಯ ಯಥಾ ಅಭಿಹನನಂ ಪ್ರಮುಚ್ಯ ಪ್ರಬ್ರೂಯಾತ್ । ಏತಾಂ ದಿಶಂ ಗಂಧಾರಾಃ । ಏತಾಂ ದಿಶಂ ವ್ರಜ ಇತಿ ।ಸಃ ಗ್ರಾಮಾತ್ ಗ್ರಾಮಂ ಪೃಚ್ಛನ್ ಪಂಡಿತಃ ಮೇಧಾವೀ ಗಂಧಾರಾನ್ ಏವ ಉಪಸಂಪದ್ಯೇತ । ಏವಮ್ ಏವ ಇಹ ಆಚಾರ್ಯವಾನ್ ಪುರುಷಃ ವೇದ । ತಸ್ಯ ತಾವದ್ ಏವ ಚಿರಂ ಯಾವದ್ ನ ವಿಮೋಕ್ಷ್ಯೇ ಅಥ ಸಂಪತ್ಸ್ಯತೇ ಇತಿ। ಸಃ ಯಃ...... (ಮೇಲಿನಂತೆ) -( ಛಾಂ. ಅ. ೬. ಖಂ.೩ ಶ್ಲೋ. ೧೪)

**ಕಠಿಣ ಪದಗಳ ಅರ್ಥ:-** ಗಂಧಾರೇಭ್ಯಃ= ಗಾಂಧಾರ ಎಂಬ ದೇಶದಿಂದ, ( ಈ ಕೆಲ ವರ್ಷಗಳ ಹಿಂದೆ ತಾಲಿಬಾನ್ ಎಂದು ಪ್ರಸಿದ್ಧವಾದ ಪ್ರದೇಶದಿಂದ, ಅತಿ ಹಿಂದಿನ ಕಾಲಕ್ಕೆ ಆ ಪ್ರದೇಶವೂ ಕೂಡ ಭಾರತದ ಭಾಗವಾಗಿದ್ದಿರಬಹುದು ಹಾಗೂ ಆಗಲೂ ಕೂಡ ಅಲ್ಲಿ ದರೋಡೆಕೋರರ ಉಪಟಳ ಹೆಚ್ಚು ಇದ್ದಿರಬಹುದೆಂದು ತರ್ಕಿಸಬಹುದು),

Rarest Archiver

ಅಭಿನದ್ಧಾಕ್ಷಮ್= ಕಣ್ಣಿಗೆ ಪಟ್ಟಿ ಕಟ್ಟಿ, ಪ್ರಧ್ಮಾಯೀತ= ದೊಡ್ಡ ದನಿಯಿಂದ ಕೂಗಿಕೊಳ್ಳುವನು, ಇಹ ಆಚಾರ್ಯವಾನ್...... = ಕರುಣೆಯಿಂದ ಕಣ್ಣುಪಟ್ಟಿ ಬಿಡಿಸಿ ತನ್ನ ಮೂಲಸ್ಥಾನಕ್ಕೆ ಹೋಗಲು ದಾರಿ ತೋರಿಸುವ ಪುರುಷನಂತೆ ಇಲ್ಲಿ ಕರುಣಾಪೂರ್ಣನಾದ ಗುರುವಿನ ಉಪದೇಶವನ್ನು ಪಡೆದು ಸಾಧಕನಾದ ಜೀವನು ಸಾಧನ ಮಾಡಿಕೊಂಡು ತನ್ನ ಮೂಲವಾದ ಪರಮಾತ್ಮನನ್ನು ಕುರಿತು ಹೋಗುವನು. ಪ್ರಾರಬ್ಧ ಕರ್ಮ ಮುಗಿಯುವ ವರೆಗೆ ಸಾಧಕ ಜೀವನು ಪರಮಾತ್ಮನ ಸನ್ನಿಧಿಗೆ ಹೋಗಲಾರನು. ಹೀಗಿರುವದರಿಂದ ನೀನು ಅವನಲ್ಲ ಎಂದು ಉದ್ದಾಲಕರು ಶ್ವೇತಕೇತುವಿಗೆ ಅದೃಶ್ಯನೂ ಸರ್ವನಿಯಾಮಕನೂ ಆದ ಪರಮಾತ್ಮನ ದರ್ಶನ ಹಾಗೂ ಸನ್ನಿಧಿಗಳು ಗುರೂಪದೇಶದಿಂದಲೇ ಸಾಧ್ಯವೆಂದು ಮಾರ್ಮಿಕವಾದ ಈ ದೃಷ್ಟಾಂತದಿಂದ ತಿಳಿಸಿಕೊಟ್ಟಿದ್ದಾರೆ.

ಗುರೂಪದೇಶದಿಂದಲೇ ಪರಮಾತ್ಮನ ಮಹಿಮೆ ಸ್ಪಷ್ಟವಾಗುವದು ಎಂಬುದಕ್ಕೆ ದುಷ್ಟಚೋರರು ಕಟ್ಟಿದ ಕಣ್ಣುಪಟ್ಟಿಯನ್ನು ಬಿಡಿಸಲು ಉಪಕಾರಿಯಾದ ಪುರುಷನು ಹೇಗೆ ಅವಶ್ಯ ಬೇಕೋ ಹಾಗೆಯೇ ಜೀವೇಶಭೇದದ ಬಗೆಗೆ ಅಜ್ಞಾನಿಯಾದ ಪುರುಷನಿಗೆ ಅವನ ಅಜ್ಞಾನವನ್ನು ಹೋಗಲಾಡಿಸಲು ಸರಿಯಾಗಿ ಉಪದೇಶ ಮಾಡುವ ಗುರುವು ಬೇಕು ಎಂದು ದೃಷ್ಟಾಂತವನ್ನು ಕೊಟ್ಟು ಈ ವಾಕ್ಯದಿಂದ ಸ್ಪಷ್ಟಪಡಿಸಿದ್ದಾರೆ.

ಅಂತು, ಈ ದೃಷ್ಟಾಂತದ ಒಟ್ಟಭಿಪ್ರಾಯವು ಇಂತಿದೆ :–

*ಚರಮು ಕಣ್ಗಳ ಕಟ್ಟಿ ವನದೊಳ್*
*ಪುರುಷನೊಬ್ಬನ ಬಿಟ್ಟು ಪೋಗಲು*
*ಅರಿತ ನರ ಕಣ್ಪಟ್ಟಿ ಬಿಚ್ಚುತ ಮನೆಯ ತೋರ್ಪ ಪರಿ ।*
*ಸರುವ ಹೃದಯದಿ ನಿರುತವಿರುತಿಹ*
*ಪರಮ ಪುರುಷನ ಕಾಂಬ ಕಣ್ಗಳ*
*ಗುರುವು ತಾ ತತ್ವೋಪದೇಶದಿ ದಯದಿ ನೀಡುವನು ॥*

## viii. ಮರಣೋನ್ಮುಖ ಮನುಷ್ಯ ದೃಷ್ಟಾಂತ :–

೨೪. ಪುರುಷಂ ಸೋಮ್ಯ ಉಪತಾಪಿನಂ ಜ್ಞಾತಯಃ ಪರ್ಯುಪಾಸತೇ । ಜಾನಾಸಿ ಮಾಮ್ ಜಾನಾಸಿ ಮಾಮ್ ಇತಿ । ತಸ್ಯ ಯಾವದ್ ನ ವಾಕ್ ಮನಸಿ ಸಂಪದ್ಯತೆ ಮನಃ ಪ್ರಾಣೇ ಪ್ರಾಣಃ ತೇಜಸಿ ತೇಜಃ ಪರಸ್ಯಾಂ ದೇವತಾಯಾಂ ತಾವದ್ ಜಾನಾತಿ । ಅಥ ಯದಾ ಅಸ್ಯ ವಾಕ್ ಮನಸಿ ಸಂಪದ್ಯತೇ ಮನಃ ಪ್ರಾಣೇ ಪ್ರಾಣಃ ತೇಜಸಿ ತೇಜ ಪರಸ್ಯಾಮ್ ದೇವತಾಯಾಂ ಅಥ ನ ಜಾನಾತಿ । ಸಃ ಯಃ ಏಷಃ ........॥ (ಮೊದಲಿನಂತೆ)

– ( ಛಾಂ. ಅ. ೬. ಖಂ.೩ ಶ್ಲೋ. ೧೫)

ಮನುಷ್ಯ ದೇಹದಲ್ಲಿಯೂ (ವೃಕ್ಷ ದೇಹದಲ್ಲಷ್ಟೇ ಅಲ್ಲ) ಈಶನು ಜೀವನಿಗೆ

Rarest Archiver

ನಿಯಾಮಕನಾಗಿದ್ದಾನೆ ಎಂಬುದನ್ನು ಮರಣೋನ್ಮುಖನಾದ ಮನುಷ್ಯನ ದೃಷ್ಟಾಂತದಿಂದ ಸ್ಪಷ್ಟಪಡಿಸುವರು. ನಾಡಿಗಳು ಬಿಡುತ್ತಿದ್ದರೂ ಮನುಷ್ಯನು ಜೀವಂತವಾಗಿಯೇ ಇರುವನು. ಆದರೆ ಯಾವಾಗ ಪರಮಾತ್ಮನು ಮನುಷ್ಯನ ದೇಹವನ್ನು ತೊರೆಯುವನೋ ಆಗ ಆ ಮನುಷ್ಯನ ದೇಹ ಕುಪ್ಪಳಿಸಿ ಬಿಡುವದು. ಇಲ್ಲಿ ಪ್ರಾಣ ಹೇಗೆ ಶರೀರದಿಂದ ಉತ್ಕ್ರಮಿಸುವದು ಎಂಬುದರ ಬಗ್ಗೆ ವಿವಿಧ ಅವಸ್ಥೆಗಳನ್ನು ತಿಳಿಸಿ ಕೊಟ್ಟಿದ್ದಾರೆ. ಮರಣೋನ್ಮುಖನಾದ ಪುರುಷನ ಸುತ್ತಲೂ ಕುಳಿತು ಅವನನ್ನು ನೀನು ನನ್ನನ್ನು ಗುರುತಿಸುವಿಯಾ, ನನ್ನನ್ನು ಗುರುತಿಸುವಿಯಾ ಎಂದು ಕೇಳುತ್ತ ಅವನು ಸನ್ನೆಯಿಂದ ತಿಳಿಸುವ ವರೆಗೆ ಪರಮಾತ್ಮನು ಅವನ ದೇಹವನ್ನು ಬಿಟ್ಟಿರುವದಿಲ್ಲ. ಇದನ್ನೆಲ್ಲ ಜನರು ಕಣ್ಣುಮುಟ್ಟಿ ನೋಡುತ್ತಿರುತ್ತಾರಾದ ಕಾರಣ ಇದು ವಾಸ್ತವಿಕ ವಿಷಯವು. ಇದರಿಂದ ಜೀವನು ಈಶನ ಅಧೀನನು ಎಂಬುದು ತಿಳಿಯುವದು. ಅಂತು, ಈ ದೃಷ್ಟಾಂತದ ಒಟ್ಟಭಿಪ್ರಾಯವು ಇಂತಿದೆ :-

*ಪರಮ ದೇವತೆ ತೊರೆದು ಪೋದರೆ*
*ನರನು ಮೃತಿಯನು ಪೊಂದಿ ಬಿಡುವನು*
*ಪರಮ ಪುರುಷನೆ ಜೀವಗಾಶ್ರಯವೆಂದು ತೋರುತಲಿ ।*
*ನರರು ತರು ಪಶು ಜೀವರೆಲ್ಲರು*
*ಪರಮಪುರುಷನ ತಂತ್ರದಲ್ಲಿಯೆ*
*ನಿರುತವಿಪ್ಪುದ ತಿಳಿಯಬೇಕೆಂದರುಹಿದರು ಗುರುವು ॥*

## ix. ಚೋರಾಪಹಾರ್ಯ ದೃಷ್ಟಾಂತ :-

೨೫. ಪುರುಷಂ ಸೋಮ್ಯ ಉತ ಹಸ್ತಗೃಹೀತಂ ಆನಯಂತಿ । ಅಪಹಾರ್ಷೀತ್ ಸ್ತೇಯಂ ಅಕಾರ್ಷೀತ್ । ಪರಶುಂ ಅಸ್ಮೈ ತಪತ ಇತಿ । ಸಃ ಯದಿ ತಸ್ಯ ಕರ್ತಾ ಭವತಿ ತತಃ ಏವ ಅನೃತಂ ಆತ್ಮಾನಂ ಕುರುತೇ । ಸಃಅನೃತಾ-ಭಿಸಂಧಃ ಅನೃತೇನ ಆತ್ಮಾನಂ ಅಂತರ್ಧಾಯ ಪರಶುಂ ತಪ್ತಂ ಪ್ರತಿ-ಗೃಹ್ಣಾತಿ । ಸಃ ದಹ್ಯತೆ । ಅಥ ಹನ್ಯತೇ । ಅಥ ಸಃ ಯದಿ ತಸ್ಯ ಅಕರ್ತಾ ಭವತಿ ತತಃ ಏವ ಸತ್ಯಂ ಆತ್ಮಾನಂ ಕುರುತೇ । ಸಃ ಸತ್ಯಾಭಿಸಂಧಃ ಸತ್ಯೇನ ಆತ್ಮಾನಂ ಅಂತರ್ಧಾಯ ಪರಶುಂ ತಪ್ತಂ ಪ್ರತಿಗೃಹ್ಣಾತಿ । ಸಃ ನ ದಹ್ಯತೇ । ಅಥ ಮುಚ್ಯತೇ । ಸಃ ಯಥಾ ತತ್ರ ನ ದಹ್ಯೇತ । ಏತದಾತ್ಮ್ಯಮಿದಂ ಸರ್ವಂ । ತತ್ ಸತ್ಯಮ್ । ಸಃ ಆತ್ಮಾ । ಅತತ್ ತ್ವಮ್ ಅಸಿ ಶ್ವೇತಕೇತೋ । ಇತಿ । ತತ್ ಹ ಅಸ್ಯ ವಿಜಜ್ಞೌ ಇತಿ ವಿಜಜ್ಞೌ ಇತಿ॥

-( ಛಾಂ. ಅ. ೬. ಖಂ.೩, ಶ್ಲೋ. ೧೬)

ಜೀವೇಶ ಭೇದ ತಿಳಿಯದೆ ಅಭೇದವನ್ನು ಪ್ರತಿಪಾದಿಸಿದರೆ ಆಗುವ

Rarest Archiver

ಅನರ್ಥವನ್ನು ಈ ದೃಷ್ಟಾಂತದಿಂದ ತಿಳಿಸುವರು. ರಾಜಭಟರಿಂದ ಹಿಡಿಯಲ್ಪಟ್ಟ ಚೋರನಿಗೆ ತಾನು ಚೌರ್ಯ ಮಾಡಿಲ್ಲವೆಂದು ಸುಳ್ಳು ಹೇಳಿದರೆ ರಾಜನ ಆಜ್ಞೆಯಂತೆ ರಾಜಭಟರು ಕಾದ ಬರೆ ಕೊಡುವರು. ಅದರಂತೆಯೇ ಈಶನಿಂದ ನಾನು ಭಿನ್ನನಲ್ಲವೆಂದು ಹೇಳುವವರಿಗೆ ಅಂಧಂತಮಸ್ಸೇ ಮೊದಲಾದ ಅನರ್ಥಗಳಾಗುವವು. ಆದೇ, ಭೇದ ಜ್ಞಾನಿಯು ಚೋರನಂತೆ ಸುಳ್ಳು ಹೇಳುತ್ತಿಲ್ಲ. ಕಾರಣ ಅವನಿಗೆ ಅನರ್ಥವಾಗಲಾರದು, ಎಂಬ ಅಭಿಪ್ರಾಯದ ದೃಷ್ಟಾಂತವಿದು.

ಅಂತು, ಈ ಶ್ರುತಿಯ ಭಾವವು **ಶ್ರುತ್ಯರ್ಥಷಟ್ಪದಿ**ಯಲ್ಲಿ ಇಂತಿದೆ. :–

*ಅರಸನೊಡವೆಯ ಕದ್ದು ಓಡುತ*
*ಭರದಿ ತನ್ನದೆ ಎಂದು ಬೊಗಳುವ*
*ನರನ ನೃಪಭಟರೆಳೆದು ನಿಲಿಸಲು ರಾಜನೆದುರಿನಲಿ,*
*ಜರೆವ, ದಂಡವನೀವ, ರಾಜನು,*
*ಭರದಿ ಕಾದಿಹ ಲೋಹಕೀತನ*
*ಕರವನಿಡಿಸಿರಿ ಖರೆಯು ತಾ ಹೊರ ಬರುವದೆಂದಿಹನು ॥ ॥*

*ಮಿಥ್ಯೆ ನುಡಿದಿರೆ ಕರವು ಸುಡುವದು*
*ತಪ್ತ ಲೋಹದಿ, ಚೋರನಿರದಿರೆ*
*ತಪ್ತ ಲೋಹದಿ ಕರವು ಸುಡದಿರದೆಂದು ನೃಪ ಪೇಳ್ವ.*
*ಮತ್ತೆ ಈ ತೆರ ಹರಿಯ ಗುಣಗಳ–*
*ನೊತ್ತಿ ತನ್ನಲಿ ಪೇಳ್ವ ನರನಿಗೆ*
*ಮಿಥ್ಯೆ ನುಡಿಯುವ ಚೋರಗಾಗುವ ಗತಿಯು ದುರ್ಗತಿಯು ॥ ॥*

ಈ ಮೇಲಿನ ಒಂಬತ್ತು ದೃಷ್ಟಾಂತಗಳ ಉಪಸಂಹಾರ ವಾಕ್ಯವಾಗಿ **'ಸ ಆತ್ಮಾ ಅತತ್ವಮಸಿ'** ಎಂಬ ವಾಕ್ಯವನ್ನು ತಂದೆ ಉದ್ದಾಲಕರು ೯ ಸಲ ಹೇಳಿದ್ದಾರೆ. ಅಭ್ಯಾಸವೆಂಬ ತಾತ್ಪರ್ಯನಿರ್ಣಾಯಕ ಲಿಂಗದಿಂದ, (ಉಪಕ್ರಮದಗಿಂತಲೂ ಪ್ರಬಲವೆಂದು ಗಣಿಸಲ್ಪಡುವ) ಉಪಸಂಹಾರ ರೂಪದಲ್ಲಿ ಹೇಳಲ್ಪಟ್ಟಿರುವದರಿಂದ ಈ ವಾಕ್ಯವು ಶ್ರುತಿಯ ತಾತ್ಪರ್ಯ ಹೇಳುವಲ್ಲಿ ವೈಶಿಷ್ಟ್ಯಪೂರ್ಣವಾಗಿದೆ. ಇಲ್ಲಿಯ ಸಂದರ್ಭವನ್ನು ಗಮನಿಸಿದಾಗ ಸ + **ಆತ್ಮಾ** + **ಅತತ್** + **ತ್ವಮ್** + **ಅಸಿ** ಎಂಬ ವಿಗ್ರಹವೇ ಸಮರ್ಪಕವೆಂದು ತಿಳಿಯುವದು. ಈ ವಾಕ್ಯದ ಅರ್ಥ ಹೀಗಿದೆ.

**ಸ:** – ಅವನು, **ಆತ್ಮಾ**– ಸರ್ವತ್ರ ವ್ಯಾಪ್ತನೂ ಜ್ಞಾನಿಯೂ ಆದ ಪರಮಾತ್ಮನಿದ್ದಾನೆ. **ತ್ವಮ್ ಅತತ್ ಅಸಿ :**– ನೀನು ಅವನಾಗಿಲ್ಲ. ಅವನು ಅವನೇ ಇರುವನು. ನೀನು ನೀನೇ, ನೀನು ಅವನಲ್ಲ. ಅವನು ನೀನಲ್ಲ. ಹೀಗೆ ಹೇಳಿದಾಗ ಅದನ್ನು ಸ್ಪಷ್ಟಪಡಿಸಲು ಮೇಲೆ ಹೇಳಲ್ಪಟ್ಟ ಒಂಬತ್ತು ದೃಷ್ಟಾಂತಗಳು ಅರ್ಥಪೂರ್ಣವಾಗುವವು.

Rarest Archiver

ತಾನೇ ಎಲ್ಲ ತಿಳಿದವನು ಎಂದು ಗರ್ವದಿಂದ ಬೀಗುತ್ತಿರುವ ಶ್ವೇತಕೇತುವಿಗೆ ತಂದೆ ಉದ್ದಾಲಕರು ವಿನಯದ ಉಪದೇಶ ಮಾಡುವರೆಂಬುದು ಸಮರ್ಪಕವೇ ಹೊರತು ನೀನು ದೇವರೇ ಆಗಿರುವಿ ಎಂದು ತಿಳಿಸಿ ಅವನ ದುರಭಿಮಾನ, ದುರಹಂ–ಕಾರಗಳಿಗೆ ಪುಟ ಕೊಡುವ ಮಾತನಾಡಲಾರರು. ತಂದೆಯು ತನ್ನ ಮಗನು ವಿನೀತನಾಗಿ ಬಾಳಬೇಕೆಂಬ ಅಪೇಕ್ಷೆ ಮಾಡುವನೇ ಹೊರತು ಅವನ ಅವಿನಯವು ಬೆಳೆಯಲಿಯೆಂದು ಅಪೇಕ್ಷೆ ಮಾಡಲಾರನು. **ಸ ಆತ್ಮಾ ತತ್ವಮಸಿ** – ಆ ಪರಮಾತ್ಮನು ನೀನಾಗಿರುವಿಯೆಂದು ತಂದೆ ಹೇಳಬಹುದೇ ? **ಅತತ್ ತ್ವಮ್ ಅಸಿ** ನೀನು ಅವನಲ್ಲ ಎಂದು ಉಪದೇಶಿಸುವದೇ ಸಮರ್ಪಕವಾಗುವದು. ಈ ವಿಷಯವನ್ನು ಸ್ಪಷ್ಟವಾಗಿಯೇ ನಿಷ್ಠುರವಾಗಿಯೇ ಹೇಳಿಬಿಡಬಹುದಿತ್ತಲ್ಲ ಹೀಗೆ ಬೇರೆ ಅರ್ಥಕ್ಕೆ ಅವಕಾಶಕೊಟ್ಟು ಏಕೆ ಹೇಳಿದರು ಎಂಬ ಪ್ರಶ್ನೆ ಉಳಿಯುವದು. ಇದಕ್ಕೆ ಉತ್ತರವಿದೆ.

ದಾರಿ ತಪ್ಪಿದ ಮಕ್ಕಳನ್ನು ಉಪಾಯದಿಂದ ಸರಿ ದಾರಿಗೆ ತರುವದು ಯೋಗ್ಯವೇ ಹೊರತು ಖಡಾಖಂಡಿಯಾಗಿ ನಿಷ್ಠುರವಾಗಿ ಹೇಳಿದರೆ ಅಹಂಕಾರಿಯಾದ ಮಕ್ಕಳು ಜಿದ್ದಿಗೆ ಬಿದ್ದು ಸರಿದಾರಿಗೆ ಬರುವದು ಇನ್ನೂ ಕಠಿಣವಾಗುವದು ಎಂಬ ಸೂಕ್ಷ್ಮವಾದ ವಿಷಯವನ್ನು ಉದ್ದಾಲಕರು ತಮ್ಮ ಮಗನಿಗೆ ಉಪದೇಶಿಸುವ ರೀತಿಯಿಂದ ತಿಳಿಸಿಕೊಟ್ಟಿದ್ದಾರೆ. ನಾನೇ ದೇವರು ಎಂಬ ಅಹಂಕಾರದಿಂದ ಬೀಗುತ್ತಿರುವ ಮಗನಿಗೆ ದೃಷ್ಟಾಂತಸಹಿತವಾಗಿ ವಿವರಿಸುತ್ತ ಮೇಲ್ನೋಟಕ್ಕೆ 'ನೀನೇ ದೇವರು' ಎಂಬ ಅಭಿಪ್ರಾಯ ಬರುವಂತೆ ಇದ್ದರೂ ದೃಷ್ಟಾಂತಗಳನ್ನು ಕಂಡಾಗ ಹಾಗಲ್ಲ, 'ದೇವರು ನನಗೆ ನಿಯಾಮಕನು, ನಾನು ಅವನ ಅಧೀನ, ನಾನು ವಿನೀತನಾಗಿರಬೇಕು' ಎಂದು ಆ ಬಿಮ್ಮಾನದ ಹುಡುಗನಿಗೆ ತನಗೇ ಪಟಾಯಿಸುವದರ ಸಲುವಾಗಿ ಈ ರೀತಿಯ ಶೈಲಿಯನ್ನು ಉಪಯೋಗಿಸಿದ್ದಾರೆ ಎಂದು ತಿಳಿಯುವದು. ಶಿಕ್ಷಣಶಾಸ್ತ್ರದ ಸೂಕ್ಷ್ಮ ವಿಷಯವು ಇಲ್ಲಿ ಸೂಚಿಸಲ್ಪಟ್ಟಿದೆ. ಯಾವ ತಂದೆಯು ಮಗನು ಸರಿಯಾದ ದಾರಿಗೆ ಬರಲಿ ಎಂದು ಅಪೇಕ್ಷಿಸದೆ ಕೇವಲ ತನ್ನ ಅಭಿಮಾನದಿಂದ ನಿಷ್ಠುರವಾಗಿ ನುಡಿದು ಬಿಟ್ಟಾನು? ಉಪಾಯದಿಂದಲೇ ವ್ಯವಹಾರ ಮಾಡುವನೇ ಹೊರತು ಬೇಜವಾಬ್ದಾರಿಯ ಹುಂಬತನದಿಂದ ವ್ಯವಹಾರ ಮಾಡಲಾರನು !

ಇದು ವಿರೋಚನಗೆ ಪ್ರಜಾಪತಿಯ ಉಪದೇಶದಂತೆ ಮೋಸದ ಉಪದೇಶವಾಗಲಾರದು. ಯಾಕೆಂದರೆ ತಂದೆಯು ತನ್ನ ಮಗನಿಗೇ ಉಪದೇಶ ಮಾಡುತ್ತಿರುವದರ ಭಾಗವಿದು. ಕಾರಣ ಪ್ರಾಮಾಣಿಕವಾದ ಉಪದೇಶವು, ಹಾಗೂ ದಾರಿ ತಪ್ಪಿದ ಮಗನನ್ನು ಸರಿಯಾದ ದಾರಿಗೆ ಉಪಾಯದಿಂದ ತರಲು ಪ್ರಯತ್ನಿಸುತ್ತಿರುವ ತಂದೆಯ ಉಪದೇಶವು. ಇವೆಲ್ಲ ಕಾರಣಗಳಿಂದ ಇಲ್ಲಿ ಭೇದದ ಉಪದೇಶವಿದೆಯೇ ಹೊರತು ಅಭೇದದ ಉಪದೇಶವಿರಲಾರದು. ಅಭ್ಯಾಸದ ಬಲದಿಂದ (ಕಟೆದು ಕಟೆದು ಉದಾಹರಣೆ

Rarest Archiver

ಕೊಟ್ಟು) ಮಾಡಿದ ಉಪದೇಶವಿದು.

ಸಂಧಿವಿಗ್ರಹ ಮಾಡುವದನ್ನು ಒಂಬತ್ತು ದೃಷ್ಟಾಂತಗಳಲ್ಲಿ ಹೇಳಿದ ತಾತ್ಪರ್ಯವನ್ನನುಲಕ್ಷಿಸಿ ಮಾಡಬೇಕೇ ಹೊರತು ನಮಗೆ ತೋರಿದಂತೆ ಸಂಧಿ ವಿಗ್ರಹ ಮಾಡಿ ದೃಷ್ಟಾಂತಗಳ ಅರ್ಥವನ್ನು ಹೇಳಲು ಹೊರಡಬಾರದು. ದೃಷ್ಟಾಂತಗಳು ಒಂದು ವಿಷಯವನ್ನು ಸ್ಪಷ್ಟಪಡಿಸಲು ಉಪಯೋಗಿಸುವ ಸಾಧನಗಳು. ಕಾರಣ ದೃಷ್ಟಾಂತದಲ್ಲಿಯ ತಾತ್ಪರ್ಯವನ್ನು ಪ್ರಕರಣಕ್ಕನುಗುಣವಾಗಿ ಗಣನೆಗೆ ತಕ್ಕೊಂಡು ಈ ವಾಕ್ಯದ ತಾತ್ಪರ್ಯಚಿಂತನೆ ಮಾಡಬೇಕಾದುದು ಅವಶ್ಯ.

**ಇನ್ನು, 'ಸ ಆತ್ಮಾ ತತ್ವಮಸಿ'** (ಅಂದರೆ **ಆತ್ಮಾ ಅತತ್ ತ್ವಮ್ ಅಸಿ** ಎಂದಲ್ಲ) ಎಂದೇ ಇಟ್ಟುಕೊಂಡರೂ ಕೂಡ ದೃಷ್ಟಾಂತಕ್ಕನುಗುಣವಾಗಿ ತಾತ್ಪರ್ಯ ಹೇಳಬಹುದೆಂದು ಶ್ರೀ ವ್ಯಾಸತೀರ್ಥರು ***ಅಥ ತತ್ವಮಸಿ ವಾಕ್ಯಾರ್ಥ:*** ಎಂಬ ***ಶ್ರೀಮನ್ನ್ಯಾಯಾಮೃತದ*** **೨೮ ನೆಯ ಪ್ರಕರಣದಲ್ಲಿ** ಸೂಚಿಸಿದ್ದಾರೆ. **ತತ್ವಮ್** ಎಂಬ ಪದವನ್ನು ಸಮಸ್ತಪದವೆಂದೂ ಅದನ್ನು ತತ್ಪುರುಷ ಸಮಾಸವನ್ನಾಗಿ ವಿಗ್ರಹ ಮಾಡಿ ಅರ್ಥಮಾಡಬಹುದೆಂದೂ ಸೂಚಿಸಲಾಗಿದೆ.

ತತ್ವಮ್ ಪದವನ್ನು ಈ ಕೆಳಗಿನಂತೆ ಬಿಡಿಸಿ ಅರ್ಥ ಹೇಳಬಹುದಾಗಿದೆ :

**ತತ್ವಮ್– ತತ್ ತ್ವಮ್ ತತ್ಸದೃಶಃ ತ್ವಮ್** – ಅವನಂತೆ ನೀನಿರುವಿ

ಪ್ರಥಮಾ ತತ್ಪುರುಷ ಸಮಾಸ.

**ತತ್ ತ್ವಮ್** – ಅವನನ್ನು ಕುರಿತು ನೀನಿರುವಿ ದ್ವಿ. ತ. ಸ.

**ತೇನ ತ್ವಮ್** – ಅವನಿಂದ ನೀನಿರುವಿ ತೃ. ತ. ಸ.

**ತಸ್ಮೈ ತ್ವಮ್** – ಅವನಿಗೋಸ್ಕರ ನೀನಿರುವಿ ಚ. ತ. ಸ.

**ತಸ್ಮಾತ್ ತ್ವಮ್**–ಅವನಿಂದ (ಅವನ ಉದರದಿಂದ ಹೊರಗೆ) ಬಂದು ನೀನಿರುವಿ ಪಂ. ತ. ಸ.

**ತಸ್ಯ ತ್ವಮ್** –ಅವನವನು ನೀನಾಗಿರುವಿ ಷ. ತ. ಸ.

**ತಸ್ಮಿನ್ ತ್ವಮ್** – ಅವನಲ್ಲಿ ನೀನಿರುವಿ ಸ. ತ. ಸ.

ತತ್ ಎಂಬುದು ಸರ್ವನಾಮವಾದ ಕಾರಣ ಸಂಬೋಧನ ವಿಭಕ್ತಿ ಇಲ್ಲ.

Rarest Archiver

ಅಂತು, **'ಸ ಆತ್ಮಾ ತತ್ವಮಸಿ ಶ್ವೇತಕೇತೋ'** ಎಂಬುದು ಭೇದಪರವಾದ ವಾಕ್ಯವೇ ಹೊರತು ಅಭೇದಪರವಾದ ವಾಕ್ಯವಲ್ಲವೆಂಬುದು ಸ್ಪಷ್ಟವಾಗುವದು.

ಈ ಶ್ರುತಿವಾಕ್ಯದ ಒಟ್ಟರ್ಥವನ್ನು *ಶ್ರುತ್ಯರ್ಥಷಟ್ಪದಿಯ* ಈ ಕೆಳಗಿನ ನುಡಿಗಳು ಸಂಗ್ರಹಿಸಿವೆ :–

*ಶ್ವೇತಕೇತುವು ಜಂಭದಿಂದಲಿ*
*ಮಾತ ಪೇಳಲು ದೇವ ನಾನೆಂ–*
*ಬಾತ ಆತನೆ ನೀನು ನೀನೇ ನೀನು ಅವನಲ್ಲ ।*
*ಈ ತೆರನ ತತ್ವೋಪದೇಶವು*
*ತಾತನಾತನ ನೀತಿಯಿಂದಲಿ*
*ರೀತಿ ರೀತಿಯ ಮಾತಿನಿಂದಲಿ ತಿಳಿಸಿ ಪೇಳಿದನು ॥*

*ಈಶ ಜೀವರ ಭೇದವನ್ನೇ*
*ಲೇಶ ಶಂಕೆಯು ಬಾರದಂತೆಯೆ*
*ಘೋಷದಿಂದೊಂಬತ್ತು ದೃಷ್ಟಾಂತಗಳ ಪೇಳುತಲಿ ।*
*ಈಶ ಜೀವಾಭೇದ ತನ್ನಯ*
*ರಾಶಿಯಲ್ಲಿಯೆ ಕಾಣದೆನ್ನುತ*
*ಈಶ ದಾಸ್ಯದ ಭಾವವನ್ನೇ ವೇದವುಸುರುತಿದೆ ॥*

### ೨೬. ಸ್ವಮಪೀತೋ ಭವತಿ– *ಛಾಂದೋಗ್ಯೋಪನಿಷತ್*

ಈ ವಾಕ್ಯವೂ ಕೂಡ *ಛಾಂದೋಗ್ಯೋಪನಿಷತ್ತಿನ* ಆರನೆಯ ಅಧ್ಯಾಯದ ಮೂರನೆಯ ಖಂಡದಲ್ಲಿ ಬರುವ ವಾಕ್ಯವು. ಇದರ ಸಂಪೂರ್ಣ ಪಾಠ ಹೀಗಿದೆ :–

**'ಉದ್ದಾಲಕೋ ಹ ಆರುಣಿಃ ಶ್ವೇತಕೇತುಂ ಪುತ್ರಮುವಾಚ ಸ್ವಪ್ನಾಂತಂ ಮೇ ಸೋಮ್ಯ ವಿಜಾನೀಹೀತಿ ಯತ್ರೈತತ್ಪುರುಷಃ ಸ್ವಪಿತಿ ನಾಮ ಸತಾ ಸೋಮ್ಯ ತದಾ ಸಂಪನ್ನೋ ಭವತಿ *ಸ್ವಮಪೀತೋ ಭವತಿ* ತಸ್ಮಾದೇನಂ ಸ್ವಪಿತೀತ್ಯಾಚಕ್ಷತೆ ಸ್ವಂ ಹ್ಯಪೀತೋ ಭವತಿ ॥'** *–ಛಾಂದೋಗ್ಯೋಪನಿಷತ್ ೬–೩–೧.*

ಒಂಬತ್ತು ದೃಷ್ಟಾಂತಗಳಲ್ಲಿ ಶ್ರುತಿಯು ಭೇದವನ್ನೇ ಹೇಳುವದು ಎಂದು ವಿವರಿಸಿದ ಬಳಿಕ ಶ್ರೀಮದಾಚಾರ್ಯರು ಈ ವಿವರಣೆಗೆ ಪರಕೀಯರು ಮಾಡುವ ಆಕ್ಷೇಪವನ್ನು ವಿಮರ್ಶಿಸಿ ಖಂಡಿಸುವ ಸಂದರ್ಭದಲ್ಲಿ ಉಪನಿಷತ್ತಿನ ಈ ಭಾಗವನ್ನು ಉದಾಹರಿಸಿದ್ದಾರೆ.

Rarest Archiver

**ಆಕ್ಷೇಪ :–** ಶಕುನಿ ಸೂತ್ರ ದೃಷ್ಟಾಂತದಲ್ಲಿ ಭೇದ ಹೇಳಿದ್ದರೂ ಶ್ರುತಿಯ ತಾತ್ಪರ್ಯವು ಭೇದವೆಂದು ಆಗುವ ಅವಶ್ಯಕತೆ ಏನೂ ಇಲ್ಲ. ಈ ದೃಷ್ಟಾಂತವು ಜೀವನಿಗೆ ಕೊನೆಗೆ ಬ್ರಹ್ಮನೇ ಆಗುವ ಅಪರಿಹಾರರ್ಯತೆಯನ್ನು ತಿಳಿಸುವುದರಲ್ಲಿ ತಾತ್ಪರ್ಯವನ್ನು ಹೊಂದಿದೆ. ಈ ದೃಷ್ಟಾಂತಗಳ ಮೊದಲವಾಕ್ಯವಾದ **'ಸ್ವಂ ಹ್ಯಪೀತೋ ಭವತಿ'** ಎಂಬಲ್ಲಿ ಜೀವನು **ಸ್ವಂ** ಎಂದರೆ ಸ್ವಾತ್ಮಕಭೂತವಾದ ಬ್ರಹ್ಮನೊಂದಿಗೆ **ಅಪೀತ** ನು ಅಂದರೆ ಐಕ್ಯ ಹೊಂದುವನು ಎಂದಿದೆ ಕಾರಣ ಐಕ್ಯದಲ್ಲಿಯೇ ಶ್ರುತಿಯ ತಾತ್ಪರ್ಯವಿದೆ, ಭೇದದಲ್ಲಿ ಹೇಗೆ ? ಎಂದು **ಶಂಕೆ ಮಾಡಿದರೆ ಇದಕ್ಕೆ ಉತ್ತರರೂಪ**ವಾಗಿ ಶ್ರೀಮದಾಚಾರ್ಯರು ಈ ಭಾಗವನ್ನು ಉದಾಹರಿಸಿ ಶ್ರುತಿಯ ಪೂರ್ವಾಪರಗಳನ್ನು ವಿವರಿಸುತ್ತ ಅದರ ಹಾರ್ದವನ್ನು ಸ್ಪಷ್ಟಪಡಿಸುತ್ತಾರೆ. ಐಕ್ಯವಾದಿಯು **ಸ್ವ** ಶಬ್ದವು ಜೀವನನ್ನು ಬೋಧಿಸುವದು ಎಂದು ತಾತ್ಪರ್ಯ ತೆಗೆದಿದ್ದಾನೆ. ಆದರೆ ವಸ್ತುತಃ **ಸ್ವ** ಶಬ್ದವು ಪರಮಾತ್ಮನನ್ನು ಬೋಧಿಸುತ್ತದೆಯೇ ಹೊರತು ಜೀವನನ್ನಲ್ಲ. ಇದಕ್ಕೆ ಶ್ರೀಮದಾಚಾರ್ಯರು ಅನೇಕ ಆಧಾರಗಳನ್ನು ಕೊಡುತ್ತಾರೆ. ವೇದವ್ಯಾಸರು ***ಬ್ರಹ್ಮಸೂತ್ರ***ದಲ್ಲಿ **ಸ್ವ** ಶಬ್ದವನ್ನು ಬ್ರಹ್ಮಪರವಾಗಿ ಪ್ರಯೋಗಿಸಿದ್ದಾರೆ. ***ಓಂ ಸ್ವಾತ್ಮನಾಚೋತ್ತರಯೋಃ ಓಂ ೨–೩–೧೨*** ಎಂಬ ಎರಡನೆಯ ಅಧ್ಯಾಯದ ಮೂರನೆಯ ಪಾದದ ಉತ್ಕ್ರಾಂತ್ಯಧಿಕರಣದಲ್ಲಿ **ಸ್ವಾತ್ಮ** ಶಬ್ದವು ಪರಮಾತ್ಮಪರವಾಗಿ ಪ್ರಯೋಗಿಸಲ್ಪಟ್ಟಿದೆ. ಈ ಸೂತ್ರದ ಹಿಂದಿನ ಸೂತ್ರವಾದ ***ಓಂ ಉತ್ಕ್ರಾಂತಿ ಗತ್ಯಾದೀನಾಂ ಓಂ*** ಎಂಬಲ್ಲಿ ಜೀವನು ಉತ್ಕ್ರಾಂತ್ಯಾದಿಗಳುಳ್ಳವನಾಗಿದ್ದರಿಂದ ಅಣುವು ಆಗಿದ್ದಾನೆ ಎಂದು ಸಾಧಿಸಿದ ಬಳಿಕ ಜೀವನ ಈ ಉತ್ಕ್ರಾಂತ್ಯಾದಿಗಳು ಪರಮಾತ್ಮನ ಅಧೀನವಾಗಿವೆಯೆಂದು ಈ ಸೂತ್ರದಲ್ಲಿ ಹೇಳಿದ್ದಾರೆ. ಶ್ರುತಿಯ ಎರಡು ಉತ್ತರ ವಾಕ್ಯಗಳಲ್ಲಿಯೂ ಕೂಡ ಜೀವನ ಸರ್ವವ್ಯಾಪಾರಗಳೂ ಪರಮಾತ್ಮನಿಂದಲೇ ಆಗುವವೆಂದು ಹೇಳಿರುವದರಿಂದ ಜೀವನ ಉತ್ಕ್ರಾಂತ್ಯಾದಿಗಳು ಪರಮಾತ್ಮನಿಂದಲೇ ಆಗುವವು ಎಂಬುದು ಈ ಸೂತ್ರದ ಅಭಿಪ್ರಾಯ. ಆ ಎರಡು ಉತ್ತರವಾಕ್ಯಗಳೆಂದರೆ **' ಸ ಏತೇನೈವ ಸ್ವಾತ್ಮನಾ ಪರೇಣೇಮಂ ಗರ್ಭಮನುಪ್ರವಿಶತಿ ಪರೇಣ ಜಾಯತೇ ಪರೇಣ ಕರ್ಮ ಕುರುತೇ ಪರೇಣ ನೀಯತೇ ಪರೇಣ ಉನ್ನೀಯತೇ ತಂ ವಾ ಏತಮಭಿವದಂತಿ ಸ್ವಾತ್ಮಾ'** ಹಾಗೂ **'ಏಷ ಹ್ಯೇನಂ ಜೀವಮಭಿಜೀವಯತಿ'** ಎಂಬವು. (**'ಏಷ ಹ್ಯಾನಂದಮಾದತ್ತೇ ಏಷ ಹ್ಯೇನಂ ಜೀವಮಭಿಜೀವಯತ್ಯೇಷ ಉದ್ಗಮಯತ್ಯೇಷ ಗಮಯತ್ಯೇಷ ಆಗಮಯತಿ'**). ಇವು ***ಪೌಷ್ಯಾಯಣಶ್ರುತಿ*** *ವಾಕ್ಯಗಳು.* ( ಬ್ರ. ಸೂ. ಭಾಷ್ಯ ) ಸೂತ್ರಾರ್ಥದ ವಿಷಯಕ್ಕೆ ಶಂಕೆ ಇದ್ದರೆ **ಸ್ವ** ಎಂದರೆ ಪರಮಾತ್ಮನೆಂಬ ಅರ್ಥ ಹೇಳುವ *ಪರಮೋಪನಿಷತ್ತಿನ ವಾಕ್ಯವನ್ನು* ಉದಾಹರಿಸಿ ಸ್ಪಷ್ಟಪಡಿಸುತ್ತಾರೆ. **'ಸ್ವಾತಂತ್ರ್ಯಾತ್ ಸ್ವ ಇತಿ ಪ್ರೋಕ್ತಃ ಆತ್ಮಾऽಯಂ**

Rarest Archiver

**ಚಾತತತ್ವತಃ । ಬ್ರಹ್ಮಾಯಂ ಗುಣಪೂರ್ಣತ್ವಾತ್ ಭಗವಾನ್ ವಿಷ್ಣುರವ್ಯಯಃ ॥'** **ಸ್ವಾತ್ಮ** ಪದದಲ್ಲಿ **ಸ್ವ** ಎಂಬುದು ವಿಷ್ಣುವು ಸರ್ವತಂತ್ರಸ್ವತಂತ್ರನೆಂಬುವದನ್ನು ತೋರಿಸುತ್ತದೆ. ಸರ್ವತ್ರ ವ್ಯಾಪ್ತನೆಂದು ಹೇಳುತ್ತದೆ. ಕಾರಣ **ಸ್ವ** ಪದವು ಪರಮಾತ್ಮನ ಅನ್ವರ್ಥಕವಾದ ಹೆಸರೇ ಎಂದು ತಿಳಿಯಬೇಕು. ಇದು ಜೀವನನ್ನು ಬೋಧಿಸುವುದಿಲ್ಲ.

ಇದರ ಮೇಲೆ ಮತ್ತೊಂದು ಪ್ರಶ್ನೆ ; **ಸ್ವ** ಶಬ್ದವು ಪರಮಾತ್ಮನನ್ನು ಬೋಧಿಸಲಿ. **ಅಪೀತಃ** ಶಬ್ದವು ಐಕ್ಯವನ್ನು ಬೋಧಿಸುತ್ತಿರುವುದರಿಂದ ಶಕುನಿ ಸೂತ್ರ ದೃಷ್ಟಾಂತವನ್ನು ಐಕ್ಯಪರವಾಗಿ ಅರ್ಥ ಮಾಡಬೇಕೇ ಹೊರತು ಭೇದ ಪರವಾಗಿ ಅಲ್ಲ. ಅಂದ ಮೇಲೆ ಎಲ್ಲ ಶ್ರುತಿಗಳಲ್ಲಿ ಭೇದವೇ ತಾತ್ಪರ್ಯವಾಗಿದೆಯೆಂಬುದು ಹೇಗೆ ಕೂಡುವದು? ಜೀವನು ಏಕೀಭಾವವನ್ನು ಹೊಂದುತ್ತಾನೆಯೆಂದು ಹೇಳುವಲ್ಲಿ **ಅಪೀತಃ ಭವತಿ** ಎಂದು ಶ್ರುತಿ ಹೇಳಿದೆಯಷ್ಟೆ ಎಂದು ಪ್ರಶ್ನೆಯ ತಾತ್ಪರ್ಯ.

ಇಲ್ಲಿ **ಅಪೀತ** ಶಬ್ದದ ಬಗ್ಗೆ ಸ್ವಲ್ಪ ವಿಶ್ಲೇಷಣೆ ಅಗತ್ಯವಿದೆ. **ಅಪೀತ** ಶಬ್ದವು ಐಕ್ಯಪರವಾಗಿದೆ ಎಂಬ ಅರ್ಥವನ್ನು ಈ ಶಬ್ದದ ಅವಯವವೃತ್ತಿಯನ್ನು ಗ್ರಹಿಸಿ ಮಾಡುವಿರೋ ಅಥವಾ ಅಖಂಡ ವೃತ್ತಿಯನ್ನವಲಂಬಿಸಿ ಮಾಡುವಿರೋ ಎಂದು ಪ್ರಶ್ನೆ. ಅವಯವವೃತ್ತಿಯನ್ನವಲಂಬಿಸಿ **ಅಪೀತ** ಪದದ ಅರ್ಥ ಮಾಡಿದವನಿಗೆ ಮರುಪ್ರಶ್ನೆ. ಅವಯವ ವೃತ್ತಿಯನ್ನವಲಂಬಿಸಿದರೆ **ಅಪೀತ** ಶಬ್ದಕ್ಕೆ ಐಕ್ಯ ಪರ ಅರ್ಥ ಬರುವದೇ ಇಲ್ಲವಲ್ಲ? **ಅಪಿ+ಇತ=ಅಪೀತ** ಎಂದಾಗುವದು. **ಅಪಿ** ಪದವು **ಅಪಿಧಾನ** ಎಂಬರ್ಥದಲ್ಲಿ ಇದೆ. **ಅಪಿಧಾನ**ವೆಂದರೆ ಕಣ್ಣಿಗೆ ಕಾಣದಂತೆ ಇರುವದು ಎಂದರ್ಥ. **ಅಪಿಧಾನತಿರೋಧಾನ ಪಿಧಾನಾಚ್ಛಾದನಾನಿ ಚ** ***(ಅಮರಕೋಶ ನಾನಾರ್ಥ–ವರ್ಗ)*** **ಇತ** ಪದವು ಹೋಗು ಎಂಬರ್ಥದ **ಇಣ್ ಗತೌ** ಧಾತುವಿನ ಕರ್ತರಿ ನಿಷ್ಠಾ ಪ್ರತ್ಯಯದೊಡನೆ ಇದ್ದಾಗ ಆದ ರೂಪವು. **ಅಪಿ+ಇತ = ಅಪೀತ** ಎಂದರೆ ಕಣ್ಣಿಗೆ ಕಾಣದಂತೆ ಇದ್ದು ಹೋಗಿರುವಂಥದು ಎಂದರೆ ಪ್ರವೇಶಿಸಿರುವಂಥದು ಎಂಬರ್ಥ ಬರುವದೇ ಹೊರತು ಐಕ್ಯ ಹೊಂದಿರುವದೆಂಬರ್ಥ ಬರುವದೇ ಇಲ್ಲ. ಇನ್ನು **ಅಪೀತ** ಶಬ್ದದ ಅಖಂಡಾರ್ಥವು ಐಕ್ಯಪರವೆಂದು ಗ್ರಹಿಸುವದಾದರೆ ಶ್ರುತಿಯಲ್ಲಿಯ ದ್ವಿತೀಯಾ ವಿಭಕ್ತಿಯ **ಸ್ವಮ್** ಎಂಬ ಪದಕ್ಕೆ ಅರ್ಥ ಹೇಳುವದು ಕಷ್ಟವಾಗುವದು. ಅದರೊಡನೆ ಐಕ್ಯವೆಂದು **ಸ್ವೇನ** ಎಂಬ ತೃತೀಯಾ ವಿಭಕ್ತಿ ಪದವು ಇಲ್ಲಿ ಬರಬೇಕಾಗಿತ್ತೇ ಹೊರತು 'ಅದನ್ನು' ಐಕ್ಯ ಎಂಬ ದ್ವಿತೀಯಾಂತ **ಸ್ವಮ್** ಪದವು ಇಲ್ಲಿ ಹೊಂದುವದಿಲ್ಲ. ದ್ವಿತೀಯಾಂತ **ಸ್ವಮ್** ಪದ ಪ್ರಯೋಗವಿದ್ದಿರುವುದರಿಂದ **ಅಪೀತ** ಪದಕ್ಕೆ ಪರಮಾತ್ಮನನ್ನು **(ಸ್ವಮ್) ಅಪೀತಃ** ಪ್ರವೇಶಿಸಿದ್ದಾನೆ ಎಂಬರ್ಥ ಲಭಿಸುವದು. **ಅಪೀತ** ಪದಕ್ಕೆ ಪ್ರವೇಶ ಮಾಡಿದಂಥಹದು ಎಂಬರ್ಥ ಮಾಡಿದಾಗ **ಸ್ವಂ** ಎಂಬ ಪದಕ್ಕೆ ತನ್ನನ್ನು (ಅಂದರೆ ಜೀವನನ್ನು ಎಂದು ಗ್ರಹಿಸಿದರೆ) ಜೀವನು ತನ್ನಲ್ಲಿ ಪ್ರವೇಶ

Rarest Archiver

ಮಾಡಿದ್ದಾನೆ ಎಂದು ಸಮರ್ಪಕ ಅರ್ಥವಾಗುವದಿಲ್ಲವಾದ ಕಾರಣ **ಸ್ವಮ್** ಪದಕ್ಕೆ ಪರಮಾತ್ಮ ಎಂದೇ ಅರ್ಥಮಾಡಬೇಕು. ಈ ರೀತಿಯ ಅರ್ಥಕ್ಕೆ ಸಮಾಖ್ಯೆಗಳೂ ಕೂಡ ಶ್ರುತಿಯಲ್ಲಿ ದೊರೆಯುವವು ಎಂಬುದನ್ನು '**ಸ್ವಂ ಕುಲಾಯಂ ಯಥಾಽಪೀತಃ ಪಕ್ಷೀ ಸ್ಯಾದೇವಮೀಶ್ವರಮ್ । ಅಪ್ಯೇತಿ ಜೀವಃ ಪ್ರಸ್ವಾಪೇ ಮುಕ್ತೌ ಚಾನ್ಯೋಽಪಿ ಸನ್ ಸದಾ ॥**' ಎಂಬ ವಾಕ್ಯದಿಂದ ಸ್ಪಷ್ಟಪಡಿಸುತ್ತಾರೆ. ಯಾವ ರೀತಿ ಪಕ್ಷಿಯು ತನ್ನ ಗೂಡನ್ನು ಪ್ರವೇಶಿಸುವದೋ ಅದೇ ರೀತಿ ಜೀವನೂ ಕೂಡ ನಿದ್ರೆಯ ಸಮಯದಲ್ಲಿ ಹಾಗೂ ಮುಕ್ತಾವಸ್ಥೆಯಲ್ಲಿ ತಾನು ಬೇರೆ ಇದ್ದರೂ ಕೂಡ ಪರಮಾತ್ಮನಲ್ಲಿ ಪ್ರವೇಶ ಮಾಡುವನು ಎಂಬರ್ಥದಲ್ಲಿ ಶ್ರುತಿಯು ತಾತ್ಪರ್ಯವೇ ಹೊರತು ಜೀವನು ಪರಮಾತ್ಮನಲ್ಲಿ ಐಕ್ಯ ಹೊಂದುವನು ಎಂಬಲ್ಲಿ ತಾತ್ಪರ್ಯವಿರುವದಿಲ್ಲ.

ಅಂತು, **ಸ್ವಮಪೀತೋ ಭವತಿ** ಎಂಬ ಛಾಂದೋಗ್ಯೋಪನಿಷತ್ತಿನಲ್ಲಿಯ ವಾಕ್ಯಭಾಗಕ್ಕೆ ಹೀಗೆ ಅರ್ಥ :-

ಅರುಣನ ಮಗನಾದ ಉದ್ದಾಲಕರು ತಮ್ಮ ಮಗನಾದ ಶ್ವೇತಕೇತುವಿಗೆ ನಿದ್ರೆ ಎಂದರೆ ಏನೆಂಬುದನ್ನು ತಿಳಿದುಕೋ ಎಂದು ಹೇಳಿದರು. ಈ ವ್ಯಕ್ತಿಯು ಮಲಗಿದ್ದಾನೆಂದರೆ ಆಗ ಅವನು **ಸತ್** ಎಂಬ ಹೆಸರಿನ ಪರಮಾತ್ಮನೊಡನೆ ಇರುವನೆಂದರ್ಥ. ಪರಮಾತ್ಮನನ್ನು ಪ್ರವೇಶಿಸಿದ್ದಾನೆ ಎಂಬರ್ಥ. (ಪ್ರಾಜ್ಞನಾಮಕ ಪರಮಾತ್ಮನೊಡನೆ ಆಲಿಂಗನ ಮಾಡಿಕೊಳ್ಳುತ್ತಾನೆ). ಇತರರಿಗೆ ಕಾಣದಂತೆ ಅಂದರೆ ಇನ್ನೊಬ್ಬರಿಗೆ ತಿಳಿಯದಂತೆ **(ಇತರೈಃ ಅಜ್ಞೇಯತ್ವೇನ ಅನುಪ್ರವಿಷ್ಟೋ ಭವತಿ)** – ***ಶ್ರೀ ರಾಯರ ಖಂಡಾರ್ಥ)*** ಪರಮಾತ್ಮನನ್ನು ಪ್ರವೇಶಿಸಿದ್ದಾನೆ ಎಂಬರ್ಥ. ಅದಕ್ಕೆ ಮಲಗಿದ್ದಾನೆ ಎನ್ನುವರು.

ಈ ಶ್ರುತಿಯ ಭಾವವು **ಶ್ರುತ್ಯರ್ಥಷಟ್ಪದಿ**ಯಲ್ಲಿ ಇಂತಿದೆ. :-

***ಖಗವು ದಿಶೆ ದೆಶೆಯಲ್ಲಿ ಹಾರುತ***
***ಮುಗಿಲಿನಿಂದಲಿ ಗಿಡದ ಗೂಡಿಗೆ***
***ಸೊಗದಿ ಸೇರಲು ಖಗವು ಗೂಡುಗಳೊಂದು ಎನ್ನುವರೆ? ॥***
***ಜಗದಿ ಜೀವನು ಬವಣೆ ಬಡುತಲಿ***
***ಸೊಗವ ಕಾಣಲು ಹರಿಯ ಸೇರಲು***
***ಜಗದಧೀಶ್ವರ ಜೀವರಿಬ್ಬರು ಒಂದೆ ಎನಬಹುದೆ? ॥ ॥***

'**ಸ್ವಂ ಹ್ಯಪೀತೋ ಭವತಿ**' ಎಂಬ ಛಾಂದೋಗ್ಯೋಪನಿಷತ್ತಿನ ತಾತ್ಪರ್ಯ ಹೇಳುವ ಸಂದರ್ಭದಲ್ಲಿ ಶ್ರೀಮದಾಚಾರ್ಯರು ಈ ತಾತ್ಪರ್ಯವನ್ನು ಸಮರ್ಥಿಸುವ ಹಲವಾರು ಶ್ರುತಿಗಳನ್ನು ಉದಾಹರಿಸಿದ್ದಾರೆ. **ಸ್ವಂ** ಎಂಬುದು ಪರಮಾತ್ಮನನ್ನು

Rarest Archiver

ಬೋಧಿಸುವದು ಎಂಬುದಕ್ಕೆ ಈ ಮೊದಲು ವಿವರಿಸಿದ **'ಸ್ವಾತಂತ್ರ್ಯಾತ್ ಸ್ವ ಇತಿ ಪ್ರೋಕ್ತ:.........'** ಇತ್ಯಾದಿ ವಾಕ್ಯವು, ಇವಲ್ಲದೆ **'ಏವಮೇವ ಖಲು ಸೋಮ್ಯೈತನ್ಮನೋ ದಿಶಂ ದಿಶಂ ಪತಿತ್ವಾಽನ್ಯತ್ರಾಯತನಂ ಅಲಬ್ಧ್ವಾ ಪ್ರಾಣಮೇವೋಪಾಶ್ರಯತೆ'** ಜೀವವು (ಮನಃ) ಎಲ್ಲೆಡೆಗೆ ಸುತ್ತಿದರೂ ಆಶ್ರಯವನ್ನು ಪಡೆಯದಿರಲು ಪರಮಾತ್ಮನನ್ನೇ ಆಶ್ರಯಿಸುತ್ತದೆ. **ಪ್ರಾಣಃ ಪ್ರಣಯನಾದೇಷಃ ಸಾಧುತ್ವಾತ್ ಸನ್ ಹರಿಃ ಸ್ಮೃತ :–** ಎಲ್ಲವನ್ನೂ ನಿರ್ವಹಿಸುವನಾದ್ದರಿಂದ ಜಗತ್ತಿನ ಪ್ರವರ್ತಕನಾದ ಕಾರಣ ಹರಿಯೇ **ಪ್ರಾಣ** ಎಂದು ಕರೆಯಿಸಲ್ಪಡುತ್ತಾನೆ. ಅವನೇ **ಸಾಧು** ಆಗಿರುವದಿಂದ **ಸನ್** ಎಂದು ಕರೆಯಿಸಿಕೊಳ್ಳುತ್ತಾನೆ. **ಯತ್ರಾಯಂ ಸ್ವಪಿತಿ ನಾಮ'** ಪರಮಾತ್ಮನಲ್ಲಿಯೇ ಪುರುಷನು ಆಶ್ರಯ ಹೊಂದುತ್ತಾನೆ. **ಮನನಾದ್ ಮನ ಉದ್ದಿಷ್ಟಃ ಪುದ್ಗಲೋ ನಿರಯಂ ಗಿರನ್ । ಕರ್ಮಾನುಶಯನಾಚ್ಚೈವ ಸಂಸಾರ್ಯನುಶಯೀ ಸ್ಮೃತಃ' ॥** ತಿಳಿದುಕೊಳ್ಳುವವನೇ **ಮನ** ಎಂದು ಕರೆಯಿಸಲ್ಪಡುವನು. ಅವನೇ ಪುರುಷನು – ಸಂಸಾರಿಯು. **ಪುದ್ಗಲ** ಎಂದರೆ **ಪುತ್** ನರಕವನ್ನು **ಗಲ** ಅನುಭವಿಸುವವನು, **ನಿರಯಂ** – ನರಕವನ್ನು **ಗಿಲನ್** – ಅನುಭವಿಸುವವನು . **ಅನುಶಯೀ** ಎಂದರೆ ಕರ್ಮಗಳಿಗೆ ಅನುಗುಣವಾಗಿ ಸಂಸಾರವನ್ನು ಅನುಭವಿಸುತ್ತ ಸಂಸಾರದಲ್ಲಿರುವವನು ಎಂದರ್ಥ. ಅಂತು, **ಮನ, ಪುದ್ಗಲ, ಅನುಶಯೀ** ಇವೆಲ್ಲ ಜೀವನನ್ನು ಬೋಧಿಸುವ ಪದಗಳು ಎಂದು ಅಭಿಪ್ರಾಯ. ಹೀಗೆ, ಶ್ರೀಮದಾಚಾರ್ಯರು **ಸ್ವಮಪೀತೋ ಭವತಿ** ಎಂಬ ವಾಕ್ಯದ ಅರ್ಥಕ್ಕೆ ಸಂವಾದಿಯಾದ ಅನೇಕ ವಾಕ್ಯಗಳನ್ನು ಉದಾಹರಿಸಿ ಶ್ರುತಿಗಳಲ್ಲಿ ಅರ್ಥಭೇದವಿಲ್ಲ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ.

**೨೭. ಸನ್ಮೂಲಾಃ ಸೋಮ್ಯೇಮಾಃ ಸರ್ವಾಃ ಪ್ರಜಾಃ ಸದಾಯತನಾಃ ಸತ್ಪ್ರತಿಷ್ಠಾಃ ॥** *–ಛಾಂದೋಗ್ಯ. ಅಧ್ಯಾಯ ೬ ಖಂಡ ೩, ಶ್ಲೋಕ ೩, ೪.*

ಶಕುನಿ ಸೂತ್ರದ ದೃಷ್ಟಾಂತವನ್ನು ಹೇಳಿದ ಮೇಲೆ ಉಪನಿಷತ್ತಿನಲ್ಲಿ ಈ ವಾಕ್ಯ ಹೊರಟಿದೆ. ಕೇವಲ ಸ್ವಪ್ನದಲ್ಲಿಯಷ್ಟೇ ಜೀವನು ಈಶಾಧೀನನಲ್ಲ ಜಾಗ್ರದ–ವಸ್ಥೆಯಲ್ಲಿಯೂ ಈಶಾಧೀನನಾಗಿದ್ದಾನೆ, ಮುಕ್ತಿ ಪಡೆದ ಮೇಲೂ ಈಶಾಧೀನನಾಗಿದ್ದಾನೆ ಎಂಬುದನ್ನು ಈ ವಾಕ್ಯವು ತಿಳಿಸುವದು.

**ಅನ್ವಯ: ಸೋಮ್ಯ, ಇಮಾ: ಸರ್ವಾ: ಪ್ರಜಾ: ಸನ್ಮೂಲಾ: ಸದಾಯತನಾ: ಸತ್ಪ್ರತಿಷ್ಠಾ:**

**ಅರ್ಥ :–** ಶ್ವೇತಕೇತುವೇ, ಈ ಎಲ್ಲ ಜೀವಗಳಿಗೆ ಪರಮಾತ್ಮನೇ **(ಸತ್)**

Rarest Archiver

ಕರ್ತೃವಾಗಿದ್ದಾನೆ, ಎಲ್ಲ ಜೀವರನ್ನು ಅವನೇ ಸೃಷ್ಟಿಮಾಡುತ್ತಾನೆ. (**ಮೂಲಂ ಕರ್ತೇತ್ಯರ್ಥ:**– *ಶ್ರೀರಾಯರ ಖಂಡಾರ್ಥ*), ಪರಮಾತ್ಮನೇ (**ಆಯತನ**) ಆಶ್ರಯನು, ಪರಮಾತ್ಮನೇ ಮುಕ್ತಿಪ್ರದನು, (ಜೀವನನ್ನು ಅವನೇ ಮುಕ್ತಿಯಲ್ಲಿ ಪ್ರತಿಷ್ಠಾಪಿಸುವನು. **'ಮುಕ್ತೌ ಸತ್ಪ್ರತಿಷ್ಠಾಃ' – ಖಂಡಾರ್ಥ. 'ತತ್ತದ್ಯೋಗ್ಯಸ್ಥಲವಿಶೇಷೇ ಸ್ಥಾಪಕ ಇತ್ಯರ್ಥಃ'** – *ವಿ.ತ.ವಿ. ಭಾವದೀಪ*) (**ಸತ್ ಮೂಲಂ ನಿಮಿತ್ತಂ ಯಾಸಾಂ ತಾ: ಸನ್ಮೂಲಾ: । ಸತ್ ಬ್ರಹ್ಮ ಆಯತನಂ ಆಶ್ರಯ: ಯಾಸಾಂ ತಾ: ಸದಾಯತನಾ: । ಸತ್ ಪರಂ ಬ್ರಹ್ಮೈವ ಮುಕ್ತೌ ಪ್ರತಿಷ್ಠಾಪಕಂ ಯಾಸಾಂ ತಾ: ಸತ್ಪ್ರತಿಷ್ಠಾ: ॥** *ಶ್ರೀನಿವಾಸತೀರ್ಥೀಯ ಟಿಪ್ಪಣೀ*)

**ವಿಶೇಷ ವಿಷಯಗಳು :–** ಈ ವಾಕ್ಯವನ್ನೂ ಕೂಡ ಶ್ರೀಮದಾಚಾರ್ಯರು ಭೇದವನ್ನು ಪ್ರತಿಪಾದಿಸುವ ಸ್ಪಷ್ಟವಾದ ವಾಕ್ಯವಾಗಿ ಉದಾಹರಿಸಿದ್ದಾರೆ. ಆಶ್ರಯ ಹೊಂದುವವನು ಹಾಗೂ ಆಶ್ರಯದಾತನು ಒಂದೇ ಆಗಲಾರರು. ಭೇದವಿರಲೇಬೇಕು. ಜೀವನ ಕರ್ತಾ ಎಂದರೆ ಜೀವನಿಗೆ ಉಪಾದಾನ ಕಾರಣನೆಂತಲ್ಲ. ಅವನಿಗೆ ನಿಮಿತ್ತನು, (ತಂದೆಯು ಮಗನಿಗೆ ಕರ್ತೃವೆಂದರೆ ಘಟಕ್ಕೆ ಮಣ್ಣಿನಂತೆ ಉಪಾದಾನ ಕಾರಣ–ನಾಗುವನೇ? ಹಾಗೆ ಉಪಾದಾನ ಕಾರಣನಾದರೆ ಘಟ ಹುಟ್ಟಿದ ಕ್ಷಣವೇ ಮಣ್ಣು ಮಣ್ಣಿನ ಹೆಂಟೆಯ ರೂಪವನ್ನು ಕಳೆದುಕೊಳ್ಳುವಂತೆ ಮಗನ ಜನ್ಮವಾದ ತಕ್ಷಣ ತಂದೆಯು ಇಲ್ಲದಂತಾಗಬೇಕು. ಹಾಗಾಗುವದಿಲ್ಲವಾದ ಕಾರಣ ತಂದೆಯು ಮಗನಿಗೆ ನಿಮಿತ್ತ ಕಾರಣನೇ ಹೊರತು ಉಪಾದಾನ ಕಾರಣನಲ್ಲನೆಂದು ತಿಳಿಯುವದು. ಅದರಂತೆಯೇ ಸಮಸ್ತ ಜಗತ್ತಿಗೆ ತಂದೆಯಾದ ಪರಮಾತ್ಮನೂ ಕೂಡ ನಿಮಿತ್ತ ಕಾರಣನೇ ಹೊರತು ಉಪಾದಾನ ಕಾರಣನಲ್ಲ.) ಪರಮಾತ್ಮನೇ ಮುಕ್ತಿಪ್ರದನು. ಸಂಸಾರಿಯು ಹಾಗೂ ಮುಕ್ತಿಯನ್ನು ಪಡೆದವನು ಒಂದೇ ಆಗಲಾರರು. ಜೀವೇಶರಲ್ಲಿ ಭೇದವೇ ಇದೆಯೇ ಹೊರತು ಅಭೇದವಿಲ್ಲ. ಮೂಲ, ಆಶ್ರಯ, ಪ್ರತಿಷ್ಠಾ ಪದಗಳಿಂದ ಪರಮಾತ್ಮನು ಜೀವರಿಗೆ ನಿಮಿತ್ತ ಕಾರಣನು ಉಪಾದಾನ ಕಾರಣವಲ್ಲ, ಜೀವನು ಸ್ವತಂತ್ರವಾಗಿ ಇರಲಾರನು, ಅವನ ಆಶ್ರಯದಲ್ಲಿಯೇ ಇರುವನಾದಕಾರಣ ಅಸ್ವ–ತಂತ್ರನು, ಜೀವನು ಪರಮಾತ್ಮನಿಂದಲೇ ಪ್ರತಿಷ್ಠಿತನಾಗುವದರಿಂದ ಮುಕ್ತಿಯಲ್ಲಿಯೂ ಅವನ ಅಧೀನನು ಎಂದು ಭೇದವೇ ಈ ವಾಕ್ಯದಿಂದ ಸಿದ್ಧವಾಗುವದು. (ಟೀಕಾ).

**ಈ ವಾಕ್ಯದ ಒಟ್ಟರ್ಥ ಇಂತಿದೆ :–**

*ಪರಮ ಪುರುಷನೆ ಜೀವಗಾದಿಯು*
*ಪರಮ ಪುರುಷನೆ ಜೀವಗಾಶ್ರಯ*
*ಪರಮ ಪುರುಷನೆ ಮುಕುತಿ ಕೊಡುವನು ಜೀವಗನುಗುಣವು ।*

Rarest Archiver

*ಸರುವ ವೇದಗಳಿಂತು ಸಾರಲು*
*ಪರಮ ಪುರುಷನು ಜೀವಭಿನ್ನನು*
*ಪರಮ ಪುರುಷಾಧೀನ ಜಗವಿದು ಎಂದು ತಿಳಿಯುತಿದೆ. ॥*

**೨೮. ಸ್ರಷ್ಟೃತ್ವಾತ್ ಆಶ್ರಯತ್ವಾತ್ ಚ ಮುಕ್ತಾನಾಂ ಚ ಪ್ರತಿ ಪ್ರತಿ ।**
**ಸ್ಥಾಪನಾತ್ ಚ ವಿಭುರ್ವಿಷ್ಣು: ಅನ್ಯ: ಸಂಸಾರಿಣೋ ಮತ: ॥**
– *ಆಗಮಾಂತರ ವಾಕ್ಯ (?)*

ಐಕ್ಯವು ಪ್ರಮಾಣಜ್ಯೇಷ್ಠವಾದ ಸಾಕ್ಷಿಪ್ರತ್ಯಕ್ಷದಿಂದ ಸಿದ್ಧವಿಲ್ಲವಷ್ಟೇ ಅಲ್ಲ ಸಾಕ್ಷಿವಿರುದ್ಧವೂ ಆಗಿದೆ ಎಂದು ಸಿದ್ಧಮಾಡಿದಮೇಲೆ ಐಕ್ಯವು ಆಗಮಗಳಿಂದ ಅಸಿದ್ಧವೂ ಆಗಮವಿರುದ್ಧವೂ ಆಗಿದೆ ಎಂಬುದನ್ನು ಹೇಳುವ ಸಂದರ್ಭದಲ್ಲಿ ಶ್ರೀಮದಾಚಾರ್ಯರು ಈ ವಾಕ್ಯವನ್ನು ಉದಾಹರಿಸಿದ್ದಾರೆ. ಇದು ಆಗಮಾಂತರ ವಾಕ್ಯವೆಂದು ಶ್ರೀ ಟೀಕಾಕೃತ್ಪಾದರು ಸೂಚಿಸಿದ್ದು ಆಕರವನ್ನು ಇಲ್ಲಿಯವರೆಗೆ ಪ್ರಕಾಶಿತವಾದ ಯಾವ ಟಿಪ್ಪಣಿಗಳಲ್ಲಿಯೂ ಸೂಚಿಸಿದಂತಿಲ್ಲ. ಶ್ರೀ ವ್ಯಾಸತತ್ವಜ್ಞತೀರ್ಥರು *ಲಘುಪ್ರಭಾ* ಟಿಪ್ಪಣಿಯಲ್ಲಿ **ಜಗತೋ ಮೂಲಮಪ್ಯೇಷ: ನಿಮಿತ್ತಂ ನ ವಿಕಾರವಾನ್ । ಬೀಜಜೀವೋ ಯಥಾ ಮೂಲಂ ಅಂಕುರಸ್ಯಾವಿಕಾರತ: ॥ ಯಥಾ ಪಿತಾ ಪುತ್ರತನ್ವಾ: ತದ್ದೇಹೋ ಹಿ ವಿಕಾರವಾನ್ ॥ ಏವಂ ಹರಿರ್ಮೂಲಮಪಿ ನ ವಿಕಾರೀ ಕಥಂಚನ ॥ ಇತಿ ಛಾಂದೋಗ್ಯಭಾಷ್ಯೋದಾಹೃತವಾಕ್ಯಾಂತರಾನುಸಾರೇಣ ॥** ಎಂದು ಮಾತ್ರ ಹೇಳಿ ಈ ವಾಕ್ಯವು ಛಾಂದೋಗ್ಯೋಪನಿಷದ್ಭಾಷ್ಯದಲ್ಲಿ ಆಚಾರ್ಯರು ಉದಾಹರಿಸಿದ ವಾಕ್ಯಕ್ಕನುಗುಣವಾಗಿ ಇದೆ ಎಂದು ತಿಳಿಸಿದ್ದಾರೆ. (ಅಖಿಲಭಾರತ ಮಾಧ್ವಮಹಾ-ಮಂಡಲದ ೧೯೬೯ರಲ್ಲಿ ಪ್ರಕಾಶಿತವಾದ *ಸರ್ವಮೂಲಗ್ರಂಥಾ : ಸಂಪುಟ ೧* ರ ೪೩೭ ನೆಯ ಪತ್ರದಲ್ಲಿ ನೋಡಬಹುದು). ಇತ್ತೀಚಿಗೆ ಪೂರ್ಣಪ್ರಜ್ಞ ವಿದ್ಯಾಪೀಠದಿಂದ ಪ್ರಕಾಶಿತವಾದ ವಿ.ತ.ವಿ. ಗ್ರಂಥದಲ್ಲಿಯ ನಾರಾಯಣ-ಪಂಡಿತಾಚಾರ್ಯರ *ವಿ.ತ.ವಿ. ತತ್ವಮಂಜರೀ ಟೀಕೆಯಲ್ಲಿ* ಮಾತ್ರ ಇದು **ಸ್ರಷ್ಟೃತ್ವಾದಿತ್ಯಾದಿ** ***ಪರಮೋಪನಿಷದಾ*** ಎಂದು ಹೇಳಿದ್ದರಿಂದ ಇದೂ ಕೂಡ ಪರಮೋಪನಿಷತ್ತಿನ ವಾಕ್ಯವೆಂದು ಸೂಚಿತವಾಗುತ್ತದೆ. (ಆದರೆ ಈ ಪರಮೋಪನಿಷತ್ತಿನ ಪ್ರತಿ ನನಗೆ ಸಿಕ್ಕಿಲ್ಲ)

ಛಾಂದೋಗ್ಯೋಪನಿಷತ್ತಿನಲ್ಲಿ ಬರುವ ಶ್ವೇತಕೇತು ಉದ್ದಾಲಕರ ನಡುವಿನ ಸಂವಾದದಲ್ಲಿ ಶಕುನಿ ಸೂತ್ರಾದಿ ಒಂಬತ್ತು ದೃಷ್ಟಾಂತಗಳ ಅಭಿಪ್ರಾಯವನ್ನು ವಿವರಿಸುವ ಸಂದರ್ಭದಲ್ಲಿ ಶ್ರೀಮದಾಚಾರ್ಯರು ಈ ವಾಕ್ಯವನ್ನು ಉದಾಹರಿಸಿದ್ದಾರೆ. ಇದಕ್ಕೆ **ಹಿನ್ನೆಲೆ** ಹೀಗಿದೆ: ಶಕುನಿ ಸೂತ್ರವೇ ಆದಿಯಾದ ದೃಷ್ಟಾಂತಗಳು ಭೇದವನ್ನೇ ಹೇಳುತ್ತವೆ, ಅಭೇದವನ್ನಲ್ಲ, ಅಭೇದದ ವಿಷಯಕ್ಕೆ ಒಂದೂ ಆಗಮವಿಲ್ಲ ಎಂದು

Rarest Archiver

ಶ್ರೀಮದಾಚಾರ್ಯರ ಸಿದ್ಧಾಂತವಷ್ಟೆ. (ಈ ಮೊದಲು ಇದು ವಿವರಿಸಲ್ಪಟ್ಟಿದೆ.) ಇದಕ್ಕೆ ಅದ್ವೈತಿಗಳು ಹೀಗೆ ಆಕ್ಷೇಪ ಮಾಡುತ್ತಾರೆ. ದಾರದಿಂದ ಕಟ್ಟಲ್ಪಟ ಗುಬ್ಬಿಯು (ಶಕುನಿ) ದಿಕ್ಕು ದಿಕ್ಕಿಗೆ ಹಾರಾಡಿ ಯಾವ ಆಶ್ರಯವನ್ನು ಪಡೆಯದೆ ಕೊನೆಗೆ ತನ್ನ ಮೊದಲಿನ ಸ್ಥಾನಕ್ಕೇ ಮರಳುವಂತೆ ಜೀವನು ಜಾಗ್ರದವಸ್ಥೆ ಹಾಗೂ ಸ್ವಪ್ನಾವಸ್ಥೆಗಳಲ್ಲಿ ಎಲ್ಲೆಲ್ಲಿಗೋ ಹೋಗಿ ಶ್ರಮಬಟ್ಟು ತನಗೆ ಅಶ್ರಯಕೊಟ್ಟ ದೇವರನ್ನೇ ಕೊನೆಗೆ ನಿದ್ರಾವಸ್ಥೆಯಲ್ಲಿ ಆಶ್ರಯಿಸುತ್ತಾನೆ (ಪ್ರಾಜ್ಞನಾಮಕ ಪರಮಾತ್ಮನನ್ನು ಆಲಿಂಗನ ಮಾಡಿಕೊಳ್ಳುತ್ತಾನೆ ಅಂದರೆ ನಿದ್ರೆ ಮಾಡುತ್ತಾನೆ); ಹೀಗೆ ಅರ್ಥ ಮಾಡಿ ಜೀವನು ಪರಮಾತ್ಮನ ಅಧೀನನು ಎಂದು ಹೇಳುವದು ಸರಿಯಲ್ಲ, ಏಕೆಂದರೆ ಶಕುನಿ ಸೂತ್ರ ದೃಷ್ಟಾಂತ ಹೇಳಿ ಕೊನೆಗೆ **ಸನ್ಮೂಲಾ:** ಎಂದು ಹೇಳಿದ್ದಾರೆ. ಇಲ್ಲಿ **ಮೂಲ** ಶಬ್ದ ಪ್ರಯೋಗವಿದೆ. ಘಟಕ್ಕೆ (ಮಣ್ಣಿನ ಮಡಿಕೆಗೆ) ಮೃತ್ತು (ಮಣ್ಣು) ಮೂಲ (ಉಪಾದಾನ ಕಾರಣ) ವಿರುವಂತೆ ಸಕಲ ಜೀವರೇ ಆದಿಯಾದ ಜಗತ್ತಿಗೆ ಪರಮಾತ್ಮನೇ (ಸತ್) ಮೂಲನು, ಅಂದರೆ ಉಪಾದಾನ ಕಾರಣನು, ಘಟವು ನಾಶವಾದರೆ ಕೊನೆಗೆ ಮಣ್ಣೇ ಆಗುವಂತೆ ಜೀವನು ತನ್ನ ಉಪಾದಾನ ಕಾರಣವಾದ ಪರಮಾತ್ಮನನ್ನೇ ಕೊನೆಗೆ ಸೇರಿ ಒಂದಾಗುತ್ತಾನೆ ಎಂದು ಅಭೇದವನ್ನು ಹೇಳುವದಕ್ಕಾಗಿಯೇ ಶ್ರುತಿಯು ಪ್ರವೃತ್ತವಾಗಿದೆಯೇ ಹೊರತು ಭೇದವನ್ನು ಹೇಳಲು ಅಲ್ಲ ಎಂದು ಆಕ್ಷೇಪಕಾರನ ಅಭಿಪ್ರಾಯ. ಈ ಆಕ್ಷೇಪವನ್ನು ನಿರಾಕರಿಸುವದಕ್ಕೋಸ್ಕರವೆ ಶ್ರೀಮದಾಚಾರ್ಯರು **ಸ್ರಷ್ಟೃತ್ವಾತ್** ಇತ್ಯಾದಿ ಇನ್ನೊಂದು ಪ್ರಮಾಣವನ್ನು ಹೇಳಿ ಪರಮಾತ್ಮನು ಜಗತ್ತಿಗೆ ಉಪಾದಾನ ಕಾರಣನಲ್ಲವೆಂದು ಸಾಧಿಸಿದ್ದಾರೆ.

**ಪದಚ್ಛೇದ ಹಾಗೂ ಅನ್ವಯ : ಪ್ರತಿ ಪ್ರತಿ ಚ (ಪ್ರಜಾನಾಮ್) ಸ್ರಷ್ಟೃತ್ವಾತ್, ಪ್ರತಿ ಪ್ರತಿ ಚ ಪ್ರಜಾನಾಮ್ ಆಶ್ರಯತ್ವಾತ್ ಮುಕ್ತಾನಾಮ್ ಸ್ಥಾಪನಾತ್ ಚ ವಿಭು: ವಿಷ್ಣು: ಸಂಸಾರಿಣ: ಅನ್ಯ: ಮತ: ॥**

**ಅರ್ಥ:–** ಪ್ರತಿ ಕಲ್ಪದಲ್ಲಿಯೂ ಪ್ರಜೆಗಳನ್ನು ಸೃಷ್ಟಿಸುವದರಿಂದಲೂ, ಸೃಷ್ಟರಾದ ಪ್ರಜೆಗಳಿಗೆ ಆಶ್ರಯವನ್ನು ಕೊಡುವದರಿಂದಲೂ (ರಕ್ಷಿಸುವದರಿಂದಲೂ) ಹಾಗೂ ಮುಕ್ತಿಯೋಗ್ಯರಿಗೆ ಮುಕ್ತಿಸ್ಥಾನವನ್ನು ಕೊಟ್ಟು ಆಶ್ರಯ ಕೊಡುವದರಿಂದಲೂ ಕೂಡ ಸರ್ವತಂತ್ರ ಸ್ವತಂತ್ರನೂ ಸಮರ್ಥನೂ ಆದ ವಿಷ್ಣುವು ಜೀವರಿಗಿಂತ (ಸಂಸಾರಿಗಿಂತ) ಭಿನ್ನನು ಎಂದು ತಿಳಿಯಲ್ಪಡುತ್ತಾನೆ.

**ವಿಶೇಷ ವಿಷಯಗಳು :–** ಪರಮಾತ್ಮನು ತಂದೆಯಂತೆ ಸಮಸ್ತ ಜಗತ್ತಿಗೆ ಜನ್ಮದಾತನು, ತಂದೆಯು ತನ್ನ ಮಕ್ಕಳಿಗೆ (ಮಡಿಕೆಗೆ ಮಣ್ಣು ಆಗುವಂತೆ) ಉಪಾದಾನ ಕಾರಣನಲ್ಲ. ನಿಮಿತ್ತ ಕಾರಣನು. ಇದನ್ನು ತಿಳಿಸಲೆಂದೇ ಈ ಶ್ರುತಿವಾಕ್ಯವು **ಸ್ರಷ್ಟೃತ್ವಾತ್** ಎಂದು ಪರಮಾತ್ಮನು **ಸ್ರಷ್ಟಾ** (ತಂದೆಯು) ಎಂದು ಸ್ಪಷ್ಟವಾಗಿ ಹೇಳಿದೆ. ಇನ್ನು ಈ ವಾಕ್ಯದಲ್ಲಿ

Rarest Archiver

ಉಪಾದಾನ ಕಾರಣನಲ್ಲವೆಂದು ಹೇಳಿರಲಿ, ಆದರೆ ಉಪಾದಾನ ಕಾರಣವೆಂದು ಅರ್ಥ ಬರುವ **ಮೂಲಮ್** ಎಂದು ಪ್ರಯೋಗಿಸಲ್ಪಟ್ಟ ಪದದ ಗತಿಯೇನು ಎಂದು ಪ್ರಶ್ನೆ ಬಂದರೆ ಅದಕ್ಕೆ ಶ್ರೀ ಟೀಕಾಕೃತ್ಪಾದರು **ಮೂಲ**ಪದವು ಕೇವಲ ಕಾರಣ ಎಂಬರ್ಥದಲ್ಲಿ ಪ್ರಯೋಗಿಸಲ್ಪಟ್ಟಿದೆಯೇ ಹೊರತು ಉಪಾದಾನ ಕಾರಣ ಎಂಬ ಹೆಚ್ಚಿನ ಅರ್ಥದಲ್ಲಿ ಪ್ರಯೋಗಿಸಲ್ಪಟ್ಟಿಲ್ಲವೆಂದು ಸ್ಪಷ್ಟಪಡಿಸಿದ್ದಾರೆ. ಇದೇ **ಸನ್ಮೂಲಾ:** ಇತ್ಯಾದಿ ಶ್ರುತಿಯ ಹಾರ್ದವು ಎಂದು ತಿಳಿಸಲೆಂದೇ **ಸ್ರಷ್ಟೃತ್ವಾತ್** ಇತ್ಯಾದಿ ಶ್ರುತಿಯು ಹೊರಟಿದೆ. ಇದನ್ನು ಇನ್ನೂ ಸ್ಪಷ್ಟಪಡಿಸಲು ಶ್ರೀ ವ್ಯಾಸತತ್ವಜ್ಞರು ಛಾಂದೋಗ್ಯಭಾಷ್ಯದಲ್ಲಿಯ ಇನ್ನೊಂದು ಶ್ರುತಿಯನ್ನು ಇಲ್ಲಿ ಉಲ್ಲೇಖಿಸಿ ಜಗತ್ತಿಗೆ ಪರಮಾತ್ಮನು ಮೂಲ ಎಂದರೆ ನಿಮಿತ್ತನು, ಆದರೆ ವಿಕಾರ ಹೊಂದುವ ಉಪಾದಾನ ಕಾರಣನಲ್ಲ ಎಂದು ವಿಶದಪಡಿಸಿದ್ದಾರೆ.

ಈ ಶ್ರುತಿಯ ಭಾವವು **ಶ್ರುತ್ಯರ್ಥಷಟ್ಪದಿ**ಯಲ್ಲಿ ಇಂತಿದೆ. :-

> ಜಗಕೆ ಹರಿ ತಾ ಮೂಲನಾಗಿಹ-
> ನಘವಿದೂರನು, ನಿಗಮಗೋಚರ,
> ಮಗಗೆ ಪಿತನಂದದಲಿ ಹರಿ ನೈಮಿತ್ತಕಾರಣನು.
> ಮಗನು ಪುಟ್ಟಲು ತಂದೆ ಮಡಿವನೆ ?
> ನಗರೆ, ಮಡಿಕೆಗೆ ಮಣ್ಣಿನಂದದಿ
> ಜಗದ ಕಾರಣನೆಂದು ಪೇಳ್ದರೆ ನಿರ್ವಿಕಾರನಿಗೆ ? ॥

## ೨೯. ಅನೇನ ಜೀವೇನ ಆತ್ಮನಾಽನುಪ್ರವಿಶ್ಯ ನಾಮರೂಪೇ ವ್ಯಾಕ್ರವಾಣಿ

*-ಛಾಂದೋಗ್ಯ. ಅಧ್ಯಾಯ ೬, ಖಂಡ ೩, ಶ್ಲೋ ೬(೭)*

**ಹಿನ್ನೆಲೆ:-** ಉದ್ದಾಲಕರು ಶ್ವೇತಕೇತುವಿಗೆ ನೀನೇನೂ ಪರಮಾತ್ಮನಾಗಲಾರೆ, ನೀನು ವಿನೀತನಾಗಿರಬೇಕೆಂದು ಉಪಾಯದಿಂದ ಹೇಳುತ್ತಿರುವಾಗ ಒಂಬತ್ತು ದೃಷ್ಟಾಂತಗಳನ್ನು ಕೊಟ್ಟು ವಿವರಿಸಿದ್ದಾರಷ್ಟೆ. ಈ ಒಂಬತ್ತೂ ದೃಷ್ಟಾಂತಗಳಲ್ಲಿ ಜೀವೇಶಭೇದವೇ ಹೇಳಲ್ಪಟ್ಟಿದೆಯೇ ಹೊರತು ಅಭೇದವಲ್ಲವೆಂದು ಶ್ರೀಮದಾಚಾರ್ಯರು ಒತ್ತುಕೊಟ್ಟು ಹೇಳಿದ್ದಾರೆ. ಇದನ್ನು ಈ ಮೊದಲು ವಿವರಿಸಿದ್ದೇವೆ. ಇದರ ಮೇಲೆ ***ಮತ್ತೆ ಆಕ್ಷೇಪ ಮಾಡಿದ್ದು ಆ ಆಕ್ಷೇಪವು*** ಇಂತಿದೆ.

ಈ ಒಂಬತ್ತು ದೃಷ್ಟಾಂತಗಳಲ್ಲಿ ಒಂದಾದ ಜೀವ ವೃಕ್ಷ ದೃಷ್ಟಾಂತ-ದಲ್ಲಿಯೂ ಕೂಡ ಭೇದವನ್ನು ಹೇಳಿದೆಯೆಂಬ ವಿಷಯಕ್ಕೆ ಗಮಕವೇನೂ ಇಲ್ಲ. ಆದರೆ, ನದೀ ಸಮುದ್ರ ದೃಷ್ಟಾಂತದಲ್ಲಿ ಹೇಳಿದ ಪ್ರಕಾರ ಸಮುದ್ರವನ್ನು ಪ್ರವೇಶಿಸಿದ ನದಿಗಳು ತಮ್ಮ ಅಸ್ತಿತ್ವವನ್ನೇ ಕಳೆದುಕೊಳ್ಳುವ ಹಾಗೆ ನಿದ್ರಾವಸ್ಥೆಯಲ್ಲಿಹಾಗೂ ಪ್ರಳಯದಲ್ಲಿಪರಮಾತ್ಮನನ್ನು ಪ್ರವೇಶಿಸಿದ ಜೀವನೂ ಕೂಡ ತನ್ನ ಅಸ್ತಿತ್ವವನ್ನು

Rarest Archiver

ಕಳೆದುಕೊಳ್ಳುವನೋ ಹೇಗೆ ಎಂಬ ಶಂಕೆ ಬರುವದು. ಆಗ ಇದನ್ನು ನಿರಾಕರಿಸಲು **ಅಸ್ಯ ಸೋಮ್ಯ ಮಹತೊ ವೃಕ್ಷಸ್ಯ** ಇತ್ಯಾದಿ ವೃಕ್ಷ ಜೀವ ದೃಷ್ಟಾಂತವನ್ನು ಹೇಳಿದ್ದಾರೆ. ಕಾರಣ, ***ಜೀವನಿಗೆ ವಿನಾಶಾಭಾವವನ್ನು ಹೇಳಲು ಈ ದೃಷ್ಟಾಂತವು ಹೊರಟಿರು-ವದೇ ಹೊರತು ಜೀವೇಶಭೇದವನ್ನು ಹೇಳುವದಕ್ಕಾಗಿ ಅಲ್ಲ ಎಂಬುದು ಆಕ್ಷೇಪದ ಹಾರ್ದ. ಇದಕ್ಕೆ ಸಮಾಧಾನವನ್ನು ಹೀಗೆ ಹೇಳಿದ್ದಾರೆ.***

ಆಕ್ಷೇಪಕಾರನು ಉಪನಿಷತ್ತಿನ ವೃಕ್ಷ ಜೀವ ದೃಷ್ಟಾಂತದ ವಾಕ್ಯಖಂಡದಲ್ಲಿ ಬರುವ '**ಏಷ ಜೀವೇನಾತ್ಮನಾನುಪ್ರಭೂತಃ ಪೇಪೀಯಮಾನೋ ಮೋದಮಾನ-ಸ್ತಿಷ್ಠತಿ ....**' ಎಂಬ ವಾಕ್ಯದಲ್ಲಿಯ **ಜೀವ** ಶಬ್ದವನ್ನು ಜೀವ ಎಂದು ಅರ್ಥಮಾಡಿ ಈ ಆಕ್ಷೇಪ ಮಾಡಿದ್ದಾನೆ. ಆದರೆ *ವಸ್ತುತಃ ಈ* ***ಜೀವ*** *ಶಬ್ದವು ಪರಮಾತ್ಮ ಪರವಾಗಿದೆಯೆಂಬುದನ್ನು* ಶ್ರೀಮದಾಚಾರ್ಯರು ಅದೇ ಉಪನಿಷತ್ತಿನಲ್ಲಿ ಈ ಮೊದಲು ಬರುವ ವಾಕ್ಯಖಂಡದಲ್ಲಿಯ ಜೀವಶಬ್ದದ ಅರ್ಥ ಹೇಳುತ್ತ ವಿವರಿಸಿದ್ದಾರೆ. ಈ ರೀತಿ ಅರ್ಥಮಾಡುವದು ಏಕೆ ಸಮರ್ಪಕವೆಂಬುದು ಈ ವಾಕ್ಯವು ಯಾವ ಭಾಗದಲ್ಲಿ ಬಂದಿದೆ ಎಂಬುದನ್ನೂ ಮತ್ತು ಅದರ ಹಿನ್ನೆಲೆ ಏನು ಎಂಬುದನ್ನೂ ತಿಳಿದುಕೊಂಡಾಗ ಮನವರಿಕೆಯಾಗುವದು.

ವೃಕ್ಷ ಜೀವ ದೃಷ್ಟಾಂತವನ್ನು *ಛಾಂದೋಗ್ಯೋಪನಿಷತ್ತಿನ* ೬ ನೆಯ ಅಧ್ಯಾಯದ ೩ ನೆಯ ಖಂಡದಲ್ಲಿ ಹೇಳಿದ್ದಾರೆ. ಆದರೆ ಇಲ್ಲಿ ಹೇಳಲ್ಪಟ್ಟ '**ಅನೇನ ಜೀವೇನ ..........**' ಇತ್ಯಾದಿ ವಾಕ್ಯವು ಇದೇ ಅಧ್ಯಾಯದ ಎರಡನೆಯ ಖಂಡದಲ್ಲಿ ಬಂದಿದೆ. ಆಚಾರ್ಯರು '**ಅನೇನ ಜೀವೇನಾತ್ಮನಾಽನುಪ್ರವಿಶ್ಯ ನಾಮರೂಪೇ ವ್ಯಾಕರವಾಣಿ**'ಎಂದಿಷ್ಟೇ ಉದಾಹರಿಸಿದ್ದು ಈ ವಾಕ್ಯಖಂಡದ ಪೂರ್ಣಪಾಠವನ್ನು ಗಮನಿಸುವದವಶ್ಯ. ಈ ವಾಕ್ಯಖಂಡದ **ಪೂರ್ಣಪಾಠ** ಇಂತಿದೆ :-

**'ಸೇಯಂ ದೇವತ್ಯೈಕ್ಷತ ಹಂತಾಹಮಿಮಾಸ್ತಿಸ್ರೋ ದೇವತಾ ಅನೇನ ಜೀವೇನಾ-ತ್ಮನಾನುಪ್ರವಿಶ್ಯ ನಾಮರೂಪೇ ವ್ಯಾಕರವಾಣೀತಿ' ॥ ೬-೨-೬**

**'ತಾಸಾಂ ತ್ರಿವೃತಂ ತ್ರಿವೃತಮೇಕ್ಯೈಕಾಂ ಕರವಾಣೀತಿ ಸೇಯಂ ದೇವತೇಮಾ-ಸ್ತಿಸ್ರೋ ದೇವತಾ ಅನೇನ್ಯೈವ ಜೀವೇನಾತ್ಮನಾನುಪ್ರವಿಶ್ಯ ನಾಮರೂಪೇ ವ್ಯಾಕರೋತ್॥' ೬-೨-೭**

**ಪದಚ್ಛೇದ ಹಾಗೂ ಅನ್ವಯ:-**

**ಸಾ ಇಯಂ ದೇವತಾ ಐಕ್ಷತ ಹಂತ ಅಹಂ ಇಮಾ: ತಿಸ್ರ: ದೇವತಾ: ಅನೇನ ಜೀವೇನ ಆತ್ಮನಾ ಅನುಪ್ರವಿಶ್ಯ ನಾಮರೂಪೇ ವ್ಯಾಕರವಾಣಿ ಇತಿ ।**

Rarest Archiver

**ತಾಸಾಂ ತ್ರಿವೃತಂ ತ್ರಿವೃತಂ ಏಕೈಕಾಂ ಕರವಾಣಿ ಇತಿ । ಸಾ ಇಯಂ ದೇವತಾ ಇಮಾಃ ತಿಸ್ರಃ ದೇವತಾಃ ಅನೇನ ಏವ ಜೀವೇನ ಆತ್ಮನಾ ಅನುಪ್ರವಿಶ್ಯ ನಾಮರೂಪೇ ವ್ಯಾಕರೋತ್ ॥**

**ಅರ್ಥ:–** ತೇಜೋಭಿಮಾನಿ ಶ್ರೀ, ಅಪ್ ಅಭಿಮಾನಿ ಪ್ರಾಣ ಹಾಗೂ ಅನ್ನವೆಂದು ಕರೆಯಲ್ಪಡುವ ಪೃಥಿವೀ ಅಭಿಮಾನಿ ರುದ್ರರನ್ನು ಸೃಷ್ಟಿ ಮಾಡಿದ ಮೇಲೆ ಆ ಸತ್ ನಾಮಕ ವಿಷ್ಣುವು (ಎಂಬ ದೇವತೆಯು) ವಿಚಾರ ಮಾಡಿದನು, " ಅಹ! ನಾನು ಈ ದೇವತೆಗಳಲ್ಲಿ ಈ ಜೀವಾಖ್ಯ ಅನಿರುದ್ಧರೂಪದಿಂದ ಪ್ರವೇಶಿಸಿ ಶಬ್ದಾತ್ಮಕ (ಹೆಸರಿನಿಂದ ಕರೆಯಲ್ಪಡುವ) ಅರ್ಥಾತ್ಮಕವಾದ (ವಸ್ತುರೂಪವಾದ) ಜಗತ್ತನ್ನು ಸೃಷ್ಟಿ ಮಾಡುವೆನು. ಇವುಗಳಲ್ಲಿ ಅಂದರೆ ಶ್ರೀ, ಪ್ರಾಣ, ರುದ್ರ ಇವುಗಳಲ್ಲಿ ಮತ್ತು ತೇಜಸ್ಸು, ಅಪ್ ಮತ್ತು ಪೃಥಿವೀ ಇವುಗಳಲ್ಲಿಂದ ಒಂದೊಂದನ್ನು ಅಂದರೆ ಮೂರು ಚೇತನಾಂಶ–ಗಳನ್ನೂ ಮತ್ತು ಮೂರು ಜಡಾಂಶಗಳನ್ನೂ ಒಟ್ಟು ಆರು ಅಂಶಗಳನ್ನು ಮಿಶ್ರಣ ಮಾಡಿ ಒಂದು ತೇಜಸ್ಸು ಎಂಬ ವಸ್ತುವನ್ನು, ಒಂದು ಅಪ್ ಎಂಬ ವಸ್ತುವನ್ನು ಹಾಗೂ ಒಂದು ಪೃಥಿವೀ ಎಂಬ ವಸ್ತುವನ್ನು ಸೃಷ್ಟಿ ಮಾಡುವೆನು." ಹೀಗೆ ವಿಚಾರ ಮಾಡಿದ ಬಳಿಕ ಆ ವಿಷ್ಣುವು ಈ ಮೂರು ದೇವತೆಗಳನ್ನು ಜೀವಾಖ್ಯವಾದ ಅನಿರುದ್ಧಾತ್ಮಕನಾಗಿ ಪ್ರವೇಶಿಸಿ (ದೇವತೆಗಳು, ಮಾನವರು ಹಾಗೂ ದಾನವರಲ್ಲಿಇಂದ್ರ ಅಗ್ನಿಯೇ ಆದಿಯಾದ) ಅನೇಕ ಹೆಸರಿನ ಹಾಗೂ ಆ ಆ ಹೆಸರಿನ ವಸ್ತುಗಳನ್ನು ಸೃಷ್ಟಿ ಮಾಡಿದನು.

ಇಷ್ಟು (ಶ್ರೀ ರಾಯರ ಖಂಡಾರ್ಥವನ್ನನುಸರಿಸಿ) ಅರ್ಥ ಹೇಳಿದ ಮೇಲೆ ಈ ವಾಕ್ಯದ ಹಿನ್ನೆಲೆಯನ್ನು ಮತ್ತು ಪರಕೀಯರು ವೃಕ್ಷ ಜೀವ ದೃಷ್ಟಾಂತಕ್ಕೆ ಮಾಡಿದ ಆಕ್ಷೇಪವನ್ನು ಕುರಿತು ಶ್ರೀಮದಾಚಾರ್ಯರು ಮಾಡಿದ ಪರಿಹಾರಗಳ ವಿಷಯಕ್ಕೆ ವಿಚಾರ ಮಾಡಬಹುದು.

ಉದ್ದಾಲಕರು ಮಗ ಶ್ವೇತಕೇತುವಿಗೆ ತಮ್ಮ ಮನೆತನದ ಸಂಪ್ರದಾಯದಂತೆ ಬ್ರಹ್ಮಚರ್ಯದಿಂದ ಗುರುಕುಲವಾಸ ಮಾಡಿ ವೇದಾಧ್ಯಯನ ಮಾಡಲು ಹೇಳಿದರು. ಅದರಂತೆ ಶ್ವೇತಕೇತುವು ೧೨ ವರ್ಷ ವೇದಾಧ್ಯಯನ ಮಾಡಿ ಬಂದ ಮೇಲೆ ತನಗೆ ಸಮರಾರಿಲ್ಲವೆಂಬ ಅಹಂಕಾರದಿಂದ ಬೀಗುತ್ತಿದ್ದನು. ಇದನ್ನು ಕಂಡ ತಂದೆಗಳು ಈ ದುರಭಿಮಾನಿ ಮಗನನ್ನು ಉಪಾಯದಿಂದ ಸನ್ಮಾರ್ಗಕ್ಕೆ ತರಲು ಪ್ರಯತ್ನ ಮಾಡಲು ಪ್ರಾರಂಭಿಸಿದರು. 'ಇಷ್ಟೆಲ್ಲ ಓದಿ ನೀನು ಯಾವುದನ್ನು ತಿಳಿದುಕೊಳ್ಳುವದವಶ್ಯವಿದೆಯೋ ಅದನ್ನು ತಿಳಿದಿರುವಿಯಾ? ಯಾವುದನ್ನು ತಿಳಿದರೆ ಎಲ್ಲವನ್ನು ತಿಳಿದಂತೆ ಆಗುವದೋ ಅಂಥ ಪರಮಾತ್ಮನನ್ನು ತಿಳಿದಿರುವಿಯಾ? ಅದನ್ನೇ ತಿಳಿದಿರದಿದ್ದರೆ ಯಾವುದೂ ತಿಳಿದಂತಾಗಲಿಲ್ಲ.' ಎಂದು ಹೇಳುತ್ತ ಪ್ರಶ್ನೆ ಮಾಡಿದಾಗ ಶ್ವೇತಕೇತುವು ತಂದೆಗೆ

Rarest Archiver

'ಈ ವಿಷಯಕ್ಕೆ ನನಗೆ ನನ್ನ ವೇದಾಧ್ಯಾಪಕರು ತಿಳಿಸಿಲ್ಲ. ಕಾರಣ ನಿಮಗೆ ತಿಳಿದಿದ್ದರೆ ನೀವೇ ಹೇಳಿರಿ' ಎಂದು ಮಾರುತ್ತರ ಕೊಟ್ಟನು. ಆಗ ಉದ್ದಾಲಕರು ಯಾವುದನ್ನು ತಿಳಿಯಲೇಬೇಕೋ, ಯಾವುದನ್ನು ತಿಳಿದರೆ ಎಲ್ಲವನ್ನೂ ತಿಳಿದಂತೆಯೇ ಸರಿಯೋ ಹಾಗೂ ಯಾವುದನ್ನು ತಿಳಿಯದಿದ್ದರೆ ಏನನ್ನೂ ತಿಳಿದಂತೆಯೇ ಅಲ್ಲವೋ ಅಂಥ ಪರಮತತ್ವದ ಸ್ವರೂಪವನ್ನು ಮಗನಿಗೆ ಕಳಕಳಿಯಿಂದ ತಿಳಿಸಲು ಪ್ರಾರಂಬಿಸಿದರು. ಮೊಟ್ಟ ಮೊದಲಿಗೆ ಈ ಪರಮತತ್ವವು ಅನಾದಿಯಾಗಿದ್ದು ಸೃಷ್ಟಿಗಿಂತ ಮೊದಲೇ ಇದ್ದಿತೆಂಬುದನ್ನು ವಿವರಿಸಿ ಸಕಲ ಸೃಷ್ಟಿಗೂ ಈ ತತ್ವವೇ ನಿಮಿತ್ತ ಕಾರಣವಾಗಿದೆ-ಯೆಂಬುದನ್ನು ತಿಳಿಸಲು ಪ್ರಾರಂಬಿಸಿದರು. ಸೃಷ್ಟಿಗಿಂತ ಪೂರ್ವದಲ್ಲಿ ಇದ್ದುದು ಶೂನ್ಯ-ವೆಂದು ಕೆಲವರು ಹೇಳುವರು. ಆದರೆ ಇದು ಸರಿಯಲ್ಲ, ಸತ್ ಎಂಬ ಹೆಸರಿನ (ನಿತ್ಯವಾದ) ಬ್ರಹ್ಮ ಒಂದೇ ಮೊದಲು ಇದ್ದಿತು. ಆ ಪರಮ ಪುರುಷನು – ಪರಮ ತತ್ವವು– ಬ್ರಹ್ಮನು–ಪ್ರಲಯಾಂತ್ಯಭಾಗದಲ್ಲಿ ಇನ್ನು ಸೃಷ್ಟಿ ಮಾಡಬೇಕೆಂದು ಹೀಗೆ ವಿಚಾರಿಸಿದನು :– ನನ್ನ ನಿಯಮನದಲ್ಲಿರುವ ಅನೇಕ ಪ್ರಕಾರದ ಸೃಷ್ಟಿಯನ್ನು ಮಾಡಲು ನಾನು ನಿಯಾಮಕವಾದ ಅನೇಕ ರೂಪಗಳನ್ನು ಧಾರಣ ಮಾಡಬೇಕು. (**ಓಂ ಈಕ್ಷತಿ ಕರ್ಮ ವ್ಯಪದೇಶಾತ್** ಸಃ **ಓಂ ೧–೩–೪–೧** ಎಂಬ ಸೂತ್ರದಲ್ಲಿ ಇದನ್ನೇ ಶ್ರೀ ವೇದವ್ಯಾಸರು ಸೂಚಿಸಿದ್ದಾರೆ) ಹೀಗೆ ವಿಚಾರಿಸಿ ಅವನು ತೇಜಸ್ ಎಂಬ ಶಬ್ದದಿಂದ ಕರೆಯಲ್ಪಡುವ ಶ್ರೀದೇವಿಯನ್ನೂ ಹಾಗೂ ಅವಳು ಯಾವ ತೇಜಸ್ ತತ್ವಕ್ಕೆ ಅಭಿಮಾನಿಯಾಗಿರುವಳೋ ಅಂಥ ತೇಜಸ್ ಎಂಬ ಭೂತದ್ರವ್ಯವನ್ನೂ ಸೃಷ್ಟಿಸಿದನು. ಆಗ ಶ್ರೀದೇವಿಯು ತನ್ನಿಂದ ನಿಯಮ್ಯವಾದ ಅನೇಕ ರೂಪಗಳನ್ನು ಸೃಷ್ಟಿಸಬೇಕೆಂದು ವಿಚಾರಿಸಿದಳು. ಹೀಗೆ ವಿಚಾರಿಸಿ ನೀರಿಗೆ ಅಭಿಮಾನಿಯಾದ ಹಾಗೂ 'ಅಪ್' ಎಂಬ ಶಬ್ದದಿಂದ ಕರೆಯಲ್ಪಡುವ ಪ್ರಾಣವನ್ನೂ ಹಾಗೂ ಅವನಿಂದ ಅಭಿಮನ್ಯವಾದ ನೀರನ್ನೂ ಸೃಷ್ಟಿಸಿದಳು. ಯಾವ ಈ ನೀರಿನಿಂದಲೇ ಜೀವನಿಗೆ ದುಃಖವಾದಾಗ ಕಣ್ಣೀರು, ಶ್ರಮವಾದಾಗ ಬೆವರು ಕಾಣುತ್ತವೆಯೋ ಅದೇ ಅವಳ ತೇಜಸ್ಸಿನಿಂದ ಹುಟ್ಟಿದಂಥಹದು. ಆ ಪ್ರಾಣನು ತನ್ನಿಂದ ನಿಯಮ್ಯವಾದ ಅನೇಕ ರೂಪಗಳನ್ನು ಸೃಷ್ಟಿಸಬೇಕೆಂದು ವಿಚಾರಿಸಿದನು. ಹಾಗೂ ಅನ್ನದ ಅಭಿಮಾನಿಯಾದ ರುದ್ರದೇವನನ್ನೂ ಪೃಥಿವಿಯನ್ನೂ ಹಾಗೂ ಅನ್ನವನ್ನೂ ಸೃಷ್ಟಿಸಿದನು. ಎಲ್ಲಿ ಮಳೆಯಾಗುವದೋ ಅಲ್ಲಿ ವಿಶೇಷವಾಗಿ ಅನ್ನವು ಅನೇಕ ಪಾರ್ಥಿವ ವಸ್ತುಗಳು ಬೆಳೆಯುವವು. ಈ ಮೂರು ಪ್ರಕಾರದ ಅಭಿಮಾನಿ ದೇವತೆಗಳೇ –ಶ್ರೀದೇವಿ, ಪ್ರಾಣ, ಹಾಗೂ ರುದ್ರ ಎಂಬವರೇ – ಈ ಎಲ್ಲ ಜೀವಜಂತುಗಳಿಗೆ ಕಾರಣರಾಗುವರು. ಈ ಜೀವಜಂತುಗಳೂ ಮೂರು ಪ್ರಕಾರದವು: *ಅಂಡಜ*– ಅಂಡದಿಂದ ಹುಟ್ಟುವಂಥ ಪಕ್ಷಿ ಆದಿಗಳು, *ಜರಾಯುಜ*ವೆಂಬ (ಮುಪ್ಪು, ಆಯುಷ್ಯ ಇರುವಂಥವುಗಳಿಂದ ಹುಟ್ಟುವ ಜೀವರಾಶಿ) ಮನುಷ್ಯ ಮುಂತಾದ ಜೀವರಾಶಿ ಹಾಗೂ ಉದ್ಭಿಜ– ಬೀಜವನ್ನು ಒಡೆದು ಹೊರಗೆ ಬಂದು ಹುಟ್ಟುವ

Rarest Archiver

ಜೀವರಾಶಿ ಎಂಬವು. ಹೀಗೆ ಶ್ರೀದೇವಿ, ಪ್ರಾಣ ಹಾಗೂ ರುದ್ರರೆಂಬ ಅಭಿಮಾನಿ ದೇವತೆಗಳನ್ನು ಸೃಷ್ಟಿಸಿದ ಬಳಿಕ ಈ ಎಲ್ಲ ಸೃಷ್ಟಿಗೆ ಕಾರಣನಾದ ಪರಮ ತತ್ವರೂಪದ ಪರಮಾತ್ಮನು ಮತ್ತೆ ವಿಚಾರಿಸಿದನು – ಅಹ ! **(ಹಂತ),** ನಾನು ನನ್ನಿಂದ ಅಭಿಮನ್ಯವಾದ ಈ ಮೂರು ದೇವತೆಗಳನ್ನು ಅನಿರುದ್ಧಾಖ್ಯ ಜೀವನಾಗಿ ಪ್ರವೇಶಿಸಿ ಹೆಸರು ಹಾಗೂ ರೂಪಗಳುಳ್ಳ (ಶಬ್ದಾತ್ಮಕ, ಅರ್ಥಾತ್ಮಕ) ಜಗತ್ತನ್ನು ಸೃಷ್ಟಿಸಬೇಕು. ಈ ಮೂರು ದೇವತೆಗಳು ಹಾಗೂ ಅವರಿಂದ ಅಭಿಮನ್ಯವಾದ ಭೂತಗಳು **(ಸಾಭಿಮನ್ಯಮಾನಾ ಇತಿ ಗ್ರಾಹ್ಯಮ್**– ಶ್ರೀ ರಾಯರ ಖಂಡಾರ್ಥ), ಇವುಗಳಲ್ಲಿ ಒಂದೊಂದನ್ನು ಪರಸ್ಪರ ಮಿಶ್ರವಾದವುಗಳನ್ನಾಗಿ ಮಾಡುವೆನು. ಹೀಗೆ ವಿಚಾರಿಸಿ ಈ ಪರಮಪುರುಷ ಶ್ರೀ ವಿಷ್ಣುವು ಈ ದೇವತೆ ಹಾಗೂ ಅವುಗಳಿಂದ ಅಭಿಮನ್ಯವಾದ ಭೂತದ್ರವ್ಯಗಳನ್ನೂ ಹಾಗೂ ತನ್ನ ಅನಿರುದ್ಧ ರೂಪ–ಜೀವ–ವನ್ನು ಸೇರಿಸಿ ನಾಮ–ರೂಪಾತ್ಮಕವಾದ ಅಂದರೆ ಶಬ್ದಾತ್ಮಕವಾದ ಹಾಗೂ ಅರ್ಥಾತ್ಮಕವಾದ ಜಗತ್ತನ್ನು ಸೃಷ್ಟಿಸಿದನು. (೬–೨–೬, ೬–೨–೭). ಹೀಗೆ ಉದ್ದಾಲಕರು ಮಗ ಶ್ವೇತಕೇತುವಿಗೆ ಈ ಸೃಷ್ಟಿಗೆಲ್ಲ ಭಗವಂತನೇ ಕಾರಣನು ಎಂದು ತಿಳಿಸಿ ಅಂಥ ಸರ್ವೋತ್ತಮನಾದ ವಿಷ್ಣುವಿಗಿಂತ ನೀನು ಭಿನ್ನನೂ ಅಧಮನೂ ಆಗಿರುವಿ, ಕಾರಣ ಅವಿನೀತನಾಗಬಾರದು ಎಂಬ ಹಾರ್ದವನ್ನು ವ್ಯಕ್ತಪಡಿಸಿದರು. ಇಷ್ಟು ಈ ವಾಕ್ಯಕ್ಕೆ ಹಿನ್ನೆಲೆಯಾಗಿದೆ. ಇದನ್ನು ವಿವರಿಸಿದ ಬಳಿಕ ಅನ್ಯರು ವೃಕ್ಷಜೀವ ದೃಷ್ಟಾಂತದ ಬಗ್ಗೆ ಮಾಡಿದ ಆಕ್ಷೇಪದ ವಿಶ್ಲೇಷಣೆ ಮಾಡಬಹುದು.

ಛಾಂದೋಗ್ಯೋಪನಿಷತ್ತಿನ ಈ ಭಾಗದಲ್ಲಿ ಸಹ **'ಜೀವ'** ಶಬ್ದ ಪ್ರಯೋಗವಿದ್ದು ಅದು ಜೀವರಾಶಿಯ ಜೀವನನ್ನು ಬೋಧಿಸುವುದಿಲ್ಲ. ಪರಮಾತ್ಮನನ್ನೇ ಬೋಧಿಸುವದು. ಇದಕ್ಕೆ **ಜೀವ ಇತಿ ಭಗವತಃ ಅನಿರುದ್ಧಸ್ಯ ಆಖ್ಯಾ ಇತಿ ಚ ಶ್ರುತಿಃ** (ಜೀವ ಎಂಬುದು ಷಡ್ಗುಣೈಶ್ವರ್ಯಸಂಪನ್ನನಾದ ಅನಿರುದ್ಧನ ಹೆಸರು) ಎಂದು ಶ್ರೀಮದಾಚಾರ್ಯರು ಶ್ರುತಿಯನ್ನೇ ಆಧಾರವಾಗಿ ಕೊಟ್ಟಿದ್ದಾರೆ. **'ಜೀವೋ ವಿನಯಿತಾ ಸಾಕ್ಷೀ'**(ಜೀವನು, ವಿಶಿಷ್ಟ ರೀತಿಯಿಂದ ನಿಯಮನ ಮಾಡುವವನು, ಸರ್ವಸಾಕ್ಷೀ ಎಂದು ಕರೆಯಿಸಿಕೊಳ್ಳಲ್ಪಡುವವನು) ಎಂದು ಶ್ರೀ ವಿಷ್ಣುಸಹಸ್ರನಾಮದಲ್ಲಿಯೂ ಕೂಡ ಜೀವ ಪದವು ವಿಷ್ಣುವಿನಲ್ಲಿರುವುದನ್ನು ಹೇಳುತ್ತದೆ. **(ಜೀವಯತೀತಿ) ಜೀವಃ, ಜೀವ್ ಪ್ರಾಣಧಾರಣೇ.** ಇವನು ಪರಮಾತ್ಮನೇ ಹೊರತು ಸಂಸಾರಿ ಜೀವನಾಗುವದಿಲ್ಲ). ಹೀಗಿರುವುದರಿಂದ ಸಂಸಾರಿಜೀವನು ಪರಮಾತ್ಮಾಧೀನನಾಗಿದ್ದಾನೆ ಎಂಬುದರಲ್ಲಿಯೇ ವೇದಗಳ ತಾತ್ಪರ್ಯವೆಂದು ತಿಳಿಯುವದೇ ಹೊರತು ಸಂಸಾರಿ–ಜೀವನ ವಿನಾಶಾಭಾವವನ್ನು ಅಥವಾ ಜೀವ ಬ್ರಹ್ಮರಲ್ಲಿಯ ಐಕ್ಯವನ್ನು ತಿಳಿಸುವದರಲ್ಲಿ ಅಲ್ಲವೆಂಬುದು ಸ್ಪಷ್ಟ. **ವಿಷ್ಣುರ್ಜೀವ ಇತಿ ಪ್ರೋಕ್ತಃ ಸತತಂ ಪ್ರಾಣಧಾರಣಾತ್**

Rarest Archiver

**। ಸ ಪ್ರವಿಶ್ಯ ಶರೀರಂ ಚ ಸ್ಥಾವರಂ ಜಂಗಮಂ ತಥಾ । ಮಹಾಭೂತಾನಿ ಚ ವಿಭುಃ ತ್ರಿವೃತ್ಕರಣಪೂರ್ವಕಮ್। ಸಂಸಾರಿಣಂ ಭ್ರಾಮಯತಿ ಸದೈವಾನ್ಯತ್ವ ಲಕ್ಷಣಮ್ । ತೇನಾಯಂ ಮೋದತೇ ನಿತ್ಯಂ ವೃಕ್ಷಾವಸ್ಥಾಂ ಗತೋಽಪಿ ಸನ್ ॥** ಎಂಬ ಸಮಾಖ್ಯಾವಾಕ್ಯದ (ಆಕರ?) ಆಧಾರವನ್ನೂ ಈ ವಿಷಯಕ್ಕೆ ಆಚಾರ್ಯರು ಕೊಟ್ಟಿದ್ದಾರೆ. ಛಾಂದೋಗ್ಯೋಪನಿಷತ್ತಿನ ಭಾಷ್ಯದಲ್ಲಿ ಶ್ರೀಮದಾಚಾರ್ಯರು ಈ ವಿಷಯಕ್ಕೆ ಇನ್ನೂ ಬೇರೆ ಪ್ರಮಾಣಗಳನ್ನೂ ಕೊಟ್ಟಿದ್ದಾರೆ. **"ಪ್ರಾಣಸ್ಯ ಪ್ರಾಣಃ ಚಕ್ಷುಷಃ ಚಕ್ಷುಃ ಜೀವಸ್ಯ ಜೀವಃ (ವಮ್) ಪ್ರಧಾನಸ್ಯ ಪ್ರಧಾನಂ ಭಗವಾನ್ ಚತುರ್ಮೂರ್ತಿಃ"** (ಆಕರ?) ಮತ್ತು **"ಪ್ರಾಣಾಧಾರೋ ಹರೇರ್ನಾನ್ಯೋ ಜೀವ ಶಬ್ದಃ ತತೋ ಹರೌ । ಸಂಸಾರಿಣೋ ಜೀವತಾ ತು ಜನನಾತ್ ವಾನತೇಸ್ತ್ವಥಾ ॥"** (ಆಕರ?) ಇದಕ್ಕೆ ಶ್ರೀಮದ್ಭಾಗವತದ ಆಧಾರವನ್ನೂ ಅಲ್ಲಿಯೇ ಕೊಟ್ಟಿದ್ದಾರೆ: **"ಯಾವದ್ಬಲಿಂ ತೇತ್ರ ಹರಾಮ ಕಾಲೇ ಯಥಾ ವಯಂ ಚಾನ್ನಮದಾಮ ಯತ್ರ । ತಥೋಭಯೇಷಾಂ ತ ಇಮೇ ಹಿ ಲೋಕಾಃ ಬಲಿಂ ಹರಂತೋನ್ನಮದಂತ್ಯ- ಮೂಢಾಃ ॥.....ತ್ವಂ ನ: ಸ ಚಕ್ಷು: ಪರಿದೇಹಿ ಶಕ್ತ್ಯಾ: ದೇವ ಕ್ರಿಯಾರ್ಥೇ ಯದನುಗ್ರಹೇಣ ॥ "** ( *ಶ್ರೀಮದ್ಭಾಗವತ*– ಸ್ಕಂ ೩, ಅ. ೬, ಶ್ಲೋ. ೨೭ ಮತ್ತು ೨೯ ) **ಇತಿ ತತ್ವಾನಾಂ ಪ್ರಾರ್ಥನಾನಂತರಂ ಭಗವತಃ ಏವ ತೇಷು ಪ್ರವೇಶೋಕ್ತೇಃ** *ಭಾಗವತೇ ॥ ( ಛಾಂ. ಭಾ. ಸರ್ವಮೂಲಮ್*– ಪತ್ರ ಸಂ. ೪೩೫)

ಈ ಶ್ರುತಿಯ ಭಾವವು **ಶ್ರುತ್ಯರ್ಥಷಟ್ಪದಿಯಲ್ಲಿ** ಇಂತಿದೆ. :–

*ಪ್ರಳಯ ಕೊನೆಯಲಿ ಪರಮಪುರುಷನು*
*ವಿಲಯ ಪೊಂದದ ಸಿರಿಯ ನೋಡುತ*
*ಗೆಲುವಿನಿಂದಲಿ ಜಗವ ಸೃಜಿಸುವ ಪಣವ ಮಾಡಿದನು ।*
*ಕಳೆಯು ದುಂಬಿದ ಸಿರಿಯು ತಾನೂ*
*ಅಲವ ಬಲಯುತ ಪ್ರಾಣ ಜಲವನು*
*ಸುಲಭವಾಗಿಯೆ ಸೃಜಿಸಿ ಪರಮನ ಸೇವೆಗೈದಿಹಳು ॥*

*ಪ್ರಾಣ ತನ್ನಯ ಬಲದಿ ರುದ್ರನ*
*ತಾಣವನ್ನವನನ್ನಮೂಲದ*
*ಕಾಣುತಿಹ ವಿಧವಿಧದ ಜಂತುಗಳಿನಿತು ಸೃಜಿಸಿದನು ।*
*ಪ್ರಾಣಪತಿ ಪರಮಾತ್ಮನಿವರೊಳು*
*ತಾನು ಸೇರಲು ಮೂರು ಸೇರಿಸೆ*
*ಮಾನ ಬರಿಸಿದ ನಾಮರೂಪದ ಜಗವ ಸೃಜಿಸುತಲಿ ॥*

Rarest Archiver

### ೩೦. 'ಸ ಏಷ ಜೀವೇನಾತ್ಮನಾಽನುಪ್ರಭೂತಃ ಪೇಪೀಯಮಾನಃ ಮೋದಮಾನಃ ತಿಷ್ಠತಿ' – *ಛಾಂದೋಗ್ಯೋಪನಿಷತ್. ೬-೩-೧೦*

ಈ ಭಾಗವು ವೃಕ್ಷ ಜೀವ ದೃಷ್ಟಾಂತದ ವಾಕ್ಯಖಂಡದಲ್ಲಿ ಬರುವದು. (ಅಸ್ಯ ಸೋಮ್ಯ ಮಹತೋ ವೃಕ್ಷಸ್ಯ..... ಇತ್ಯಾದಿ ವಾಕ್ಯಖಂಡ). ಇಲ್ಲಿಯೂ ಕೂಡ ಜೀವ ಎಂದರೆ ಪರಮಾತ್ಮನು. ಅಂತು, 'ಪರಮಾತ್ಮನಿಂದ ಅಧಿಷ್ಠಿತನಾದುದರಿಂದ ವೃಕ್ಷ ಜೀವನು ಸಾಕಷ್ಟು ನೀರು ಕುಡಿಯುತ್ತ ಉಲ್ಲಸಿತನಾಗಿ ಇರುತ್ತಾನೆ.' ಎಂದು ಈ ಭಾಗದ ಅರ್ಥವು. ಇದರಿಂದಲೂ ಜೀವ ಪರಮಾತ್ಮ ಭೇದವೇ ಹೇಳಲ್ಪಟ್ಟಿದೆ. ಇಲ್ಲಿ ಕೂಡ ಜೀವ ಎಂದರೆ ಪರಮಾತ್ಮನೆಂದೇ ಅರ್ಥ. ಅಧಿಷ್ಠಾನ ಸಂಸಾರಿಯು. ಅಧಿಷ್ಠಿತನಾದವನು ಪರಮಾತ್ಮ. ಅಧಿಷ್ಠಾನ, ಅಧಿಷ್ಠಿತಗಳು ಭಿನ್ನವಾಗಿಯೇ ಇರಬೇಕು. ಭೂತಲದಲ್ಲಿ ಘಟವಿದೆಯೆಂದಾಗ ಭೂತಲವು ಅಧಿಷ್ಠಾನ, ಘಟ ಅಧಿಷ್ಠಿತ, ಘಟ ಭೂತಲ ಒಂದೇ ಆಗುವವೆ? ಸರ್ವಥಾ ಇಲ್ಲ.

ವೃಕ್ಷದಲ್ಲಿಯ ಸಂಸಾರಿ ಜೀವನು ಜೀವ ಶಬ್ದವಾಚ್ಯನೂ ಆತ್ಮಶಬ್ದವಾಚ್ಯನೂ ಆದ ಪರಮಾತ್ಮನಿಂದ ಅಧಿಷ್ಠಿತನಾಗಿ (ಅವನು ಇರುವ ಕಾರಣದಿಂದ ಹಾಗೂ ಅವನಿರುವಷ್ಟು ಕಾಲ) ನೀರು ಕುಡಿಯುತ್ತ ಸಂತೋಷದಿಂದ ಇರುವನು. ಎಂದು ಅರ್ಥವಿರುವಾಗ ಸಂಸಾರಿ ಜೀವ ಹಾಗೂ ಜೀವ ಶಬ್ದವಾಚ್ಯನಾದ ಪರಮಾತ್ಮ ಇವರಲ್ಲಿ ಅಭೇದವನ್ನೆಲ್ಲಿ ಹೇಳಿದೆ ? ಈ ವಾಕ್ಯದ ತಾತ್ಪರ್ಯವೂ ಕೂಡ ಭೇದವೇ ಆಗಿದೆ.

ಅಂತು, ಈ ಶ್ರುತಿಯ ಭಾವವು **ಶ್ರುತ್ಯರ್ಥಷಟ್ಪದಿ**ಯಲ್ಲಿ ಇಂತಿದೆ. :-

*ಪರಮ ಪುರುಷನೆ ಜೀವ ವಾಚ್ಯನು,*
*ತರುವಿನೊಳಿರುವಷ್ಟು ಕಾಲವು*
*ಭರದಿ ಜಲವನು ಪಾನಮಾಡುತ ತರುವು ಸುಖಿಸುತಿದೆ ।*
*ಬರಡು ಜಲದಿಂ ಕೊನರಲಾರದು*
*ಪರಮ ಪುರುಷನೆ ವೃಕ್ಷಜೀವಗೆ*
*ಹರುಷ ತರುತಿರಲೀಶ ಸಂಸಾರಿಗಳು ಒಂದಿಹರೆ ? ॥*

*ತಂದೆ ಉದ್ದಾಲಕರು ಮಗನಿಗೆ,*
*ಬಿಂದು ಜಲವನು ಪಾನ ಮಾಡುತ*
*ಅಂದದಿಂದಿಹ ತರುವ ತೋರಿಸಿ ಭೇದ ತಿಳಿಸಿಹರು ।*
*ಮಂದನಾಗದೆ ಮಗನೆ ತಿಳಿವುದು,*
*ಬಂಧನವ ಹರಿ ಕೊಡುವ, ಹರಿವನು,*
*ಎಂದಿಗೆಂದಿಗು ಈಶ ಜೀವರು ಭಿನ್ನರೆಂದಿಹರು ॥*

Rarest Archiver

**೩೧. ಆತತತ್ವಾಚ್ಚ ಮಾತೃತ್ವಾದಾತ್ಮೇತಿ ಪರಮೋ ಹರಿಃ ।**
**ಆತ್ಮಾಭಾಸಾಸ್ತದನ್ಯೇ ಯೇ ನ ಹ್ಯೇತೇಷಾಂ ತತಾ ಗುಣಾಃ ॥**

**– ಪರಮೋಪನಿಷತ್**

ಛಾಂದೋಗ್ಯೋಪನಿಷತ್ತಿನಲ್ಲಿ ಹೇಳಿದಂತೆ ಉದ್ದಾಲಕರು ಮಗ ಶ್ವೇತ–ಕೇತುವಿಗೆ ಉಪದೇಶ ಮಾಡುತ್ತಿರುವ ಸಂದರ್ಭದಲ್ಲಿ **'ಸ ಆತ್ಮಾಽತತ್ವಮಸಿ ಶ್ವೇತಕೇತೋ'** – ಎಂದು ಹೇಳಿದ್ದಾರೆ. ಇಲ್ಲಿ ಬರುವ **'ಆತ್ಮಾ'** ಎಂಬುದು ಪ್ರಕೃತಿ ಜೀವರನ್ನು ಬೋಧಿಸುತ್ತದೆ ಎಂದು ಅದ್ವೈತಿಗಳ ವಾದ. ಆದರೆ ಶ್ರೀಮದಾಚಾರ್ಯರು ಆತ್ಮ ಶಬ್ದವು ಪರಮಾತ್ಮನನ್ನು ಬೋಧಿಸುವ ಪದವೇ ಹೊರತು ಅನ್ಯರನ್ನಲ್ಲ ಎಂಬುದನ್ನು ಅನೇಕ ಶ್ರುತಿ, ಸ್ಮೃತಿ, ಸ್ತೋತ್ರಗಳ ಆಧಾರ ಕೊಟ್ಟು ತಿಳಿಸಿದ್ದಾರೆ. ಈ ಸಂದರ್ಭದಲ್ಲಿ *ಪರಮೋಪನಿಷತ್ತಿನ* ಈ ಮೇಲೆ ಕೊಟ್ಟ ವಾಕ್ಯವನ್ನು ಉದಾಹರಿಸಿದ್ದಾರೆ. ಈ ವಾಕ್ಯದ ಅರ್ಥ ಹೀಗೆ ಇದೆ.

**ಆತ್+ಮಾ=ಆತ್ಮಾ ಆತತತ್ವಾತ್** – ಸರ್ವತ್ರ ವ್ಯಾಪ್ತನಾದ್ದರಿಂದ (ದೇಶತಃ, ಕಾಲತಃ, ಗುಣತಃ ಸರ್ವತ್ರ ವ್ಯಾಪ್ತನಾದ್ದರಿಂದ, ಅಂದರೆ ಸರ್ವತ್ರ ಇರುವ, ನಿತ್ಯನಾದ, ಸಕಲ ಗುಣಪರಿಪೂರ್ಣನಾದುದರಿಂದ).

**ಮಾತೃತ್ವಾತ್** – ನಿರ್ಮಾತೃನಾದ್ದರಿಂದ (ಜನ್ಮದಾತೃವು ಆದುದರಿಂದ) {ಜ್ಞಾನಿಯಾದುದರಿಂದ (ಸರ್ವಜ್ಞನಾದುದರಿಂದ – **ಮಾ–ಮಾತಿ. ( 'ಜ್ಞಾತೃತ್ವಾತ್ ನಿರ್ಮಾತೃತ್ವಾತ್ ವಾ'– ಟೀಕಾ)** ಧಾತುವಿನಿಂದ ನಿಷ್ಪನ್ನ ರೂಪ)

ಆತ್ಮ ಎಂಬುದು ಪರಮಪುರುಷನಾದ ಶ್ರೀ ಹರಿಯನ್ನೇ ಬೋಧಿಸುತ್ತದೆ. ಉಳಿದುದೆಲ್ಲವು ಆತ್ಮಾಭಾಸಗಳು – ಸ್ವತಃ ಆತ್ಮವಲ್ಲ.

(ಉದಾಹರಣೆಗೆ ಜೀವ, ಪ್ರಕೃತಿ ಇತ್ಯಾದಿಗಳೆಲ್ಲವೂ ಆತ್ಮಾಭಾಸಗಳು. ಆತ್ಮ ಶಬ್ದ ಪ್ರಯೋಗವು ಅವುಗಳ ವಿಷಯದಲ್ಲಿದ್ದರೂ ಅವು ಸ್ವತಃ ಆತ್ಮಗಳಲ್ಲ. ಪರಮ ಮುಖ್ಯವೃತ್ತಿಯಿಂದ ಆತ್ಮ ಶಬ್ದವು ಶ್ರೀ ಹರಿಯಲ್ಲಿಯೇ ಕೂಡುವದೇ ಹೊರತು ಉಳಿದವರಲ್ಲಿ ಅಲ್ಲ. ಉಳಿದವರಲ್ಲಿ ಅಮುಖ್ಯ ವೃತ್ತಿಯಿಂದ ಈ ಪದದ ಪ್ರಯೋಗವಿರಬಹುದು). **ನ ಹಿ ಏತೇಷಾಂ ತತಾ ಗುಣಾ:** (ಯಾಕೆಂದರೆ) ಉಳಿದವು–ಗಳಲ್ಲಿ ಗುಣಗಳು ವ್ಯಾಪ್ತವಾಗಿಲ್ಲ. (ಅವು ಸರ್ವಗುಣಪರಿಪೂರ್ಣವಾಗಿರುವದಿಲ್ಲ).

ಹೀಗೆ ವಿವರಣೆ ಕೊಡುವದರಿಂದ **ಸ ಆತ್ಮಾತತ್ವಮಸಿ ಶ್ವೇತಕೇತೋ** ಎಂಬ ವಾಕ್ಯದ ಮೇಲಿನ ಇನ್ನೊಂದು ಆಕ್ಷೇಪವೂ ನಿರಸ್ತವಾಗುವದು. ಇಲ್ಲಿ ಆಕ್ಷೇಪ ಹೀಗೆ :– ಆತ್ಮ ಶಬ್ದಕ್ಕೆ ಪರಮಾತ್ಮಪರ ಅರ್ಥ ಹೇಳಿದರೆ ಈ ವಾಕ್ಯವು **ಸ ಸ**

Rarest Archiver

**ತತ್ತ್ವಮಸಿ ಶ್ವೇತಕೇತೋ** ಎಂದು ಹೇಳಿದಂತಾಗುವದು. **ಸ ಸ** ಎಂದು ವ್ಯರ್ಥವಾಗುವದು ಎಂದು ಆಕ್ಷೇಪ. ಆದರೆ **ಆತ್ಮ** ಎಂದರೆ ದೇಶತ: ಕಾಲತ: ಹಾಗೂ ಗುಣತ: ವ್ಯಾಪ್ತನಾದವನು **ಸ:** ಆ ಪರಮಾತ್ಮನು ಎಂದು ಹೇಳಿದಾಗ ಅವನೊಬ್ಬನೇ **ಆತ್ಮನು** ಉಳಿದವರು **ಆತ್ಮಾಭಾಸರು** ಎಂದು ಹೇಳಿದಂತಾಗಿ ಯಾವ ಪ್ರಕಾರದ ವೈಯರ್ಥ್ಯ ದೋಷವೂ ಬರಲಾರದು.

ಇನ್ನು ಯಾಸ್ಕಮುನಿಗಳ ***ನಿರುಕ್ತ*** ದಲ್ಲಿ ಕೂಡ **ಆತ್ಮ** ಶಬ್ದದ ನಿರ್ವಚನವು ಹೀಗಿದೆ. **'ಆತ್ಮಾಽತತೇರ್ವಾಽಪ್ತೇರ್ವಾಽಪಿವಾಪ್ತ ಇವ ಸ್ಯಾದ್ ಯಾವದ್ವ್ಯಾಪ್ತಿ-ಭೂತ ಇತಿ॥ ಅತತೇಃ ।'** – (ಯಾಸ್ಕಮುನಿ ಪ್ರಣೀತಮ್ – ***ನಿರುಕ್ತಮ್*** ಮೆಹರಚಂದ ಲಛಮನದಾಸ – ನಯೀ ದಿಲ್ಲಿ. ದರಿಯಾಗಂಜ. ೧೯೮೨ ಪು. ೧೧೬)

ಇದರ ಮೇಲಿನ ದುರ್ಗಾಚಾರ್ಯಕೃತ *ಋಜ್ವರ್ಥ* ಎಂಬ ವ್ಯಾಖ್ಯೆಯಲ್ಲಿ ಇದರ ವಿವರಣೆ ಇಂತಿದೆ. **'ಅತ ಸಾತತ್ಯಗಮನೇ (ಭ್ವಾ. ಪ) ಇತಿ ಧಾತೋಃ ಸಾತಿಭ್ಯಾಂ ಮಣಿನ್ಮನಿಣೌ' (ಉ. ೪ –೧೫೩) ಇತಿ ಮಣಿನ್ । ವೃದ್ಧಿಃ । ಸರ್ವಮೇವ ಹಿ ತೇನಾತಿತಂ ಸಂತತಂ ಗತಂ ಭವತಿ । ಸರ್ವಗತತ್ವಾತ್ತಸ್ಯ ॥ ಅಥವಾ ಅಪ್ತೇಃ ವ್ಯಾಪ್ತ್ಯರ್ಥಸ್ಯ ಆಪ್ ಧಾತೋಃ (ಸ್ವಾ. ಪ.) 'ಮಣಿನಿ ಯಸ್ಯ ತತ್ವಂ ಪೃಷೋದರಾದಿತ್ವಾತ್ । ಸರ್ವಮೇವ ಹಿ ತೇನ ವ್ಯಾಪ್ತಂ ಭವತಿ ಸರ್ವಗತತ್ವಾದೇವ.'** ಹೀಗೆ *ಪರಮೋಪನಿಷತ್ತಿನ* ಈ ಮೇಲಿನ ವಾಕ್ಯದಲ್ಲಿಯ ಆತ್ಮ ಶಬ್ದದ ನಿರ್ವಚನವನ್ನೇ ಯಾಸ್ಕಮುನಿಗಳು ತಮ್ಮ ನಿರುಕ್ತದಲ್ಲಿ ವಿವರಿಸಿದಂತೆ ತಿಳಿಯುವದು.

*ಪರಮೋಪನಿಷತ್ತಿನ* ಈ ವಾಕ್ಯದಲ್ಲಿ ಪರಮಾತ್ಮ, ಪ್ರಕೃತಿ, ಜೀವಭೇದವು ಸ್ಪಷ್ಟವಾಗಿ ಪ್ರತಿಪಾದಿಸಲ್ಪಟ್ಟಿದೆ. **ಆತ್ಮ, ಸ್ವ,** ಶಬ್ದಗಳು ಪರ್ಯಾಯ ಪದಗಳು. ಈ ವಿಷಯವನ್ನು ಶ್ರೀ ವೇದವ್ಯಾಸರು ಬ್ರಹ್ಮಸೂತ್ರಗಳಲ್ಲಿ ವಿವರಿಸಿದ್ದಾರೆ. **ಓಂ ದ್ಯು-ಭ್ವಾದ್ಯಾಯತನಂ ಸ್ವ ಶಬ್ದಾತ್ ಓಂ** (ಬ್ರ. ಸೂ. ೧.೩.೧.೧), **ಓಂ ನಾನು-ಮಾನಮತಚ್ಛಬ್ದಾತ್ ಓಂ,** ( *ಬ್ರ. ಸೂ. ೧.೩.೧.೩*) **ಓಂ ಪ್ರಾಣಭೃಚ್ಚ ಓಂ** **(೧.೩.೧.೪)** ಈ ಸೂತ್ರಗಳಲ್ಲಿ **'ತಮೇವೈಕಂ ಜಾನಥ ಆತ್ಮಾನಮ್'** ಎಂಬ (*ಆಥರ್ವಣ ಉಪ. ಖಂಡ ೪ – ಶ್ಲೋ–೫*) ವಿಷಯ ವಾಕ್ಯದಲ್ಲಿಯ ಆತ್ಮ ಶಬ್ದದ ವಿವರಣೆಯನ್ನು ಶ್ರೀ ವೇದವ್ಯಾಸರು ಕೊಟ್ಟು **'ಆತ್ಮ' 'ಸ್ವ'** ಶಬ್ದಗಳು ಪರಮಾತ್ಮನನ್ನೇ ಬೋಧಿಸುವವೇ ಹೊರತು ಪ್ರಕೃತಿ ಅಥವಾ ಜೀವರನ್ನಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

Rarest Archiver

*ಶ್ರುತ್ಯರ್ಥಷಟ್ಪದಿ*ಯಲ್ಲಿ ಈ ಶ್ರುತಿಯ ಒಟ್ಟರ್ಥವನ್ನು ಹೀಗೆ ವಿವರಿಸ-ಬಹುದು;

*ಆತತನು ಸರ್ವತ್ರ ವ್ಯಾಪ್ತನು*
*ಈತ ಜಗ ನಿರ್ಮಾಣ ಕಾರಣ*
*ಆತ್ಮನೆಂಬನು ಹರಿಯೆ ನಿತ್ಯನು ದೇಶ ಗುಣತತನು ।*
*ಆತ್ಮರಲ್ಲ ಪ್ರಕೃತಿ ಜೀವರು*
*ಆತ್ಮಭಾಸರು ಮಾತ್ರ ನೋಡಲು*
*ಆತತವು ತಾವಲ್ಲ ಗುಣಗಳು ಸರುವರನ್ಯರಲಿ ॥*

*೩.೨. ಐಕಾತ್ಮ್ಯಂ ನಾಮ ಯದಿದಂ ಕೇಚಿದ್ಬ್ರೂಯುರನೈಪುಣಾಃ।*
*ಶಾಸ್ತ್ರತತ್ವಮವಿಜ್ಞಾಯ ತಥಾ ವಾದಬಲಾದ್ ಜನಾಃ ॥*
*ಕಾಮಕ್ರೋಧಾಭಿಭೂತತ್ವಾತ್ ಅಹಂಕಾರವಶಂ ಗತಾಃ ।*
*ಯಾಥಾತಥ್ಯಂ ಅವಿಜ್ಞಾಯ ಶಾಸ್ತ್ರಾಣಾಂ ಶಾಸ್ತ್ರದಸ್ಯವಃ ॥*
*ಬ್ರಹ್ಮಸ್ತೇನಾ ನಿರಾನಂದಾ ಅಪಕ್ವಮನಸೋಽಶಿವಾಃ ।*
*ವೈಗುಣ್ಯಮೇವ ಪಶ್ಯಂತಿ ನ ಗುಣಾನಿ ನಿಯುಂಜತೇ ।*
*ತೇಷಾಂ ತಮಃಶರೀರಾಣಾಂ ತಮ ಏವ ಪರಾಯಣಮ್ ।*
*ಯತಃ ಸ್ವರೂಪತಶ್ಚಾನ್ಯೋ ಜಾತಿತಃ ಶ್ರುತಿತೋಽರ್ಥತಃ ॥*
ಕಥಮಸ್ಮಿ ಸ ಇತ್ಯೇವ ಸಂಬಂಧಃ ಸ್ಯಾದಸಂಹಿತಃ ॥

– ಮಹಾಭಾರತ, ಪರ್ವ ೧೨ ಶಾಂತಿಪರ್ವದ *ಮೋಕ್ಷಧರ್ಮಪರ್ವ ಅಧ್ಯಾಯ ೨೫೪, ಶ್ಲೋಕ ೫೧ ರಿಂದ ೫೫೮ ವರೆಗಿನ ಭಾಗದಲ್ಲಿ ಬಂದಿದೆ.* (ಇದು ***Mahabharata- Southern Recension,*** published by Vavilla Ramaswamy Sastrulu & Sons Madras 1936 ಈ ಪ್ರಕಾಶನದ ಪ್ರಕಾರ. ಈ ಪ್ರಕಾಶನದಲ್ಲಿ ಶ್ರೀಮದಾಚಾರ್ಯರಿಂದ ಉದ್ಧೃತವಾದ ಎಲ್ಲ ಶ್ಲೋಕಗಳೂ ಇಲ್ಲ. ಉದ್ಧೃತ ಶ್ಲೋಕಗಳಿಗೆ ಸಮೀಪವೆನಿಸುವ ಈ ಮುಂದಿನ ಶ್ಲೋಕಗಳು ಮಾತ್ರ ಕಂಡು ಬಂದಿವೆ. ಕ್ವಚಿದ್ ಗ್ರಂಥಾನ್ ಪ್ರಕ್ಷಿಪಂತಿ ಕ್ವಚಿದಂತರಿತಾನಪಿ । ಕುರ್ಯುಃ ಕ್ವಚಿತ್ ಚ ವ್ಯತ್ಯಾಸಂ.....ಎಂದು ಶ್ರೀಮದಾಚಾರ್ಯರು *ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯದಲ್ಲಿ* ಹೇಳಿದುದಕ್ಕೆ ಇದೂ ಒಂದು ಉದಾಹರಣೆ ಎಂದೆನಿಸುವದು:–ಭವಂತೋ ಜ್ಞಾನಿನೋ ನಿತ್ಯಂ ಸರ್ವತಶ್ಚ ನಿರಾಮಯಾಃ। ಐಕಾತ್ಮ್ಯಂ ನಾಮ ಕಶ್ಚಿದ್ಧಿ ಕದಾಚಿದಭಿಪದ್ಯತೆ ॥೫೨॥ ಶಾಸ್ತ್ರಾಣ್ಯಬುದ್ಧ್ವಾ ತತ್ವೇನ ಕೇಚಿದ್ವಾದಬಲಾಜ್ಜನಾಃ। ಕಾಮದ್ವೇಷಾಭಿಭೂತತ್ವಾತ್ ಅಹಂಕಾರವಶಂ ಗತಾಃ ॥೫೩॥ ಯಾಥಾತಥ್ಯಂ ಅವಿಜ್ಞಾಯ ಶಾಸ್ತ್ರಾಣಾಂ ಶಾಸ್ತ್ರದಸ್ಯವಃ । ಬ್ರಹ್ಮಸ್ತೇನಾ ನಿರಾರಂಭಾ ಅಪಕ್ವಮತಯೋಽಶಿವಾಃ ॥೫೪॥ ನೈರ್ಗುಣ್ಯಮೇವ ಪಶ್ಯಂತಿ ನ ಗುಣಾನನುಯುಂಜತೇ । ತೇಷಾಂ ತಮಶ್ಶರೀರಾಣಾಂ ತಮ ಏವ ಪರಾಯಣಮ್ ॥೫೫॥ ).

Rarest Archiver

ಇದು **ಪಂಚಮ ವೇದ**ವೆಂದು ಖ್ಯಾತವಾದ ಮಹಾಭಾರತದಲ್ಲಿಯ ಭಾಗವು. ಮಹಾಭಾರತದ ಶಾಂತಿ ಪರ್ವದಲ್ಲಿ ಭೀಷ್ಮ ಯುಧಿಷ್ಠಿರ ಸಂವಾದದಲ್ಲಿ ಭೀಷ್ಮಾಚಾರ್ಯರು ಧರ್ಮರಾಜನಿಗೆ ಅನೇಕ ಕಥಾನಕಗಳ ಮೂಲಕ ಧರ್ಮದ ಪ್ರಮೇಯಗಳನ್ನು ಉಪದೇಶಿಸಿದ್ದಾರೆ. ಅವುಗಳಲ್ಲಿ ಕಪಿಲ ಹಾಗೂ ಸ್ಯೂಮರಶ್ಮಿ ಎಂಬ ಗೋವಿನ ನಡುವೆ ಆದ ಸಂವಾದದಲ್ಲಿ ಬರುವ ಭಾಗವಿದು. ನಹುಷರಾಜನು ಯಜ್ಞಕ್ಕೋಸ್ಕರ ಒಂದು ಆಕಳನ್ನು ತಂದು ಸೇವೆ ಮಾಡುತ್ತಿದ್ದನು. ಆ ಆಕಳಿನಲ್ಲಿ ಸ್ಯೂಮರಶ್ಮಿ ಎಂಬ ಯತಿಯು ಪ್ರವೇಶಿಸಿ ಕಪಿಲನೊಡನೆ ಸಂವಾದ ಮಾಡಿದುದನ್ನು ಭೀಷ್ಮರು ವಿವರಿಸಿ ಆ ಸಂವಾದದ ಮೂಲಕ ಅನೇಕ ಧರ್ಮಗಳನ್ನು ವಿವರಿಸುವರು. ಈ ಸಂವಾದದಲ್ಲಿಯ ಭಾಗವಿದಾಗಿದೆ. ಈ ಶ್ಲೋಕಗಳನ್ನು ಕಪಿಲರು ಸ್ಯೂಮರಶ್ಮಿಯನ್ನು ಉದ್ದೇಶಿಸಿ ಹೇಳಿದ್ದಾರೆ.

**ಅರ್ಥ (ಶ್ರೀ ಜಯತೀರ್ಥರ ವಿಷ್ಣುತತ್ವವಿನಿರ್ಣಯಟೀಕೆಗೆ ಅನುಗುಣವಾಗಿ):-** ವಿವೇಕವಿಲ್ಲದ ಕೆಲ ಜನ ಈ ಜೀವ ಬ್ರಹ್ಮರ ನಡುವೆ ಐಕ್ಯವಿದೆ ಎಂದು ಹೇಳುತ್ತಾರೆ. ಇದಕ್ಕೆ ಕಾರಣವೆಂದರೆ ಅವರು ಅಹಂ ಬ್ರಹ್ಮಾಸ್ಮಿ ಇತ್ಯಾದಿ ಶಾಸ್ತ್ರದಲ್ಲಿಯ ತತ್ವವನ್ನು ತಿಳಿಯದೆಯೆ ಈ ರೀತಿ ಹೇಳುವರು. ಏಕೆಂದರೆ ಅವರು ಅಹಂ ಬ್ರಹ್ಮಾಸ್ಮಿ ಇತ್ಯಾದಿ ವಾಕ್ಯಗಳಲ್ಲಿ ಮೇಲೆ ಮೇಲೆ ತೋರುವ ಅರ್ಥವೇ ತತ್ವವೆಂದು ತಿಳಿದಿರುವರು. ಆದರೆ ಈ ವಾಕ್ಯಗಳ ತಾತ್ಪರ್ಯವನ್ನು ಅವರು ತಿಳಿದಿರುವದಿಲ್ಲ. ಈ ಶಾಸ್ತ್ರ-ತಾತ್ಪರ್ಯಾಪರಿಜ್ಞಾನವು ಅವರ ಕಾಮಕ್ರೋಧಾದಿಗಳ ಕಾರಣದಿಂದ ಬಂದಿರುವದು. ಇದರಿಂದ ಅವರು ಅಹಂಕಾರಿಗಳಾಗಿ ತಾವೂ ಪರಮಾತ್ಮನೇ ಎಂದು ತಿಳಿದು-ಕೊಳ್ಳುವರು. **ದ್ವಾ ಸುಪರ್ಣಾ ಸಯುಜಾ ಸಖಾಯಾ..** ಇತ್ಯಾದಿ ವಾಕ್ಯಗಳಲ್ಲಿ ಭೇದವನ್ನು ಹೇಳಿದ್ದರೂ ಈ ಜನರು ಐಕ್ಯವನ್ನೇ ಏಕೆ ಹೇಳುವರು ಎಂದರೆ ಅವರು ಭೇದವನ್ನು ಹೇಳುವ ಶಾಸ್ತ್ರಗಳೆಲ್ಲ ಅತತ್ವಾವೇದಕಗಳು ಎಂದು ನಂಬುವರು. ಯಥಾರ್ಥ ತತ್ವವನ್ನು ಹೇಳುವ ಶಾಸ್ತ್ರಗಳಿಗೆ ಅತತ್ವಾವೇದಕಗಳೆಂದು ಹೇಳುವವರು ಶಾಸ್ತ್ರದ ಶತ್ರುಗಳೇ ಸರಿ ! ಜೀವ ಬ್ರಹ್ಮೈಕ್ಯವನ್ನು ಹೇಳುವವರು ಬ್ರಹ್ಮನ ಪರಮ-ಮಂಗಳಕರವಾದ ಗುಣಗಳನ್ನು ಜೀವನಲ್ಲಿ ಹೇಳಿದರೆ ಬ್ರಹ್ಮನ ಗುಣಗಳನ್ನು ಕದ್ದಂತೆಯೇ ಸರಿ ! ಬ್ರಹ್ಮನ ಉತ್ತಮತ್ವವನ್ನು ಸಹಿಸದೆಯೆ ಇರುವ ಈ ಜನ ಸ್ವರೂಪತಃ ದುಃಖ-ಭಾಗಿಗಳು. ಅವರಿಗೆ ಆನಂದ, ಸಮಾಧಾನಗಳೇ ಇರಲಾರವು. ಹೀಗಿರುವದರಿಂದ ಯಾವಾಗಲೊಮ್ಮೆ ಬರುವ ಕಾಮಕ್ರೋಧಾದಿಗಳಿಂದ ಅವರು ಈ ರೀತಿ ಜೀವ-ಬ್ರಹ್ಮೈಕ್ಯವನ್ನು ಹೇಳುವರೆಂದಲ್ಲ. ಅವರ ಸ್ವರೂಪದ ಯೋಗ್ಯತೆಯೇ ಹಾಗಿರು-ವದರಿಂದ ಅವರು ಐಕ್ಯವನ್ನು ಹೇಳುತ್ತಲೇ ಇರುವರು. ಅವರು ಪರಮಾತ್ಮನ ವಿಷಯಕ್ಕೆ ಅಮಂಗಳವನ್ನು ವಿಚಾರ ಮಾಡುವವರು ಹಾಗೂ ಅಪಕ್ವವಾದ ಮನಸ್ಸು

Rarest Archiver

ಇದ್ದವರೆಂದೇ ಸರಿ. ಜೀವನು ಅಲ್ಪಜ್ಞನೆಂಬ ಅನುಭವ ಹಾಗೂ ಬ್ರಹ್ಮನು ಸರ್ವಜ್ಞನೆಂಬ ಶ್ರುತಿಗಳಿದ್ದರೂ ಈ ರೀತಿಯ ವಿರುದ್ಧ ಗುಣಗಳ ಐಕ್ಯವನ್ನು ಹೇಳುವದು ತಪ್ಪಾಗುವದು ಎಂಬುದು ತರ್ಕದಿಂದ ಹೊಳೆಯುತ್ತಿದ್ದರೂ ಐಕ್ಯವನ್ನೇ ಏಕೆ ಹೇಳುವರೆಂದರೆ ಅವರು ಜೀವ ಬ್ರಹ್ಮರು ವಾಸ್ತವಿಕವಾಗಿ ನಿರ್ಗುಣರು ಎಂದೇ ಹೇಳುವರು. ಹೀಗಾಗಿ ಯಥಾರ್ಥವಾದ ಸರ್ವಜ್ಞತ್ವಾದಿ ಗುಣಗಳು ಅವರಿಗೆ ತೋರುವದೇ ಇಲ್ಲ. ಹೀಗೆ ಅನ್ಯಥಾ ಜ್ಞಾನಿಗಳಾದ ತಮೋಗುಣದ ಅವರಿಗೆ ನರಕವೇ ನಿಶ್ಚಿತ.

ಭೇದಶಾಸ್ತ್ರಗಳು ಅತತ್ವಾವೇದಕ ಎಂದು ಎಂದು ಏಕೆ ಹೇಳುವಿರಿ ಎಂದು ಕೇಳಿದರೆ ಅದಕ್ಕೆ ಅವರ ಉತ್ತರವೆಂದರೆ **ಅಹಂ ಬ್ರಹ್ಮಾಸ್ಮಿ** ಎಂಬುವೇ ಮುಂತಾದ ಸ್ಪಷ್ಟವಾಗಿ ಐಕ್ಯವನ್ನು ಹೇಳುವ ವಾಕ್ಯಗಳಿದ್ದಾಗ ಭೇದವನ್ನು ಹೇಳುವ ವಾಕ್ಯಗಳನ್ನು ಹೇಗೆ ಒಪ್ಪುವದು ? ಅದಕ್ಕೆ ಹಾಗೆಯೇ ಹೇಳಲೇ ಬೇಕಾಗುವದು ಎಂದು ಅವರು ಹೇಳುವರು. ಜೀವ ಬ್ರಹ್ಮರು ಸ್ವರೂಪತಃ ಭಿನ್ನರು. ಜೀವನು ಪರಿಮಾಣದಲ್ಲಿ ಅಲ್ಪ. ಪರಮಾತ್ಮನೋ ಸರ್ವತ್ರ ವ್ಯಾಪ್ತ. ಅವನಲ್ಲಿ ಅಣುವಿಗಿಂತಲೂ ಅಣುವೂ ಮತ್ತು ದೊಡ್ಡದಕ್ಕಿಂತಲೂ ದೊಡ್ಡದಾಗುವ ಅಲೌಕಿಕ ಶಕ್ತಿ ಇದೆ. ಜೀವನಿಗೆ ಅಂಥ ಶಕ್ತಿ ಎಲ್ಲಿ ? ಅನುಮಾನದ ಬಲದಿಂದ ಭೇದವೇ ಸಿದ್ಧಿಸುವದು. ಇನ್ನು, ಜೀವತ್ವರೂಪ ಜಾತಿಯನ್ನು ಜೀವನಲ್ಲಿ ಹೇಳಬಹುದೇ ಹೊರತು ಬ್ರಹ್ಮನಲ್ಲಿ ಅಲ್ಲ. ಹೀಗಿರುವದರಿಂದ ಜೀವಬ್ರಹ್ಮರು ಜಾತಿತಃ ಬಿನ್ನರು. ಅಲ್ಲದೆ, **ದ್ವಾಸುಪರ್ಣಾ ಸಯುಜಾಸಖಾಯಾ** ಇತ್ಯಾದಿ ಶ್ರುತಿಗಳಿಂದ ಜೀವಬ್ರಹ್ಮಭೇದವೇ ಸ್ಪಷ್ಟವಾಗಿದೆ. ಇನ್ನೂ ಹೇಳಬೇಕೆಂದರೆ ಸರ್ವೋತ್ತಮನಾದ ಪರಮಾತ್ಮನಿಗೆ ನೀನು ಸರ್ವೋತ್ತಮನೆಂದು ಹೇಳಿದರೆ ಅಜ್ಞರಾದ ಜೀವರಿಗೆ ಅವನು ಜ್ಞಾನವನ್ನು ದಯಪಾಲಿಸುವನು, ಜ್ಞಾನವನ್ನು ಕೊಟ್ಟು ಮೋಕ್ಷವನ್ನು ಕೊಡುವನು, ಮೋಕ್ಷದಲ್ಲಿ ಆನಂದವನ್ನು ಕೊಡುವನು. ಹೀಗೆ ಜೀವಬ್ರಹ್ಮರ ಭೇದವನ್ನು ಹೇಳಿದರೆ ಜೀವರಿಗೆ ಅವರ ಪ್ರಯೋಜನವು ಸಿದ್ಧಿಸುವದು. ಅದೇ, ಐಕ್ಯವನ್ನು ಹೇಳಿದರೆ ರಾಜನ ಒಡೆತನವನ್ನು ಒಪ್ಪದ ಪುರುಷನಿಗೆ ಶಿಕ್ಷೆಯಾಗುವಂತೆ ಪರಮಾತ್ಮನ ಸರ್ವೋತ್ತಮತ್ವವನ್ನು ಒಪ್ಪದ ಜೀವರು ನರಕಾದಿ ಅನರ್ಥಗಳೆಂಬ ಫಲವನ್ನು ಅನುಭವಿಸಬೇಕಾಗುವದು. ಹೀಗೆ ಜೀವಬ್ರಹ್ಮರಲ್ಲಿ **ಸ್ವರೂಪತಃ, ಜಾತಿತಃ, ಶ್ರುತಿಗಳ ಅಧಾರದಿಂದ ಮತ್ತು ಫಲಭೇದದಿಂದ** ಭೇದ ಸಿದ್ಧಿಸಿದಾಗ ಅವರಲ್ಲಿ ಅಭೇದವನ್ನು ಹೇಳುವದು ಅಯೋಗ್ಯ. ಇನ್ನು, ಅಹಂ ಬ್ರಹ್ಮಾಸ್ಮಿ ಇತ್ಯಾದಿ ವಾಕ್ಯಗಳಿಗೆ ಐಕ್ಯಪರತ್ವವು ಸಿದ್ಧಿಸಿದಾಗಷ್ಟೆ ದ್ವಾಸುಪರ್ಣಾ ಇತ್ಯಾದಿ ಭೇದಪರ ವಾಕ್ಯಗಳಿಗೆ ಅತತ್ವಾವೇದಕತ್ವವನ್ನು ಹೇಳಬಹುದು. ಆದರೆ ಅದೇ ಸಿದ್ಧವಿಲ್ಲ. ಮೇಲೆ ಹೇಳಿದ ಪ್ರಕಾರ ಜೀವ ಹಾಗೂ ಬ್ರಹ್ಮರಲ್ಲಿ ವಿರುದ್ಧಧರ್ಮಗಳಿರುವ ಕಾರಣ ಅವರಲ್ಲಿ ಐಕ್ಯವನ್ನು ಹೇಳಲಿಕ್ಕಾಗದು ಎಂಬ ತರ್ಕದ ಬಲದಿಂದ ಹಾಗೂ ಶ್ರುತಿಗಳ ಆಧಾರದ ಮೇಲೆ (ಹಾಗೂ ಅನುಭವದ ಮೇಲೆ) ಭೇದವೇ ಸಿದ್ಧವಾಗಿದೆ. ಅಂದಮೇಲೆ ಅಹಂ ಬ್ರಹ್ಮಾಸ್ಮಿ ಇತ್ಯಾದಿ ಆಪಾತತಃ

Rarest Archiver

ಅಭೇದವನ್ನು ಹೇಳುವ ವಾಕ್ಯಗಳಿಗೆ ಮೇಲೆ ತೋರುವ ಅರ್ಥವನ್ನು ಬಿಟ್ಟು ಬೇರೇ ಅರ್ಥವನ್ನು ಹೇಳಬೇಕೆಂದು ಹೇಳಿದಹಾಗಾಯಿತು. ಇದಕ್ಕೆ ಲೌಕಿಕ ದೃಷ್ಟಾಂತವೂ ಉಂಟು. ಬಾಲಕ ದೇವದತ್ತನು ಸಿಂಹನಾಗಿದ್ದಾನೆ ಎಂದು ನಾವು ಹೇಳುವದುಂಟು. ಬಾಲಕನೆಂದಾದರೂ ಸಿಂಹನಾಗುವದುಂಟೇ ? ಇಲ್ಲ. ಬಾಲಕನು ಸಿಂಹಸದೃಶ–ನಾಗಿದ್ದಾನೆಂದು ಅರ್ಥ ಮಾಡಿದಾಗಲೇ ಪ್ರಯೋಗಿಸಲ್ಪಟ್ಟ ವಾಕ್ಯಕ್ಕೆ ಪ್ರಾಮಾಣ್ಯ ಬರುವದು. ಇಲ್ಲವಾದರೆ ಅಪ್ರಾಮಾಣ್ಯ. ಅದೇ ರೀತಿ, ಭೇದಪರವಾಕ್ಯಗಳಿಗೆ ಅತತ್ವಾವೇದಕತ್ವವು ಸಿದ್ಧಿಸಿದಾಗ ಅಹಂ ಬ್ರಹ್ಮಾಸ್ಮಿ ಇತ್ಯಾದಿ ಐಕ್ಯಪರ ತಾತ್ಪರ್ಯವು ಸಿದ್ಧಿಸುವದು, ಐಕ್ಯಪರ ತಾತ್ಪರ್ಯ ಸಿದ್ಧವಾದಾಗಲಷ್ಟೇ ಭೇದಪರವಾಕ್ಯಗಳಿಗೆ ಅತತ್ವಾ–ವೇದಕತ್ವವು ಸಿದ್ಧಿಸುವದು. ಹೀಗೆ ಅನ್ಯೋನ್ಯಾಶ್ರಯತ್ವರೂಪ ದೋಷ ಬರುವದು. ಕಾರಣ ಆಪಾತತಃ ಐಕ್ಯವನ್ನು ಹೇಳುವ ವಾಕ್ಯಗಳಿಗೆ ಬೇರೆ ಅರ್ಥವನ್ನು ಹೇಳಿ ಶ್ರುತಿಗಳಿಗೆ ಈ ದೋಷವನ್ನು ಪರಿಹರಿಸಬೇಕು.

ಅಂತು, ಪಂಚಮವೇದವಾದ ಮಹಾಭಾರತದಲ್ಲಿಯ ಶಾಂತಿಪರ್ವ–ಮೋಕ್ಷಧರ್ಮ ಪರ್ವದ ಈ ವಾಕ್ಯಗಳು ಭೇದವನ್ನು ಸ್ಪಷ್ಟವಾಗಿ ಪ್ರತಿಪಾದಿಸಿವೆ ಎಂದು ವಿವರಿಸಿದ್ದಾರೆ.

ಈ ವಾಕ್ಯಗಳ ತಾತ್ಪರ್ಯವು ***ಶ್ರುತ್ಯರ್ಥಷಟ್ಪದಿ***ಯಲ್ಲಿ ಹೀಗೆ:–

*ಮಂದಮತಿಗಳು ಪೇಳ್ವರೈಕ್ಯವ–*
*ನಂದಶಾಸ್ತ್ರದ ತತ್ವ ತಿಳಿಯದೆ*
*ಎಂದಿಗೆಂದಿಗು ಭಿನ್ನರಾಗಿಹ ದೇವಜೀವರೊಳು.*
*ಮುಂದೆಮುಂದೆಯೆ ತೋರ್ಪುದರ್ಥವೆ*
*ಚಂದವೇದಕೆ? ಕಾಮಕೋಪದಿ*
*ಮಂದಮತಿಯಲಿ ವೇದದರ್ಥವ ನುಡಿವುದೆಂತುಚಿತ?* ॥

*ದ್ವಾಸುಪರ್ಣೇತ್ಯಾದಿ ವೇದದ*
*ಈಸು ವಾಕ್ಯವನರಿಯದಾ ಜನ*
*ಘಾಸಿಗೊಳಿಸಿಹರೆಲ್ಲ ವೇದವ ಶಾಸ್ತ್ರಶತ್ರುಗಳು,*
*ಸೂಸಿ ನೋಡಲು ಮಂಗಳಾತ್ಮನ*
*ಆಸು ಗುಣಗಳು ತಮ್ಮೊಳೆನ್ನುತ*
*ವಾಸವಾದಿಗಳಿಂದ ನುತನಂ ಕದ್ದರಿವರಕಟ !* ॥

*ಇಂಥ ಜನ ತಮಗಿಂತಲುತ್ತಮ*
*ಸಂತರನು ಹರಿಯನ್ನು ಕಂಡರೆ*
*ಎಂತು ಸಹಿಸರು ಮನದಿ ಕೊರಗುವರನಿಶ ದುಃಖಿಗಳು,*

Rarest Archiver

*ಅಂತರವು ಜೀವೇಶರೊಳು ತಾ*
*ಶಾಂತಚಿತ್ತಗೆ ತರ್ಕವಿದಿತವು*
*ಇಂತಿರಲು ನೈರ್ಗುಣ್ಯ ಪೇಳುತಲೈಕ್ಯವೆನ್ನುವರು. ॥*

*ಅಕಟ ನರಕವೆ ಗತಿಯು ಇಂತಹ*
*ವಿಕಟವಾದದ ಜನಕೆ, ನಿರುತ*
*ಪ್ರಕಟವಿರೆ ಜೀವೇಶಭೇದವು ವಿವಿಧ ರೀತಿಯಲಿ,*
*ಮುಕುಟವಾಕ್ಯಗಳಲ್ಲಿ ವೇದವು*
*ವಿಕಲವಾಗದ ಭೇದ ಪೇಳಿದೆ,*
*ಸಕಲಪಾಲಕ ಹರಿಯೆ ಉತ್ತಮನೆಂದು ತಿಳಿಸುತಲಿ. ॥*

**೩೩. ಯಥಾ ಪಕ್ಷೀ ಚ ಸೂತ್ರಂ ಚ ನಾನಾವೃಕ್ಷರಸಾ ಯಥಾ ।**
**ಯಥಾ ನದೀಸಮುದ್ರಶ್ಚ ಶುದ್ಧೋದಲವಣೇ ತಥಾ ॥**
**ಯಥಾ ಚೋರಾಪಹಾರ್ಯೌ ಚ ಯಥಾ ಪುಂ ವಿಷಯಾವಪಿ ।**
**ತಥಾ ಜೀವೇಶ್ವರೌ ಭಿನ್ನೌ ಸರ್ವದೈವ ವಿಲಕ್ಷಣೌ ॥**
**ತಥಾಪಿ ಸೂಕ್ಷ್ಮರೂಪತ್ವಾತ್ ನ ಜೀವಾತ್ಪರವೋ ಹರಿಃ ।**
**ಭೇದೇನ ಮಂದದೃಷ್ಟೀನಾಂ ದೃಶ್ಯತೇ ಪ್ರೇರಕೋऽಪಿ ಸನ್ ॥**
**ವೈಲಕ್ಷಣ್ಯಂ ತಯೋರ್ಜ್ಞಾತ್ವಾ ಮುಚ್ಯತೇ ಬಧ್ಯತೇऽನ್ಯಥಾ ॥**
**–ಪರಮೋಪನಿಷತ್**

ಛಾಂದೋಗ್ಯೋಪನಿಷತ್ತಿನಲ್ಲಿ ಉದ್ದಾಲಕರು ಮಗ ಶ್ವೇತಕೇತುವಿಗೆ ಒಂಬತ್ತು ದೃಷ್ಟಾಂತಗಳನ್ನು ಕೊಟ್ಟು ಅವು ಎಲ್ಲವೂ ಕೂಡ ಭೇದಪರವಾದ ದೃಷ್ಟಾಂತಗಳು ಎಂದು ಶ್ರೀಮದಾಚಾರ್ಯರು ಒಂದೊಂದು ದೃಷ್ಟಾಂತವನ್ನು ವಿವರಿ–ಸುತ್ತ ಸ್ಪಷ್ಟಪಡಿಸಿದರು. ಈ ಉಪನಿಷತ್ತಿನಲ್ಲಿ ಮೇಲೆ ಹೇಳಿದಂತೆ ಕೆಲ ದೃಷ್ಟಾಂತಗಳ ಕೊನೆಗೆ **'ಸ ಆತ್ಮಾತತ್ವಮಸಿ ಶ್ವೇತಕೇತೋ'** ಎಂಬ ವಾಕ್ಯವೂ ಇದ್ದು ಇದು ಆಪಾತತಃ ಅಭೇದವನ್ನು ಸೂಚಿಸುವದು. ಆದರೆ ಶ್ರೀಮದಾಚಾರ್ಯರು ಇದರಲ್ಲಿ ಸಂಧಿ ವಿಗ್ರಹವನ್ನು ಪ್ರಕರಣಕ್ಕನುಗುಣವಾಗಿ **ಸ+ಆತ್ಮಾ+ಅತತ್+ತ್ವಮ್+ಅಸಿ** ಎಂದು ಮಾಡಿ ಭೇದಪರ ಅರ್ಥವನ್ನು ಪ್ರತಿಪಾದಿಸಿದ್ದಾರೆಂದು ಈ ಹಿಂದೆ ವಿವರಿಸಲಾಗಿದೆ. ಅಂತು, *ಸವರ್ಣದೀರ್ಘಸಂಧಿವಿಗ್ರಹ ಮಾಡಿ ಪ್ರಯತ್ನದಿಂದ* ಭೇದಪರ ಅರ್ಥ ಬಂದಿದೆ ಎಂಬ ಶಂಕೆ ಬರಬಹುದು. ಉಳಿದ ಶ್ರುತಿಗಳಲ್ಲಿಯೂ ಸ್ಪಷ್ಟವಾಗಿ ಭೇದಪರ ವಾಕ್ಯಗಳಿದ್ದರೆ ಹಾಗೂ ಈ ಒಂಬತ್ತೂ ದೃಷ್ಟಾಂತಗಳೂ ಭೇದಪರ ಎಂದು ಬೇರೆ ಯಾವುದಾದರೂ ಶ್ರುತಿ ಹೇಳುತ್ತಿದ್ದರೆ ಶ್ರೀಮದಾಚಾರ್ಯರು ಅರ್ಥ ಮಾಡಿದ್ದರ ಬಗ್ಗೆ ಮನಸ್ಸಿನಲ್ಲಿ ಸಂಶಯ ಉಳಿಯುತ್ತಿರಲಿಲ್ಲ ಎಂಬ ವಿಚಾರ ಬರುವ ಸಂಭವವಿದೆ. ಇದನ್ನು ಊಹಿಸಿಯೇ ಶ್ರೀಮದಾಚಾರ್ಯರು *ಪರಮೋಪನಿಷತ್ತಿನ* ಈ ವಾಕ್ಯವನ್ನು

Rarest Archiver

ಉದಾಹರಿಸಿ ಸಮಾಖ್ಯೆಯನ್ನು ಕೊಟ್ಟಿದ್ದಾರೆಂದೆನಿಸುವದು. **'ಶ್ರುತಿಃ ಲಿಂಗಂ ಸಮಾಖ್ಯಾ ಚ ವಾಕ್ಯಂ ಪ್ರಕರಣಂ ತಥಾ । ಪೂರ್ವಂ ಪೂರ್ವಂ ಬಲೀಯಃ ಸ್ಯಾದೇವಮಾ- ಗಮನಿರ್ಣಯಃ ॥'** ಎಂಬ ನುಡಿಯಂತೆ ಪ್ರಬಲವಾದ **'ಸಮಾಖ್ಯಾ'** (ಒಂದೇ ಅರ್ಥ ಹೇಳುವ ಆಧಾರ) ವನ್ನು ಕೊಟ್ಟು ಶ್ರುತಿವಾಕ್ಯದ ತಾತ್ಪರ್ಯವನ್ನು ತೆಗೆದಿದ್ದಾರೆ. ಇದು ದೃಷ್ಟಾಂತಗಳೆಲ್ಲ ಭೇದವನ್ನೇ ಪ್ರತಿಪಾದಿಸಲು ಹೊರಟಿವೆ ಎಂಬುದಕ್ಕೆ ಸ್ಪಷ್ಟವಾದ ಆಧಾರದ ಶ್ರುತಿವಾಕ್ಯ. (ಉಪನಿಷತ್ತಿನ ವಾಕ್ಯ). ವೇದಾಂತ ವೇದದ ಅಂತ ಎಂದರೆ ತಾತ್ಪರ್ಯವನ್ನು ಪ್ರತಿಪಾದಿಸುವದಕ್ಕಾಗಿಯೇ ಸ್ವತಃ ಅಪೌರುಷೇಯವಾದ ಉಪನಿಷದ್ವಾಕ್ಯವನ್ನು ಶ್ರೀಮದಾಚಾರ್ಯರು ಪ್ರತಿಪಾದಿಸಿದ್ದಾರೆಂದು ತಿಳಿಯಬೇಕು.

ಈ ವಾಕ್ಯದಲ್ಲಿ ಪದಚ್ಛೇದ ಅನ್ವಯಗಳು ಸ್ಪಷ್ಟವಿರುವದರಿಂದ ಕೇವಲ ಅರ್ಥವನ್ನು ಕೊಡಲಾಗಿದೆ.

**ಅರ್ಥ:–** ಪಕ್ಷಿ ಹಾಗೂ ಅದಕ್ಕೆ ಕಟ್ಟಿದ ದಾರ ಬೇರೆ ಬೇರೆಯಾಗಿರುವಂತೆ ಜೀವ ಹಾಗೂ ಈಶ್ವರರು ಭಿನ್ನರಾಗಿದ್ದಾರೆ. ಬೇರೆ ಬೇರೆ ವೃಕ್ಷಗಳ ಹೂವುಗಳಲ್ಲಿಯ ಮಕರಂದಗಳು ಬೇರೆ ಬೇರೆ ಯಾಗಿರುವಂತೆ ಜೀವ ಪರಮಾತ್ಮರು ಬೇರೆ ಬೇರೆಯಾಗಿರುವರು. ಅನೇಕ ಪ್ರಕಾರದ ನದಿಗಳು ಹಾಗೂ ಅವು ಸೇರುವ ಸಮುದ್ರ ಇವು ಬೇರೆ ಬೇರೆಯಾಗಿರುವಂತೆ ಜೀವ ಹಾಗೂ ಪರಮಾತ್ಮರು ಬೇರೆ ಬೇರೆಯಾಗಿರುವರು. ಬೇರೆ ಬೇರೆ ವೃಕ್ಷ, ಬಳ್ಳಿಗಳು ಹಾಗೂ ಅವುಗಳ ಹೂವುಗಳ ಮಕರಂದಗಳೂ ಕೂಡ ಪರಸ್ಪರ ವಿಲಕ್ಷಣವಾಗಿವೆ, ಅದೇ ರೀತಿ ವಿವಿಧ ನದಿಗಳು ಹಾಗೂ ಅವು ಸೇರುವ ಸಮುದ್ರ ಇವೂ ಕೂಡ ಪರಸ್ಪರ ವಿಲಕ್ಷಣವಾಗಿವೆ. ಅದರಂತೆಯೇ ಜೀವ ಮತ್ತು ಈಶ್ವರರೂ ಕೂಡ ವಿಲಕ್ಷಣರಾಗಿದ್ದಾರೆ. ಉಪ್ಪು ಕೂಡಿಸದಿರುವ ಶುದ್ಧ ನೀರು ಹಾಗೂ ಉಪ್ಪು ಇವು ಬೇರೆ ಬೇರೆಯಾಗಿರುವಂತೆ ಜೀವಾತ್ಮ ಪರಮಾತ್ಮರು ಬೇರೆ ಬೇರೆಯಾಗಿದ್ದಾರೆ. ಉಪ್ಪಿಗೆ ನೀರನ್ನು ಉಪ್ಪನ್ನಾಗಿ ಮಾಡುವ ಸಾಮರ್ಥ್ಯವಿದೆ ಎಂದು ತಿಳಿದಿದ್ದರೂ ಕೂಡ ಉಪ್ಪುನೀರಿನಲ್ಲಿ ಸೇರಿದ ಉಪ್ಪು ಕಣ್ಣಿಗೆ ಕಾಣುವದೇ? ಇಲ್ಲ. ಅದೇ ರೀತಿ ಸಮಸ್ತ ಚರಾಚರ ಪ್ರಪಂಚದಲ್ಲಿ ಪ್ರವೇಶಿಸಿ ಅವೆಲ್ಲವುಗಳನ್ನು ನಿಯಮನ ಮಾಡುವವನು ಪರಮಾತ್ಮನೇ ಎಂದು ತಿಳಿದಿದ್ದರೂ ಕೂಡ ಅವನು ಕಣ್ಣಿಗೆ ಕಾಣದೆಯೆ ಅದೃಶ್ಯನಾಗಿದ್ದಾನೆ. ಅದೇ ರೀತಿ ಉಗ್ರ ದರೋಡೆಕೋರರು ಕಣ್ಣಿಗೆ ಪಟ್ಟಿ ಕಟ್ಟಿದ ಪುರುಷನೂ ಹಾಗೂ ಅವನು ಹೋಗಬೇಕಾದ ಊರೂ ಕೂಡ ಬೇರೆ ಬೇರೆಯೇ ಅಲ್ಲವೇ? ಅದೇ ರೀತಿ ಅಜ್ಞಾನದಿಂದ ಕುರುಡಾದ ಜೀವನು ಗುರೂಪದೇಶದಿಂದ ಮುಕ್ತಿ ಪಡೆದು ಯಾರನ್ನು ಕುರಿತು ಹೋಗುವನೋ ಹಾಗೂ ಅವನನ್ನು ನೋಡುವನೋ ಅಂಥ ಪರಮಾತ್ಮ ಇಬ್ಬರೂ ಒಂದೇ ಹೇಗೆ ಆಗುವರು?

Rarest Archiver

ಇಬ್ಬರೂ ಭಿನ್ನರೇ. ಪರಮಾತ್ಮನು ತನಗಿಂತ ವಿಲಕ್ಷಣನೂ ಹಾಗೂ ಉತ್ತಮನೂ ಎಂದು ತಿಳಿದ ಜೀವನು ಮುಕ್ತನಾಗುತ್ತಾನೆ, ಇಲ್ಲವಾದರೆ ರಾಜನ ಒಡವೆಯನ್ನು ಕದ್ದು ಆ ಒಡವೆ ತನ್ನದೇ ಎಂದು ವಾದಿಸುವ ಚೋರನು ರಾಜನ ಆಜ್ಞೆಯಂತೆ ಕೈಗೆ ಬರೆ ಪಡೆಯುವಂತೆ ಪರಮಾತ್ಮನ ಗುಣಗಳನ್ನು ತನ್ನಲ್ಲಿ ಆರೋಪಿಸಿಕೊಳ್ಳುವ ಜೀವ ಪರಮಾತ್ಮರಲ್ಲಿ ಭೇದವಿಲ್ಲವೆಂದು ಹೇಳುವ ಪುರುಷನು ನಿತ್ಯ ನರಕದಲ್ಲಿ ಬೀಳುತ್ತಾನೆ. ಇದು ಶ್ರೀಮದಾಚಾರ್ಯರಿಂದ ಉದಾಹರಿಸಲ್ಪಟ್ಟ *ಪರಮೋಪನಿಷತ್ತಿನ* ಶ್ಲೋಕಗಳ ಅರ್ಥ.

*ಪರಮೋಪನಿಷತ್ತಿನ* ಈ ವಾಕ್ಯದ ಒಟ್ಟರ್ಥ **ಶ್ರುತ್ಯರ್ಥಷಟ್ಪದಿ**ಯಲ್ಲಿ ಇಂತಿದೆ :–

*ಖಗವು ಸೂತ್ರವು ಒಂದೆ ಎಂಬರೆ?*
*ಬಗೆಬಗೆಯ ತರುರಸಗಳೊಂದೆಯೆ?*
*ಮುಗಿಲಿನಗಲದ ಕಡಲು ಸೇರುವ ನದಿಗಳೊಂದೆನಲೆ?*
*ಮಗುವು ಉಪ್ಪಿನ ಸಿಹಿಯ ನೀರಿನ*
*ಬಗೆಯನರಿಯದೆ ಉಪ್ಪು ಜಲದಲಿ*
*ವಿಗತವಿರೆ? ಚೋರಾಪಹಾರ್ಯವು ಒಂದೆ ಎನಬಹುದೆ ? ॥*

*ಕಣ್ಣುಪಟ್ಟಿಯ ಬಿಡಿಸೆ ದೂರಕೆ*
*ಬನ್ನಬಡುತಲಿ ಬಂದ ಪುರುಷನು*
*ತನ್ನ ಊರನು ಸೇರೆ ಊರಿನೊಳೈಕ್ಯನೆಂಬುವರೆ ?*
*ಘನ್ನಮಹಿಮನು ಹರಿಯು ನಿತ್ಯವು*
*ಭಿನ್ನನಲ್ಲವೆ ಜೀವರಿಂದಲಿ?*
*ತನ್ನಧೀನದ ಜಗವ ಪೊರೆವನು ಪರಮ ಕರುಣಾಳು. ॥*

*ಹರಿಯು ಭಿನ್ನನು, ಜಗವಿಲಕ್ಷಣ,*
*ಸರುವವಿಟ್ಟಿಹ ತನ್ನ ತಂತ್ರದಿ,*
*ಹರಿಯದೃಶ್ಯನು, ಮಹಿಮೆಯಾತನ ತೋರುತಿಹುದೆಲ್ಲ.*
*ಅರಿಯಲಿದ ನರ ಭವದ ಬಂಧವ*
*ತೊರೆವನನ್ಯಗೆ ದು:ಖಮಡುವಿನ*
*ನಿರಯ ಗತಿಯೆಂದುಸುರುತಿದೆ ಪರಮೋಪನಿಷದುಕ್ತಿ. ॥*

೩೪. ಪ್ರೇರಕ: ಸರ್ವ(ಭೂತಾನಾಂ)ಜೀವಾನಾಂ ಪ್ರಾಣಧೀಚೋದಿತಾ ಚ ಸ:।
ವಿಷ್ಣು: ಸಂಸಾರಿಣೋನ್ಯೋ ಯಸ್ತಮವಿಜ್ಞಾಯ ಮೂಢಧೀ: ॥
ದೇಹೇಂದ್ರಿಯಪ್ರಾಣಬುದ್ಧಿನೇತೃತ್ವಂ ಮನ್ಯತೇ ತ್ಮನ: ।
ತ: ಸಂಸಾರಪದವೀಂ ಯಾತಿ ಜೀವೇಶಯೋ: ಸದಾ ॥
ವೈಲಕ್ಷಣ್ಯಂ ಪರಂ ಜ್ಞಾತ್ವಾ ಮುಚ್ಯತೆ ಬಧ್ಯತೇನ್ಯಥಾ ॥

—ಆಗಮ ವಾಕ್ಯ (?)

Rarest Archiver

ಛಾಂದೋಗ್ಯೋಪನಿಷತ್ತಿನಲ್ಲಿ ಶ್ವೇತಕೇತು ಉದ್ದಾಲಕರ ನಡುವಿನ ಸಂವಾದದಲ್ಲಿ ತಂದೆ ಉದ್ದಾಲಕರು ಒಂಬತ್ತು ದೃಷ್ಟಾಂತಗಳಿಂದ ಜೀವನು ಪರಮಾತ್ಮನಿಗಿಂತ ಭಿನ್ನನು ಹಾಗೂ ಅವನ ಅಧೀನನು ಎಂದು ಹೇಳಿದ್ದಾರೆಂಬ ವಿಷಯವನ್ನು ಶ್ರೀಮದಾಚಾರ್ಯರು ಸ್ಪಷ್ಟಪಡಿಸಿದ್ದಾರೆ. ಇದರ ಮೇಲೆ ಅದ್ವೈತಿಗಳು ಪುನಃ ಆಕ್ಷೇಪ ಎತ್ತಿದ್ದಾರೆ. ಆಕ್ಷೇಪದ ಅಭಿಪ್ರಾಯ ಹೀಗಿದೆ; ಈ ಎಲ್ಲ ದೃಷ್ಟಾಂತ-ಗಳಲ್ಲಿ ಐಕ್ಯಪ್ರತಿಷೇಧಪರವಾದ ಭೇದವನ್ನೇ ಹೇಳಿದೆ ಎಂದರೆ ಪ್ರತಿಷೇಧಿ-ಸಲ್ಪಡುತ್ತಿರುವ ಐಕ್ಯವನ್ನು ಎಲ್ಲಿಯಾದರೂ ಹೇಳಿರಬೇಕು ಎಂದಾಗುವದು. ಆದರೆ ಶ್ರೀ ಮಧ್ವಾಚಾರ್ಯರ ಪ್ರಕಾರ ಯಾವ ಆಗಮದಲ್ಲಿಯೂ ಕೂಡ ಐಕ್ಯವನ್ನು ಹೇಳಿಯೇ ಇಲ್ಲ ಎಂದಿದೆ. **(ನ ಚ ಅಭೇದೇ ಕಶ್ಚಿದಾಗಮಃ).** ಐಕ್ಯದ ಪ್ರಸಕ್ತಿ ಇಲ್ಲದೆಯೇ ಅದರ ಪ್ರತಿಷೇಧವು ಹೇಗೆ ಕೂಡುವದು ? ಹೀಗೆ ಆಕ್ಷೇಪವನ್ನು ಊಹಿಸಿ ಅದಕ್ಕೆ ಪರಿಹಾರರೂಪವಾಗಿ ಐಕ್ಯವು ಹೀಗೆ ಪ್ರಸಕ್ತವಾಗಿದೆ, ಅದಕ್ಕೆ ಈ ಪರಿಹಾರ ಎಂದು ಸೂಚಿಸುವ ಮೇಲಿನ ಆಗಮವಾಕ್ಯವನ್ನೇ ಶ್ರೀ ಮಧ್ವಾಚಾರ್ಯರು ಉದಾಹರಿಸಿದ್ದಾರೆ. ನಾಲ್ಕು ಪ್ರಕಾರದಿಂದ ಐಕ್ಯವು ಪ್ರಾಪ್ತವಾಗುವದೆಂದು ಶ್ರೀ ಜಯತೀರ್ಥರು ತಮ್ಮ ಟೀಕೆಯಲ್ಲಿ ವಿವರಿಸಿದ್ದಾರೆ. ***ಸಾಧಾರಣಪ್ರಾಪ್ತಿ, ಅಸಾಧಾರಣಪ್ರಾಪ್ತಿ, ವಾದಿಪ್ರಾಪ್ತಿ ಹಾಗೂ ಶ್ರುತಿತಾತ್ಪರ್ಯಾಪರಿಜ್ಞಾನಪ್ರಾಪ್ತಿ ಎಂಬ ನಾಲ್ಕು ಪ್ರಕಾರದಿಂದ ಐಕ್ಯವು ಪ್ರಸಕ್ತವೆಂಬುದನ್ನು (ಶ್ರೀನಿವಾಸತೀರ್ಥೀಯ ಟಿಪ್ಪಣೀ)*** ಹೇಳಿ ಈ ಉದಾಹೃತ ಆಗಮವಾಕ್ಯದಲ್ಲಿ ***ಐಕ್ಯದ ಸಾಧಾರಣೀ-ಪ್ರಾಪ್ತಿಯನ್ನು*** ತೋರಿಸಿದ್ದಾರೆ. ಈ ಆಗಮ ವಾಕ್ಯದ ಅರ್ಥವನ್ನು ಹೇಳುವಾಗ ಐಕ್ಯದ ಈ ಪ್ರಸಕ್ತಿಯನ್ನೂ ಹಾಗೂ ಮುಂದೆ ಉದಾಹರಿಸಲ್ಪಡುವ ಆಗಮವಾಕ್ಯಗಳ ಅರ್ಥ ಹೇಳುವಾಗ ಉಳಿದ ಮೂರು ಪ್ರಸಕ್ತಿಗಳನ್ನೂ ವಿವರಿಸುವೆವು.

**ಅರ್ಥ :–**ಎಲ್ಲ ಜೀವರಿಗೂ ಪ್ರೇರಕನು ಮತ್ತು ಇಂದ್ರಿಯ, ಪ್ರಾಣಾದಿಪಂಚವಾಯುಗಳು ಹಾಗೂ ಮನಸ್ಸುಗಳನ್ನು ಪ್ರಚೋದಿಸುವವನೂ ಕೂಡ ಆ ವಿಷ್ಣುವೇ ಆಗಿದ್ದಾನೆ. ಅವನು ಸಂಸಾರಿಗಳಿ(ಜೀವರಿ)ಗಿಂತ ಭಿನ್ನನಾಗಿದ್ದಾನೆ. ದೇಹ, ಇಂದ್ರಿಯ, ಪ್ರಾಣ, ಬುದ್ಧಿಗಳ ನೇತೃತ್ವವನ್ನು ತಾನೇ ಪಡೆದಿರುವೆನೆಂದು ತಿಳಿಯುವ ಮೂಢನು ಸಂಸಾರದ ಚಕ್ರದಲ್ಲಿ ಸಿಲುಕುತ್ತಾನೆ ಅಷ್ಟೇ ಅಲ್ಲ ಅವನು ನಿತ್ಯನರಕದಲ್ಲಿ ಬೀಳುತ್ತಾನೆ. ಜೀವ ಮತ್ತು ಈಶರ ಮಧ್ಯದಲ್ಲಿಯ ಭೇದವನ್ನು ತಿಳಿದವನು ಮುಕ್ತಿಯನ್ನು ಪಡೆಯುತ್ತಾನೆ, ಇಲ್ಲದಿದ್ದರೆ ಬದ್ಧನಾಗುತ್ತಾನೆ.

**ವಿಶೇಷ ವಿಷಯಗಳು:–**ಹೀಗೆ ಹೇಳುವದರಿಂದ ಐಕ್ಯಜ್ಞಾನವು ಅನರ್ಥಕ್ಕೆ ಕಾರಣವೆಂದೂ ಅದನ್ನು ತೊರೆದರೆ ಪರಮಪುರುಷಾರ್ಥ ಸಿದ್ಧಿಸುವದೆಂದೂ ಹೇಳಿದಂತಾಯಿತು. ಸಜ್ಜನರಿಗೆ ಎಂದೂ ಈ ತರದ ಐಕ್ಯಾಭಿಮಾನವು ಬರಬಾರದು,

Rarest Archiver

ಹಾಗೂ ಅವರಿಗೆ ಅನರ್ಥವಾಗಬಾರದೆಂಬ ಉದ್ದೇಶವಿರುವದರಿಂದ ಸಜ್ಜನಾನುಕಂಪದಿಂದ ಐಕ್ಯಪ್ರಾಪ್ತಿಯನ್ನು ಪ್ರತಿಷೇಧಿಸಲು ಈ ಒಂಬತ್ತೂ ದೃಷ್ಟಾಂತಗಳು ಹೊರಟಿವೆ. ತಾನೇ ದೊಡ್ಡವನು ಎಂಬುದು ಮನುಷ್ಯಸಾಧಾರಣವಾದ ಅಭಿಮಾನ. ಪರಮಾತ್ಮನಲ್ಲಿಯ ಗುಣಗಳನ್ನು ತನ್ನಲ್ಲಿ ಆರೋಪಿಸಿಕೊಳ್ಳುವದೇ ಐಕ್ಯಜ್ಞಾನವಷ್ಟೆ ! ಇದೇ ಐಕ್ಯದ *ಸಾಧಾರಣೀಪ್ರಾಪ್ತಿಯು.* ಇದನ್ನು ಪ್ರತಿಷೇಧಿಸ-ಲೆಂದೇ ಒಂಬತ್ತು ದೃಷ್ಟಾಂತಗಳು ಹೊರಟಿವೆ.

ಈ ರೀತಿ ಪರಮಾತ್ಮನ ಸರ್ವಜ್ಞಾದಿ ಗುಣಗಳನ್ನು ತನ್ನಲ್ಲಿ ಹೇಳಿಕೊಳ್ಳುವ ಶ್ವೇತಕೇತುವಿಗೆ ಈ ತರದ ಐಕ್ಯಾಭಿಮಾನವು ಪ್ರಾಪ್ತವಾಗಿದ್ದಿತೆಂಬುದನ್ನು ಛಾಂದೋಗ್ಯೋಪನಿಷತ್ತಿನಲ್ಲಿಯೇ ಶ್ವೇತಕೇತುವಿಗೆ ಮಹಾಮನಾಃ, ಸ್ತಬ್ಧಃ ಇತ್ಯಾದಿ ವಿಶೇಷಣ ಕೊಟ್ಟು ತಿಳಿಸಿದ್ದಾರೆ. ಆದ್ದರಿಂದ ಇದು ಐಕ್ಯದ ***ಅಸಾಧಾರಣೀ*** (ಒಂದು ವಿಶಿಷ್ಟ ವ್ಯಕ್ತಿಯಲ್ಲಿಯ) ***ಪ್ರಾಪ್ತಿಯು.*** ಸರ್ವ ಜನರಿಗೂ ಸಾಧಾರಣವೂ ಹಾಗೂ ಶ್ವೇತಕೇತುವಿಗೆ ಮಾತ್ರ ಸಂಬದ್ಧವಾದ ಅಹಂಕಾರದಿಂದ **(ಅಸಾಧಾರಣೀ ಪ್ರಾಪ್ತಿ)** ಐಕ್ಯವು ಪ್ರಾಪ್ತವಾಗಿದೆಯೆಂದು ಹೇಳುವದರಿಂದ ಅಸಾಧಾರಣೀ ಪ್ರಾಪ್ತಿಯು ಸಾಧಾರಣೀಪ್ರಾಪ್ತಿಯಲ್ಲಿಯೇ ಅಂತರ್ಭೂತವಾಗಲಿಲ್ಲ. ಕಾರಣ ಪುನರುಕ್ತಿ ದೋಷ-ವಿಲ್ಲವೆಂದು ತಿಳಿಯಬೇಕು. (ಶ್ರೀ ರಾಯರ ***ಭಾವದೀಪ***) ಈ ತರದ ಐಕ್ಯಜ್ಞಾನವನ್ನು ಹೋಗಲಾಡಿಸಿ ಶ್ವೇತಕೇತುವಿಗೆ ಯೋಗ್ಯವಾದ ಉಪದೇಶ ಮಾಡಲೆಂದೇ ಒಂಬತ್ತೂ ದೃಷ್ಟಾಂತಗಳು ಪ್ರವೃತ್ತವಾಗಿವೆ. ಇನ್ನು, ಐಕ್ಯವಾದಿಯು ತನ್ನ ಮತವನ್ನು ಹೇಳಿರು-ವದರಿಂದ ಪ್ರಾಪ್ತವಾದ ಐಕ್ಯವನ್ನು ನಿಷೇಧಿಸಲೂ ಕೂಡ ಈ ಒಂಬತ್ತು ದೃಷ್ಟಾಂತಗಳು ಪ್ರವೃತ್ತವಾಗಿವೆಯೆಂದು ಹೇಳಲೂ ಬರುವದು. ಇದು ***ಐಕ್ಯದ ವಾದಿಪ್ರಾಪ್ತಿ***ಯೆಂಬ ಮೂರನೆಯ ಪ್ರಕಾರವು. ಅನಾದಿಯಾದ ವೇದವು ಐಕ್ಯವಾದಿಯೆಂಬ ಪುರುಷರ ಮತವನ್ನು ಖಂಡಿಸುವದೆಂದು ಹೇಳಿದರೆ ವೇದದ ಅಪೌರುಷೇಯತ್ವಕ್ಕೆ ಮತ್ತು ಅನಾದಿತ್ವಕ್ಕೆ ಭಂಗ ಬಂದಿತೆಂದು ತಿಳಿಯಬಾರದು. ಏಕೆಂದರೆ ಎಲ್ಲ ಮತಗಳೂ ಕೂಡ ಅನಾದಿಕಾಲದಿಂದಲೇ ಪ್ರವೃತ್ತವಾಗಿವೆ. **(ಅನಾದಿಕಾಲತೋ ವೃತ್ತಾಃ ಸಮಯಾ ಹಿ ಪ್ರವಾಹತಃ । ....ದುರಾಗ್ರಹಗೃಹೀತತ್ವಾತ್ ವರ್ತಂತೇ ಸಮಯಾಃ ಸದಾ ॥** *ಅನುವ್ಯಾಖ್ಯಾನ ಅ.೨ ಪಾ.೨. ಶ್ಲೋ. ೫೪೯, ೫೫೩) ಹೀಗಿದ್ದಾಗ* ಐಕ್ಯವು ವಾದಿಪ್ರಾಪ್ತವಾಗಿದೆ ಎನ್ನಲು ಯಾವ ಅಭ್ಯಂತರವೂ ಇಲ್ಲ. ಶ್ರುತಿಯ ತಾತ್ಪರ್ಯವನ್ನು ಸರಿಯಾಗಿ ತಿಳಿದುಕೊಳ್ಳದಿದ್ದರೂ ಕೂಡ ಐಕ್ಯವು ಪ್ರಾಪ್ತವಾಗುವದು. ಇದು ಐಕ್ಯದ ***ಶ್ರುತಿತಾತ್ಪರ್ಯಾಪರಿಜ್ಞಾನಪ್ರಾಪ್ತಿ*** ಎಂಬ ನಾಲ್ಕನೆಯ ಪ್ರಸಕ್ತಿಪ್ರಕಾರವು. ಆಗಲೂ ಕೂಡ ಐಕ್ಯದ ನಿಷೇಧವು ಕೂಡುವದು.

Rarest Archiver

ಈ ಶ್ರುತಿಯ ಭಾವವು **ಶ್ರುತ್ಯರ್ಥಷಟ್ಪದಿ**ಯಲ್ಲಿ ಇಂತಿದೆ. :-

*ಸರುವ ಜೀವಪ್ರೇರಕನು ಹರಿ*
*ಸರುವರಿಂದ್ರಿಯಚಿತ್ತ ಚೋದಕ*
*ನಿರುತ ಸರ್ವೋತ್ತಮನು ತಾನೆಯೆ ಎಂದು ತಿಳಿಸುತಿರೆ,*
*ಗರುವದಿಂದಲಿ ಜೀವ ಹರಿಯನು*
*ಮರೆತು ತನ್ನೊಳು ಹರಿಯ ಗುಣಗಳ*
*ಭರದೊಳಾರೋಪಿಸಲು ಸಂಸೃತಿಬಂಧ ತಪ್ಪುವದೆ?* ॥

*ಹರಿಯು ಉತ್ತಮನೆಂದು ತಿಳಿದವ*
*ಗರುವರಹಿತನು ಜಗದೊಳಾಗುತ*
*ಹರಿಯ ಕರುಣೆಗೆ ಪಾತ್ರನಾಗುತ ಮುಕುತಿ ಪಡೆಯುವನು.*
*ಹರಿಯ ಜೀವರ ಭೇದ ತಿಳಿಯದೆ*
*ಹರಿಯ ಗುಣಗಳು ತನ್ನವೆಂದರೆ*
*ದುರಿತ ತಪ್ಪದು ನಿರುತ ಸಂಸೃತಿಬಂಧ ಮೂಢನಿಗೆ* ॥

**೩೫. ಸರ್ವಾನ್ ವೇದಾನ್ ಅಧೀತ್ಯ ಮಹಾಮನಾಃ ಅನೂಚಾನಮಾನೀ ಸ್ತಬ್ಧಃ ಏಯಾಯ. –( ಛಾಂ. ಅ. ೬. ಖಂ.೧ ಶ್ಲೋ. ೧)**

ಇದು ಛಾಂದೋಗ್ಯೋಪನಿಷತ್ತಿನಲ್ಲಿಯ ವಾಕ್ಯವು. ಮಗ ಶ್ವೇತಕೇತುವು ಹನ್ನೆರಡು ವರ್ಷ ಗುರುಕುಲವಾಸ ಮಾಡಿ ಬಂದ ಬಳಿಕ ತಂದೆ ಉದ್ದಾಲಕರಿಗೆ ತಮ್ಮ ಮಗ ಹೇಗೆ ಕಂಡನು ಎಂಬುದರ ವರ್ಣನೆ ಇಲ್ಲಿದೆ.

**ಅರ್ಥ :-** ಎಲ್ಲ ವೇದಗಳನ್ನು ಅಧ್ಯಯನ ಮಾಡಿ ತಾನು ಎಲ್ಲ ವೇದಗಳನ್ನು ಸಾಂಗವಾಗಿ ಓದಿದವನು ಎಂದು ಅಭಿಮಾನವುಳ್ಳವನಾಗಿ (ಅನೂಚಾನಮಾನೀ) ತಾನೇ ದೊಡ್ಡವನು ಎಂಬ ಬಿಂಕದಿಂದ ಅವಿನೀತನಾಗಿ ಬಂದನು.

ಈ ಭಾಗವು ಐಕ್ಯದ **ಅಸಾಧಾರಣೀ ಪ್ರಾಪ್ತಿ**ಗೆ ದೃಷ್ಟಾಂತವು. ಹೀಗೆ ಪ್ರಾಪ್ತವಾದ ಐಕ್ಯವನ್ನು ಪ್ರತಿಷೇಧಿಸಲು ಒಂಬತ್ತು ದೃಷ್ಟಾಂತಗಳನ್ನು ಹೇಳಿ ಜೀವ ಮತ್ತು ಪರಮಾತ್ಮರಲ್ಲಿಯ ಭೇದವನ್ನು ಸ್ಪಷ್ಟಪಡಿಸಿದ್ದಾರೆ.

**೩೬. ತದ್ಧೈಕ ಆಹುಃ ಅಸದ್ ಏವ ಇದಂ ಅಗ್ರೇ ಆಸೀತ್**
**–( ಛಾಂ. ಅ. ೬. ಖಂ.೨ ಶ್ಲೋ. ೧)**

ಇದೂ ಕೂಡ *ಛಾಂದೋಗ್ಯೋಪನಿಷತ್ತಿನಲ್ಲಿ* ಬರುವ ವಾಕ್ಯವು. ಇದರ ಪೂರ್ಣ ಪಾಠ ಹೀಗಿದೆ;

Rarest Archiver

**ಸತ್ ಏವ ಸೋಮ್ಯ ಇದಂ ಅಗ್ರೇ ಆಸೀತ್ ಏಕಂ ಏವ ಅದ್ವಿತೀಯಂ ತದ್ ಹ । ಏಕೇ ಆಹುಃ ಅಸತ್ ಏವ ಇದಂ ಅಗ್ರೇ ಆಸೀತ್ ಏಕಂ ಏವ ಅದ್ವಿತೀಯಂ ತಸ್ಮಾತ್ ಅಸತಃ ಸತ್ ಜಾಯತೇ ಇತಿ ॥ –( ಛಾಂ. ಅ. ೬. ಖಂ.೨ ಶ್ಲೋ. ೧)**

**ಅರ್ಥ:–** ಮಗನೆ, ಪೂರ್ವ ಪ್ರಳಯದಲ್ಲಿ ಸರ್ವೋತ್ತಮವಾದ ಸತ್ ಎಂಬ ಈ ಬ್ರಹ್ಮವೊಂದೇ ಇದ್ದಿತು. ಅದು ಎಂಥದೆಂದರೆ ಅದು ತನ್ನ ಗುಣಕರ್ಮರೂಪಾದಿಭೇದ–ಹೀನವೂ ಗುಣಕರ್ಮಾದಿಗಳಿಂದ ಭೇದಾಭೇದಹೀನವೂ ಸಮಾಭ್ಯಧಿಕಹೀನವೂ (ಅಂದರೆ ಅದಕ್ಕೆ ಸಮಾನವಾಗಲೀ ಅಥವಾ ಉತ್ತಮವಾದಂತಹದಾಗಲೀ ಇನ್ನೊಂದು ಇರಲಿಲ್ಲ, ಆ ರೀತಿ ಸರ್ವೋತ್ತಮವಾದಂತಹದು) ಆಗಿದ್ದಿತು. ಆದರೆ ಹೀಗಿದ್ದರೂ ಈ ಶ್ರುತಿಮತಕ್ಕೆ ವಿರುದ್ಧವಾಗಿ ಕೆಲವರು (ಶೂನ್ಯವಾದಿಗಳು), ' ಪ್ರಲಯಕಾಲದಲ್ಲಿ ಶೂನ್ಯಾತ್ಮಕವಾದ ಅಸತ್ ಒಂದೇ ಇದ್ದಿತು, ಹಾಗೂ ಅದು ಭೇದಶೂನ್ಯವೂ ಹಾಗೂ ಅದ್ವಿತೀಯವೂ (ಅಂದರೆ ತನಗಿಂತ ಇನ್ನೊಂದು ಬೇರೆ ವಸ್ತು ಇಲ್ಲದಂತಹದೂ) ಆಗಿದ್ದಿತು. ಶೂನ್ಯಾತ್ಮಕವಾದ ಆ ಅಸತ್ತಿನಿಂದಲೇ ಸತ್ ಎಂಬುವದು ಹುಟ್ಟುವದು (ಹುಟ್ಟಿತು) ಎಂದು ಹೇಳುವರು.

**ಹಿನ್ನೆಲೆ ಹಾಗೂ ವಿಶೇಷ ವಿಷಯಗಳು :–** ತಂದೆ ಉದ್ದಾಲಕರು ಮಗ ಶ್ವೇತಕೇತುವಿಗೆ ತಾನು ಸರ್ವಜ್ಞನೆಂದು ತಿಳಿದು ಅವಿನೀತನಾಗಬಾರದೆಂದು ತಿಳಿಸಲು ಯಾವ ಪ್ರಧಾನವಾದುದನ್ನು ತಿಳಿದರೆ ಅಪ್ರಧಾನವಾದುದೆಲ್ಲವೂ ತಿಳಿದಂತಾಗುವದೋ ಅಂಥ ಪ್ರಧಾನವಾದುದನ್ನು ತಿಳಿದಿರುವಿಯಾ ಎಂದು ಕೇಳಿದರು. ಆಗ ಆ ಅಭಿಮಾನಿ ಬಾಲಕನು ಒಂದನ್ನು (ಪ್ರಧಾನವಾದುದನ್ನು) ತಿಳಿದರೆ ಇನ್ನೊಂದು (ಅಪ್ರಧಾನವಾದುದು) ಹೇಗೆ ತಿಳಿಯುವದು ಎಂದು ಮರುಪ್ರಶ್ನೆ ಹಾಕಿದನು. ಅದಕ್ಕೆ ಉದ್ದಾಲಕರು ಮಣ್ಣಿನ ಹೆಂಟೆಯ ಜ್ಞಾನದಿಂದ ಮಣ್ಣಿನ ವಸ್ತುಗಳಲ್ಲಿರುವ ಮಣ್ಣು ಕೂಡ ತತ್ಸದೃಶವಾದ ಮಣ್ಣೇ ಎಂದು ಜ್ಞಾನವಾಗುವಂತೆ, ಲೋಹಗಳಲ್ಲಿ ಶ್ರೇಷ್ಠವಾದ ಬಂಗಾರದ ಪರಿಚಯವಿದ್ದರೆ ಬಂಗಾರದಿಂದ ಉಂಟಾದ ವಸ್ತುಗಳಲ್ಲಿರುವಂಥ ಬಂಗಾರವೂ ಕೂಡ ತತ್ಸದೃಶವಾದ ಬಂಗಾರವೆ ಎಂದು ಜ್ಞಾನವಾಗುವಂತೆ ಹಾಗೂ ಕಬ್ಬಿಣದ ಒಂದು ಅತ್ಯಲ್ಪವಾದ ಉಗುರು ಕತ್ತರಿಸುವ ಕತ್ತರಿಯಲ್ಲಿಯ ಕಬ್ಬಿಣದ ಪರಿಚಯವಾದರೆ ಉಳಿದೆಲ್ಲ ಕಬ್ಬಿಣದ ವಸ್ತುಗಳಲ್ಲಿರುವಂತಹದೂ ಕೂಡ ತತ್ಸದೃಶವಾದ ಕಬ್ಬಿಣವೇ ಎಂದು ತಿಳಿಯುವಂತೆ ಪ್ರಧಾನವಾದುದರ ಜ್ಞಾನವಾದರೆ ಅಪ್ರಧಾನವಾದುದರ ಜ್ಞಾನವಾಗುವದು ಎಂದು ದೃಷ್ಟಾಂತಗಳಿಂದ ತಿಳಿಸಿ ಹೇಳಿದರು. ಆದ ಕಾರಣ ಎಲ್ಲಕ್ಕಿಂತಲೂ ಪ್ರಧಾನವಾದ ಬ್ರಹ್ಮನನ್ನು ತಿಳಿದುಕೊಂಡರೆ ಅಪ್ರಧಾನವಾದ ಎಲ್ಲವೂ ಕೂಡ ತಿಳಿದಂತೆಯೇ ಸರಿ, ನೀನು ಅಂಥ ಬ್ರಹ್ಮನನ್ನು ತಿಳಿದುಕೊಂಡಿರುವಿಯಾ? ಅದು ಸಂಪೂರ್ಣವಾಗಿ ತಿಳಿಯಲಶಕ್ಯ, ಕಾರಣ ಸುಮ್ಮನೇ ನೀನೇ ಸರ್ವಜ್ಞನೆಂದು ಅಭಿಮಾನ ಪಡಬೇಡ

Rarest Archiver

ಎಂದು ಮಗನಿಗೆ ತಿಳಿಸಿ ಹೇಳಿದರು. ಇಲ್ಲಿ ಒಂದು ಶಂಕೆ ಬರುವದು. ಬ್ರಹ್ಮನೇ ಎಲ್ಲಕ್ಕಿಂತ ಪ್ರಧಾನ ಹಾಗೂ ಉಳಿದುದೆಲ್ಲ ಅಪ್ರಧಾನವೇಕೆ ಎಂದು. ಅದಕ್ಕೆ ಉದ್ದಾಲಕರು ಸೃಷ್ಟಿಕ್ರಮವನ್ನು ವಿವರಿಸಿ ಎಲ್ಲಕ್ಕಿಂತ ಮೊದಲು ಈ ಬ್ರಹ್ಮವೇ ಇದ್ದಿತು. ಅದೇ ಈ ಜಗತ್ತಿಗೆ ಮೂಲ (ನಿಮಿತ್ತ ಕಾರಣ). ಮೂಲ ಹಾಗೂ ಮೂಲವುಳ್ಳದ್ದು ಇವುಗಳಲ್ಲಿ ಮೂಲವೇ ಪ್ರಧಾನವಷ್ಟೆ! ಇದನ್ನು ತಿಳಿಸುವ ಸಂದರ್ಭದಲ್ಲಿ ಬಂದ ವಾಕ್ಯವಿದು. ಶೂನ್ಯವಾದಿಗಳು ಆದಿಯಲ್ಲಿ ಅಸತ್ ಎಂದು ಖ್ಯಾತವಾದ ಶೂನ್ಯವೇ ಇದ್ದಿತು ಎಂದು ಹೇಳುವರು. ಈ ಶೂನ್ಯವಾದಿ ಮತವು ಪ್ರಾಪ್ತವಾದಾಗ ಅದನ್ನು ವೇದಪುರುಷನೇ ಉಪನಿಷತ್ತಿನ ಮುಂದಿನ ಶ್ಲೋಕದಲ್ಲಿ ಖಂಡಿಸುತ್ತಾನೆ. (**ಕುತಸ್ತು....** ಇತ್ಯಾದಿ ಭಾಗದಲ್ಲಿ). ಹೀಗೆ ವಾದಿಪ್ರಾಪ್ತವಾದ ಮತವನ್ನು ಖಂಡಿಸುವದು ವೇದದಲ್ಲಿ ಕಂಡು ಬಂದಿರುವದರಿಂದ ವಾದಿಪ್ರಾಪ್ತವಾದ ಐಕ್ಯವನ್ನು ವೇದವು ಖಂಡಿಸುವದೆಂದು ಹೇಳಿದ್ದು ಸಮರ್ಪಕವೇ ಆಗಿದೆ. ಮೊಟ್ಟ ಮೊದಲಿಗೆ ತಾನೇ ಸರ್ವಜ್ಞನೆಂದು ಹೇಳಿ ಪರಮಾತ್ಮನ ಸರ್ವಜ್ಞತ್ವವನ್ನು ತನ್ನಲ್ಲಿ ಆರೋಪಿಸಿಕೊಳ್ಳುವ ವಾದಿಗಳಿಂದ ಐಕ್ಯಜ್ಞಾನವು ಪ್ರಸಕ್ತವಾದಾಗಲಷ್ಟೆ ಮೃತ್ಪಿಂಡಾದಿ ದೃಷ್ಟಾಂತಗಳು ಪ್ರಸಕ್ತವಾದವು. ಹೀಗೆ **ವಾದಿಪ್ರಾಪ್ತಿ**ರೂಪ ಮೂರನೆಯ ಪ್ರಕಾರದಿಂದ **ಐಕ್ಯಪ್ರಸಕ್ತಿ**ಯನ್ನು ವಿವರಿಸಲು ಶ್ರೀಮದಾಚಾರ್ಯರು ಈ ವಾಕ್ಯವನ್ನು ಉದಾಹರಿಸಿದ್ದಾರೆ.

**ವಿಶೇಷ ವಿಷಯಗಳು :-** ಸೃಷ್ಟಿಕ್ರಮವನ್ನು ಹೇಳುವ ಈ ವಾಕ್ಯವನ್ನು ಶ್ರೀಮದಾಚಾರ್ಯರು ವಿ.ತ.ವಿ ದಲ್ಲಿ ಮುಂದೆ ( ಪುಟ ೨೮೬-೮೮ರಲ್ಲಿ) ಮತ್ತೆ ಉದಾಹರಿಸಿದ್ದಾರೆ. ಈ ವಾಕ್ಯವು ಸಮಸ್ತ ಪ್ರಪಂಚವೂ ಕೂಡ ಪರಮಾತ್ಮನ ಅಧೀನದಲ್ಲಿ ಇದೆ ಎಂದು ಹೇಳುವದರಲ್ಲಿ ತಾತ್ಪರ್ಯವನ್ನು ಹೊಂದಿದೆಯೇ ಹೊರತು ಅದ್ವೈತಿಗಳು ಹೇಳುವಂತೆ ಪ್ರಪಂಚವು ಮಿಥ್ಯೆ ಎಂದು ಹೇಳುವದರಲ್ಲಿ ತಾತ್ಪರ್ಯವನ್ನು ಹೊಂದಿಲ್ಲ ಎಂದು ಶ್ರೀಮದಾಚಾರ್ಯರು ಪ್ರತಿಪಾದಿಸಿದ್ದಾರೆ.

**ಅದ್ವೈತಿಗಳ ಅಭಿಪ್ರಾಯ ಹೀಗಿದೆ;** ಛಾಂದೋಗ್ಯೋಪನಿಷತ್ತಿನ ಆರನೆಯ ಅಧ್ಯಾಯದಲ್ಲಿ ಬರುವ ಈ ವಾಕ್ಯದ ಹಿಂದು ಮುಂದಿನ ಭಾಗಗಳನ್ನು ಪರಿಶೀಲಿಸುವದು ಈ ವಾಕ್ಯದ ತಾತ್ಪರ್ಯವನ್ನು ತಿಳಿಯಲು ಸಹಕಾರಿಯಾಗುವದು. ಆರನೆಯ ಅಧ್ಯಾಯದಲ್ಲಿ ಒಟ್ಟು ಮೂರು ಖಂಡಗಳಿದ್ದು ಇವುಗಳಲ್ಲಿ ಪ್ರತಿಯೊಂದು ಖಂಡದ ಅಭಿಪ್ರಾಯ ಹೀಗಿದೆ;

ಖಂಡ ೧ :- ಉದ್ದಾಲಕರು ಮಗನಾದ ಶ್ವೇತಕೇತುವಿಗೆ ಗುರುಕುಲಕ್ಕೆ ಹೋಗಿ ವೇದಾಧ್ಯಯನವನ್ನು ಮಾಡಲು ಪ್ರೇರೇಪಿಸಿದ್ದು ಹಾಗೂ ಹನ್ನೆರಡು ವರ್ಷ ವಯಸ್ಸಿನ

Rarest Archiver

ಶ್ವೇತಕೇತುವು ಮುಂದೆ ಹನ್ನೆರಡು ವರ್ಷ ಗುರುಕುಲವಾಸ ಮಾಡಿ ಬಹಳ ಅಹಂಕಾರಿಯಾಗಿ ತಿರುಗಿ ಬಂದದ್ದು, ಯಾವುದನ್ನು ತಿಳಿದರೆ ತಿಳಿಯದಿದ್ದುದೂ ಕೂಡ ತಿಳಿದಂತಾಗುವದೋ ಅಂಥದನ್ನು ತಿಳಿದಿರುವಿಯಾ ಎಂದು ಮಗನಿಗೆ ತಂದೆ ಕೇಳಿದ್ದು, ಮಗನು ಅದು ಹೇಗೆ, ಒಂದನ್ನು ತಿಳಿದರೆ ಇನ್ನೊಂದರ ಜ್ಞಾನವಾಗುವದೆಂಬುದು ಹೇಗೆ ಕೂಡುವದು ಎಂದು ಕೇಳಿದ್ದಕ್ಕೆ ತಂದೆಯು ವಿವಿಧ ದೃಷ್ಟಾಂತಗಳಿಂದ ಈ ವಿಷಯವನ್ನು ವಿವರಿಸಿದ್ದು, ಜಗತ್ತಿಗೆ ಬ್ರಹ್ಮನು ಉಪಾದಾನ ಕಾರಣನಾಗಿರುವದರಿಂದ ಉಪಾದಾನ ಕಾರಣವನ್ನು ತಿಳಿದರೆ ಕಾರ್ಯವಾದುದು ತಿಳಿಯುವಂತೆ ಉಪಾದಾನ ಕಾರಣವಾದ ಬ್ರಹ್ಮನನ್ನು ತಿಳಿದರೆ ಕಾರ್ಯವಾದ ಜಗತ್ತು ತಿಳಿಯುವದು ಎಂದು ಹೇಳಿದ್ದು, ಅದಕ್ಕೆ ಮೃತ್ಪಿಂಡ, ಲೋಹಮಣಿ, ಉಗುರು ಕತ್ತರಿಸುವ ಚಿಕ್ಕ ಕತ್ತರಿ ಎಂಬ ಮೂರು ದೃಷ್ಟಾಂತಗಳಿಂದ ಈ ವಿಷಯವನ್ನು ವಿವರಿಸಿದ್ದು. ಕೊನೆಗೆ ಶ್ವೇತಕೇತುವು ತಂದೆಯೆ, ಈ ವಿಷಯವನ್ನು ನಾನು ಗುರುಕುಲದಲ್ಲಿರುವಾಗ ಗುರುಗಳು ಇದನ್ನು ತಿಳಿಸಿಯೇ ಇಲ್ಲ, ಅವರಿಗೆ ಈ ವಿಷಯ ಗೊತ್ತಿಲ್ಲ, ಗೊತ್ತಿದ್ದರೆ ತಿಳಿಸದೇ ಇರುತ್ತಿರಲಿಲ್ಲ, ಕಾರಣ ನೀವೇ ಇದನ್ನು ತಿಳಿಸಿರಿ ಎಂದು ಕೇಳಿಕೊಂಡದ್ದು. ಅಂತು ಈ ಭಾಗದಲ್ಲಿ ಜಗತ್ತಿಗೆ ಬ್ರಹ್ಮನು ಉಪಾದಾನ ಕಾರಣ ಎಂದು ಹೇಳಲಾಗಿದೆ.

ಖಂಡ ೨ :- ಬ್ರಹ್ಮನು ಜಗತ್ತಿಗೆ ಉಪಾದಾನ ಕಾರಣನೆಂಬ ವಿಷಯವನ್ನು ವಿವರಿಸುವದರ ಸಲುವಾಗಿ ಜಗತ್ತು ಹೇಗೆ ಸೃಷ್ಟವಾಯಿತು ಎಂಬುದನ್ನು ಈ ಖಂಡದಲ್ಲಿ ಸೃಷ್ಟಿಕ್ರಮವನ್ನು ವಿವರಿಸಲಾಗಿದೆ. ಸೃಷ್ಟಿಗಿಂತ ಮೊದಲು ಸತ್ ಒಂದೇ ಇದ್ದಿತು. ಈ ಸತ್ತಿನಿಂದ ಜಗತ್ತು ಹುಟ್ಟಿತು, ಸತ್ ಆದ ಬ್ರಹ್ಮನೊಬ್ಬನೇ ಈ ಜಗತ್ತಿಗೆ ಕಾರಣನು. ಕೆಲವರು ಅಸತ್ತಿನಿಂದ ಸತ್ ಆದ ಜಗತ್ತು ಹುಟ್ಟಿತೆಂದು ಹೇಳುವರು. ಆದರೆ ಸತ್ತಿನಿಂದಲೇ ಅಸತ್ ಆದ ಜಗತ್ತು ಹುಟ್ಟಿತು. ಅದು ಹೇಗೆ ಎಂಬುದನ್ನು ಈ ಖಂಡದ ೨೨ ಭಾಗಗಳಿಂದ ವಿವರಿಸಲಾಗಿದೆ. ತ್ರಿವೃತ್ಕರಣಪೂರ್ವಕವಾಗಿ ನಾಮರೂಪದ ಸೃಷ್ಟಿ, ಅಂತು ಸತ್ ಆದ ಬ್ರಹ್ಮನು ಅಸತ್ ಆದ ಜಗತ್ತಿಗೆ ಉಪಾದಾನ ಕಾರಣನು ಎಂದು ಹೇಳಿದಾಗ ಜಗತ್ತು ಮಿಥ್ಯೆ ಎಂದು ಹೇಳಿದಂತಾಯಿತು. ಜಗತ್ತು ಮಿಥ್ಯೆ ಎಂದು ಹೇಳದಿದ್ದರೆ ಸೃಷ್ಟಿಕಥನವು ಅಸಂಗತವಾಗುತ್ತಿತ್ತು.

ಖಂಡ ೩ :- ಸ್ವಪ್ನ ಸೃಷ್ಟಿ ಹಾಗೂ ಒಂಬತ್ತು ದೃಷ್ಟಾಂತಗಳು, ಈ ಎಲ್ಲದರಿಂದ ಜಗತ್ತು ಮಿಥ್ಯೆ ಎಂದು ಹೇಳಿದಂತಾಯಿತು.

ಅಂತು, ಆರನೆಯ ಅಧ್ಯಾಯದ ಪೂರ್ವಾರ್ಧದಲ್ಲಿ ಜಗತ್ತು ಮಿಥ್ಯೆ ಎಂದು ಹೇಳಿ ಉತ್ತರಾರ್ಧದಲ್ಲಿ ಪೂರ್ವಾರ್ಧಕ್ಕೆ ವಿರುದ್ಧವಾಗಿ ಒಂಬತ್ತು ದೃಷ್ಟಾಂತಗಳು ಭೇದವನ್ನು ಹೇಳುವದರಲ್ಲಿ ತಾತ್ಪರ್ಯವನ್ನು ಹೊಂದಿವೆ ಎಂದು ಹೇಳುವದು

Rarest Archiver

ಸರಿಯಾಗುವದಿಲ್ಲ. ಆದ ಕಾರಣ, ಜಗತ್ತಿಗೆ ಉಪಾದಾನ ಕಾರಣನಾದ ಬ್ರಹ್ಮನಿಂದ ಕಾರ್ಯವಾದ ಜಗತ್ತು ಭಿನ್ನವಾಗಿಲ್ಲ ಎಂದು ಹೇಳುವದೇ ಯುಕ್ತವಾಗುವದು. ಇದಲ್ಲದೆ ಇದೇ ಉಪನಿಷತ್ತಿನ ೫ನೆಯ (ಹಿಂದಿನ) ಅಧ್ಯಾಯದ ೨೪ನೆಯ ಖಂಡದಲ್ಲಿಯ ೭ನೆಯ ಭಾಗದಲ್ಲಿ **'ತಸ್ಮಾದ್ ಉ ಹ ಏವಂವಿದ್ ಯದ್ಯಪಿ ಚಾಂಡಾಲಾಯ ಉಚ್ಛಿಷ್ಟಂ ಪ್ರಯಚ್ಛೇತ್ ಆತ್ಮನಿ ಹ ಏವ ಅಸ್ಯ ತತ್ ವೈಶ್ವಾನರೇ ಹುತಂ ಸ್ಯಾತ್ ಇತಿ'** ಎಂದು ಹೇಳಿದ್ದಾರೆ. ಇದರಿಂದ ವೈಶ್ವಾನರ ಜ್ಞಾನ ಮಾಡಿಕೊಂಡವನು ಒಂದು ವೇಳೆ ಅಪಾತ್ರನಲ್ಲಿ ದಾನ ಮಾಡಿದರೂ ಕೂಡ ಆ ದಾನವು ಆತ್ಮನಲ್ಲಿ ದಾನ ಮಾಡಿದ ಫಲವನ್ನೇ ಕೊಡುವದು, ಅಂದರೆ, ವೈಶ್ವಾನರ ಜ್ಞಾನವು ಸರ್ವಪಾಪಕ್ಷಯ-ಕಾರಕವಾಗಿದೆ ಎಂಬುದನ್ನು ಸ್ಪಷ್ಟಪಡಿಸಿ ಪಾತ್ರದಲ್ಲಿ ಮಾಡಿದ ದಾನ ಅಪಾತ್ರರಲ್ಲಿ ಮಾಡಿದ ದಾನ ಇವುಗಳಿಗೆ ಅಭೇದವನ್ನು ಸೂಚಿಸಿದ್ದಾರೆ. ಹೀಗಿರುವದರಿಂದ ಮುಂದೆ ಜೀವ ಬ್ರಹ್ಮರಲ್ಲಿಯೂ ಕೂಡ ಅಭೇದ-ಐಕ್ಯವೇ- ಹೇಳಲ್ಪಟ್ಟಿದೆ ಎಂದು ಹೇಳುವದು ಸಮರ್ಪಕವಾಗುವದು. **ಒಟ್ಟಿಗೆ, ಐಕ್ಯದಲ್ಲಿಯೇ ಶ್ರುತಿಯು ತಾತ್ಪರ್ಯವನ್ನು ಹೊಂದಿದೆ.**

**ಇದು ಅದ್ವೈತಿಗಳ ಪ್ರಕಾರ ಛಾಂದೋಗ್ಯೋಪನಿಷತ್ತಿನ ಆರನೆಯ ಅಧ್ಯಾಯದ ಮೂರೂ ಖಂಡಗಳಲ್ಲಿ ಹೇಳಲ್ಪಟ್ಟ ವಿಷಯದ ಸಂಗ್ರಹವು.**

**ಇದನ್ನು ಶ್ರೀಮದಾಚಾರ್ಯರು ಸೂಕ್ಷ್ಮವಾಗಿ ವಿಮರ್ಶಿಸಿ ಉಪನಿಷತ್ತಿನ ಯಾವ ಭಾಗದಲ್ಲಿಯೂ ಅಭೇದಪರವಾದ ಮಾತು ಇಲ್ಲವೆಂದು ವಿವರಿಸಿದ್ದಾರೆ.** ಈ ವಿಮರ್ಶೆ ಹಾಗೂ ಸಿದ್ಧಾಂತಗಳು ಹೀಗಿವೆ. ಈ ವಿಷಯವನ್ನು ಶ್ರೀ ಟೀಕಾಕೃತ್ಪಾದರು ಶ್ರೀಮದ್ವಿಷ್ಣುತತ್ವವಿನಿರ್ಣಯದ ಟೀಕೆಯಲ್ಲಿ (**'ತದ್ವಶತ್ವಜ್ಞಾಪನಾರ್ಥಂ ಚ ಸದೇವ ಸೋಮ್ಯ ಇದಮಗ್ರ ಆಸೀತ್ ಇತ್ಯಾದಿಸೃಷ್ಟಿಕಥನಮ್...'** ಇತ್ಯಾದಿ ಶ್ರೀಮದಾಚಾರ್ಯರ ವಾಕ್ಯದ ಟೀಕೆಯ ಸಂದರ್ಭದಲ್ಲಿ **'ಉಚ್ಯತೇ'** ಎಂಬ ಪ್ರತೀಕದಿಂದ ಪ್ರಾರಂಭವಾದ ಟೀಕೆಯಿಂದ ವಿವರಿಸಿದ್ದಾರೆ. (***ಶ್ರೀಮದ್ವಿಷ್ಣು-ತತ್ವವಿನಿರ್ಣಯ ಅಧ್ಯಯನಮಾಲಾ*** ಎಂಬ ನಮ್ಮ ಪ್ರಕಾಶನಮಾಲೆಯ **ಪುಷ್ಪ ೧**ರ ೨೮೬-೮೮ ನೆಯ ಪುಟಗಳನ್ನು ನೋಡಿರಿ ).

ಉಪನಿಷತ್ತಿನ ಈ ಅಧ್ಯಾಯದ ಉತ್ತರಾರ್ಧದಲ್ಲಿ ಹೇಳಿದ ವಿಷಯ ಹಾಗೂ ಪೂರ್ವಾರ್ಧದಲ್ಲಿ ಹೇಳಿದ ವಿಷಯಗಳಿಗೆ ಅಸಾಂಗತ್ಯವು ಯಾವಾಗ ಬರಬಹು-ದಿತ್ತೆಂಬುದನ್ನು ತಿಳಿಯುವದವಶ್ಯವಿದೆ. ಅದ್ವೈತಿಗಳು ಹೇಳುವ ಪ್ರಕಾರ ಪೂರ್ವಾರ್ಧದಲ್ಲಿ ಜಗತ್ತಿಗೆ ಮಿಥ್ಯಾತ್ವವನ್ನು ಹೇಳುವದು ಸಿದ್ಧವಾಗಿದ್ದರೆ ಉತ್ತರಾರ್ಧದಲ್ಲಿ ಒಂಬತ್ತು ದೃಷ್ಟಾಂತಗಳಿಂದ ಭೇದವನ್ನು ಹೇಳುವದು

Rarest Archiver

ವಿರುದ್ಧವಾಗುತ್ತಿತ್ತು. ಆದರೆ, ಪೂರ್ವಾರ್ಧದಲ್ಲಿ ಜಗತ್ತಿಗೆ ಮಿಥ್ಯಾತ್ವವನ್ನು ಹೇಳಿದೆ ಎನ್ನುವದೇ ಸಿದ್ಧವಾಗಿಲ್ಲ. ಮಿಥ್ಯಾತ್ವವೇ ಸಿದ್ಧವಾಗಿಲ್ಲ. ಪೂರ್ವಾರ್ಧದಲ್ಲಿ ಹೇಳಿದ ಪ್ರಕಾರ ಬ್ರಹ್ಮನು ಜಗತ್ತಿಗೆ ಉಪಾದಾನ ಕಾರಣವು, ಹಾಗೂ ಬ್ರಹ್ಮವ್ಯತಿರಿಕ್ತವಾದ ಸರ್ವವೂ ಮಿಥ್ಯೆಯಾಗಿದೆ ಎಂದು ಮುಂತಾಗಿ ಹೇಳುವ ಸೃಷ್ಟಿಕಥನದಿಂದಲೇ ಇದು ಸಿದ್ಧವಾಗುವದಲ್ಲ ಎಂದರೆ ಹೀಗೆ ಹೇಳುವದು ಸರಿಯಲ್ಲ, ಏಕೆಂದರೆ ಬ್ರಹ್ಮನು ಜಗತ್ತಿಗೆ ಉಪಾದಾನಕಾರಣವೆಂದು ಗ್ರಹಿಸುವದೇ ಸರಿಯಲ್ಲ. ಸೃಷ್ಟಿ ಕಥನದ ಪ್ರಾರಂಭದಲ್ಲಿ **ತತ್ ಐಕ್ಷತ ತತ್ ತೇಜಃ ಅಸೃಜತ..** ಇತ್ಯಾದಿ ಹೇಳಿದೆ. ಅಂದರೆ ಬ್ರಹ್ಮನು ವಿಚಾರಿಸಿದನು, ಅಂದರೆ ತಾನು ಸೃಷ್ಟಿ ಮಾಡಬೇಕೆಂದು ಮನಸ್ಸು ಮಾಡಿದನು, ಆ ಮೇಲೆ ಸೃಷ್ಟಿ ಮಾಡಲು ಪ್ರಾರಂಭಿಸಿದನು ಎಂದು ಇದರ ಅಭಿಪ್ರಾಯ. ಹೀಗೆ ಹೇಳಿರುವದರಿಂದ ಬ್ರಹ್ಮನು ಇಚ್ಛಾಪೂರ್ವಕಸೃಷ್ಟಿ ಮಾಡಿದನೆಂದು ಹೇಳಿದ ಹಾಗೆ ಆಯಿತು. ಬ್ರಹ್ಮನು ಉಪಾದಾನ ಕಾರಣನಾಗಿದ್ದರೆ ಈ ರೀತಿಯ ಇಚ್ಛಾಪೂರ್ವಕ ಸೃಷ್ಟಿ ಕೂಡುತ್ತಿರಲಿಲ್ಲ. ಘಟಕ್ಕೆ ಉಪಾದಾನ ಕಾರಣವಾದ ಮಣ್ಣಿಗೆ ಈ ಇಚ್ಛಾ-ಪೂರ್ವಕಸೃಷ್ಟಿ ಕೂಡುವದೇ ? ಸರ್ವಥಾ ಇಲ್ಲ. ಇದು ಕೇವಲ ಮಣ್ಣಿನಿಂದ ಕೊಡ ಮಾಡುವ ಕುಂಬಾರನಲ್ಲಿ ಮಾತ್ರ ಕೂಡಬಹುದು. ಕುಂಬಾರನು ನಿಮಿತ್ತ ಕಾರಣನೇ ಹೊರತು ಉಪಾದಾನ ಕಾರಣನಾಗಲಾರ. **ಸೃಷ್ಟಿಕಥನದ ಮುಖ್ಯ ಉದ್ದೇಶವೆಂದರೆ ಬ್ರಹ್ಮನು ಈ ಜಗತ್ತಿಗೆ ನಿಮಿತ್ತ ಕಾರಣನ್ನಾಗಿರುವದಲ್ಲದೆ ಎಲ್ಲ ಪ್ರಪಂಚವನ್ನೂ ತನ್ನ ವಶದಲ್ಲಿಯೇ ಇಟ್ಟುಕೊಂಡಿರುವನು ಎಂದು ಹೇಳುವದು.** ಕಾರ್ಯವಾದ ಕೊಡವು ನಿಮಿತ್ತಕಾರಣನಾದ ಕುಂಬಾರನ ವಶದಲ್ಲಿಯೇ ಇರುವದೆಂಬುದು ಸರ್ವವಿದಿತ. ಹೀಗೆಯೇ ಕಾರ್ಯವಾದ ಸರ್ವ ಪ್ರಪಂಚವೂ ಕೂಡ ಅದಕ್ಕೆ ನಿಮಿತ್ತ ಕಾರಣನಾದ ಬ್ರಹ್ಮನ ವಶದಲ್ಲಿಯೇ ಇರುವದೆಂಬುದನ್ನು ಹೇಳುವದಕ್ಕಾಗಿಯೇ ಆ ರೀತಿ ಸೃಷ್ಟಿಕಥನವು. ಹೀಗೆ ಹೇಳಿದಾಗ ಯಾವ ಪ್ರಕಾರದ ಅಸಾಂಗತ್ಯವಿಲ್ಲ.

**ಅಂತು ಈ ವಾಕ್ಯದ ಒಟ್ಟರ್ಥ ಶ್ರುತಿಷಟ್ಪದಿಯಲ್ಲಿ ಹೀಗಿದೆ;**

*ಜಗದ ಪೂರ್ವಪ್ರಳಯದೊಳು ತಾ-*
*ನಘವಿದೂರನು ಗುಣಗಳೋಘನು*
*ವಿಗತಭೇದನು ಸರುವಕುತ್ತಮ ಸದಿತಿವಿಖ್ಯಾತ,*
*ಜಗದ ಕಾರಣನೊಬ್ಬನೇ ಇರೆ,*
*ಸುಗತರೊರಲುವರಸತು ಶೂನ್ಯವು*
*ಜಗದ ಕಾರಣವೆಂದು ತಿಳಿಯದೆ ಪರಮ ತತ್ವವನು.* ॥

**೩೭. ಇಷ್ಟಾಪೂರ್ತಂ ಮನ್ಯಮಾನಾಃ ವರಿಷ್ಠಂ ನ ಅನ್ಯತ್ ಶ್ರೇಯಃ ವೇದಯಂತೇ ಪ್ರಮೂಢಾಃ। ನಾಕಸ್ಯ ಪೃಷ್ಠೇ ತೇ ಸುಕೃತೇ ಅನುಭೂತ್ವಾ**

Rarest Archiver

**ಇಮಂ ಲೋಕಂ ಹೀನತರಂ ವಾ ವಿಶಂತಿ ॥**

**– (*ಆಥರ್ವಣೋಪನಿಷತ್, ಖಂಡ ೨, ಶ್ಲೋಕ ೯*)**

ಆಥರ್ವಣೋಪನಿಷತ್ತಿನ ಈ ವಾಕ್ಯವನ್ನು ಶ್ರೀಮದಾಚಾರ್ಯರು ಶ್ರುತಿ-ತಾತ್ಪರ್ಯವನ್ನು ತಿಳಿಯದೆಯೆ ಪ್ರತಿಪಾದಿಸುವ ಮತವನ್ನು ನಿರಾಕರಣ ಮಾಡುವದರಲ್ಲಿ ವೇದವು ಪ್ರವೃತ್ತವಾಗುವದೆಂದು ಹೇಳುವ ಸಂದರ್ಭದಲ್ಲಿ *ಉದಾಹರಿಸಿದ್ದಾರೆ.* ಐಕ್ಯವಾದವು ಶ್ರುತಿತಾತ್ಪರ್ಯವನ್ನು ತಿಳಿಯದೆಯೆ ಮಾಡಿದ ವಾದವಾಗಿದೆ, ಇದನ್ನು ಖಂಡನ ಮಾಡುವದು ಪ್ರಸಕ್ತವಾಗಿದೆ ಎಂದು ಐಕ್ಯಕ್ಕೆ ***ಶ್ರುತಿತಾತ್ಪರ್ಯಾಪರಿಜ್ಞಾನ-ಪ್ರಾಪ್ತಿ*** ಎಂಬ ನಾಲ್ಕನೆಯ ಪ್ರಾಪ್ತಿಪ್ರಕಾರವನ್ನು ವಿವರಿಸಿದ್ದಾರೆ. ಈ ಸಂದರ್ಭದಲ್ಲಿ ಮೇಲಿನ ವಾಕ್ಯವನ್ನು ಉದಾಹರಿಸಿ ಈ ಸಂದರ್ಭದಲ್ಲಿ ಹೇಗೆ ಶ್ರುತಿತಾತ್ಪರ್ಯವನ್ನು ತಿಳಿಯದೆಯೆ ಮಾಡಿದ ವಾದವನ್ನು ಖಂಡಿಸಲಾಗುವದೋ ಅದೇ ರೀತಿ **ಅಹಂ ಬ್ರಹ್ಮಾಸ್ಮಿ** ಇತ್ಯಾದಿ ಶ್ರುತಿವಾಕ್ಯಗಳ ತಾತ್ಪರ್ಯವನ್ನು ತಿಳಿಯದೆಯೆ ಐಕ್ಯಪರವಾಗಿ ಅರ್ಥ ಹೇಳಿದಾಗ ಪ್ರಾಪ್ತವಾದ ಐಕ್ಯವನ್ನು ಪ್ರತಿಷೇಧಿಸುವದು ಯುಕ್ತವೇ ಆಗಿದೆ ಎಂಬುದು ಆಚಾರ್ಯರ ಅಭಿಪ್ರಾಯ.

**ಅನ್ವಯ ಹಾಗೂ ಅರ್ಥ :-ಇಷ್ಟಾಪೂರ್ತಂ ವರಿಷ್ಠಂ ಮನ್ಯಮಾನಾಃ ಪ್ರಮೂಢಾಃ ಅನ್ಯತ್ ಶ್ರೇಯಃ ನ ವೇದಯಂತೆ । ಪ್ರಮೂಢಾಃ ತೇ ನಾಕಸ್ಯ ಪೃಷ್ಠೇ ಸುಕೃತೇ ಅನುಭೂತ್ವಾ ಇಮಂ ಲೋಕಂ ಹೀನತರಂ ವಾ ಲೋಕಂ ವಿಶಂತಿ ॥**

**ಅರ್ಥ:-** ಇಷ್ಟಮ್ ಎಂದರೆ ಯಜ್ಞ, ಪೂರ್ತಂ ಎಂದರೆ ಅನ್ನದಾನಾದಿ. ವ್ಯಾಕರಣ ನಿಯಮಕ್ಕನುಗುಣವಾಗಿ ಇಷ್ಟಾಪೂರ್ತಮ್ ಎಂದು ದ್ವಂದ್ವಸಮಾಸದಲ್ಲಿ ದೀರ್ಘ-ವಾಗುತ್ತದೆ. ವರಿಷ್ಠಮ್ ಎಂದರೆ ಪರಮ ಶ್ರೇಯಃಸಾಧನ *ಶ್ರೀ ರಾಯರ ಖಂಡಾರ್ಥ*ವನ್ನು ಅನುಸರಿಸಿ ಈ ಶ್ರುತಿವಾಕ್ಯದ ಅರ್ಥ ಹೀಗಿದೆ; ಯಜ್ಞ ಯಾಗಾದಿಗಳನ್ನು ಮಾಡುವದು ಅಥವಾ ಅನ್ನದಾನಾದಿಗಳನ್ನು ಮಾಡುವದೇ ಪರಮಶ್ರೇಯಸ್ಸಾಧನವೆಂದು ತಿಳಿಯುವ-ವರಿಗೆ ಪರಮಾತ್ಮನೇ ಪರಮ ಪ್ರಶಸ್ತತತ್ವವೆಂದು ಮನವರಿಕೆಯಾಗಲಾರದು. ಪರ-ಮಾತ್ಮನ ಬಗ್ಗೆ ಸ್ವಲ್ಪ ಮಾತ್ರ ಗೌರವದ ಭಾವನೆಯನ್ನು ಇಟ್ಟುಕೊಂಡು ಯಜ್ಞ-ಯಾಗಾದಿಗಳನ್ನು ಮಾಡುವವರು ಸ್ವರ್ಗ ಲೋಕದಲ್ಲಿ ತಮ್ಮ ಪುಣ್ಯಕರ್ಮಗಳ ಫಲವಾದ ಸುಖವನ್ನು ಅನುಭವಿಸಿ ಈ ಮನುಷ್ಯ ಲೋಕಕ್ಕೆ ಮತ್ತೆ ಬರುವವರು, ಅಂದರೆ ಮನುಷ್ಯರಾಗಿ ಮತ್ತೆ ಹುಟ್ಟುವರು. ಪರಮಾತ್ಮನ ಸರ್ವೋತ್ತಮತ್ವಜ್ಞಾನ ವಿಲ್ಲದೆಯೆ ಅಥವಾ ಅವನಿಗೆ ಸಮರಾದ ದೇವತೆಗಳೂ ಇರುವರೆಂದು ತಿಳಿದು ಅವನ ಸರ್ವೋತ್ತಮತ್ವದ ಬಗೆಗೆ ಸಂದೇಹಬಡುವ ಜನರು ಮಾತ್ರ ಅಂಧಂತಮಸ್ಸಿಗೆ ಹೋಗುವರು

Rarest Archiver

**ವಿಶೇಷ ವಿಷಯಗಳು :–** ಅನಂತವೇದರಾಶಿಯನ್ನು ವಿಭಾಗ ಮಾಡಿ ವೇದಾರ್ಥ–ನಿರ್ಣಯಮಾಡಿ ಸಜ್ಜನರನ್ನು ಉದ್ಧಾರ ಮಾಡಲೆಂದೇ ಅವತರಿಸಿದ ಶ್ರೀ ವೇದವ್ಯಾಸರು ಬ್ರಹ್ಮಸೂತ್ರಗಳಲ್ಲಿ ತಿಳಿಸಿಕೊಟ್ಟ ನಿಯಮಗಳನ್ನು ಪಾಲಿಸದೆ ಮನಸ್ಸಿಗೆ ಬಂದಂತೆ ಶ್ರುತಿವಾಕ್ಯಗಳ ಅರ್ಥ ಮಾಡಿದರೆ ಶ್ರುತಿಗಳ ಪರಮ ತಾತ್ಪರ್ಯ ತಿಳಿಯಲಾರದು. ಕೆಲವು ಶ್ರುತಿವಾಕ್ಯಗಳ ವಿಷಯಕ್ಕಂತೂ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಲೇ ಬೇಕಾಗುವದು, ಏಕೆಂದರೆ ಈ ವಾಕ್ಯಗಳು ಆಪಾತತಃ ವಿರುದ್ಧಾರ್ಥವನ್ನೇ ಕೊಡುವ ರೀತಿಯಲ್ಲಿ ಇರುವವು. ಮುಂದಿನ ಪುಟದಲ್ಲಿ ಕೊಟ್ಟದರ್ಶಿಕೆಯಿಂದ ***(ಟೇಬಲ್ ದಿಂದ)*** ಈ ವಿಷಯವನ್ನು ಸ್ಪಷ್ಟಪಡಿಸಲಾಗಿದೆ.

ಪ್ರಸ್ತುತ ***ಇಷ್ಟಾಪೂರ್ತಮ್......*** *ಇತ್ಯಾದಿ ಶ್ರುತಿಗೆ* ಹೀಗೆ ಸಂಗತಿ ಇದೆ.

ಯೋಗ್ಯರಾದ ಜೀವರಿಗೆ ಅವರ ಬಂಧನಿವೃತ್ತಿ ಮಾಡಿ ಅವರಿಗೆ ನಿತ್ಯಸುಖವು ದೊರೆಯುವದಕ್ಕೆ ಸಾಧನೀಭೂತವಾದ ಜ್ಞಾನವನ್ನು ಪರಮ ಕರುಣೆಯಿಂದ ವೇದಪುರುಷನು ಉಪದೇಶಿಸುತ್ತಾನೆ. ಈ ಉಪದೇಶವನ್ನು ಸ್ಪಷ್ಟವಾಗಿ ತಿಳಿಸುವದಕ್ಕೋಸ್ಕರ ಅನೇಕ ಕಥಾನಕಗಳನ್ನು ಹೇಳುವ ಕ್ರಮವನ್ನು ಎಲ್ಲ ಉಪನಿಷತ್ತು–ಗಳಲ್ಲಿಯೂ ಅಳವಡಿಸಿಕೊಂಡಿದ್ದಾರೆ. ಆಥರ್ವಣೋಪನಿಷತ್ತಿನಲ್ಲಿ ಈ ಪ್ರಕಾರದ ಕಥಾನಕವೊಂದಿದೆ. ಆಥರ್ವಣೋಪನಿಷತ್ತಿನಲ್ಲಿ ಬ್ರಹ್ಮವಿದ್ಯೆಯ ಆಗತಿಕ್ರಮವನ್ನು ಮೊದಲು ವಿವರಿಸಿದ್ದಾರೆ. ಮೊಟ್ಟ ಮೊದಲು ಸರ್ವೋತ್ತಮನಾದ ವಿಷ್ಣುವಿನಿಂದ ಬ್ರಹ್ಮನು ಹುಟ್ಟಿದನು. ಅವನು ಸರ್ವಶ್ರೇಷ್ಠವಾದ ಬ್ರಹ್ಮವಿದ್ಯೆಯನ್ನು ತನ್ನ ಜ್ಯೇಷ್ಠಪುತ್ರನಾದ ಅಥರ್ವನಿಗೆ ಉಪದೇಶಿಸಿದನು. ಈ ಅಥರ್ವನು ಅಂಗಿರ ಎಂಬ ಮುನಿಗೆ ಆ ಬ್ರಹ್ಮವಿದ್ಯೆಯನ್ನು ಹೇಳಿದನು. ಅಂಗಿರನಾಮಕ ಮುನಿಯು ಅದನ್ನು ಭರದ್ವಾಜರ ಮಗ ಸತ್ಯವಹ ಎಂಬುವನಿಗೆ ಉಪದೇಶಿಸಿದನು. ಸತ್ಯವಹನು ಅಂಗಿರಸ ಎಂಬುವನಿಗೆ ಆ ಬ್ರಹ್ಮವಿದ್ಯೆಯನ್ನು ಹೇಳಿಕೊಟ್ಟನು. ಅಂಗಿರಸನು ಶುನಕನ ಮಗನಿಗೆ ಇದನ್ನು ಹೇಳಿಕೊಟ್ಟನು. ಶೌನಕನು ಅಂಗಿರಸ್‌ನ ಕಡೆಯಿಂದ ಈ ವಿದ್ಯೆಯನ್ನು ಹೇಗೆ ಪಡೆದನು ಎಂಬುದನ್ನು ಸ್ವಲ್ಪ ವಿಸ್ತಾರವಾಗಿ ಹೀಗೆ ತಿಳಿಸಿದ್ದಾರೆ. ಶುನಕಪುತ್ರನು ಪ್ರತಿವರ್ಷವೂ ಯಜ್ಞ ಮಾಡುವದರಿಂದ ಮಹಾಶಾಲನೆಂದು ಖ್ಯಾತನಾಗಿದ್ದನು. ಒಮ್ಮೆ ಈ ಶೌನಕನು ವಿಧ್ಯುಕ್ತವಾಗಿ ಈ ಅಂಗಿರಸ್‌ನ ಬಳಿ ಬಂದು ಕೇಳಿದನು– ಪೂಜ್ಯರೇ, ಯಾವುದನ್ನು ತಿಳಿದುಕೊಂಡರೆ ನನಗೆ ತಿಳಿದಿರುವ ಕರ್ಮ ದೇವತಾದಿ ಎಲ್ಲವೂ ಸಫಲವಾಗುವದೋ ಅಂದರೆ ಮೋಕ್ಷಕ್ಕೆ ಸಾಧನವಾಗಿ ಮೋಕ್ಷರೂಪಫಲಪ್ರದ–ವಾಗುವದೋ ಅಂಥ ಜ್ಞಾನವನ್ನು ದಯಪಾಲಿಸಬೇಕು ಎಂದು. ಆಗ ಅಂಗಿರಸನು ಅವನಿಗೆ ಸೂಕ್ಷ್ಮ ತತ್ವಗಳನ್ನು ಹೇಳಿದನು. ಆಚಾರ್ಯರು ಉದಾಹರಿಸಿದ ಮೇಲಿನ ವಾಕ್ಯವು ಈ ಭಾಗದಲ್ಲಿ ಬಂದಿದೆ. ಯಜ್ಞಯಾಗಾದಿಗಳನ್ನು ಮಾಡುವದರಲ್ಲಿ ತೊಡಗಿದ

Rarest Archiver

| ಶ್ರುತಿವಾಕ್ಯ | ನಿಯಮವನ್ನುಅನುಸರಿಸದೆ ಮಾಡಿದ ಅರ್ಥ | ನಿಯಮವನ್ನು ಅನುಸರಿಸಿದಾಗ ಬರುವ ಅರ್ಥ |
|---|---|---|
| ೧. ಏಕಮೇವಾದ್ವಿತೀಯಂ ಛಾಂ. ೬.೨.೧.೨ | ಬ್ರಹ್ಮನೊಬ್ಬನೇ ಸತ್ಯ, ಜಗತ್ತು ಸುಳ್ಳು. | ಬ್ರಹ್ಮ ಪ್ರಧಾನ ಜಗತ್ತು ಅಪ್ರಧಾನ. |
| ೨. ನೇಹನಾನಾಸ್ತಿಕಿಂಚನ. ಕಠೋಪ . ೪.೧೧ | ಜಗತ್ತಿನಲ್ಲಿ ಭೇದವೇ ಇಲ್ಲ | ಬ್ರಹ್ಮನು ಸ್ವಗತಭೇದವಿವರ್ಜಿತ |
| ೩. ಯತ್ರತ್ವಸ್ಯಸರ್ವಮಾ-ತ್ಮೈವಾಭೂತ್. | ಜೀವಬ್ರಹ್ಮೈಕ್ಯ. | ಮುಕ್ತನ ಬ್ರಹ್ಮೀಭಾವವನ್ನು ಆಕ್ಷೇಪಿಸಿ ಮುಕ್ತಿಯಲ್ಲಿಯೂ ಭೇದವನ್ನು ಹೇಳುವ ಶ್ರುತಿ. |
| ೪. ನ ತು ತದ್ದ್ವಿತೀಯ- ಮಸ್ತಿ. | ಜಗನ್ಮಿಥ್ಯಾತ್ವಪರಶ್ರುತಿ | ಭಗವದ್ರೂಪಗಳಲ್ಲಿ ಅಭೇದಪ್ರತಿಪಾದಕ ಶ್ರುತಿ |
| ೫. ವಾಚಾರಂಭಣಂ ವಿಕಾರೋ ನಾಮಧೇಯಮ್ | ಜಗನ್ಮಿಥ್ಯಾತ್ವ, ಬ್ರಹ್ಮನು ಜಗತ್ತಿಗೆ ಉಪಾದಾನಕಾರಣ | ಸಂಸ್ಕೃತ ಪದಗಳು ನಿತ್ಯ ಉಳಿದವು ಅನಿತ್ಯ ನಿತ್ಯನಾದ ಬ್ರಹ್ಮ ಪ್ರಧಾನ, ಇತರ ಅಪ್ರಧಾನ |
| ೬. ಇದಂ ಸರ್ವಂ ಯದಯಂ ಆತ್ಮಾ. | ಬ್ರಹ್ಮವ್ಯತಿರಿಕ್ತವು ಅಸತ್ | ಬ್ರಹ್ಮನಿಂದ ಸರ್ವವೂ ವ್ಯಾಪ್ತ, ಸರ್ವಕ್ಕೆ ಬ್ರಹ್ಮ ನಿಮಿತ್ತ ಕಾರಣ, ಆಧಾರ. |
| ೭ ಯಸ್ಮಾತ್ಪರಂ ನಾಪರಮಸ್ತಿ,- ಶ್ವೇತಾ. ೩.೯ | ಬ್ರಹ್ಮೇತರ ಸರ್ವವೂ ಮಿಥ್ಯಾ | ಬ್ರಹ್ಮ ಸರ್ವೋತ್ತಮ ತತ್ತ್ವವು. ಉಳಿದುದೆಲ್ಲವೂ ಅತಿ ಅಲ್ಪವಾದುದು. |
| ೮. ಮಾಯಾಮಾತ್ರಮಿದಮ್ -ಮಾಂಡೂ. ೧.೧೮.೧೮ | ಜಗತ್ತು ಮಿಥ್ಯೆ. ಬ್ರಹ್ಮ ಮಾತ್ರ ಸತ್ಯ. | ಭಾಸ್ಕರಾದಿಮತಪ್ರಾಪ್ತವಾದ ಸತ್ಯೋಪಾದಿಕೃತ ಭೇದಮತದ ಹಾಗೂ ಮಾಯಾವಾದಪ್ರಾಪ್ತ ವ್ಯಾವಹಾರಿಕ ಭೇದಮತದ ನಿರಾಸಪೂರ್ವಕ ಅನಾದಿ ಸತ್ಯಭೇದ ಪ್ರತಿಪಾದನೆ. |
| ೯. ಸತ್ಯಂ ಜ್ಞಾನಂ ಅನಂತಮ್. | ಬ್ರಹ್ಮ ಅನಂತವಾದ್ದರಿಂದ ಜಗತ್ತು ಮಿಥ್ಯಾ | ಬ್ರಹ್ಮವು ದೇಶಕಾಲಗುಣಪರಿಚ್ಛೇದಶೂನ್ಯವು. |
| ೧೦. ಇಂದ್ರೋಮಾಯಾಭಿಃ ಪುರುರೂಪ ಈಯತೆ. -ಬೃಹದಾರಣ್ಯಕ | ಜಗನ್ಮಿಥ್ಯಾತ್ವವನ್ನು ಹೇಳುವ ಶ್ರುತಿ. | ಪರಮೈಶ್ವರ್ಯವಿಶಿಷ್ಟನಾದ ಬ್ರಹ್ಮನು ತನ್ನ ವಿಚಿತ್ರ ಶಕ್ತಿಗಳಿಂದ ಮತ್ಸ್ಯಾದ್ಯನೇಕರೂಪಗಳನ್ನು ಧಾರಣ ಮಾಡಿದ ಮಹಿಮೆ ಹೇಳುವ ಶ್ರುತಿ. |
| ೧೧. ಅತೋ ಅನ್ಯದಾರ್ತಮ್- ಕೌಮುದ್ಯುಕ್ತ ಶ್ರುತಿ. | ಬ್ರಹ್ಮಾತಿರಿಕ್ತವಾದುದು ನಾಶಶೀಲವಾದುದು, ಕಾರಣ ಮಿಥ್ಯಾ ಎಂದು ಹೇಳುವ ಶ್ರುತಿ. | ಬ್ರಹ್ಮಾತಿರಿಕ್ತವಾದ ಜೀವನು ದುಃಖಿಯೆಂದು ಹೇಳಿ ಜೀವೇಶಭೇದವನ್ನು ಹೇಳುವ ಶ್ರುತಿ. |
| ೧೨. ಸ ಆತ್ಮಾತತ್ತ್ವಮಸಿ. ಛಾಂದೋಗ್ಯ. | ನೀನೇ ಆ ಪರಮಾತ್ಮ ಎಂದು ಜೀವಬ್ರಹ್ಮೈಕ್ಯ ಹೇಳುವ ಶ್ರುತಿ. | ನೀನು ಆ ಪರಮಾತ್ಮನಲ್ಲ ಎಂದು ಜೀವ ಬ್ರಹ್ಮ-ಭೇದವನ್ನು ಹೇಳುವ ಶ್ರುತಿ |
| ೧೩. ಅಹಂ ಬ್ರಹ್ಮಾಸ್ಮಿ- -ಛಾಂದೋಗ್ಯ, ಈಶಾವಾಸ್ಯ, ಐತರೇಯ, ಬೃಹದಾರಣ್ಯಕ. | ಜೀವಬ್ರಹ್ಮೈಕ್ಯ ಪ್ರತಿಪಾದಕ ಶ್ರುತಿ. | ಅಹಂ ಎಂದು ಅಂತರ್ಯಾಮಿಪರಪದವಿರುವದರಿಂದ 'ಅಂತರ್ಯಾಮ್ಯೈಕ್ಯ'ಪರ ಶ್ರುತಿ. (ನ್ಯಾಯಾಮೃತ) |

Rarest Archiver

ಮಹಾಶಾಲ ಶೌನಕನಿಗೆ ಯಜ್ಞಯಾಗಾದಿಕರ್ಮಗಳೇ ಪರಮ ಶ್ರೇಯಸ್ಸಾಧನವಲ್ಲ. ಪರಮಾತ್ಮನೇ ಸರ್ವೋತ್ತಮನೆಂದು ತಿಳಿದು ಮಾಡಿದ ಕರ್ಮವು ಮಾತ್ರ ಶ್ರೇಯ-ಸ್ಸಾಧನವಾಗುವದು. ಪರಮಾತ್ಮನ ಕಿಂಚಿತ್ ಉತ್ತಮತ್ವವನ್ನು ತಿಳಿದು ಮಾಡಿದ ಕರ್ಮದಿಂದ ಮಾತ್ರ ಜೀವನು ಸ್ವರ್ಗಾದಿಸುಖವನ್ನು ಸ್ವಲ್ಪಕಾಲ ಅನುಭವಿಸಿ ಪುನಃ ಭೂಲೋಕದಲ್ಲಿ ಹುಟ್ಟುವನು. ಪರಮಾತ್ಮನು ಜೀವರಿಗೆ ಸಮನು ಅಥವಾ ಜೀವರಿಗಿಂತ ಹೀನನು ಎಂದು ತಿಳಿಯುವವರಂತೂ ಏನು ಯಜ್ಞ ಯಾಗಾದಿಗಳನ್ನು ಮಾಡಿದರೇನು, ಅದೆಲ್ಲ ನಿಷ್ಫಲವಾಗಿ ನರಕಾದ್ಯನರ್ಥವನ್ನು ಪಡೆಯುವರು. ಹೀಗೆ, ಕರ್ಮ ಮಾಡಬೇಕು ಎಂಬ ಮೇಲ್ನೋಟಕ್ಕೆ ತೋರುವ ಅರ್ಥದ ಶ್ರುತಿವಾಕ್ಯಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲಿಲ್ಲವಾದರೆ ಅನರ್ಥವಾಗುವದು ಎಂದು ಮುಂತಾಗಿ ಅಂಗಿರಸ್‌ನು ತಿಳಿಸಿದನು. ಅಂತು ಶ್ರುತಿಯನ್ನು ನಿಯಮಗಳಿಗನುಸರಿಸಿ ಅರ್ಥಮಾಡಿಕೊಳ್ಳದೆಯೇ ಮೇಲ್ನೋಟದ ಅರ್ಥವನ್ನೇ ಗ್ರಹಿಸಿ ಅನುಷ್ಠಾನ ಮಾಡಿದರೆ ಅನರ್ಥವಾಗುವದು ಎಂಬ ವಿಷಯವನ್ನು ಶ್ರೀಮದಾಚಾರ್ಯರು ದೃಷ್ಟಾಂತರೂಪೇಣ ಈ ವಾಕ್ಯದಲ್ಲಿ ತಿಳಿಸಿದ್ದಾರೆ.

ಹೀಗೆ ಶ್ರುತಿತಾತ್ಪರ್ಯವನ್ನು ನಿಯಮಗಳನ್ನನುಸರಿಸದೆಯೆ ಹೇಳಿದಾಗ ಐಕ್ಯವು ಹಾಗೂ ಜಗನ್ಮಿಥ್ಯಾತ್ವವು ಪ್ರಾಪ್ತವಾಗುವವು. ಆಗ ಇದನ್ನು ಖಂಡಿಸಿ ನಿಯಮಗಳ ಪ್ರಕಾರ ಶ್ರುತಿಗಳ ಅರ್ಥ ಹೇಳಬೇಕಾದುದು ಅವಶ್ಯ ಎಂಬುದೇ ಸೂಕ್ಷ್ಮತತ್ವವು.

ಅಂತು ಈ ಶ್ರುತಿಯ ಒಟ್ಟರ್ಥ *ಶ್ರುತ್ಯರ್ಥಷಟ್ಪದಿ*ಯಲ್ಲಿ ಹೀಗೆ ಇದೆ:-

*ಯಜ್ಞಪತಿಯನು ಮರೆತು ಮಾಡುವ*
*ಯಜ್ಞಯಾಗಾದ್ಯನ್ನದಾನದಿ*
*ಅಜ್ಞಜನ ಮತ್ತೇನು ಪಡೆವರು ಸ್ವಲ್ಪ ಸುಖ ಹೊರತು,*
*ಯಜ್ಞವಾಹನೆ ಪರಮ ಸಾಧನ*
*ಸೂಜ್ಞನಾದವನರಿವನೀ ನುಡಿ*
*ಯಜ್ಞಪತಿಯಲಿ ಭಕುತಿ ಮಾಡಲು ವೇದ ಪೇಳುತಿದೆ. ॥*

**೩೮. ಐಕಾತ್ಮ್ಯಂ ನಾಮ ಯದಿದಂ ಕೇಚಿದ್ಬ್ರೂಯುರನೈಪುಣಾಃ**

*– ಮಹಾಭಾರತ ಶಾಂತಿಪರ್ವಮೋಕ್ಷಧರ್ಮ ಪರ್ವ. (ಇದರ ಸಂಪೂರ್ಣ ಆಕರವನ್ನು ಹಾಗೂ ಅದರ ಅರ್ಥವನ್ನು ಈ ಮೊದಲು ಕೊಟ್ಟಿದೆ).*

**ಅನ್ವಯ ಹಾಗೂ ಅರ್ಥ :– ಕೇಚಿತ್ ಅನೈಪುಣಾಃ ಯದ್ ಇದಂ ಐಕಾತ್ಮ್ಯಂ ನಾಮ ಬ್ರೂಯುಃ ।**

Rarest Archiver

ಕೆಲ ಅವಿವೇಕಿಗಳು ಜೀವೇಶ್ವರರಲ್ಲಿ ಐಕ್ಯವನ್ನು ಹೇಳುತ್ತಾರೆ.

**ವಿಶೇಷ ವಿಷಯಗಳು :-**

ಐಕ್ಯವು ಪ್ರಾಪ್ತವಿದ್ದರೆ ಒಂಬತ್ತು ದೃಷ್ಟಾಂತಗಳಿಂದ ಭೇದವನ್ನು ಹೇಳುವದು ಯುಕ್ತವಾಗುವದು. ಪ್ರಾಪ್ತವಾದದ್ದನ್ನೇ ಪ್ರತಿಷೇಧ ಮಾಡಬಹುದು. ಐಕ್ಯವು - ಅಭೇದವು- ಎಲ್ಲಿ ಪ್ರಾಪ್ತವಾಗಿದೆ ಎಂದು ಪ್ರಶ್ನೆ ಬಂದರೆ ನಾಲ್ಕು ರೀತಿಯಿಂದ ಐಕ್ಯದ ಪ್ರಾಪ್ತಿಯನ್ನು ಹೇಳುವರು; ಸಾಧಾರಣೀ ಪ್ರಾಪ್ತಿ, ಅಸಾಧಾರಣೀ ಪ್ರಾಪ್ತಿ, ವಾದಿಪ್ರವಾದಪ್ರಾಪ್ತಿ, ಹಾಗೂ ಶ್ರುತಿತಾತ್ಪರ್ಯಅಪರಿಜ್ಞಾನಪ್ರಾಪ್ತಿ ಎಂದು. ಇವುಗಳಲ್ಲಿ ಮೊದಲಿನ ಎರಡು ಪ್ರಾಪ್ತಿಗಳನ್ನು ಹಾಗೂ ಪ್ರಾಪ್ತವಾದ ಐಕ್ಯದ ನಿರಾಕರಣೆಯನ್ನೂ ಕೂಡ ಪ್ರಮಾಣವಾಕ್ಯವನ್ನು ಕೊಟ್ಟು ಹೇಳಿದ್ದಾರೆ. **ಪ್ರೇರಕಃ ಸರ್ವಭೂತಾನಾಂ....** ಇತ್ಯಾದಿ ವಾಕ್ಯವು ಸಾಧಾರಣೀಪ್ರಾಪ್ತಿಯಿಂದ ಪ್ರಾಪ್ತವಾದ ಐಕ್ಯವನ್ನು ಪ್ರತಿಷೇಧಿಸಲು ಆಗಮ ಪ್ರಮಾಣವು. ಇನ್ನು **ಸರ್ವಾನ್ ವೇದಾನ್ ಅಧೀತ್ಯ ಮಹಾಮನಾಃ..** ಇತ್ಯಾದಿ ಛಾಂದೋಗ್ಯೋಪನಿಷತ್ತಿನ ವಾಕ್ಯವು ಅಸಾಧಾರಣೀ ಪ್ರಾಪ್ತಿ ಹಾಗೂ ಪ್ರಾಪ್ತವಾದ ಐಕ್ಯದ ಪ್ರತಿಷೇಧಕ್ಕೆ ಪ್ರಮಾಣವು. ಆದರೆ ವಾದಿಪ್ರವಾದಪ್ರಾಪ್ತಿ ಮತ್ತು ಶ್ರುತಿತಾತ್ಪರ್ಯ ಅಪರಿಜ್ಞಾನ ಪ್ರಾಪ್ತಿ ಹಾಗೂ ಪ್ರಾಪ್ತವಾದ ಐಕ್ಯದ ಪ್ರತಿಷೇಧಕ್ಕೆ ಪ್ರಮಾಣಗಳೇನು ಎಂದು ಶಂಕೆ ಬಂದಲ್ಲಿ ಇದಕ್ಕೆ ಪ್ರಮಾಣ ಹೇಳಲೆಂದೇ *ಮೋಕ್ಷ-ಧರ್ಮದ* **ಐಕಾತ್ಮ್ಯಂ ನಾಮ.....**ಇತ್ಯಾದಿ ವಾಕ್ಯವನ್ನು ಉದಾಹರಿಸಿದ್ದಾರೆ. ದೃಷ್ಟಾಂತಗಳು ಯಾವದೇ ತತ್ತ್ವವನ್ನು ಹೇಳಲು ಸಂಭಾವಕವಾಗುವವೇ ಹೊರತು ನಿಶ್ಚಾಯಕವಾಗಲಾರವು. ನಿಶ್ಚಯದಿಂದ ಸಿದ್ಧಾಂತಪ್ರತಿಪಾದನೆಗೆ ಪ್ರಮಾಣವನ್ನೇ ಹೇಳಬೇಕಾಗುವದು. ಕಾರಣ ಸರ್ವಸಮ್ಮತವಾದ ಹಾಗೂ ಪಂಚಮ ವೇದವೆಂದೇ ಸ್ವೀಕರಿಸಲ್ಪಟ್ಟ ಮಹಾಭಾರತದ ವಾಕ್ಯಗಳನ್ನೇ ಪ್ರಮಾಣವಾಗಿ ಉದಾಹರಿಸಿದ್ದಾರೆಂದು ತಿಳಿಯಬೇಕು. **ಈ ವಾಕ್ಯದ ಅರ್ಥವನ್ನು *ಶ್ರುತ್ಯರ್ಥಪಟ್ಟದಿ*ಯಲ್ಲಿ ಈ ಮೊದಲೇ ವಿವರಿಸಲಾಗಿದೆ.**

**೩೯. ಸರ್ವಂ ಖಲ್ವಿದಂ ಬ್ರಹ್ಮ ತಜ್ಜಲಾನಿತಿ ಶಾಂತ ಉಪಾಸೀತಾಥ ಖಲು ಕ್ರತುಮಯಃ ಪುರುಷೋ ಯಥಾ ಕ್ರತುರಸ್ಮಿನ್ ಲೋಕೇ ಪುರುಷೋ ಭವತಿ ತಥೇತಃ ಪ್ರೇತ್ಯ ಭವತಿ ಸಃ ಕ್ರತುಂ ಕುರ್ವೀತ ।**

**— *ಛಾಂದೋಗ್ಯೋಪನಿಷತ್, ಅಧ್ಯಾಯ ೩, ಖಂಡ ೨, ಭಾಗ ೯.***

ಇದು ಛಾಂದೋಗ್ಯೋಪನಿಷತ್ತಿನ ಪಂಚಮ ಪ್ರಪಾಠಕದಲ್ಲಿ (೫ನೆಯ ಅಧ್ಯಾಯದಲ್ಲಿ) ಹೇಳಲ್ಪಟ್ಟ ಭಾಗವೆಂದು ಶ್ರೀ ರಾಯರ ಟಿಪ್ಪಣಿಯಿಂದ ಹಾಗೂ ಶ್ರೀನಿವಾಸತೀರ್ಥರ ಟಿಪ್ಪಣಿಯಿಂದ ತಿಳಿಯುವದು. ಆದರೆ ಈಗ ಪ್ರಕಾಶಿತವಾದ

Rarest Archiver

ಗ್ರಂಥಗಳಲ್ಲಿ ಇದು ಮೇಲೆ ಹೇಳಿದಂತೆ ೩ನೆಯ ಅಧ್ಯಾಯದಲ್ಲಿ ಬರುವ ಭಾಗವಾಗಿದೆ. **ಶ್ರೀ ರಾಯರ ಹಾಗೂ ಶ್ರೀ ಶ್ರೀನಿವಾಸತೀರ್ಥರ ಕಾಲದಲ್ಲಿ ಪಾಠಾಂತರವಿರಬಹುದೇ ಎಂಬ ಶಂಕೆ.** ಶ್ರೀ ಜಯತೀರ್ಥರ ಟೀಕೆಯಲ್ಲಿ ಈ ಉಪನಿಷದ್ಭಾಗದ ವಿವರಣೆಯ ಉಪೋದ್ಘಾತದ ಪೂರ್ವಪಕ್ಷಪ್ರಸ್ತಾವದ ಸಂದರ್ಭದಲ್ಲಿ **ಪ್ರಾಗ್ ಉಕ್ತಮ್** ಎಂದು ಮಾತ್ರ ಇದೆ. ಶ್ರೀ ಹೃಷೀಕೇಶತೀರ್ಥರ ಪಾಠವೆಂದು ಪ್ರಸಿದ್ಧವಾದ ***ಸರ್ವಮೂಲ-ಗ್ರಂಥಾಃ*** ಎಂಬ ಪ್ರಕಾಶನದ ಪ್ರಥಮ ಸಂಪುಟದಲ್ಲಿ ಕೂಡ ಈ ಭಾಗವು ೩ನೆಯ ಅಧ್ಯಾಯದ ೨ನೆಯ ಖಂಡದ ೯ನೆಯ ಭಾಗವೆಂದೇ ಪ್ರಕಾಶಿತವಾಗಿದೆ. ಪೂರ್ಣಪ್ರಜ್ಞ ವಿದ್ಯಾಪೀಠದ ವಿದ್ವಾಂಸರಿಂದ ಸಂಪಾದಿಸಲ್ಪಟ್ಟು ಅಖಿಲ ಭಾರತ ಮಾಧ್ವಮಹಾ-ಮಂಡಲದಿಂದ ಪ್ರಕಾಶಿತವಾದ ಕನ್ನಡ ಅನುವಾದದ ***ಉಪನಿಷತ್ಪ್ರಸ್ಥಾನ*** ಎಂಬ ಗ್ರಂಥದಲ್ಲಿಯೂ ಅಷ್ಟೆ. ಆದರೆ ***ಪಂಚತ್ರಿಂಶದುಪನಿಷದಃ*** ಎಂಬ ಗಂಗಾವಿಷ್ಣು ಶ್ರೀಕೃಷ್ಣದಾಸ ಇವರ ಮುಂಬಯಿ ಪ್ರಕಾಶನದಲ್ಲಿ (ಶಕೆ ೧೮೩೨) ಮಾತ್ರ ಇದು ಮೂರನೆಯ ಅಧ್ಯಾಯ *೧೪ನೆಯ ಖಂಡದ ೧ನೆಯ ಭಾಗವಾಗಿ* ಪ್ರಕಾಶಿತವಾಗಿದೆ. ಹೀಗೆ ಕೆಲ ಪ್ರತಿಗಳನ್ನು ನೋಡಿದಾಗ ಪಾಠಾಂತರವಿದ್ದುದು ಕಂಡು ಬರುವದರಿಂದ ಶ್ರೀ ರಾಯರ *ಶ್ರೀಮದ್ವಿಷ್ಣುತತ್ತ್ವವಿನಿರ್ಣಯಟೀಕಾಭಾವದೀಪಟಿಪ್ಪಣಿಯಲ್ಲಿ* ಹಾಗೂ ಶ್ರೀ ಶ್ರೀನಿವಾಸತೀರ್ಥರ *ಶ್ರೀಮದ್ವಿಷ್ಣುತತ್ತ್ವವಿನಿರ್ಣಯಟೀಕಾವಾಕ್ಯಾರ್ಥದೀಪಿಕಾ-*ಟಿಪ್ಪಣಿಯಲ್ಲಿ ೫ನೆಯ ಅಧ್ಯಾಯ (ಪ್ರಪಾಠಕ) ಎಂದು ಹೇಳಿದ್ದು ಅವರ ಕಾಲಕ್ಕೆ ಇನ್ನೊಂದು ಪಾಠವಿರಬಹುದೆಂದು ಸೂಚಿಸುತ್ತದೆ.

**ಅನ್ವಯ ಹಾಗೂ ಅರ್ಥ:- ಇದಂ ಬ್ರಹ್ಮ ಸರ್ವಂ ಖಲು, ತತ್ ಬ್ರಹ್ಮ ಜಲಾನಿತಿ ಶಾಂತಃ ಉಪಾಸೀತ, ಅಥ ಪುರುಷಃ ಕ್ರತುಮಯಃ, ಯಥಾಕ್ರತುಃ ಅಸ್ಮಿನ್ ಲೋಕೇ ಪುರುಷೋ ಭವತಿ ತಥಾ ಇತಃ ಪ್ರೇತ್ಯ ಭವತಿ, ಅಥ ಸಃ ಕ್ರತುಂ ಕುರ್ವೀತ ।**

**(ಶ್ರೀ ರಾಯರ ಖಂಡಾರ್ಥವನ್ನನುಸರಿಸಿ ಅರ್ಥ) ಇದಂ ಬ್ರಹ್ಮ ಸರ್ವಂ ಖಲು** -ಎಲ್ಲರಲ್ಲಿಯೂ ಇರುವ ಕಾರಣ ಹಾಗೂ ಅತಿ ಸಮೀಪದಲ್ಲಿರುವದರಿಂದ ಈ ವಿಷ್ಣು ಎಂಬ ಹೆಸರಿನ ಬ್ರಹ್ಮನು ಸರ್ವಗುಣಗಣಪೂರ್ಣನಾದವನೆಂದು ಪ್ರಸಿದ್ಧ-ನಾಗಿದ್ದಾನೆ. **ತದ್ ಬ್ರಹ್ಮ ಜಲಾನಿತಿ ಜಲೇ ಪ್ರಲಯೋದಕೇ ಅನಿತಿ ಚೇಷ್ಟಮಾನಂ ಆಸ್ತೇ ಇತಿ ಶಾಂತಃ ಅಧಿಕಾರೀ ಉಪಾಸೀತ** – ಪರಮಾತ್ಮನಲ್ಲಿಯೇ ನಿರಂತರವಾಗಿ ಮನಸ್ಸಿಟ್ಟ ಸಾಧಕನು ಈ ವಿಷ್ಣುವು ಪ್ರಲಯೋದಕದಲ್ಲಿ ಇದ್ದು ಸಚೇಷ್ಟನಾಗಿ ಎಲ್ಲವನ್ನು ನಿಯಮಿಸುತ್ತಿರುವನೆಂದು ಉಪಾಸಿಸಬೇಕು. **ಅಥ ಪುರುಷಃ ಕ್ರತುಮಯಃ ಯಥಾಕ್ರತುಃ ಭವತಿ ತಥಾ ಇತಃ ಪ್ರೇತ್ಯ ಭವತಿ**- ಏಕೆಂದರೆ ಜೀವನು ಜ್ಞಾನಪ್ರಧಾನನಾಗಿದ್ದು ಈ ಲೋಕದಲ್ಲಿ ಯಾವ ರೀತಿಯಿಂದ ಪರಮಾತ್ಮನ ವಿಷಯಕ್ಕೆ ಜ್ಞಾನ ಪಡೆದುಕೊಂಡು ಉಪಾಸನೆ ಮಾಡುವನೋ ಆ ಉಪಾಸನೆಗೆ ಯೋಗ್ಯವಾದ ಫಲವನ್ನು ಪಡೆಯುವನು.

Rarest Archiver

ಅವನು ಜೀವನದ ಕೊನೆಯಲ್ಲಿಯೂ ಪರಮಾತ್ಮವಿಷಯಕಜ್ಞಾನದಿಂದ ಸಹಿತನಾಗಿ ದೇಹತ್ಯಾಗ ಮಾಡುವನು ಮತ್ತು ಮುಂದೆ ಅದಕ್ಕೆ ತಕ್ಕ ಫಲವನ್ನು ಪಡೆಯುವನು. **ಅಥ ಸಃ ಕ್ರತುಂ ಕುರ್ವೀತ–** ಆದಕಾರಣ ಅಧಿಕಾರಿಯಾದವನು ಪರಮಾತ್ಮ–ವಿಷಯಕವಾದ ಜ್ಞಾನವನ್ನು ಪಡೆಯಬೇಕು. (ಆ ರೀತಿ ಉಪಾಸನೆ ಮಾಡಬೇಕು).

ಛಾಂದೋಗ್ಯೋಪನಿಷತ್ತಿನ ಮೂರನೆಯ ಅಧ್ಯಾಯದ ಪ್ರಥಮ ಖಂಡದಲ್ಲಿ ಬ್ರಹ್ಮವಿದ್ಯಾ–ಮಧುವಿದ್ಯಾದ ಉಪದೇಶದ ವಿಷಯವನ್ನು ವಿವರಿಸಿದ ಅನಂತರದಲ್ಲಿ ಪ್ರಸ್ತುತದ ಎರಡನೆಯ ಖಂಡದಲ್ಲಿ ಸೂರ್ಯಾಂತರ್ಗತ ಹರಿಯು ಸರ್ವವೇದ–ಪ್ರತಿಪಾದ್ಯನೂ ವೇದಮಾತೃವಾಗಿದ್ದ ಗಾಯತ್ರೀಪದವಾಚ್ಯನೂ ಆಗಿದ್ದಾನೆಂದು ಉಪಾಸನಾಪ್ರಕಾರವನ್ನು ವಿವರಿಸುವ ಸಂದರ್ಭದಲ್ಲಿ ಬರುವ ಭಾಗವಿದು. ಹೃದ್ಗತಬ್ರಹ್ಮ ಹಾಗೂ ಬಹಿಷ್ಠಬ್ರಹ್ಮ ಇಬ್ಬರಲ್ಲಿಯೂ ಐಕ್ಯ ಹೇಗೆ ಕೂಡುವದೆಂಬುದನ್ನು ಇಲ್ಲಿ ಸ್ಪಷ್ಟಪಡಿಸಿದ್ದಾರೆ. ಅಣುತ್ವ ಮಹತ್ವಗಳು ಪರಮಪುರುಷನಲ್ಲಿ ಕೂಡುವವು ಎಂದು ಹೇಳಿ ಇದನ್ನು ವಿವರಿಸಿದ್ದಾರೆ. ( ಹೀಗೆ ಈ ಭಾಗಕ್ಕೆ ಶ್ರೀ ರಾಯರ ಅವತಾರಿಕೆ ಇದೆ).

**ವಿಶೇಷ ವಿಷಯುಗಳು :– ಸದೇವ ಸೋಮ್ಯ ಇದಮಗ್ರ ಆಸೀತ್** ಎಂಬ ಛಾಂದೋಗ್ಯೋಪನಿಷತ್ತಿನ ವಾಕ್ಯಕ್ಕೆ ಶ್ರೀಮದಾಚಾರ್ಯರು ಅರ್ಥ ಹೇಳಿ ಈ ವಾಕ್ಯವು ಸಮಸ್ತ ಸೃಷ್ಟಿಯು ಪರಮಾತ್ಮನ ಅಧೀನವಾಗಿದೆ ಎಂದು ಹೇಳುವ ಸಂದರ್ಭದಲ್ಲಿ ಬಂದಿದೆ, ಅದ್ವೈತಿಗಳು ಹೇಳುವಂತೆ ಪ್ರಪಂಚವು ಮಿಥ್ಯೆ ಎಂದು ಹೇಳುವದಕ್ಕಾಗಿ ಈ ವಾಕ್ಯ ಪ್ರವೃತ್ತವಾಗಿಲ್ಲ ಎಂದು ವಿವರಿಸಿದ್ದಾರೆ. ಈ ಸಂದರ್ಭದಲ್ಲಿಅದ್ವೈತಿಗಳು ಮಾಡಿದ ಪೂರ್ವಪಕ್ಷವನ್ನು ವಿವರಿಸುವದಕ್ಕಾಗಿ ಶ್ರೀ ಜಯತೀರ್ಥರು **ಸರ್ವಂ ಖಲ್ವಿದಂ ಬ್ರಹ್ಮ** ಈ ವಾಕ್ಯವನ್ನು ಉದಾಹರಿಸಿದ್ದಾರೆ. ಈ ವಾಕ್ಯಕ್ಕೆ ಅದ್ವೈತಿಗಳು ಬೇರೆ ಅರ್ಥವನ್ನು ಹೇಳುತ್ತಾರೆ. ಎಲ್ಲ ಪ್ರಪಂಚವೂ ಬ್ರಹ್ಮಾತ್ಮಕವಾಗಿದೆ. ಅದು ಹೇಗೆಂದರೆ ಸರ್ವವೂ ಕೂಡ ಬ್ರಹ್ಮನಿಂದಲೇ ಹುಟ್ಟಿದೆ. ಬ್ರಹ್ಮನು ಜಗತ್ತಿಗೆ ಉಪಾದಾನ ಕಾರಣನು ಎಂದು ಅವರ ಅಭಿಪ್ರಾಯ. ಆದರೆ ಇದು ಸರಿಯಲ್ಲ. ಏಕೆಂದರೆ, ಘಟಕ್ಕೆ ಉಪಾದಾನಕಾರಣವಾದ ಮೃತ್ತು (ಮಣ್ಣು) ವಿಕಾರವನ್ನು ಹೊಂದಿ ಘಟವಾಗುವದು. ಆದರೆ ಬ್ರಹ್ಮನು ನಿರ್ವಿಕಾರನು ಎಂದು ಶ್ರುತಿಯಲ್ಲಿ ಹೇಳಿರುವದರಿಂದ ಬ್ರಹ್ಮನು ಮಣ್ಣಿನಂತೆ ಉಪಾದಾನ ಕಾರಣನೆಂದು ಹೇಳುವದು ಸರಿಯಾಗುವದಿಲ್ಲ. ಆದ ಕಾರಣ, ಭ್ರಮಸ್ಥಲದಲ್ಲಿ ರಜತಕ್ಕೆ ಆಶ್ರಯವಾದ ಶಿಂಪು ಹೇಗೆ ರಜತಕ್ಕೆ ಉಪಾದಾನ ಕಾರಣ–ವಾಗುವದೋ ಅದೇ ರೀತಿ ಬ್ರಹ್ಮನು ಜಗದಾರೋಪಾಧಿಷ್ಠಾನತ್ವೇನ ಉಪಾದಾನ ಕಾರಣನಾಗಿದ್ದಾನೆಂದು ಹೇಳಿದರೆ ಇದು ಕೂಡುವದು ಎಂದು ಹೇಳುವರು. ಇದೂ ಕೂಡ ಸರಿಯಲ್ಲ. ಇಲ್ಲಿ ಪ್ರಕರಣವನ್ನು ಗಮನಿಸಿದಾಗ ಪರಮಾತ್ಮನ ಅಣು ಮಹತ್

Rarest Archiver

ರೂಪಗಳಲ್ಲಿ ಭೇದವಿಲ್ಲ. ಬಾಹ್ಯ ಪ್ರಪಂಚದಲ್ಲಿ ನಿಯಾಮಕನಾಗಿರುವ ಪರಮಾತ್ಮನು ಮಹತ್ ಆಗಿದ್ದಾನೆ. ಹೃದ್ಗತನಾದ ಪರಮಾತ್ಮನು ಅಣುವಾಗಿದ್ದಾನೆ. ಪರಮಾತ್ಮನ ಈ ಎರಡೂ ರೂಪಗಳಲ್ಲಿ ಐಕ್ಯವು ಕೂಡುವದು, ಏಕೆಂದರೆ ಹೃದ್ಗತನಲ್ಲಿಯೂ ಕೂಡ ಮಹತ್ವ ಉಂಟು. ಸಮಸ್ತ ಪ್ರಪಂಚವೂ ಕೂಡ ಬ್ರಹ್ಮನ ಅಧೀನದಲ್ಲಿದೆ, ಅಂಥ ಮಹಾಮಹಿಮೋಪೇತನಾಗಿರುವವನು ಬ್ರಹ್ಮನು ಎಂದು ಸಾಧಕನು ಉಪಾಸನೆ ಮಾಡಬೇಕು. ಇದನ್ನು ಪ್ರತಿಪಾದಿಸಲೆಂದೇ ಈ ಶ್ರುತಿವಾಕ್ಯವು ಪ್ರವೃತ್ತವಾಗಿದೆ. ಹೀಗೆ ಹೇಳಿದರೆ ಯಾವ ಅನುಪಪತ್ತಿಯೂ ಬರುವದಿಲ್ಲವೆಂದು ತಿಳಿಯಬೇಕು. ಶ್ರೀಹರಿಯು ಹೀಗೆ ಅಣೋರಣೀಯಾನ್ ಮಹತೋ ಮಹೀಯಾನ್ ಇರುವನೆಂಬುದನ್ನೇ ಇದೇ ಉಪನಿಷತ್ತಿನ ಮುಂದಿನ ವಾಕ್ಯವಾದ **ಏಷ ಮ ಆತ್ಮಾ ಅಂತರ್ ಹೃದಯೇ ಅಣೀಯಾನ್ ...** ಇತ್ಯಾದಿ ವಾಕ್ಯವೂ ಹೇಳುವದು. ಶ್ರೀಮದಾಚಾರ್ಯರು **ಸರ್ವಂ ಖಲ್ವಿದಂ ಬ್ರಹ್ಮ..** ಇತ್ಯಾದಿ ವಾಕ್ಯಕ್ಕೆ ಭಾಷ್ಯರೂಪವಾಗಿ *ಸದ್ಗುಣ* ಎಂಬ ಪ್ರಮಾಣದ ವಾಕ್ಯಗಳನ್ನು ಉದಾಹರಿಸುವರು. ಈ ಪ್ರಮಾಣವು ಈ ಮೇಲೆ ಹೇಳಿದ ಅರ್ಥಕ್ಕೆ ಆಧಾರವಾಗಿದೆ. (ಈ *ಸದ್ಗುಣ ಪ್ರಮಾಣವು* ಯಾವುದೆಂಬುದನ್ನು ಶೋಧಿಸಬೇಕಾಗಿದೆ) ಶ್ರೀಮದಾಚಾರ್ಯರು ಉದಾಹರಿಸಿದ ಈ ಪ್ರಮಾಣ ವಾಕ್ಯಗಳು ಹೀಗಿವೆ. **ಇದಂ ಬ್ರಹ್ಮಾತಿಸಾಮೀಪ್ಯಾತ್ ಸರ್ವಂ ಪೂರ್ಣಗುಣತ್ವತಃ । ತಚ್ಚ ಬ್ರಹ್ಮ ಜಲಾನ್ ಸಾಕ್ಷಾತ್ ಯೋಽಸೌ ವಿಷ್ಣುರ್ಜಲೇಽನತಿ ॥ ಆನೀದವಾತಮಿತಿ ಯಂ ವೇದ-ವಾಗವದತ್ ಸ್ಫುಟಮ್ । ಅಪ್ರಕೇತೇ ತು ಸಲಿಲೇ ಬ್ರಹ್ಮ ನಾರಾಯಣೋಽಪಿ ಸಃ । ಇತಿ ಶಾಂತ ಉಪಾಸೀತ ಯಸ್ಮಾದ್ ಜ್ಞಾನಮಯಃ ಪುಮಾನ್ । ಕ್ರತುಸ್ತು ನಿಶ್ಚಿತಂ ಜ್ಞಾನಂ ತದ್ವಶಃ ಪುರುಷೋಽಮೃತೌ । ತಸ್ಮಾದ್ ವಿನಿಶ್ಚಿತಂ ಜ್ಞಾನಂ ಕುರ್ಯಾದ್ ವಿಷ್ಣೌ ಮಹಾಗುಣೇ ।ಮಹಾಜ್ಞಾನಾತ್ಮಕತ್ವಾತ್ತು ಪ್ರೋಕ್ತೋ ವಿಷ್ಣುರ್ಮನೋಮಯಃ । ಯಸ್ಮಾದ್ ಬಲಶರೀರೋಽಸೌ ಅತಃ ಪ್ರಾಣಶರೀರಕಃ। ಆ ಸಮಂತಾತ್ ಪ್ರಕಾಶಾತ್ ಸಃ ಅಕಾಶಾತ್ಮಾ ಪ್ರಕೀರ್ತಿತಃ । ಸರ್ವಗಂಧಾದಿ-ರೂಪಶ್ಚ ಭೋಕ್ತಾ ಚೈಷಾಂ ಸದೈವ ಹಿ । ಇತಿ ನಿಶ್ಚಯಕೃದ್ ಯಾತಿ ತಮೇವ ಪುರುಷೋತ್ತಮಮ್ ॥ ಇತಿ *ಸದ್ಗುಣೇ* .**

ಅಂತು ಈ ವಾಕ್ಯದ ಒಟ್ಟರ್ಥವನ್ನು ***ಶ್ರುತ್ಯರ್ಥಷಟ್ಪದಿ***ಯಲ್ಲಿ ಹೀಗೆ ಹೇಳಬಹುದು:-

*ಜೀವ ತಿಳಿವಿನ ಜೀವಿಯಾಗಿಹ,*
*ಜೀವರೆಲ್ಲರ ಹೃದಯಗುಹೆಯೊಳು*
*ಭಾವದಿಂದಿಹನೆಂದು ಗುಣಗಣಪೂರ್ಣಹರಿ ತಾನು,*

Rarest Archiver

*ಜೀವರೇ ಹರಿಯೆಂದು ನಿಗಮವು,*
*ಕಾಯ್ವನೀ ಹರಿಯುದಧಿಶಾಯಿಯು,*
*ಕೋವಿದರು ಧೇನಿಪುದು ಈ ಪರಿ ಶಾಂತ ಮನದಿಂದ. ॥*

**೪೦. ಸದೇವ ಸೋಮ್ಯ ಇದಮಗ್ರ ಆಸೀತ್ :–**

ಈ ಶ್ರುತಿಯ ಅರ್ಥವನ್ನು ಈ ಮೊದಲೇ ವಿವರಿಸಲಾಗಿದೆ.

**೪೧. ಉತ ತಮ್ ಆದೇಶಮ್ ಅಪ್ರಾಕ್ಷ್ಯೋ ಯೇನ ಅಶ್ರುತಂ ಶ್ರುತಂ ಭವತಿ ಅಮತಂ ಮತಂ ಅವಿಜ್ಞಾತಂ ವಿಜ್ಞಾತಂ ಇತಿ ಕಥಂ ನು ಭಗವಃ ಸಃ ಆದೇಶೋ ಭವತಿ ಇತಿ ॥–** *ಛಾಂ.ಉ. ೬, ೬. ಖಂ. ೧. ಭಾಗ ೧.*

ಇದು ಶ್ರೀಮದಾಚಾರ್ಯರು ಉದಾಹರಿಸಿದ **ಸದೇವ ಸೋಮ್ಯ ಇದಮಗ್ರ ಆಸೀತ್** ಇತ್ಯಾದಿ ಶ್ರುತಿಯ ಅರ್ಥ ಹೇಳುವ ಸಂದರ್ಭದಲ್ಲಿ ಶ್ರೀಮಟ್ಟೀಕಾಕೃತ್ಪಾದರು ಉದಾಹರಿಸಿದ ಶ್ರುತಿಯು. ಇದರ ಪೂರ್ಣ ಪಾಠವು ಹೀಗಿದೆ:– **ತಂ ಹ ಪಿತಾ ಉವಾಚ ಶ್ವೇತಕೇತೋ ಯನ್ನು ಸೋಮ್ಯ ಇದಂ ಮಹಾಮನಾಃ ಅನೂಚಾನಮಾನೀ ಸ್ತಬ್ಧಃ ಅಸಿ ಉತ ತಂ ಆದೇಶಂ....**(ಮೇಲಿನಂತೆ).

ಇದರ **ಅನ್ವಯ ಹಾಗೂ ಅರ್ಥ** ಹೀಗೆ :– **ತಂ ಹ ಪಿತಾ ಉವಾಚ** – ಹೀಗೆ ಹನ್ನೆರಡು ವರ್ಷ ಗುರುಕುಲವಾಸ ಮಾಡಿ ಬಂದ ಹಾಗೂ ತಾನು ಎಲ್ಲ ತಿಳಿದವನೆಂದು ಅಹಂಕಾರಿಯಾದ ಮಗನನ್ನು ಕುರಿತು ತಂದೆ ಹೇಳಿದರು. **ಶ್ವೇತಕೇತೋ ಯನ್ನು ಸೋಮ್ಯ ಇದಂ ಅನೂಚಾನಮಾನೀ ಮಹಾಮನಾಃ ಸ್ತಬ್ಧಃ ಅಸಿ** – ಎಲೈ ಶ್ವೇತಕೇತುವೇ, ಏಕೆ, ಮಗು, ಹೀಗೆ ಎಲ್ಲ ವೇದಗಳನ್ನು ಅಧ್ಯಯನಮಾಡಿ ಸಾಂಗವೇದಾಧ್ಯಯನ ಮಾಡಿದವನು ನಾನು ಎಂದು ಅಹಂಕಾರಿಯಾಗಿ ನಾನೇ ದೊಡ್ಡವನೆಂಬ ಭಾವನೆಯಿಂದ ಅವಿನೀತನಾಗಿರುವಿ ? **ಯೇನ (ಶ್ರುತೇನ ಮತೇನ) (ಅನ್ಯತ್) ಅಶ್ರುತಂ ಶ್ರುತಂ ಭವತಿ ಅಮತಂ ಮತಂ ಭವತಿ ತಮ್ ಆದೇಶಂ ಅಪ್ರಾಕ್ಷ್ಯಃ, ಉತ (ತತ್) ಶ್ರುತಂ ಮತಂ (ಕಿಂ)** –ಯಾವುದರ ಬಗೆಗೆ ಉಪದೇಶ ಪಡೆದು ಹಾಗೂ ತಿಳಿದುಕೊಂಡಾಗ ಉಳಿದುದು ಅಂದರೆ ಕರ್ಮದೇವತಾದಿಜಗತ್ತಿನ ವಿಷಯವು ಕೇಳದಿದ್ದರೂ ಹಾಗೂ ತಿಳಿಯದಿದ್ದರೂ ತಿಳಿದು ಬಿಡುವದೋ ಅಂಥ ವಿಷಯಕ್ಕೆ ನಿನ್ನನ್ನು ಪ್ರಶ್ನೆ ಮಾಡುತ್ತೇನೆ, ಅಂಥ ವಿಷಯವು ನಿನ್ನಿಂದ ಕೇಳಲ್ಪಟ್ಟಿದೆಯೋ ಹಾಗೂ ತಿಳಿಯಲ್ಪಟ್ಟಿದೆಯೋ? (ಬಹುಶಃ ನೀನು ಅದನ್ನು ತಿಳಿದುಕೊಂಡಿಲ್ಲ, ಇಲ್ಲವಾದರೆ ಈ ತರದ ಅಹಂಕಾರ ನಿನಗೆ ಹೇಗೆ ಬಂದೀತು?) **ಇತಿ**– ಹೀಗೆ ತಂದೆ ಮಗನನ್ನು ಕೇಳಿದರು. **ಹೇ ಭಗವಃ, ಸಃ ಆದೇಶಃ ಕಥಂ ನು ಇತಿ,** – ಎಲೈ

Rarest Archiver

ಪೂಜ್ಯರೇ, ಒಂದು ತಿಳಿದರೆ ಇನ್ನೊಂದು ತಿಳಿಯುವದೆಂದು ನೀವು ಹೇಳಿದ ಉಪದೇಶವು ಎಂಥದಿರುತ್ತದೆ? ಎಂದು ಮಗನು ತಂದೆಯನ್ನು ಕೇಳಿದನು.ಮುಂದೆ ತಂದೆ ಉದ್ದಾಲಕರು ಮಗನಿಗೆ ಅನೇಕ ದೃಷ್ಟಾಂತಗಳಿಂದ ಒಂದನ್ನು ತಿಳಿದರೆ ಇನ್ನೊಂದು ಹೇಗೆ ತಿಳಿಯುವದೆಂಬುದನ್ನು ವಿವರಿಸುವರು.

**೪೨. ನಿಷ್ಕಲಂ ನಿಷ್ಕ್ರಿಯಂ ಶಾಂತಂ ಏಕಧೈವ ಅನುದ್ರಷ್ಟವ್ಯಮ್.**

– ಇದು ಶ್ರುತಿ ಎಂದಿಷ್ಟೇ ಟೀಕೆಯಲ್ಲಿ ಸೂಚಿಸಲ್ಪಟ್ಟಿದೆ.

ಇದು ಶ್ರೀ ಟೀಕಾಕೃತ್ಪಾದರು ಉದಾಹರಿಸಿದ ಶ್ರುತಿಯು. ಶಾಂತಮ್ ಎನ್ನುವ ವರೆಗೆ ಮಾತ್ರ ಶ್ರುತಿಯ ಪಾಠವನ್ನು ಟೀಕೆಯಲ್ಲಿ ಕೊಟ್ಟಿದ್ದು ಶ್ರೀ ರಾಯರು ಭಾವದೀಪದಲ್ಲಿ ಆ ಶ್ರುತಿಯ ಉಳಿದ ಭಾಗವನ್ನೂ ಮೇಲಿನಂತೆ ಕೊಟ್ಟಿದ್ದಾರೆ. **ಸದೇವ ಸೋಮ್ಯ ಇದಮಗ್ರ ಆಸೀತ್** ಎಂದು ಶ್ರೀಮದಾಚಾರ್ಯರು ಉದಾಹರಿಸಿದ ಶ್ರುತಿಯ ವಿಷಯಕ್ಕೆ ವಿಶ್ಲೇಷಣೆ ಮಾಡುವಾಗ ಶ್ರೀ ಟೀಕಾರಾಯರು ಈ ಶ್ರುತಿಯನ್ನು ಉದಾಹರಿಸಿದ್ದಾರೆ.

ಬ್ರಹ್ಮ ತತ್ವವು ಯಾವ ಪ್ರಕಾರದ ವಿಕಾರವಿಲ್ಲದಂತಹದು ಎಂದು ಹೇಳುವ ಸಂದರ್ಭದಲ್ಲಿ ಈ ಶ್ರುತಿಯು ಉದಾಹರಿಸಲ್ಪಟ್ಟಿದೆ.

**ಅರ್ಥ :–** ಬ್ರಹ್ಮತತ್ವವು ಅಪ್ರಾಕೃತವಾದುದು, ಸ್ವಪ್ರಯೋಜನಕ್ಕೆ ಕ್ರಿಯಾಶೀಲ–ವಾದುದಲ್ಲ, ನಿರ್ವಿಕಾರವು, ಏಕಪ್ರಕಾರವಾಗಿ ಇರುವಂತಹದೆಂದು ತಿಳಿಯಬೇಕು.

**ವಿಶೇಷ ವಿಷಯಗಳು :–** ಇದು *ಶ್ವೇತಾಶ್ವತರೋಪನಿಷತ್* ನ ಅಧ್ಯಾಯ ೬, ಶ್ಲೋಕ ೧೯ ರಲ್ಲಿ ಬರುವ ಭಾಗವಾಗಿದೆ ಎಂದು ತೋರುವದು. ಆದರೆ ನಮಗೆ ಉಪಲಬ್ಧವಿದ್ದ ಪ್ರತಿಯಲ್ಲಿ ಶ್ರೀರಾಯರು ಕೊಟ್ಟ ಪಾಠವಿರದೆ ಬೇರೆ ಪಾಠವಿದೆ. ಶ್ರೀ ರಾಯರ ಕಾಲದಲ್ಲಿ ಈ ಉಪನಿಷತ್ತಿನ ಬೇರೆ ಪಾಠಾಂತರ ಪ್ರಚಲಿತವಿದ್ದಿತೇ ಎಂದು ಶಂಕೆ. ಅಲ್ಲಿಯ ಪೂರ್ಣ ಪಾಠ ಹೀಗಿದೆ :

**ನಿಷ್ಕಲಂ ನಿಷ್ಕ್ರಿಯಂ ಶಾಂತಂ ನಿರವದ್ಯಂ ನಿರಂಜನಮ್ । ಅಮೃತಸ್ಯ ಪರಂ ಸೇತುಂ ದಗ್ಧೇಂಧನಮಿವಾನಿಲಮ್॥ – ಶ್ವೇ. ಉ. ಅ. ೬. ಶ್ಲೋ. ೧೯.***

**ಅರ್ಥ:** ಪರಮಾತ್ಮನು ಪ್ರಾಕೃತ ದೇಹವುಳ್ಳವನಲ್ಲ. ಅಪ್ರಾಕೃತ ದೇಹವುಳ್ಳವನು. ಪ್ರಾಕೃತಬಂಧರಹಿತನು. ಆಪ್ತಕಾಮನಾಗಿರುವದರಿಂದ ತನಗೆ ಪ್ರಯೋಜನ–

---

*. ಖೇಮರಾಜ್ ಕೃಷ್ಣದಾಸ್, ಮುಂಬೈ– ಶ್ವೇತಾಶ್ವತರೋಪನಿಷತ್, ಹಿಂದೀ ಟಿಪ್ಪಣಿಯೊಂದಿಗೆ, ಸಂವತ್ ೧೯೬೭, ಶಕೇ–೧೮೩೪

Rarest Archiver

ವನ್ನಿಟ್ಟುಕೊಂಡು ವ್ಯಾಪಾರಮಾಡುವವನಲ್ಲ. ನಿರ್ವಿಕಾರನು, ದೋಷದೂರನು, ನಿರ್ಲಿಪ್ತನು– ಯಾವ ಪ್ರಕಾರದ ಪ್ರಾಕೃತ ಗುಣಗಳ ವಿಕಾರದ ಲೇಪ ಅವನಿಗಿಲ್ಲ. ಇವನು ಅಮೃತತ್ವಕ್ಕೆ ಪರಮ ಸೇತುವೆಯು. ಈತನ ಅನುಗ್ರಹವಿದ್ದಾಗಲೇ ಅಮೃತತ್ವವು ಪ್ರಾಪ್ತವಾಗುವದು. ಇವನು ಶಾಂತವಾಗಿರುವ (ಅಂದರೆ ಭಗಭಗ ಉರಿಯದಿರುವ ಅಂದರೆ ಗಂಭೀರವಾಗಿರುವ) ಅಗ್ನಿಯಂತೆ (ಅನಲಂ?) ಗಂಭೀರವಾಗಿರುವನು.

ಇಲ್ಲಿ ಬರುವ ಕೆಲ ಪದಗಳಿಗೆ ಶ್ರೀಮದಾಚಾರ್ಯರ ಹಾಗೂ ಕೆಲ ಟಿಪ್ಪಣೀಕಾರರ ವಿವರಣೆಗಳು ಉಪಲಬ್ಧವಿವೆ. ಶ್ರೀಮದಾಚಾರ್ಯರು ನಿಷ್ಕಲಮ್ ಎಂಬ ಪದಕ್ಕೆ ಬಲು ಸ್ವಾರಸ್ಯಮಯ ವಿವರಣೆ ಕೊಟ್ಟಿದ್ದಾರೆ.**ನಿಷ್ಕಲಮ್– ಷೋಡಶಕಲಾಶರೀರೋ ನ ಭವತಿ ಇತಿ ನಿಷ್ಕಲಃ । ಯದಾ ಪಶ್ಯಃ ಪಶ್ಯತೇ ರುಕ್ಮವರ್ಣಮ್, ಆನಂದರೂಪಮ್ ಅಮೃತಂ ಯದ್ ವಿಭಾತಿ ಇತ್ಯುಕ್ತತ್ವಾತ್॥**– *ಶ್ರೀಮದಾಚಾರ್ಯರ ಆಥರ್ವಣೋಪನಿಷದ್ ಭಾಷ್ಯಮ್ ೩–೧–೮. ನಿಷ್ಕಲ ಎಂಬ ಪದವು ಆಥರ್ವಣೋಪನಿಷತ್ತಿನಲ್ಲಿ ೨–೧–೧೧ ಹಾಗೂ ೩–೧–೮ ರಲ್ಲಿ ಬಂದಿದೆ. ಈ ಹದಿನಾರು ಕಲೆಗಳು ಆವವೆಂದರೆ (೧) ಜೀವಾಭಿಮಾನಿಯಾದ ಮುಖ್ಯಪ್ರಾಣ ದೇವರು, (೨)* ಆಸ್ತಿಕ್ಯ ನಿಷ್ಠಾರೂಪವಾದ ಶ್ರದ್ಧೆ ತದಭಿಮಾನಿ ಭಾರತೀ ದೇವಿ, (೩) ಆಕಾಶ (೪) ವಾಯು (೫) ಜ್ಯೋತಿ (೬) ಜಲ (೭) ಪೃಥಿವೀ (೮) ಇಂದ್ರಿಯ (೯) ಮನಸ್ಸು (೧೦) ಅನ್ನ (೧೧) ವೀರ್ಯ (೧೨) ತಪಸ್ಸು (೧೩) ಮಂತ್ರ (೧೪) ಕರ್ಮ (೧೫) ಇಂದ್ರಿಯಗೋಲಕ (೧೬) ನಾಮ ಅಥವಾ ಶಾಸ್ತ್ರ. ಇಂಥ ಕಲೆಗಳಿಂದ ಕೂಡಿದ ಪ್ರಾಕೃತ ದೇಹವು ಪರಮಾತ್ಮನಿಗೆ ಇರುವದಿಲ್ಲ.* ನಿಷ್ಕಲಃ ಸ್ವಯಂ ಬಂಧಾದಿಶೂನ್ಯಃ ಇತ್ಯರ್ಥಃ– ಹೀಗೆ ಷಷ್ಠಸ್ಕಂಧ ಭಾಗವತ ಚೆಟ್ಟೀ ಟಿಪ್ಪಣಿ ಇದೆ. (ಅಧ್ಯಾಯ ೧೭, ಶ್ಲೋಕ ೨೧)

ಈ ಶ್ರುತಿಯ ಒಟ್ಟರ್ಥ ***ಶ್ರುತ್ಯರ್ಥಷಟ್ಪದಿ***ಯಲ್ಲಿ ಹೀಗೆ :–

*ಹರಿಯು ಆವಗು ನರರ ತೆರದೊಳು*
*ಸರುವ ಕಲೆಗಳ ವಿಕೃತ ರೂಪನೆ ?*
*ಸರುವ ಕಾಲದಿ ನಿರ್ವಿಕಾರನು ನಿಷ್ಕ್ರಿಯನು ಶಾಂತ.*
*ನಿರುತ ಗುಣಖಣಿ ದೋಷದೂರನು*
*ಪರಮ ಗಂಭೀರಾತ್ಮ ಮುಕುತಿದ*
*ಅರಿವುದಿವ ನಿರ್ಲಿಪ್ತನೆಂಬುದ ಪರಮ ಸಾಧಕನು. ॥ ।*

---

* ೧. ಟಿ. ಕೆ.ವೇಣುಗೋಪಾಲದಾಸರು –*ಮಾಧ್ವ ನಿಘಂಟು* ಗುರುರಾಜಪ್ರಕಾಶನ ಪುಟ೨೫೩

೨ . .ಪೂರ್ಣಪ್ರಜ್ಞಸಂಶೋಧನ ಮಂದಿರಮ್– *ಸರ್ವಮೂಲಶಬ್ದನಿಘಂಟು.* ೨೦೦೨

Rarest Archiver

**೪೩. ಯಥಾ ಸೋಮ್ಯ ಏಕೇನ ಮೃತ್ಪಿಂಡೇನ ಸರ್ವಂ ಮೃನ್ಮಯಂ ವಿಜ್ಞಾತಂ ಸ್ಯಾತ್ ವಾಚಾರಂಭಣಂ ವಿಕಾರೋ ನಾಮಧೇಯಂ ಮೃತ್ತಿಕೇತ್ಯೇವ ಸತ್ಯಮ್॥** *ಛಾಂ. ಉ. ಅಧ್ಯಾಯ ೬, ಖಂಡ ೧, ಭಾಗ ೩.*

ಇದೇ ರೀತಿಯ ಇನ್ನೆರಡು ಶ್ರುತಿಗಳನ್ನೂ ಶ್ರೀಮದಾಚಾರ್ಯರು ಉದಾಹರಿಸಿದ್ದನ್ನು ಇಲ್ಲಿ ಗಮನಿಸಬೇಕು. ಅವೂ ಕೂಡ *ಛಾಂದೋಗ್ಯೋಪನಿಷತ್ತಿನ* ವಾಕ್ಯಗಳೇ ಆಗಿವೆ. ಆ ವಾಕ್ಯಗಳು ಹೀಗೆ:– **ಯಥಾ ಸೋಮ್ಯ ಏಕೇನ ಲೋಹಮಣಿನಾ ಸರ್ವಂ ಲೋಹಮಯಂ ವಿಜ್ಞಾತಂ ಸ್ಯಾತ್, ಯಥಾ ಸೋಮ್ಯ ಏಕೇನ ನಖನಿಕೃಂತನೇನ ಸರ್ವಂ ಕಾರ್ಷ್ಣಾಯಸಂ ವಿಜ್ಞಾತಂ ಸ್ಯಾತ್..** ಇತ್ಯಾದಿ. *ಛಾಂ. ಉ. ಅ.೬. ಖಂ. ೧, ಭಾ. ೩ ,೪.* (ಮೇಲೆ ಸೂಚಿಸಲ್ಪಟ್ಟ ಶ್ರುತಿಯ ಅರ್ಥ ಮಾಡಿಕೊಂಡರೆ ಈ ಎರಡು ವಾಕ್ಯಗಳ ಅರ್ಥವೂ ಸ್ಪಷ್ಟವಾಗುವದರಿಂದ ಹಾಗೂ ಟೀಕಾ ಟಿಪ್ಪಣಿಗಳಲ್ಲಿ ಈ ವಾಕ್ಯಗಳ ಅರ್ಥವೂ ಇದೇ ಸಂದರ್ಭದಲ್ಲಿಯೇ ಹೇಳಲ್ಪಟ್ಟಿರುವದರಿಂದ ಇವುಗಳನ್ನೂ ಇಲ್ಲಿಯೇ ಕೊಡಲಾಗಿದೆ). ಈಗ ಈ ಮೇಲೆ ಉದಾಹೃತ ವಾಕ್ಯದ ಅನ್ವಯಾರ್ಥಗಳನ್ನು ಮಾತ್ರ ಕೊಡಲಾಗಿದೆ. ಉಳಿದ ವಾಕ್ಯಗಳ ಅರ್ಥವೂ ವಿವರಣೆಯ ಸಂದರ್ಭದಲ್ಲಿ ಸೂಚಿಸಲ್ಪಟ್ಟಿದೆ.

**ಅನ್ವಯ:– ಸೋಮ್ಯ, ಯಥಾ ಏಕೇನ ಮೃತ್ಪಿಂಡೇನ ಸರ್ವಂ ಮೃನ್ಮಯಂ ವಿಜ್ಞಾತಂ ಸ್ಯಾತ್, ಸೋಮ್ಯ, ಯಥಾ ವಾಚಾ ಆರಂಭಣಂ ವಿಕಾರಃ, ( ಅತ ಏವ ಅಪ್ರಧಾನಂ), ಮೃತ್ತಿಕಾ ಇತಿ ನಾಮಧೇಯಂ ಏವ ಸತ್ಯಮ್ ( ಅತಃ ಏವ ಪ್ರಧಾನಂ), (ಸಂಸ್ಕೃತೇತರಾಪಭ್ರಂಶಭಾಷಾಶಬ್ದಜ್ಞಾನೇನ ಯತ್ಫಲಂ ತತ್ಫಲಂ ಸಂಸ್ಕೃತಶಬ್ದಜ್ಞಾನೇನ ಯಥಾ ಭವತಿ ತಥಾ ಕರ್ಮದೇವತಾದಿಜಗಜ್ಞಾನೇನ ಯತ್ಫಲಂ ತತ್ಸರ್ವಂ ಪ್ರಧಾನಭೂತಭಗವಜ್ಞಾನೇನ ಭವತಿ ಇತಿಭಾವೇನ ಯೇನ ಶ್ರುತೇನ ಮತೇನ ವಿಜ್ಞಾತೇನ ಅಶ್ರುತಂ ಅಮತಂ ಅವಿಜ್ಞಾತಂ ಜಗತ್ ಶ್ರುತಮತವಿಜ್ಞಾತಫಲಂ ಭವತಿ ಇತಿ ಉಕ್ತಂ ಇತಿ ಸ್ವಾಭಿಪ್ರಾಯಂ ಪ್ರಕಟಿತವಾನ್ ಉದ್ದಾಲಕಃ ಇತ್ಯರ್ಥಃ. – ಶ್ರೀ ರಾಯರ** *ಖಂಡಾರ್ಥ* **)**

**ಅರ್ಥ:–** ಮಗು, ಯಾವ ರೀತಿ ಒಂದು ಮಣ್ಣಿನ ಹೆಂಟೆಯನ್ನು ತಿಳಿದುಕೊಂಡಾಗ ಮಣ್ಣಿನಿಂದ ಮಾಡಿದ ಪದಾರ್ಥಗಳೆಲ್ಲ ಮಣ್ಣಿನಿಂದ ಮಾಡಿದವುಗಳೆಂದು (ಯಾರು ಹೇಳದಿದ್ದರೂ ತಾನೇ ತಾನಾಗಿಯೇ) ತಿಳಿಯುವದೋ, ಹಾಗೆಯೇ ಪ್ರಧಾನನಾದ ಪರಮಾತ್ಮನೊಬ್ಬನನ್ನು ಅವನ ಸತ್ಯತ್ವಾದಿ ಗುಣಗಳ ಸಹಿತವಾಗಿ ತಿಳಿಯುವದರಿಂದ ಸತ್ಯತ್ವ ಪ್ರಾಮಾಣಿಕತ್ವಾದಿ ಗುಣಗಳ ಸಾದೃಶ್ಯದಿಂದ ಅಪ್ರಧಾನವಾದ ಜಗತ್ತೂ ಕೂಡ ತಿಳಿಯಲ್ಪಡುವದು. (ಇದು ಮೇಲೆ ಉದಾಹೃತವಾದ ವಾಕ್ಯದಲ್ಲಿ ಇರದಿದ್ದರೂ ಸಂದರ್ಭವನ್ನು ಗಮನಿಸಿ ವಾಕ್ಯವನ್ನು ಈ ರೀತಿ ಪೂರ್ತಿ ಮಾಡಬೇಕು.)

Rarest Archiver

ಪ್ರಧಾನಜ್ಞಾನದಿಂದ ಅಪ್ರಧಾನವಾದುದು ತಿಳಿದಂತೆಯೇ ಸರಿ ಎಂಬ ವಿಷಯಕ್ಕೆ ಇನ್ನೊಂದು ದೃಷ್ಟಾಂತವನ್ನೂ ಕೊಟ್ಟು ವಿವರಿಸುತ್ತಿದ್ದಾರೆ. **ಸೋಮ್ಯ,** ಎಲೈ ಮಗುವೇ, **ವಾಚಾ** ವಾಗಿಂದ್ರಿಯದಿಂದ **(ನಾಮ್ನಾಂ)** ಸಂಸ್ಕೃತೇತರ ಭಾಷೆಗಳಲ್ಲಿಯ ಶಬ್ದಗಳ **ಆರಂಭಣಂ** ಉಚ್ಚಾರಣೆಯು **ವಿಕಾರಃ** ಉತ್ಪಾದನೆಯು ( ಅಂದರೆ ಸಂಸ್ಕೃತ ಶಬ್ದಗಳು ತಾನೇ ತಾನೆ ಅಭಿವ್ಯಕ್ತವಾದಂತೆ ಅಭಿವ್ಯಕ್ತಿಯಲ್ಲ, ಉಳಿದ ಭಾಷೆಗಳ ಶಬ್ದಗಳು ಸಂಸ್ಕೃತ ಭಾಷೆಯಿಂದ ಹುಟ್ಟಿದವುಗಳು, ಅಂದರೆ ಅವುಗಳ ವಿಕಾರ,) **ಮೃತ್ತಿಕಾ ಇತಿ** ಮೃತ್ತಿಕಾ ಇತ್ಯಾದಿಯಾದ **ನಾಮಧೇಯಂ ಏವ** ಸಂಸ್ಕೃತಪದವೇ **ಸತ್ಯಂ** ನಿತ್ಯವಾಗಿರುವದರಿಂದ ಪ್ರಧಾನವು. (ಅಂದರೆ ಸಂಸ್ಕೃತೇತರಭಾಷೆಗಳ ಪದಗಳು ವಿಕಾರವಾಗಿರುವದರಿಂದ ಅನಿತ್ಯವಾದಂಥವುಗಳು, ಆ ಕಾರಣವೇ ಅವು ಅಪ್ರಧಾನ). ಹೀಗಿರುವದರಿಂದ ಪ್ರಧಾನವಾದ ಸಂಸ್ಕೃತಪದಗಳ ಜ್ಞಾನದಿಂದ ಸಂಸ್ಕೃತಪದಗಳಿಂದ ಹುಟ್ಟಿದ ಅತ ಏವ ಅಪ್ರಧಾನವಾದ ಇತರ ಭಾಷಾಪದಗಳ ಅಭಿಪ್ರಾಯ ತಿಳಿದಂತೆಯೇ. ಅದೇ ರೀತಿ ಪ್ರಧಾನನಾದ ಪರಮಾತ್ಮನೊಬ್ಬನನ್ನು ತಿಳಿದಾಗ ಅವನ ಸತ್ಯತ್ವ, ಪ್ರಾಮಾಣಿಕತ್ವರೂಪಗುಣಗಳ ಸಾದೃಶ್ಯವಿರುವದರಿಂದ ಅವನಿಂದ ಸೃಷ್ಟವಾದ ಅಪ್ರಧಾನವಾದ ಕರ್ಮದೇವತಾದಿ ಜಗತ್ತೆಲ್ಲ ತಿಳಿದಂತೆಯೇ ಆಗುವದು.

**ವಿಶೇಷ ವಿಷಯಗಳು :–** ಉದ್ದಾಲಕರು ತಮ್ಮ ಮಗ ಶ್ವೇತಕೇತುವು ಹನ್ನೆರಡು ವರ್ಷ ಗುರುಕುಲವಾಸ ಮಾಡಿ ತಿರುಗಿ ಬಂದು ಅವಿನೀತನಾಗಿ ವರ್ತಿಸುತ್ತಿರು–ವದನ್ನು ಕಂಡು ಅವನನ್ನು ದಾರಿಗೆ ತರಬೇಕೆಂದು 'ಯಾವುದೊಂದನ್ನು ತಿಳಿದರೆ ಎಲ್ಲವೂ ತಿಳಿಯುವದೋ ಅಂಥ ಪರಮಾತ್ಮನನ್ನು ತಿಳಿದಿರುವಿಯಾ? ಎಂದು ಪ್ರಶ್ನೆ ಮಾಡಿದರು. ಒಂದನ್ನು ತಿಳಿದುಕೊಡರೆ ಇನ್ನೊಂದು ಹೇಗೆ ತಿಳಿಯಲ್ಪಡುವದು ಎಂದು ಶ್ವೇತಕೇತುವು ತನ್ನ ತಂದೆಯನ್ನು ಪ್ರಶ್ನೆ ಮಾಡಿದ್ದನು. ಈ ಪ್ರಶ್ನೆಗೆ ಸತ್ಯತ್ವ ಪ್ರಾಮಾಣಿಕತ್ವರೂಪ ಸಾದೃಶ್ಯವಿರುವದರಿಂದಲೇ ಪ್ರಧಾನವಾದ ಪರಮಾತ್ಮನನ್ನು ತಿಳಿದಾಗ ಅಪ್ರಧಾನವಾದ ಜಗತ್ತೂ ಕೂಡ ತಿಳಿಯಲ್ಪಡುವದು ಎಂದು ದೃಷ್ಟಾಂತ ರೂಪೇಣ ಉದ್ದಾಲಕರು ವಿವರಿಸಿದರು ಎಂದು ತಿಳಿಯಬೇಕು.ಇದಕ್ಕೆ ಒಟ್ಟು ಆರು ದೃಷ್ಟಾಂತಗಳನ್ನು ಕೊಟ್ಟು ವಿವರಿಸಿದರು. ಉದಾಹೃತವಾದ ಈ ಶ್ರುತಿ ವಾಕ್ಯದಲ್ಲಿ ಎರಡು ದೃಷ್ಟಾಂತಗಳು ಹೇಳಲ್ಪಟ್ಟಿವೆ. ಒಂದು ದೃಷ್ಟಾಂತ ಒಂದು ಮಣ್ಣಿನ ಹೆಂಟೆಯ ಜ್ಞಾನದಿಂದ ಉಳಿದ ಮಣ್ಣಿನ ವಸ್ತುಗಳಲ್ಲಿರುವದೂ ಕೂಡ ಮಣ್ಣೇ ಎಂದು ತಿಳಿಯುವಂತೆ ಎಂಬುದು. ಇನ್ನೊಂದು ದೃಷ್ಟಾಂತ ನಿತ್ಯವಾದ ಸಂಸ್ಕೃತ ಪದದ ಜ್ಞಾನದಿಂದ ಆ ಪದದಿಂದ ಹುಟ್ಟಿದ ಸಂಸ್ಕೃತೇತರ ಭಾಷೆಗಳಲ್ಲಿಯ ಪದದ ಜ್ಞಾನ. ಮೊದಲಿನದು ನಿತ್ಯವಾಗಿರುವದರಿಂದ ಪ್ರಧಾನ, ಇನ್ನೊಂದು ವಿಕಾರವಾಗಿರುವದರಿಂದ ಅಂದರೆ ಅನಿತ್ಯವಾಗಿರುವದರಿಂದ ಅಪ್ರಧಾನ. ಅದೇ ರೀತಿ ಪ್ರಧಾನನಾದ ಪರಮಾತ್ಮನ

Rarest Archiver

ಜ್ಞಾನದಿಂದ ಸತ್ಯತ್ವ ಪ್ರಾಮಾಣಿಕತ್ವರೂಪ ಸಾದೃಶ್ಯಜ್ಞಾನದಿಂದ ಅಪ್ರಧಾನವಾದ ಜಗತ್ತಿನ ಜ್ಞಾನವೂ ಅಗುವದು. ಕಾರಣ, ಅಂಥ ಪ್ರಧಾನದ ಜ್ಞಾನ ಪಡೆಕೊಂಡಿರು-ವಿಯಾ ಎಂಬ ಹಾರ್ದ ಉದ್ದಾಲಕರು ತಮ್ಮ ಮಗನಿಗೆ ಕೇಳಿದ ಪ್ರಶ್ನೆಯಲ್ಲಿ ಇದ್ದಿತೆಂದು ತಿಳಿಯಬೇಕು. ಪ್ರಧಾನವಾದ ಪರಮಾತ್ಮನ ಜ್ಞಾನದಿಂದ ಅಪ್ರಧಾನವಾದ ಕರ್ಮ ದೇವತಾದಿ ಜ್ಞಾನವೂ ಕೂಡ ಆಗುವದೆಂದು ತಾತ್ಪರ್ಯ.

ಶ್ರೀ ರಾಯರು ಈ ಉಪನಿಷತ್ತಿನ ತಮ್ಮ *ಖಂಡಾರ್ಥ*ದಲ್ಲಿ *ಅನುವ್ಯಾಖ್ಯಾನ ಸುಧಾ*ಗಳಲ್ಲಿ **ವಾಚಾರಂಭಣಂ** ಎಂಬ ಪದವು ಬಹುವ್ರೀಹಿಸಮಾಸದ ಪದವಾಗಿದೆ ( ವಾಚಾ ಆರಂಭಣಂ ಯಸ್ಯ ತತ್ ವಾಚಾರಂಭಣಂ) ಎಂದು ಹೇಳಲಾಗಿದೆ ಎಂದು ವಿವರಿಸಿದ್ದಾರೆ. ಇದು **ನಾಮಧೇಯಂ** ಎಂಬ ಪದಕ್ಕೆ ವಿಶೇಷಣವಾಗಿದೆ. **ವಾಚಾ-ರಂಭಣಂ ನಾಮಧೇಯಂ** ವಾಗಿಂದ್ರಿಯದಿಂದ ಉಚ್ಚರಿತವಾದ ಅದಕ್ಕೇನೇ ಅನಿತ್ಯ-ವಾಗಿರುವ, ಕಾರಣವೇ ಅಪ್ರಧಾನವಾಗಿರುವಂತಹದು ಭಾಷಾಶಬ್ದ. ಮೃತ್ತಿಕಾ ಇತ್ಯಾದಿ ವೈದಿಕ ಪದ ಮಾತ್ರ ಸತ್ಯವು, ನಿತ್ಯವು, ಕಾರಣವೇ ಪ್ರಧಾನವು. ಇಂಥ ಪ್ರಧಾನ-ವಾದುದನ್ನು ತಿಳಿದರೆ ಅಪ್ರಧಾನವಾದುದರ ಜ್ಞಾನವಾದಂತೆಯೇ.

**ಶ್ರೀಮದ್ವಿಷ್ಣುತತ್ತ್ವವಿನಿರ್ಣಯದಲ್ಲಿ ಈ ವಾಕ್ಯದ ಪ್ರಸಕ್ತಿ ಹೀಗೆ.**

ಪ್ರಧಾನಜ್ಞಾನದಿಂದ ಅಪ್ರಧಾನವಾದುದರ ಜ್ಞಾನವಾಗುವದು ಎಂಬ ಬಗ್ಗೆ ಲೋಕದಲ್ಲಿ ಅನೇಕ ದೃಷ್ಟಾಂತಗಳನ್ನು ಹೇಳಬಹುದು. ಈ ವಿಷಯಕ್ಕೆ ಆಚಾರ್ಯರೇ ದೃಷ್ಟಾಂತಗಳನ್ನು ಕೊಟ್ಟಿದ್ದಾರೆ. ಉದಾಹರಣೆಗೆ, ಒಂದು ಊರಿನ ಗೌಡನಿಗೆ ಇನ್ನೊಂದು ಊರಿನ ಉತ್ಸವಕ್ಕೆ ಆಮಂತ್ರಣವಿದ್ದರೆ ನಮ್ಮ ಊರಿಗೆ ಆಮಂತ್ರಣ ಬಂದಿದೆ ಎಂದು ಜನರು ಹೇಳುವ ವಾಡಿಕೆ ಇದೆ. ಅದೇ ರೀತಿ, ಮಗನ ಬಗ್ಗೆ ತಿಳಿದುಕೊಳ್ಳುವದರ ಸಲುವಾಗಿ ಅವನಿಗೆ ಜನ್ಮ ಕೊಟ್ಟು ನಿಮಿತ್ತ ಕಾರಣನಾದ ತಂದೆಯ ಬಗ್ಗೆ ತಿಳಿದುಕೊಳ್ಳುವ ಕ್ರಮವಿದ್ದು ‘ ಒ! ಅವನೇ! ಅವನು ಇಂಥವನ ಮಗನು !' ಎಂದು ಮಗನ ಬಗ್ಗೆ ತಿಳಿಸುವ ಕ್ರಮವಿದೆ. ಅದೇ ರೀತಿ, ಪ್ರಧಾನನಾದ ಸೇನಾಪತಿಯು ಯುದ್ಧದಲ್ಲಿ ಕೊಲ್ಲಲ್ಪಟ್ಟರೆ ಇಡೀ ಸೇನೆಯೇ ತಾವು ಸೋತೆವೆಂದು ಓಡಿ ಹೋಗುವದು ಕಂಡು ಬರುವದು. ಒಬ್ಬ ಸ್ತ್ರೀಯನ್ನು ನೋಡಿದಾಗ ಸಾದೃಶ್ಯದಿಂದ ಇನ್ನೊಬ್ಬ ವ್ಯಕ್ತಿಯೂ ಇವಳು ಸ್ತ್ರೀ ಎಂಬ ತಿಳುವಳಿಕೆ ಬರುವದು. ಹೀಗೆ, ಪ್ರಧಾನವಾದುದರ ಬಗ್ಗೆ ತಿಳುವಳಿಕೆ, ಅಥವಾ ಪೂಜನ ಇತ್ಯಾದಿಗಳಿಂದ ಅಪ್ರಧಾನವಾದುದರ ತಿಳುವಳಿಕೆ, ಪೂಜನ, ಇತ್ಯಾದಿಗಳು ಸಂಭವಿಸಿದಂತೆಯೇ ಎಂದು ಗ್ರಹಿಸುವದು ವ್ಯವಹಾರದಲ್ಲಿ ಕಂಡು ಬರುವದು. ಮತ್ತು ಕಾರಣದ ಜ್ಞಾನವಾದಾಗ ಕಾರ್ಯದ ಜ್ಞಾನವಾದುದು ಕಂಡುಬಂದಿದೆ ( ತಂದೆ ಮಗನ ದೃಷ್ಟಾಂತದಿಂದ). ಸಾದೃಶ್ಯದಿಂದಲೂ ಕೂಡ ಒಂದು ವಸ್ತುವಿನ ಜ್ಞಾನದಿಂದ ಇನ್ನೊಂದು ವಸ್ತುವಿನ ಜ್ಞಾನವಾದುದು ಕಂಡು

Rarest Archiver

ಬಂದಿದೆ. ಅಂತು, ಪ್ರಾಧಾನ್ಯ, ಕಾರಣ ಮತ್ತು ಸಾದೃಶ್ಯಗಳ ಆಧಾರದ ಮೇಲೆ ಒಂದರ ಜ್ಞಾನದಿಂದ ಇನ್ನೊಂದರ ಜ್ಞಾನವಾಗುವದು ಎಂದು ಇದ್ದಾಗ ಆಕ್ಷೇಪಕ್ಕೆ ಅವಕಾಶವಿಲ್ಲ. ಉದ್ದಾಲಕರು ಈ ಅಭಿಪ್ರಾಯದಿಂದಲೇ **ಯೇನ ಅಶ್ರುತಂ ಶ್ರುತಂ ಭವತಿ ಅಮತಂ ಮತಂ ಅವಿಜ್ಞಾತಂ ವಿಜ್ಞಾತಂ** ಎಂದು ಹೇಳಿದರು.

ಆಚಾರ್ಯರ ಈ ಪ್ರಕ್ರಿಯೆಯನ್ನು ಪರಕೀಯರು ಒಪ್ಪುವದಿಲ್ಲ. ಅವರು ಈ ರೀತಿ ಆಕ್ಷೇಪಿಸುತ್ತಾರೆ. ಪ್ರಧಾನನಾದ ರಾಜನ ಜ್ಞಾನವಾದರೆ ಅಪ್ರಧಾನನಾದ ಭೃತ್ಯನ ಜ್ಞಾನವೆಲ್ಲಿ ಆಗುವದು? ಕಾರಣನಾದ ಕುಂಬಾರನ ಜ್ಞಾನವಾದಾಗ ಮಡಿಕೆಯ ಜ್ಞಾನವಾಗುವದಿಲ್ಲ. ಅದೇ ರೀತಿ ಮನೆಯಲ್ಲಿ ಕಟ್ಟಿದ ಆಕಳಿನ ಜ್ಞಾನವಾದರೆ ಕಾಡಾಕಳಿನ ಜ್ಞಾನವು ಹೇಗೆ ಆಗುವದು? ( ಕಾಡಾಕಳನ್ನು ನೋಡಲು ಅಡವಿಗೋ ಪ್ರಾಣಿಸಂಗ್ರಹಾಲಯಕ್ಕೋ ನಾವು ಹೋಗುವದಿಲ್ಲವೇ?). ಕಾರಣ, ಶ್ರುತಿಯಲ್ಲಿ ಹೇಳಿದ ಮಣ್ಣಿನ ಹೆಂಟೆ, ಲೋಹಮಣಿ ಮತ್ತು ಕತ್ತರಿಯ ದೃಷ್ಟಾಂತಗಳು ಪ್ರಾಧಾನ್ಯ, ಕಾರಣ ಮತ್ತು ಸಾದೃಶ್ಯಗಳನ್ನು ಸೂಚಿಸುವದಿಲ್ಲ. ಆದರೆ ಅವು ಜಗತ್ತು ಬ್ರಹ್ಮನ ವಿಕಾರ ( ಮಣ್ಣಿನಿಂದ ಗಡಿಗೆಯಾಗುವಂತೆ) ಅಥವಾ ಜಗತ್ತು ವಿವರ್ತ (ಸಿಂಪೇ ಭ್ರಮದಲ್ಲಿ ಬೆಳ್ಳಿಯೆಂದು ಕಾಣುವಂತೆ) ಎಂದು ಸೂಚಿಸುವವು. ಇದು ಪರಕೀಯರ ಆಕ್ಷೇಪದ ಸಾರ. ಇದು ಪರಿಣಾಮವಾದಿಗಳು ಹಾಗೂ ವಿವರ್ತವಾದಿಗಳ ಆಕ್ಷೇಪ. (ಶ್ರೀ ವ್ಯಾಸತತ್ವಜ್ಞರ *ಲಘುಪ್ರಭಾ ಟಿಪ್ಪಣಿಯು* ಇದನ್ನು ಸ್ಪಷ್ಟವಾಗಿ ವಿವರಿಸಿದೆ).

ಈ ಆಕ್ಷೇಪವನ್ನು ವಿಮರ್ಶಿಸುತ್ತ ಶ್ರೀಮದಾಚಾರ್ಯರು ಹೇಗೆ ಉತ್ತರ ಕೊಟ್ಟಿದ್ದಾರೆಂಬುದು ಟೀಕೆಯಿಂದ ತಿಳಿಯುವದು. ಈ ವಿಮರ್ಶೆಯ ಸಾರಾಂಶ ಹೀಗೆ:–

ಜಗತ್ತು ಪರಿಣಾಮ ಎಂದು ಹೇಳಲು ಈ ದೃಷ್ಟಾಂತ ಹೊರಟಿದ್ದರೆ ಶ್ರುತಿಯಲ್ಲಿಯ ಕೆಲ ಪದಗಳಿಗೆ ವೈಯರ್ಥ್ಯ ಬರುತ್ತಿದ್ದಿತು. ಶ್ರುತಿಯಲ್ಲಿ **ಏಕೇನ ಮೃತ್ಪಿಂಡೇನ** ಎಂದು ಹೇಳಿದೆ. ಸಾದೃಶ್ಯವನ್ನು ಹೇಳುವ ಅಭಿಪ್ರಾಯವಿರದಿದ್ದರೆ ಇಲ್ಲಿಯ **ಏಕ** ಶಬ್ದ ಹಾಗೂ **ಪಿಂಡ** ಶಬ್ದಗಳು ವ್ಯರ್ಥವಾಗುತ್ತಿದ್ದವು. **ಮೃದಾ ವಿಜ್ಞಾತಯಾ–** ಮಣ್ಣನ್ನು ತಿಳಿದರೆ ಮಣ್ಣಿನ ವಿಕಾರವಾದ ಗಡಿಗೆಯನ್ನೂ ತಿಳಿದಂತೆಯೇ ಎಂದು ಹೇಳಬಹುದಾಗಿತ್ತು. ಮಣ್ಣಿನ ವಿಕಾರಗಳಾದ ಅನೇಕ ಗಡಿಗೆಗಳು ಒಂದೇ ಒಂದು ಮಣ್ಣಿನ ಹೆಂಟೆಯ ವಿಕಾರಗಳಲ್ಲವಷ್ಟೆ ! ಇದರಂತೆಯೆ ಇನ್ನುಳಿದ ದೃಷ್ಟಾಂತಗಳಲ್ಲಿಯೂ ಕೂಡ ಏಕ ಪದವೂ ವ್ಯರ್ಥವಾಗುತ್ತಿತ್ತು. ಅಲ್ಲದೆಯೆ, ವಿಕಾರವನ್ನು ಹೇಳಲು ಒಂದು ಮಣ್ಣಿನ ಹೆಂಟೆಯ ದೃಷ್ಟಾಂತ ಸಾಕಾಗುತ್ತಿತ್ತು. ಒಟ್ಟು ಮೂರು ದೃಷ್ಟಾಂತಗಳನ್ನು ಏಕೆ ಹೇಳಿದರು ಎಂಬ ಪ್ರಶ್ನೆಯೂ ಬರುವದು. ಸಾದೃಶ್ಯವನ್ನು ಹೇಳುವದಕ್ಕೂ ಮೂರು ದೃಷ್ಟಾಂತಗಳೇಕೆ ಎಂದು ಕೇಳಬಹುದು. ಇಲ್ಲಿ ಇನ್ನೂ ಹೆಚ್ಚಿನ ವಿಷಯ ಹೇಳುವದಕ್ಕಾಗಿ ( ವಿವಕ್ಷಾಭೇದ) ಮೂರು

Rarest Archiver

ದೃಷ್ಟಾಂತಗಳು ಎಂದು ಶ್ರೀಮದಾಚಾರ್ಯರು ಇನ್ನೊಂದು ಕಡೆಗೆ ವಿವರಿಸಿದ್ದಾರೆಂದು ಶ್ರೀ ಟೀಕಾಕೃತ್ಪಾದರು ಸೂಚಿಸಿದ್ದಾರೆ. ಈ ವಿವರಣೆ ಎಲ್ಲಿದೆ ಹಾಗೂ ಹೇಗೆ ಎಂಬುದನ್ನು ಟಿಪ್ಪಣೀಕಾರರು ವಿವರಿಸಿದ್ದಾರೆ. ಛಾಂದೋಗ್ಯಭಾಷ್ಯದಲ್ಲಿ ಶ್ರೀಮದಾಚಾರ್ಯರ ವಾಕ್ಯ ಇಂತಿದೆ; '**ಯಥಾ ಮೃತ್ಪಿಂಡವಿಜ್ಞಾನಾತ್ಸಾದೃಶ್ಯಾದೇವ ಮೃನ್ಮಯಾಃ । ವಿಜ್ಞಾಯಂತೇ ತಥಾ ವಿಷ್ಣೋಃ ಸಾದೃಶ್ಯಾಜ್ಜಗದೇವ ಚ ॥ ಯಥಾ ಸ್ವರ್ಣಸ್ಯ ವಿಜ್ಞಾನಾತ್ಸರ್ವೇ ಲೋಹಮಯಾಸ್ತಥಾ । ಪ್ರಾಧಾನ್ಯಾದ್ವಿಷ್ಣುವಿಜ್ಞಾನಾದ್ವಿಜ್ಞಾತಂ ಸ್ಯಾಜ್ಜಗತ್ಸದಾ ॥ ಅತ್ಯಲ್ಪೇಽಪಿ ಹಿ ವಿಜ್ಞಾತೇ ಸದೃಶಂ ತಾದೃಶಂ ಬಹು । ಜ್ಞಾಯತೇ ನಖಕೃಂತನ್ಯಾ ಯಥಾ ಸರ್ವಮಯೋಮಯಮ್ ॥ ಕಿಮು ವಿಷ್ಣೋರ್ಬಹೋರ್ಜ್ಞಾನಾದತ್ಯಲ್ಪಂ ಜಗದೀದೃಶಮ್ ॥**– *ಛಾಂ. ಭಾ. ೬.೧..೧– ೫.* ಇಲ್ಲಿಯ ಅಭಿಪ್ರಾಯವನ್ನು ಈ ಕೆಳಗಿನಂತೆ **ದರ್ಶಿಕೆಯ ಮುಖಾಂತರ ವಿವರಿಸಬಹುದು**

| **ದೃಷ್ಟಾಂತ** | **ಸಾದೃಶ್ಯದಲ್ಲಿಯೇ ಅವಾಂತರ ಭೇದದ ಬಗ್ಗೆ ಆಚಾರ್ಯರ ವಿವಕ್ಷೆಯ ವಿವರಣೆ** |
|---|---|
| ೧. ಮೃತ್ಪಿಂಡ | ಸದೃಶಮಾತ್ರಜ್ಞಾನದಿಂದ ಸದೃಶಮಾತ್ರ ಜ್ಞಾನವಾಗುವದು. |
| ೨. ಲೋಹಮಣಿ | ಪ್ರಧಾನಸದೃಶಜ್ಞಾನದಿಂದ ಅಪ್ರಧಾನಸದೃಶ ಜ್ಞಾನ |
| ೩. ಕತ್ತರಿ | ಅಲ್ಪಸದೃಶಜ್ಞಾನದಿಂದ ಮಹಾಸದೃಶಜ್ಞಾನ. ಹೀಗಿರುವಾಗ ಬಹು ಜ್ಞಾನದಿಂದ ಅಲ್ಪದರ ಜ್ಞಾನವಗುವದೆಂದು ಪ್ರತ್ಯೇಕ ಏನು ಹೇಳುವದು ಎಂದು ಕೈಮುತ್ಯದ ವಿವಕ್ಷೆ |

( ಶ್ರೀ ಶ್ರೀನಿವಾಸತೀರ್ಥರ ಟಿಪ್ಪಣಿಯನ್ನನುಸರಿಸಿ ಈ ದರ್ಶಿಕೆಯನ್ನು ಸಿದ್ಧಪಡಿಸಲಾಗಿದೆ.)

ಶ್ರೀ ವ್ಯಾಸತತ್ವಜ್ಞತೀರ್ಥರು ತಮ್ಮ *ಲಘುಪ್ರಭಾ ಟಿಪ್ಪಣಿಯಲ್ಲಿ* ಶ್ರೀಮದಾಚಾರ್ಯರ ವಿವಕ್ಷಾಭೇದವು ***ಸಾಮಸಂಹಿತೆಯ*** ಪ್ರಮಾಣದ ಆಧಾರದ ಮೇಲೆ ಹೇಳಲ್ಪಟ್ಟಿದೆ ಎಂದು ಸ್ಪಷ್ಟಪಡಿಸಿದ್ದಾರೆ. ಆಚಾರ್ಯರು ಉದಾಹರಿಸಿದ ಪ್ರಮಾಣವು ಸಾಮಸಂಹಿತೆಯ ವಾಕ್ಯವೆಂದು ಆಕರ ಕೊಟ್ಟದ್ದು ಪ್ರಕಾಶಿತವಾದ ಟಿಪ್ಪಣಿಗಳ ಪೈಕಿ ಕೇವಲ *ಲಘುಪ್ರಭಾ ಟಿಪ್ಪಣಿಯಲ್ಲಿ* ಮಾತ್ರ ಎಂಬುದನ್ನು ಗಮನಿಸ-ಬೇಕು. ಆಚಾರ್ಯರು ಬೇರೆಡೆಗೆ ಎಲ್ಲಿ ವಿವರಿಸಿದ್ದಾರೆ ಎಂಬುದನ್ನು ಶ್ರೀ ವ್ಯಾಸತತ್ವಜ್ಞರು *ಅನುವ್ಯಾಖ್ಯಾನದಲ್ಲಿ* ಎಂದು ಹೆಚ್ಚಿನ ವಿಷಯವನ್ನು ಸೂಚಿಸಿದ್ದಾರೆ. '**ಅತಃ ಸಾದೃಶ್ಯ ಏವ ಚ । ವಿವಕ್ಷಾತ್ರ ತು ನಿತ್ಯತ್ವೇ ಪ್ರಾಧಾನ್ಯೇ ಚೋಕ್ತವರ್ತ್ಮನಾ ॥** *ಅನುವ್ಯಾಖ್ಯಾನ* ೧–೪–೨೪ ರಿಂದ ೨೬ (ಪ್ರಕೃತ್ಯಧಿಕರಣ) ಹಾಗೂ ೧–೪–೨೯ (ಏತೇನ ಸರ್ವೇ

Rarest Archiver

ವ್ಯಾಖ್ಯಾತಾಧಿಕರಣ) ದ ಅನುವ್ಯಾಖ್ಯಾನದ ವಾಕ್ಯಗಳು. ಈ ಶ್ಲೋಕಗಳ ಸಂಪೂರ್ಣ ಪಾಠವಿಂತಿದೆ. **ವಾಚಾರಂಭಣಮಿತ್ಯುಕ್ತೇ ಮಿಥ್ಯೇತ್ಯಶ್ರುತಕಲ್ಪನಮ್। ಪುನರುಕ್ತಿರ್ನಾಮಧೇಯಮಿತೀತ್ಯಸ್ಯ ನಿರರ್ಥತಾ । ಏಕಃ ಪಿಂಡೋ ಮಣಿಶ್ಚೇತಿ ಪದವೈಯರ್ಥ್ಯಮೇವ ಚ । ವಿಕಾರಿತ್ವವಿವಕ್ಷಾಯಾಂ ನ ಚೈಕ ನಖಕೃಂತನಮ್ ॥ ಸರ್ವಂ ಕಾರ್ಷ್ಣಾಯಸಂ ಚ ಸ್ಯಾದತಃ ಸಾದೃಶ್ಯ ಏವ ಚ ॥ ವಿವಕ್ಷಾತ್ರ ತು ನಿತ್ಯತ್ವೇ ಪ್ರಾಧಾನ್ಯೇ ಚೋಕ್ತವರ್ತ್ಮನಾ ॥ ಪ್ರಾಧಾನ್ಯಪ್ರತಿಪತ್ತ್ಯರ್ಥಂ ಸೃಷ್ಟ್ಯಾದೇಶ್ಚೈಷವಿಸ್ತರಃ ॥** *ಅನು ವ್ಯಾ. ೪೨೭-೨೮, ೪೩೦.*

*ಅಂತು,* ವಿಷ್ಣುವು ಪ್ರಧಾನನಾಗಿದ್ದಾನೆ. ಅವನಿಗೆ ಸದೃಶವಾದ ಜಗತ್ತು ಅಮುಖ್ಯ. ಪ್ರಧಾನದರ ಜ್ಞಾನದಿಂದ ಪ್ರಧಾನದ ಸದೃಶವಿರುವ ಅಪ್ರಧಾನವಾದ ವಸ್ತುವಿನ ಜ್ಞಾನವಾದುದು ಲೋಕದಲ್ಲಿ ದೃಷ್ಟಾಂತಗಳಿಂದ ಕಂಡು ಬರುವದರಿಂದ ಅತಿ ಪ್ರಧಾನವಾದ ವಿಷ್ಣು-ಬ್ರಹ್ಮನ ಜ್ಞಾನವಾದರೆ ಅಪ್ರಧಾನವಾದ ಜಗತ್ತಿನ ಜ್ಞಾನವಾಗುವದೆಂದು ವಿವರಿಸುವ ಸಂದರ್ಭದಲ್ಲಿ ಶ್ರೀಮದಾಚಾರ್ಯರು ಈ ಶ್ರುತಿಯನ್ನು ಉದಾಹರಿಸಿ ಸಮರ್ಪಕವಾದ ವಿವರಣೆ ಕೊಟ್ಟಿದ್ದಾರೆ. ಈ ವಿವರಣೆಯ ಒಟ್ಟು ಫಲವೆಂದರೆ ಯಾವ ಶ್ರುತಿಯಲ್ಲಿಯೂ ಕೂಡ ಜಗತ್ತಿಗೆ ಮಿಥ್ಯಾತ್ವವನ್ನು ಹೇಳಲಿಲ್ಲ ಹಾಗೂ ಎಲ್ಲಿಯೂ ಜೀವ ಬ್ರಹ್ಮೈಕ್ಯವನ್ನು ಹೇಳಿಲ್ಲ, ಕಾರಣ ಶ್ರುತ್ಯರ್ಥವನ್ನು ಜಗನ್ಮಿಥ್ಯಾರ್ಥಪರವಾಗಿಯಾಗಲಿ ಜೀವಬ್ರಹ್ಮೈಕ್ಯಪರವಾಗಲಿ ಮಾಡಬಾರದು ಎಂಬುದು. ಶ್ರೀಮದ್ವಿಷ್ಣುತತ್ವವಿನಿರ್ಣಯದಲ್ಲಿ ಶ್ರೀಮದಾಚಾರ್ಯರು ವಾಚಾರಂಭಣಶ್ರುತಿಯ ಅರ್ಥ ವಿವರಿಸಿದ ಬಳಿಕ ಈ ಭಾಗದ ಕೊನೆಗೆ **ಅತೋ ನ ಕುತ್ರಾಪಿ ಜಗತೋ ಮಿಥ್ಯಾತ್ವಂ ಉಚ್ಯತೆ** ಎಂದು ಉಪಸಂಹಾರ ಮಾಡಿದ್ದಾರೆ ಇದರಿಂದ ಈ ಶ್ರುತಿವಾಕ್ಯಗಳ ಒಟ್ಟು ತಾತ್ಪರ್ಯವೇನು ಎಂಬುದು ಸೂಚಿತವಾಗುವದು.

ಅಂತು ಈ ಶ್ರುತಿಯ ಒಟ್ಟರ್ಥ *ಶ್ರುತ್ಯರ್ಥಷಟ್ಪದಿಯಲ್ಲಿ* ಹೀಗೆ :-

*ಒಂದು ತಿಳಿಯಲು ಎಲ್ಲ ತಿಳಿದಂ-*
*ತೆಂದಿರುವ ಆ ಒಂದ ನೀ ಮಗು*
*ಅಂದವಾಗಿಯೆ ಗುರುಗಳಿಂದಲಿ ತಿಳಿದು ಬಂದಿಹೆಯಾ ?*
*ಎಂದು ತಂದೆಗಳಂದು ಕೇಳಲು*
*ಒಂದು ತಿಳಿದರದೆಂತು ಎಲ್ಲವು*
*ಅಂದವಾಗಿಯೆ ತಿಳಿವುದೆಂಬುದ ತಿಳಿಸಿ ಎಂದ ಮಗ. ॥ ॥*

*ಒಂದು ಮಣ್ಣಿಂಟೆಯನು ತಿಳಿದದ-*
*ರಂದದೋಳಿಹ ಮಡಿಕೆಮೃತ್ತಿಕೆ*
*ಚಂದ ತಿಳಿವುದು, ಮೂಲ ಸಂಸ್ಕೃತಪದವನರಿತವಗೆ*

Rarest Archiver

*ಮುಂದೆ ಬಂದಿಹ ಭಾಷೆಪದಗಳ*
*ಆಂದ ಭಾವವು ತಿಳಿವ ಪರಿಯಿಂ–*
*ದಂದ ದೇವನ ಜಗದ ತಂದೆಯ ತಿಳಿವುದೆಂದಿಹರು. // //*

*ಚಿನ್ನ ಗಟ್ಟಿಯ ಮೇಲ್ಮೆ ತಿಳಿದಗೆ*
*ಚಿನ್ನ ತಿಳಿವುದು ಚಿನ್ನದೊಡವೆಯ*
*ಚಿನ್ನವನ್ಯವು ಚಿನ್ನವಿರದೆಂದೆಂದು ನೋಡಲ್ಕೆ.*
*ಚಿಣ್ಣ, ಅಂತೆಯೆ ಸರುವ ಮುಖ್ಯನ*
*ಸನ್ನುತಾತ್ಮನ ತಿಳಿಯೆ ಪೂಜಿಸೆ*
*ಅನ್ಯದೇವತೆ ತಿಳಿವು ಪೂಜೆಯ ಫಲವು ಲಭಿಸುವದು. // //*

*ಉಗುರುಗತ್ತರಿಉಕ್ಕನರಿದರೆ*
*ನೊಗದ ಉಕ್ಕನು ತಿಳಿಯಲಾಪೆವೆ?*
*ಜಗವು ತಿಳಿಯ್ದದೆ ಜಗವ ಪೊಟ್ಟೆಯಲಿಟ್ಟ ಹರಿ ತಿಳಿಯೆ?*
*ಆಗಣಿತಾತ್ಮನ ತಿಳಿಯದಿದ್ದರು*
*ನಗರೆ ತಿಳಿದಿಹೆನೆಲ್ಲವೆಂದರೆ,*
*ಬಿಗುವು ನಿನ್ನದು ಸಲ್ಲದೆಂದರು ಸುತಗೆ ತಂದೆಗಳು. // //*

*ವೇದರಾಶಿಯ ಆವ ಭಾಗದಿ*
*ಶೋಧಗೈದರು ಪೇಳಲಿಲ್ಲವು*
*ವೋದ ತಾರದ ಜಗದ ಮಿಥ್ಯಾತತ್ವ ಮತ್ತಿನ್ನು,*
*ಬೋಧ ಮಾಡಿದೆ ಸಕಲ ವೇದವು*
*ಬಾಧವಿಲ್ಲದ ಪಂಚ ಭೇದವ*
*ಮೋದತೀರ್ಥರು ಪೇಳ್ದರೀ ಮತವಿದನ ತಿಳಿಯುವುದು.// //*

**೪೪. ಕವಿರ್ಮನೀಷೀ ಪರಿಭೂಃ ಸ್ವಯಂಭೂಃ ಯಾಥಾತಥ್ಯತೋ**
**ಅರ್ಥಾನ್ ವ್ಯದಧಾತ್ ಶಾಶ್ವತೀಭ್ಯಃ ಸಮಾಭ್ಯಃ । –**

*ಈಶಾವಾಸ್ಯೋಪನಿಷತ್, ಶ್ಲೋ. ೮.*

**ಅನ್ವಯ ಹಾಗೂ ಅರ್ಥ:– ಕವಿಃ** = ಸರ್ವಜ್ಞನಾದ, **ಮನೀಷೀ**=ಪ್ರಕೃತ್ಯಾದಿಗಳ ಮನೋನಿಯಾಮಕನಾದ, ಅಥವಾ ಬ್ರಹ್ಮಾದಿಸರ್ವರ ಮನೋನಿಯಾಮಕನಾದ **(ಬ್ರಹ್ಮಾದಿಸರ್ವಮನಸಾಂ ಪ್ರಕೃತೇರ್ಮನಸೋಽಪಿ ಚ । ಈಶಿತೃತ್ವಾನ್ಮನೀಷೀ** ........... .. .. ಇದು ಶ್ರೀಮದಾಚಾರ್ಯರು ಈಶಾವಾಸ್ಯಭಾಷ್ಯದಲ್ಲಿ ಈ ಸಂದರ್ಭದಲ್ಲಿ ಉದಾಹರಿಸಿದಂಥ ಪ್ರಮಾಣ.) **ಪರಿಭೂಃ**= ಸರ್ವರನ್ನು ನಿಗ್ರಹಿಸುವ, ಅಂದರೆ ಸರ್ವೋತ್ತಮನಾದ, **ಸ್ವಯಂಭೂಃ** = ತನಗೆ ತಾನೇ ಆಶ್ರಯನಾದ, ಅಂದರೆ ಸ್ವತಂತ್ರನಾದ, ಪರಮಾತ್ಮನು, **ಶಾಶ್ವತೀಭ್ಯಃ ಸಮಾಭ್ಯಃ**= ಎಲ್ಲ ಕಾಲಗಳಲ್ಲಿಯೂ **ಅರ್ಥಾನ್**= ಮಹದಾದಿತತ್ವಗಳನ್ನು, **ಯಾಥಾತಥ್ಯತಃ**= ಯಥಾರ್ಥವಾಗಿ, ಸತ್ಯ–

Rarest Archiver

ವಾಗಿಯೇ, **ವ್ಯದಧಾತ್**= ನಿರ್ಮಿಸಿದನು.

**ವಿವರಣೆ :–** ಈ ಮೊದಲು ಹೇಳಿದ ವಾಕ್ಯಗಳಿಂದ ಜಗವು ಮಿಥ್ಯೆ ಅಲ್ಲವೆಂದು ತಿಳಿದರೂ ಅದು ಸತ್ಯವೆಂದು ಎಲ್ಲಿ ಹೇಳಿದೆ ಎಂಬ ಶಂಕೆಗೆ ಶ್ರೀಮದಾಚಾರ್ಯರು ಸ್ಪಷ್ಟವಾದ ಶ್ರುತಿವಾಕ್ಯಗಳನ್ನು ಉದಾಹರಿಸಿದ್ದಾರೆ. ಆ ಶ್ರುತಿವಾಕ್ಯಗಳಲ್ಲಿಯ ಮೊದಲನೆಯ ವಾಕ್ಯವಿದು. ಇದರಲ್ಲಿ ಪರಮಾತ್ಮನು ಎಲ್ಲ ಕಾಲದಲ್ಲಿಯೂ ಕೂಡ ಸತ್ಯವಾದ ಸೃಷ್ಟಿಯನ್ನೇ ನಿರ್ಮಾಣ ಮಾಡಿದನೆಂದು ಸ್ಪಷ್ಟವಾಗಿ ಹೇಳಿದೆ.

ಇದರ ಭಾವವು ***ಶ್ರುತ್ಯರ್ಥಷಟ್ಪದಿ*** ಹೀಗೆ :–

*ಸರುವ ತಿಳಿದಿಹ ಪರಮಪುರುಷನು*
*ಸಿರಿಯು ಬ್ರಹ್ಮಾದಿಗಳ ಮನವನು*
*ನಿರುತ ತನ್ನಂಕಿತದೊಳಿಟ್ಟಿಹ ಸರುವರುತ್ತಮನು.*
*ಸರುವಕಾಶ್ರಯ ತನಗೆ ತಾನೇ*
*ನಿರುತವಾಶ್ರಯನಾಗಿ ಪರಮೇ–*
*ಶ್ವರನು ಜಗವನು ನಿರುತ ಖರೆಯಾಗಿಹುದ ಸೃಷ್ಟಿಸಿಹ. ॥*

೪೫. ಯಚ್ಚಿಕೇತ ಸತ್ಯಮಿತ್ತನ್ನ ಮೋಘಂ ವಸು ಸ್ಪಾರ್ಹಮುತ ಜೇತೋತ ದಾತಾ । ವಿಶ್ವಂ ಸತ್ಯಂ ಮಘವಾನಾ ಯುವೋರಿದಾಪಶ್ಚನ ಪ್ರಮಿನಂತಿ ವ್ರತಂ ವಾಮ್ । ಪ್ರಘಾನ್ವಸ್ಯ ಮಹತೋ ಮಹಾನಿ ಸತ್ಯಾ ಸತ್ಯಸ್ಯ ಕರಣಾನಿ ವೋಚಮ್ । –ಶ್ರುತಿ (?)

**ಪದಚ್ಛೇದ:–** ಯತ್ ಚಿಕೇತ ಸತ್ಯಮಿತ್ ತತ್ ನ ಮೋಘಂ ವಸು ಸ್ಪಾರ್ಹಂ ಉತ ಜೇತಾ ಉತ ದಾತಾ ವಿಶ್ವಂ ಸತ್ಯಂ ಮಘವಾನೌ ಯುವೋಃ ಇತ್ ಆಪಶ್ಚನ ಪ್ರಮಿನಂತಿ ವ್ರತಂ ವಾಂ ಪ್ರ ಘ ನು ಅಸ್ಯ ಮಹತೋ ಮಹಾನಿ ಸತ್ಯಾ ಸತ್ಯಸ್ಯ ಕರಣಾನಿ ವೋಚಮ್ ॥

**ಅನ್ವಯ:–** ಸ್ಪಾರ್ಹಂ (ಸ್ಪೃಹಣೀಯಂ) ವಸು (ಹವಿರಾದಿಕಂ ವಸು) ಜೇತೋತ (ಭಕ್ತೇಭ್ಯಃ ಜೇತೋತ ಪ್ರಾಪ್ತಾ ಅಪಿ) (ತಥಾ ತೇಭ್ಯಃ) ಸ್ಪಾರ್ಹಂ (ವಸುಫಲಂ) ದಾತೋತ (ದಾತಾ ಅಪಿ) (ಪರಮೇಶ್ವರಃ) ಯತ್ (ವಿಶ್ವಂ) ಚಿಕೇತ (ಚಕಾರ) ತತ್ ಸತ್ಯಮಿತ್(ಸತ್ಯಮ್ ಏವ) । (ಯತಃ) ತತ್ ನ ಮೋಘಂ (ಅರ್ಥಕ್ರಿಯಾಸು ಅನುಪಯುಕ್ತಂ ನ ಭವತಿ) । (ಹೇ) ಮಘವಾನೌ, (ಧನವಂತೌ ಇಂದ್ರಾಬೃಹಸ್ಪತೀ) ಯುವೋಃ (ಯುವಯೋಃ ಅಧೀನಂ) ವಿಶ್ವಂ ಸತ್ಯಂ ಇತ್ (ಸತ್ಯಮೇವ) । (ಏವಂ ಕುತಃ?) ವಾಂ (ಯುವಯೋಃ) (ಸತ್ಯಜಗತ್ಪಾಲನಾದಿಕಂ) ವ್ರತಂ (ಕರ್ಮ) ಆಪಶ್ಚನ (ಸರ್ವಾಃ ದೇವತಾಃ ಅಪಿ) ಪ್ರಮಿನಂತಿ (ಜಾನಂತಿ) ( ನ ಕೇವಲಂ

Rarest Archiver

**ಅಹಮೇವ ಜಾನಾಮಿ ಪರಂ ಸರ್ವಾಃ ಅಪಿ ದೇವತಾಃ ಜಾನಂತಿ) । ಅಸ್ಯ ಮಹತಃ (ಸರ್ವೋತ್ಕೃಷ್ಟಸ್ಯ) ಸತ್ಯಸ್ಯ (ಪರಮೇಶ್ವರಸ್ಯ) ಮಹಾನಿ (ಮಹಾಂತಿ) ಸತ್ಯಾಃ (ಸತ್ಯಾನಿ) ಕರಣಾನಿ (ಕರ್ಮಾಣಿ) ನು (ಇದಾನೀಂ) ಘ (ಏವ) ಪ್ರವೋಚಮ್ (ಪ್ರಾವೋಚಮ್) । (ವಿಷಯಸ್ಯ ಅಸತ್ಯತ್ವೇ ಕರ್ಮಣಾಂ ಸತ್ಯತ್ವಂ ಅಯುಕ್ತಮ್) ।**

**ಅರ್ಥ:–** ಎಲ್ಲರಿಗೂ ಅಪೇಕ್ಷಿತವಾದ ಹವಿಸ್ಸೇ ಮೊದಲಾದ ಸಂಪತ್ತನ್ನು ಭಕ್ತ-ರಿಂದ ಪಡೆದುಕೊಂಡವನೂ ಹಾಗೂ ಆ ಭಕ್ತಜನರಿಗೆ ಅವರಿಗೆ ಇಷ್ಟವಾದ ಸಂಪತ್ತನ್ನು ಕೊಡುವವನೂ ಆದ ಪರಮೇಶ್ವರನು ಯಾವ ವಿಶ್ವವನ್ನು ಸೃಷ್ಟಿ ಮಾಡಿದನೋ ಅದು ಸತ್ಯವೇ ಆಗಿದೆ. ಏಕೆಂದರೆ ಅದು ಅರ್ಥಕ್ರಿಯೆಗಳಲ್ಲಿ ಅನುಪಯುಕ್ತವಾಗಿಲ್ಲ. (ಯಾವದು ಅರ್ಥಕ್ರಿಯೆಗಳಲ್ಲಿ ಉಪಯುಕ್ತವಾಗಿರುವದೋ ಅದು ಸತ್ಯವೇ ಆಗಿರುತ್ತದೆ, ಈ ವಿಶ್ವವು ಹಾಗೆ ಅರ್ಥಕ್ರಿಯಾಕಾರಿಯಾಗಿರುವದರಿಂದ ಸತ್ಯವೇ ಆಗಿರುವದೆಂದು ತಿಳಿಯುವದು). ಎಲೈ ಸಂಪದ್ಭರಿತರಾದ ಇಂದ್ರ ಹಾಗೂ ಬೃಹಸ್ಪತಿಗಳೇ, ನಿಮ್ಮ ಅಧೀನವಾಗಿರುವ ವಿಶ್ವವು ಸತ್ಯವೇ ಆಗಿದೆ. ಏಕೆಂದರೆ ನೀವು ಮಾಡುವ ಜಗತ್ಪಾಲನಾದಿ ಕರ್ಮಗಳನ್ನು ಕೇವಲ ನಾನಷ್ಟೇ ಅಲ್ಲ, ಎಲ್ಲ ದೇವತೆಗಳೂ ಬಲ್ಲರು. ಈ ಸರ್ವೋ-ತ್ಕೃಷ್ಟನಾದ ಸತ್ಯನಾಮಕ ಪರಮಾತ್ಮನ ಸತ್ಯವಾದ ಶ್ರೇಷ್ಠವಾದ ಸೃಷ್ಟ್ಯಾದಿ ವ್ಯಾಪಾರಗಳನ್ನು ಕುರಿತು ಈಗ ತಾನೇ ಹೇಳಿದ್ದೇನೆ. ಈ ಪರಮಾತ್ಮನ ವ್ಯಾಪಾರಗಳು ಸತ್ಯವಾಗಿವೆಯೆಂದ ಬಳಿಕ ಅವನು ಸೃಷ್ಟಿಮಾಡಿದ ಜಗತ್ತೂ ಕೂಡ ಸತ್ಯವೇ ಆಗಿರುವದು.

**ವಿಶೇಷ ವಿಷಯಗಳು :–**

**(ಅ).** ಈ ಶ್ರುತಿಯು ಜಗತ್ತು ಸತ್ಯವಾಗಿದೆ ಎಂದು ಹೇಳುವ ಸ್ಪಷ್ಟ-ವಾದ ಪ್ರಮಾಣವಾಗಿದೆ. ಈ ವಿಷಯಕ್ಕೆ ಈ ಕೆಳಗಿನ ವಿಷಯಗಳನ್ನು ಗಮನಿಸ-ಬೇಕು ;

೧. ಹವಿಸ್ಸನ್ನು ಸ್ವೀಕರಿಸುವದು ಹಾಗೂ ಇಷ್ಟವಾದ ಸಂಪತ್ತನ್ನು ಕೊಡುವದು ಇವೆಲ್ಲ ವಾಸ್ತವಿಕವಾದ ವ್ಯಾಪಾರಗಳು. ಅಲ್ಲಿಯ ಹವಿಸ್ಸು ಹಾಗೂ ಸಂಪತ್ತು ಸತ್ಯವಾಗಿರದಿದ್ದರೆ ಆ ವ್ಯಾಪಾರಗಳು ವಾಸ್ತವಿಕವಾಗುತ್ತಿರಲಿಲ್ಲ. ಕಾರಣ ಜಗತ್ತು ಸತ್ಯವಾಗಿರುವದು.

೨. ಸತ್ಯಮಿತ್– ಸತ್ಯವೇ ಎಂದು ಅನ್ಯಯೋಗವ್ಯವಚ್ಛೇದವಿರುವದರಿಂದ ಪರಮಾತ್ಮನಿಂದ ಸೃಷ್ಟವಾದುದು ಮಿಥ್ಯಾಸೃಷ್ಟಿಯಲ್ಲ ಸತ್ಯವಾದ ಸೃಷ್ಟಿಯೇ ಆಗಿದೆ-ಯೆಂದು ಸ್ಪಷ್ಟವಾಗುವದು.

Rarest Archiver

೩. ಇದನ್ನು ಸ್ಪಷ್ಟಪಡಿಸಲು ಸೃಷ್ಟವಾದ ಜಗತ್ತು ನ ಮೋಘಮ್ ಅಂದರೆ ಅರ್ಥಕ್ರಿಯೆಗಳಲ್ಲಿ ಅನುಪಯುಕ್ತವಾಗಿಲ್ಲವೆಂದು ಹೇಳಿರುವದರಿಂದ ಜಗತ್ತು ಸತ್ಯ-ವಾಗಿದೆಯೆಂದು ಸ್ಪಷ್ಟವಾಗುವದು.

೪. ಎಲ್ಲ ದೇವತೆಗಳು ಇಂದ್ರ ಹಾಗೂ ಬೃಹಸ್ಪತಿಗಳ ಜಗತ್ಪಾಲನಾದಿ-ಕರ್ಮಗಳನ್ನು ತಿಳಿದವರಾಗಿದ್ದಾರೆ. ದೇವತೆಗಳು ತಿಳಿದಿರುವದರಿಂದ ಅದು ಮಿಥ್ಯಾ ಜ್ಞಾನವಲ್ಲ. ಜಗತ್ತು ಅಸತ್ಯವಾಗಿದ್ದರೆ ಆ ಜಗತ್ತಿನ ಪಾಲನಾದಿಗಳು ಹೇಗೆ ಕೂಡುವವು? ಆದ ಕಾರಣ ಜಗತ್ತು ಸತ್ಯವಾಗಿದೆ.

೫. ಸರ್ವೋತ್ತಮನಾದ ಪರಮೇಶ್ವರನ ಸತ್ಯವಾದ ವ್ಯಾಪಾರಗಳ ವಿಷಯಕ್ಕೆ ತಿಳಿಸಿರುವದಾಗಿ ಹೇಳಿರುವದರಿಂದ ಯಾವ ವಿಷಯಕ್ಕೆ ವ್ಯಾಪಾರಗಳು ಸತ್ಯವೆಂದು ಹೇಳಿರುವರೋ ಆ ವಿಷಯಗಳೂ ಕೂಡ ಸತ್ಯವೆಂದೇ ಹೆಳಿದಂತಾಯಿತು. ಇದು ಜಗತ್ಸತ್ಯತ್ವದ ವಿಷಯಕ್ಕೆ ಶ್ರುತಿಯಲ್ಲಿಯೇ ಹೇಳಲ್ಪಟ್ಟ ಅರ್ಥಾಪತ್ತಿ ಪ್ರಮಾಣವು (ಶ್ರೀ ವ್ಯಾಸತತ್ವಜ್ಞರ ಟಿಪ್ಪಣಿ).

**(ಬ). ಜೇತೋತ ದಾತೋತ** ಈ ಪದಗಳಲ್ಲಿಯ ಉತ ಪದಕ್ಕೆ ಚ – ಮತ್ತು- ಎಂಬ ಅರ್ಥವನ್ನು ಪದ್ಮನಾಭತೀರ್ಥರ ವ್ಯಾಖ್ಯಾನದಲ್ಲಿ ( ಯಾವುದರ ವ್ಯಾಖ್ಯಾನ?) ಹೇಳಿದ್ದಾರೆಂದು ವ್ಯಾಖ್ಯಾನದ ಭಾಗವನ್ನು ಶ್ರೀ ರಾಯರು ಉದಾಹರಿಸಿದ್ದಾರೆ. ಅಲ್ಲದೆ, ಅಲ್ಲಿ ಬಲಿ ಚಕ್ರವರ್ತಿಯೇ ಆದಿಯಾದ ದೈತ್ಯರ ರಾಜ್ಯ-ವನ್ನು ಇಂದ್ರಾದಿಗಳಿಗೆ ಕೊಟ್ಟಿರುವ ವಿಷಯವು ಈ ಶ್ರುತಿಯ ಭಾಗದಲ್ಲಿ ಉಲ್ಲೇಖಿಸ-ಲ್ಪಟ್ಟಿದೆ ಎಂದು ಶ್ರಿ ಪದ್ಮನಾಭತೀರ್ಥರ ವ್ಯಾಖ್ಯಾನವಿದೆ ಎಂದು ಹೇಳಿದ್ದಾರೆ. ಇದು ಶ್ರೀ ರಾಯರ ಭಾವದೀಪದಲ್ಲಿ ಮಾತ್ರ ವಿವರಿಸಲ್ಪಟ್ಟಿದೆ.

**(ಕ). ಮಘವಾನೌ** ಎಂದರೆ ಇಂದ್ರಾಬೃಹಸ್ಪತೀ ಎಂದು ಶ್ರೀ ಟೀಕಾಕೃತ್ಪಾದರು ಅರ್ಥಮಾಡಿದ್ದು ಉತ್ತರಾರ್ಧದಲ್ಲಿ ಹೇಳಿದ್ದನ್ನನುಸರಿಸಿ ಎಂದು ಟಿಪ್ಪಣೀಕಾರರು ಸ್ಪಷ್ಟಪಡಿಸಿದ್ದಾರೆ. **ಇಂದ್ರಾಬೃಹಸ್ಪತೀ =** ಇಂದ್ರಶ್ಚ ಬೃಹಸ್ಪತಿಶ್ಚ ಇಂದ್ರಾಬೃಹಸ್ಪತೀ, **ದೇವತಾ ದ್ವಂದ್ವೇ ಚ ಎಂಬ ಪಾಣಿನಿ ಸೂತ್ರದ (೬-೩-೨೧)** ಪ್ರಕಾರ ಇಂದ್ರಾ ಎಂದು ಆಗುತ್ತದೆ. (ವ್ಯಾ. ತ. ತೀ).

ಈ ಶ್ರುತಿಯ ಅರ್ಥವು ***ಶ್ರುತ್ಯರ್ಥಪಟ್ಟದಿ***ಯಲ್ಲಿ ಹೀಗೆ ;

*ಸರುವರಿಗೆ ತಾನಿಷ್ಟವಾಗಿಹ*
*ಸರುವಯಜ್ಞಾರ್ಜಿತವ ಪಡೆಯುತ*
*ಸರುವರಿಗೆ ತಾನವರ ಸಕಲೇಷ್ಟಗಳ ನೀಡುತಲಿ,*

Rarest Archiver

*ಪರಮಪುರುಷನು ಸೃಷ್ಟಿಮಾಡಿದ*
*ಸರುವ ಜಗವೂ ಸತ್ಯವಾಗಿದೆ*
*ಭರಣಗೈಯುವಿರವನ ನಂಬಿಯೆ ಇಂದ್ರ, ಸುರಗುರುವೆ. ॥*

*ಇದನ ತಿಳಿದಿಹರೆಲ್ಲ ಸುರಗಣ–*
*ವಿದನ ತಿಳಿಯುತ ಹರಿಯ ಮಹಿಮೆಯ*
*ಮುದದಿ ನಾ ಪೇಳಿಹೆನು ತಿಳಿವುದು, ಜಗವು ಸತ್ಯವಿದು,*
*ಸದಯ ಹರಿ ತಾ ಜಗವ ಸೃಷ್ಟಿಸಿ*
*ಮುದವ ಕೊಡುವನು, ತಿಳಿವುದೆನ್ನುತ*
*ಮುದದಿ ತಿಳಿಸಿತು ವೇದ ಘೋಷಿಸಿ ಜಗದ ಸತ್ಯತೆಯ. ॥*

೪೬. ಅನಿತ್ಯತ್ವವಿಕಾರಿತ್ವಪಾರತಂತ್ರ್ಯಾದಿರೂಪತಃ । ಸ್ವಪ್ನಾದಿಸಾಮ್ಯಂ ಜಗತಃ ನ ತು ಬೋಧನಿವರ್ತ್ಯತಾ । ಸರ್ವಜ್ಞಸ್ಯ ಯತೋ ವಿಷ್ಣೋಃ ಸರ್ವದ್ಯೆತತ್ಪ್ರತೀಯತೆ ।ಬೋಧಾಸಹಂ ತತೋ ನೈತತ್ ಕಿಂತ್ವಾಜ್ಞಾವಶಮಸ್ಯ ಹಿ ॥ – *ಪರಮೋಪನಿಷತ್.*

**ಅನ್ವಯ ಹಾಗೂ ಅರ್ಥ:– ಜಗತಃ ಸ್ವಪ್ನಾದಿಸಾಮ್ಯಂ ಅನಿತ್ಯತ್ವವಿಕಾರಿತ್ವ–ಪಾರತಂತ್ರ್ಯಾದಿರೂಪತಃ ಅಸ್ತಿ, ನತು ಜಗತಃ ಬೋಧನಿವರ್ತ್ಯತಾ ಅಸ್ತಿ, ಯತಃ ಏತತ್ ಜಗತ್ಸರ್ವಜ್ಞಸ್ಯ ವಿಷ್ಣೋಃ ಸರ್ವದಾ ಪ್ರತೀಯತೇ । ಏತತ್ ಬೋಧಾಸಹಂ ನ । ಕಿಂ ತು ಏತತ್ ಅಸ್ಯ ಸರ್ವಜ್ಞಸ್ಯ ವಿಷ್ಣೋಃ ಸರ್ವದಾ ಆಜ್ಞಾವಶಮ್ ಹಿ ।**

**ಅರ್ಥ :–** ಜಗತ್ತು ಅನಿತ್ಯವಾಗಿದೆ, ಅದು ಒಂದೇ ಪ್ರಕಾರದಿಂದ ಇರುವಂತಹದು ಅಲ್ಲ, ಅದು ಪರಮಪುರುಷನಂತೆ ಸತ್ಯವಿದ್ದರೂ ಅವನಂತೆ ಸ್ವತಂತ್ರವಾಗಿಲ್ಲ, ಅವನ ಅಧೀನದಲ್ಲಿದೆ, ಇತ್ಯಾದಿ (ಅದು ದುಃಖಪ್ರಚುರವಾಗಿದೆ ಎಂದು) ಹೇಳುವದಕ್ಕಾಗಿಯೆ ಜಗತ್ತು ಸ್ವಪ್ನದಂತೆ ಇರುವದು ಎಂದು ಸ್ವಪ್ನದ ದೃಷ್ಟಾಂತವನ್ನು ಕೊಟ್ಟಿದ್ದಾರೆಯೇ ಹೊರತು ಅದು ಭ್ರಾಂತಿಕಲ್ಪಿತವೂ ಅದಕ್ಕೇನೇ ಜ್ಞಾನನಿವರ್ತ್ಯವೂ ಆಗಿದೆ ಎಂದು ಹೇಳುವದಕ್ಕಲ್ಲ. ನಿತ್ಯವೂ ಯಥಾರ್ಥವಿರುವ ವಿಷ್ಣುವಿನ ಜ್ಞಾನಕ್ಕೆ ಇದು ಯಾವಾಗಲೂ ವಿಷಯವಾಗಿರುವದರಿಂದ ಇದು ಭ್ರಾಂತಿಕಲ್ಪಿತವಲ್ಲ. ಆದರೆ ಇದು ಅವನ ಅಧೀನ–ದಲ್ಲಿಯೇ ಇರುವಂತಹದಾಗಿದೆ. (ಜಗತ್ತು ಸ್ವಪ್ನ ಸದೃಶವಾಗಿದೆ ಎಂದು ಹೇಳಿ ಇಂಥ ಜಗತ್ತಿನಲ್ಲಿ ವಿಶೇಷ ಆಸ್ಥೆವಹಿಸದೆ ವಿರಕ್ತಿಬುದ್ಧಿಯುಳ್ಳವರಾಗಿ ಪರಮಾತ್ಮನಲ್ಲಿ ಮನಸ್ಸನ್ನು ತೊಡಗಿಸಬೇಕು ಎಂದು ಹೇಳುವಲ್ಲಿ ಇದರ ತಾತ್ಪರ್ಯವಿದೆ).

Rarest Archiver

**ವಿಷ್ಣುತತ್ವವಿನಿರ್ಣಯದಲ್ಲಿ ಈ ಶ್ರುತಿಯನ್ನು ಉದಾಹರಿಸಿದ್ದರ ಹಿನ್ನೆಲೆ:**

ಶ್ರೀಮದಾಚಾರ್ಯರು ಛಾಂದೋಗ್ಯೋಪನಿಷತ್ತಿನಲ್ಲಿ ಹೇಳಿದ ಒಂಬತ್ತು ದೃಷ್ಟಾಂತಗಳೂ ಕೂಡ ಭೇದವನ್ನೇ ಹೇಳುತ್ತವೆ ಎಂದು ಸಮರ್ಥನ ಮಾಡಿದ್ದಾರೆ. ಇದರ ಮೇಲೆ ಅದ್ವೈತಿಗಳ ಆಕ್ಷೇಪವೆಂದರೆ ಛಾಂದೋಗ್ಯೋಪನಿಷತ್ತಿನ ಆರನೆಯ ಅಧ್ಯಾಯದ ಪೂರ್ವಾರ್ಧದಲ್ಲಿ ಬ್ರಹ್ಮವ್ಯತಿರಿಕ್ತವಾದ ಸಮಸ್ತ ಜಗತ್ತೂ ಕೂಡ ಮಿಥ್ಯೆ ಎಂದು ಹೇಳಿದಾಗ ಅದೇ ಅಧ್ಯಾಯದ ಉತ್ತರಾರ್ಧದಲ್ಲಿ ಭೇದವನ್ನು ಹೇಳಿದೆ ಎನ್ನುವದು ಹೇಗೆ ಕೂಡುವದು? ಕಾರಣ ಶ್ರುತಿಯು ಅಭೇದವನ್ನೇ ಹೇಳುವದೇ ಹೊರತು ಭೇದವನ್ನಲ್ಲ ಎಂಬುದು ಆಕ್ಷೇಪಕಾರರ ಅಭಿಪ್ರಾಯ. ಇದಕ್ಕೆ ಶ್ರೀಮದಾಚಾ-ರ್ಯರು **ನ ಕುತ್ರಾಪಿ ಜಗತಃ ಮಿಥ್ಯಾತ್ವಂ ಉಚ್ಯತೇ** ಎಂದು ಅನೇಕ ಶ್ರುತಿಗಳು, ಸ್ಮೃತಿಗಳು ಜಗತ್ತಿನ ಸತ್ಯತ್ವವನ್ನೇ ಹೇಳುವವೇ ಹೊರತು ಜಗತ್ತಿನ ಮಿಥ್ಯಾತ್ವವನ್ನಲ್ಲ ಎಂದು ಸಿದ್ಧ ಮಾಡಿ ತೋರಿಸಿದ್ದಾರೆ. ಇದಕ್ಕೆ ಪುನಃ ಅದ್ವೈತಿಗಳು **ಆಕ್ಷೇಪ ಮಾಡು-ತ್ತಾರೆ. ಪುರಾಣಾದಿಗಳಲ್ಲಿ ಜಗತ್ತು ಸ್ವಪ್ನಾದಿಗಳಿಗೆ ಸಮವಾಗಿದೆ. (ಅವಿದ್ಯ-ಮಾನೋ ಹ್ಯವಭಾತಿ ಹಿ ದ್ವಯೋಃ ಧ್ಯಾತುರ್ಧಿಯಾ ಸ್ವಪ್ನಮನೋರಥೋ ಯಥಾ.. ಎಂದು ಅಥವಾ ಸ್ವಪ್ನಗಂಧರ್ವನಗರೋಪಮಮ್..**ಇತ್ಯಾದಿ) ಸ್ವಪ್ನ ಸತ್ಯವಲ್ಲ, ಅದು ಜ್ಞಾನದಿಂದ ನಿವರ್ತ್ಯವಾಗಿದೆ, ಅಂದರೆ ಎಚ್ಚತ್ತ ಬಳಿಕ ಸ್ವಪ್ನವೆಲ್ಲಿದೆ ? ಅದರಂತೆಯೇ ಜಗತ್ತು ಸ್ವಪ್ನದ ಪದಾರ್ಥಗಳಂತೆ ಮಿಥ್ಯೆ, ಸ್ವಪ್ನವು ಜ್ಞಾನದಿಂದ ನಿವೃತ್ತವಾಗುವಂತೆ ಜಗತ್ತೂ ಕೂಡ ಅಹಂ ಬ್ರಹ್ಮಾಸ್ಮಿ ಎಂಬ ಜ್ಞಾನದಿಂದ ನಿವೃತ್ತವಾಗುವದು. ಆಮೇಲೆ ಬ್ರಹ್ಮಾತ್ಮೈಕ್ಯವೇ ಸಿದ್ಧಿಸುವದು. ಹೀಗಿರುವದರಿಂದ ಜಗತ್ತೂ ಕೂಡ ಸತ್ಯವಲ್ಲ. ಅಂದಮೇಲೆ ಶ್ರುತಿ, ಸ್ಮೃತಿ ಎಲ್ಲಿಯೂ ಕೂಡ ಜಗತ್ತು ಮಿಥ್ಯೆ ಎಂದು ಹೇಳಿಲ್ಲವೆಂಬುದು ಹೇಗೆ ಕೂಡುವದು ? ಎಂದು ಆಕ್ಷೇಪಕಾರನ ಅಭಿಪ್ರಾಯ. ಈ ಆಕ್ಷೇಪವನ್ನು ಶ್ರೀಮದಾಚಾರ್ಯರು ಈ ಶ್ರುತಿಯನ್ನು ಉದಾಹರಿಸಿ ಪರಿಹರಿಸುತ್ತಾರೆ.

ಪರಮೋಪನಿಷತ್ತಿನ ಈ ವಾಕ್ಯದಿಂದ ಜಗತ್ತು ಸ್ವಪ್ನಸದೃಶವೆಂದರೆ ಏನು ಎಂದು ಹೇಳಿ ಜಗತ್ತು ಮಿಥ್ಯೆಯಲ್ಲವೆಂಬುದನ್ನು ಸಮರ್ಥಿಸಿದ್ದಾರೆ.

ಈ ಶ್ರುತಿವಾಕ್ಯದ ತಾತ್ಪರ್ಯ *ಶ್ರುತ್ಯರ್ಥಪಟ್ಟದಿ*ಯಲ್ಲಿ ಹೀಗೆ :

*ಜಗವನಿತ್ಯವು ನಿರುತ ಚಂಚಲ*
*ಜಗವು ದುಃಖಪ್ರಚುರ ನೋಡಲು*
*ಅಗಣಿತಾತ್ಮನ ತಂತ್ರದೊಳಗಿದು ನಿರುತವಿರುತಿಹುದು.*

Rarest Archiver

*ಜಗವು ಕನಸಿಗೆ ಸದೃಶವೆನ್ನುತ*
*ನಿಗಮ ವೈರಾಗ್ಯವನು ಪೇಳಿತು,*
*ಜಗವದೆಂತುಟು ಮಿಥ್ಯೆ ಸಿರಿಹರಿ ನಿರುತ ನೋಡುತಿಹ. ॥*

೪೭. ಪ್ರಜ್ಞಾವಿನಿರ್ಮಿತಂ ಯಸ್ಮಾತ್ ಅತೋ ಮಾಯಾಮಯಂ ಜಗತ್ ।
ಅನೇನಾನುಗತಂ ಯಸ್ಮಾತ್ ಅನೃತಂ ತೇನ ಕಥ್ಯತೇ ॥
ಬೋಧಾನಿವರ್ತ್ಯಮಪಿ ತು ನಿತ್ಯಮೇವ ಪ್ರವಾಹತಃ । ಅ ಇತ್ಯುಕ್ತಃ
ಪರೋ ದೇವಃ ತೇನ ಸತ್ಯಮಿದಂ ಜಗತ್ ॥ ತದಧೀನಸ್ವರೂಪತ್ವಾತ್
ಅಸತ್ಯಂ ತೇನ ಕಥ್ಯತೇ । ಸತ್ಯಸ್ಯ ಸತ್ಯಃ ಸ ವಿಭುಃ ಇಂದ್ರಚಾಪಸ್ಯ
ಸೂರ್ಯವತ್ ॥ ---(?)

**ವಿಶಿಷ್ಟ ಪದಗಳ ಅರ್ಥಃ– ಅನೇನ**=ಚೇಷ್ಟಕೇನ=ನಿಯಾಮಕನಾದ ಪರಮಾತ್ಮನಿಂದ **ಋತಮ್**=ಅನುಗತಂ ವ್ಯಾಪ್ತಮ್=ವ್ಯಾಪಿಸಲ್ಪಟ್ಟಂಥ, **ಅನೃತಮ್**= ನಿಯಾಮಕನಾದ ಪರಮಾತ್ಮನಿಂದ ವ್ಯಾಪಿಸಲ್ಪಟ್ಟಿರುವಂಥ, **ಅಸತ್ಯಂ**= ಅ ಎಂದರೆ ಪರಮಾತ್ಮನು **ಮಾಯಾಮಯಮ್**= ಭಗವತ್ಪ್ರಜ್ಞೆಯಿಂದ ನಿರ್ಮಿತವಾದ. (ಮಾ ಮಾತಿ, ೨ನೆಯ ಗಣ ಪರಸ್ಮೈ ಪದ, ಈ ಧಾತುವಿಗೆ ಕರ್ಮಣಿ ಯತ್ ಪ್ರತ್ಯಯ. ತಾದಾತ್ಮ್ಯಾರ್ಥೇ ವಿಕಾರಾರ್ಥೇ ಪ್ರಾಚುರ್ಯಾರ್ಥೇ ಮಯಟ್ ತ್ರಿಧಾ ಎಂಬ ಉಕ್ತಿಯಂತೆ ವಿಕಾರಾರ್ಥಕ ಮಯಟ್ ಪ್ರತ್ಯಯ ಹಚ್ಚಿದ ಮೇಲೆ ಬಂದ ರೂಪವೆಂದು ಇಲ್ಲಿ ವಿವಕ್ಷಿತವಿಲ್ಲವೆಂದು ಶ್ರೀ ಶ್ರೀನಿವಾಸತೀರ್ಥರು ತಮ್ಮ ಟಿಪ್ಪಣಿಯಲ್ಲಿ ಸ್ಪಷ್ಟಪಡಿಸಿದ್ದಾರೆ). **ಅನೇನ**= ಅನ್ ಚೇಷ್ಟಾಯಾಮ್ ಅನಿತಿ (**ಅನ ಶಬ್ದಸ್ಯ ಚೇಷ್ಟಾವಾಚಕತ್ವಂ ಪ್ರಸಿದ್ಧಂ ಇತಿ ಭಾವಃ**– ಶ್ರೀ ರಘೂತ್ತಮತೀರ್ಥರ ಭಾವಬೋಧ, ಕೌಮುದಿಯ ಧಾತುಪಾಠದಲ್ಲಿ **ಅನ್ ಪ್ರಾಣನೇ** ೨ನೆಯ ಗಣ ಪರಸ್ಮೈಪದ, ಇಷ್ಟು ಮಾತ್ರ ಹೇಳಲ್ಪಟ್ಟಿದೆ. ಕಾರಣ ಪ್ರಸಿದ್ಧಾರ್ಥವನ್ನು ಇಟ್ಟುಕೊಂಡು ಮಾಡಿದ ರೂಪವೆಂದು ತಿಳಿಯಬೇಕಾಗುವದು. ಇದು ಭಾವಬೋಧದ ಅಭಿಪ್ರಾಯ. ಈ ಧಾತುವಿನಿಂದ ಬಂದ ನಾಮ; ಚೇಷ್ಟಕನಿಂದ, ಶ್ರೀ ರಾಯರು ಮಾತ್ರ **ಅನ ಚೇಷ್ಟಾಯಾಂ ಇತಿ ಧಾತೋಃ ಅನಶಬ್ದಸ್ಯ ಅಂತ–ಲೋಪೋ ವಾ ಕ್ವಿಪ್ಪ್ರತ್ಯಯೇನ ನಕಾರಾಂತೋ ವಾ ಇತಿ ಭಾವಃ । ಅನಾ ಇತಿ ತೃತೀಯಾಂತಸ್ಯ ಅರ್ಥಃ ಅನೇನ ಇತಿ ಜ್ಞೇಯಮ್** ಎಂದು ಹೇಳಿದ್ದಾರೆ. **ಅನೃತಮ್**= **ಅನೇನ ಚೇಷ್ಟಕೇನ** (**ಋ ಗತೌ** ಈ ಧಾತುವಿನಿಂದ ಬಂದ ರೂಪ) **ಋತಂ ಅನುಗತಂ ವ್ಯಾಪ್ತಂ ಇತಿ ಅನೃತಮ್**, ಅಂದರೆ ಸರ್ವಚೇಷ್ಟಕನಾದ ಪರಮಾತ್ಮನಿಂದ ವ್ಯಾಪಿಸಲ್ಪಟ್ಟಿದೆಯಾದ ಕಾರಣ ಜಗತ್ತೇ ಅನೃತಂ ಎಂದು ಕರೆಯಲ್ಪಡುತ್ತದೆ. **ಅಸತ್ಯಮ್= ಅನಾ ಸತ್ಯಮ್**, ಅಕಾರವಾಚ್ಯನಾದ ಪರಮಾತ್ಮನಿಂದ ಯಾವದು ಸತ್ಯತ್ವವನ್ನು ಹೊಂದಿದೆಯೋ ಅದು ಅಸತ್ಯ, ಎಂದರೆ ಪರಮಾತ್ಮಾಧೀನ. ಹೀಗೆಂದರೆ

Rarest Archiver

ಅದರ ಮೂಲಸ್ವರೂಪವು ಹೇಗಿದ್ದಿತೆಂದು ಶಂಕೆ ಬಂದರೆ ಅದಕ್ಕೆ **ಸತ್ಯಸ್ಯಾಪಿ ಸತ್ಯಃ ಸತ್ಯತಾಯಾಃ ನಿಯಾಮಕಃ** ಎಂದು ಶ್ರೀ ಟೀಕಾಕೃತ್ಪಾದರು ವಿವರಣೆ ಕೊಟ್ಟಿದ್ದಾರೆ.
**ಇಂದ್ರಚಾಪಃ** = ಕಾಮನ ಬಿಲ್ಲು.

**ಅರ್ಥ:–** ಜಗತ್ತು ಭಗವತ್ಪ್ರಜ್ಞೆಯಿಂದ ನಿರ್ಮಿತವಾಗಿರುವದರಿಂದ ಅದು ಮಾಯಾಮಯವು. ಸರ್ವಚೇಷ್ಟಕನಾದ ಪರಮಾತ್ಮನಿಂದ ವ್ಯಾಪಿಸಲ್ಪಟ್ಟಿರುವದರಿಂದ ಅದು ಅನೃತವು, ಕಾಮನ ಬಿಲ್ಲಿನ ಅಸ್ತಿತ್ವಕ್ಕೆ ಸೂರ್ಯನಿರಲೇಬೇಕಾಗುವದರಿಂದ ಕಾಮನ ಬಿಲ್ಲು ಸೂರ್ಯನ ಅಧೀನವಾಗಿದೆ ಎಂದು ಹೇಗೆ ಹೇಳುವರೋ ಹಾಗೆಯೇ ಜಗತ್ತಿನ ಅಸ್ತಿತ್ವಕ್ಕೆ ಅಕಾರವಾಚ್ಯನಾದ ಪರಮಾತ್ಮನು ಬೇಕೇ ಬೇಕು, ಜಗತ್ತು ಅಕಾರವಾಚ್ಯನಾದ ಪರಮ ಪುರುಷನ ಅಧೀನವಾಗಿದೆ. ಆದ್ದರಿಂದ ಅದಕ್ಕೆ ಅಸತ್ಯವೆನ್ನುವರು.

*ಹರಿಯ ಸಂಕಲ್ಪವನೆ ಮಾಯೆಯು,*
*ಕರೆವರದರಿಂ ಜಗವು ಮಾಯಾ–*
*ವಿರಚಿತವು, ತಾನದುವೆ ಅನೃತವು ಅಪದಸಂವ್ಯಾಪ್ತ,*
*ಹರಿಯ ಕಾರಣ ಜಗಕೆ ಸತ್ಯತೆ–*
*ಇರುವ ಕಾರಣ ಜಗವಸತ್ಯವು*
*ಹರಿಯಧೀನವು ಜಗವು, ಮಳೆಬಿಲ್ತೆರನೆ ಸೂರ್ಯನಿಗೆ.* ॥

**೪೮. ತಸ್ಯೋಪನಿಷತ್ ಸತ್ಯಸ್ಯ ಸತ್ಯಮ್ ಇತಿ ಪ್ರಾಣಾ ವೈ ಸತ್ಯಂ ತೇಷಾಂ ಏಷಃ ಸತ್ಯಮ್ ॥** *ಬೃ.ಉ. ೨–೧–೨೦+ , ಮೈತ್ರಾಯಣ್ಯುಪನಿಷತ್; ೬ – ೩೨*

**ಅರ್ಥ :– ಸತ್ಯಸ್ಯ ಸತ್ಯಮ್ ಇತಿ ತಸ್ಯ ಉಪನಿಷತ್** ಸತ್ಯವಾಗಿರುವ ಜಗತ್ತಿಗೆ ಇರುವ ಸತ್ಯತ್ವಕ್ಕೆ ಪರಮಾತ್ಮನೇ ನಿಯಾಮಕನಾಗಿರುವದರಿಂದ ಸತ್ಯವೆಂಬುದು ಆ ಪರಮಾತ್ಮನ (ಉಪನಿಷತ್) ರಹಸ್ಯದ ನಾಮವು. **ಪ್ರಾಣಂತಿ ಇತಿ ಪ್ರಾಣಾಃ** ಅಂದರೆ ಬ್ರಹ್ಮಾದಿದೇವತೆಗಳು, ಅವರಿಗೆ ಈತನು **ಸತ್ಯಮ್** ಅಂದರೆ ನಿಯಾಮಕನು. ಅಂದರೆ ಬ್ರಹ್ಮಾದಿದೇವತೆಗಳು ಕೂಡ ಪರಮಾರ್ಥತಃ ಸತ್ಯರಿದ್ದು ಆ ಪರಮಾತ್ಮನ ಅಧೀನರು ಎಂದರ್ಥ.

**ಉಪನಿಷತ್ತಿನಲ್ಲಿ ಈ ವಾಕ್ಯಕ್ಕೆ ಹಿನ್ನೆಲೆ:–** ಈ ವಾಕ್ಯವು *ಬೃಹದಾರಣ್ಯಕೋಪನಿಷತ್ತಿ*ನ ಎರಡನೆಯ ಅಧ್ಯಾಯದ ಮೂರನೆಯ ಬ್ರಾಹ್ಮಣವಾದ ಮೂರ್ತಾಮೂರ್ತ–ಬ್ರಾಹ್ಮಣವೆಂಬ ಭಾಗದಲ್ಲಿ ಬಂದಿದೆ. ಈ ವಾಕ್ಯದ ಸಂಪೂರ್ಣ ಪಾಠವು ಹೀಗೆ ಇದೆ; **ತಸ್ಯ ಹ ಏತಸ್ಯ ಪುರುಷಸ್ಯ ರೂಪಂ ಯಥಾ ಮಹಾರಜನಂ ವಾಸಃ । ಯಥಾ ಪಾಂಡ್ವಾವಿಕಂ । ಯಥೇಂದ್ರಗೋಪಃ । ಯಥಾಗ್ನ್ಯರ್ಚಿಃ । ಯಥಾ**

Rarest Archiver

**ಪುಂಡರೀಕಂ । ಯಥಾ ಸಕೃದ್ವಿದ್ಯುತ್ತಂ । ಸಕೃದ್ವಿದ್ಯುತ್ತೇವ ಹ ವಾ ಅಸ್ಯ ಶ್ರೀರ್ಭವತಿ ಯ ಏವಂ ವೇದ । ಅಥಾತ ಆದೇಶೋ ನೇತಿ ನೇತಿ । ನ ಹ್ಯೇತಸ್ಮಾದಿತಿ ನೇತ್ಯನ್ಯತ್ ಪರಮಸ್ತಿ । ಅಥ ನಾಮಧೇಯಂ ಸತ್ಯಸ್ಯ ಸತ್ಯಮಿತಿ । ಪ್ರಾಣಾ ವೈ ಸತ್ಯಂ । ತೇಷಾಂ ಏಷ ಸತ್ಯಮ್ ।** ಈ ವಾಕ್ಯಕ್ಕೆ ಪಾಠಾಂತರವಿದ್ದಂತೆ ತೋರುವದು. *ವಿಷ್ಣುತತ್ವವಿನಿರ್ಣಯ* ಗ್ರಂಥದಲ್ಲಿ ಶ್ರೀಮದಾಚಾರ್ಯರು ಹಾಗೂ ಇದರ ಮೇಲಿನ ತಮ್ಮ ಟೀಕೆಯಲ್ಲಿ ಶ್ರೀಮಜ್ಜಯತೀರ್ಥರು ಕೊಟ್ಟ ಪಾಠವನ್ನು ಇಲ್ಲಿ ಮೇಲೆ ಕೊಟ್ಟ ವಾಕ್ಯಖಂಡದಲ್ಲಿ ಕೊಡಲಾಗಿದೆ. ಆದರೆ ಅಖಿಲಭಾರತ ಮಾಧ್ವಮಹಾಮಂಡಲದ *ಸರ್ವಮೂಲಮ್* ಎಂಬ ದೇವನಾಗರೀಲಿಪಿಯಲ್ಲಿಯ ೧೯೬೯ ರ ಪ್ರಕಟನೆಯಲ್ಲಿಯೂ ಹಾಗೂ ೧೯೯೧ರ *ಸರ್ವಮೂಲಗ್ರಂಥಗಳು* ಎಂಬ ಕನ್ನಡಲಿಪಿ ಹಾಗೂ ಕನ್ನಡಭಾಷಾಂತರದ ಪ್ರಕಟನೆಯಲ್ಲಿಯೂ ಕೂಡ ಮೇಲೆ ಕೊಟ್ಟ ಪಾಠದಲ್ಲಿಯ **ತಸ್ಯ ಉಪನಿಷತ್** ಇದರ ಬದಲಿಗೆ **ತಸ್ಯ ನಾಮಧೇಯಮ್** ಎಂದು ಪಾಠವಿದೆ. ಶ್ರೀ ಸವಣೂರು ಗೋವಿಂದರಾಯರು ಪುಣೆ ಚಿತ್ರಶಾಳಾ ಪ್ರೆಸ್ ನಲ್ಲಿ ಬಹಳ ಹಿಂದಕ್ಕೆ– ಕಳೆದ ಶತಮಾನದ ಪ್ರಾರಭದಲ್ಲಿ– ಮುದ್ರಿಸಿದ ಶ್ರೀ ರಾಯರ ಖಂಡಾರ್ಥದಲ್ಲಿ ಪ್ರಾರಂಭದಲ್ಲಿ **ಅಸ್ಯಾ ಉಪನಿಷದಃ ಅಧ್ಯಾಯಾಷ್ಟಾತ್ಮಕತ್ವೇಽಪಿ ಪೂರ್ವಾಧ್ಯಾಯ–ದ್ವಯಸ್ಯ ವಿದ್ಯಾಧಿಕಾರಾರ್ಥಂ ಅಶ್ವಮೇಧಕರ್ಮನಿರೂಪಣಪರತ್ವೇನ *ತದವ್ಯಾ–ಖ್ಯಾಯ ಕರ್ಮಣಾ ಶುದ್ಧಾಂತಃಕರಣಸ್ಯ ಬ್ರಹ್ಮಸ್ವರೂಪಂ ನಿರೂಪಯಿತುಂ ಪ್ರವೃತ್ತಂ ತೃತೀಯಾಧ್ಯಾಯಾದಿಗ್ರಂಥಸಂದರ್ಭಂ ವ್ಯಾಚಖ್ಯೌ ಭಗವಾನ್ ಆಚಾರ್ಯಃ ।*** ಎಂದಿದೆ. *ಇದರಿಂದ ಮೊದಲಿನ ಎರಡು ಅಧ್ಯಾಯಗಳಿಗೆ ಶ್ರೀಮದಾಚಾರ್ಯರು ಭಾಷ್ಯ ರಚಿಸಲಿಲ್ಲವೋ ಅಥವಾ ಶ್ರೀ ರಾಯರು ಖಂಡಾರ್ಥ ರಚಿಸಲಿಲ್ಲವೋ ಎಂಬ ಶಂಕೆ ಬರಬಹುದು. ಆದರೆ ಈ ಮೊದಲು ಸೂಚಿಸಲ್ಪಟ್ಟ ಎರಡು ಗ್ರಂಥಗಳಲ್ಲಿ ಮೊದಲಿನ ಎರಡು ಅಧ್ಯಾಯಗಳಿಗೂ ಭಾಷ್ಯವನ್ನು ಸೇರಿಸಿರು–ವದರಿಂದ ಭಾಷ್ಯದ ಮತ್ತು ಶ್ರೀ ರಾಯರ ಖಂಡಾರ್ಥದ ಪಾಠಾಂತರಗಳ ಬಗೆಗೆ ವಿಶೇಷ ಜಿಜ್ಞಾಸೆಯುಂಟಾಗುವದು. ಮೋತೀಲಾಲ್ ಬನಾರಸೀದಾಸ್ ದಿಲ್ಲಿಯಿಂದ ಪಂಡಿತ್ ಜಗದೀಶಶಾಸ್ತ್ರಿಯವರ ಸಂಪಾದನೆಯಲ್ಲಿ ೧೯೭೦,... ೧೯೯೮ ರಲ್ಲಿ ಪ್ರಕಾಶಿತವಾದ* ***ಉಪನಿಷತ್ಸಂಗ್ರಹಃ*** *ಎಂಬ ಪ್ರಕಟನೆಯಲ್ಲಿಯೂ ಕೂಡ ಈ ಎರಡು ಗ್ರಂಥಗಳಲ್ಲಿಯ ಪಾಠವನ್ನೇ ಕೊಟ್ಟಿರುವದನ್ನೂ ಗಮನಿಸಬೇಕು. ಇನ್ನುಳಿದ ಪ್ರಕಟನೆಗಳಲ್ಲಿಯೂ ಬೇರೆ ಬೇರೆ ಪಾಠಗಳಿವೆ. ಉಪನಿಷದ್ವಾಕ್ಯಮಹಾಕೋಷಃ ದಲ್ಲಿ ಈ ವಾಕ್ಯವು ಎರಡನೆಯ ಅಧ್ಯಾದಲ್ಲಿ ಬಂದಿರುವದಾಗಿ ಸೂಚಿಸಲಾಗಿದೆ.* **ಅಂತು, ಉಪನಿಷತ್ತುಗಳ ಬಗ್ಗೆ ಸಂಶೋಧನೆ ಅಗತ್ಯವಿದೆಯೆಂಬ ಅಭಿಪ್ರಾಯಕ್ಕೆ ಇದೆಲ್ಲ ಪುಷ್ಟಿ ಕೊಡುತ್ತದೆ.**

Rarest Archiver

ಇನ್ನು, ಮೂರ್ತಾಮೂರ್ತಬ್ರಾಹ್ಮಣದಲ್ಲಿ ಶ್ರೀ ಹರಿಯ ಸ್ವರೂಪದ ವರ್ಣನೆ ಇದೆ. **ದ್ವೇ ವಾ ವ ಬ್ರಹ್ಮಣೋ ರೂಪೇ ಮೂರ್ತಂ ಚ ಅಮೂರ್ತಂ ಚ ॥** ಎಂದು ಪ್ರಾರಂಭಿಸಿದ ಈ ಭಾಗವು ಈ ಮೇಲೆ ಉದಾಹರಿಸಲ್ಪಟ್ಟ **ತಸ್ಯ ಹ ಏತಸ್ಯ ಪುರುಷಸ್ಯ** ಎಂಬ ವಾಕ್ಯಖಂಡದ **ಅಥ ನಾಮಧೇಯಂ ಸತ್ಯಸ್ಯ ಸತ್ಯಮಿತಿ । ಪ್ರಾಣಾ ವೈ ಸತ್ಯಂ । ತೇಷಾಂ ಏಷ ಸತ್ಯಮ್ ।** ಎಂಬ ಭಾಗದಿಂದ ಮುಗಿತಾಯಗೊಳ್ಳುತ್ತದೆ. ಈ ಬ್ರಹ್ಮನಿಗೆ ಸತ್ಯಸ್ಯ ಸತ್ಯನು ಎಂದು ಹೆಸರು ಇದೆ. ಅಂದರೆ ಇವನು ಪರಮ ಸತ್ಯನು. ಮೂರ್ತಾಮೂರ್ತಗಳು ಸತ್ಯ. ಅವುಗಳಿಗೆ ಸತ್ಯತ್ವಪ್ರದನು ಶ್ರೀ ಹರಿಯು.

*ಶ್ರುತ್ಯರ್ಥಷಟ್ಪದಿ*ಯಲ್ಲಿ ಇದರ ಭಾವವು ಹೀಗೆ;

*ವಿಮಲರೂಪನು ಹರಿಯೆ ಸರುವಕೆ*
*ಅಮಲ ಸತ್ಯಪ್ರದನು, ಸತ್ಯನು,*
*ಅಮರವಂದ್ಯನ ಗೌಪ್ಯನಾಮವ ಬುಧರು ತಿಳಿಯುವುದು.*
*ಕಮಲಸಂಭವರಾದಿನಿರ್ಜರ–*
*ರಮಿತಗುಣಹರಿತಂತ್ರರಿಪ್ಪರು*
*ಸುಮನಸೋತ್ತಮನೆಲ್ಲರೊಡೆಯನು ಸತ್ಯನಾಮಕನು.* ॥

೪೯. **ಸರ್ವೇ ವೇದಾ ಹರೇರ್ಭೇದಂ ಸರ್ವಸ್ಮಾತ್ ಜ್ಞಾಪಯಂತಿ ಹಿ । ಭೇದಃ ಸ್ವಾತಂತ್ರ್ಯಸಾರ್ವಜ್ಞಸರ್ವೈಶ್ವರ್ಯಾದಿಕಶ್ಚ ಸಃ ॥ ಸ್ವರೂಪಮೇವ ಭೇದೋಽಯಂ ವ್ಯಾವೃತ್ತಿಶ್ಚ ಸ್ವರೂಪತಾ । ಸರ್ವವ್ಯಾವೃತ್ತಯೇ ಯಸ್ಮಾತ್ ಸ್ವಶಬ್ದೋಽಯಂ ಪ್ರಯು–ಜ್ಯತೇ ॥ ಸರ್ವವ್ಯಾವೃತ್ತತಾಮೇವ ನೇತಿ ನೇತ್ಯಾದಿಕಾ ಶ್ರುತಿಃ । ವಿಷ್ಣೋರತೋ ವದೇದನ್ಯಾ ಅಪಿ ಸರ್ವಾ ನ ಸಂಶಯಃ ॥** – *ನಾರಾಯಣಶ್ರುತಿಃ.(?)*

*(ಇದು ನಾರಾಯಣೋಪನಿಷತ್ತಿನಲ್ಲಿ ಕಾಣಲಿಲ್ಲ)*

**ಈ ಶ್ರುತಿಯ ಉದಾಹರಣೆಗೆ ಹಿನ್ನೆಲೆ :–** **ಸ ಆತ್ಮಾ ಅತತ್ವಮಸಿ ಶ್ವೇತಕೇತೋ** ಎಂಬ ವಾಕ್ಯದಿಂದ ಜೀವೇಶ್ವರಭೇದದ ವಿಷಯದಲ್ಲಿ ಪ್ರಮಾಣವನ್ನು ಹೇಳಿದ್ದರೂ ಎಲ್ಲ ಆಗಮವಾಕ್ಯಗಳೂ ಕೂಡ ಈ ಭೇದವನ್ನೇ ಹೇಳುವವು ಎಂದು ಹೇಗೆ ಸಿದ್ಧವಾಗುವದು. ಅನಂತ ವೇದರಾಶಿಯಲ್ಲಿ ಎಲ್ಲಿಯಾದರೂ ಅಭೇದವನ್ನೂ ಹೇಳಿರಬಹುದಲ್ಲ ಎಂಬ ಶಂಕೆಗೆ ಉತ್ತರವೇನು ಎಂದು ಆಕ್ಷೇಪವಿನ್ನೂ ಉಳಿಯುವದು. ಅನಂತವಾದ ವೇದರಾಶಿಯಲ್ಲಿ ಪ್ರತಿಯೊಂದು ವೇದವಾಕ್ಯವನ್ನೂ ಉದಾಹರಿಸಿ ಅದು ಭೇದವನ್ನೇ ಹೇಳುವದು ಎಂದು ಸ್ಥಾಪನೆ ಮಾಡುವದು ಅಶಕ್ಯ. ಹೀಗೆ ಆಕ್ಷೇಪಿಸಿದರೆ ಇದಕ್ಕೆ ಉತ್ತರರೂಪವಾಗಿ ಶ್ರೀಮದಾಚಾರ್ಯರು ಎಲ್ಲ ಶ್ರುತಿಗಳು ಕೂಡ

Rarest Archiver

ಜೀವೇಶ್ವರಭೇದವನ್ನೇ ಹೇಳುವವು ಎಂದು ಸ್ಪಷ್ಟವಾಗಿ ಹೇಳುವ ಶ್ರುತಿಯನ್ನೇ ಉದಾಹರಿಸುತ್ತಾರೆ. ಶ್ರುತಿಯೇ ಹಾಗೆ ಹೇಳುತ್ತಿದ್ದಾಗ ಆಕ್ಷೇಪಕ್ಕೆ ಅವಕಾಶವಿಲ್ಲವೆಂದು ತಾತ್ಪರ್ಯ.

**ಅರ್ಥ:–** ಎಲ್ಲ ವೇದಗಳೂ ಕೂಡ ಹರಿಯು ಎಲ್ಲದರಗಿಂತ (ಅಂದರೆ ಜೀವಜಡಾತ್ಮಕ ಪ್ರಪಂಚದಿಂದ) ಭಿನ್ನನಾಗಿದ್ದಾನೆ ಎಂದೇ ಹೇಳುವವು. ಶ್ರೀ ಹರಿಯ ಸ್ವಾತಂತ್ರ್ಯ, ಸಾರ್ವಜ್ಞ್ಯ, ಸರ್ವೈಶ್ವರ್ಯಾದಿಗುಣಗಳನ್ನು ಹೇಳಿ ಜೀವಜಡಾತ್ಮಕಪ್ರಪಂಚದಿಂದ ಈ ಭೇದವನ್ನು ಪ್ರತಿಪಾದಿಸುವದರಿಂದ ಭೇದವನ್ನು ಹೇಳುವ ವಾಕ್ಯಗಳಿಗೆ ಹಾಗೂಶ್ರೀ ಹರಿಯು ಸರ್ವೋತ್ತಮನೆಂದು ಹೇಳುವ ಶ್ರುತಿವಾಕ್ಯಗಳಿಗೆ ಯಾವ ವಿರೋಧವಿರುವದಿಲ್ಲ. ಆ ಭೇದವು ಸ್ವಾತಂತ್ರ್ಯದಿರೂಪವೆಂದರ್ಥ. ಭೇದವು ಶ್ರೀ ಹರಿಯಸ್ವರೂಪವೇ. (ಜೀವನು ಈಶನಿಂದ ಭಿನ್ನನಾಗಿದ್ದಾನೆಂದು ಹೇಳುವಾಗ ಈ ಭೇದವು ಪಾರತಂತ್ರ್ಯದಿರೂಪವೆಂದರ್ಥ). ಶ್ರೀ ಹರಿಯು ಜೀವಜಡಗಳಿಂದ ವ್ಯಾವೃತ್ತನಾಗಿದ್ದಾನೆ ಎಂದಾಗ ಹೇಳಿದ ವ್ಯಾವೃತ್ತಿಯು ಅವನ ಸ್ವರೂಪವೇ ಆಗಿದೆ. ಸ್ವರೂಪ ಎಂಬ ಪದದಲ್ಲಿಯ ಸ್ವಶಬ್ದವು ಎಲ್ಲದರಿಂದ ವ್ಯಾವೃತ್ತಿಯನ್ನೇ ಸೂಚಿಸುವದು. ನೇತಿ ನೇತಿ ಇತ್ಯಾದಿಶ್ರುತಿಯು ಶ್ರೀ ವಿಷ್ಣುವು ಎಲ್ಲ ಜೀವಜಡಾತ್ಮಕ–ಪ್ರಪಂಚದಿಂದ ಭಿನ್ನನು ಎಂದು ಹೇಳುವದಕ್ಕಾಗಿಯೇ ಪ್ರವೃತ್ತವಾಗಿದೆ. ಆದ್ದರಿಂದ, ಉಳಿದೆಲ್ಲ ಶ್ರುತಿಗಳೂ ಕೂಡ ನಿಸ್ಸಂಶಯವಾಗಿ ವಿಷ್ಣುವಿನ ಅಸಾಧಾರಣ ಧರ್ಮಗಳನ್ನು ಹೇಳಿ ಅವನು ಎಲ್ಲದರಿಂದ ಭಿನ್ನನು ಹಾಗೂ ಸರ್ವೋತ್ತಮನು ಎಂದು ಹೇಳುವವು. ಹೀಗೆ ನಾರಾಯಣಶ್ರುತಿಯು ಹೇಳುವದು.

**ವಿಶೇಷ ವಿಷಯಗಳು :** ನಾರಾಯಣಶ್ರುತಿಯ ಈ ವಾಕ್ಯವು ಭೇದವು ಧರ್ಮಿಸ್ವರೂಪ–ವೆಂಬವಿಷಯವನ್ನೂ, ವಿಷ್ಣುಸರ್ವೋತ್ತಮತ್ವಪ್ರತಿಪಾದಕಶ್ರುತಿಗಳಿಗೂ ಹಾಗೂ ವಿಷ್ಣುವು ಜೀವಜಡಾತ್ಮಕಪ್ರಪಂಚದಿಂದ ಭಿನ್ನನಾಗಿದ್ದಾನೆ ಎಂದು ಹೇಳುವ ಶ್ರುತಿಗಳಿಗೂ ಯಾಕೆ ವಿರೋಧವನ್ನು ಹೇಳಬಾರದು ಎಂಬುದನ್ನು ವಿವರಿಸುತ್ತದೆ. ಭೇದಶಬ್ದವು ಭೇದನಂ ಭೇದಃ ಎಂದು ಭಾವಸಾಧನವೂ ಅಂದರೆ ವ್ಯಾವೃತ್ತಿಯೂ ಹಾಗೂ ಭಿದ್ಯತೇ ಅನೇನ ಎಂದು ಕರಣಸಾಧನವೂ ಅಂದರೆ ಸ್ವಾತಂತ್ರ್ಯದಿ ಅಸಾಧಾರಣಧರ್ಮಪ್ರತಿಪಾದಕವೂ ಆಗಿದೆ. ಆದರೆ ಈ ಎರಡು ರೀತಿಯಿಂದ ಭೇದಶಬ್ದದ ನಿರ್ವಚನ ಮಾಡಿದರೂ ಕೂಡ ಅವುಗಳಲ್ಲಿ ಅಂತರವಿಲ್ಲ. ಭೇದವು ಧರ್ಮಿಸ್ವರೂಪವಾದ್ದರಿಂದ ಹಾಗೂ *ಧರ್ಮವಚನಗಳು ಧರ್ಮ್ಯಭಿಧಾಯಕ*–ವಾಗಿರುವದರಿಂದ ಸ್ವಾತಂತ್ರ್ಯದಿಧರ್ಮಗಳೂ ವಿಷ್ಣುವಿನನ್ನೇ ಬೋಧಿಸುವದರಿಂದ ಎರಡು ರೀತಿಯ ನಿರ್ವಚನಗಳಿಗೂ ತಾತ್ಪರ್ಯದಲ್ಲಿ ಭೇದವಿಲ್ಲವೆಂದು ತಿಳಿಯಬೇಕು.

Rarest Archiver

ಶ್ರುತಿಷಟ್ಪದಿಯಲ್ಲಿ ಈ ಶ್ರುತ್ಯರ್ಥವು ಹೀಗೆ;

*ಸರುವನಿಗಮಗಳಿಂತು ಸಾರಿವೆ*
*ಹರಿಯು ಜಡಚೇತನಕೆ ಭಿನ್ನನು*
*ಸರುವತಂತ್ರಸ್ವತಂತ್ರ ಸರ್ವೈಶ್ವರ್ಯಸರ್ವಜ್ಞ.*
*ಹರಿಯ ರೂಪವೆ ಭೇದವೆಂಬುದು*
*ಭರದೊಳುಸುರಿತು ನೇತಿ ನೇತಿಯು*
*ಸರುವವನ್ಯಶ್ರುತಿಗಳಂತೆಯೆ ಭೇದ ಪೇಳಿಹವು.* ॥

**೫೦. ಅಹಂ ಬ್ರಹ್ಮಾಸ್ಮಿ**

***(–ಬೃಹದಾರಣ್ಯಕೋಪನಿಷತ್, ೧–೪–೧೦, ೧೦+, ತ್ರಿಪಾದ್ವಿಭೂತಿಮಹಾನಾರಾಯಣೋಪನಿಷತ್–೭–೧೦+, ಪೈಂಗಲೋಪನಿಷತ್ ೩–೧, ತೇಜೋಬಿಂದೂಪನಿಷತ್–೪–೩೯, ೩–೨೬, ೬–೬೧, ೩–೬೧, ೩–೬೦+, ೩–೭೦, ೩–೭೧, ೩–೭೨, ೩–೭೩, ಈ ಉಪನಿಷತ್ತಿನಲ್ಲಿ ಇನ್ನೂ ಅನೇಕ ಕಡೆಗಳಲ್ಲಿ ಈ ವಾಕ್ಯ ಬಂದಿದೆ ಎಂದು ಉಪನಿಷದ್ವಾಕ್ಯಮಹಾಕೋಶ– ಗಜಾನನ ಶಂಭು ಸಾಧಲೆ, ಚೌಖಂಬಾ ವಿದ್ಯಾಭವನ ವಾರಣಾಸಿಯ ಪ್ರಕಾಶನದಲ್ಲಿ ನಿರ್ದೇಶಿಸಲಾಗಿದೆ. ಬಹ್ವೃಚೋಪನಿಷತ್ ೪ )***

ಈ ವಾಕ್ಯವು ಅನೇಕ ಉಪನಿಷತ್ತುಗಳಲ್ಲಿ ಕಂಡುಬಂದಿದ್ದು ಅದ್ವೈತಿಗಳು ಇದನ್ನು ಜೀವಬ್ರಹ್ಮೈಕ್ಯವನ್ನು ಹೇಳುವ ಸ್ಪಷ್ಟವಾದ ಪ್ರಮಾಣವೆಂದು ಪರಿಗಣಿಸಿದ್ದಾರೆ. ಅದ್ವೈತಿಗಳ ಪ್ರಕಾರ ಈ ವಾಕ್ಯಕ್ಕೆ ನಾನು ಬ್ರಹ್ಮನು ಇದ್ದೇನೆ ಎಂಬ ಅರ್ಥವು ಸ್ಪಷ್ಟವಿದೆ. ಶ್ರೀಮದಾಚಾರ್ಯರು ಈ ವಾಕ್ಯಕ್ಕೆ *ಬೃಹದಾರಣ್ಯಕಭಾಷ್ಯದಲ್ಲಿ* ಭವಿಷ್ಯತ್ಪರ್ವದ ವಿಸ್ತೃತವಾಗಿ ಶ್ಲೋಕಗಳನ್ನು ಉದಾಹರಿಸಿ ವಿವರಣೆ ಕೊಟ್ಟಿದ್ದಾರೆ.

**ಅರ್ಥ:–** ಅಹಂ ಎಂದರೆ ಅಹೇಯನು, ಬ್ರಹ್ಮ ಎಂದರೆ ಪರಿಪೂರ್ಣನು, ಅಸ್ಮಿ ಎಂದರೆ ಯಾವಾಗಲೂ ಇರುವವನೆಂದು ತಿಳಿಯಲ್ಪಡುವವನು.

**ಉಪನಿಷತ್ತಿನಲ್ಲಿ ಈ ವಾಕ್ಯದ ಹಿನ್ನೆಲೆ :–** ಈ ವಾಕ್ಯವು ಅನೇಕ ಉಪನಿಷತ್ತುಗಳಲ್ಲಿ ಉಪಲಬ್ಧವಿದ್ದರೂ ಸಾಮಾನ್ಯವಾಗಿ *ಬೃಹದಾರಣ್ಯಕೋಪನಿಷತ್ತಿನ* ಪ್ರಥಮಾಧ್ಯಾಯದ ಅವ್ಯಾಕೃತಬ್ರಾಹ್ಮಣವೆಂಬ ಐದನೆಯ ಬ್ರಾಹ್ಮಣದಲ್ಲಿ (ಅಖಿಲಭಾರತಮಾಧ್ವಮಹಾ–ಮಂಡಲದ ಪ್ರಕಾಶನವಾದ *ಸರ್ವಮೂಲಗ್ರಂಥಾಃ* ಸಂಪುಟ ೧ ೧೯೬೯ ರ ಹೊತ್ತಿಗೆಯ ೨೭೮ನೆಯ ಪುಟ ನೋಡಿರಿ) ಬರುವ ಈ ವಾಕ್ಯವನ್ನು ಭಾಷ್ಯ, ಟೀಕಾ, ಟಿಪ್ಪಣಿಗಳಲ್ಲಿ ಉಲ್ಲೇಖಿಸುವದು ರೂಢಿಯಲ್ಲಿದೆ.

ಈ ಉಪನಿಷತ್ತು ಶುಕ್ಲಯಜುರ್ವೇದದ ಕಾಣ್ವಶಾಖೆಯ *ಶಥಪಥಬ್ರಾಹ್ಮಣದ*

Rarest Archiver

ಭಾಗವಾಗಿದೆ. ಇದು ಪ್ರಧಾನವಾದ ದಶೋಪನಿಷತ್ತುಗಳಲ್ಲಿ ಒಂದಾಗಿದೆ. ಈ ಉಪನಿಷತ್ತಿನಲ್ಲಿ ಎಂಟು ಅಧ್ಯಾಯಗಳಿದ್ದು ಆ ಅಧ್ಯಾಯಗಳನ್ನು ಬೇರೆ ಬೇರೆ ಹೆಸರಿನ ಬ್ರಾಹ್ಮಣಗಳೆಂಬ ಭಾಗಗಳಲ್ಲಿ ವಿಭಾಗಿಸಲಾಗಿದೆ. ಸಾಮಾನ್ಯವಾಗಿ ಈ ಉಪನಿಷತ್ತಿಗೆ ಮೊದಲನೆಯ ಎರಡು ಅಧ್ಯಾಯಗಳಿಗೆ ಬಹಳಷ್ಟು ಭಾಷ್ಯಕಾರರು ಭಾಷ್ಯ ಬರೆಯದಿದ್ದರೂ ಕೂಡ ಶ್ರೀಮನ್ಮಧ್ವಾಚಾರ್ಯರು ಉಪನಿಷತ್ತಿನ ಎಲ್ಲ ವಿಷಯಗಳಿಗೆ ತಾತ್ವಿಕ ತಾತ್ಪರ್ಯವನ್ನು ಎತ್ತಿ ತೋರಿಸಿದ್ದಾರೆ. ಈ ಉಪನಿಷತ್ತಿಗೆ ಪರಮಪುರುಷನಾದ ಶ್ರೀ ಲಕ್ಷ್ಮೀಪತಿಯೇ ದೇವತೆಯು; ಚತುರ್ಮುಖ ಬ್ರಹ್ಮ, ಸೂರ್ಯ, ಯಾಜ್ಞವಲ್ಕ್ಯರು ಹಾಗೂ ಕಣ್ವರು ಋಷಿಗಳು. ಸಮಸ್ತ ಉಪನಿಷತ್ತು ಗದ್ಯರೂಪದಲ್ಲಿದೆಯಾದ ಕಾರಣ ಛಂದಸ್ಸನ್ನು ಹೇಳುವ ಕಾರಣವಿಲ್ಲ.

ಈ ಉಪನಿಷತ್ತಿನ ಪ್ರಥಮಾಧ್ಯಾಯದಲ್ಲಿ ಈ ಕೆಳಗಿನ ಏಳು ಬ್ರಾಹ್ಮಣಗಳಿವೆ;

೧. ಅಶ್ವಬ್ರಾಹ್ಮಣ, ೨. ಅಶ್ವಮೇಧಬ್ರಾಹ್ಮಣ, ೩ .ಉದ್ಗೀಥಬ್ರಾಹ್ಮಣ, ೪.ಪ್ರಾಜಾಪತ್ಯಬ್ರಾಹ್ಮಣ, ೫. ಅವ್ಯಾಕೃತಬ್ರಾಹ್ಮಣ, ೬. ಸಪ್ತಾನ್ನಬ್ರಾಹ್ಮಣ, ಮತ್ತು೭. ಷಷ್ಠಬ್ರಾಹ್ಮಣ. ಇದರಲ್ಲಿಯ ಐದನೆಯ ಅವ್ಯಾಕೃತ ಬ್ರಾಹ್ಮಣದಲ್ಲಿ ಈ ವಾಕ್ಯ ಬಂದಿದೆ.

ಮೊದಲನೆಯ ಅಶ್ವಬ್ರಾಹ್ಮಣದಲ್ಲಿ ಅಶ್ವರೂಪದಲ್ಲಿರುವ ಪರಮಾತ್ಮನ ವಿರಾಟ್ ರೂಪವು ವರ್ಣಿಸಲ್ಪಟ್ಟಿದೆ. ಎರಡನೆಯ ಅಶ್ವಮೇಧಬ್ರಾಹ್ಮಣದಲ್ಲಿ ಪರಮಾತ್ಮನು ಹೇಗೆ ಜಲಸೃಷ್ಟಿ, ಶ್ವೇತದ್ವೀಪದ ಸೃಷ್ಟಿ, ಮುಖ್ಯಪ್ರಾಣ, ಚತುರ್ಮುಖ ಬ್ರಹ್ಮ, ಸರಸ್ವತಿಯರ ಸೃಷ್ಟಿ ಮಾಡಿದನೆಂಬುದನ್ನು ಹೇಳಿ ಚತುರ್ಮುಖ ಬ್ರಹ್ಮನು ಮಾಡಿದ ಅಶ್ವಮೇಧ ಯಾಗದ ವರ್ಣನೆ ಮಾಡಿದ್ದಾರೆ. ಇದರಲ್ಲಿ ಕೇವಲ ಯಾಗದ ವರ್ಣನೆ ಇರದೆ ಪರಮ ಪುರುಷನ ಮಹಿಮೆಯ ವರ್ಣನೆ ಇದೆ. ಈ ತಾತ್ವಿಕ ವಿಷಯವು ಶ್ರೀಮದಾಚಾರ್ಯರ ಭಾಷ್ಯದಿಂದ ಸ್ಪಷ್ಟವಾಗುವದು. ಮೂರನೆಯ ಉದ್ಗೀಥ-ಬ್ರಾಹ್ಮಣದಲ್ಲಿ ಪರಮಪುರುಷನ ಸೃಷ್ಟಿಯಲ್ಲಿ ಮುಖ್ಯಪ್ರಾಣನು ಹೇಗೆ ಎಲ್ಲ ಇಂದ್ರಿಯಾಭಿಮಾನಿ ದೇವತೆಗಳಿಗಿಂತಲೂ ಉತ್ತಮನು ಎಂಬುದನ್ನು ಸ್ವಾರಸ್ಯಮಯವಾದ ಕಥಾನಕದಿಂದ ವಿವರಿಸಲಾಗಿದೆ. ಮುಖ್ಯಪ್ರಾಣನು ಜೀವೋತ್ತಮನು ಎಂಬ ವಿಷಯವು ಉದ್ಗೀಥಬ್ರಾಹ್ಮಣದ ಪ್ರಧಾನ ಕಥಾವಸ್ತುವಾಗಿದೆ. ನಾಲ್ಕನೆಯ ಪ್ರಾಜಾಪತ್ಯಬ್ರಾಹ್ಮಣದಲ್ಲಿ ಪರಮಪುರುಷನ ಸೃಷ್ಟಿಕ್ರಮದ ವಿಶೇಷ ವಿಷಯಗಳ ವರ್ಣನೆಯ ಮುಖಾಂತರ ಆತನ ಮಹಿಮೆಯೇ ಉಕ್ತವಾಗಿದೆ. ಮನುಷ್ಯಸೃಷ್ಟಿ, ಪ್ರಾಣಿಸೃಷ್ಟಿಯೇ ಮೊದಲಾದವುಗಳ ವಿವರಣೆಯು ಸಂಶೋಧನೀಯ ವಿಷಯವಾದ ವಿವಿಧ ಜೀವರಾಶಿಗಳ ಬಾಹ್ಯಾಕಾರದ ರಹಸ್ಯದ ಮೇಲೆ ಬೆಳಕು ಚೆಲ್ಲುವದು. ಇಲ್ಲಿಯ ವರೆಗೆ ಬಾಹ್ಯಸೃಷ್ಟಿಯನ್ನು ಕುರಿತು ವಿವರಣೆ ಇದ್ದರೆ ಮುಂದಿನ ಐದನೆಯ ಬ್ರಾಹ್ಮಣವಾದ

Rarest Archiver

ಅವ್ಯಾಕೃತ ಬ್ರಾಹ್ಮಣದಲ್ಲಿ ಪರಮಪುರುಷನಿಂದ ಸೃಷ್ಟವಾದ ಜಗತ್ತಿನ ಆಂತರಿಕ ವಿಷಯಗಳ ಬಗ್ಗೆ ವಿವೇಚನೆ ಇದೆ. ಈ ಪ್ರಪಂಚದ ವ್ಯಾಪಾರವು ಯಾರಿಂದ ನಡೆಯುವದು? ಸ್ವತಃ ತಾನು ಎಲ್ಲ ಆಗುಹೋಗುಗಳನ್ನು ನಿಯಂತ್ರಿಸಲು ಅಶಕ್ತನು ಎಂಬುದು ಪ್ರತಿಯೊಬ್ಬ ಜೀವಿಗೂ ಬರುವ ಅನುಭವವಾಗಿದೆ. ಹೀಗಿದ್ದಾಗ ಪ್ರಪಂಚದ ನಿಯಾಮಕನು ಪರಮಪುರುಷನೇ ಆಗಿರುವನೆಂಬುದು ಪ್ರಪಂಚದ ಜೀವಿಗಳಿಗೆ ತಿಳಿದಿದೆಯೋ? ಆ ಪರಮಪುರುಷನಿಗಾದರೂ ಇದರ ಬಗ್ಗೆ ಅರಿವು ಇದೆಯೋ ಇಲ್ಲವೋ? ಯಾರೊಬ್ಬರಿಗೆ ಈ ವಿಷಯಕ್ಕೆ ತಿಳಿದಿರದಿದ್ದರೆ ಅದನ್ನು ಒಪ್ಪಿಕೊಳ್ಳುವದು ಹೇಗೆ? ಪರಮಪುರುಷನಿಗೆ ತಾನು ಎಲ್ಲದರ ಅಂತರ್ಯಾಮಿಯಾಗಿ ಅದನ್ನು ನಿಯಂತ್ರಿಸುತ್ತಿದ್ದೇನೆ ಎಂಬ ತಿಳುವಳಿಕೆ ಇದ್ದರೆ ಅದಕ್ಕೆ ಪ್ರಮಾಣವೇನು? ಇವೇ ಮೊದಲಾದ ಪ್ರಶ್ನೆಗಳಿಗೆ ಇಲ್ಲಿ ವಿವರಣೆ ಇದೆ. ಸರ್ವ ವೈದಿಕರೂ ನಿರ್ದುಷ್ಟವಾದ ಪ್ರಮಾಣವೆಂದು ಒಪ್ಪಿಕೊಂಡ ಉಪನಿಷತ್ತಿನಲ್ಲಿಯೇ ಈ ಪ್ರಶ್ನೆಗಳಿಗೆ ವಿವರಣೆ ಇದ್ದುದು ವೇದಮಾತೆಯ ಪರಮ ಕಾರುಣ್ಯಕ್ಕೆ ನಿದರ್ಶನ. ಈ ಸಂದರ್ಭದಲ್ಲಿಯೇ **ಅಹಂ ಬ್ರಹ್ಮಾಸ್ಮಿ** ಎಂಬ ವಾಕ್ಯವು ಪ್ರಸ್ತುತವಾಗಿದೆ. ಉಪನಿಷತ್ತಿನಲ್ಲಿ ಈ ಭಾಗದ ಸಂಪೂರ್ಣಪಾಠವು ಹೀಗಿದೆ:-

**ತದಾಹುರ್ಯದ್ ಬ್ರಹ್ಮವಿದ್ಯಯಾ ಸರ್ವಂ ಭವಿಷ್ಯಂತೋ ಮನುಷ್ಯಾ ಮನ್ಯಂತೆ ಕಿಮು ತದ್ ಬ್ರಹ್ಮಾವೇದ್ ಯಸ್ಮಾತ್ ತತ್ಸರ್ವಂ ಅಭವದಿತಿ । ಬ್ರಹ್ಮ ವಾ ಇದಮಗ್ರ ಆಸೀತ್ । ಆತ್ಮಾನಮೇವಾವೇದ್ ಅಹಂ ಬ್ರಹ್ಮಾಸ್ಮೀತಿ । ತಸ್ಮಾತ್ ತತ್ ಸರ್ವಂ ಅಭವತ್ । ತದ್ ಯೋ ಯೋ ದೇವಾನಾಂ ಪ್ರತ್ಯಬುದ್ಧ್ಯತ ಸ ಏವ ತದಭವತ್ । ತಥರ್ಷೀಣಾಮ್ । ತಥಾ ಮನುಷ್ಯಾಣಾಮ್ । ತದ್ಧೈತತ್ಪಶ್ಯನ್ ಋಷಿರ್ವಾಮದೇವಃ ಪ್ರತಿಪೇದೇ ಅಹಂ ಮನುರಭವಂ ಸೂರ್ಯಶ್ಚೇತಿ । ತದಿದಮಪ್ಯೇತರ್ಹಿ ಯ ಏವಂ ವೇದ *ಅಹಂ ಬ್ರಹ್ಮಾಸ್ಮೀತಿ* ಸ ಇದಂ ಸರ್ವಂ ಭವತಿ । ತಸ್ಯ ಹ ನ ದೇವಾಶ್ಚ ನಾಭೂತ್ಯಾ ಈಶತೇ । ಆತ್ಮಾ ಹ್ಯೇಷಾಮ್ ಸ(ಮ)ಭವತಿ ।**

ಇದಕ್ಕೆ ಶ್ರೀಮದಾಚಾರ್ಯರ ಭಾಷ್ಯ ಹೀಗಿದ್ದು ಇದು ಉಪನಿಷದ್ವಾಕ್ಯದ ಅನ್ವಯ ಹಾಗೂ ಅರ್ಥ ಮಾಡಲು ಬಹಳ ಉಪಕಾರಕವಾಗಿದೆ. ಈ ವಾಕ್ಯವು ಬಹಳ ವಿವಾದಾತ್ಮಕ ವಾಕ್ಯವಾಗಿರುವದರಿಂದ ಶ್ರೀಮದಾಚಾರ್ಯರ ಪ್ರಸಕ್ತ ಭಾಗದ ಭಾಷ್ಯವನ್ನು ಇಲ್ಲಿ ಕೊಡಲಾಗಿದೆ :- **ಬ್ರಹ್ಮವಿದ್ಯಯಾ ಸರ್ವಂ ಭವಿಷ್ಯಂತಃ ಆತ್ಮಯೋಗ್ಯತಾಪೂರ್ತಿಂ ಪ್ರಾಪ್ನುವಂತಃ ಮಹಾಂತಃ ಯದಾಹುಃ ಬ್ರಹ್ಮವಿದ್ಯಯಾ ಸ್ವಯೋಗ್ಯಂ ಸರ್ವಂ ಪ್ರಾಪ್ಯತೆ ಇತಿ । ನಿತ್ಯನಿರ್ದುಃಖಾನಂದಾನುಭವರೂಪಃ ಹಿ ಸ್ವತಃ ಉತ್ತಮಃ ಜೀವಃ । ತಾದೃಶಂ ರೂಪಂ ಅಜ್ಞಾನಾತ್ ತಿರೋಹಿತಂ**

Rarest Archiver

ಬ್ರಹ್ಮವಿದ್ಯಯಾ ಅಭಿವ್ಯಜ್ಯತೇ ಏವ । ನ ಚ ಅನ್ಯಥಾ ಅಭಿವ್ಯಜ್ಯತೇ ಇತಿ ಸಂತಃ ಯದಾಹುಃ ತತ್ರ ಕೇಚಿನ್ಮನುಷ್ಯಾಃ ಇತಿ ಮನ್ಯಂತೇ ಸ್ವರೂಪಮಪಿ ಬ್ರಹ್ಮವಿದ್ಯಯಾ ಅಭಿವ್ಯಜ್ಯತೇ ಚೇತ್ ತದ್ ಬ್ರಹ್ಮ ಅಪಿ ಯಸ್ಮಾತ್ ಸರ್ವಂ ಅಭವತ್ ಪರಿಪೂರ್ಣಂ ಅಭವತ್ ತಸ್ಮಾತ್ ಸ್ವರೂಪಂ ಜ್ಞಾತ್ವೈವ ಅಭವತ್ ಕಿಮ್ ಇತಿ । ಸತ್ಯಮ್ । ತದಪಿ ಸ್ವರೂಪಂ ನಿತ್ಯಾಪರೋಕ್ಷಜ್ಞಾನೇನ ಸರ್ವದಾ ಜಾನಾತಿ ಏವ । ಅತ ಏವ ಸರ್ವದಾ ಪರಿಪೂರ್ಣಮಿತಿ ತೇಷಾಂ ಪರಿಹಾರಃ । ತದಾತ್ಮಾನಮೇವಾವೇತ್ತಸ್ಮಾತ್ಸರ್ವಮಭವದಿತಿ ॥ ಆತ್ಮಾ ವಾ ಇದಮೇಕ ಏವ ಅಗ್ರೇ ಆಸೀತ್ ಸದೇವ ಸೋಮ್ಯ ಇದಮಗ್ರ ಆಸೀತ್ ಇತ್ಯಾದಿವತ್ ಸದಾತನಜ್ಞಾನಂ ಪೂರ್ಣಭಾವಂ ಚ ಆಹ । ಇದಮಗ್ರೇ ಅಸ್ಯಾಗ್ರೇ ಇತಿ ಷಷ್ಠ್ಯರ್ಥೇ ದ್ವಿತೀಯಾ । ಅಹಂ ಅಹೇಯಂ ಬ್ರಹ್ಮ ಪರಿಪೂರ್ಣಮ್ । ಅಸ್ಮಿ ಸರ್ವದಾ ಅಸ್ತೀತಿ ಮೇಯಂ ಇತ್ಯೇತೈಃ ವಿಶೇಷಣೈಃ ಅತ್ಮಾನಂ ಸ್ವರೂಪಂ ಏವ ಅವೇತ್ । ಯದಿ ಅಹಂ ಶಬ್ದಃ ಅಸ್ಮಚ್ಛಬ್ದಾರ್ಥವಾಚೀ ಅಸ್ಮಿಶಬ್ದಶ್ಚ ಉತ್ತಮಪುರುಷೇ ತದಾ ಆತ್ಮಾನಮ್ ಇತಿ ವ್ಯರ್ಥಂ ಸ್ಯಾತ್ । ಅತಃ ಅಹಮಸ್ಮಿಶಬ್ದೌ ಉಕ್ತಾರ್ಥೌ ಏವ । ಅಗ್ರೇ ಅನಾದಿಕಾಲತಃ ಏವ ವಿದ್ಯಮಾನಂ ಆತ್ಮಾನಂ ಜಾನಾತಿ ಚ ತದ್ ಬ್ರಹ್ಮ ಇತ್ಯರ್ಥಃ । ಸರ್ವನಿಯಂತೃತ್ವೇನ ಸರ್ವಗತತ್ವಾತ್ ಅಹೇಯಮ್ । ತದ್ಯೋಽಹಂ ಸೋಽಸೌ ಸೋಽಹಂ ಯೋಽಸಾವಸೌ ಪುರುಷಃ ಸೋಽಹಮಸ್ಮಿ ಇತ್ಯಾದಿಷು ಅಪಿ ಅಹಂ ಶಬ್ದಃ ಅಂತರ್ಯಾಮಿತ್ವೇನ ಅಹೇಯತ್ವವಾಚೀ ॥

ಇದರ ತಾತ್ಪರ್ಯ ಹೀಗೆ :– ಬ್ರಹ್ಮವಿದ್ಯೆಯಿಂದ ತಮ್ಮ ತಮ್ಮ ಯೋಗ್ಯತೆಗನುಗುಣವಾಗಿ ಪರಿಪೂರ್ಣತೆಯನ್ನು ಪಡೆಯುವಂಥ ದೊಡ್ಡ ಜ್ಞಾನಿಗಳು ಬ್ರಹ್ಮಜ್ಞಾನದಿಂದ ಪರಿಪೂರ್ಣತೆಯು ಲಭಿಸುವದು ಹಾಗೂ ಮತ್ತಾವುದರಿಂದಲೂ ಅದು ಲಭಿಸಲಾರದೆಂದು ಹೇಳುವರು. ಉತ್ತಮ ಜೀವನು ಸ್ವತಃ ನಿತ್ಯನಿರ್ದುಃಖಾನಂದಾ–ನುಭವಸ್ವರೂಪನಿದ್ದರೂ ಈ ರೂಪವು ಅಜ್ಞಾನದ ಕಾರಣ ಮರೆಯಾಗಿರುವದು. ಬ್ರಹ್ಮವಿದ್ಯೆಯಿಂದ (ಪರಮಾತ್ಮನು ಸರ್ವಗುಣಪರಿಪೂರ್ಣನು, ಸರ್ವತಂತ್ರಸ್ವತಂತ್ರನು ಹಾಗೂ ಜೀವನು ಅವನ ಪ್ರತಿಬಿಂಬನು, ತದಧೀನನು ಎಂದು ತಿಳಿಸಿ ಕೊಡುವ ವಿದ್ಯೆ) ಅದು ಪುನಃ ಅನುಭವಕ್ಕೆ ಬರುವದು. ಹೀಗೆ ಸಜ್ಜನರು ಹೇಳುವರು. ಈ ವಿಷಯಕ್ಕೆ ಕೆಲ ಮನುಷ್ಯರು ಹೀಗೆ ಹೇಳುತ್ತಾರೆ, ಸ್ವತಃ ಪರಿಪುರ್ಣವಾದ ಚೇತನಕ್ಕೆ ಬ್ರಹ್ಮವಿದ್ಯೆಯಿಂದಲೇ ತಾನು ಪರಿಪೂರ್ಣನು ಎಂದು ತಿಳಿಯುತ್ತಿದ್ದರೆ ಪರಿಪೂರ್ಣ–ವೆಂದು ಎಲ್ಲರೂ ಒಪ್ಪಿಕೊಂಡ ಪರಮಪುರುಷನಿಗೂ ಕೂಡ ತಾನು ಪರಿಪೂರ್ಣ–ಸ್ವರೂಪನೆಂಬ ಅರಿವು ಬ್ರಹ್ಮವಿದ್ಯೆಯಿಂದಲೇ ಬಂದಿದೆಯೋ ಹೇಗೆ ? ಈ ಪ್ರಶ್ನೆಗೆ ಉತ್ತರವೆಂದರೆ ಅಹುದು, ಆ ಪರಮಪುರುಷನೂ ಕೂಡ ತಾನು ಪರಿಪೂರ್ಣನೆಂದು

Rarest Archiver

ನಿತ್ಯಾಪರೋಕ್ಷದಿಂದ ತಿಳಿದೇ ತಿಳಿದಿರುತ್ತಾನೆ. ಅವನು ಮೊದಲು ಅಪರಿಪೂರ್ಣ–ನಾಗಿದ್ದು ಆಮೇಲೆ ಪರಿಪೂರ್ಣನಾದನು ಎಂದು ತಿಳಿಯಬಾರದು. ಏಕೆಂದರೆ, ಪ್ರಮಾಣವೆಂದು ಪರಿಗಣಿಸಲ್ಪಟ್ಟ ಶ್ರುತಿಯಲ್ಲಿಯೇ **ತದಾತ್ಮಾನಂ...** ಇತ್ಯಾದಿ ವಾಕ್ಯವೂ, **ಆತ್ಮಾ ವಾ ಇದಮೇಕಮೇವ ಅಗ್ರೇ ಆಸೀತ್, ಸದೇವ ಸೋಮ್ಯ ಇದಮಗ್ರ ಆಸೀತ್** ಇತ್ಯಾದಿ ವಾಕ್ಯಗಳಿವೆ. ಇವುಗಳಿಂದ ಆ ಪರಮಪುರುಷನು ತನ್ನನ್ನೇ ತಿಳಿದುಕೊಂಡನು, ಆದರಿಂದ ಅವನು ಪರಿಪೂರ್ಣನಾದನು, ಆತ್ಮನೊಬ್ಬನೇ ಈ ಸೃಷ್ಟಿಗಿಂತ ಮೊದಲೇ ಇದ್ದನು, **ಸತ್** ಎಂದು ಕರೆಯಿಸಿಕೊಳ್ಳಲ್ಪಡುವ ಪರಮಪುರುಷನೊಬ್ಬನೇ ಈ ಜಗತ್ತಿಗಿಂತ ಮೊದಲು ಇದ್ದನು ಎಂದು ಈ ವಾಕ್ಯಗಳ ತಾತ್ಪರ್ಯವು. ಇಲ್ಲಿ **ಅವೇತ್**– ತಿಳಿದಿದ್ದನು, **ಆಸೀತ್** – ಇದ್ದನು ಇತ್ಯಾದಿ ಭೂತಕಾಲದ ಕ್ರಿಯಾಪದಗಳ ಪ್ರಯೋಗವಿರುವದರಿಂದ ಯಾವಾಗಲೂ ತಿಳಿದಿರುವನು, ಯಾವಾಗಲೂ ಇರುವನು ಎಂಬ ಅರ್ಥವೇ ಲಭಿಸುವದು. ಅನಾದಿ ನಿತ್ಯವಾದ ಶ್ರುತಿಯಲ್ಲಿ ಭೂತಕಾಲದ ಪ್ರಯೋಗವು ಆ ಕ್ರಿಯೆಯ ನಿತ್ಯತೆಯನ್ನೇ ಬೋಧಿಸುವದೇ ಹೊರತು ಒಂದು ಕಾಲದಲ್ಲಿ ಆ ಕ್ರಿಯೆ ಇರಲಿಲ್ಲ ಎಂಬ ಅರ್ಥವನ್ನು ಕೊಡಲಾರದು. ಶ್ರುತಿಯ ಈ ವಾಕ್ಯವನ್ನು ಹಿಂದೆ, ಇಂದು, ಮುಂದು, ಎಂದು ಹೇಳಿದರೂ ತಿಳಿದಿದ್ದನು, ಇದ್ದನು ಎಂಬ ಅರ್ಥವೇ ದೊರೆಯುವದು. **ಇದಮಗ್ರೇ** ಎಂದರೆ **ಅಸ್ಯ ಅಗ್ರೇ** ಎಂದರ್ಥ **ಇದಮ್** ಎಂಬ ದ್ವಿತೀಯಾ ವಿಭಕ್ತಿಯ ಪದವು **ಅಸ್ಯ** ಎಂಬ ಷಷ್ಠೀ ವಿಭಕ್ತಿಯ ಅರ್ಥದಲ್ಲಿದೆ ಎಂದು ತಿಳಿಯಬೇಕು. ಪ್ರಮಾಣಪ್ರಮಿತವಾದ ಅಂದರೆ ಸತ್ಯವಾದ ಈ ಜಗತ್ತಿನ ಮೊದಲು ಎಂಬರ್ಥ.

ಇನ್ನು **ಅಹಂ ಬ್ರಹ್ಮಾಸ್ಮಿ** ಎಂಬ ವಾಕ್ಯದಲ್ಲಿಯ **ಅಹಂ** ಎಂದರೆ ಅಹೇಯನು ಅಂದರೆ ಯಾರಿಂದಲೂ ತಿರಸ್ಕರಿಸಲು ಅಥವಾ ತ್ಯಜಿಸಲು ಸಾಧ್ಯವಿಲ್ಲ, ಅಂಥವನು ಎಂದರ್ಥ. (ಓಂ ಹೇಯತ್ವಾವಚನಾಚ್ಚ ಓಂ– ಬ್ರ. ಸೂ ) **ಬ್ರಹ್ಮ** ಎಂದರೆ ಪರಿಪೂರ್ಣನು, **ಅಸ್ಮಿ** ಎಂದರೆ **ಸರ್ವದಾ ಅಸ್ತಿ ಇತಿ ಮೇಯಮ್,** ಅಂದರೆ ಯಾವಾಗಲೂ ಇರುವವನು ಎಂದು ತಿಳಿಯಲ್ಪಡಬೇಕಾದವನು ಎಂದರ್ಥ. ಅಂದರೆ ಪರಮಪುರುಷನು ತಾನು ಅಹೇಯನು, ಪರಿಪೂರ್ಣನಾದವನು ಹಾಗೂ ಯಾವಾಗಲೂ ಇರುವವನು ಎಂದು ತಿಳಿಯಲ್ಪಡಬೇಕಾದವನು ಎಂಬ ಮೂರು ವೈಶಿಷ್ಟ್ಯಗಳಿಂದ ಕೂಡಿದವನೆಂದು ತನ್ನ ಸ್ವರೂಪವನ್ನು ತಿಳಿದನು. ಬ್ರಹ್ಮನು ಅಹೇಯನೇಕೆ ಎಂದರೆ ಅವನು ಸರ್ವಗತನಾಗಿದ್ದು ಸರ್ವನಿಯಾಮಕನಾಗಿರುವದರಿಂದ ಯಾರು ತಾನೆ ಇವನನ್ನು ತ್ಯಜಿಸಲು ಸಾಧ್ಯ ? ಅಹಂ ಎಂದರೆ ಅಂತರ್ಯಾಮಿಯು ಅಹೇಯನು ಎಂಬರ್ಥವನ್ನೇ ಕೊಡುವದು. ಅಸ್ಮತ್ ಶಬ್ದದ ಪ್ರಥಮಾ ವಿಭಕ್ತಿಯ ರೂಪವೆಂದು ಮೇಲೆ ನೋಡಲು ಕಾಣುತ್ತಿದ್ದರೂ ಪ್ರಕರಣವನ್ನು ಗಮನಿಸಿದಾಗ ಅದು ಅಹೇಯನು ಅಂತರ್ಯಾಮಿಯು

Rarest Archiver

ಎಂಬರ್ಥವನ್ನೇ ಕೊಡುವದು. ಅದೇ ರೀತಿ ಅಸ್ಮಿ ಎಂಬುದು ಅಸ್ ಧಾತುವಿನ ಉತ್ತಮ (ಪ್ರಥಮ) ಪುರುಷ ಏಕವಚನದ ರೂಪವೆಂದು ತೋರುವದು. ಆದರೆ ಅದು ಹಾಗಲ್ಲ. ಪುನಃ ಪ್ರಕರಣವನ್ನು ಗಮನಿಸಿದಾಗ ಅದು ಯಾವಾಗಲೂ ಇರುವವನು ಎಂದು ತಿಳಿಯಲ್ಪಡಬೇಕಾದವನು ಎಂಬರ್ಥವನ್ನೇ ಕೊಡುವದು. ಪರಮಪುರುಷನ ಬಗ್ಗೆ ವಿಚಾರ ನಡೆದಾಗ ಜೀವನು ನಾನು ಬ್ರಹ್ಮನು ಎಂದು ಅರ್ಥ ಮಾಡುವದು ಸರ್ವಥಾ ಕೂಡುವದಿಲ್ಲ. ಈ ಪ್ರಕಾರದ ಶ್ರುತಿತಾತ್ಪರ್ಯಾಪರಿಜ್ಞಾನದಿಂದ ಬಂದ ಅರ್ಥವನ್ನು ನಿರಾಕರಿಸುವದಕ್ಕೋಸ್ಕರವೇ ವೇದಮಾತೆಯು ಪರಮ ಕರುಣೆಯಿಂದ *ಛಾಂದೋಗ್ಯೋಪನಿಷತ್ತಿನಲ್ಲಿ* **ಸ ಆತ್ಮಾಽತತ್ವಮಸಿ** ನೀನು ಆ ಆತ್ಮನಲ್ಲ ಎಂದು ಒಂಬತ್ತು ದೃಷ್ಟಾಂತಗಳನ್ನು ಕೊಟ್ಟು ಜೀವಬ್ರಹ್ಮೈಕ್ಯವನ್ನು ನಿರಾಕರಿಸಿ ಜೀವಬ್ರಹ್ಮಭೇದವನ್ನು ವಿವರಿಸಿದ್ದಾಳೆ. *ಬೃಹದಾರಣ್ಯಕೋಪನಿಷತ್ತಿನಲ್ಲಿ* ಒಂದು ರೀತಿ, *ಛಾಂದೋಗ್ಯೋಪನಿಷತ್ತಿನಲ್ಲಿ* ಇನ್ನೊಂದು ರೀತಿ, **ಪ್ರಾಣೋ ವಾ ಅಹಮಸ್ಮಿ ಋಷೇ** ಎಂದು *ಐತರೇಯೋಪನಿಷತ್ತಿನಲ್ಲಿ* ಇನ್ನೊಂದು ರೀತಿ ಉಪದೇಶವಿರಲಾರದು, **ಗತಿಸಾಮಾನ್ಯಾತ್** (ಬ್ರ.ಸೂ) ಜ್ಞಾನವು ಏಕರೂಪವಾಗಿರುವದರಿಂದ ವೇದಮಾತೆಯು ಪರಮಕರುಣೆಯಿಂದ ಅನೇಕ ಕಡೆಗಳಲ್ಲಿ ತಾರಕವಾದ ಒಂದೇ ತತ್ವವನ್ನು ಉಪದೇಶಿಸಿದ್ದಾಳೆ. ಶ್ರೀ ವೇದವ್ಯಾಸರು ಈ ವಾಕ್ಯಗಳ ಅರ್ಥವನ್ನು ಅಂತರ್ಯಾಮಿ–ಪರವಾಗಿ ಮಾಡಬೇಕೆಂದು ತಿಳಿಸಲು **ನ ವಕ್ತುರಾತ್ಮೋಪದೇಶಾತ್ ಇತಿ ಚೇತ್ ಅಧ್ಯಾತ್ಮಸಂಬಂಧಭೂಮಾಹ್ಯಸ್ಮಿನ್** ಎಂಬ ಸೂತ್ರ ರಚಿಸಿ ಇಂಥ ಶ್ರುತಿವಾಕ್ಯಗಳ ತಾತ್ಪರ್ಯವನ್ನು ಅಂತರ್ಯಾಮಿಪರವಾಗಿ ಹೇಳಬೇಕೆಂದು ತೋರಿಸಿದ್ದಾರೆ. ಹೀಗೇಕೆ ಹೇಳಬೇಕೆಂಬುದಕ್ಕೆ ಶ್ರೀ ವೇದವ್ಯಾಸರೇ **ಅಸ್ಮಿನ್ ಅಧ್ಯಾತ್ಮಸಂಬಂಧಭೂಮಾ** ಅಧ್ಯಾತ್ಮದ –ಅಧಿಕಾತ್ಮದ– ಬ್ರಹ್ಮನ ಸಂಬಂಧಬಾಹುಲ್ಯವಿರುವದರಿಂದ ಎಂದು ಕಾರಣ ಕೊಟ್ಟು ಹೇಳಿದ್ದಾರೆ.

*ಐತರೇಯೋಪನಿಷತ್ತಿನ* **ಪ್ರಾಣೋ ವಾ ಅಹಮಸ್ಮಿ ಋಷೇ** ಎಂಬ ವಾಕ್ಯವು ಈ ಸೂತ್ರಕ್ಕೆ ವಿಷಯವಾಕ್ಯವಾಗಿರುವದರಿಂದ ಪ್ರಸ್ತುತ ಸಂದರ್ಭದಲ್ಲಿ ಅದನ್ನು ವಿವರಿಸುವದು ಅವಶ್ಯ. ಇಂದ್ರನು ವೃತ್ರಾಸುರನನ್ನು ಸಂಹರಿಸಿದ ವಿಷಯವು ಶ್ರೀಮದ್ಭಾಗವತದಲ್ಲಿ (ಸ್ಕಂಧ ೬ ಅಧ್ಯಾಯ ೧೨) ಉಕ್ತವಾಗಿದೆ. ಆಮೇಲೆ ಮಹೇಂದ್ರಪದವಿಯನ್ನು ಪಡೆಯುವದಕ್ಕೋಸ್ಕರ ಇಂದ್ರನು ಮಹಾವ್ರತವೆಂಬ ಯಜ್ಞವನ್ನು ಮಾಡಿದನು. **ವೃತ್ರಂ ಹತ್ವಾ ಪುರೇಂದ್ರಸ್ತು ಮಹೇಂದ್ರತ್ವಾಭಿಪತ್ತಯೇ । ಮಹಾವ್ರತಂ ಕರ್ಮ ಚಕ್ರೇ ಹೋತ್ರಂ ಚಕ್ರೇಽಥ ಕೌಶಿಕಃ ॥ ಭೃಗುರಧ್ವರ್ಯುರ್–ರಭವತ್ ಬ್ರಹ್ಮಾ ಬ್ರಹ್ಮಾಭವತ್ ಸ್ವಯಮ್ । ಉದ್ಗಾತಾ ವಾಯುರಭವತ್ ಸ್ವಯಂ ನಾರಾಯಣಃ ಪ್ರಭುಃ ॥ ಸಾದಸ್ಯಮಕರೋತ್ ತತ್ರ ತದನ್ಯೇಽನ್ಯೇಽಪಿ**

Rarest Archiver

**ಋತ್ವಿಜಃ ॥** ಈ *ಬ್ರಹ್ಮಾಂಡಪುರಾಣದ ವಾಕ್ಯವು* ಶ್ರೀಮದಾಚಾರ್ಯರಿಂದ *ಐತರೇಯಭಾಷ್ಯದಲ್ಲಿ ಉದಾಹರಿಸಲ್ಪಟ್ಟಿದೆ.* ಈ ಯಜ್ಞಕ್ಕೆ ವಿಶ್ವಾಮಿತ್ರಋಷಿಗಳೇ ಹೋತೃಗಳು. ಭೃಗುಋಷಿಗಳು ಅಧ್ವರ್ಯುಗಳು, ಬ್ರಹ್ಮಸ್ಥಾನದಲ್ಲಿ ಸ್ವತಃ ಬ್ರಹ್ಮದೇವರು, ವಾಯುದೇವರು ಉದ್ಗಾತೃವಿನ ಸ್ಥಾನದಲ್ಲಿ, ಸ್ವತಃ ನಾರಾಯಣನು ದೇವತಾಸ್ಥಾನದಲ್ಲಿ ಉಪಸ್ಥಿತನು, ಮತ್ತು ಇನ್ನುಳಿದ ಋತ್ವಿಜರು ಆ ಯಜ್ಞದಲ್ಲಿ ಸನ್ನಿಹಿತರಾಗಿದ್ದರು. (ಅದೆಂಥ ಭವ್ಯ ಯಜ್ಞವಾಗಿರಬೇಕು!) ವಿಶ್ವಾಮಿತ್ರರು ಬೃಹತೀಸಹಸ್ರವೆಂಬ ಬೃಹತೀ ಛಂದಸ್ಸಿನ ಸಹಸ್ರ ವೇದಮಂತ್ರಗಳನ್ನು ಪಠಿಸಲು ಉದ್ಯುಕ್ತರಾದಾಗ ಬೃಹತೀ-ಸಹಸ್ರದಿಂದ ಪ್ರತಿಪಾದ್ಯರಾದ ವಿಷ್ಣು ಹಾಗೂ ವಾಯುಗಳು ತಮಗೆ ಅತ್ಯಂತ ಪ್ರೀತ್ಯಾಸ್ಪದವಾದ ಆ ಉಪನಿಷನ್ಮಂತ್ರವನ್ನು ಕೇಳಲು ಇಂದ್ರನಲ್ಲಿ ವಿಶೇಷವಾಗಿ ಆವಿಷ್ಟರಾದರು. ಮೊದಲನೆಯ ಸಲ ವಿಶ್ವಾಮಿತ್ರರು ಆ ಮಂತ್ರಗಳನ್ನು ಪಠಿಸಿದಾಗ ಇಂದ್ರನಲ್ಲಿ ಆವಿಷ್ಟನಾದ ಶ್ರೀ ಹರಿಯು ಸಂಪ್ರೀತನಾಗಿ ವಿಶ್ವಾಮಿತ್ರರಿಗೆ ಮುಕ್ತಲೋಕಕ್ಕೆ ಹೋಗಲು ಬೇಕಾದ ತನ್ನ ಅನುಗ್ರಹವನ್ನು ಕೊಟ್ಟನು. ವಿಶ್ವಾಮಿತ್ರರು ಇನ್ನೊಂದು ಸಲ ಬೃಹತೀಸಹಸ್ರವನ್ನು ಪಠಿಸುತ್ತ ಪರಮಾತ್ಮ ನಿನಗಿದು ತೃಪ್ತಿ ತರಲೆಂದು ಪ್ರಾರ್ಥಿಸಿದರು. ಆಗ ಶ್ರೀ ಹರಿಯು ಆ ಮುನಿಗೆ ಮುಕ್ತಪುರಿಗೆ ಹೋಗಲು ಬೇಕಾದ ಅನುಗ್ರಹವನ್ನು ದಯಪಾಲಿಸಿದನು. ಇನ್ನೂ ಒಂದು ಸಲ ಪಠಿಸೆಂದು ಹೇಳಿದಾಗ ವಿಶ್ವಾಮಿತ್ರರು ಭಕ್ತಿಯಿಂದ ಪರಮಾತ್ಮ ನಿನಗಿದು ಅನ್ನದಂತೆ ತೃಪ್ತಿಪಡಿಸಲಿ ಎಂದು ಪ್ರಾರ್ಥಿಸಿ ಬೃಹತೀಸಹಸ್ರವನ್ನು ಪಠಿಸಿದರು. ಆಗ ಶ್ರೀ ಹರಿಯ ಅನುಗ್ರಹದಿಂದ ಮುಕ್ತಲೋಕದಲ್ಲಿಯ ಮುಕ್ತಪುರಿಯಲ್ಲಿಯ ಮುಕ್ತಿಯ ಅಂತಃಪುರವನ್ನು ಪ್ರವೇಶಿಸಿ ಶ್ರೀ ಹರಿಯ ಸಾಮೀಪ್ಯವನ್ನು ಪಡೆಯಲು ಬೇಕಾದ ಶ್ರೀಹರಿಯ ಅನುಗ್ರಹವನ್ನು ಪಡೆದರು. ಇಂದ್ರನು ಆಗ ವಿಶ್ವಾಮಿತ್ರರ ಮೇಲೆ ಸಂತುಷ್ಟನಾಗಿ ಋಷಿಗಳೆ, ನನ್ನನ್ನು ಸಂತೋಷಪಡಿಸಿದ ನಿಮಗೆ ಒಂದು ವರವನ್ನು ಕೊಡುವೆ ಕೇಳಿರಿ ಎಂದನು. ಆಗ ವಿಶ್ವಾಮಿತ್ರರು **ತ್ವಾಮೇವ ಜಾನೀಯಾಮ್**- ಋಷಿಯಾದ ನಾನು ಪಠಿಸಿದ ವೇದಮಂತ್ರಗಳಿಂದ ಸಂತುಷ್ಟನಾದ ನಿನ್ನ ನಿಜಸ್ವರೂಪವನ್ನು ತಿಳಿಯಬಯಸುವೆ. ತಿಳಿಸಬೇಕೆಂದರು. ಆಗ ಇಂದ್ರನಲ್ಲಿ ಆವಿಷ್ಟನಾದ ಶ್ರೀ ಹರಿಯು **ಪ್ರಾಣೋ ವಾ ಅಹಮಸ್ಮಿ ಋಷೇ । ಪ್ರಾಣಸ್ತ್ವಮ್ ಪ್ರಾಣಸ್ಸರ್ವಾಣಿ ಭೂತಾನಿ...॥** (*ಐತರೇಯೋಪನಿಷತ್ ೨-೨-೩*) ಎಲೈ ಋಷಿಯೇ, ನಾನು ಉತ್ತಮವಾದ ಆನಂದ ಉಳ್ಳವನಾದ್ದರಿಂದ ಪ್ರಾಣಶಬ್ದವಾಚ್ಯನು, ಯಾರಿಂದಲೂ ತ್ಯಜಿಸಲ್ಪಡಲಯೋಗ್ಯನು, ನಿತ್ಯವಾಗಿಯೂ ಇರುವಂಥವನು, ಸರ್ವಜ್ಞನು. ನಿನ್ನಲ್ಲಿ ಮತ್ತು ಎಲ್ಲರಲ್ಲಿಯೂ ಇರುವಂಥವನಾಗಿದ್ದೇನೆ, ಎಂದು ಉತ್ತರ ಕೊಟ್ಟನು. ಇಂದ್ರನಲ್ಲಿ ಶ್ರೀಹರಿಯ ವಿಶೇಷ ಆವೇಶವಿದ್ದುದರಿಂದ ಇಂದ್ರನು ನಾನು ಪ್ರಾಣಶಬ್ದವಾಚ್ಯನೆಂದು ಉತ್ತರಿಸಿದನು. ಹೀಗೆ ಸಂಬಂಧಬಾಹುಲ್ಯವಿದ್ದುದರಿಂದ ಇಂದ್ರನು ಹಾಗೆ ಹೇಳಿದನೆಂಬ ಅಭಿಪ್ರಾಯವನ್ನು

Rarest Archiver

ತಿಳಿಯಬೇಕೆಂದು ಅನ್ಯತ್ರಪ್ರಸಿದ್ಧಶಬ್ದಸಮನ್ವಯದ ನಿಯಮಗಳನ್ನು ವಿವರಿಸುವ ಸಂದರ್ಭದಲ್ಲಿ ಸ್ವತಃ ವೇದವ್ಯಾಸರೇ ಈ ಸೂತ್ರದಿಂದ ತೋರಿಸಿದ್ದಾರೆ. ಅನೇಕ ಸಲ ಅಸುರರ ದಾಳಿಗೆ ತುತ್ತಾಗಿ ಕಕ್ಕಾವಿಕ್ಕಿಯಾಗಿ ಬ್ರಹ್ಮದೇವರನ್ನು ಶರಣು ಹೋಗಿ ಶ್ರೀಹರಿಯನ್ನು ಪ್ರಾರ್ಥಿಸಿ ಆತನ ಅನುಗ್ರಹದಿಂದ ತನ್ನ ಲೋಕವನ್ನೂ ತನ್ನ ಇಂದ್ರ-ಪದವಿಯನ್ನು ಕಾಪಾಡಿಕೊಳ್ಳಲು ಹೆಣಗಿದ ಮಹೇಂದ್ರನು ತಾನೇ ಪ್ರಾಣಶಬ್ದವಾಚ್ಯನಾದ ಶ್ರೀಹರಿಯು ಎಂದು ಹೇಳಲಾರನು. **ಕಿಂ ಶಕ್ರಸ್ಯ ಪ್ರಾಣನಾಮ್ನಾ ಹರಿಣೈಕ್ಯ-ಮುದೀರ್ಯತೇ । ಅಜಾಂಡಚ್ಛೇದಸುಪಟುನಖೇನ ಬಲಿವೈರಿಣಾ ॥ ತ್ರಿಪದಾಕ್ರಾಂತಲೋಕೇನ ಸ್ವಸ್ಯ ಸ್ವಾರಾಜ್ಯದಾಯಿನಾ ॥** (ಶ್ರೀಮದ್ವಾದಿರಾಜರ *ಶ್ರುತಿತತ್ವಪ್ರಕಾಶಿಕಾ ೩೯-೯೭)* ಕೇವಲ ತನ್ನ ನಖದಿಂದ ಬ್ರಹ್ಮಾಂಡಕಟಾಹವನ್ನು ಛೇದನಮಾಡುವ ಸಾಮರ್ಥ್ಯವಿರುವ, ಇಂದ್ರಪದವಿಯನ್ನು ಪಡೆಯಲು ಪ್ರಯತ್ನಿಸಿದ ಬಲಿಚಕ್ರವರ್ತಿಯನ್ನು ದಂಡಿಸಿದ, ತನ್ನ ಮೂರು ಪಾದಗಳಿಂದ ಮೂರು ಲೋಕಗಳನ್ನು ವ್ಯಾಪಿಸಿದ ಹಾಗೂ ತನಗೆ ಇಂದ್ರಪದವಿಯನ್ನು ಕೊಡಿಸಿದ ಶ್ರೀಹರಿಯೊಡನೆ ತನಗೆ ಐಕ್ಯವಿದೆಯೆಂದು ಇಂದ್ರನು ಎಂದಾದರೂ ಹೇಳಬಹುದೆ ಎಂದು ಶ್ರೀ ವಾದಿರಾಜ-ತೀರ್ಥರು ಕೇಳುತ್ತಾರೆ. ಕಾರಣ ಅಹಂ ಬ್ರಹ್ಮಾಸ್ಮಿ ಎಂಬಲ್ಲಿಯೂ ಕೂಡ ಅಂತರ್ಯಾ-ಮಿಪರವಾಗಿಯೇ ಅರ್ಥ ಹೇಳಬೇಕಾದುದು ಸಮರ್ಪಕ. ಒಂದು ವಸ್ತುವಿನ ಜೊತೆಗೆ ಸಂಬಂಧಬಾಹುಲ್ಯವಿದ್ದಾಗ ಆ ವಸ್ತುವನ್ನು ಯಾವುದರ ಸಂಬಂಧವಿದೆಯೋ ಅದರ ಹೆಸರಿನಿಂದಲೇ ಕರೆಯುವದು ಕಂಡು ಬರುವದು. ಉದಾಹರಣೆಗೆ ಹಿಮವು ಪರ್ವತದ ತುಂಬ ತುಂಬಿದಾಗ ಹಿಮದ ರಾಶಿಯೂ ಪರ್ವತವೂ ವಾಸ್ತವಿಕವಾಗಿ ಬೇರೆ ಇದ್ದರೂ ಕೂಡ ಆ ಕಲ್ಲು ಮಣ್ಣುಗಳ ಪರ್ವತವನ್ನು ಹಿಮಗಿರಿ ಎಂದು ಕರೆಯುತ್ತೇವೆ. ಅದರಂತೆಯೆ ಕೆಂಪಗೆ ಕಾದ ಕಬ್ಬಿಣದ ಸಳಿಯನ್ನು ಬೆಂಕಿ ಎಂದು ಕರೆಯುತ್ತೇವೆ. ಅದು ಬೆಂಕಿಯ ಕೆಲಸವಾದ ಸುಡುವದನ್ನೂ ಮಾಡುವದು ಕಂಡುಬರುವದು. ಅದು ಬೆಂಕಿಯ ಕೆಲಸವೇ ಹೊರತು ಸಳಿಯ ಕೆಲಸವಲ್ಲ. ಹೀಗೆಯೇ ಇಂದ್ರನು ತಾನು ತನ್ನ ಅಂತರ್ಯಾಮಿಯಾದ ಪ್ರಾಣನು ಎಂದು ಹೇಳಿಕೊಂಡನು. ತಾನೇ ಪ್ರಾಣನೆಂಬ ಅಭಿಪ್ರಾಯದಿಂದಲ್ಲ. (ಪ್ರಾಣಸ್ತಥಾನುಗಮಾತ್ ಎಂಬ ಸೂತ್ರದಲ್ಲಿ ಪ್ರಾಣಶಬ್ದವಾಚ್ಯನು ಬ್ರಹ್ಮನೇ ಎಂಬುದನ್ನು ಸಿದ್ಧ ಮಾಡಿದ್ದಾರೆ). ಅದೇ ರೀತಿ ಇಬ್ಬರಲ್ಲಿ ಸ್ನೇಹ-ಬಾಹುಲ್ಯವಿದ್ದಾಗಲೂ ಕೂಡ ಈ ರೀತಿಯ ಏಕಪ್ರಕಾರದ ಪದಪ್ರಯೋಗವು ರೂಢಿಯಲ್ಲಿ ಕಂಡು ಬರುವದು. ಉದಾಹರಣೆಗೆ ಚೈತ್ರ ಹಾಗೂ ಮೈತ್ರರು ಬಹಳ ಅನ್ಯೋನ್ಯಸ್ನೇಹಿತರಿದ್ದರೆ ಚೈತ್ರ ಬಂದರೂ ಸರಿ ಮೈತ್ರ ಬಂದರೂ ಸರಿ, ಇಬ್ಬರೂ ಒಂದೇ ಎಂದು ವ್ಯವಹಾರ ಮಾಡುವದು ಕಂಡು ಬರುವದು. ವಾಸ್ತವಿಕವಾಗಿ ಇಬ್ಬರೂ ಒಂದೇ ಅಲ್ಲವಷ್ಟೆ ! ಅದಕ್ಕೇ ಶ್ರೀಮದಾಚಾರ್ಯರು ಮಹೈತರೇಯಭಾಷ್ಯದಲ್ಲಿ **ಅಸ್ಯ ತಸ್ಯೇತಿಭೇದಾಂಗೀಕಾರೇ ನಾಭೇದೋ ಮುಖ್ಯಃ । ಕಿಂತು ತದಧೀನತ್ವ-**

Rarest Archiver

**ಮೇವಾನ್ಯಸ್ಯ ಭವತಿ ಸ್ನೇಹವಿಶೇಷೋ ವಾ ಚೈತ್ರೋ ಮೈತ್ರೋ ಮೈತ್ರಶ್ಚೈತ್ರ ಇತಿವತ್ ।** ಎಂದು ಹೇಳಿದ್ದಾರೆ.

ಇಂದ್ರನಲ್ಲಿ ಶ್ರೀ ಹರಿಯ ವಿಶೇಷ ಆವೇಶವಿದ್ದ ಕಾರಣ ಇಂದ್ರನ ಅಂತ-ರ್ಯಾಮಿಯಾದ ತಾನೇ ಪ್ರಾಣಶಬ್ದವಾಚ್ಯನು ಎಂದು ಶ್ರೀ ಹರಿಯೇ ಪ್ರಸ್ತುತ ವಾಕ್ಯದಿಂದ ಹೇಳುತ್ತಿದ್ದಾನೆಂದು ತಿಳಿಯಬೇಕು.

ಈ ವಾಕ್ಯದ ಅರ್ಥವು ***ಶ್ರುತ್ಯರ್ಥಷಟ್ಪದಿ***ಯಲ್ಲಿ ಹೀಗೆ :-

*ಹೇಯನಲ್ಲವು ಆರಿಗೀತನು,*
*ತೋಯಜಾಕ್ಷನು ಗುಣದಿ ಪೂರ್ಣನು,*
*ಮೇಯನಾಗಿಹನೆಂದು ತಿಳಿದಿಹ, ನಿರುತವಿರುತಿಹನು,*
*ಗೇಯ ಮಂತ್ರಗಳಿಂದ ಋಷಿಸು-*
*ಧ್ಯೇಯನಂತರ್ಯಾಮಿ ಸರುವಕೆ*
*ಭೂಯಸಂಬಂಧದಲಿ ತಾನೆಯೆ ವಾಚ್ಯನಾಗಿಹನು ॥*

೫೧. **ತದ್ಯೋऽಹಂ ಸೋऽಸೌ ಯೋऽಸೌ ಸೋऽಹಮ್ ॥**

*– ಐತರೇಯೋಪನಿಷತ್-ದ್ವಿತೀಯಾರಣ್ಯಕದಲ್ಲಿ ದ್ವಿತೀಯಾಧ್ಯಾಯ, ಋಕ್ ೪*

ಈ ಋಕ್ ವಿವಿಧಪ್ರಕಾಶನಗಳಲ್ಲಿ ಭಿನ್ನ ಭಿನ್ನ ಕಡೆಗಳಲ್ಲಿ ತೋರಿಸಲ್ಪಟ್ಟಿದೆ. ಮಾಧ್ವಮಹಾಮಂಡಲದ *ಸರ್ವಮೂಲಗ್ರಂಥಾಃ* ಎಂಬ ಸಂಸ್ಕೃತ ಪ್ರಕಾಶನದಲ್ಲಿ ಇದು ಶ್ರೀ ಮಹೈತರೇಯೋಪನಿಷದಿ ದ್ವಿತೀಯಪ್ರಘಟ್ಟಕೇ ಪ್ರಥಮೋऽಧ್ಯಾಯಃ ಎಂಬಲ್ಲಿ ತೃತೀಯ ಬ್ರಾಹ್ಮಣದಲ್ಲಿಯ ೨ನೆಯ ಋಕ್ ಎಂದು ತೋರಿಸಲ್ಪಟ್ಟಿದೆ. ಮಾಧ್ವಮಹಾಮಂಡಲ ಹಾಗೂ ಆನಂದತೀರ್ಥ ಪ್ರತಿಷ್ಠಾನದ *ಸರ್ವಮೂಲಗ್ರಂಥಗಳು* ಎಂಬ ಕನ್ನದ ಅನುವಾದದ ಪ್ರಕಾಶನದಲ್ಲಿ ಇದು ದ್ವಿತೀಯಾರಣ್ಯಕದ ದ್ವಿತೀಯಾಧ್ಯಾಯದ ೪ನೆಯ ಋಕ್ ಎಂದು ತೋರಿಸಲ್ಪಟ್ಟಿದೆ.

**ಅನ್ವಯ ಹಾಗೂ ಅರ್ಥ:- ತದ್ ಯಃ ಅಹಂ ಸಃ ಅಸೌ । ಯಃ ಅಸೌ ಸಃ ಅಹಮ್ ।**

**ಪ್ರಸಕ್ತ ವಾಕ್ಯದ ಅರ್ಥ:-**ಆ ಪ್ರಸಿದ್ಧನಾದ ಅಹೇಯನಾಗಿರುವವನು ಸೂರ್ಯ-ನಲ್ಲಿರುವವನು. ಯಾರು ಸೂರ್ಯನಲ್ಲಿರುವವನೋ ಅವನೇ ಅಹೇಯನಾಗಿ ಅಹಂ-ಶಬ್ದವಾಚ್ಯನು.

ಈ ವಾಕ್ಯವು ಈ ಕೆಳಗಿನ ಸಂಪೂರ್ಣವಾದ ಭಾಗದಲ್ಲಿ ಬಂದಿದೆ;

**ತಸ್ಯ ವಾ ಏತಸ್ಯ ಬೃಹತೀಸಹಸ್ರಸ್ಯ ಸಂಪನ್ನಸ್ಯ ಪರಸ್ತಾದ್ ಪ್ರಜ್ಞಾಮಯಃ**

Rarest Archiver

**ದೇವತಾಮಯಃ ಬ್ರಹ್ಮಮಯಃ ಅಮೃತಮಯಃ ಸಂಭೂಯ ದೇವತಾ ಅಪ್ಯೇತಿ, ಯ ಏವಂ ವೇದ । ತದ್ ಯೋऽಹಂ ಸೋऽಸೌ । ಯೋऽಸೌ ಸೋऽಹಮ್ । ತದುಕ್ತಂ ಋಷಿಣಾ ಸೂರ್ಯ ಆತ್ಮಾ ಜಗತಃ ತಸ್ಥುಷಶ್ಚ ಇತಿ । ಏತದು ಹ್ಯೆವೋಪೇಕ್ಷೇತೋಪೇಕ್ಷೇತ ॥**

**ಇದರರ್ಥ:–** ಯಾರು ಈ ಬೃಹತೀಸಹಸ್ರದಿಂದ ಭಗವದುಪಾಸನೆ ಮಾಡುವನೋ ಅವನು ಮುಂದೆ ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ ಹಾಗೂ ವಾಸುದೇವ ರೂಪಗಳು ತನ್ನ ಅಂತರ್ಯಾಮಿಯಾಗಿ ಸನ್ನಿಹಿತವಾಗಿವೆ ಎಂದು ತಿಳಿದು ಮುಖ್ಯಪ್ರಾಣಾದಿ-ಸರ್ವದೇವತೆಗಳನ್ನು ಹಾಗೂ ಕೊನೆಗೆ ಪರಮಾತ್ಮನನ್ನೂ ಹೊಂದುತ್ತಾನೆ. ಬೃಹತೀ-ಸಹಸ್ರಗತವಾದ ಪರಮಾತ್ಮನ ರೂಪಗಳೇ ದಿವಸ ರಾತ್ರಿಗತ ರೂಪಗಳಾಗಿದ್ದು ಅವೇ ಸೂರ್ಯಗತರೂಪಗಳಾಗಿವೆ. ಅದನ್ನೇ ಋಷಿಯು (ಜ್ಞಾನಿಯು) ಹೀಗೆ ಹೇಳಿದ್ದಾನೆ-ಸೂರ್ಯಾಂತರ್ಗತನಾದ ಪರಮಾತ್ಮನೇ ಸಮಸ್ತ ಚರಾಚರರೂಪ ಜಗತ್ತಿಗೆ ಅಂತರ್ಯಾಮಿಯಾಗಿದ್ದಾನೆ. ಹೀಗೆ ಪರಮಾತ್ಮನೇ ಸರ್ವಾಂತರ್ಯಾಮಿಯಾಗಿ-ರುವದನ್ನು ನಿಶ್ಚಿತವಾಗಿಯೂ ತಿಳಿದುಕೊಳ್ಳಬೇಕು.

ಈ ವಾಕ್ಯದಿಂದ ಪರಮಾತ್ಮನು ಸರ್ವನಿಯಾಮಕನು, ಸರ್ವಾಂತರ್ಯಾಮಿ-ಯು ಎಂದೂ ಹಾಗೂ ಇಂಥ ಪರಮಾತ್ಮನನ್ನು ಸಕಲರ ನಿಯಾಮಕನೆಂಬ ಅನುಸಂಧಾ-ನದಿಂದ ಉಪಾಸಿಸಬೇಕೆಂದೂ ತಿಳಿಯುವದು. ಬೇರೆ ಬೇರೆ ಸ್ಥಾನಗಳಲ್ಲಿ ಅಂತರ್ಯಾಮಿಯಾಗಿ ಇದ್ದ ಪರಮಾತ್ಮನ ರೂಪಗಳಲ್ಲಿ ಭೇದವಿದೆಯೇ ಎಂಬ ಶಂಕೆ ಬಂದರೆ ಅದಕ್ಕೆ ಈ ವಾಕ್ಯದಲ್ಲಿ ಉತ್ತರ ಸಿಗುವದು. ಸಮಸ್ತ ಜಗತ್ತಿನ ನಿಯಾಮಕನಾದ ಪರಮಪುರುಷನೇ ಸೂರ್ಯಾಂತರ್ಗತನಾಗಿದ್ದಾನೆ. ಅಂದರೆ ಅಂತರ್ಯಾಮಿಯಾದ ಭಗವಂತ ಒಬ್ಬನೇ, ಇಂದ್ರಾರ್ಜುನರಲ್ಲಿ ಅವಾಂತರ-ವಿಶೇಷವಿರುವಂತೆ ವಿಭಿನ್ನ ಸ್ಥಳಗಳಲ್ಲಿ ಅಂತರ್ಯಾಮಿಯಾಗಿ ನಿಯಾಮಕವಾದ ಭಗವಂತನಲ್ಲಿ ಯಾವ ಭೇದವಿಲ್ಲ, ಸೂರ್ಯಾಂತರ್ಗತ ಪರಮಾತ್ಮ ಹಾಗೂ ಮದಂತರ್ಗತ ಪರಮಾತ್ಮರಲ್ಲಿ ಐಕ್ಯವಿದೆ ಎಂದು ಈ ವಾಕ್ಯದ ಅಧಾರದಿಂದ ಪ್ರತಿಪಾದಿಸಿದ್ದಾರೆ.

**ಅಂತರ್ಯಾಮಿಸ್ವರೂಪೇಣ ಜ್ಞಾಪಯನ್ನನಿರುದ್ಧಕ: । ಪ್ರಜ್ಞೇತ್ಯುಕ್ತೋ ದ್ಯೋತ-ನಾಚ್ಚ ಪ್ರದ್ಯುಮ್ನೋ ದೇವತೋದಿತಃ ॥ ಅಮುಂ ಕರೋತಿ ಯಚ್ಛಾಸ್ತ್ರಂ ಋತಂ ಸ್ವಸ್ಮಿನ್ ಪುನಃ ಪುನ: । ಸಂಕರ್ಷಣೋ ಋತಂ ತಸ್ಮಾತ್ ವಾಸುದೇವಸ್ತು ಬೃಂಹ-ಣಾತ್ ॥ ಜೀವಾನಾಂ ಮುಕ್ತಿದಾನೇನ ಬ್ರಹ್ಮೇತಿ ಕಥಿತಃ ಪ್ರಭುಃ ।ಏವಮೇಕೋऽಪಿ**

Rarest Archiver

**ಭಗವಾಂಶ್ಚತುರ್ಧಾ ಸಮುದೀರಿತಃ ॥** ಇತ್ಯಾದಿ ***ಚಾತುರಾತ್ಮ್ಯೇ*** // ಎಂದು ಶ್ರೀಮದಾಚಾರ್ಯರು *ಐತರೇಯಭಾಷ್ಯ*ದಲ್ಲಿ ಪ್ರಜ್ಞಾಮಯ, ದೇವತಾಮಯ, ಬ್ರಹ್ಮಮಯ ಹಾಗೂ ಅಮೃತಮಯವೆಂದರೆ ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ ಹಾಗೂ ವಾಸುದೇವ ಎಂಬ ಶ್ರೀಹರಿಯ ರೂಪಗಳೆಂದು ತಿಳಿಸಿ ಅದಕ್ಕೆ ಪ್ರಮಾಣ ಕೊಟ್ಟಿದ್ದಾರೆ. (*ಚಾತುರಾತ್ಮ್ಯ* ಎಂಬುದು ಯಾವ ಗ್ರಂಥವೆಂಬುದು ತಿಳಿಯುವದಿಲ್ಲ).

ಈ ಶ್ರುತಿವಾಕ್ಯದ ಒಟ್ಟರ್ಥವು ***ಶ್ರುತ್ಯರ್ಥಷಟ್ಪದಿ***ಯಲ್ಲಿ ಹೀಗೆ :-

*ಬೃಹತಿಸಾಸಿರ ಪಠಿಪ ಮನುಜನು*
*ಬೃಹತಿಗತ ಸಿರಿ ಹರಿಯ ರೂಪಗ-*
*ಳಹರಹದಿ ರವಿ ಭಜಿಪ ರೂಪವು ರವಿಯೊಳಿದ್ದುದನು*
*ಗ್ರಹಿಸಿ ಇವುಗಳನೊಂದೆ ಎನುತಲಿ*
*ಮಹಿಯೊಳಂತರ್ಯಾಮಿ ಒಡೆಯನ*
*ಮುಹುರುಪಾಸನೆಗೈದು ತತ್ವದ ಪಡೆವನವಿತಥವು.* //

೫೨. **ಯೋಽಸಾವಾದಿತ್ಯೇ ಪುರುಷಃ ಸೋಽಹಮಸ್ಮಿ ಸ ಏವಾಹಮಸ್ಮಿ ॥**

– *ಮೈತ್ರಾಯಣ್ಯುಪನಿಷತ್ ೬–೩೫* ( *ಇಲ್ಲಿ ಪಾಠವು* **ಯೋಽಸಾವಾದಿತ್ಯೇ ಪುರುಷಃ ಸೋಽಸಾವಹಮಿತಿ** ಎಂದಿದೆ. ಈ ಪಾಠವು ***ಉಪನಿಷದ್ವಾಕ್ಯಕೋಷಃ – ೨೩೯ ಉಪನಿಷದಾಂ ವಾಕ್ಯೈಃ ಸಂಭೃತಃ*** ಸಂಕಲನ ಕರ್ತಾ –ಶ್ರೀಗಜಾನನ ಶಂಭು ಸಾಧಲೆ, ಚೌಖಂಭಾ ವಿದ್ಯಾಭವನ ವಾರಾಣಸಿ ೧೯೯೦ ಎಂಬ ಪ್ರಕಾಶನದ ಪ್ರಕಾರ; ಆದರೆ *೧೦೮ ಉಪನಿಷದ್ –ಜ್ಞಾನಖಂಡ,* ಸಂಪಾದಕ ಶ್ರೀರಾಮ ಶರ್ಮಾ ಆಚಾರ್ಯ, ಸಂಸ್ಕೃತಿ ಸಂಸ್ಥಾನ, ಬರೇಲಿ, ಇದರಲ್ಲಿ ಪ್ರಕಾಶಿತವಾದ *ಮೈತ್ರಾಯಣ್ಯುಪನಿಷತ್ತಿ*ನಲ್ಲಿ ಐದೇ ಪ್ರಪಾಠಕಗಳಿದ್ದು ೬ನೆಯ ಪ್ರಪಾಠಕವಿಲ್ಲ. ಈ ಐದು ಪ್ರಪಾಠಕಗಳಲ್ಲಿ ಈ ವಾಕ್ಯವು ಕಂಡು ಬರಲಿಲ್ಲ. ಆದರೆ **ಯೋಽಸಾವಸೌ ಪುರುಷಃ ಸೋಽಹಮಸ್ಮಿ** ಎಂಬ ವಾಕ್ಯವು ***ಈಶಾವಾಸ್ಯೋಪನಿಷತ್ತಿನಲ್ಲಿ* ೧೬ನೆಯ ಋಕ್** ಆಗಿ ಇದೆ. ಇದಕ್ಕೆ ಕೂಡ ಪ್ರಸಕ್ತ ವಾಕ್ಯಕ್ಕಿರುವ ರೀತಿಯ ಅರ್ಥವಿರುವದರಿಂದ ***ಈಶಾವಾಸ್ಯೋಪನಿಷತ್ತಿನ*** ಈ ವಾಕ್ಯವನ್ನೂ ಇಲ್ಲಿ ಗ್ರಹಿಸಬಹುದೆಂದು ತೋರುವದು. **ಅನಂತಾ ವೈ ವೇದಾಃ** ಎಂದಿರುವದರಿಂದ ಶ್ರೀಮದಾಚಾರ್ಯರು ಉದಾಹರಿಸಿದ ಈ ವಾಕ್ಯವು ನಮಗೀಗ ಉಪಲಬ್ಧವಿರದ ಯಾವುದೊಂದು ಶ್ರುತಿಯಲ್ಲಿ ಬಂದಿರಲೂಬಹುದು).

**ಅನ್ವಯ :– ಯಃ ಅಸೌ ಆದಿತ್ಯೇ ಪುರುಷಃ ಸಃ ಅಹಂ ಅಸ್ಮಿ ಸಃ ಏವ ಅಹಂ ಅಸ್ಮಿ ।**

**ಅರ್ಥ:–** ಸೂರ್ಯನಲ್ಲಿ ಅಂತರ್ಯಾಮಿಯಾಗಿ, ನಿಯಾಮಕವಾಗಿ ಇರುವ ಅಹೇಯ–

Rarest Archiver

ನಾಗಿರುವ ಪರಮಪುರುಷನೇ (ಎಲ್ಲರಲ್ಲಿ) ಅಹೇಯನಾಗಿ, ಅಂತರ್ಯಾಮಿಯಾಗಿ ನಿತ್ಯನಾಗಿರುವವನು ಎಂದು ತಿಳಿಯಲ್ಪಡಬೇಕಾದವನು. (ಹೀಗೆ ಹೇಳುವದರಿಂದ ಪರಮಾತ್ಮನ ರೂಪಗಳಲ್ಲಿ ಭೇದವಿಲ್ಲವೆಂದು ತಿಳಿಸಿದಂತಾಯಿತು).

ಈ ವಾಕ್ಯಕ್ಕೂ ಈ ಮೇಲಿನ **ಶ್ರುತಿಷಟ್ಪದಿ**ಯೇ ಹೊಂದುವದು.

**೫೩. ಅಥ ಯೋऽನ್ಯಾಂ ದೇವತಾಂ ಉಪಾಸ್ತೇ ಅನ್ಯೋऽಸಾವನ್ಯೋऽಹ-ಮಸ್ಮೀತಿ ನ ಸ ವೇದ ಯಥಾ ಪಶುರೇವಮ್।**

***–ಬೃಹದಾರಣ್ಯಕೋಪನಿಷತ್, ಅಧ್ಯಾಯ ೩, ೫ನೆಯ ಅವ್ಯಾಕೃತ ಬ್ರಾಹ್ಮಣ,೫೦ ೪***

ಇದರ ಸಂಪೂರ್ಣ ಪಾಠವು ಹೀಗಿದೆ:–

ಈ ಮೊದಲು ಕೊಟ್ಟ ಉಪನಿಷತ್ತಿನ ವಾಕ್ಯವನ್ನು ಅವಲೋಕಿಸಬೇಕು. ಅಷ್ಟು ವಾಕ್ಯದ ನಂತರ ಈ ಕೆಳಗಿನ ಭಾಗದಲ್ಲಿಯಂತೆ ಸಂಪೂರ್ಣ ಪಾಠ ಈ ರೀತಿ ಇದೆ. **ಅಥ ಯೋऽನ್ಯಾಂ ದೇವತಾಂ ಉಪಾಸ್ತೇ ಅನ್ಯೋऽಸಾವನ್ಯೋऽಹಮಸ್ಮೀತಿ ನ ಸ ವೇದ ಯಥಾ ಪಶುರೇವಮ್ ಸ ದೇವಾನಾಂ ಯಥಾಹ ವೈ ಬಹವಃ ಪಶವೋ ಮನುಷ್ಯಂ ಭುಂಜುರೇವಮೇವೈಕಃ ಪುರುಷೋ ದೇವಾನ್ ಭುನಕ್ತ್ಯೇಕಸ್ಮಿನ್ನೇವ ಪಶಾವಾದೀಯಮಾನೇ ಪ್ರಿಯಂ ಭವತಿ ಕಿಮು ಬಹುಷು ತಸ್ಮಾದೇಷಾಂ ತನ್ನ ಪ್ರಿಯಂ ಯದೇತನ್ಮನುಷ್ಯಾ ವಿದ್ಯುಃ ॥**

ಇದು ಶ್ರೀಮಟ್ಟೀಕಾಕೃತ್ಪಾದರಿಂದ ಉದಾಹರಿಸಲ್ಪಟ್ಟ ಶ್ರುತಿಯು. ಶ್ರೀಮದಾಚಾರ್ಯರ **ಯೋऽಸಾವಾದಿತ್ಯೇ ... ಇತ್ಯಾದಿ ತು ಅಂತರ್ಯಾಮ್ಯಪೇಕ್ಷಯಾ** ಎಂಬ ವಾಕ್ಯದಲ್ಲಿಯ **ಆದಿ** ಪದದಿಂದ ಈ ಶ್ರುತಿಯನ್ನು ಗ್ರಹಿಸಬೇಕೆಂದು ಟೀಕಾಕೃತ್ಪಾದರ ಅಭಿಪ್ರಾಯ.

**ಅರ್ಥ :–** ಯಾರು ಪರಮಪುರುಷನನ್ನು ಈತನು ಅನ್ಯನು ಹಾಗೂ ಅಹೇಯತ್ವ, ನಿತ್ಯತ್ವಾದಿಗುಣಗಳಿಂದ ವಿಶಿಷ್ಟನಾದವನು ಅನ್ಯನು ಎಂದು ಉಪಾಸನೆ ಮಾಡುವನೋ, ಅಥವಾ ಯಾರು ಅಹೇಯತ್ವಾದಿಗುಣವಿಶಿಷ್ಟನಾದವನು ಬೇರೆ ಇರುವನು ಎಂದು ತಿಳಿದು ಬ್ರಹ್ಮರುದ್ರಾದಿ ಇತರ ದೇವತೆಗಳ ಉಪಾಸನೆ ಮಾಡುವನೋ, ಅವನು ಸರಿಯಾಗಿ ತಿಳಿದುಕೊಂಡವನಲ್ಲ. ಅವನು ಮನುಷ್ಯರಿಗೆ ಕೇವಲ ಹಾಲು ಇತ್ಯಾದಿ ಒದಗಿಸುವ ಜ್ಞಾನವಿಲ್ಲದ ಪಸುಪ್ರಾಯನೇ ಸರಿ. ಭೋಜನಪದಾರ್ಥಗಳನ್ನು ಒದಗಿಸುವ ಪಶುವು ಹೇಗೆ ಇಷ್ಟವಾಗಿರುವದೋ ಹಾಗೆ ಜ್ಞಾನಿಯಾದವನು ದೇವತೆಗಳಿಗೆ ಅತ್ಯಂತ ಪ್ರೀತ್ಯಾಸ್ಪದನಾಗಿರುವನು. ಅನೇಕ ಪಶುಗಳಿಂದ ಒಬ್ಬ ಮನುಷ್ಯನಿಗೆ ಹಾಲು ಇತ್ಯಾದಿ ಪದಾರ್ಥಗಳು ಲಭಿಸಿ ಅವನಿಗೆ ಸಂತೋಷವನ್ನು ಕೊಡುವವು. ಆದರೆ ಒಬ್ಬ ಜ್ಞಾನಿಯಾದ ಪುರುಷನು ಮಾತ್ರ ಅನೇಕ ದೇವತೆಗಳಿಗೆ ಸಂತೋಷವನ್ನು ಕೊಡುವನು.

Rarest Archiver

ಒಂದು ಪಶುವಿನಿಂದಲೇ ಭೋಜನಪದಾರ್ಥ ಲಭಿಸಿ ತೃಪ್ತಿಯಾಗುವಾಗ ಅನೇಕ ಪಶುಗಳು ಸೇರಿ ಮನುಷ್ಯನಿಗೆ ತೃಪ್ತಿ ಕೊಡುವವು ಎಂಬುದು ಕೈಮುತ್ಯನ್ಯಾಯದಿಂದ ಸಿದ್ಧ. ಪರಮಪುರುಷನು ಅಹೇಯನು, ನಿತ್ಯನೆಂದು ಜ್ಞೇಯನು. ಹೀಗೆ ಉಪಾಸನೆ ಮಾಡುವದನ್ನು ಬಿಟ್ಟರೆ ದೇವತೆಗಳಿಗೆ ತೃಪ್ತಿಯಾಗುವದಿಲ್ಲ.

***ಶ್ರುತ್ಯರ್ಥಷಟ್ಪದಿ***ಯಲ್ಲಿ ಈ ವಾಕ್ಯದ ಅಭಿಪ್ರಾಯ ಹೀಗೆ :–

*ಹರಿಯಹೇಯನು ನಿತ್ಯನೆನ್ನದೆ*
*ಪರರುಪಾಸನೆಗೈವ ಮನುಜನು*
*ಅರಿಯದಾತನು ತಿಳಿವುಗಾಣದ ಪಶುವಿನಂತಿಹನು.*
*ಅರಿತ ನರನಿಂ ಸುರರು ತೃಪ್ತರು,*
*ಅರಿವುದೀಶ್ವರಜೀವಭೇದವ,*
ಸುರರಿಗೊಪ್ಪರು ಹರಿಯೆ ತಾನೆನ್ನುವರು ಜಗದೊಳಗೆ ॥ ॥

**೫೪. ಸ ಯಶ್ಚಾಯಂ ಪುರುಷೇ ಯಶ್ಚಾಸಾವಾದಿತ್ಯೇ ಸ ಏಕಃ ।**

*ತೈತ್ತಿರೀಯೋಪನಿಷದ್ ಅ. ೨-೧೭.*

**ಅರ್ಥ:–** ಬ್ರಹ್ಮಾದಿದೇವತೆಗಳಿಗೆ ಯಾರ ಅನುಗ್ರಹದಿಂದ ಸ್ವರೂಪಸುಖಾನುಭವರೂಪ ಮುಕ್ತಿ ದೊರೆಯುವದೋ ಅಂಥ ಪ್ರಸಿದ್ಧನಾದ ಪರಮಪುರುಷನು ಪುರುಷನಲ್ಲಿ ಅಂತರ್ಯಾಮಿಯಾಗಿರುವನು. ಅವನೇ ಸೂರ್ಯಾದಿದೇವತೆಗಳಿಗೂ ಅಂತರ್ಯಾಮಿ-ಯಾಗಿ ನಿಯಾಮಕನಾಗಿರುವನು. ಮನುಷ್ಯರಲ್ಲಿ ಅಂತರ್ಯಾಮಿಯಾಗಿರುವವನೂ ಹಾಗೂ ಸೂರ್ಯಾದಿದೇವತೆಗಳಲ್ಲಿ ಅಂತರ್ಯಾಮಿಯಾಗಿರುವವನೂ ಒಬ್ಬನೇ. ಅಲ್ಲಿ ಭೇದವಿಲ್ಲ.

**ವಿವರಣೆ:–**ಚರಾಚರಪ್ರಪಂಚದಲ್ಲಿ ಅಂತರ್ಯಾಮಿಯಾಗಿದ್ದು ನಿಯಾಮಕನಾದ ಪರಮಪುರುಷ ಹಾಗೂ ಸೂರ್ಯಾದಿದೇವತೆಗಳಲ್ಲಿ ಅಂತರ್ಯಾಮಿಯಾಗಿದ್ದು ನಿಯಾಮಕನಾದ ಪರಮಪುರುಷ ಇವರು ಬೇರೆ ಬೇರೆ ಅಲ್ಲ, ಅವರಿಬ್ಬರೂ ಒಂದೆಯೇ ಎಂಬುದಕ್ಕೆ ಸಮಾಖ್ಯೆಯಾಗಿ *ತೈತ್ತಿರೀಯೋಪನಿಷತ್ತಿನ* ಈ ವಾಕ್ಯವನ್ನು ಶ್ರೀಮದಾಚಾರ್ಯರು ಉದಾಹರಿಸಿದ್ದಾರೆ.

***ಶ್ರುತ್ಯರ್ಥಷಟ್ಪದಿ****ಯಲ್ಲಿ ಈ ಶ್ರುತಿಯ ಭಾವವನ್ನು ಇಂತು ವಿವರಿಸಬಹುದು.*

*ಆರ ಕೃಪೆಯಿಂ ಬ್ರಹ್ಮನೊಡೆ ಸುರ*
*ಧೀರರುತ್ತಮ ಪದವ ಪಡೆವರು*
*ಆರು ನರರೊಳು ನಿಂತು ಕೃತಿಗಳ ಮಾಡಿ ಮಾಡಿಸುವ,*

Rarest Archiver

*ಆರು ಸೂರ್ಯಾದ್ಯಖಿಲಸುರರೊಳು*
*ತೋರದೆಯೆ ನಿಂತಿಹನು ಸರುವದ*
*ಧೀರಸನ್ನುತನೊಬ್ಬನೇ ಹರಿ, ಸರುವಸಂಸ್ಥಿತನು* // //

**೫೫. ಅಃ ಇತಿ ಬ್ರಹ್ಮ ತತ್ರಾಗತಮಹಮಿತಿ ತಸ್ಯೋಪನಿಷದಹಮ್ ।**

– *ಮಹೈತರೇಯೋಪನಿಷತ್– ಪ್ರಘಟ್ಟಕ ೨, ಅಧ್ಯಾಯ ೨, ಬ್ರಾ ೭, ೫*

(*ಸರ್ವಮೂಲಮ್* – ಅ.ಭಾ.ಮಾ.ಮ.ಮಂ.೧೯೬೯ ರ ಪ್ರಕಾಶನದಲ್ಲಿಯಂತೆ, *ಸರ್ವಮೂಲಗ್ರಂಥಾಃ* ಎಂಬ ದೇವನಾಗರೀಲಿಪಿಯ ಹಳೆಯ ಪ್ರಕಾಶನದಲ್ಲಿ ಈ ವಾಕ್ಯವು ಪ್ರ.೨,ಅ ೩,ಖಂ.೮ ರಲ್ಲಿ ತೋರಿಸಲ್ಪಟ್ಟಿದೆ. ಅ.ಭಾ.ಮಾ.ಮ.ಮಂ ಹಾಗೂ ಆನಂದತೀರ್ಥ ಪ್ರತಿಷ್ಠಾನದಿಂದ ೧೯೮೮ ರಲ್ಲಿ ಪ್ರಕಾಶಿತವಾದ *ಶ್ರೀ ಸರ್ವ–ಮೂಲಗ್ರಂಥಗಳು ಉಪನಿಷತ್ಪ್ರಸ್ಥಾನ–೨* ರಲ್ಲಿ ಈ ವಾಕ್ಯವು ಆರಣ್ಯಕ ೨ ಅಧ್ಯಾಯ ೩ರಲ್ಲಿ ತೋರಿಸಲ್ಪಟ್ಟಿದೆ. *ಉಪನಿಷದ್ವಾಕ್ಯಮಹಾಕೋಷಃ* ಎಂಬ ಚೌಖಂಬಾ ವಿದ್ಯಾಭವನದ ಪ್ರಕಾಶನದಲ್ಲಿ ಇದು *ಐತರೇಯೋಪನಿಷತ್ತಿನ ೩–೮–೬ ರಲ್ಲಿಯ ವಾಕ್ಯವೆಂದು ತೋರಿಸಲಾಗಿದೆ.*) ಇನ್ನೊಂದು ವಿಷಯವೆಂದರೆ ಉಪಲಬ್ಧವಿದ್ದ ಪ್ರಕಾಶನಗಳಲ್ಲಿ ಈ ವಾಕ್ಯವು **ಅ ಇತಿ ಬ್ರಹ್ಮ ತತ್ರಾಗತಮಹಮಿತಿ** ಎಂದಿಷ್ಟೇ ಇದ್ದು **ತಸ್ಯೋಪನಿಷದಹಮ್** ಎಂಬ ಭಾಗ ಕಾಣಲಿಲ್ಲ.

**ಅರ್ಥ:–** ಅ ಎಂದರೆ ಗುಣಪೂರ್ಣನಾದವನು ಎಂದರ್ಥ. ಅಹಂ ಎಂಬುದೂ ಕೂಡ ಗುಣಪೂರ್ಣನೂ ನಿತ್ಯನೆಂದು ಮೇಯನಾದವನೂ ಆಗಿರುವದರಿಂದ ಅಹೇಯನು ಎಂಬರ್ಥವೇ ಬರುವದೆಂದೂ, ಅಹಂ ಪದವು ಬ್ರಹ್ಮನನ್ನೇ ಬೋಧಿಸುವದೆಂದೂ ತಿಳಿಯುವದು. ಅಹೇಯನಾದ ಆ ಪರಮಪುರುಷನ ರಹಸ್ಯವಾದ ಹೆಸರೇ (ಉಪನಿಷದ್) ಅಹಂ ಎಂಬುದು.

**ವಿಶೇಷ ವಿಷಯಗಳು :–**ಐತರೇಯೋಪನಿಷತ್ತು ಶ್ರೀಮದಾಚಾರ್ಯರಿಗೆ ಅತ್ಯಂತ ಸ್ವತಃ ಪರಮಾತ್ಮನಿಂದ ಬಂದ ಉಪದೇಶವಾಗಿದೆ ಎಂದು ಈ ಉಪನಿಷತ್ತಿನ ೨ನೆಯ ಪ್ರಘಟ್ಟಕದ ೨ನೆಯ ಅಧ್ಯಾಯಯದ ೭ ನೆಯ ಬ್ರಾಹ್ಮಣದಲ್ಲಿ ಉಕ್ತವಾಗಿದೆ.

ಇದಕ್ಕೆ ಶ್ರುತ್ಯರ್ಥಷಟ್ಪದಿ ಹೀಗೆ :–

*ಅ ವು ತಾ ಬ್ರಹ್ಮಾರ್ಥಬೋಧಕ*
*ಇವನೆ ತಾನಿಹನಹಂ ಪದೋಕ್ತನು*
*ಇವನಹೇಯನು ನಿತ್ಯನಾಗಿಹನೆಂದು ತಿಳಿಯುವುದು.*
*ಇವಗಹಂ ಇದು ಗೌಪ್ಯನಾಮವು*
*ಇವನ ಭಕುತರು ಭಜಿಸಿ ನಿರುತದಿ*
*ಭವವ ಧಾಂಟುವುದೆಂದು ನಿಗಮವು ಕೂಗಿ ಸಾರುತಿದೆ.* //

Rarest Archiver

**೫೬. ಅಹಂ ನಾಮಾ ಹರಿರ್ನಿತ್ಯಂ ಅಹೇಯತ್ವಾತ್ಪ್ರಕೀರ್ತಿತಃ ।ತ್ವಂಚಾಸೌ ಪ್ರತಿಯೋಗಿತ್ವಾತ್ಪರೋಕ್ಷತ್ವಾತ್ಸ ಇತ್ಯಪಿ ॥ ಸರ್ವಾಂತರ್ಯಾಮಿಣಿ ಹರೌ ಅಸ್ಮಚ್ಛಬ್ದವಿಭಕ್ತಯಃ। ಯುಷ್ಮಚ್ಛಬ್ದಗತಾಶ್ಚೈವ ಸರ್ವಾಸ್ತಚ್ಛಬ್ದಗಾ ಅಪಿ ॥ ಸರ್ವಶಬ್ದಗತಾಶ್ಚೈವ ವಚನಾನ್ಯಖಿಲಾನ್ಯಪಿ । ಸ್ವತಂತ್ರತ್ವಾತ್ಪ್ರವರ್ತಂತೆ ವ್ಯಾವೃತ್ತೇಽಪ್ಯಖಿಲಾತ್ಸದಾ ॥ ತತ್ಸಂಬಂಧಾತ್ತು ಜೀವೇಷು ತತ್ಸಂಬಂಧಾದ-ಚಿತ್ಸ್ವಪಿ । ವರ್ತಂತೇ ಉಪಚಾರೇಣ ತಿಙ್ಪದಾನ್ಯಖಿಲಾನ್ಯಪಿ ॥ ತಸ್ಮಾತ್ ಸರ್ವಗತೋ ವಿಷ್ಣುಃ ಏಕೋ ಭಿಚ್ಚ ತತೋ ಬಹುಃ ॥** *–ನಾರಾಯಣಶ್ರುತಿಃ(?)*

**ಅರ್ಥ:–** ಶ್ರೀ ಹರಿಯು ಯಾವಾಗಲೂ ಅಹೇಯನಾದರಿಂದ ಅಹಂ ಎಂದು ಕರೆಯಲ್ಪ-ಡುವನು. ಎಲ್ಲರೆದುರಿಗಿದ್ದು ಮಾರ್ಗದರ್ಶನ ಮಾಡುತ್ತಿರುವದರಿಂದ ತ್ವಂ–ಎಂದು ಕರೆಯಿಸಿಕೊಳ್ಳುವನು. ಇಂದ್ರಿಯಗಳಿಗೆ ದೂರನಾದುದರಿಂದ ಅವನು ಸಃ ಎಂದು ಕರೆಯಲ್ಪಡುವನು. ಸರ್ವಾಂತರ್ಯಾಮಿಯಾದ ಶ್ರೀ ಹರಿಯಲ್ಲಿ ಅಸ್ಮತ್ ಶಬ್ದದ ಎಲ್ಲ ವಿಭಕ್ತಿಯ ರೂಪಗಳೂ, ಯುಷ್ಮತ್ ಶಬ್ದದ ಎಲ್ಲ ವಿಭಕ್ತಿಯ ರೂಪಗಳೂ ತತ್ ಶಬ್ದದ ಎಲ್ಲ ರೂಪಗಳೂ ಪ್ರವೃತ್ತವಾಗುವವು. ಅವನು ಎಲ್ಲ ಕಾರಕಗಳ ಪ್ರಧಾನ ಹಾಗೂ ಅವಾಂತರ ವ್ಯಾಪಾರಗಳ ವಿಷಯದಲ್ಲಿ ಸ್ವತಂತ್ರನೂ ಹಾಗೂ ಅವುಗಳಿಗೆ ಪ್ರೇರಕನೂ ಆದ್ದರಿಂದ ಎಲ್ಲ ಶಬ್ದಗಳ ಎಲ್ಲ ವಿಭಕ್ತಿ ಪ್ರತ್ಯಯ ವಚನ-ಗಳಿಂದಲೂ ಬೋಧ್ಯನಾಗಿದ್ದಾನೆ. ಏಕತ್ವ, ದ್ವಿತ್ವ, ಬಹುತ್ವಗಳು ಸ್ವತಃ ಭೇದರಹಿತ-ನಾದರೂ ಕೂಡ ಹರಿಯಲ್ಲಿವೆಯಾದ್ದರಿಂದ ಸರ್ವವಚನವೃತ್ತಿಯೂ ಹರಿಯಲ್ಲಿದೆ. ಎಲ್ಲವೂ ಹರಿಯಲ್ಲಿಯೇ ಇದ್ದರೆ ಪ್ರಪಂಚದಲ್ಲಿ ವ್ಯವಹಾರ ಹೇಗೆ ಕೂಡುವದೆಂದರೆ ಅದೆಲ್ಲ ಅವನ ಸಂಬಂಧದ ಬಲದಿಂದಲೇ ಕೂಡುವದು. ಹರಿಯಲ್ಲಿ ಇವೆಲ್ಲ ಪರಮಮುಖ್ಯವೃತ್ತಿಯಿಂದ ಇದ್ದರೆ ಅವನ ಸಂಬಂಧದಿಂದಲೇ ಉಳಿದವುಗಳಲ್ಲಿ ಎಲ್ಲ ಶಬ್ದಗಳು, ವಿಭಕ್ತಿ ವಚನಗಳು, ಹಾಗೂ ಕ್ರಿಯಾವಾಚಕ ಕಾಲ ಪುರುಷ ವಚನಗಳು ಪರಮಮುಖ್ಯವೃತ್ತಿಯನ್ನು ಬಿಟ್ಟು ಅನ್ಯವಾದ ವೃತ್ತಿಯಿಂದ (ಅಂದರೆ ಹೀನ – ಅಮುಖ್ಯವೃತ್ತಿಯಿಂದ) ಪ್ರವೃತ್ತವಾಗುವವು. ಆದ್ದರಿಂದ ಸರ್ವಗತನಾದವನು, ಪೂರ್ಣನಾದವನು ಹಾಗೂ ಜೀವಜಡಾತ್ಮಕಪ್ರಪಂಚದಿಂದ ಭಿನ್ನನಾದವನು ವಿಷ್ಣುವು ಒಬ್ಬನೇ ಆಗಿದ್ದಾನೆ.

ಹೀಗೆ ನಾರಾಯಣಶ್ರುತಿಯು **ಅಹಂ ಬ್ರಹ್ಮಾಸ್ಮಿ, ತದ್ಯೋಽಹಂ ಸೋಽಸೌ ಯೋಽಸೌ ಸೋಽಹಮ್, ಯೋಽಸಾವಾದಿತ್ಯೇ ಪುರುಷಃ ಸೋಽಹಮಸ್ಮಿ** ಇತ್ಯಾದಿ ಶ್ರುತಿಗಳ ತಾತ್ಪರ್ಯವನ್ನು ಸಂಗ್ರಹಿಸಿ ಹೇಳುವದು.

Rarest Archiver

*ಶ್ರುತ್ಯರ್ಥಷಟ್ಪದಿಯಲ್ಲಿ ಈ ಶ್ರುತಿಯ ಭಾವವು ಹೀಗೆ :–*

*ಎಲ್ಲ ಶಬ್ದಗಳಿಂದ ಬೋಧ್ಯನು*
*ಎಲ್ಲ ವಚನವೃತ್ತಿ ಹರಿಯೊಳು*
*ಎಲ್ಲ ಕಾಲಕ್ರಿಯೆಗಳೆಲ್ಲವು ನಿರುತ ತದಧೀನ,*
*ಗುಲ್ಲು ಮಾಡದಲೆಲ್ಲರೊಳಗಿ–*
*ದ್ದೆಲ್ಲ ಮಾಡುವ ಮಾಡಿ ಮಾಡಿಪ,*
*ಖುಲ್ಲ ಮಾನವರೆಂತು ಬಲ್ಲರು ಹರಿಯ ಮಹಿಮೆಯನು ? // //*

**೫೭. ಸತ್ಯಮೇನಮನು ವಿಶ್ವೇ ಮದಂತಿ ರಾತಿಂ ದೇವಸ್ಯ ಗೃಣತೋ ಮಘೋನಃ॥– (?)**

**ಅನ್ವಯ:– ಗೃಣತಃ (ಸ್ತುವತಃ, ಗೃ ನಿಗರಣೇ ಇತಿ ಧಾತೋಃ ) ಮಘೋನಃ ದೇವಸ್ಯ (ಇಂದ್ರಸ್ಯ) ರಾತಿಂ (ಮಿತ್ರಂ) ಏನಂ (ವಿಷ್ಣುಂ) ಅನು (ತಸ್ಮಾತ್ ಹೇತೋಃ ಇತಿ ಯಾವತ್), ವಿಶ್ವೇ (ಸರ್ವೇಽಪಿ ಪ್ರಾಣಿನಃ) ಮದಂತಿ (ಹೃಷ್ಯಂತಿ) (ಇತ್ಯೇತತ್) ಸತ್ಯಮ್ ॥**

**ಅರ್ಥ:–** ಸ್ತೋತ್ರ ಮಾಡುವಂಥ ಇಂದ್ರದೇವನ ಮಿತ್ರನಾದ ಈತನನ್ನು (ಈ ವಿಷ್ಣುವಿನನ್ನು) ಅನುಸರಿಸಿಕೊಂಡು (ಅಂದರೆ ವಿಷ್ಣುವಿನ ಕಾರಣದಿಂದ) ಸಮಸ್ತರೂ ಕೂಡ ಸಂತೋಷವನ್ನು ಪಡೆಯುತ್ತಾರೆ. ಈ ವಿಷಯವು ಸತ್ಯವೇ ಆಗಿದೆ.

**ವಿಶೇಷ ವಿಷಯುಗಳು :–** ಇಂದ್ರದೇವನು ವಿಷ್ಣುವಿನನ್ನು ಸ್ತೋತ್ರ ಮಾಡುವನು ಎಂದು ಹೇಳಿದ್ದರಿಂದ ಸ್ವರ್ಗಾಧಿಪತಿಯಾದ ಇಂದ್ರನಿಗಿಂತ ವಿಷ್ಣುವು ಉತ್ತಮನು ಎಂದು ಹೇಳಿದಂತಾಯಿತು. ಅದೇ ರೀತಿ, ಇಂದ್ರನ ಮಿತ್ರನು ವಿಷ್ಣುವು ಎಂದು ಹೇಳಿದ್ದರಿಂದ ಇಂದ್ರನು ತನ್ನ ಆಪತ್ಕಾಲದಲ್ಲಿ ವಿಷ್ಣುವಿನ ಸಹಾಯುವನ್ನು ಅಪೇಕ್ಷಿಸುವದಲ್ಲದೆ ಅದನ್ನು ಪಡೆದು ತನ್ನ ಆಪತ್ತುಗಳಿಂದ ಪಾರಾದನು ಎಂದು ಹೇಳುವದರಿಂದ ದೇವತೆಗಳಿಗಿಂತ ವಿಷ್ಣುವು ಉತ್ತಮನಾಗಿದ್ದಾನೆ ಎಂದು ಹೇಳಿದಂತಾಯಿತು. ಸಮಸ್ತ ಪ್ರಾಣಿಗಳು ಕೂಡ ತಮಗೆ ಸಂತೋಷ ಸುಖ ಸಮಾಧಾನಗಳನ್ನು ಪಡೆಯಲು ವಿಷ್ಣುವಿನನ್ನೇ ಅನುಸರಿಸುವದರಿಂದ ವಿಷ್ಣುವು ಎಲ್ಲರಿಗಿಂತ ಉತ್ತಮನು ಎಂದು ಹೇಳಿದಂತಾಯಿತು. ಸಮಸ್ತ ಚರಾಚರ ಪ್ರಪಂಚದ ಸುಖಸಮಾಧಾನಗಳಿಗೆ ವಿಷ್ಣುವಿನ ಆಶ್ರಯ ಬೇಕು ಎಂಬುದು ಸತ್ಯವಾದ ವಿಷಯು . ಆದ್ದರಿಂದ ವಿಷ್ಣುವು ಎಲ್ಲರಿಗಿಂತ ಭಿನ್ನನು ಹಾಗೂ ಉತ್ತಮನು ಎಂಬ ಅರ್ಥವನ್ನು ಈ ಶ್ರುತಿಯು ಹೇಳುವದು.

Rarest Archiver

**ವಿ.ತ.ವಿ** ದಲ್ಲಿ ಈ ವಾಕ್ಯಕ್ಕೆ ಸಂಗತಿ :- ಎಲ್ಲ ಚೇತನರಲ್ಲಿ ಪರಸ್ಪರ ಭೇದ, ಅವುಗಳು ಮತ್ತು ತದಂತರ್ಯಾಮಿಯಾದ ಪರಮಾತ್ಮ ಇವರಲ್ಲಿ ಭೇದ, ಆದರೆ ಎಲ್ಲ ಚೇತನರಲ್ಲಿ ಅಂತರ್ಯಾಮಿಯಾಗಿರುವ ಪರಮಾತ್ಮನಲ್ಲಿ ಅಭೇದ ಇವುಗಳನ್ನು ಶ್ರುತಿಸ್ಮೃತಿಗಳಲ್ಲಿ ಹೇಳಿದೆಯೆಂದು ಈ ಮೊದಲು ಅನೇಕ ಶ್ರುತಿಸ್ಮೃತಿಗಳನ್ನುದಾಹರಿಸಿ ಅವುಗಳ ಅರ್ಥವನ್ನು ವಿವರಿಸಿ ತೋರಿಸಿಕೊಟ್ಟರು. ಆಪಾತತಃ ಬೇರೆ ರೀತಿ ಹೇಳುವಂ-ತಿರುವ **ಅಹಂ ಬ್ರಹ್ಮಾಸ್ಮಿ, ತದ್ಯೋಽಹಂ ಸೋಽಸೌ ಯೋಽಸೌ ಸೊಽಹಮ್, ಯೋಽಸಾವಾದಿತ್ಯೇ ಪುರುಷಃ ಸೋಽಹಮಸ್ಮಿ** ಇತ್ಯಾದಿ ಶ್ರುತಿಗಳನ್ನೂ ಕೂಡ ಚೇತನರಲ್ಲಿ ಭೇದ, ಚೇತನೇಶಭೇದ ಮತ್ತು ಈಶನಲ್ಲಿ ಅಭೇದಪರವಾಗಿಯೇ ಯೋಜಿಸಬೇಕೆಂದೂ ಶ್ರೀಮದಾಚಾರ್ಯರು ಸಿದ್ಧಾಂತ ಮಾಡಿದರು. ಇದನ್ನು ಆಕ್ಷೇಪಿಸಿ ಐಕ್ಯವಾದಿಗಳು ಶ್ರುತಿಸ್ಮೃತಿಗಳು ಈ ಪ್ರಕಾರ ಭೇದ ಹೇಳುವವೆಂದು ಒಪ್ಪಿಕೊಂಡರೂ ಚೇತನರಲ್ಲಿಯ ಪರಸ್ಪರ ಭೇದವೂ ಮತ್ತು ಚೇತನೇಶರಲ್ಲಿಯ ಭೇದವೂ ಕೂಡ ಅಸತ್ಯವಾಗಿದೆ ಎಂದು ಹೊಸ ವಾದ ಹೂಡುವರು. ಅವರ ಪ್ರಕಾರ ಶ್ರುತಿಸ್ಮೃತಿಗಳು ಅಸತ್ಯವಾದ ಭೇದವನ್ನು ಹೇಳುತ್ತಿವೆ, ಹೀಗೆ ಅಸತ್ಯವಾದ ವಿಷಯವನ್ನು ಹೇಳುವ ಶ್ರುತಿಸ್ಮೃತಿಗಳನ್ನನುಸರಿಸಿ ಪರಮಸತ್ಯನಾದ ಬ್ರಹ್ಮನನ್ನು ಹೇಳುವ **ಅಹಂ ಬ್ರಹ್ಮಾಸ್ಮಿ** ಇತ್ಯಾದಿ ತತ್ವಾವೇದಕಶ್ರುತಿಗಳನ್ನು ಯೋಜಿಸುವದು ಯುಕ್ತವಲ್ಲ. ಆದಕಾರಣ ಅಹಂ ಬ್ರಹ್ಮಾಸ್ಮಿ ಇತ್ಯಾದಿ ಶ್ರುತಿಗಳಿಗೆ ಈ ಮೊದಲು ಮಾಡಿದ ಅರ್ಥವು ಸರಿಯಲ್ಲ ಎಂಬುದು ಆಕ್ಷೇಪಕಾರರ ಅಭಿಪ್ರಾಯ. ಇದಕ್ಕೆ ಉತ್ತರರೂಪವಾಗಿ ಶ್ರೀಮದಾಚಾರ್ಯರು **ನ ಚ ಅಸತ್ಯೋ ಭೇದಃ** ಭೇದವು ಅಸತ್ಯವಾಗಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಶ್ರುತ್ಯಾದಿಗಳಿಂದ ಪ್ರತಿಪಾದಿತವಾದ ಭೇದವು ಅಸತ್ಯವಲ್ಲವೆಂಬುದಕ್ಕೆ ಶ್ರುತಿಗಳನ್ನೇ ಉದಾಹರಿಸುತ್ತಾರೆ. ಈ ಸಂದರ್ಭದಲ್ಲಿ ಉದಾಹರಿಸಲ್ಪಟ್ಟ ಮೊದಲನೆಯ ಶ್ರುತಿ ಇದು. ಈಶನು ಉಪಜೀವ್ಯ, ಜೀವನು ಉಪಜೀವಕ ಎಂಬುದು ಸತ್ಯವೆಂದು ಈ ಶ್ರುತಿ ಘಂಟಾಘೋಷವಾಗಿ ಸಾರುತ್ತಿದೆ. ಉಪಜೀವ್ಯ ಹಾಗೂ ಉಪಜೀವಕರಲ್ಲಿ ಅಭೇದವು ಹೇಗೆ ಕೂಡುವದು?

ಈ ಶ್ರುತಿಯ ಭಾವವು ***ಶ್ರುತ್ಯರ್ಥಷಟ್ಪದಿ***ಯಲ್ಲಿ ಹೀಗೆ;

*ಸುರರ ರಾಜನಿಗೀತ ಮಿತ್ರನು,*
*ಹರಿಯು ಸರ್ವೋತ್ತುಮನು ಸರುವದ,*
*ಹರಿಯ ತುತಿಸುತ ನಂಬಿದಾತನು ಸುಖವ ಪಡೆಯುವನು,*
*ಪರಮ ಸತ್ಯದ ತತ್ವವಿದುವೆ*
*ಹರಿಯು ಭಿನ್ನನು ಭೇದ ಸತ್ಯವು*
*ಅರಿವುದೆಂದಿತು ಸರುವ ನಿಗಮವು ಖಚಿತನುಡಿಗಳಲಿ.* // //

Rarest Archiver

**೫೮. ಸತ್ಯಃ ಸೋಽಸ್ಯ ಮಹಿಮಾ ಗೃಣೇ ಶವೋ ಯಜ್ಞೇಷು ವಿಪ್ರರಾಜ್ಯೇ ||** (?)

**ಅನ್ವಯಃ:–** ಸಃ (ಪ್ರಾಗುಕ್ತಃ) ಅಸ್ಯ (ವಿಷ್ಣೋಃ) ಮಹಿಮಾ (ಮಹತ್ತ್ವಂ ಸರ್ವೋತ್ತಮತ್ವಂ) **ಸತ್ಯಃ** । (ಅಹಂ ತಂ ಸತ್ಯಮಹಿಮಾನಂ ) **ವಿಪ್ರರಾಜ್ಯೇ** (ವಿಪ್ರರಾಜ್ಯರೂಪೇಷು, ಯಜ್ಞೋ ಹಿ ಬ್ರಾಹ್ಮಣಾನಾಂ ರಾಜ್ಯಮ್। ಬ್ರಾಹ್ಮಣೈಃ ರಂಜನೀಯಃ ಶೋಭನೀಯಃ । ಬ್ರಾಹ್ಮಣೈಃ ಹಿ ಯಜ್ಞಃ ಶೋಭತೆ । ರಂಜ್ ರಾಗೇ ಅಪೇಕ್ಷಣೀಯೋ ವಾ । ತಥಾ ಚ ವಿಪ್ರಪ್ರಧಾನಕೇಷು ಇತಿ ಫಲಿತಾರ್ಥಃ ದ್ರಷ್ಟವ್ಯಃ ।– ವಿ. ತ. ವಿ ನಿ. ಟೀಕಾ –ಶ್ರೀ. ತೀ ಟಿ. । ಏಕವಚನಂ ಬಹುವಚನಾರ್ಥಮ್– ಭಾ.ದೀ) **ಯಜ್ಞೇಷು, ಶವಃ** (ಸುಖಂ ಉದ್ದಿಶ್ಯ, ಶವಸ್ ಶಬ್ದದ ದ್ವಿತೀಯಾ ವಿಭಕ್ತಿ ಏ. ವ. ಶವಃ ಉದ್ದಿಶ್ಯ; ಶವಸೇ, ಶವಸಃ ಇತ್ಯಾದಿ ಪ್ರಯೋಗಗಳ ಅರ್ಥವನ್ನು ಮಹಾಬಲಾಯ, ಮಹತಃ ಬಲಸ್ಯ ಇತ್ಯಾದಿಯಾಗಿ **ನಿರುಕ್ತ**ದ ದುರ್ಗಾಚಾರ್ಯಕೃತ ವ್ಯಾಖ್ಯೆಯಲ್ಲಿ ಹೇಳಿದ್ದಾರೆ. *ನಿರುಕ್ತಮ್* ಮೆಹರ್ಚಂದ ಲಛಮನ್‌ದಾಸ್, ನಯೀ ದಿಲ್ಲಿ ೧೯೮೨, ನಮಗೆ ಉಪಲಬ್ಧವಿದ್ದ ಕೋಶಗಳಲ್ಲಿ **ಶವಸ್** ಪದಕ್ಕೆ ಬಲ ಅಥವಾ ಸುಖ ಎಂಬರ್ಥ ಸಿಕ್ಕಲಿಲ್ಲ. ಆದರೆ **ಸತ್ಯಮೇನಮನು ವಿಶ್ವೇ ಮದಂತಿ...** ಇತ್ಯಾದಿ ಶ್ರುತಿಯಿಂದ ಹಾಗೂ ಶ್ರೀವ್ಯಾಸತತ್ತ್ವಜ್ಞರು ಇಲ್ಲಿ ಉದಾಹರಿಸಿದ **ಸರ್ವೇ ನಂದಂತಿ ಯಶಸಾಽಽಗತೇನ ಸಭಾಸಾಹೇನ ಸಖ್ಯಾ ಸಖ್ಯೇನ** ಎಂಬ ಸಮಾಖ್ಯಾಶ್ರುತಿಗಳಿಂದ ಈ ಅರ್ಥವು ಲಭಿಸುವದು. **ಶವಃ ಸಕಾರಾಂತಮಿದಂ ಸುಖನಾಮೇತ್ಯಾಹ** ಎಂದು *ಶ್ರೀವ್ಯಾಸತತ್ತ್ವಜ್ಞರ ಲಘುಪ್ರಭಾ ಟಿಪ್ಪಣೀ*) . **ಗೃಣೇ** (ಸ್ತೌಮಿ) ||

**ಅರ್ಥ:–** ಈ ಮೊದಲು ನಾನು ಹೇಳಿದ ಈ ವಿಷ್ಣುವಿನ ಮಹತ್ತ್ವ ಅಂದರೆ ಸರ್ವೋತ್ತಮತ್ವರೂಪ ಮಹಿಮೆಯು ಸತ್ಯವೇ ಆಗಿದೆ. ಬ್ರಾಹ್ಮಣರ ಪ್ರಭಾವದ ಸ್ಥಾನವಾಗಿರುವ ಯಜ್ಞಗಳಲ್ಲಿ ನಿತ್ಯಸುಖಾತ್ಮಕವಾದ ಮೋಕ್ಷಕ್ಕೋಸ್ಕರ ವಿಷ್ಣುವಿನ ಈ ಸತ್ಯವಾದ ಮಹಿಮೆಯನ್ನು ನಾನು ಸ್ತುತಿಸುವೆನು.

**ವಿಶೇಷ :–** ಇದರಲ್ಲಿ ಬ್ರಹ್ಮನ ಸೃಷ್ಟಿಕರ್ತೃತ್ವಾದಿಮಹಿಮೆಯು ಸತ್ಯವೆಂದು ಹೇಳಿರುವದರಿಂದ ಅವನಿಂದ ಸೃಷ್ಟವಾದ ಪ್ರಪಂಚವೂ ಅಸತ್ಯವಲ್ಲ, ಆದರೆ ಅದು ಸತ್ಯವೆಂದು ಹೇಳಿದಂತಾಯಿತು.

*ಶ್ರುತ್ಯರ್ಥಷಟ್ಪದಿ*ಯಲ್ಲಿ ಇದರ ಭಾವವು ಹೀಗೆ;

*ಪರಮಪುರುಷನ ಕೃತಿಯುಸತ್ಯವೆ?*
*ಪರಮಸತ್ಯವು ಸೃಷ್ಟಿಯೆಲ್ಲವು,*
*ಪರಮಪುರುಷನ ಮಹಿಮೆಯನು ನಾ ನಿರುತ ತುತಿಸುವೆನು.*

Rarest Archiver

*ಧರೆಯಸುರರಾಚರಿಪ ಯಜ್ಞಾದಿ*
*ನಿರುತ ಸುಖವೆಮಗೊದಗಿಸೆನ್ನುತ*
*ಪರಮಪುರುಷನ ಸತ್ಯಮಹಿಮೆಯ ತುತಿಸಿ ಪಾಡುವೆನು. ॥ ॥*

**೫೯. ಸತ್ಯ ಆತ್ಮಾ ಸತ್ಯೋ ಜೀವಃ ಸತ್ಯಂ ಭಿದಾ ಸತ್ಯಂ ಭಿದಾ ಸತ್ಯಂ ಭಿದಾ। ಮೈವಾರುವಣ್ಯಃ ಮೈವಾರುವಣ್ಯಃ ಮೈವಾರುವಣ್ಯಃ ॥ (?)**

**ಅರ್ಥ :–** ಪರಮಾತ್ಮನು ಸತ್ಯನು, ಜೀವರೆಲ್ಲರೂ ಸತ್ಯರು, ಅವರಲ್ಲಿರುವ ಭೇದವು (ಅಥವಾ ಪಂಚ ಭೇದವು) ನಿಜಕ್ಕೂ ಸತ್ಯ (ಭಿದಾ ಸತ್ಯಾ); (ಕೆಲವರು ಭೇದವನ್ನು ಅಸತ್ಯವೆಂದು ಹೇಳುವರು, ಆದರೆ ಹಾಗೆ ಹೇಳುವವರು ದೋಷಿಗಳು). ಪರಮಾತ್ಮನು **(ಆರುಭಿಃ ವನ್ಯಃ ಆರುವಣ್ಯಃ)** ದೋಷಿಗಳಿಂದ ಭಜನೀಯನಲ್ಲ. (**ವನ್ಯಃ** ಎಂದರೆ ಭಜನೀಯನು). ಅಂದರೆ ಪರಮಾತ್ಮನು ಜೀವರಿಂದ ಭೇದವಿಲ್ಲದವನಲ್ಲವೆಂದು ತಾತ್ಪರ್ಯ.

**ವಿಶೇಷ :–** ಭೇದವು ಸತ್ಯವೆಂದು ಮೂರು ಸಲ ಹೇಳಿದ್ದು ಶಪಥದಿಂದ ಭೇದಸತ್ಯತ್ವವನ್ನು ಹೇಳುವದಕ್ಕಾಗಿ. **ಮಾ ಏವ ಆರುವಣ್ಯಃ– ಆರುಭಿಃ** ದೋಷಿಗಳಿಂದ, ಅರ ಎಂದರೆ ದೋಷ. ಆರುಃ ಎಂದರೆ ದೋಷಿ. ಈ ಪದದ ವ್ಯುತ್ಪತ್ತಿಗಾಗಿ ವಿ.ತ.ವಿ ಟೀಕೆಯ ಶ್ರೀನಿವಾಸತೀರ್ಥರ ಟಿಪ್ಪಣೀ ನೋಡಬಹುದು. **ವನ್ಯಃ (ರಷಾಭ್ಯಾಮ್ ನೋ ಣಃ ಸಮಾನಪದೇ** ಎಂಬ ಪಾಣಿನಿ ಸೂತ್ರದಿಂದ ನ್ಯ ಎಂಬುದು ಣ್ಯ ಆಗುತ್ತದೆ) ಭಜನೀಯನು **ಮಾ ಏವ** ಅಲ್ಲವೇ ಅಲ್ಲ.

*ಶ್ರುತ್ಯರ್ಥಷಟ್ಪದಿ*ಯಲ್ಲಿ ಇದರ ಭಾವವು ಹೀಗೆ;

*ಸತ್ಯವಾತ್ಮನು ಸತ್ಯ ಜೀವನು*
*ಸತ್ಯವಿಹುದಿದು ಪಂಚ ಭೇದವು*
*ಸತ್ಯ ಸತ್ಯವು ಸತ್ಯವೇ ಎಂದೆನುತ ಘೋಷಿಸುವೆ.*
*ಸತ್ಯನಾಮಕ ಹರಿಯುದೆಂದಿಗು*
*ಮತ್ತರಿಂದ ಸ್ತುತ್ಯನಾಗನು,*
*ಸತ್ಯವಿಹುದನಸತ್ಯವೆಂಬರು ಮತ್ತರಾಗಿಹರು. ॥ ॥*

**೬೦. ಆತ್ಮಾ ಹಿ ಪರಮಸ್ವತಂತ್ರಃ ಸರ್ವವಿತ್ ಸರ್ವಶಕ್ತಿಃ ಪರಮಸುಖಃ ಪರಮೋ ಜೀವಃ ತು ತದ್ವಶಃ ಅಲ್ಪಜ್ಞಃ ಅಲ್ಪಶಕ್ತಿಃ ಆರ್ತಃ ಅಲ್ಪಕಃ ॥ (?)**

**ಅರ್ಥ:–** ಪರಮಾತ್ಮನು ಸರ್ವತಂತ್ರಸ್ವತಂತ್ರನು, ಸರ್ವಜ್ಞನು, ಅಪ್ರತಿಮ ಬಲಶಾಲಿಯು, ದುಃಖದ ಲೇಪವಿರದ ನಿತ್ಯಸುಖಿಯು, ಉತ್ತಮನು ; ಜೀವನಾದರೋ ಪರಮಾತ್ಮನ ಅಧೀನನು, ಅಲ್ಪಜ್ಞನು, ಅಲ್ಪಶಕ್ತಿಯು, ದುಃಖಿಯು, ಅಲ್ಪನು.

Rarest Archiver

**ವಿಶೇಷ :–** ಹೀಗೆ ಪರಮಾತ್ಮ ಹಾಗೂ ಜೀವರಲ್ಲಿ ವಿರುದ್ಧಧರ್ಮಗಳಿರುವದರಿಂದ ಜೀವನಲ್ಲಿಯ ಧರ್ಮಗಳು ಅನುಭವಕ್ಕೆ ಬರುವದರಿಂದ (ಪ್ರಮಾಣ-ಜ್ಯೇಷ್ಠವಾದ ಸಾಕ್ಷಿಗೆ ಗೋಚರವಾಗುವದರಿಂದ) ಮತ್ತು ಪರಮಾತ್ಮನ ಧರ್ಮಗಳು ಪ್ರಬಲ ಪ್ರಮಾಣವಾದ ಶ್ರುತಿಯಿಂದ ತಿಳಿಯುವದರಿಂದ ಅವರಲ್ಲಿರುವ ಭೇದವು ಪ್ರಾಮಾಣಿಕ, ಅಸತ್ಯವಲ್ಲ, ಸತ್ಯವೆಂದು ತಿಳಿಯುವದು. ಇದು ಭೇದ-ಸತ್ಯತ್ವಕ್ಕೆ ಬಹಳ ಸ್ಪಷ್ಟವಾದ ಶ್ರುತಿಯಾಗಿದೆ.

***ಶ್ರುತ್ಯರ್ಥಷಟ್ಪದಿ***ಯಲ್ಲಿ ಇದರ ಭಾವವು ಹೀಗೆ;

*ಪರಮಪುರುಷನೆ ಸುಸ್ವತಂತ್ರನು,*
*ಸರುವ ತಿಳಿದಿಹನಖಿಲಶಕ್ತನು,*
*ಸರುವಕಾಲದಿ ಪರಮಸುಖಿ ಇಹನಂತೆ ಪರಮಾತ್ಮ,*
*ನಿರುತ ಜೀವನು ಅಸ್ವತಂತ್ರನು*
*ಹರಿಯಧೀನನು, ಅಲ್ಪಶಕ್ತನು*
*ನಿರುತದುಃಖಿಯು ಅಲ್ಪನೆನ್ನುತ ನಿಗಮ ಘೋಷಿಸಿತು.* // //

**೬೧. ಯೋ ವೇದ ನಿಹಿತಂ ಗುಹಾಯಾಂ ಪರಮೇ ವ್ಯೋಮನ್ ।**
**ಸೋಽಶ್ನುತೆ ಸರ್ವಾನ್ ಕಾಮಾನ್ ಸಹ ಬ್ರಹ್ಮಣಾ ವಿಪಶ್ಚಿತಾ ॥**

– *ತೈತ್ತಿರೀ-ಯೋಪನಿಷತ್, ಅ.(ವಲ್ಲೀ) ೨. ೧. ಉಪನಿಷದ್ವಾಕ್ಯಕೋಷ* ದ ಪ್ರಕಾರ *೨-೧-೧+ ಮತ್ತು ನಾರಾಯಣೋತ್ತರತಾಪಿನ್ಯುಪನಿಷತ್ ೧-೫.*

**ಅನ್ವಯ ಹಾಗೂ ಅರ್ಥ:–** ಯಃ ಪರಮೇ ಗುಹಾಯಂ ವ್ಯೋಮನ್ (ವ್ಯೋಮ್ನಿ) ನಿಹಿತಂ ವೇದ ಸಃ ವಿಪಶ್ಚಿತಾ ಬ್ರಹ್ಮಣಾ ಸಹ ಸರ್ವಾನ್ ಕಾಮಾನ್ ಅಶ್ನುತೇ ।

ಯಾರು ಶ್ರೇಷ್ಠವಾದ ಹೃದಯಗುಹಾಕಾಶದಲ್ಲಿ ಇದ್ದಂಥವನನ್ನು (ಬ್ರಹ್ಮನನ್ನು) ತಿಳಿದುಕೊಂಡಿರುವನೋ (ಅಂದರೆ ಬ್ರಹ್ಮನ ಸಾಕ್ಷಾತ್ಕಾರ ಮಾಡಿಕೊಳ್ಳುವನೋ) ಅವನು (ಮುಕ್ತಿಯಲ್ಲಿ) (ತನ್ನಿಂದ ಬೇರೆ ಇರುವಂಥ) ಸರ್ವಜ್ಞನಾದ ಬ್ರಹ್ಮನೊಡನೆ ಇದ್ದು (ತನಗೆ ಯೋಗ್ಯವಾದ) ಎಲ್ಲ ಇಷ್ಟಗಳನ್ನು ಭೋಗಿಸುತ್ತಾನೆ.

**ವಿಶೇಷ :–** ಮುಕ್ತಿಯಲ್ಲಿಯೂ ಕೂಡ ಜೀವೇಶಭೇದವು ಇದ್ದೇ ಇರುವದು ಹಾಗೂ (ಈ ಪ್ರಪಂಚದಲ್ಲಿ ಹಾಗೂ) ಮುಕ್ತಿಯಲ್ಲಿಯ ಭೇದವು ಪಾರಮಾರ್ಥಿಕಸತ್ಯವೇ ಆಗಿದೆಯೇ ಹೊರತು ವ್ಯಾವಹಾರಿಕಸತ್ಯವಲ್ಲ ಎಂದು ತಿಳಿಸಲು ಶ್ರೀಮದಾಚಾರ್ಯರು ಈ ಮತ್ತು ಇನ್ನಿತರ ಶ್ರುತಿಗಳನ್ನು ಉದಾಹರಿಸುತ್ತಿದ್ದಾರೆ. ಈ ಸಂದರ್ಭದಲ್ಲಿ ಶ್ರೀಮದಾಚಾರ್ಯರ **ನ ಚ ಅವಾಂತರಸತ್ಯತ್ವಮ್ ಇದಮ್** ಎಂಬ ಅವತಾರಿಕೆಯು ಅರ್ಥಪೂರ್ಣವಾಗಿದೆ. ಶ್ರುತಿಗಳೆಲ್ಲ ವ್ಯಾವಹಾರಿಕಸತ್ಯತ್ವಪರವಾಗಿಲ್ಲ. ಹೀಗೆ

Rarest Archiver

ಹೇಳುವದರಿಂದ ಕೆಲವರ ಅಭಿಪ್ರಾಯದಂತೆ ಸತ್ಯತ್ವದಲ್ಲಿ ಪ್ರಭೇದಗಳುಂಟು ಎಂದು ಹೇಳಿದಂತಾಯಿತು. ಈ ವಿಷಯವನ್ನು ಶ್ರೀಮತ್ ಟೀಕಾಕೃತ್ಪಾದರು ಹೀಗೆ ಬಿಡಿಸಿ ಹೇಳುತ್ತಾರೆ. ಅಭೇದವಾದಿಗಳ ಪ್ರಕಾರ ಸತ್ಯತ್ವವು ಪ್ರಾತೀತಿಕ, ವ್ಯಾವಹಾರಿಕ ಹಾಗೂ ಪಾರಮಾರ್ಥಿಕವೆಂದು ಮೂರು ಪ್ರಕಾರದ್ದಿರುತ್ತದೆ. ಸಿಂಪಿನಲ್ಲಿ ಬೆಳ್ಳಿಯು ಅಹ! ಇದು ಬೆಳ್ಳಿಯಲ್ಲ ಎಂಬ ಬಾಧ-ಜ್ಞಾನ ಬರುವ ವರೆಗೂ ನಿಜವೆಂದೇ ಕಾಣುವದು. ಇಲ್ಲಿ ಪ್ರಾತೀತಿಕ ಸತ್ಯತ್ವವಿದೆ. ನಮಗೆ ಕಾಣುವ ಜಗತ್ತೆಲ್ಲ ಮಿಥ್ಯೆ, ಆದರೆ ವ್ಯಾವಹಾರಿಕವಾಗಿ ಮಾತ್ರ ಸತ್ಯವಾಗಿದೆ. ಇಲ್ಲಿ ವ್ಯಾವಹಾರಿಕ ಸತ್ಯತ್ವವಿದೆ. ಜೀವೇಶ್ವರ ಭೇದವೂ ವ್ಯಾವಹಾರಿಕಸತ್ಯ ಮಾತ್ರ. ತಾನು ಬ್ರಹ್ಮನು ಎಂಬ ತಿಳುವಳಿಕೆ ಬರುವ ವರೆಗೆ ಮಾತ್ರ ಈ ಭೇದ. ಮುಕ್ತನು ಬ್ರಹ್ಮನೊಡನೆ ಐಕ್ಯ ಹೊಂದುವನು. ಬ್ರಹ್ಮನೊಬ್ಬನೇ ಪಾರಮಾರ್ಥಿಕ ಸತ್ಯ. ಬ್ರಹ್ಮ ಸತ್ಯಂ ಜಗತ್ ಮಿಥ್ಯಾ. ಹೀಗಿರುವದರಿಂದ ಜೀವೇಶ್ವರ-ಭೇದವನ್ನು ಹೇಳುವ ಶ್ರುತಿಗಳು ಪರಮಾರ್ಥಸತ್ಯತ್ವಪರವಾಗಿಲ್ಲ. ವ್ಯಾವಹಾರಿ-ಕಸತ್ಯತ್ವಪರವಾಗಿವೆ. ಅಹಂ ಬ್ರಹ್ಮಾಸ್ಮಿ ಇತ್ಯಾದಿ ವಾಕ್ಯಗಳು ಪರಮಾರ್ಥಸತ್ಯ-ತ್ವಪರವಾಗಿವೆ. ಹೀಗೆ ಅಭೇದವಾದಿಗಳು ಹೇಳುವರು. ಅದನ್ನು ಖಂಡಿಸಲು ಶ್ರೀಮದಾಚಾರ್ಯರು ಉದಾಹರಿಸಿದ ಶ್ರುತಿವಾಕ್ಯಗಳಲ್ಲಿ **ಯೋ ವೇದ ....** ಇತ್ಯಾದಿ ವಾಕ್ಯವು ಮೊದಲಿನದು. ಜ್ಞಾನಿಯು ಮುಕ್ತಿ ಹೊಂದಿ ಬ್ರಹ್ಮನೊಡನೆ ಇದ್ದು...... ಎಂದು ಹೇಳಿರುವದರಿಂದ ಜೀವ ಬ್ರಹ್ಮರಲ್ಲಿ ಭೇದವನ್ನೇ ಹೇಳಿದಂತಾಯಿತು. ಅಲ್ಲದೆ ಇಷ್ಟವಾದ ಭೋಗಗಳನ್ನು ಪಡೆದು ಭೋಗಿಸುತ್ತಾನೆ ಎಂದು ಹೇಳಿರುವದರಿಂದ ಭೇದವೇ ಹೇಳಲ್ಪಟ್ಟಿದೆ, ಏಕೆಂದರೆ ಆನಂದಮಯನಾದ ಬ್ರಹ್ಮನೊಡನೆ ಐಕ್ಯವನ್ನು ಹೊಂದಿದ್ದರೆ ಜೀವನು ಇಷ್ಟಗಳನ್ನು ಪಡೆದು ಭೋಗಿಸುವನು ಎಂದು ಹೇಳುವದು ಸಮರ್ಪಕವಾಗುತ್ತಿರಲಿಲ್ಲ. ಆದಕಾರಣ ಈ ಶ್ರುತಿಯಲ್ಲಿ ಪಾರಮಾರ್ಥಿಕವಾದ ಭೇದವನ್ನೇ ಹೇಳಿದೆ. ಈ ವಿಷಯವು ಮುಂದಿನ ಶ್ರುತಿವಾಕ್ಯದಲ್ಲಿ ಇನ್ನೂ ಸ್ಪಷ್ಟವಾಗುವದು.

ಈ ಶ್ರುತಿಯ ಭಾವವು **ಶ್ರುತ್ಯರ್ಥಷಟ್ಪದಿಯಲ್ಲಿ** ಇಂತಿದೆ. :-

*ಹೃದಯಗುಹೆಯೊಳು ಕಂಡು ಹರಿಯನು*
*ಮುದವನೆಲ್ಲವ ಪಡೆವ ಜೀವನು*
*ವಿಧಿಯ ಸಂಗಡ ತನ್ನ ಯೋಗ್ಯತೆ ಮೀರದಂತಿಹನು,*
*ಇದನ ಸಾರಿದೆ ತೈತ್ತಿರೀಯವು*
*ಸದಯ ಸಿರಿಹರಿ ಜೀವರೊಳಗಿಹ*
*ಭಿದವು ನಿತ್ಯವು ಮುಕುತಿಯಲ್ಲಿಯು ಸತ್ಯವೆಂದೆನುತ. ॥ ॥*

Rarest Archiver

**೬೨. ಏತಮಾನಂದಮಯಂ ಆತ್ಮಾನಂ ಉಪಸಂಕ್ರಮ್ಯ ಇಮಾನ್ ಲೋಕಾನ್ ಕಾಮಾನ್ನೀ ಕಾಮರೂಪೀ ಅನುಸಂಚರನ್ । ಏತತ್ ಸಾಮ ಗಾಯನ್ ಆಸ್ತೇ ॥** *---ತೈತ್ತಿರೀಯೋಪನಿಷತ್, ೩-೧೪, (ಶ್ರೀ ರಾಯರ ಖಂಡಾರ್ಥದ ಪ್ರಕಾರ ತೃತೀಯಾ ವಲ್ಲೀ ೧೦ ), ( ಉಪನಿಷದ್ವಾಕ್ಯಕೋಷಃ* ದ ಪ್ರಕಾರ *೩-೧೦-೫,)*

ಈ ಭಾಗದ ಸಂಪೂರ್ಣ ಪಾಠ ಹೀಗೆ ಇದೆ; ಸ ಯಶ್ಚಾಯಂ ಪುರುಷೆ । ಯಶ್ಚಾಸಾವಾದಿ-ತ್ಯೇ ।ಸ ಏಕಃ । ಸ ಯ ಏವಂವಿತ್ । ಅಸ್ಮಾಲ್ಲೋಕಾತ್ ಪ್ರೇತ್ಯ । ಏತಮನ್ನಮಯ-ಮಾತ್ಮಾನಮುಪಸಂಕ್ರಮ್ಯ । ಏತಂ ಪ್ರಾಣಮಯಮಾತ್ಮಾನಮುಪಸಂಕ್ರಮ್ಯ। ಏತಂ ಮನೋಮಯಮಾತ್ಮಾನಮುಪಸಂಕ್ರಮ್ಯ । ಏತಂ ವಿಜ್ಞಾನಮಯಮಾತ್ಮಾನಮುಪ-ಸಂಕ್ರಮ್ಯ । ಏತಂ ಆನಂದಮಯಮಾತ್ಮಾನಮುಪಸಂಕ್ರಮ್ಯ । ಇಮಾನ್ ಲೋಕಾನ್ ಕಮಾನ್ನೀ ಕಮರೂಪ್ಯನುಸಂಚರನ್ । ಏತತ್ ಸಾಮ ಗಾಯನ್ನಾಸ್ತೇ ।ಹಾ೩ವು ಹಾ೩ವು ಹಾ೩ವು । ಅಹಮನ್ನಮಹಮನ್ನಮಹಮನ್ನಂ । ಅಹಮನ್ನಾದೋ೨ऽಹಮನ್ನಾದೋ೨-ऽಹಮಹಮನ್ನಾದಃ । ಅಹಜಶ್ಲೋಕಕೃದಹಜಶ್ಲೋಕಕೃದಹಜಶ್ಲೋಕಕೃತ್ ॥ ೩-೧೦

**ಅನ್ವಯ ಹಾಗೂ ಅರ್ಥ :-**ಏವಂವಿತ್ ಉಕ್ತರೀತ್ಯಾ ಅನ್ನಮಯಾದಿರೂಪಜ್ಞಾನೀ ವಿರಿಂಚಾದಿಃ **ಲೋಕಾತ್** ದೇಹಾತ್ ನಿರ್ಗತ್ಯ । **ಏತಂ ಆನಂದಮಯಂ ಆತ್ಮಾನಂ ಉಪಸಂಕ್ರಮ್ಯ ಕಾಮಾನ್ನೀ ಕಾಮರೂಪೀ ಇಮಾನ್ ಲೋಕಾನ್ ಅನುಸಂಚರನ್ ಏತತ್ ಸಾಮ ಗಾಯನ್ ಆಸ್ತೇ ॥**

ಅರ್ಥ:- ಈ ರೀತಿ ಪರಮಪುರುಷನ ಅನ್ನಮಯ, ಪ್ರಾಣಮಯ, ಚಕ್ಷುರ್ಮಯ, ಶ್ರೋತ್ರಮಯ, ಮನೋಮಯ, ವಾಙ್ಮಯ, ವಿಜ್ಞಾನಮಯ, ಆನಂದಮಯನೆಂಬ ಎಂಟು ರೂಪಗಳನ್ನು (ಅನ್ನಮಯಾನಿರುದ್ಧಾದಿರೂಪಗಳನ್ನು) ತಿಳಿದುಕೊಂಡ ಚರ್ತುಖನೇ ಆದಿಯಾದ ಜೀವನು ತನ್ನ (ಲೋಕಾತ್ ಪ್ರೇತ್ಯ) ದೇಹವನ್ನು ತೊರೆದು ಅನ್ನಮಯರೂಪದ ಪರಮಾತ್ಮನ ಸನ್ನಿಧಿಯನ್ನು ಹೊಂದಿ, ಪ್ರಾಣಮಯರೂಪದ ಪರಮಾತ್ಮನ ಸನ್ನಿಧಿಯನ್ನು ಹೊಂದಿ, ಮನೋಮಯ ಪರಮಾತ್ಮನ ಸನ್ನಿಧಾನವನ್ನು ಹೊಂದಿ, ವಿಜ್ಞಾನಮಯ ಪರಮಾತ್ಮನ ಸನ್ನಿಧಾನವನ್ನು ಪಡೆದು ಹಾಗೂ ಆನಂದಮಯರೂಪದ ಪರಮಾತ್ಮನ ಸನ್ನಿಧಿಗೆ ಬಂದು ಮತ್ತು ಅನ್ನಮಯಾದಿ-ಸಾರೂಪ್ಯವನ್ನು ಹೊಂದಿ (-ಶ್ರೀ ರಾಯರ ಖಂಡಾರ್ಥದಂತೆ) ತನಗಿಷ್ಟವಾದ ಭೋಗವುಳ್ಳವನಾಗಿ (ಕಾಮಶ್ಚ ತದನ್ನಂ ಚ ಕಾಮಾನ್ನಮ್-ಟೀಕಾ, ಕಾಮಾನ್ನಂ ಅಸ್ಯ ಅಸ್ತೀತಿ ಕಾಮಾನ್ನೀ । ತದಸ್ಯಾಸ್ತ್ಯಸ್ಮಿನ್ನಿತಿ ಮತುಪ್ । ಮತುಪಃ ಇನಾದೇಶಃ ), ಇಚ್ಛಾಧೀನರೂಪವುಳ್ಳವರಾದರಿಂದ ಯಥೇಷ್ಟವಾದರೂಪಗಳನ್ನು ಧರಿಸಿ ಈ ಲೋಕಗಳಲ್ಲಿ ಸಂಚರಿಸುತ್ತ ಈ ಪ್ರಕಾರದ ಸಾಮಗಾನವನ್ನು ಮಾಡುತ್ತಿದ್ದಾನೆ. ಹಾ...ವೂ ಹಾ....ವೂ ಹಾ.....ವೂ. ! ಅಹ್! ಸುಖಾತಿಶಯಾಸ್ವಾದನದಿಂದ ನಾನು ಹಿರಿ ಹಿರಿ

Rarest Archiver

ಹಿಗ್ಗಿದ್ದೇನೆ. ನಾನು ನನಗಿಂತ ಕಡಿಮೆಯವರಿಗೆ ಉಪಜೀವ್ಯನಾದ ಕಾರಣ ಅನ್ನನೆಂದು ಕರೆಯಲ್ಪಡುತ್ತೇನೆ. ನಾನು ಯಥೇಷ್ಟವಾಗಿ ಅನ್ನವನ್ನು ಭೋಜಿಸುವದರಿಂದ ಅನ್ನಾದನು. ನಾನು ಪರಮಾತ್ಮನ ಸ್ತುತಿಮಾಡುವಂಥವನು, ಅವನ ಕೀರ್ತಿಯನ್ನು ಗಾನ ಮಾಡುವಂಥವನಾಗಿದ್ದೇನೆ !

**ವಿಶೇಷ ವಿಷಯಗಳು :–**

i. ಇದು ಚತುರ್ಮುಖ ಬ್ರಹ್ಮನ ಮಾತೆಂದು ಶ್ರೀಮದಾಚಾರ್ಯರ ಉಪನಿಷದ್ಭಾಷ್ಯದಲ್ಲಿ ಉಕ್ತವಾಗಿದೆ. ಶ್ರೀ ರಾಯರ ಖಂಡಾರ್ಥದಲ್ಲಿ **ಏವಂವಿತ್** ಎಂಬುದಕ್ಕೆ **ಉಕ್ತರೀತ್ಯಾ ಅನ್ನಮಯಾದಿರೂಪ–ಜ್ಞಾನೀ ವಿರಿಂಚಾದಿಃ** ಎಂದು ಹೇಳಿದ್ದಾರೆ. ಬ್ರಹ್ಮದೇವರನ್ನು ಮುಂದೆ ಮಾಡಿಕೊಂಡೇ ಎಲ್ಲ ಮುಕ್ತರು ಮುಕ್ತಿಯಲ್ಲಿ ಆನಂದವನ್ನನುಭವಿಸುವದರಿಂದ ಇದರಲ್ಲಿ ಯಾವ ಪ್ರಕಾರದ ಅಭಿಪ್ರಾಯಭೇದದ ಶಂಕೆಗೆ ಆಸ್ಪದವಿಲ್ಲ.

ii. ಚತುರ್ಮುಖಬ್ರಹ್ಮನೇ ಮೊದಲಾದ ಜೀವರು ಮುಕ್ತರಾದ ಮೇಲೆ ಪರಮಾತ್ಮನ ಸನ್ನಿಧಿಯನ್ನು ಹೊಂದುವರೆಂದ ಮೇಲೆ ಜೀವರು ಪರಮಾತ್ಮರಲ್ಲಿ ಭೇದವನ್ನು ಹೇಳಿದಂತಾಯಿತು.

iii. ಮುಕ್ತ ಜೀವರು ಪರಮಾತ್ಮನ ಸನ್ನಿಧಿಯನ್ನು ಹೊಂದಿದ ಮೇಲೆ ಅವನ ಪ್ರಸಾದದಿಂದ ತಮ್ಮ ತಮ್ಮ ಇಷ್ಟಾರ್ಥಗಳನ್ನು ಪಡೆಯುವರು ಎಂದರೆ ಅವರು ಆಪ್ತಕಾಮನಾದ, ನಿತ್ಯತೃಪ್ತನಾದ ಪರಮಾತ್ಮನಗಿಂತ ಅಧಮರು, ಅವನಂತೆ ಸ್ವತಂತ್ರರಲ್ಲ, ಅವನೊಡನೆ ಅವರು ಐಕ್ಯವನ್ನು ಹೊಂದಿಲ್ಲವೆಂದು ಹೇಳಿದ ಹಾಗೆ ಆಯಿತು. ಮುಕ್ತಿಯಲ್ಲಿಯೂ ಕೂಡ ಇದ್ದ ಭೇದವನ್ನು ಈ ವಾಕ್ಯವು ಸ್ಪಷ್ಟವಾಗಿ ಹೇಳುವದು.

iv. ಮುಕ್ತರು ಪರಮಾತ್ಮನ ಕೀರ್ತಿಯನ್ನು ಬಿತ್ತರಿಸುವ ಗಾನ ಮಾಡುವರೆಂದ ಮೇಲೆ ಅವರು ಪರಮಾತ್ಮನಗಿಂತ ಅವರರು ಎಂದೂ ಹೇಳಿದಂತೆ ಆಯಿತು.

ಅಂತು, ಮುಕ್ತರು ಪರಮಾತ್ಮನಿಂದ ಭಿನ್ನರಾಗಿದ್ದಾರೆ ಹಾಗೂ ಈ ಭೇದವು ವ್ಯಾವಹಾರಿಕವಲ್ಲ, ಪ್ರಾಮಾಣಿಕವೂ ನಿತ್ಯವೂ ಆಗಿದೆ, ಎಂದು ಈ ಉಪನಿಷತ್ತು ತಿಳಿಸುವದು.

Rarest Archiver

ಈ ಶ್ರುತಿಯ ಒಟ್ಟಭಿಪ್ರಾಯವು **ಶ್ರುತಿಷಟ್ಪದಿಯಲ್ಲಿ** ಹೀಗೆ :-

*ಚತುರವದನಾದಿಗಳು ಜೀವರು*
*ಅತುಲಪುರುಷನ ರೂಪವೆಂಟನು*
*ಮಥಿಸಿ ಮನದೊಳು ತಮ್ಮ ದೇಹವ ತೊರೆದು ಪೊಂದಿಹರು*
*ಅತುಲಪುರುಷನ ಲೋಕದೊಳು ತಾ-*
*ವತಿಶಯದ ಸುಖ ಪೊಂದಿ ಚರಿಸುತ*
*ಮತಿಗೆ ತೋರುವ ರೂಪ ಧರಿಸುತ ಸಾಮ ಪಾಡುವರು. ॥*

**೬೩. ಋಚಾಂ ತ್ವಃ ಪೋಷಮ್ ಆಸ್ತೇ ಪುಪುಷ್ವಾನ್ ಗಾಯತ್ರಂ ತ್ವಃ ಗಾಯತಿ ಶಕ್ವರೀಷು । ಬ್ರಹ್ಮಾ ತ್ವಃ ವದತಿ ಜಾತವಿದ್ಯಾಂ ಯಜ್ಞಸ್ಯ ಮಾತ್ರಾಂ ವಿಮಿಮೀತ ಉತ್ವಃ ॥** *–ಋಕ್ಸಂಹಿತಾ ೮-೨-೨೪.*

ಷಟ್ಪ್ರಶ್ನಭಾಷ್ಯದಲ್ಲಿಯೂ ಈ ವಾಕ್ಯವು ಉದಾಹರಿಸಿಲ್ಪಟ್ಟಿದೆ)

**ಅನ್ವಯ ಮತ್ತು ಅರ್ಥ :- ತ್ವಃ** – (ಮುಕ್ತನಾದ) ಒಬ್ಬ ಬ್ರಹ್ಮನು (ತಾನು ಸ್ವಯಂ) **ಪುಪುಷ್ವಾನ್**- ಪುಷ್ಟನಾಗಿ, **ಋಚಾಂ ಪೋಷಂ (ಕುರ್ವನ್) ಆಸ್ತೇ**- ಋಕ್ಕುಗಳನ್ನು ಚೆನ್ನಾಗಿ ಉಚ್ಚರಿಸುತ್ತಿರುವನು. **ತ್ವಃ ಉದ್ಗಾತಾ**- ಒಬ್ಬ ಉದ್ಗಾತೃ ಬ್ರಹ್ಮನು **ಶಕ್ವರೀಷು**- ಋಕ್ಕುಗಳಲ್ಲಿಯ **ಗಾಯತ್ರಂ**- ಗಾಯತ್ರ ಎಂಬ ಸಾಮವನ್ನು **ಗಾಯತಿ**- ಹಾಡುತ್ತಾನೆ. **ತ್ವಃ**-ಇನ್ನೊಬ್ಬ ಬ್ರಹ್ಮನು **ಜಾತವಿದ್ಯಾಂ ವದತಿ- (ಬ್ರಹ್ಮೈಕೋ ಜಾತೇ ಜಾತೇ ವಿದ್ಯಾಂ ವದತಿ- *ನಿರುಕ್ತಮ್ ೧-೩-೮)*** ಪೌರುಷೇಯವಿದ್ಯೆಯನ್ನು ಪಠಿಸುತ್ತಾನೆ. (ಪುರಾಣವಿದ್ಯೆಯನ್ನು *-ಶ್ರೀನಿವಾಸತೀರ್ಥೀಯ ಟಿಪ್ಪಣೀ)* **ತ್ವಃ ಬ್ರಹ್ಮಾ**- ಒಬ್ಬ ಬ್ರಹ್ಮನು **ಯಜ್ಞಸ್ಯ** – ಯಜ್ಞನಾಮಕನಾದ ಪರಮಾತ್ಮನ ( **ಯಜ್ಞೋ ವೈ ವಿಷ್ಣುಃ** ಎಂಬ ಶ್ರುತಿಗನುಗುಣವಾಗಿ ಯಜ್ಞನೆಂದರೆ ವಿಷ್ಣುವು ಎಂದರ್ಥ- ಶ್ರೀ ರಾಯರ *ಭಾವದೀಪ,* ಸ್ವಾಯಂಭುವಃ ಸ್ವ ದೌಹಿತ್ರಂ ವಿಷ್ಣುಂ ಯಜ್ಞಭಿದಂ ಮನುಮ್- ಶ್ರೀ ವ್ಯಾಸತತ್ವಜ್ಞರ *ಲಘುಪ್ರಭಾ*) **ಮಾತ್ರಾಂ ಉ**- ಅಂಶವನ್ನೇ **ವಿಮಿಮೀತೇ**- ಧ್ಯಾನ ಮಾಡುತ್ತಾನೆ. (ಮುಕ್ತನಾದ ಬ್ರಹ್ಮನ ಧ್ಯಾನವೆಂದರೆ ಅಪರೋಕ್ಷಜ್ಞಾನ- ಸಂತಾನವೆಂಬ ರಹಸ್ಯವನ್ನು ತಿಳಿಯಬೇಕೆಂದು ಶ್ರೀ ವ್ಯಾಸತತ್ವಜ್ಞರು ಹೇಳಿದ್ದಾರೆ.)

**ವಿಶೇಷ ವಿವರಣೆ :- ಉಪನಿಷತ್ತಿನ ಈ ವಾಕ್ಯವು ಮುಕ್ತರಲ್ಲಿ ಪರಸ್ಪರ ಭೇದವಿದೆ ಹಾಗೂ ಮುಕ್ತರು ಹಾಗೂ ಪರಮಾತ್ಮನಲ್ಲಿ ಭೇದವಿದೆ ಎಂದು ಸ್ಪಷ್ಟವಾಗಿ ತಿಳಿಸುತ್ತಿದೆ.** ಮುಕ್ತರಾದ ಬ್ರಹ್ಮರು ಪರಮಾತ್ಮನ ಸನ್ನಿಧಾನದಲ್ಲಿ ಪರಸ್ಪರ ಭಿನ್ನರಾಗಿಯೇ ಇರುವರು ಮತ್ತು ಆಗಮಗಳಿಂದ ವಿವಿಧರೀತಿಯಿಂದ ಪರಮಾತ್ಮನನ್ನು ಸ್ತುತಿಸುತ್ತಿರುವರು ಸ್ತುತಿಸಲ್ಪಡುವವನು ಹಾಗೂ ಸ್ತೋತ್ರ ಮಾಡುವವನು ಬೇರೆ ಬೇರೆಯಾಗಿರಲೇಬೇಕು. ಆಗಲೇ ಸ್ತೋತ್ರ ಮಾಡುವದು ಕೂಡುವದು.

Rarest Archiver

**ತ್ವಃ– ಭಿನ್ನಾರ್ಥಕಾ ಅನ್ಯತರ ಏಕಸ್ತ್ವೋऽನ್ಯೇತರಾವಪಿ । *ಅಮರಕೋಷ ३–೮೨.*** ಬಹಳ ವ್ಯಕ್ತಿಗಳಲ್ಲಿ ಒಬ್ಬನು ಎಂದು ಹೇಳಬೇಕಾದಾಗ ಪ್ರಯೋಗಿಸಲ್ಪಡುವದು. **ಶಕ್ವರೀ– ಶಕ್ವರೀ ಛಂದಸಿ ಜ್ಞೇಯಾ *–ಶಾಶ್ವತ ಕೋಶಃ ೨೬೬.* ಶಕ್ವರ್ಯ ಋಚಃ ಶಕ್ನೋತೇಃ । ತದ್ಯದಾಭಿರ್ವೃತ್ರಂ ಅಶಕದ್ಧಂತುಂ ತಚ್ಛಕ್ವರೀಣಾಂ ಶಕ್ವರೀತ್ವಮಿತಿ ವಿಜ್ಞಾಯತೇ – *ನಿರುಕ್ತಮ್ ೧–೩–೮.*** ಇಂದ್ರನು ಋಕ್ಕುಗಳ ಸಹಾಯದಿಂದಲೇ ವೃತ್ರನನ್ನು ಸಂಹರಿಸಲು ಶಕ್ತನಾದನಾದ ಕಾರಣ ಆ ಋಕ್ಕುಗಳಿಗೆ ಶಕ್ವರೀ ಎಂದೆನ್ನುವರು. **ಉ– ಉ ಇತ್ಯವಧಾರಣಾರ್ಥಃ ಮಂತ್ರೇ ।(ನಿರುಕ್ತವ್ಯಾಖ್ಯಾ)**

**ಈ ಮಂತ್ರದಲ್ಲಿ ಮುಕ್ತಾವಸ್ಥೆಯಲ್ಲಿಯ ವಿಷಯವು ಪ್ರತಿಪಾದಿತವಾಗಿದೆ.** ಬಹಳಷ್ಟು ಬ್ರಹ್ಮರ ಉಲ್ಲೇಖವಿರುವದರಿಂದ ಅತೀತವಾದ ಅನೇಕಕಲ್ಪಗಳಲ್ಲಿ ಮುಕ್ತರಾದ ಅನೇಕ ಬ್ರಹ್ಮರ ಬಗ್ಗೆ ಇಲ್ಲಿ ಹೇಳಿದೆಯೇ ಹೊರತು ಯಜ್ಞದಲ್ಲಿಯ ಬ್ರಾಹ್ಮಣರ –ಋತ್ವಿಕ್ಕುಗಳ– ಬಗೆಗೆ ಹೇಳಿಲ್ಲವೆಂಬುದನ್ನು ಅನೇಕ ಕಾರಣಗಳನ್ನು ಕೊಟ್ಟು ಶ್ರೀಮತ್ ಟೀಕಾಕೃತ್ಪಾದರು ತಿಳಿಸಿದ್ದಾರೆ. ಈ ಕಾರಣಗಳು ಇಂತಿವೆ;

i. ಜ್ಯೋತಿಷ್ಟೋಮ ಯಜ್ಞದಲ್ಲಿ ಬ್ರಹ್ಮಸ್ಥಾನ, ಅಧ್ವರ್ಯುಸ್ಥಾನ, ಹೋತೃ–ಸ್ಥಾನ ಹಾಗೂ ಉದ್ಗಾತೃಸ್ಥಾನ ಹೀಗೆ ನಾಲ್ಕು ಸ್ಥಾನಗಳಲ್ಲಿ ನಾಲ್ಕುಜನ ಪ್ರಧಾನ ಋತ್ವಿಜರು ಇರುವರು. ಅವರಿಗೆ ಪ್ರತಿಯೊಬ್ಬರಿಗೂ ಮೂರುಜನ ಅನುಚರರು ಇದ್ದು ಅವರೆಲ್ಲರಿಗೂ ಬ್ರಾಹ್ಮಣರೆಂದೇ ಹೇಳಬಹುದು ಎಂದು ಹೇಳಿದರೆ ಋಕ್ಕುಗಳ ಘೋಷಣೆಯನ್ನು–ಉಚ್ಚಾರಣೆಯನ್ನು ಯಜ್ಞದಲ್ಲಿಯ ಬ್ರಹ್ಮಸ್ಥಾನದಲ್ಲಿರುವ ಬ್ರಾಹ್ಮಣನ ಅನುಚರರೇ ಆಗಲಿ ಅಥವಾ ಉಳಿದ ಬ್ರಾಹ್ಮಣರೇ ಆಗಲಿ ಮಾಡುವರೆಂಬುದಕ್ಕೆ ಪ್ರಸಿದ್ಧಿ ಇಲ್ಲ.

ii. ಒಂದು ಯಜ್ಞದಲ್ಲಿ ಬ್ರಹ್ಮಸ್ಥಾನದಲ್ಲಿ ಅನೇಕರು ಇರುವರೆಂಬುದು ಕೂಡುವದಿಲ್ಲ. ಒಬ್ಬ ಬ್ರಹ್ಮನು, ಒಬ್ಬ ಬ್ರಹ್ಮನು ಎಂದು ಪ್ರತ್ಯೇಕ ಹೇಳಿದುದರಿಂದ ಉದಾಹೃತ ಶ್ರುತಿಯು ಉಲ್ಲೇಖಿಸುವ ಸಂದರ್ಭದಲ್ಲಿ ಅನೇಕ ಬ್ರಹ್ಮರು ಇರುವರೆಂಬುದು ಸ್ಪಷ್ಟವಿದೆ. ಮತ್ತು

iii. ಯಜ್ಞದಲ್ಲಿ ಜಾತವಿದ್ಯೆಯ ಉಪಯೋಗವಿರುವದಿಲ್ಲ. ಆದರೆ ಇಲ್ಲಿ ಒಬ್ಬ ಬ್ರಹ್ಮನು ಜಾತವಿದ್ಯೆಯನ್ನು ಉಚ್ಚರಿಸುತ್ತಿದ್ದಾನೆಂದು ಹೇಳಿದೆ.

ಆದಕಾರಣ ಈ ವಾಕ್ಯವು ಯಜ್ಞದಲ್ಲಿ ನಡೆದ ಘಟನೆಗಳನ್ನು ಉಲ್ಲೇಖಿಸುವ ವಾಕ್ಯವಲ್ಲ.

Rarest Archiver

ಶ್ರುತಿಷಟ್ಪದಿಯಲ್ಲಿ ಈ ವಾಕ್ಯದ ಅಭಿಪ್ರಾಯವು ಹೀಗೆ :-

*ಒಬ್ಬ ಮುಕ್ತಬ್ರಹ್ಮ ಪುಷ್ಪನು*
*ಉಬ್ಬುದನಿಯಲಿ ಪಠಿಪ ವೇದವ*
*ಒಬ್ಬ ಗಾಯತ್ರಿಯನು ಪಾಡುವ ಛಂದಕನುಗುಣವೆ.*
*ಒಬ್ಬ ನುಡಿವನು ಜಾತವಿದ್ಯೆಯ*
*ಒಬ್ಬ ತಾ ಧೇನಿಪನು ವಿಷ್ಣುವಿ-*
*ನಬ್ಬರದ ವಿವಿಧಾಂಶ ರೂಪವ ತಬ್ಬು ನಿಬ್ಬಾಗಿ. ॥*

**೬೪. ಪರಂಜ್ಯೋತಿರುಪಸಂಪದ್ಯ ಸ್ವೇನ ರೂಪೇಣಾಭಿನಿಷ್ಪದ್ಯತೇ । ಸ ತತ್ರ ಪರ್ಯೇತಿ ಜಕ್ಷನ್ ಕ್ರೀಡನ್ ರಮಮಾಣಃ ಸ್ತ್ರೀಭಿರ್ವಾ ಯಾನೈರ್ವಾ ಜ್ಞಾತಿಭಿರ್ವಾಽಜ್ಞಾತಿಭಿರ್ವಾ ।-** *ಛಾಂದೋಗ್ಯೋಪನಿಷತ್ ಅ. ೮ ಖಂ. ೪ . ೩*

ಉಪನಿಷತ್ತಿನ ಈ ಭಾಗದ ಸಂಪೂರ್ಣ ಪಾಠವು ಹೀಗಿದೆ;

**ಏವಮೇವೈಷ ಸಂಪ್ರಸಾದಃ ಅಸ್ಮಾತ್ ಶರೀರಾತ್ ಸಮುತ್ಥಾಯ ಪರಂ ಜ್ಯೋತಿಃ ಉಪಸಂಪದ್ಯ ಸ್ವೇನ ರೂಪೇಣ ಅಭಿನಿಷ್ಪದ್ಯತೆ ಸ ಉತ್ತಮಃ ಪುರುಷಃ ॥ ೮-೪-೩-೨. ಸ ತತ್ರ ಪರ್ಯೇತಿ ಜಕ್ಷನ್ ಕ್ರೀಡನ್ ರಮಮಾಣಃ ಸ್ತ್ರೀಭಿರ್ವಾ ಯಾನೈ-ರ್ವಾ ಜ್ಞಾತಿಭಿರ್ವಾಽಜ್ಞಾತಿಭಿರ್ವಾ ನ ಉಪಜನಂ ಸ್ಮರನ್ ಇದಂ ಶರೀರಂ .... ೮-೪-೩-೩**

**ಅರ್ಥ:-** ಜ್ಞಾನಿಯಾದ ಜೀವನು ಪರಮಾತ್ಮನ ಅನುಗ್ರಹವನ್ನು ಪಡೆದು-ಕೊಂಡವನಾಗಿ ಈ ಶರೀರವನ್ನು ತೊರೆದು ಪರಮಾತ್ಮನ ಸಮೀಪಕ್ಕೆ ಹೋಗಿ ತನ್ನ ಸ್ವರೂಪಾವಿರ್ಭಾವವನ್ನು ಹೊಂದುತ್ತಾನೆ. ಅವನು ಯಾವ ಪರಮಾತ್ಮನ ಸಮೀಪಕ್ಕೆ ಹೋಗುವನೋ ಅವನೇ ಪುರುಷೋತ್ತಮನು. ಆ ಮುಕ್ತನಾದ ಜೀವನು ಭಗವಲ್ಲೋಕದಲ್ಲಿ ಎಲ್ಲೆಡೆಗೆ ಸಂಚರಿಸುತ್ತಾನೆ. ಅವನು ಭಕ್ಷಿಸುತ್ತ, ಕ್ರೀಡೆ ಮಾಡುತ್ತ ಹಾಗೂ ಸ್ತ್ರೀಯರೊಡನೆ ಮತ್ತು ವಾಹನಗಳಲ್ಲಿ ಆನಂದಿಸುತ್ತ ತನ್ನೊಡನೆ ಮುಕ್ತರಾದ ಜೀವರು ಹಾಗೂ ತನಗಿಂತ ಮೊದಲು ಮುಕ್ತರಾದ ಜೀವರುಗಳೊಡನೆ ಪರ್ಯಟನ ಮಾಡುತ್ತಾನೆ. ಅವನು ತನ್ನ ಬಳಿಯಲ್ಲಿದ್ದವರನ್ನೂ ಮರೆತು ಹಾಗೂ ತನ್ನನ್ನೂ ಮೈಮರೆತು ಆನಂದಾತಿಶಯದಿಂದ ಮೆರೆಯುತ್ತಾನೆ.

**ವಿಶೇಷ:-** ಇಲ್ಲಿ ಜೀವನು ಪರಮಾತ್ಮನ ಸಮೀಪಕ್ಕೆ ಹೋಗುವನೆಂದು ಹೇಳಿ-ದ್ದರಿಂದ ಪರಮಾತ್ಮನಿಗೂ ಜೀವನಿಗೂ ಭೇದವನ್ನು ಹೇಳಿದಂತಾಯಿತು. ಪರ-ಮಾತ್ಮನು ಪುರುಷೋತ್ತಮನು ಎಂದು ಹೇಳಿದ್ದರಿಂದ ಜೀವನು ಅವನಿಗಿಂತ ಕಡಿಮೆಯವನು ಎಂದು ಸ್ಪಷ್ಟವಾಗುವದು. ಜೀವನು ತನ್ನ ಸ್ವರೂಪಾವಿರ್ಭಾವ-

Rarest Archiver

ವನ್ನು ಪಡೆಯುವನೆಂದು ಹೇಳಿರುವದರಿಂದ ಅವನು ಸಂಸಾರಿಯಾಗಿದ್ದಾಗ ಇದ್ದುದು ಲಿಂಗದೇಹ ಅದನ್ನು ತೊರೆಯಲು ಪರಮಾತ್ಮನ ಅನುಗ್ರಹದಿಂದ ಸಾಧ್ಯ. ಹಾಗೂ ಅವನ ಪ್ರಸಾದದಿಂದಲೇ ಮುಕ್ತಿಯಲ್ಲಿ ತನಗೆ ಯೋಗ್ಯವಾದ ಆನಂದಾತಿಶಯವನ್ನು ಪಡೆಯುವನು, ಉಳಿದವರಿಗೆ ಆಗುವ ಆನಂದಾದಿಗಳ ಬಗ್ಗೆ ಅವನ ಗಮನವಿರುವದಿಲ್ಲ ಅಂದರೆ ಅವನಿಗೆ ಮಾತ್ಸರ್ಯಾದಿಗಳು ಮುಕ್ತಿಯಲ್ಲಿ ಇರುವದಿಲ್ಲ ಇತ್ಯಾದಿ ವಿಷಯಗಳನ್ನು ಇಲ್ಲಿ ಸೂಚಿಸಿದ್ದಾರೆ. **ಮುಕ್ತಿರ್ಹಿತ್ವಾ ಅನ್ಯಥಾರೂಪಂ ಸ್ವರೂಪೇಣ ವ್ಯವಸ್ಥಿತಿಃ** (*ಅನುವ್ಯಾಖ್ಯಾನ*) ಎಂದು ಶ್ರೀಮದಾಚಾರ್ಯರು ಮುಕ್ತಿಯ ಲಕ್ಷಣವನ್ನು ಹೇಳಿದ್ದಾರೆ. **ಓಂ ಉತ್ತರಾಚ್ಚೇದಾವಿರ್ಭೂತಸ್ವರೂಪಸ್ತು ಓಂ** ಮತ್ತು **ಓಂ ವಿಹಾರೋಪದೇಶಾದಿತಿ ಚ ಓಂ** ಎಂಬ ಸೂತ್ರಗಳಲ್ಲಿ ವೇದವ್ಯಾಸರು ಉಪನಿಷತ್ತಿನ ಈ ವಾಕ್ಯಗಳನ್ನೇ ವಿಷಯವಾಕ್ಯಗಳನ್ನಾಗಿಟ್ಟುಕೊಂಡು ಮುಕ್ತಿಗೆ ಸಂಬಂಧಪಟ್ಟ ವಿಷಯಗಳನ್ನು ಹೇಳಿದ್ದಾರೆ.

**ಶ್ರುತಿಷಟ್ಪದಿಯಲ್ಲಿ** ಇದರ ಭಾವವು ಹೀಗೆ :-

*ಹರಿಯ ಕೃಪೆಯಿಂ ಲಿಂಗದೇಹವ*
*ತೊರೆದು ತನ್ನಯ ದೇಹ ಪಡೆಯುತ*
*ಹರಿಯ ಸನ್ನಿಧಿಗೈದು ಜೀವನು ತನಗೆ ಯೋಗ್ಯವಿಹ*
*ಪರಮಮುದವನು ಪಡೆವ ರಮಿಸುತ*
*ವಿರಮವಿಲ್ಲದೆ ಕ್ರೀಡೆ ಮಾಡುತ*
*ಪರಮ ಯಾನದಿ ವಿವಿಧ ಮುಕುತ ಸ್ತ್ರೀಯರೊಡಗೂಡಿ.* ॥ ॥

೬೫. **ಯತ್ರ ತ್ವಸ್ಯ ಸರ್ವಮಾತ್ಮೈವಾಭೂತ್ ತತ್ ಕೇನ ಕಂ ಪಶ್ಯೇತ್ ತತ್ ಕೇನ ಕಂ ಜಿಘ್ರೇತ್ ತತ್ ಕೇನ ಕಂ ವಿಜಾನೀಯಾತ್ ಯೇನ ಇದಂ ಸರ್ವಂ ವಿಜಾನಾತಿ ತಂ ಚ ಕೇನ ವಿಜಾನೀಯಾತ್ ವಿಜ್ಞಾತಾರಂ ಅರೆ ಕೇನ ವಿಜಾನೀಯಾತ್ ॥** – *ಬೃಹದಾರಣ್ಯಕೋಪನಿಷತ್ ೪–೫–೧೫*

ಶ್ರೀ ರಾಯರ *ಖಂಡಾರ್ಥದಲ್ಲಿ* ಈ ವಾಕ್ಯವು ಬೇರೆ ರೀತಿಯಿಂದ ಪ್ರಕಾಶಿತವಿದ್ದು ೬ನೆಯ ಅಧ್ಯಾಯದ ೫ನೆಯ ಮೈತ್ರೇಯೀ ಬ್ರಾಹ್ಮಣದಲ್ಲಿಯ ೧೪ನೆಯ ವಾಕ್ಯಖಂಡವೆಂದು ತೋರಿಸಲ್ಪಟ್ಟಿದೆ. **ಯತ್ರ ತ್ವಸ್ಯ** ಎಂಬುದು ಇಲ್ಲಿಯೂ ಇದೆ. ಸಂಪೂರ್ಣ ಪಾಠವು ಇಂತಿದೆ; **ಯತ್ರ ಹಿ ದ್ವೈತಮಿವ ಭವತಿ ತದಿತರ ಇತರಂ ಪಶ್ಯತಿ ತದಿತರ ಇತರಂ ಜಿಘ್ರತಿ ತದಿತರ ಇತರಂ ರಸಯತೇ ತದಿತರ ಇತರಂ ಅಭಿವದತಿ ತದಿತರ ಇತರಂ ಶೃಣೋತಿ ತದಿತರ ಇತರಂ ಮನುತೇ ತದಿತರ ಇತರಂ ಸ್ಪೃಶತಿ ತದಿತರ ಇತರಂ ವಿಜಾನಾತಿ ಯತ್ರ ತ್ವಸ್ಯ ಸರ್ವಮಾತ್ಮೈವಾಭೂತ್ ತತ್ ಕೇನ ಕಂ ಪಶ್ಯೇತ್ ತತ್ಕೇನ ಕಂ ಜಿಘ್ರೇತ್ ತತ್ಕೇನ ಕಂ ರಸಯೇತ್ ತತ್ ಕೇನ ಕಂ ಅಭಿವದೇತ್ ತತ್ ಕೇನ ಕಂ ಶೃಣುಯಾತ್ ತತ್ ಕೇನ ಕಂ ಮನ್ವೀತ ತತ್ ಕೇನ ಕಂ ಸ್ಪೃಶೇತ್ ತತ್ ಕೇನ ಕಂ ವಿಜಾನೀಯಾತ್ ಯೇನ ಇದಂ**

Rarest Archiver

**ಸರ್ವಂ ವಿಜಾನಾತಿ ತಂ ಕೇನ ವಿಜಾನೀಯಾತ್ ಸ ಏಷ ನೇತಿ ನೇತ್ಯಾತ್ಮಾ ಅಗೃಹ್ಯೋ ನ ಹಿ ಗೃಹ್ಯತೇ ಅಶೀರ್ಯೋ ನ ಹಿ ಶೀರ್ಯತೇ ಅಸಂಗೋ ನ ಹಿ ಸಜ್ಯತೇ ಅಸಿತೋ ನ ವ್ಯಥತೇ ನ ರಿಷ್ಯತಿ ವಿಜ್ಞಾತಾರಂ ಅರೇ ಕೇನ ವಿಜಾನೀಯಾತ್ ಇತ್ಯುಕ್ತಾ ಅನುಶಾಸನಾಸಿ ಮೈತ್ರೇಯಿ ಏತಾವತ್ ಅರೇ ಖಲು ಅಮೃತತ್ವಮ್ ಇತಿ ಹ ಉಕ್ತ್ವಾ ಯಾಜ್ಞವಲ್ಕ್ಯೋ ವಿಜಹಾರ ॥ ೬-೫-೧೪. ಪಂಚಮಂ ಮೈತ್ರೇಯೀಬ್ರಾಹ್ಮಣಮ್.**

ಈ ವಾಕ್ಯವು ಬೃಹದಾರಣ್ಯಕೋಪನಿಷತ್ತಿನ ಮೈತ್ರೇಯೀ ಬ್ರಾಹ್ಮಣವೆಂಬ ಚತುರ್ಥ ಬ್ರಾಹ್ಮಣದಲ್ಲಿ ಬರುವದೆಂದು *ಸರ್ವಮೂಲಮ್* ಎಂಬ ಅಖಿಲಭಾರತಮಾಧ್ವಮಹಾಮಂಡಲದ ೧೯೬೯ರ ಪ್ರಕಾಶನದಲ್ಲಿ ಮುದ್ರಿತವಾಗಿದೆ. ಅಲ್ಲಿ **ಯತ್ರ ವಾ ಅಸ್ಯ ತತ್ ಕೇನ ಕಂ ಜಿಘ್ರೇತ್ ತತ್ ಕೇನ ಕಂ ಪಶ್ಯೇತ್ ತತ್ ಕೇನ ಕಂ ಶೃಣುಯಾತ್ ತತ್ ಕೇನ ಕಂ ಅಭಿವದೇತ್ ತತ್ ಕೇನ ಕಂ ಮನ್ವೀತ ತತ್ ಕೇನ ಕಂ ವಿಜಾನೀಯಾತ್ ಯೇನೇದಂ ಸರ್ವಂ ವಿಜಾ-ನಾತಿ ತಂ ಕೇನ ವಿಜಾನೀಯಾತ್ ವಿಜ್ಞಾತಾರಂ ಅರೇ ಕೇನ ವಿಜಾನೀಯಾತ್ ಇತಿ ।** ಎಂದು ಪಾಠಾಂತರವಿದೆ. *ಶ್ರೀ ಸರ್ವಮೂಲಗ್ರಂಥಾಃ* ಎಂಬ ಇನ್ನೊಂದು ಪ್ರಾಚೀನ ಪ್ರಕಾಶನದಲ್ಲಿಯೂ ಕೂಡ ಇದೇ ಪಾಠವಿದೆ. ಕನ್ನಡದಲ್ಲಿ ಪ್ರಕಾಶಿತವಾದ *ಸರ್ವಮೂಲಗ್ರಂಥಗಳು ಉಪನಿಷತ್ಪ್ರಸ್ಥಾನ, ಸಂಪುಟ ೪* ರಲ್ಲಿ ಈ ವಾಕ್ಯವು ೫ನೆಯ ಮೈತ್ರೇಯೀ ಬ್ರಾಹ್ಮಣದಲ್ಲಿಯದೆಂದು ತೋರಿಸಲ್ಪಟ್ಟರೂ ಅಲ್ಲಿ ಇನ್ನೂ ಬೇರೆ ಪಾಠವೇ ಇದೆ. *೧೦೮ ಉಪನಿಷದೇ* ಎಂಬ ಸಂಸ್ಕೃತಸಂಸ್ಥಾನ, ಬರೇಲಿ ೧೯೬೭ ರ ಪ್ರಕಾಶನದಲ್ಲಿ ಈ ಉಪನಿಷತ್ತು ಪ್ರಕಾಶಿತವಿಲ್ಲ. ಅಂತೂ ಉಪನಿಷತ್ತುಗಳ ಹೆಸರುಗಳ ಬಗ್ಗೆ ಹಾಗೂ ಪಾಠಗಳ ಬಗ್ಗೆ ಹೆಚ್ಚು ಸಂಶೋಧನೆಯಾಗಬೇಕಾದುದು ಅವಶ್ಯವಿದೆಯೆಂದು ತೋರುವದು.

**ಈ ವಾಕ್ಯಕ್ಕೆ ಉಪನಿಷತ್ತಿನಲ್ಲಿ ಹಿನ್ನೆಲೆ:-** ಇದು ಯಾಜ್ಞವಲ್ಕ್ಯರು ಹಾಗೂ ಅವರ ಪತ್ನಿಯಾದ ಮೈತ್ರೇಯಿ ಇವರ ನಡುವಿನ ಸಂವಾದದಲ್ಲಿಯ ಭಾಗವು. ಯಾಜ್ಞವಲ್ಕ್ಯರಿಗೆ ಬ್ರಹ್ಮವಾದಿನಿಯಾದ ಮೈತ್ರೇಯೀ ಎಂಬ ಹಾಗೂ ಸಾಮಾನ್ಯ ಸ್ತ್ರೀಸ್ವಭಾವದ ಕಾತ್ಯಾಯನೀ ಎಂಬ ಇಬ್ಬರು ಪತ್ನಿಯರು. ಒಮ್ಮೆ ಯಾಜ್ಞವಲ್ಕ್ಯರು ಮೈತ್ರೇಯಿಗೆ ತಾವು ಸನ್ನ್ಯಾಸಾಶ್ರಮವನ್ನು ತೆಗೆದುಕೊಳ್ಳುವದಾಗಿ ತಿಳಿಸಿದಾಗ ಅವಳು ತನಗೆ ಮೋಕ್ಷವು ಲಭಿಸುವದೆಂತು ಎಂದು ಸಾಧನದ ಬಗ್ಗೆ ಪ್ರಶ್ನೆ ಮಾಡಿದಳು. ಅದಕ್ಕೆ ಯಾಜ್ಞವಲ್ಕ್ಯರು ಮತ್ತಾವ ಸಂಪತ್ತಿನಿಂದಲೂ ಮೋಕ್ಷಸುಖ ಲಭಿಸದು. **ಆತ್ಮಾ ವಾ ಅರೇ ದ್ರಷ್ಟವ್ಯಃ ಶ್ರೋತವ್ಯಃ ಮಂತವ್ಯಃ ನಿದಿಧ್ಯಾಸಿತವ್ಯಃ** – ಪರಮಾತ್ಮನ ಜ್ಞಾನವನ್ನು ಮಾಡಿಕೊಂಡರೆ ಮಾತ್ರ ಮೋಕ್ಷ ಲಭಿಸುವದು. ಎಂದು ಹೇಳಿ ಬ್ರಹ್ಮಸ್ವರೂಪವನ್ನು ವಿವರಿಸಿದರು. ಅವನೇ ಸಮಸ್ತ ಪ್ರಪಂಚದ ಸೃಷ್ಟಿಕರ್ತನು, ಆಶ್ರಯನು; ಜೀವನೂ ಕೂಡ ಜ್ಞಾನಸ್ವರೂಪನು. ಅವನ ಸ್ವರೂಪಕ್ಕೆ ಉತ್ಪತ್ತಿವಿನಾಶಗಳಿಲ್ಲ. ಆದರೆ ಅವನು ಈಶ್ವರಾಧೀನನು. ಅವನಿಗೆ ಪಾಂಚಭೌತಿಕ ದೇಹದ ಸಂಬಂಧವಾಗುವದೇ ಸೃಷ್ಟಿಯು. ಅದರ ಸಂಬಂಧ ವಿಯೋಗವೆಂದರೇನೇ ಸಾವು. ಈ ಪಂಚಭೌತಿಕದೇಹದ ವಿಯೋಗ-ವಾಯಿತೆಂದರೆ ಅವನಿಗೆ ಪ್ರಾಕೃತಜ್ಞಾನವಿಲ್ಲದಂತಾಗುವದು. **ನ ಪ್ರೇತ್ಯ ಸಂಜ್ಞಾ ಅಸ್ತೀತ್ಯರೇ ಬ್ರವೀಮಿ** ಎಂದು ಮೈತ್ರೇಯಿಗೆ ಉಪದೇಶ ಮಾಡಿದರು. ಆಗ ಮೈತ್ರೇಯಿಯು ಜೀವನಿಗೆ

Rarest Archiver

ಮೋಕ್ಷ ಸಿಕ್ಕ ಬಳಿಕ ಜೀವಬ್ರಹ್ಮರು ಒಂದೇ ಆಗುವರೋ ಹೇಗೆ ಹಾಗೂ ಮುಕ್ತನಾದ ಜೀವನಿಗೆ ಬ್ರಹ್ಮಜ್ಞಾನವಿರುವದೋ ಹೇಗೆ ಎಂದು ಪ್ರಶ್ನೆ ಮಾಡಿದಳು. **ಅತ್ರೈವ ಮಾ ಭಗವಾನ್ ಮೋಹಾಂತಮಾಪೀಪಿಪತ್ ನ ವಾ ಅಹಂ ವಿಜಾನಾತೀತಿ.** ಅಹೇಯನಾದ ಈ ಪರಮಾತ್ಮನನ್ನು ಮುಕ್ತನಾದ ಜೀವನು ತಿಳಿದುಕೊಳ್ಳುವದಿಲ್ಲವೆಂದು ತಾವು ಹೇಳಿದಿರೋ ಎಂದು ನನಗೆ ಮನದಲ್ಲಿ ಶಂಕೆ ಉಂಟಾಗಿದೆ, ಪೂಜ್ಯರು ಆ ರೀತಿ ಹೇಳುವದರಿಂದ ನನ್ನ ತಿಳುವಳಿಕೆಯಲ್ಲಿ ಕೊರತೆ ಉಂಟುಮಾಡಿದಂತಾಗಿದೆ. ಮುಕ್ತಿಯಲ್ಲಿ ಜ್ಞಾನವೇ ಇರುವದಿಲ್ಲವೆಂಬುದು ಹೇಗೆ ಕೂಡುವದು? ಪೂಜ್ಯರು ಬಿಡಿಸಿ ಹೇಳಬೇಕು, ಎಂದು ಪ್ರಾರ್ಥಿಸಿಕೊಂಡಾಗ ಯಾಜ್ಞವಲ್ಕ್ಯರು – **ನ ವಾ ಅರೇ ಅಹಂ ಮೋಹಂ ಬ್ರವೀಮಿ ಅವಿನಾಶೀ ವಾ ಅರೇ ಅಯಂ ಆತ್ಮಾ ಅನುಚ್ಛಿತ್ತಿಧರ್ಮಾ ॥** ಮೈತ್ರೇಯಿ, ನಾನು ನಿನಗೆ ಮೋಹಕವಾದ ಮಾತನ್ನು ಹೇಳಿಲ್ಲ. ಈ ಜೀವಾತ್ಮನು ಮುಕ್ತನಾದ ಮೇಲೂ ಕೂಡ ಅವನ ಜ್ಞಾನಾದಿಧರ್ಮಗಳೂ ಹಾಗೂ ಅವನ ಸ್ವರೂಪವು ನಾಶವಾಗುವದಿಲ್ಲ. ನೋಡು, ಜೀವಬ್ರಹ್ಮರು ಒಂದೇ ಹೇಗೆ ಆಗುವರು. ಜೀವನಿಗೆ ಬ್ರಹ್ಮನ ಜ್ಞಾನವಿದ್ದೇ ಇರುವದು, ಅವರಿಬ್ಬರೂ ಒಂದೇ ಆದರೆ ಯಾರ ಜ್ಞಾನ ಯಾರಿಗೆ ಆಗಬೇಕು ಇತ್ಯಾದಿಯಾಗಿ ಆಕ್ಷೇಪಪೂರ್ವಕವಾಗಿ ಉತ್ತರ ಕೊಡುವರು. ಆ ಸಂದರ್ಭದಲ್ಲಿ ಬಂದ ಯಾಜ್ಞವಲ್ಕ್ಯರ ವಾಕ್ಯವಿದು. ಈ ವಾಕ್ಯದ ಸಂಪೂರ್ಣ ಪಾಠವನ್ನು ಶ್ರೀರಾಯರ ಖಂಡಾರ್ಥದಲ್ಲಿಯಂತೆ ಈ ಮೇಲೆ ತಿಳಿಸಲಾಗಿದೆ. ಈ ಪಾಠದ ಅರ್ಥವನ್ನು ಈ ಕೆಳಗೆ ಕೊಡಲಾಗಿದೆ.

**ಅರ್ಥ :–** ಎಲ್ಲಿ ಎರಡು ಚೇತನಗಳು ಇರುವವೋ ಅಲ್ಲಿ ಮಾತ್ರ ಒಬ್ಬನು ಇ–ನ್ನೊಬ್ಬನನ್ನು ನೋಡುವನು, ಒಬ್ಬನು ಇನ್ನೊಬ್ಬನನ್ನು ಆಘ್ರಾಣಿಸುವನು, ಒಬ್ಬನು ಇನ್ನೊಬ್ಬನ ರಸಾಸ್ವಾದನೆ ಮಾಡುತ್ತಾನೆ, ಒಬ್ಬನು ಇನ್ನೊಬ್ಬನನ್ನು ಕುರಿತು ಮಾತ–ನಾಡುತ್ತಾನೆ, ಒಬ್ಬನು ಇನ್ನೊಬ್ಬನ ಮಾತನ್ನು ಕೇಳುತ್ತಾನೆ, ಒಬ್ಬನು ಇನ್ನೊಬ್ಬನನ್ನು ತಿಳಿದುಕೊಳ್ಳುತ್ತಾನೆ, ಒಬ್ಬನು ಇನ್ನೊಬ್ಬನನ್ನು ಮುಟ್ಟುತ್ತಾನೆ, ಒಬ್ಬನು ಇನ್ನೊಬ್ಬನನ್ನು ವಿಶೇಷವಾಗಿ ತಿಳಿದುಕೊಳ್ಳುತ್ತಾನೆ. ಆದರೆ ಎಲ್ಲಿ ಎಲ್ಲವೂ ಒಂದೇ ಆಯಿತು ಎಂದು ಹೇಳುವರೋ, ಅಂದರೆ, ಮುಕ್ತಿಯಲ್ಲಿ ಜೀವಾತ್ಮ ಪರಮಾತ್ಮರು ಐಕ್ಯವನ್ನು ಹೊಂದುವರು, ಆತ್ಮಾತಿರಿಕ್ತವಾದ ಇಂದ್ರಿಯಾದಿ ಯಾವ ವಸ್ತುವೂ ಇಲ್ಲವೇ ಇಲ್ಲ ಎಂದು ಹೇಳುವರೋ ಅಲ್ಲಿ ಯಾವದರಿಂದ ಯಾರು ಯಾರನ್ನು ನೋಡುವನು? ಯಾವುದರಿಂದ ಯಾರು ಯಾರನ್ನು ಆಘ್ರಾಣಿಸುವನು? ಯಾವುದರಿಂದ ಯಾರು ಯಾರನ್ನು ಆಸ್ವಾದಿಸುವನು? ಯಾವುದರಿಂದ ಯಾರು ಯಾರನ್ನು ಕುರಿತು ಮಾತನಾಡುವನು? ಯಾವುದರಿಂದ ಯಾರು ಆಡಿದ ಮಾತನ್ನು ಯಾರು ಕೇಳುವನು? ಯಾವುದರಿಂದ ಯಾರು ಯಾರನ್ನು ತಿಳಿದುಕೊಳ್ಳುವನು? ಯಾವುದರಿಂದ ಯಾರು ಯಾರನ್ನು ಸ್ಪರ್ಶಿಸಬಹುದು? ಯಾವುದರಿಂದ ಯಾರು ಯಾರನ್ನು ವಿಶೇಷವಾಗಿ ತಿಳಿದುಕೊಳ್ಳುವನು? ಯಾರ (ಅಂದರೆ ಯಾವ ಪರಮಾತ್ಮನ) ಕಾರಣದಿಂದ ಜೀವನು

Rarest Archiver

ಈ ಎಲ್ಲವನ್ನೂ ವಿಶೇಷವಾಗಿ ತಿಳಿದುಕೊಳ್ಳುತ್ತಾನೋ ಅಂಥ ಪರಮಾತ್ಮನನ್ನು ಜೀವನು ಯಾವುದರಿಂದ ತಿಳಿದುಕೊಳ್ಳುವನು? (ಅಂದರೆ ಮುಕ್ತಿಯಲ್ಲಿ ಜೀವಪರಮಾತ್ಮರಲ್ಲಿ ಭೇದವೇ ಇರದಿದ್ದರೆ ಜೀವನಿಗೆ ಪರಮಾತ್ಮನ ಜ್ಞಾನವಾದರೂ ಹೇಗೆ ಆಗುವದು? ಆದರೆ ಮುಕ್ತಜೀವನು ಪರಮಾತ್ಮನ ಬಗ್ಗೆ ಜ್ಞಾನವುಳ್ಳವನಾಗಿದ್ದಾನೆ, ಅಂದ ಮೇಲೆ ಅವರಲ್ಲಿ ಭೇದವಿರಲೇಬೇಕು). ಆ ಪರಮಾತ್ಮನು ಲಕ್ಷ್ಮೀದೇವಿಯಂತೆಯೂ ಅಲ್ಲ, ಬ್ರಹ್ಮಾದಿ ಉಳಿದ ಚೇತನರಂತೆಯೂ ಅಲ್ಲ. (ಅವನು ಪರತಂತ್ರನಲ್ಲ), ಅವನನ್ನು ಸಾಕಲ್ಯೇನ ತಿಳಿದುಕೊಳ್ಳುವದಶಕ್ಯ. ಯಾಕೆಂದರೆ ಹಾಗೆ ತಿಳಿದುಕೊಳ್ಳಬಹುದೆಂಬ ಬಗ್ಗೆ ಪ್ರಮಾಣವಿಲ್ಲ. ಅವನು ಯಾವ ಹಿಂಸೆಗೂ ಒಳಗಾಗುವದಿಲ್ಲ, ಯಾಕೆಂದರೆ ಅವನು ಹಿಂಸೆಗೆ ಒಳಗಾಗುವನೆಂಬ ಬಗ್ಗೆ ಪ್ರಮಾಣವಿಲ್ಲ. ಅವನು ಯಾವ ದೋಷಗಳ ಲೇಪವಿಲ್ಲದವನು, ಯಾಕೆಂದರೆ ಅವನು ದೋಷದ ಲೇಪವುಳ್ಳವನೆಂಬ ಬಗ್ಗೆ ಪ್ರಮಾಣವಿಲ್ಲ. ಅವನು ನಾಶವಿಲ್ಲದವನು, ಏಕೆಂದರೆ ಅವನು ದುಃಖಪಡುವದಿಲ್ಲ ಮತ್ತು ಹಿಂಗುವದಿಲ್ಲ; ಜೀವ ಪರಮಾತ್ಮರಲ್ಲಿ ಐಕ್ಯವೆಂದು ಹೇಳಿದರೆ ಮುಕ್ತ-ನಾದ ಜೀವನು ತನ್ನನ್ನು ( ಮತ್ತು ತನಗೆ ಜ್ಞಾನವನ್ನು ಕೊಡುವ ಇಂಥ ಪರ-ಮಾತ್ಮನನ್ನು) ಯಾವುದರಿಂದ ತಿಳಿದುಕೊಳ್ಳುವನು? ಮೈತ್ರೇಯಿ, ನೀನು ನನ್ನಿಂದ ಹೀಗೆ ಉಪದೇಶಿಸಲ್ಪಟ್ಟಿರುವಿ. ಜೀವನಿಗೆ ತನ್ನ ಅಂತರ್ಯಾಮಿಯಾದ ಪರಮಾತ್ಮನ ಜ್ಞಾನ, ತನ್ನ ಸ್ವರೂಪಜ್ಞಾನ, ಹಾಗೂ ಪದಾರ್ಥಗಳ ಜ್ಞಾನ, ಇವು ಇರುವದೆಂಬುದೇ ಅಮೃತತ್ವವು ಅಥವಾ ಮೋಕ್ಷವು ಎಂದು ಹೇಳಿ ಯಾಜ್ಞವಲ್ಕ್ಯರು ಮೈತ್ರೇಯಿಗೆ ಮೋಕ್ಷಸ್ವರೂಪವನ್ನು ವಿವರಿಸಿ ಸಮಾಧಾನ ಹೊಂದಿದರು.

**ವಿವರಣೆ:-** ವಿವರಣೆಯಲ್ಲಿ ಈ ಕೆಳಗಿನ ಮೂರು ಪ್ರಧಾನವಾದ ಅಂಶಗಳನ್ನು ಗಮನಿಸಲಾಗಿದೆ. ಅ. ಈ ಶ್ರುತಿವಾಕ್ಯದ ಒಟ್ಟು ಭಾವ. ಬ. ಶ್ರೀಮದಾಚಾರ್ಯರು ಈ ವಾಕ್ಯಕ್ಕೆ ಅದ್ವೈತಿಗಳು ಹೇಳುವಅರ್ಥವನ್ನು ಹೇಗೆ ವಿಮರ್ಶಿಸಿದ್ದಾರೆ ಎಂಬ ವಿಷಯ. ಕ. ಈ ವಾಕ್ಯದಲ್ಲಿ ಬರುವ ಕೆಲ ಪದಗಳ ಬಗ್ಗೆ ವಿವೇಚನೆ.

**ಅ. ಶ್ರುತಿಯ ಒಟ್ಟು ಭಾವ :-** ಶ್ರೀ ರಾಯರು ಮೋಕ್ಷಸ್ವರೂಪದ ವಿಷಯಕ್ಕೆ ಈ ಭಾಗದ ಭಾವವನ್ನು **ಅವಿನಷ್ಟಸ್ವಸ್ವರೂಪಃ ಅನುಚ್ಛಿನ್ನಜ್ಞಾನಸುಖಾದಿಧರ್ಮಃ ಸನ್ ಜೀವಃ ಸ್ವರೂಪಭೂತಸರ್ವೇಂದ್ರಿಯೈಃ ಭಗವದ್ವಿಷಯಕಜ್ಞಾನವಿಷಯ-ಭೋಗಾದಿಮಾನ್ ಇತ್ಯೇವ ಖಲು ಅಮೃತತ್ವಂ ಮೋಕ್ಷಃ ಇತ್ಯರ್ಥಃ ॥** ತನ್ನ ಸ್ವರೂಪನಾಶವಿಲ್ಲದೆ ಜ್ಞಾನಸುಖಾದಿಧರ್ಮವಿಶಿಷ್ಟನಾಗಿದ್ದುಕೊಂಡು ಜೀವನು ಸ್ವರೂಪಭೂತವಾದ ತನ್ನ ಎಲ್ಲ ಇಂದ್ರಿಯಗಳಿಂದ ಭಗವದ್ವಿಷಯಕಜ್ಞಾನ ವಿಷಯಭೋಗಾದಿಗಳುಳ್ಳವನಾಗುವದೇ ಅಮೃತತ್ವವು- ಮೋಕ್ಷವು- ಎಂದು ಬಹಳ ಸ್ವಾರಸ್ಯವಾಗಿ ಸಂಗ್ರಹಿಸಿದ್ದಾರೆ.

Rarest Archiver

ಇಲ್ಲಿ ವಿವಿಧ ಮತಗಳಲ್ಲಿಯ ಮೋಕ್ಷದ ಕಲ್ಪನೆಯನ್ನು ಖಂಡಿಸಿ ಮೋಕ್ಷದ ವಾಸ್ತವಿಕವಾದ ಚಿತ್ರಣವನ್ನು ಶ್ರೀಮದಾಚಾರ್ಯರು ಕೊಟ್ಟಿದ್ದಾರೆ ಎಂದು ಶ್ರೀ ಜಯತೀರ್ಥರು ಸೂಚಿಸಿದ್ದಾರೆ. ಈ ವಿಷಯವನ್ನೇ ಶ್ರೀ ವ್ಯಾಸರಾಯರು *ಶ್ರೀಮನ್ನ್ಯಾಯಾಮೃತದಲ್ಲಿ* ವಿವರಿಸಿದ್ದಾರೆ. **ಅವಿನಾಶೀ ವಾ ಅರೇಽಯಮಾತ್ಮಾನುಚ್ಛಿತ್ತಿಧರ್ಮಾ** ಎಂಬ ವಾಕ್ಯದಲ್ಲಿ ಅವಿನಾಶೀ ಎಂದು ಹೇಳಿದ್ದರಿಂದ ಆತ್ಮನಾಶವೇ ಮೋಕ್ಷವು ಎಂಬ ಬೌದ್ಧಮತವು ಮಾಡುವ ಮೋಕ್ಷದ ಕಲ್ಪನೆಯನ್ನು ಖಂಡಿಸಲಾಗಿದೆ. **ಅನುಚ್ಛಿತ್ತಿಧರ್ಮಾ** ಎಂದು ಹೇಳಿದ್ದರಿಂದ ಅಶೇಷವಿಶೇಷಗುಣೋಚ್ಛೇದವೇ ಮೋಕ್ಷ ಎಂದು ಹೇಳುವ ವೈಶೇಷಿಕರ ಮತವನ್ನು ಖಂಡಿಸಲಾಗಿದೆ. ಆತ್ಮಮಾತ್ರಾವಶೇಷವೇ ಮುಕ್ತಿ (**ಅದ್ವಿತೀಯಚಿನ್ಮಾತ್ರಾವಶೇಷಃ ಮೋಕ್ಷಃ**) ಎಂದು ಹೇಳುವ ಅದ್ವೈತಮತವನ್ನು **ಯತ್ರ ಹಿ ದ್ವೈತಮಿವ ಭವತಿ ತದಿತರಃ ಇತರಂ ಪಶ್ಯತಿ** ಇತ್ಯಾದಿವಾಕ್ಯಭಾಗದಲ್ಲಿ ಪ್ರಸಂಗಾಂಗವ್ಯತಿರೇಕವ್ಯಾಪ್ತಿಯನ್ನು ಹೇಳಿ **ಯತ್ರತ್ವಸ್ಯ ....**ಇತ್ಯಾದಿ ವಾಕ್ಯಭಾಗದಿಂದ **ತತ್ ತರ್ಹಿ ಕೇನ ಕಂ ಪಶ್ಯೇತ್ ನ ಕೇನಾಪಿ ಕಿಂಚಿತ್,** ಇಂಥ ಮೋಕ್ಷದಲ್ಲಿ ಕುರುಡನಿಗೆ ಕಣ್ಣು ಕಾಣಿಸದೆ ದುಃಖವಾಗುವಂತೆ ಜ್ಞಾನವಿಲ್ಲದ್ದರಿಂದ ಈಶ್ವರನಿಗೂ ಕೂಡ ದುಃಖವಾಗುವದೆಂದು ಹೇಳಬೇಕಾಗುವದು (**ಮುಗ್ಧಸ್ಯ ಹಿ ಪರೇಽಜ್ಞಾನೇ ಕಿಂ ನ ದುಃಖತರಂ ಭವೇತ್** ಎಂಬ *ಮಹಾಭಾರತದ* ವಾಕ್ಯದಲ್ಲಿ ಹೇಳಿದಂತೆ) ಎಂದು ಅನಿಷ್ಟಪ್ರಸಂಗವನ್ನು ಹೇಳಿ ಖಂಡಿಸಲಾಗಿದೆ. ಹೀಗೆ ಪರಮತಗಳಲ್ಲಿಯ ಮೋಕ್ಷದ ಪರಿಕಲ್ಪನೆಯನ್ನು ಖಂಡಿಸಿ ಶ್ರೀಮದಾಚಾರ್ಯರು ಈ ವಾಕ್ಯದ ವಿವರಣೆಯಿಂದ ಮೋಕ್ಷದ ವಾಸ್ತವಿಕವಾದ ಚಿತ್ರಣವನ್ನು ಕೊಟ್ಟಿದ್ದಾರೆ. ಮೋಕ್ಷದಲ್ಲಿಯೂ ಪ್ರಾಮಾಣಿಕವಾದ ಭೇದವಿರುವದನ್ನು ಸಮರ್ಥಿಸಿದ್ದಾರೆ. ( ಹೆಚ್ಚಿನ ವಿವರಗಳಿಗೆ ಶ್ರೀ ವ್ಯಾಸರಾಯರ *ಶ್ರೀಮನ್ನ್ಯಾಯಾಮೃತಮ್* ದ ಪ್ರಥಮ ಪರಿಚ್ಛೇದದ ೩೦ನೆಯ ಪ್ರಕರಣವನ್ನು ನೋಡುವುದು)

**ಬ. ಈ ವಾಕ್ಯದಲ್ಲಿ ಐಕ್ಯವು ಪ್ರತಿಪಾದಿತವಾಗಿಲ್ಲ:–** ಭೇದವು ನಿತ್ಯವಾಗಿದೆ, ಅದು ವ್ಯಾವಹಾರಿಕವಾಗಿ ಸತ್ಯವಾದುದಲ್ಲ, ಪ್ರಾಮಾಣಿಕಸತ್ಯವು ಎಂದು ಹೇಳುವದಕ್ಕೆ ಶ್ರೀಮದಾಚಾರ್ಯರು ಮೋಕ್ಷದಲ್ಲಿಯೂ ಭೇದವಿದೆ ಎಂದು ಹೇಳುವ ಈ ವಾಕ್ಯವನ್ನು ಉದಾಹರಿಸಿದ್ದಾರೆ. ಈ ವಾಕ್ಯದಲ್ಲಿ ಐಕ್ಯವು ಪ್ರತಿಪಾದಿತವಾಗಿದೆ ಎಂದು ಅದ್ವೈತಿಗಳ ಮತ. ಅವಿದ್ಯೆಯು ಇರುವಾಗ ಅಂದರೆ ಸಂಸಾರಾವಸ್ಥೆಯಲ್ಲಿ ಜೀವರು ಬೇರೆ ಬೇರೆ ಇರುವದರಿಂದ ಒಬ್ಬರನ್ನೊಬ್ಬರು ನೋಡುವದು, ಒಬ್ಬರು ಇನ್ನೊಬ್ಬರಿಗೆ ಮಾತನಾಡುವದು, ಮುಟ್ಟುವದು ಇತ್ಯಾದಿಗಳು ಹೊಂದಬಹುದು. ಆದರೆ ಜೀವನು ಅವಿದ್ಯೆಯ ಬಂಧದಿಂದ ಮುಕ್ತನಾದಾಗ ಅಂದರೆ ಮೋಕ್ಷದಲ್ಲಿ ಅವನ ಎಲ್ಲ ಇಂದ್ರಿಯಗಳು ಆತ್ಮವೇ ಆಗುವದರಿಂದ ಕ್ರಿಯಾಕಾರಕಫಲಸಂಬಂಧದ

Rarest Archiver

ಉಚ್ಛೇದವಾಗುತ್ತದೆ. ಕಾರಣ, ಯಾವುದರಿಂದ ಯಾರು ಯಾರನ್ನು ನೋಡಬಹುದು? ಮಾತನಾಡಿಸಬಹುದು, ಸ್ಪರ್ಶಿಸಬಹುದು? ಇತ್ಯಾದಿ ಪ್ರಶ್ನೆಯಿಂದ ಇದಾವುದೂ ಸಾಧ್ಯವಾಗುವದಿಲ್ಲವೆಂದು ಹೇಳಿ ಮೋಕ್ಷದಲ್ಲಿಯ ವಸ್ತುಸ್ಥಿತಿಯನ್ನು ಈ ವಾಕ್ಯವು ವರ್ಣಿಸುತ್ತದೆ ಎಂದು ಅದ್ವೈತಿಗಳು ಹೇಳುತ್ತಾರೆ. ಆದರೆ ಶ್ರೀಮದಾಚಾರ್ಯರು ಇದನ್ನು ಸೂಕ್ಷ್ಮವಾಗಿ ವಿವೇಚಿಸಿ ಈ **ವಾಕ್ಯಖಂಡವು ಆಪಾದನಾತ್ಮಕ ಆಕ್ಷೇಪಪರವಾಗಿದೆ** ಎಂದು ಹೇಳಿ ಮೈತ್ರೇಯಿಯು ಕೇಳಿದ ಪ್ರಶ್ನೆಗೆ ಆಕ್ಷೇಪದ ರೀತಿಯ ಉತ್ತರವೇ ಅಲ್ಲಿ ಸಮರ್ಪಕವಾಗುತ್ತದೆ ಎಂದು ವಿವರಿಸಿದ್ದಾರೆ. **ಇದಕ್ಕೆ ಈ ಕೆಳಗಿನ ಕಾರಣಗಳನ್ನು ತಿಳಿಯಬೇಕು;**

i. ಮೋಕ್ಷದಲ್ಲಿ ಸಂಜ್ಞಾನಾಶವೆಂದರೆ ಜ್ಞಾನವೇ ಇರುವದಿಲ್ಲವೆಂಬುದು ಹೇಗೆ ಯೋಗ್ಯವಾಗುವದು? ಪರಮಪುರುಷಾರ್ಥವಾದ ಮೋಕ್ಷದಲ್ಲಿ ಜ್ಞಾನದ ಅಭಾವವನ್ನು ಹೇಳಬಹುದೆ? ಇಂಥ ಮೋಕ್ಷವನ್ನು ಸರ್ವಥಾ ಯಾರೂ ಅಪೇಕ್ಷಿಸಲಾರರು. ಜ್ಞಾನದ ಅಭಾವವು ದೋಷವಷ್ಟೆ! ದೋಷಪೂರ್ಣವಾದುದು ಪರಮಪುರುಷಾರ್ಥವೆಂದು ಹೇಗೆ ಆದೀತು? ಅದಕ್ಕೇನೇ ಮೈತ್ರೇಯಿಯು ಯಾಜ್ಞವಲ್ಕ್ಯರಿಗೆ ನೀವು ನನಗೆ ಮೋಹಕವಾದ ವಾಕ್ಯವನ್ನು ಹೇಳಿದಿರಿ ಎಂದು ಆಕ್ಷೇಪಿಸಿದ್ದು.

ii. ಮೈತ್ರೇಯಿಯ ಆಕ್ಷೇಪದ ಪ್ರಶ್ನೆಗೆ ಯಾಜ್ಞವಲ್ಕ್ಯರ ಆಕ್ಷೇಪದ ಉತ್ತರವೇ ಯೋಗ್ಯವಾಗುವದು. ಮೋಹಕವಾದ ಮಾತನ್ನು ನಾನು ಹೇಳಿಲ್ಲ, ಹಾಗೇಕೆ ತಿಳಿದುಕೊಂಡೆ? ಹಾಗೆ ಹೇಳಿದ್ದರೆ ಹೀಗಾಗುತ್ತಿತ್ತು ಎಂದು ಪ್ರಸಂಗದ ಆಪಾದನೆಯನ್ನು ಮಾಡಿ ಯಾಜ್ಞವಲ್ಕ್ಯರು ಉತ್ತರಿಸಿದ್ದಾರೆ ಎಂದು ಸೂಕ್ಷ್ಮವಾದ ರೀತಿಯಲ್ಲಿ ವ್ಯಾಖ್ಯಾನಿಸಿರುವದು ಸಮರ್ಪಕವಾಗಿದೆ.

iii. ಮುಕ್ತಿಯಲ್ಲಿ ಜೀವನಿಗೆ ಸ್ವರೂಪನಾಶವಿಲ್ಲ ಮತ್ತು ಅವನ ಸ್ವರೂಪಭೂತವಾದ ಧರ್ಮಗಳ ನಾಶವಿಲ್ಲ. ಮುಕ್ತಿಯಲ್ಲಿ ಜೀವನಿಗೆ ಜ್ಞಾನವಿದ್ದಮೇಲೆ ಐಕ್ಯವು ಹೇಗೆ ಕೂಡುವದು? ಭೇದವಿದ್ದಾಗಲೇ ಒಬ್ಬರನ್ನೊಬ್ಬರು ನೋಡುವದು, ಹೇಳುವದು ಕೇಳುವದು ಇತ್ಯಾದಿ ಕೂಡುವವು. ಈ ಅಭಿಪ್ರಾಯವನ್ನು ಒತ್ತಿ ಕೊಟ್ಟು ಹೇಳುವದಕ್ಕಾಗಿಯೇ ಆಕ್ಷೇಪದ ಶೈಲಿಯಿಂದ ಯಾಜ್ಞವಲ್ಕ್ಯರು ಹೇಳಿದ್ದಾರೆ.

iv. **ಯತ್ರ ತು ಅಸ್ಯ...**ಇತ್ಯಾದಿ ವಾಕ್ಯದಲ್ಲಿ ತು ಎಂಬುದು ಆಕ್ಷೇಪವನ್ನು ಮತ್ತು ಆಕ್ಷೇಪದ ಮುಖಾಂತರ ಅವಧಾರಣವನ್ನು (ಒತ್ತಿ ಕೊಟ್ಟು ಹೇಳುವದನ್ನು) ಸೂಚಿಸುವ ಪದವಾಗಿದೆ. (ಇನ್ನು ಕೆಲ ಪಾಠಗಳಲ್ಲಿ **ಯತ್ರ ವಾ** ಎಂದು **ವಾ** ಎಂಬ ಪದವಿದ್ದರೂ ಕೂಡ ಅದನ್ನು ಅವಧಾರಣಸೂಚಕ ಆಕ್ಷೇಪಾರ್ಥದಲ್ಲಿಯೇ ಪ್ರಯೋಗಿಸಲಾಗಿದೆ

Rarest Archiver

ಎಂದು ಹೇಳಬಹುದು. **ಸ್ಯುರೇವಂ ತು ಪುನರ್ವೈವೇತ್ಯವಧಾರಣವಾಚಕಾಃ** ಎಂದು ಅಮರಕೋಶವನ್ನು ಗಮನಿಸಬೇಕು.

**ಕ. ಈ ವಾಕ್ಯದಲ್ಲಿಯ ಕೆಲ ಪದಗಳ ಬಗ್ಗೆ ವಿಶ್ಲೇಷಣೆ:–** ಈ ಮೊದಲು ಯತ್ರ ತು ಎಂಬ ಪದಗಳ ಸಾರ್ಥಕ್ಯವನ್ನು ವಿವರಿಸಲಾಗಿದೆ. ಇನ್ನು ಇನ್ನುಳಿದ ವಿಶಿಷ್ಟ ಪದಗಳನ್ನು ಟೀಕಾ ಟಿಪ್ಪಣೀಕಾರರು ವಿವರಿಸಿದ್ದು ಅದರ ಸಂಕ್ಷೇಪ ಸಂಗ್ರಹವನ್ನು ಇಲ್ಲಿ ಮಾಡಲಾಗಿದೆ.

**i. ಯತ್ರ ಹಿ ದ್ವೈತಂ ಇವ** ಎಂಬ ಭಾಗದಲ್ಲಿ **ಇವ** ಪದದ ಅರ್ಥ–ವನ್ನು ಶ್ರೀಜಯತೀರ್ಥರು ಬಹಳ ಮಾರ್ಮಿಕವಾಗಿ ವಿವರಿಸಿದ್ದಾರೆ. **ತತ್ರ ಭೇದಿನಾಂ ಭೇದಸ್ಯ ಚ ಪಾರತಂತ್ರ್ಯಾತ್ ಇವ ಶಬ್ದಃ । ಯದಾ ದ್ವೈತಸದ್ಭಾವಃ ತದಾ ಇವ ದರ್ಶನಾದಿಭೋಗಃ ದೃಷ್ಟಃ ಇತಿ ॥** ಭೇದವಿರುವ ಎಲ್ಲ ಜಡ ಚೇತನಗಳು ಹಾಗೂ ಅವುಗಳಲ್ಲಿಯ ಭೇದವು ಪರತಂತ್ರವಾಗಿವೆ ಎಂದು ತಿಳಿಸಲು **ಇವ** ಪದವನ್ನು ವೇದಪುರುಷನು ಪ್ರಯೋಗಿಸಿದ್ದಾನೆ. ದ್ವೈತಸದ್ಭಾವವಿದ್ದಾಗ ಜೀವರು ದರ್ಶನಾದಿಭೋಗಗಳನ್ನು ಅನುಭವಿಸುವಂತೆಯೇ ಮೋಕ್ಷದಲ್ಲಿಯೂ ಕೂಡ ಅನುಭೋಗಿಸುವರು ಎಂದು ಹೇಳಿ ಸಾಮ್ಯವನ್ನು ಸೂಚಿಸಲು ಇವ ಪದವು ಪ್ರಯೋಗಿಸಲ್ಪಟ್ಟಿದೆ ಎಂದು ಹೇಳಿದ್ದಾರೆ.

ಶ್ರೀ ವ್ಯಾಸತೀರ್ಥರು ನ್ಯಾಯಾಮೃತದಲ್ಲಿ ದ್ವೈತಂ ಇವ ಎಂಬಲ್ಲಿ ಇವ ಶಬ್ದಕ್ಕೆ ಹೆಚ್ಚಿನ ವಿವರಣೆಯನ್ನು ಕೊಟ್ಟಿದ್ದಾರೆ. ಇವ ಶಬ್ದವು ಅದ್ವೈತಿಗಳು ಹೇಳುವಂತೆ ದ್ವೈತದ ಮಿಥ್ಯಾತ್ವವನ್ನು ಸೂಚಿಸುವದಿಲ್ಲ, ಪ್ರತ್ಯುತ ಕೇವಲ ಅಲ್ಪತ್ವವನ್ನು ಸೂಚಿಸು–ವದು. ಇವ ಶಬ್ದವು ಅಲ್ಪ ಎಂಬ ಅರ್ಥದಲ್ಲಿ ಪ್ರಯೋಗಿಸಲ್ಪಟ್ಟದ್ದಕ್ಕೆ ಉದಾಹರಣೆ–ಗಳಿವೆ. ದಶರಾತ್ರೈರ್ಭುಕ್ತಮಿವ ನ ಸಮ್ಯಕ್ಸ್ವಲ್ಪಭೋಜನಾತ್ ಎಂದು ಪುರಾಣವಾಕ್ಯ–ದಲ್ಲಿ ಹತ್ತು ದಿನಗಳ ಅನಂತರ ಭೋಜನ ಮಾಡಿದಂತಿದೆ ಎಂದರೆ ಬಹಳ ಸ್ವಲ್ಪು ಭೋಜನ ಮಾಡಿದ್ದಾನೆ ಎಂಬರ್ಥದಲ್ಲಿ ಅಂತೆ–**ಇವ**– ಎಂಬ ಪದವು ಪ್ರಯೋಗಿಸ–ಲ್ಪಟ್ಟಿದೆ. ಅದರಂತೆಯೇ ಅಯಂ ವಿದ್ವಾನ್ **ಇವ** ಅಂದರೆ ಇವನು ಪಂಡಿತನಂತೆ ಇರುವನು ಎಂದು ಹೇಳಿದರೆ ಇವನು ಸ್ವಲ್ಪೇ ವಿದ್ಯಾವಂತ ಎಂಬರ್ಥ ಬರುವದು ಇಲ್ಲಿಯೂ ಕೂಡ **ಇವ**–ಅಂತೆ ಎಂಬ ಪದವು ಅಲ್ಪ ಎಂಬರ್ಥದಲ್ಲಿದೆ. **ಇವೋಪ–ಮಾಯಾಂ ಸ್ವಲ್ಪಾರ್ಥೇ** ಎಂದು ಅಮರಕೋಶ. **ಉಪಮಾರ್ಥೇ ತಥಾಲ್ಪತ್ವೇ ಇವಶಬ್ದಃ ಪ್ರಯುಜ್ಯತೇ** ಎಂಬ ವಚನವೂ ಇದೆ. ಹೀಗೆ **ಇವ** ಪದದಿಂದ ದ್ವೈತಾ–ಭಾವವಾಗಲಿ ದ್ವೈತದ ಮಿಥ್ಯಾತ್ವವಾಗಲಿ ಸೂಚಿತವಾಗುವದಿಲ್ಲ, ಆದರೆ ದ್ವೈತವೂ ಕೂಡ ಈಶಾಧೀನವಾಗಿರುವದೆಂಬುದನ್ನು (ಅದಕ್ಕೇನೇ ಅಲ್ಪ–ಸ್ವಲ್ಪವಲ್ಲ– ಎಂಬು ದನ್ನು) ಸೂಚಿಸುವದು. ಇದಕ್ಕೇನೇ ಶ್ರೀಮದಾಚಾರ್ಯರು ಅನುವ್ಯಾಖ್ಯಾನದಲ್ಲಿ

Rarest Archiver

**ಅಸ್ವಾತಂತ್ರ್ಯಾದಿವೇತ್ಯುಕ್ತಂ ನ ದ್ವೈತಾಭಾವತಃ ಕ್ವಚಿತ್** ಎಂದು ಹೇಳಿದ್ದಾರೆಂಬುದನ್ನು ಗಮನಿಸಬೇಕು. ಶ್ರೀವ್ಯಾಸತೀರ್ಥರ ಈ ವಿವರಣೆಯು ಟೀಕೆಯ ಅಭಿಪ್ರಾಯವನ್ನು ವಿವರಿಸುತ್ತದೆ.

**ii. ಅನುಚ್ಛಿತ್ತಿಧರ್ಮಾ:–** ಈ ಪದವನ್ನು ಕೆಲವರು **ಉಚ್ಛಿತ್ತಿಃ ಧರ್ಮಃ ಯಸ್ಯ ಅಸೌ ಉಚ್ಛಿತ್ತಿಧರ್ಮಾ; ನ ಉಚ್ಛಿತ್ತಿಧರ್ಮಾ ಅನುಚ್ಛಿತ್ತಿಧರ್ಮಾ** ಎಂದು ಬಿಡಿಸಿ ಮೋಕ್ಷದಲ್ಲಿ ಸ್ವರೂಪದ ವಿನಾಶವಾಗುವದಿಲ್ಲವೆಂದು ಅರ್ಥ ಮಾಡುತ್ತಾರೆ. ಆದರೆ ಈ ಅರ್ಥವು ಅವಿನಾಶೀ ಎಂಬ ಪದದಿಂದಲೇ ಲಭಿಸುವದರಿಂದ ಈ ರೀತಿ ಸಮಾಸ ಬಿಡಿಸಬಾರದೆಂದು ಹೇಳಿ ಈ ಪದವು ಬಹುವ್ರೀಹಿಗರ್ಭ–ಬಹುವ್ರೀಹಿ ಎಂದು ತಿಳಿಸಿದ್ದಾರೆ (ಶ್ರೀ ರಾಯರ ಭಾವದೀಪ). **ನ ವಿದ್ಯತೇ ಉಚ್ಛಿತ್ತಿಃ ಯೇಷಾಂ ತೇ ಅನುಚ್ಛಿತ್ತಯಃ ; ಅನುಚ್ಛಿತ್ತಯಃ ಧರ್ಮಾಃ ಯಸ್ಯ ಅಸೌ ಅನುಚ್ಛಿತ್ತಿಧರ್ಮಾ** ಎಂದು ಬಿಡಿಸಿದಾಗ ಯಾವ ಅನುಪಪತ್ತಿ ಇಲ್ಲವೆಂದು ತಿಳಿಸಿದ್ದಾರೆ.

**iii. ಯತ್ರ ಹಿ ದ್ವೈತಂ ಇವ ಭವತಿ..** ಈ ಭಾಗದಲ್ಲಿಯ **ದ್ವೈತಂ** ಪದಕ್ಕೆ ಶ್ರೀ ಟೀಕಾಕೃತ್ಪಾದರು ಐದು ರೀತಿಯ ವಿವರಣೆ ಕೊಟ್ಟಿದ್ದಾರೆ; ಈ ನಿರ್ವಚನಗಳಿಗೆ ಅವಶ್ಯವಿದ್ದ ವ್ಯಾಕರಣನಿಯಮಗಳಿಗಾಗಿ ಶ್ರೀ ರಾಯರ ಹಾಗೂ ಶ್ರೀ ಶ್ರೀನಿವಾಸತೀರ್ಥರ ಟಿಪ್ಪಣಿಗಳನ್ನು ನೋಡಬೇಕು.

**ದ್ವಯೋಃ ಭಾವಃ ದ್ವಿತಾ ಭೇದಃ ಇತಿ ಯಾವತ್; ತಸ್ಯಾಃ ಇದಂ ಧರ್ಮಿ ದ್ವೈತಮ್, ಭಿನ್ನಂ ವಸ್ತು ಇತ್ಯರ್ಥಃ ।**

**ದ್ವಿ ಇತಿ ಭಾವಪ್ರಧಾನಂ; ದ್ವಿತ್ವಮ್; ದ್ವಿತ್ವೇನ ಇತಂ ಪ್ರಾಪ್ತಂ ದ್ವೀತಮ್; ಸ್ವಾರ್ಥಿಕಃ ಅಣ್ ಪ್ರತ್ಯಯಃ ದ್ವೈತಮ್, ಭೇದವತ್ ।**

**ದ್ವಾಭ್ಯಾಂ ವಿರುದ್ಧಧರ್ಮಾಭ್ಯಾಂ ಇತಂ ದ್ವೀತಮ್, ತತ್ರ ಭವಂ ದ್ವೈತಮ್ ಭೇದಃ ಇತಿ ಯಾವತ್ ।**

**ದ್ವಿತಾ ಇತಿ ಅನೇಕತ್ವಸಂಖ್ಯಾ ಉಚ್ಯತೇ; ತತ್ರ ಭವಂ ದ್ವೈತಂ ಭೇದಃ ಏವ।**

**ದ್ವಿತ್ವೇನ ಸಂಖ್ಯಯಾ ಇತಂ ತತ್ರ ಭವಂ ದ್ವಿತ್ವಸಂಖ್ಯಯಾ ಯುತೇ ಭವಂ ಇತಿ ವಾ ದ್ವೈತಮ್** । ಭೇದವೆಂದರ್ಥ.

Rarest Archiver

ಈ ವಾಕ್ಯವು **ಶ್ರುತಿಷಟ್ಪದಿಯಲ್ಲಿ** ಹೀಗೆ:-

*ಮುನಿಯು ಸನ್ಯಾಸವನು ಪಡೆವುದ-*
*ಕಿನಿತು ತಡಗೈಯದಲೆ ಪೇಳಲು*
*ತನಗೆ ಮುಕುತಿಯ ಮಾರ್ಗ ಪೇಳುವುದೆಂದು ಸತಿ ನುಡಿಯೆ,*
*ಮುನಿಯು ಪೇಳಿದ, ಸತಿಯೆ, ತಿಳಿವುದು*
*ಘನದ ಸಿರಿಪತಿಹರಿಯ ನಿರುತವು,*
*ಎನಲು ಮುನಿವರ, ಮುಕುತಿ ಎಂತಿಹುದರುಹುದೆಂದಿಹಳು. ॥*

*ಮುನಿಯು ಪೇಳಿದ, ಭವದ ಬಂಧನ-*
*ವಿನಿತು ಕಾಣದು ತಿಳಿವ ತೊರೆದಗೆ,*
*ಎನಲು ಸತಿ ತಾನೆಂತು ಸಾಧ್ಯವಿದೆಂದು ಕೇಳುತಲಿ*
*ಮುನಿಸು ತೋರಲು ಮುನಿಯು ನುಡಿದನು,*
*ಮುನಿಸು ಬೇಡೆಲೆ, ತಪ್ಪಿದಲ್ಲವು*
*ಮನುಜ ವೃತ್ತಿಜ್ಞಾನ ತೊರೆವನು, ನೋಡು, ಮುಕುತಿಯೊಳು ॥*

*ನರನು ತೊರೆಯಲು ಲಿಂಗದೇಹವ*
*ತೊರೆಯನವ ಚಿನ್ಮಾತ್ರ ದೇಹವ-*
*ನೊರೆವೆ, ಮುಕುತಿಯೊಳೆಂದಿಗೆಂದಿಗು ಭೇದವಿರುತಿಹುದು.*
*ಹರಿಯಧೀನದಿ ಜೀವನಿರುತಿಹ,*
*ಹರಿಯನುಗ್ರಹದಿಂದ ಭೋಗಿಪ,*
*ನಿರುತ ಸುಖವನು ಹರಿಯ ತಿಳಿಯುತ ಸೇವೆಗೈಯುತಲಿ ॥*

*ಯಾಜ್ಞವಲ್ಕ್ಯರು ಬ್ರಹ್ಮವಾದಿನಿ*
*ಪ್ರಾಜ್ಞೆ ಮೈತ್ರೇಯ್ಯೆಂಬ ಪತ್ನಿಗೆ*
*ಪ್ರಾಜ್ಞರಾಗಿಹ ಭಕುತರೆಲ್ಲರಿಗಿತ್ತ ತತ್ವವಿದು,*
*ಯಜ್ಞನಾಮಕ ಹರಿಯ ನಿರುತವು*
*ಅಜ್ಞಸುಜ್ಞರು ಮನದಿ ನೆನೆಯಲು*
*ಪ್ರಾಜ್ಞ ಸುಖವನು ನೀಡುವಂದದಿ ಮುಕುತಿ ನೀಡುವನು. ॥*

*ಬೃಹತು ಆರಣ್ಯಕವು ಎನಿಸಿಹ*
*ಮಹತು ವೇದಾಂತೋಪದೇಶದಿ*
*ವಿಹಗವಾಹನ ಹರಿಯ ಮಹತಿಯ ನಿರುತ ನೆನೆವುದಕೆ*
*ಗಹನ ತತ್ವಜ್ಞಾನ ಗುರುಗಳ*
*ಮಹತು ಕೃಪೆಯಿಂ ಸುಲಭನುಡಿಯಲಿ*
*ಸುಹಯದ ಮುಖ ನುಡಿಸಿದಂತೆಯೆ ನುಡಿದೆನೀತೆರದಿ. ॥*

Rarest Archiver

**೬೬. ಯಥೋದಕಂ ಶುದ್ಧೇ ಶುದ್ಧಂ ಆಸಿಕ್ತಂ ತಾದೃಗ್ ಏವ ಭವತಿ ।**
**ಏವಂ ಮುನೇಃ ವಿಜಾನತಃ ಆತ್ಮಾ ಭವತಿ ಗೌತಮ ॥**

*– ಕಠೋಪನಿಷತ್ ಅಧ್ಯಾಯ ೨–ವಲ್ಲೀ ೧–೧೫*

**ಉಪನಿಷತ್ತಿನಲ್ಲಿ ಈ ವಾಕ್ಯಕ್ಕೆ ಹಿನ್ನೆಲೆ :–** ಇದು *ಕಠೋಪನಿಷತ್ತಿನಲ್ಲಿ* ಬರುವ ಯಮ ನಚಿಕೇತರ ಸಂವಾದದಲ್ಲಿ ಯಮನ ಮಾತಾಗಿದೆ. ಬ್ರಹ್ಮವಿದ್ಯೆಯನ್ನು ಹೇಳುವ ಉದ್ದೇಶದಿಂದ ಹಾಗೂ ಶ್ರೋತೃಗಳಲ್ಲಿ ಭಕ್ತಿಯನ್ನು ಹುಟ್ಟಿಸಬೇಕೆಂದು ವೇದಪುರುಷನು ಈ ಉಪನಿಷತ್ತಿನಲ್ಲಿ ಒಂದು ಆಖ್ಯಾಯಿಕೆಯನ್ನು ಹೇಳಿದ್ದಾನೆ. ಅದೇ ನಚಿಕೇತನು ಯಮನಿಂದ ಬ್ರಹ್ಮವಿದ್ಯೆಯನ್ನು ಪಡೆದ ಕಥೆ. ಒಮ್ಮೆ ತಂದೆ ಉದ್ದಾಲಕರು ಸ್ವರ್ಗಲೋಕದ ಅಪೇಕ್ಷೆಯಿಂದ ಒಂದು ಯಾಗವನ್ನು ಮಾಡಿ ಆ ಸಮಯದಲ್ಲಿ ಅನೇಕ ಬ್ರಾಹ್ಮಣರಿಗೆ ಸರ್ವಸ್ವದಾನ ಮಾಡಿದರು. ಈ ದಾನ ಮಾಡುವದನ್ನು ನೋಡುತ್ತಿದ್ದ ಮಗ ನಚಿಕೇತನು ತಂದೆ ನಿರುಪಯುಕ್ತವಾದ (ಬಂಜೆ) ಭೂಮಿ, ಬರಡು ಆಕಳು ಮುಂತಾದವುಗಳನ್ನು ದಾನಮಾಡುತ್ತಿದ್ದುದನ್ನು ಕಂಡು ಅಸಮಾಧಾನದಿಂದ ತನ್ನನ್ನೂ ದಾನ ಮಾಡಿಬಿಡಬೇಕೆಂದೂ ಯಾರಿಗೆ ದಾನ ಮಾಡುವಿರೆಂದೂ ಪಟ್ಟು ಹಿಡಿದು ಕೇಳಿದನು ಇದನ್ನು ಕೇಳಿದ ತಂದೆ ಸಿಟ್ಟಿನಿಂದ ನಿನ್ನನ್ನು ಯಮನಿಗೆ ದಾನ ಮಾಡುವದಾಗಿ ಹೇಳಿದರು. ಹೇಳಿದ್ದೇ ತಡ, ನಚಿಕೇತನು ಯಮಲೋಕಕ್ಕೆ ಹೋಗಿ ಅಲ್ಲಿ ಯಮಧರ್ಮನು ಮನೆಯಲ್ಲಿಲ್ಲದಾಗ ತಾನು ಮನೆಯೊಳಗೆ ಹೋಗಬಾರದೆಂಬ ನಿಯಮದಿಂದ ಮೂರು ದಿನ ಯಮನ ಮನೆಯ ಹೊರಗೇ ಕುಳಿತು ದಾರಿ ನೋಡಿದನು. ಯಮಧರ್ಮನ ಪತ್ನಿ ಶ್ಯಾಮಲಾ ದೇವಿಯು ತನ್ನ ಪತಿಯು ಬಂದೊಡನೆ ಬಾಲಕನನ್ನು ಮರ್ಯಾದೆಯಿಂದ ಒಳತಂದು ಗೌರವಿಸಬೇಕೆಂದು ತಿಳಿಸಿದಂತೆ ಯಮನು ನಚಿಕೇತನನ್ನು ಒಳಗೆ ಕರೆದುಕೊಂಡು ಬಂದು ಮೂರು ವರ ಕೊಡುವದಾಗಿ ಹೇಳಿದನು. ನಚಿಕೇತನು ತನ್ನ ತಂದೆಯ ಸಿಟ್ಟು ತನ್ನ ಮೇಲೆ ಇರದಂತಾಗಲೆಂದೂ, ಯಜ್ಞ ಮಾಡುವಾಗ ಯಾವ ರೀತಿ ಅಗ್ನಿಯನ್ನು ಪ್ರತಿಷ್ಠಾಪಿಸಬೇಕೆಂಬ ವಿಷಯಕ್ಕೆ ತಿಳಿಸಬೇಕೆಂದೂ ಹಾಗೂ ಮರಣಾನಂತರದಲ್ಲಿ ಯಾರು ನಿಯಾಮಕರಿರುವರು ಅವರ ಸ್ವರೂಪವೇನೆಂಬುದನ್ನು ತಿಳಿಸಬೇಕೆಂದೂ ಮೂರು ವರ ಕೇಳಿದನು. ಯಮನು ಒಂದೊಂದೇ ವರ ಕೊಟ್ಟು ಮಗು ನಚಿಕೇತನು ಗಟ್ಟಿ ಮನಸ್ಸಿನ ಯೋಗ್ಯ ಅಧಿಕಾರಿಯಾಗಿರುವದನ್ನು ಮನಗಂಡು ಬಲು ರಹಸ್ಯದ ಬ್ರಹ್ಮಸ್ವರೂಪವನ್ನು ವಿವರಿಸಿದನು. ಪರಮಾತ್ಮನ ರೂಪಗಳಲ್ಲಿ, ಗುಣಗಳಲ್ಲಿ ಭೇದವಿಲ್ಲ. ಭೇದವಿದೆಯೆಂದು ಹೇಳುವವರು ಅನರ್ಥಕ್ಕೆ ಗುರಿಯಾಗುವರು. ಅವನು ನಿತ್ಯನು, ಎಲ್ಲರ ಹೃದಯಗುಹೆಯಲ್ಲಿ ಹೆಬ್ಬೆರಳಿನ ಗಾತ್ರದಷ್ಟು ಸ್ಥಳದಲ್ಲಿ ಜ್ಯೋತಿಯಂತೆ ಪ್ರಕಾಶಮಾನನಾಗಿ ನಿತ್ಯವೂ ನಿಯಾಮಕನಾಗಿ ನೆಲೆಸಿರುವನು. ಹೀಗೆಲ್ಲ ಸೂಕ್ಷ್ಮ–

Rarest Archiver

ವಾದ ತತ್ತ್ವಗಳನ್ನು ಯಮಧರ್ಮನು ಬಾಲಕ ನಚಿಕೇತನಿಗೆ ವಿವರಿಸಿದನು. ಮುಕ್ತ ಜೀವನು ಇಂಥ ಪರಮಾತ್ಮನ ಜೊತೆಗೆ ಐಕ್ಯ ಹೊಂದುವನೇ ಎಂಬ ಪ್ರಶ್ನೆಯನ್ನು ಮನಸ್ಸಿನಲ್ಲಿ ಗ್ರಹಿಸಿ ಯಮಧರ್ಮನು ಹಾಗೆ ಎಂದೂ ಆಗಲಾರದು. ಮುಕ್ತನು ಪರಮಾತ್ಮನ ಜೊತೆಗೆ ಏಕೀಭಾವ ಹೊಂದುತ್ತಾನೆ ಎಂದು ಉಪನಿಷತ್ತುಗಳಲ್ಲಿ ಹೇಳಿದ್ದನ್ನು ಅಲ್ಲಿಯ ಪ್ರಕರಣಕ್ಕನುಗುಣವಾಗಿ ಅರ್ಥ ಮಾಡಬೇಕು. ಮುಕ್ತಿಯಲ್ಲಿ ಏಕೀಭಾವವಾಗುತ್ತದೆ ಎಂಬ ಮಾತನ್ನು ತತ್ಸದೃಶವಾಗುತ್ತದೆ ಎಂಬರ್ಥದಲ್ಲಿ ವಿವರಿಸಬೇಕೇ ಹೊರತು ಮುಕ್ತ ಜೀವನು ತನ್ನ ಸ್ವರೂಪವನ್ನೇ ಕಳೆದುಕೊಂಡು ಬ್ರಹ್ಮನೊಂದಿಗೆ ಐಕ್ಯ ಹೊಂದುತ್ತಾನೆ ಎಂದು ಅರ್ಥ ಮಾಡಬಾರದು ಎಂದು ತಿಳಿಸಿ ದೃಷ್ಟಾಂತ ಕೊಟ್ಟು ವಿವರಿಸಿದನು. ಆ ಸಂದರ್ಭದಲ್ಲಿ ಪ್ರಸಕ್ತ ವಾಕ್ಯವು ಉದಾಹೃತವಾಗಿದೆ. ಇದು ಉಪನಿಷತ್ತಿನ ದ್ವಿತೀಯಾಧ್ಯಾಯದ ಪ್ರಥಮವಲ್ಲಿಯ ಕೊನೆಯ ಶ್ಲೋಕವಾಗಿದೆ.

**ಅನ್ವಯ ಹಾಗೂ ಅರ್ಥ** (ಶ್ರೀ ರಾಯರ *ಖಂಡಾರ್ಥ*ವನ್ನನುಸರಿಸಿ)**:– ಗೌತಮ, (ಅಯಿ ನಚಿಕೇತಃ), ಯಥಾ ಶುದ್ಧಂ ಉದಕಂ ಶುದ್ಧೇ (ಉದಕೇ) ಸಿಕ್ತಂ (ಸ್ಥಾಪಿತಂ ಸತ್) ತಾದೃಕ್ ಏವ ಭವತಿ (ನ ತು ತದ್ ಏವ, ವೃದ್ಧಿದರ್ಶ– ನಾತ್) ವಿಜಾನತಃ ಮುನೇಃ (ವಿಜಾನತಾಂ ಮುನೀನಾಂ–** [ಸಮುದಾಯಾ– ಪೇಕ್ಷಂ ಏಕವಚನಮ್– ಶ್ರೀ ತೀ]**) ಆತ್ಮಾ (ಸ್ವಾಮೀ ಮುಕ್ತಃ ಚತುರ್ಮುಖಃ) ಏವಂ ಭವತಿ (ಭಗವತ್ಸದೃಶಃ ಏವ ಭವತಿ ನ ತು ತದೈಕ್ಯಂ ಆಪ್ನೋತಿ । ಜೀವಾಃ ತು ನ ಆಪ್ನುವಂತಿ ಇತಿ ಕಿಮು ವಕ್ತವ್ಯಮ್ ?)**

ಮಗು ನಚಿಕೇತನೆ, ಶುದ್ಧವಾದ ನೀರಿನಲ್ಲಿ ಬೇರೆ ಶುದ್ಧವಾದ ನೀರನ್ನು ಬೆರೆಸಿದರೆ ಅದೂ ಕೂಡ ಶುದ್ಧನೀರಿನಂತೆಯೇ ಆಗುವದೇ ಹೊರತು ಅದೇ ಆಗುವದಿಲ್ಲ, ಏಕೆಂದರೆ ನೀರು ಹೆಚ್ಚಾದದ್ದು ಕಂಡು ಬರುವದು. ಅದೇ ರೀತಿ ಜ್ಞಾನಿಗಳಾದ ಮುಕ್ತರ ಸ್ವಾಮಿಯಾದ ಚತುರ್ಮುಖ ಬ್ರಹ್ಮನೂ ಕೂಡ ಮುಕ್ತಿಯಲ್ಲಿ ಭಗವಂತನನ್ನು ಸೇರಿ ಅವನಂತೆಯೇ ಆಗುತ್ತಾನೆ, ಆದರೆ ಭಗವಂತನೇ ಆಗುವದಿಲ್ಲ. ( ಮುಕ್ತರ ಸ್ವಾಮಿ ಚತುರ್ಮುಖ ಬ್ರಹ್ಮನೇ ಹೀಗೆ ಂದ ಮೇಲೆ ಉಳಿದ ಜೀವರು ಮುಕ್ತಿಯಲ್ಲಿ ಭಗವಂತನೊಡನೆ ಐಕ್ಯ ಹೊಂದುವದಿಲ್ಲವೆಂಬುದನ್ನು ಬೇರೆ ಹೇಳಬೇಕೆ ?

***ವಿಷ್ಣುತತ್ತ್ವವಿನಿರ್ಣಯದಲ್ಲಿ* ಈ ವಾಕ್ಯಕ್ಕೆ ಪ್ರಸಕ್ತಿ:–** ಶ್ರೀಮದಾಚಾರ್ಯರು ಭೇದವು ವ್ಯಾವಹಾರಿಕವಾಗಿಲ್ಲ, ಅದು ಪಾರಮಾರ್ಥಿಕ ಸತ್ಯ, ಯಾವ ಕಾಲದಲ್ಲಿಯೂ ಇರುವಂತಹದು, ಮುಕ್ತಿಯಲ್ಲಿ ಸತ್ಯವಾದ ಭೇದವೇ ಇದೆ ಎಂದು ಹೇಳುವ ಸಂದರ್ಭದಲ್ಲಿ ಈ ವಾಕ್ಯವನ್ನು ಉದಾಹರಿಸಿದ್ದಾರೆ. ಮುಕ್ತಿಯಲ್ಲಿ ಅಭೇದವನ್ನು ಹೇಳುವ ವಿಶಿಷ್ಟಾದ್ವೈತತತ್ತ್ವವನ್ನು ಈ ವಾಕ್ಯವು ವಿಮರ್ಶಿಸುತ್ತದೆ.

Rarest Archiver

ಈ ವಾಕ್ಯದ ಅಭಿಪ್ರಾಯವನ್ನು *ಶ್ರುತಿಷಟ್ಪದಿ*ಯಲ್ಲಿ ಹೀಗೆ ಹೇಳಬಹುದು :–

*ಯಮನು ನಚಿಕೇತನಿಗೆ ಪೇಳಿದ,*
*ವಿಮಲವಾಗಿಹ ಜಲವ ಬೆರೆಸಲು*
*ವಿಮಲ ಜಲದೊಳ್ ವಿಮಲವೇ ತಾನಿಹುದು ನೋಡಲ್ಕೆ,*
*ವಿಮಲ ಜಲವದು ವೃದ್ಧಿ ಕಾಂಬುದು*
*ವಿಮಲ ಜಲಗಳ ಭೇದ ತೋರುತ*
*ವಿಮಲ ಮನದಿಂದಿದನ ತಿಳಿವುದು ಭೇದ ಮುಕುತಿಯೊಳು* ॥

*ಚತುರವದನನು ಮುಕುತರೊಡೆಯನು*
*ಅತುಲ ಮುಕುತಿಯ ಪಡೆದು ಸಿರಿಹರಿ*
*ವಿತತ ಕೃಪೆಯಿಂ ಹರಿಯ ರೂಪವ ಪಡೆವನಿಂತಿರಲು,*
*ಅತಿಯೆ ಕಡಿಮೆಯ ಗುಣದ ಜೀವರು*
*ಅತುಲಗುಣಗಣಖಣಿಪರಾತ್ಮನ*
*ಜೊತೆಗೆ ಐಕ್ಯವ ಪಡೆವರೆಂಬುದು ದಿಟವದೆಂತಿಹುದು ?* ॥

**೬೭. ತದಾ ವಿದ್ವಾನ್ ಪುಣ್ಯಪಾಪೇ ವಿಧೂಯ ನಿರಂಜನಃ ಪರಮಂಸಾಮ್ಯಂ ಉಪೈತಿ ॥**– *ಆಥರ್ವಣೋಪನಿಷತ್,* ಅಧ್ಯಾಯ ಖಂಡ ೫ ಶ್ಲೋಕ ೩

[ *ಉಪನಿಷದ್ವಾಕ್ಯಕೋಶಃ* ದಲ್ಲಿ ಪ್ರಸಕ್ತ ವಾಕ್ಯವು *ಮುಂಡಕೋಪನಿಷತ್* ೩–೧–೩ ಎಂದು ತೋರಿಸಲಾಗಿದೆ. ಈ ವಿಷಯಕ್ಕೆ ಹೆಚ್ಚಿನ ಸಂಶೋಧನೆ ಅಗತ್ಯವೆಂದೆನಿಸುವದು. ಶ್ರೀಮದಾಚಾರ್ಯರು ಮುಂಡಕೋಪನಿಷತ್ತಿಗೆ ಆಥರ್ವಣೋಪನಿಷತ್ ಎಂದು ಕರೆಯುವರು.]

ಈ ವಾಕ್ಯದ ಸಂಪೂರ್ಣ ಪಾಠವು ಹೀಗಿದೆ:

**ಯದಾ ಪಶ್ಯಃ ಪಶ್ಯತೇ ರುಗ್ಮವರ್ಣಂ ಕರ್ತಾರಂ ಈಶಂ ಪುರುಷಂ ಬ್ರಹ್ಮ– ಯೋನಿಮ್ । ತದಾ ವಿದ್ವಾನ್ ಪುಣ್ಯಪಾಪೇ ವಿಧೂಯ ನಿರಂಜನಃ ಪರಮಂ ಸಾಮ್ಯಂ ಉಪೈತಿ ॥**

**ಅರ್ಥ (ಶ್ರೀ ರಾಯರ ಖಂಡಾರ್ಥವನ್ನನುಸರಿಸಿ):– ಪಶ್ಯಃ=** ಪಶ್ಯತೀತಿ ಪಶ್ಯಃ ದ್ರಷ್ಟಾ ಜೀವಃ = ನೋಡುತ್ತಿರುವ ಜೀವನು, **ಯದಾ** ಯಾವಾಗ **ರುಗ್ಮವರ್ಣಂ=** ಬಂಗಾರದ ಬಣ್ಣದ ಅಪ್ರಾಕೃತವಾದ ದೇಹವುಳ್ಳ **ಬ್ರಹ್ಮಯೋನಿಂ=** ಚತುರ್ಮುಖ–ಬ್ರಹ್ಮನಿಗೆ ಕಾರಣನಾದ, **ಕರ್ತಾರಂ ಈಶಂ ಪುರುಷಂ ಪಶ್ಯತಿ=** ಜಗತ್ಕರ್ತೃವಾಗಿದ್ದ ಸರ್ವರ ಒಡೆಯನಾದ ಪರಮಪುರುಷನನ್ನು, **ಪಶ್ಯತೇ=** ನೋಡುತ್ತಾನೆಯೋ, **ತದಾ = ಆಗ ವಿದ್ವಾನ್=** ಜ್ಞಾನಿಯಾದ ಈತನು, **ಪುಣ್ಯಪಾಪೇ ವಿಧೂಯ=** (ಪ್ರಾಕೃತ ಬಂಧದ ಸಂಸಾರದಲ್ಲಿ ಅನುಭೋಗಿಸಲ್ಪಡುವ) ಪುಣ್ಯ (ಮೋಕ್ಷಕ್ಕೆ ಪ್ರತಿಬಂಧಕ–ವಾದ, ಅನಿಷ್ಟ ಪುಣ್ಯ) ಮತ್ತು ಪಾಪಗಳನ್ನು ಮೀರಿ **ನಿರಂಜನಃ=** ನಿರ್ಲಿಪ್ತನಾಗಿ (ಶುದ್ಧಾಂತಃಕರಣನಾಗಿ), (ಪರಮಾತ್ಮನ ಅನುಗ್ರಹದಿಂದ), **ಪರಮಂ ಸಾಮ್ಯಂ=** ಪರಮಾತ್ಮನ ಸಾಮ್ಯವನ್ನು,

Rarest Archiver

ನಿರ್ದುಃಖಪೂರ್ಣಾನಂದತ್ವಾದಿಗಳಿಂದ ಪರಮಾತ್ಮನೊಡನೆ ಸಾಮ್ಯವನ್ನು **ಉಪೈತಿ=** ಹೊಂದುತ್ತಾನೆ. (ಅಂದರೆ ಮೊದಲೇ ತಾನು ಆ ರೀತಿಯ ಸ್ವರೂಪವುಳ್ಳವನಾಗಿದ್ದರೂ ಕೂಡ ಈಗ ಆ ಸ್ವರೂಪದ ಅಭಿವ್ಯಕ್ತಿಯಿಂದ ಆನಂದಾನುಭವವನ್ನು ಪಡೆಯುತ್ತಾನೆ).

**ವಿಶೇಷ ವಿಷಯಗಳು:–** ಈ ವಾಕ್ಯದಿಂದ ಶ್ರೀಮದಾಚಾರ್ಯರು ಮುಕ್ತಿಯಲ್ಲಿ ಪರಮಾತ್ಮನೊಡನೆ **ಸಾಮ್ಯ**–ಸಾದೃಶ್ಯವಿರಬಹುದೇ ಹೊರತು ಅಭೇದವಿರಲಾ–ರದು, ಅಲ್ಲಿ ಭೇದವೇ ಇರುವದು ಹಾಗೂ ಈ ಭೇದವು ನಿತ್ಯವಾದುದು ಎಂಬ ತತ್ವವನ್ನು ಸ್ಪಷ್ಟಪಡಿಸಿದ್ದಾರೆ. ಇದು ಓಂ ಪುಂಸ್ತ್ವಾದಿವತ್ವಸ್ಯ.... (ಬ್ರ ಸೂ ೨–೩–೩೦) ಎಂಬ ಸೂತ್ರದಲ್ಲಿ ಹೇಳಿದಂತೆ ಜೀವನ ಸ್ವರೂಪವು ಮುಕ್ತಿಯಲ್ಲಿ ಅಭಿವ್ಯಕ್ತವಾಗುವದೆಂಬುದನ್ನು ಸೂಚಿಸುತ್ತದೆ. **ಉಪೈತಿ** ಎಂಬ ಪದದಿಂದಲೂ ಕೂಡ ಭೇದವೇ ಸೂಚಿಸಲ್ಪಡುವದು. ಎರಡು ಬೇರೆ ಬೇರೆ ಚೇತನಗಳಿದ್ದಾಗ–ಲಷ್ಟೆ ಅವುಗಳ ನಡುವೆ ಸಾಮೀಪ್ಯವನ್ನು ಹೇಳಬಹುದು. ಅಭೇದವಿದ್ದಾಗ ಸಾಮೀಪ್ಯವೆಂಬುದು ಹೇಗೆ ಕೂಡುವದು? ಜೀವನು ಮುಕ್ತಿಯನ್ನು ಪಡೆಯುವ ಮೊದಲು ಪುಣ್ಯಪಾಪಗಳನ್ನು ತೊರೆಯುವನು ಎಂಬುದನ್ನು ಓಂ ತದಧಿಗಮ ಉತ್ತರಪೂರ್ವಾಘಯೋಃ ಅಶ್ಲೇಷವಿನಾಶೌ ಓಂ (ಬ್ರ. ಸೂ. ೧–೨–೨೩) ಎಂಬ ಸೂತ್ರದಲ್ಲಿ ವಿವರಿಸಲಾಗಿದೆ. ಪರಮಾತ್ಮನು ಹೇಮವರ್ಣನು ಎಂಬುದನ್ನು ಓಂ ರೂಪೋಪನ್ಯಾಸಾಚ್ಚ ಓಂ (ಬ್ರ. ಸೂ. ೧–೨–೨೩) ಎಂಬ ಸೂತ್ರದಲ್ಲಿ ವಿವರಿಸಲಾಗಿದೆ.

ಈ ವಾಕ್ಯದ ಭಾವ *ಶ್ರುತಿಷಟ್ಪದಿಯಲ್ಲಿ* ಹೀಗೆ :–

*ಭವವಿಮೋಚನ ಮಾರ್ಗ ತಿಳಿದವ*
*ಭವಕೆ ಕಾರಣ ಪುಣ್ಯಪಾಪವ*
*ಸವೆಸಿ ಮುಕುತಿಯ ಪಡೆವ ತಾ ಪರಿಶುದ್ಧನಾಗುತಲಿ,*
*ಭವವಿಮೋಚಕ ಹರಿಯ ಕೃಪೆಯಿಂ*
*ವಿವಿಧ ಸುಖಗಳ ನಿತ್ಯ ಪಡೆವನು*
*ಇವನು ಹರಿಸಾದೃಶ್ಯ ಪಡೆವನು ಭಿನ್ನನಾಗಿರುತ.* ॥

**೬೮. ಅಮೃತಸ್ಯೈಷ ಸೇತುಃ ॥**–*ಆಥರ್ವಣೋಪನಿಷತ್, ಖಂಡ ೪ ಶ್ಲೋಕ೫*
*(ಮುಂಡಕೋಪನಿಷತ್ ೨/೨/೫).*

(ಶ್ರೀಮದಾಚಾರ್ಯರು *ಮುಂಡಕೋಪನಿಷತ್* ಎಂದು *ಕೆಲವರಿಂದ ಕರೆಯಲ್ಪಡುವ ಉಪನಿಷತ್ತನ್ನು ಆಥರ್ವಣೋಪನಿಷತ್* ಎಂದು ಕರೆದಿದ್ದಾರೆಂಬು–ದನ್ನು ಗಮನಿಸಬೇಕು)

Rarest Archiver

ಈ ಶ್ಲೋಕದ ಸಂಪೂರ್ಣ ಪಾಠವು ಹೀಗೆ ಇದೆ;

***ಯಸ್ಮಿನ್* ದ್ಯೌಃ ಪೃಥಿವೀ ಚ ಅಂತರಿಕ್ಷಂ ಓತಂ ಮನಃ ಸಹ ಪ್ರಾಣೈಶ್ಚ ಸರ್ವೈಃ । ತಮ್ ಏವ ಏಕಂ ಜಾನಥ ಆತ್ಮಾನಂ ಅನ್ಯಾ ವಾಚೋ ವಿಮುಂಚಥ ಅಮೃತಸ್ಯ ಏಷಃ ಸೇತುಃ ॥**

**ಈ ಶ್ಲೋಕಕ್ಕೆ ಉಪನಿಷತ್ತಿನಲ್ಲಿ ಹಿನ್ನೆಲೆ :–** ಚತುರ್ಮುಖ ಬ್ರಹ್ಮನು ಮಹಾವಿಷ್ಣುವಿನ ಮಗನು; ಅವನು ಎಲ್ಲ ಶೇಷ ಗರುಡ ಇಂದ್ರಾದಿ ಸಮಸ್ತ ದೇವತೆಗಳಲ್ಲಿ ಉತ್ತಮನು. ಅವನು ತನ್ನ ವೈವಸ್ವತಮನ್ವಂತರದಲ್ಲಿ ಮೊಟ್ಟ ಮೊದಲಿಗೆ ಹುಟ್ಟಿದ ಅಥರ್ವನೆಂಬ ಮಗನಿಗೆ ಎಲ್ಲ ವಿದ್ಯೆಗಳಲ್ಲಿಯೂ ಶ್ರೇಷ್ಠವಾದ ಬ್ರಹ್ಮವಿದ್ಯೆಯನ್ನು ಉಪದೇಶಿಸಿದನು. ಆತನಾದರೂ ಅಂಗಿರನೆಂಬ ಮುನಿಗೆ, ಅಂಗಿರನು ಭರದ್ವಾಜರ ಮಗ ಸತ್ಯವಹನೆಂಬನಿಗೆ ಆ ವಿದ್ಯೆಯನ್ನು ಉಪದೇಶಿಸಿದನು. ಶುನಕರ ಮಗ ಪ್ರತಿವರುಷವೂ ಯಜ್ಞ ಮಾಡುತ್ತಿದ್ದ ಮಹಾಶಾಲನೆಂಬುವನು ಯಾವುದನ್ನು ತಿಳಿದರೆ ಕರ್ಮದೇವತಾದಿ ಎಲ್ಲವೂ ತಿಳಿದಂತಾಗುವದು, ಯಾವ ಜ್ಞಾನವು ಮೋಕ್ಷಕ್ಕೆ ಸಾಧನವಾಗುವದು, ಅದನ್ನು ತಿಳಿಸಬೇಕೆಂದು ಅಂಗಿರರನ್ನು ಪ್ರಾರ್ಥಿಸಲು ಆ ಅಂಗಿರರು ಶೌನಕ ಮಹಾಶಾಲರಿಗೆ ಮೋಕ್ಷಸಾಧನವಾದ ಬ್ರಹ್ಮಜ್ಞಾನವನ್ನು ಉಪದೇಶಿಸಿದರು. ಬ್ರಹ್ಮಸ್ವರೂಪವನ್ನು ವಿವರಿಸುವ ಸಂದರ್ಭದಲ್ಲಿ ಬಂದ ವಾಕ್ಯವಿದು.

***ವಿಷ್ಣುತತ್ವವಿನಿರ್ಣಯದಲ್ಲಿ* ಈ ವಾಕ್ಯಕ್ಕೆ ಹಿನ್ನೆಲೆ:–** ಜೀವೇಶಭೇದವು ಪರಮಾರ್ಥತಃ ಸತ್ಯವಾಗಿಲ್ಲ, ಅದು ಕೇವಲ ಜಗತ್ತಿನ ವ್ಯವಹಾರಕ್ಕಾಗಿ ಸತ್ಯವೆಂದು ಹೇಳಬೇಕು. ಪಾರಮಾರ್ಥಿಕವಾಗಿ ಸತ್ಯವಾಗಿರುವವನು ಬ್ರಹ್ಮನೊಬ್ಬನೇ, ಜೀವನು ಮುಕ್ತಿಯಲ್ಲಿ ಬ್ರಹ್ಮನೇ ಆಗುವದರಿಂದ ಜೀವೇಶಭೇದವು ಮುಕ್ತಿಯಲ್ಲಿ ಇರುವದೇ ಇಲ್ಲ. ಆದಕ್ಕೇ ಸಂಸಾರಾವಸ್ಥೆಯಲ್ಲಿರುವ ಭೇದವು ಅನಿತ್ಯವು ಎಂದು ಮುಂತಾಗಿ ಪರವಾದಿಗಳು ಹೇಳುವದನ್ನು ಶ್ರೀಮದಾಚಾರ್ಯರು ವಿಮರ್ಶಿಸಿ ಪಂಚಭೇದಗಳೆಲ್ಲ ಪಾರಮಾರ್ಥಿಕ ಸತ್ಯ ಹಾಗೂ ನಿತ್ಯವಾಗಿವೆ ಎಂದು ಪ್ರಮಾಣಪುರಸ್ಸರವಾಗಿ ಸಿದ್ಧ ಮಾಡುವ ಸಂದರ್ಭದಲ್ಲಿ ಈ ಶ್ರುತಿಯನ್ನು ಉದಾಹರಿಸುತ್ತಿದ್ದಾರೆ. ಉದಾಹೃತ ಶ್ರುತಿಯು ಜೀವೇಶಭೇದವು ಮುಕ್ತಿಯಲ್ಲಿಯೂ ಇರುವದು, ಅದು ನಿತ್ಯ ಮತ್ತು ಪರಮಾರ್ಥತಃ ಸತ್ಯವೆಂದು ಸಾಧಿಸಿ ವಿಶೇಷತಃ ವಿಶಿಷ್ಟಾದ್ವೈತತತ್ವವನ್ನು ಖಂಡಿಸಿದೆ.

**ಅರ್ಥ :–** ಯಾರನ್ನಾಶ್ರಯಿಸಿಕೊಂಡು ಆಕಾಶ, ಪೃಥಿವಿ, ಅಂತರಿಕ್ಷ, ಪಂಚ–ಪ್ರಾಣಗಳು, ಚಕ್ಷುರಾದಿ ಇಂದ್ರಿಯಗಳು ಹಾಗೂ ಮನಸ್ಸು ಇವೆಲ್ಲ ಇರುವವೋ ಅಂಥ ಪರಮಾತ್ಮನನ್ನು ತಿಳಿದುಕೊಳ್ಳಬೇಕು. ಉಳಿದೆಲ್ಲ ವಿಷಯಗಳ ಜ್ಞಾನವು ಪ್ರಧಾನವಾದ ಜ್ಞಾನವಲ್ಲ. ಅದನ್ನು ಬಿಟ್ಟು ಬಿಡಬೇಕು. ಏಕೆಂದರೆ, ಯಾರ ಜ್ಞಾನವು ಪ್ರಧಾನವೆಂದು

Rarest Archiver

ಹೇಳಿರುತ್ತದೆಯೋ ಅಂಥ ಬ್ರಹ್ಮನು ಮುಕ್ತರಿಗೂ ಕೂಡ ಆಶ್ರಯನಾಗಿದ್ದಾನೆ. (ಅಂದಮೇಲೆ ಅವನ ಜ್ಞಾನವು ಸರ್ವಶ್ರೇಷ್ಠವೆಂದು ಬೇರೆ ಹೇಳಬೇಕಾಗಿಲ್ಲ).

**ವಿಶೇಷ ವಿಷಯಗಳು:**–ಪರಮಾತ್ಮನು ಮುಕ್ತರಿಗೆ ಸೇತುವೆ ಅಂದರೆ ಸೇತುವೆ–ಯಂತೆ **(ಅಮೃತಸ್ಯ ಮುಕ್ತಜಾತಸ್ಯ ಏಷಃ ಪರಮಾತ್ಮಾ ಸೇತುಃ ಇವ ಸೇತುಃ ಆಶ್ರಯಃ –** ***ಟೀಕಾ)*** ಎಂದರೆ ಆಶ್ರಯನು ಎಂದು ಈ ವಾಕ್ಯದಲ್ಲಿ ಹೇಳಿದೆ.

**ಓಂ ಹೇಯತ್ವಾವಚನಾಚ್ಚ ಓಂ (*ಬ್ರಹ್ಮಸೂತ್ರ ೧–೧–೮*)** ರಲ್ಲಿ ಜ್ಞಾನಕ್ಕೆ ಹಾಗೂ ಉಪಾಸನೆಗೆ ಉಳಿದಾವವೂ ವಿಷಯಗಳಲ್ಲ, ಅವು ಅಪ್ರಧಾನವಾದವುಗಳು, ಅವುಗಳನ್ನು ಪ್ರಧಾನವೆಂದು ಪರಿಗಣಿಸುವದನ್ನು ಬಿಡಬೇಕು. ಆದರೆ ಪರಮಾತ್ಮನನ್ನು ಮಾತ್ರ ಅಹೇಯನೆಂದು ಸರ್ವೋತ್ತಮನೆಂದು ಉಪಾಸಿಸಬೇಕು ಎಂದು ಹೇಳಿದ್ದಾರೆ. **ಓಂ ಮುಕ್ತೋಪಸೃಪ್ಯವ್ಯಪದೇಶಾತ್ ಓಂ *(ಬ್ರ. ಸೂ. ೧–೩–೧–೨)*** ಎಂಬ ಸೂತ್ರದಲ್ಲಿ ಹಾಗೂ **ಮುಕ್ತಾನಾಂ ಪರಮಾಗತಿಃ** ಎಂಬ *ವಿಷ್ಣುಸಹಸ್ರನಾಮದಲ್ಲಿಯ* ಶ್ಲೋಕದಲ್ಲಿ ಕೂಡ ಈ ಪರಮಪುರುಷನು ಮುಕ್ತರಿಗೆ ಆಶ್ರಯನು ಎಂದು ಹೇಳಿದೆ. ಆಶ್ರಯ ಮತ್ತು ಆಶ್ರಯವನ್ನು ಹೊಂದುವವರು ಇವರಲ್ಲಿ ಅಭೇದವಿದ್ದರೆ ಆಶ್ರಯ ಆಶ್ರಯಿಭಾವವು ಹೇಗೆ ಕೂಡುವದು ? ದೃಷ್ಟಾದೃಷ್ಟವಾದ ಸಮಸ್ತ ಪ್ರಪಂಚಕ್ಕೆ ಆಶ್ರಯನಾದ ಪರಮಾತ್ಮನು ಮುಕ್ತರಿಗೂ ಆಶ್ರಯನಾಗಿದ್ದಾನೆಂದು ಹೇಳಿರುವದರಿಂದ ಭೇದವು ವ್ಯಾವಹಾರಿಕ ಸತ್ಯವಲ್ಲ, ಅದು ಪಾರಮಾರ್ಥಿಕವಾಗಿ ಸತ್ಯವಾಗಿದೆ. ಮುಕ್ತಿಯಲ್ಲಿಯೂ ಕೂಡ ಭೇದ ಪಾರಮಾರ್ಥಿಕ ಸತ್ಯವೆಂದು ಉದಾಹೃತ ಶ್ರುತಿಯಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

***ಶ್ರುತ್ಯರ್ಥಷಟ್ಪದಿಯಲ್ಲಿ*** ಈ ವಾಕ್ಯದ ಅರ್ಥವು ಹೀಗೆ:–

*ದಿವವು ಭೂಮಿಯು ಅಂತರಿಕ್ಷವು*
*ವಿವಿಧ ವಾಯುಗಳೆಲ್ಲ ಮನದೊಡೆ*
*ವಿವಿಧವಾಗಿಹ ಇಂದ್ರಿಯಂಗಳಿಗಿಂಬು ಆರಿಹನು,*
*ಅವನ ತಿಳಿವುದು ತೊರೆಯುತನ್ಯವ–*
*ನಿವನ ಮುಕುತರ ಸೇತುವೆಂಬರು*
*ಇವನು ನಿರುತವು ಸರುವಕುತ್ತಮನೆಂದಿತಾಥರ್ವ.* ॥

**೬೯. ಅಕ್ಷಣ್ವಂತಃ ಕರ್ಣವಂತಃ ಸಖಾಯಃ ಮನೋಜವೇಷ್ವಸಮಾ ಬಭೂವುಃ । ಆದಘ್ನಾಸ ಉಪಕಕ್ಷಾಸ ಉ ತ್ವೇ ಹ್ರದಾ ಇವ ಸ್ನಾತ್ವಾ ಉ ತ್ವೇ ದದೃಶ್ರೇ ॥** *–ಋಕ್ಸಂಹಿತಾ ೮–೨–೨೪, ೧೦–೭೧–೭; ನಾರಾಯಣಪೂರ್ವತಾಪನೀಯೋಪನಿಷತ್ ೪–೯* ( *ಉಪನಿಷದ್ವಾಕ್ಯಕೋಷಃ* ದ ಪ್ರಕಾರ).

Rarest Archiver

**ಅನ್ವಯಃ :- (ಪ್ರಾಪ್ತಾಕ್ಷಿಕರ್ಣಫಲತ್ವಾತ್) ಅಕ್ಷಣ್ವಂತಃ (ಅಕ್ಷಿಮಂತಃ) ಕರ್ಣವಂತಃ ಚ (ಮುಕ್ತಾಃ) ಸಖಾಯಃ (ಪರಸ್ಪರಂ ಪ್ರೀತಿಯುಕ್ತಾಃ) ಮನೋಜವೇಷು (ಪ್ರಜ್ಞಾದಿಗುಣೇಷು) ಅಸಮಾಃ (ತಾರತಮ್ಯೋಪೇತಾಃ) ಬಭೂವುಃ । (ತತ್ರ) ತ್ವೇ (ಕೇಚಿತ್) ಆದಘ್ನಾಸ (ಆದಘ್ನಾಃ, ಬಹುಪ್ರಮಾಣಕ್ಷೀರಾಬ್ಧಿಮಂತಃ ತತ್ಕ್ರೀಡಾಪರಾಃ)। ತ್ವೇ ಉಪಕಕ್ಷಾಸ (ಉಪಕಕ್ಷಾಃ ಕಕ್ಷಸ್ಯ ವನಸ್ಯ) ಉಪ (ಸಮೀಪೇ) ಉ (ಏವ) (ವರ್ತಮಾನಾಃ ವನಕ್ರೀಡಾರತಾಃ)। ತ್ವೇ ಸ್ನಾತ್ವಾ (ಸ್ನಾತವ್ಯಾಃ) ಹ್ರದಾ ಇವ (ಗಂಭೀರಾಃ) (ಪರಮೇಶ್ವರಂ) ಉ (ಏವ) ದದೃಶ್ರೇ (ದದೃಶಿರೇ) ॥**

**ಅರ್ಥ :-** (ಈ ಶ್ರುತಿಯು ಮುಕ್ತರ ವರ್ಣನೆಯನ್ನು ಮಾಡುವದು)

ಮುಕ್ತಿಯಲ್ಲಿ ಪರಮಾತ್ಮನ ದರ್ಶನ ಹಾಗೂ ಆತನ ಗುಣಕಥಾಶ್ರವಣಗಳಿಂದ ಮುಕ್ತರು ತಮ್ಮ ಕಣ್ಣು ಹಾಗೂ ಕಿವಿಗಳ ಸಾರ್ಥಕತೆಯನ್ನು ಪಡೆದುಕೊಂಡಂಥ-ವರಾಗಿ, ಪರಸ್ಪರ ಅಸೂಯಾದಿಗಳಿಲ್ಲದೆ ಪ್ರೀತಿಯುಳ್ಳವರಾಗಿ, ತಮ್ಮ ಜ್ಞಾನಾದಿ-ಗುಣಗಳ ವಿಷಯದಲ್ಲಿ ತಾರತಮ್ಯ ಉಳ್ಳಂಥವರಾಗಿರುವರು. ಅಲ್ಲಿ ಕೆಲ ಮುಕ್ತರು ವಿಶಾಲವಾದ ಕ್ಷೀರಸಮುದ್ರದಲ್ಲಿ ಕ್ರೀಡೆ ಮಾಡುವರು. ಇನ್ನು ಕೆಲ ಮುಕ್ತರು ವನದ ಸಮೀಪದಲ್ಲಿದ್ದು ಅಲ್ಲಿ ವನಕ್ರೀಡೆ ಮಾಡುತ್ತಿರುವರು. ಇನ್ನು ಕೆಲ ಮುಕ್ತರು ಸ್ನಾನ ಮಾಡುವರು. ಕೆಲ ಮುಕ್ತರು ಗಂಭೀರರಾಗಿರುವರು, ಕೆಲವರು ಪರಮೇಶ್ವರನನ್ನೇ ನೋಡುತ್ತಿರುವರು.

**ವಿಶೇಷ ವಿಷಯಗಳು:-**

i. ಈ ಶ್ರುತಿವಾಕ್ಯದಿಂದ ಮುಕ್ತಿಯಲ್ಲಿ ಮುಕ್ತ-ಪರಮಾತ್ಮ ಭೇದವೂ ಹಾಗೂ ಮುಕ್ತರಲ್ಲಿ ಪರಸ್ಪರ ತಾರತಮ್ಯವಿರುವದೂ ಸ್ಪಷ್ಟವಾಗುವದು. ಮುಕ್ತರು ಬೇರೆ ಬೇರೆ ಕ್ರಿಯೆಗಳಲ್ಲಿ ತೊಡಗಿರುವರೆಂದು ಹೇಳಿದ್ದರಿಂದ ಅವರಲ್ಲಿ ಭೇದವಿದೆ-ಯೆಂದು ಹೇಳಿದಂತಾಯಿತು. ಅವರು ಅಸಮರು ಅಂದರೆ ತಾರತಮ್ಯವುಳ್ಳವರು ಎಂದು ಸ್ಪಷ್ಟವಾಗಿಯೇ ಹೇಳಿದ್ದಾರೆ.

ii. **ಅಕ್ಷಣ್ವಂತಃ ಕರ್ಣವಂತಃ - ಶ್ರುತ್ವಾ ವಿಷ್ಣುಂ ಕರ್ಣಫಲಂ ಪ್ರಾಪ್ತಾಃ** ಎಂಬ ಆಗಮ(?)ಕ್ಕನುಗುಣವಾಗಿ ಈ ಪದದ ಅರ್ಥವನ್ನು ಶ್ರೀ ಟೀಕಾಕೃತ್ಪಾದರು ವಿವರಿಸಿದ್ದಾರೆಂದು ಶ್ರೀ ರಾಯರು *ಭಾವದೀಪದಲ್ಲಿ* ತಿಳಿಸಿದ್ದಾರೆ. ಕಣ್ಣುಗಳು ವಿಷ್ಣುವಿನ ದರುಶನ ಮಾಡಿಕೊಂಡಾಗಲೇ ಸಾರ್ಥಕತೆಯನ್ನು ಪಡೆಯುವವು. ಕಿವಿಗಳು ವಿಷ್ಣುವಿನ ಗುಣಕಥಾಶ್ರವಣ ಮಾಡಿದಾಗಲೇ ತಮ್ಮ ಶ್ರವಣಶಕ್ತಿಯು ಸಾರ್ಥಕವಾಯಿತೆಂದು ತಿಳಿಯುವವು. ಆಗಲೇ ಕಣ್ಣು ಕಣ್ಣೆಂದೆನಿಸುವವು ಹಾಗೂ ಕಿವಿಗಳು ಕಿವಿ

Rarest Archiver

ಯೆಂದೆನಿಸುವವು. *ಶ್ರೀಮದ್ಭಾಗವತದಲ್ಲಿ* ಸರ್ವ ಕರಣಗಳೂ ಭಗವದ್ವಿಷಯಕ-ವಾದರೇನೇ ಸಾರ್ಥಕತೆಯನ್ನು ಹೊಂದುವವು ಎಂದು ಬಹಳ ಮಾರ್ಮಿಕವಾಗಿ ಪ್ರತಿಪಾದಿಸಲಾಗಿದೆ. **ಬಿಲೇ ಬತೋರುಕ್ರಮವಿಕ್ರಮಾನ್ ಯೇ ನ ಶೃಣ್ವತಃ ಕರ್ಣಪುಟೇ ನರಸ್ಯ । ಜಿಹ್ವಾಽಸತೀ ದಾರ್ದುರಿಕೇವ ಸೂತ ನ ಚೇತ್ಪ್ರಗಾಯು-ತ್ಯುರುಗಾಯಗಾಥಾಮ್ ॥ ಭಾರಃ ಪರಂ ಪಟ್ಟಕಿರೀಟಜುಷ್ಟಮಪ್ಯುತ್ತಮಾಂಗಂ ನ ನಮೇನ್ಮುಕುಂದಮ್ । ಶಾವೌ ಕರೌ ನೋ ಕುರುತಃ ಸಪರ್ಯಾಂ ಹರೇರ್ಲಸ-ತ್ಕಾಂಚನಕಂಕಣೌ ವಾ ॥ ಬರ್ಹಾಯಿತೇ ತೇ ನಯನೇ ನರಾಣಾಂ ಲಿಂಗಾನಿ ವಿಷ್ಣೋರ್ನ ನಿರೀಕ್ಷತೋ ಯೇ । ಪಾದೌ ನೃಣಾಂ ತೌ ದ್ರುಮಜನ್ಮಭಾಜೌ ಕ್ಷೇತ್ರಾಣಿ ನಾನುವ್ರಜತೋ ಹರೇರ್ಯೌ ॥ ೨-೩-೨೦,೨೧,೨೨.** ಪರಮಾತ್ಮನ ಲೀಲೆಗಳನ್ನು ಕೇಳದ ಕಿವಿಗಳು ಕೇವಲ ಹೊದರುಗಳಂತೆ, ಪರಮಾತ್ಮನ ಗುಣಗಳನ್ನು ಗಾನಮಾಡದ ಬಾಯಿ ಬಾಯಿಯೇ ಅಲ್ಲ, ಅದು ಒದರುವ ಕಪ್ಪೆಯ ಬಾಯಿಯೇ ಸರಿ ! ಶಿರಸ್ಸು ಪರಮಾತ್ಮನ ವಿಗ್ರಹವನ್ನು ಕಂಡು ಬಾಗದಿದ್ದರೆ ಅದು ದೇಹದ ಮೇಲೇ ಇಟ್ಟ ಬಂಡೆಗಲ್ಲೇ ಸರಿ ! ಪರಮಾತ್ಮನ ಪೂಜೆ ಮಾಡದ ಕೈಗಳು ಶವದ ಕೈಗಳಿಗೆ ಸಮಾನ ! ವಿಷ್ಣುವಿನ ಮಂಗಲಕರವಾದ ರೂಪವನ್ನು ನೋಡದ ಕಣ್ಣುಗಳು ನವಿಲುಗರಿಯ ಕಣ್ಣುಗಳೇ ಸರಿ ! ಪರಮಾತ್ಮನ ಸನ್ನಿಧಾನದ ತೀರ್ಥಕ್ಷೇತ್ರಗಳಿಗೆ ಹೋಗದ ಕಾಲುಗಳು ಕಾಲುಗಳೇ ಅಲ್ಲ, ಅವು ಮರದ ಬಡ್ಡೆಗಳು ! – ಹೀಗೆ ಎಲ್ಲ ಕರಣಗಳ ಸಾರ್ಥಕತೆಯಾಗುವದು ಅವು ಕೇವಲ ಪರಮಾತ್ಮನ ಸೇವೆಯಲ್ಲಿ ತೊಡಗಿದಾಗಲೇ ಎಂದು ಹೇಳಿ ಭಗವದ್ಭಕ್ತರು ನಿರಂತರವೂ ಶ್ರೀ ಹರಿಯ ಆರಾಧನೆಯಲ್ಲಿ ತೊಡಗಿರುವರು ಎಂದು ಹೇಳಿದ್ದಾರೆ. ಸಂಸಾರಾವಸ್ಥೆಯಲ್ಲಿಯೇ ಹೀಗಿರುವಾಗ ಮುಕ್ತರು ತಮ್ಮೆಲ್ಲ ಕರಣಗಳನ್ನು ಪರಮಾತ್ಮನ ಸೇವೆಗಾಗಿ ವಿನಿಯೋಗಿಸಿ ಅವುಗಳ ಸಾರ್ಥಕತೆಯನ್ನು ಪಡೆಯುತ್ತಿರುವರೆಂಬುದನ್ನು ಪ್ರತ್ಯೇಕವಾಗಿ ಹೇಳ-ಬೇಕಾಗಿಲ್ಲ. ಈ ವಿಷಯವು ಉಪನಿಷದ್ಭಾಷ್ಯದಿಂದ ಸ್ಪಷ್ಟವಾಗುವದು. *ಐತರೇ-ಯೋಪನಿಷತ್ತಿನ ಭಾಷ್ಯ* ದಲ್ಲಿ ಶ್ರೀಮದಾಚಾರ್ಯರು **ಅಕ್ಷಣ್ವಂತಃ ಕರ್ಣವಂತಃ ಸಖಾಯೋ ......**ಇತ್ಯಾದಿ ಆಗಮದ ವ್ಯಾಖ್ಯಾನವನ್ನು **ಶ್ರುತ್ವಾ ವಿಷ್ಣುಂ ಕರ್ಣ-ಫಲಂ ಪ್ರಾಪ್ತತ್ವಾತ್ಕರ್ಣಸಂಯುತಾಃ । ಅಕ್ಷಣ್ವಂತೋ ದರ್ಶನಾಚ್ಚ ವಿಷ್ಣೋರ್ಮುಕ್ತಾಸ್ತು ಯೇ ಗಣಾಃ ॥ ತಾರತಮ್ಯಂ ಚ ತೇಷಾಂ ಚ ಶ್ರುತಾ-ವುದಿತಮಂಜಸಾ । ಕ್ಷೀರಸಾಗರದಧ್ನಾಸ್ತು ಕೇಚಿತ್ತಿಷ್ಠಂತಿ ಮುಕ್ತಿಗಾಃ ॥ ಉಪಸ್ಥಿತಾ ಬ್ರಹ್ಮವನಂ ಕೇಚಿದಶ್ವತ್ಥಮಂಡಲಮ್ । ಐರೇ ಹ್ರದೇ ಕೇಚಿದಪಿ ದೇವಾ ಏವ ಸದಾ ಹರಿಮ್ । ನಾಗಭೋಗಾಶಯಂ ಮುಕ್ತಾಃ ದದೃಶ್ರೇಽಧಿಕಮೋದಿನಃ ॥ ಸಾಗರಾದಿಸ್ಥಿತಾ ವಿಷ್ಣುಂ ಪಶ್ಯಂತಿ ಕ್ವಚಿದೇವ ಹಿ ॥** ಎಂದು ಕೊಟ್ಟಿದ್ದಾರೆಂದು ಶ್ರೀ ರಾಯರು *ಭಾವದೀಪ* ದಲ್ಲಿ ಸ್ಪಷ್ಟಪಡಿಸಿದ್ದಾರೆ. *ಸರ್ವಮೂಲಮ್* ದ ಪ್ರಥಮ

Rarest Archiver

ಸಂಪುಟ ದಲ್ಲಿ (ಮಾಧ್ವ ಮಹಾಮಂಡಲದ ೧೯೬೯) ಪ್ರಕಾಶಿತವಾದ ಐತರೇಯೋಪನಿಷದ್ಭಾಷ್ಯದಲ್ಲಿ ಈ ಮೇಲಿನ ವಾಕ್ಯಗಳ ಕೊನೆಗೆ **ಇತಿ ಚ** ***ಬ್ರಹ್ಮಸಾರೇ*** ಎಂದಿದೆ. ಈ ***ಬ್ರಹ್ಮಸಾರ(?)*** ವು ನಮಗೆ ಉಪಲಬ್ಧವಾಗಿಲ್ಲ.

{ ಈ ಸಂದರ್ಭದಲ್ಲಿ ಶ್ರೀ ಶ್ರೀನಿವಾಸತೀರ್ಥರ ಟಿಪ್ಪಣಿಯಲ್ಲಿಯ ವಾಕ್ಯವನ್ನು ಗಮನಿಸಬೇಕು; **ಅಕ್ಷಣ್ವಂತಃ ಇತಿ ವಾಕ್ಯಸ್ಯ ಮುಕ್ತವಿಷಯತ್ವೇನ** ***ತೈತ್ತಿರೀಯಭಾಷ್ಯೋ-*** **ದಾಹೃತಾಗಮೇ ವ್ಯಾಖ್ಯಾನಾತ್ ಇತ್ಯರ್ಥಃ । ಶ್ರುತ್ವಾ ವಿಷ್ಣುಂ .... ಕ್ವಚಿದೇವ ಹಿ ॥ ಇತ್ಯೇವಮೇತಚ್ಛ್ರುತಿವ್ಯಾಖ್ಯಾನರೂಪಾಽಗಮೇ ಬಹುಶೋ ಮುಕ್ತಪರತ್ವಶ್ರವಣಾದಿತಿಭಾವಃ ॥** ಈ ರೀತಿಯ ವಾಕ್ಯವು ಶ್ರೀಮನ್ಮಾಧ್ವರಾದ್ಧಾಂತಸಂವರ್ಧಿನೀಸಭಾದಿಂದ ೧೯೬೮ರಲ್ಲಿ ಪ್ರಕಟವಾದ ಐದು ಟಿಪ್ಪಣಿಗಳ ಪ್ರಕಾಶನದಲ್ಲಿಯೂ ಹಾಗೂ ೨೦೦೧ರಲ್ಲಿ ಪೂರ್ಣಪ್ರಜ್ಞ ಸಂಶೋಧನಮಂದಿರಮ್ ದಿಂದ ಪ್ರಕಟಿತವಾದ ಸುಧಾರಿತ ಎರಡನೆಯ ಆವೃತ್ತಿಯಲ್ಲಿಯೂ ಕೂಡ ಇದೇ ರೀತಿ ಪ್ರಕಾಶಿತವಾಗಿದೆ. ಈ ವಾಕ್ಯದಿಂದ ಈ ಶ್ರುತಿಯ ವ್ಯಾಖ್ಯಾನವನ್ನು ಶ್ರೀಮದಾಚಾರ್ಯರು *ತೈತ್ತಿರೀಯಭಾಷ್ಯ*ದಲ್ಲಿ ಕೊಟ್ಟಿದ್ದಾರೆಂಬ ಅರ್ಥವು ಬರುವದು. ಆದರೆ *ತೈತ್ತಿರೀಯಭಾಷ್ಯ*ದಲ್ಲಿ ಈ ಶ್ರುತಿಯ ಉಲ್ಲೇಖ ಕಂಡುಬರುವದಿಲ್ಲ. ***ಉಪನಿಷದ್ಭಾಷ್ಯಮ್*** ಎಂಬ ಪೂರ್ಣಪ್ರಜ್ಞ-ಖ್‌ಸಂಶೋಧನಮಂದಿರದ ೧೯೮೭ರ ಪ್ರಕಟನೆಯನ್ನು ನೋಡಬಹುದು. ಟಿಪ್ಪಣಿಯಲ್ಲಿ ಐತರೇ-ಯೋಪನಿಷದ್ಭಾಷ್ಯೋದಾಹೃತಾಗಮೇ ಎಂದು ಪ್ರಿಂಟ್ ಆಗಬೇಕಾಗಿತ್ತೇ ಎಂಬ ಶಂಕೆ.

ಇಲ್ಲಿ ಇನ್ನೊಂದು ವಿಷಯವೆಂದರೆ **ಅಸ್ಯ ಮುಕ್ತವಿಷಯತ್ವಂ ಚೇತಿ** ಎಂಬ ***ಟೀಕಾ*** ಪ್ರತೀಕವನ್ನು ಹಿಡಿದು ಪ್ರಾರಂಭಿಸಿದ ಟಿಪ್ಪಣಿಯಲ್ಲಿ ಟಿಪ್ಪಣೀಕಾರರು ಮೊದಲು ಈ ಶ್ರುತಿ-ವಾಕ್ಯಕ್ಕೆ ಮುಕ್ತವಿಷಯತ್ವಪರವಾದ ವ್ಯಾಖ್ಯಾನವನ್ನು ಶ್ರೀಮದಾಚಾರ್ಯರು ಮಾಡಿದ್ದಾರೆಂದು ಹೇಳಿ ಕೊನೆಗೆ ***ಬಹುಶಃ*** **ಮುಕ್ತಪರತ್ವಶ್ರವಣಾತ್** ಎಂದು ಹೇಳಿದ್ದಾರೆ. ಇಲ್ಲಿಯ **ಬಹುಶಃ** ಎಂಬ ಪದವು ಹೆಚ್ಚಿನ ಮಟ್ಟಿಗೆ ಎಂಬ ಅರ್ಥ ಸೂಚಿಸದೆ ಬಹಳ ಎಂಬರ್ಥವನ್ನು ಸೂಚಿಸುತ್ತಿದೆ ಎಂದು ತಿಳಿಯಬೇಕು).

**iii. ಸಖಾಯಃ –** ಮುಕ್ತಿಯಲ್ಲಿ ಮುಕ್ತರು ತಾರತಮ್ಯೋಪೇತರಾಗಿದ್ದರೂ ಕೂಡ ಯಾವ ವಿಷಯಲಂಪಟವಿಲ್ಲದವರಾಗಿ ಪರಸ್ಪರ ದ್ವೇಷಾಸೂಯೆಗಳಿಲ್ಲದೆ ಪರ-ಸ್ಪರ ಪ್ರೀತಿಯುಳ್ಳವರಾಗಿರುತ್ತಾರೆ ಎಂದು ಈ ವಿಶೇಷಣವು ಸೂಚಿಸುವದು. ಮನೋಧರ್ಮಗಳಲ್ಲಿ ಅಸಮರಾಗಿದ್ದರೂ ಕೂಡ ಮುಕ್ತರಿಗೆ ಸಂಸಾರಾವಸ್ಥೆಯ-ಲ್ಲಿರುವಂತೆ ದ್ವೇಷ ಈರ್ಷ್ಯೆಗಳು ಇರುವದಿಲ್ಲ. ಅವರಿಗೆ ಜಡ ಮನಸ್ಸು ಇರುವ-ದಿಲ್ಲ. ಸ್ವರೂಪಭೂತವಾದ ಮನಸ್ಸಿಗೆ–ಸಾಕ್ಷಿಗೆ_ ಈ ವಿಕಾರಗಳು ಇರುವದಿಲ್ಲ. ಈ ಸಂದರ್ಭದಲ್ಲಿ ಏಕಾದಶಸ್ಕಂಧ ಭಾಗವತದ ಪ್ರಮಾಣವನ್ನು ಶ್ರೀ ಶ್ರೀನಿವಾ-ಸತೀರ್ಥರು ಕೊಟ್ಟು ವಿವರಿಸಿದ್ದಾರೆ. ಮುಕ್ತರಿಗೆ ಈ ಪ್ರಕಾರದ ವಿಕಾರಗಳಿರುವ-ದಿಲ್ಲವೆಂಬುದನ್ನು **ಓಂ ಅಕ್ಷರಧಿಯಾಂ ತು ಅವಿರೋಧಃ ಸಾಮಾನ್ಯತದ್ಭಾ-ವಾಭ್ಯಾಂ ಔಪಸದವತ್ ತದುಕ್ತಮ್ ಓಂ (ಬ್ರಹ್ಮಸೂತ್ರ ೩-೩-೨೦)** ಎಂಬ ಸೂತ್ರ ಸ್ಪಷ್ಟಪಡಿಸುತ್ತದೆಂದು ಶ್ರೀನಿವಾಸತೀರ್ಥರು ಸೂಚಿಸಿದ್ದಾರೆ. ಬ್ರಹ್ಮಜ್ಞಾನ-

Rarest Archiver

ವಾದವರು ತಾರತಮ್ಯೋಪೇತರಾಗಿದ್ದರೂ ಕೂಡ ವಿಷಯಲಂಪಟತ್ವವಿರದಿರುವ-ದರಿಂದ ಪರಸ್ಪರವಿರೋಧಭಾವನೆಯುಳ್ಳವರಾಗಿರುವದಿಲ್ಲ. ಅವರು ಮಾತ್ಸ-ರ್ಯಾದಿದೋಷಾಭಾವದವರೂ ಬ್ರಹ್ಮಜ್ಞಾನ ಉಳ್ಳವರೂ ಆಗಿರುವರು. ಸಚ್ಛಿಷ್ಯನು ತನಗಿಂತ ಉತ್ತಮನಾಗಿರುವ ಗುರುವಿನ ಬಗ್ಗೆ ಮಾತ್ಸರ್ಯವುಳ್ಳವನಾಗಿರುವದಿಲ್ಲವಷ್ಟೆ ! ಇದೇ ವಿಷಯವನ್ನೇ **ನಾನಾವಿಧಾ ದೇವಸಂಘಾ ವಿಮುಕ್ತೌ** ಇತ್ಯಾದಿ ಶ್ರುತಿಯೂ ಕೂಡ ಹೇಳುವದೆಂದು *ತಂತ್ರದೀಪಿಕಾದಲ್ಲಿ* ಶ್ರೀರಾಯರು ಸೂತ್ರಾರ್ಥವನ್ನು ವಿಶಿಷ್ಟವಾದ ರೀತಿಯಲ್ಲಿ ಹೇಳುತ್ತ ವಿವರಿಸಿದ್ದಾರೆ.

**iv. ಅಸಮಾಃ** ಎಂದರೆ ತಾರತಮ್ಯೋಪೇತರು ಎಂದೇ ಏಕೆ ಅರ್ಥ ಮಾಡಬೇಕು ಎಂಬುದನ್ನು ಶ್ರೀ ವ್ಯಾಸತತ್ವಜ್ಞತೀರ್ಥರು ತಮ್ಮ ಟಿಪ್ಪಣಿಯಲ್ಲಿ ಬಲು ಸ್ವಾರಸ್ಯ-ವಾಗಿ ಹೀಗೆ ವಿವರಿಸಿದ್ದಾರೆ; **ನನು ಏನ ಅಕಾರವಾಚ್ಯೇನ ಬ್ರಹ್ಮಣಾ ಸಮಾಃ ಇತಿ ಕಿಂ ನ ಉಚ್ಯತೇ ಇತಿ ಚೇತ್ ನ । ನಞ್ (ಉಪ)ಪದಪ್ರಕೃತಿಸ್ವರಾನುಪಪತ್ತೇಃ ॥ ಅಸಮಾಃ** ಪದವನ್ನು ಅಕಾರವಾಚ್ಯನಾದ ಪರಮಾತ್ಮನಿಗೆ ಸಮರಾದವರು ಮುಕ್ತ-ರೆಂದು ಏಕೆ ಅರ್ಥವಿಸಬಾರದೆಂದು ಶಂಕೆ ಮಾಡಿಕೊಂಡು ನಿಷೇಧಪರವಾದ **ಅ ಪದಕ್ಕೆ** ಪ್ರಕೃತಿಸ್ವರಗಳು ಕೂಡುವದಿಲ್ಲ, ಆದ ಕಾರಣ **ಅಸಮಾಃ** ಪದವನ್ನು ಹಾಗೆ ಬಿಡಿಸಿ ಅರ್ಥ ಹೇಳಬಾರದು, **ನ ಸಮಾಃ ಅಸಮಾಃ** ಎಂದೇ ಬಿಡಿಸಬೇಕು, ಅಲ್ಲದೆ, ಹೀಗೆ ಬಿಡಿಸದೆಯೆ ಪರಮಾತ್ಮನಿಗೆ ಸಮರಾದವರು ಎಂದು ಹೇಳಿದರೆ **ತ್ವೇ ಆದಘ್ನಾಸ, ತ್ವೇ ಉಪಕಕ್ಷಾಸ, ತ್ವೇ ಸ್ನಾತವ್ಯಾ ಹ್ರದಾ ಇವ, ದದೃಶಿರೇ** ಎಂದು ಮುಂದೆ ಹೇಳಿದುದಕ್ಕೆ ವಿರುದ್ಧವಾಗುವದು. ಏಕೆಂದರೆ ಮುಂದೆ ಹೇಳಿದ ಪದಗಳು ಬೇರೆ ಬೇರೆ ಮುಕ್ತರು ಬೇರೆ ಬೇರೆ ಕಾರ್ಯಗಳಲ್ಲಿ ತೊಡಗಿದ್ದಾರೆಂದು ವರ್ಣನೆ ಮಾಡುವವು ಎಂದು ವಿವರಿಸಿದ್ದಾರೆ.

**v. ಆದಘ್ನಾಸ** ಈ ಪದದ ನಿರ್ವಚನವನ್ನು ಟಿಪ್ಪಣಿಗಳಲ್ಲಿ ಬಲು ವಿಸ್ತಾರವಾಗಿ ಕೊಟ್ಟಿದ್ದಾರೆ. ಶ್ರೀ ರಾಯರ ಭಾವದೀಪದಲ್ಲಿ ಇದಕ್ಕೆ ವ್ಯಾಕರಣದ ನಿಯಮಗ-ಳಿಂದ ಕೂಡಿದ ಮಿತವಾದ ವಿವರಣೆ ಇದೆ.

ಇಲ್ಲಿ ಶ್ರೀ ಶ್ರೀನಿವಾಸತೀರ್ಥರ ಟಿಪ್ಪಣಿಯಲ್ಲಿ ವಿಸ್ತಾರವಾದ ವಿವರಣೆ ಇದೆ. **ಪ್ರಮಾಣೇ ದ್ವಯ ಸಚ್ ದಘ್ನಞ್ ಮಾತ್ರಚಃ** ( ***ಅಷ್ಟಾಧ್ಯಾಯೀ ಸೂತ್ರ ೫-೨-೩೭*** ) ಎಂಬ ಪಾಣಿನೀಸೂತ್ರದ ಪ್ರಕಾರ **ದಘ್ನಚ್** ಎಂಬುದು ತದ್ಧಿತ ಪ್ರತ್ಯಯವು. **ಆ** ಎಂಬ ಉಪಸರ್ಗವನ್ನು ತದ್ಧಿತಪ್ರತ್ಯಯಕ್ಕೆ ಹಚ್ಚಲು ಬರುವದಿಲ್ಲ; ಇಲ್ಲಿ ಹೇಗೆ ಹಚ್ಚಿದರು ಎಂದು ಶಂಕೆ ಮಾಡಿಕೊಂಡು ದಘ್ನ ಇದು ಅಕಾರಾಂತದ ಪ್ರಮಾಣ, ಅಳತೆ ಎಂಬ ಅರ್ಥದ ಶಬ್ದವು. ದಘ್ನಚ್ ಎಂಬ ಪಾಣಿನೀ ಸೂತ್ರದಲ್ಲಿ

Rarest Archiver

ಹೇಳಿದ ಮತ್ವರ್ಥೀಯವಾದ ತದ್ಧಿತಪ್ರತ್ಯಯವಲ್ಲ. ದಘ್ನವೆಂಬ ಅಕಾರಾಂತ ಪದವೂ ಇದೆ ಎಂದು ಸಂಪ್ರದಾಯ. ಆ ಪದವು ಸಮ್ಯಕ್ ಎಂದರೆ ಬಹಳ ಎಂಬ ಅರ್ಥದಲ್ಲಿದೆ. ಆ + ದಘ್ನ = ಬಹಳ ಪ್ರಮಾಣವೆಂದಾಯಿತು. **ಅರ್ಶ ಆದಿಭ್ಯಃ ಅಚ್ ( ೫–೨–೧೨೭)** ಎಂಬ ಸೂತ್ರದಂತೆ ಮತ್ವರ್ಥೀಯ ಅಚ್ ತದ್ಧಿತ ಪ್ರತ್ಯಯವನ್ನು ಹಚ್ಚಿ ಬಹುಪ್ರಮಾಣವುಳ್ಳದ್ದು (ಬಹುಪ್ರಮಾಣಂ ಪರಿಮಾಣಂ ಅಸ್ಯ ಇತಿ ಆದಘ್ನಮ್) ಎಂಬ ಅರ್ಥದ ಪದವಾಯಿತು. ಪ್ರಕೃತ (ಮುಕ್ತರ ವಿಷಯ)ದಲ್ಲಿಬಹಳ ಪ್ರಮಾಣವುಳ್ಳದ್ದೆಂದರೆ ಕ್ಷೀರಸಮುದ್ರವೆಂದಾಗುವದು. ಆದರೆ ಅಷ್ಟೇ ಹೇಳಿದರೆ ಇಲ್ಲಿ ಅಷ್ಟು ಸಮರ್ಪಕವಾಗುವದಿಲ್ಲವಾದ ಕಾರಣ ಇಲ್ಲಿ ಪುನಃ ಅಚ್ ಪ್ರತ್ಯಯವನ್ನು ಹಚ್ಚಿ ಆದಘ್ನಾಸ –ಆದಘ್ನಾಃ ಎಂದರೆ ಬಹುಪ್ರಮಾಣದ ಕ್ಷೀರಸಮುದ್ರವುಳ್ಳವರು, ಎಂದರೆ ಅಲ್ಲಿ ಕ್ರೀಡೆ ಮಾಡುವವರು ಎಂಬ ಅರ್ಥ ಲಭಿಸುವದು ಎಂದು ಶ್ರೀ ಶ್ರೀನಿವಾಸತೀರ್ಥರು ಶ್ರೀ ಟೀಕಾಕೃತ್ಪಾದರು ಕೊಟ್ಟ ಅರ್ಥಕ್ಕೆ ಸಮರ್ಥನೆಯ ವಿವರಣೆ ಕೊಟ್ಟಿದ್ದಾರೆ. ಶ್ರೀಮನ್ನ್ಯಾಯಸುಧಾದಲ್ಲಿ ಶ್ರೀಮತ್ ಟೀಕಾಕೃತ್ಪಾದರು **ತರ ತಮಶಬ್ದ ಇವ ದಘ್ನಶಬ್ದಃ ಅ ಪ್ರತ್ಯಯಃ ಅಪಿ ಅಸ್ತಿ**– ತರ ತಮ ಪದಗಳಂತೆ ದಘ್ನ ಪದವೂ ಕೂಡ ಅಕಾರಾಂತದ ಪದವಾಗಿದೆ ಎಂದು ಸ್ಪಷ್ಟಪಡಿಸಿದ್ದಾರೆಂದೂತಿಳಿಸಿದ್ದಾರೆ.

ಯಾಸ್ಕರ *ನಿರುಕ್ತ*ದಲ್ಲಿ ಋಗ್ವೇದದ ಈ ಮಂತ್ರದ ವ್ಯಾಖ್ಯೆ ಇದ್ದು ಶ್ರೀಮಟ್ಟೀಕಾಕೃತ್ಪಾದರು ಶ್ರೀಮದಾಚಾರ್ಯರ ಹಾರ್ದವನ್ನನುಸರಿಸಿ ಅಲ್ಲಿ ಹೇಳಿದ ವಿಷಯಗಳನ್ನೂ ಟೀಕೆಯಲ್ಲಿ ವಿಮರ್ಶಿಸಿದಂತೆ ತೋರುವದು.

ಅಂತು, ಈ ಶ್ರುತಿವಾಕ್ಯದ ಅರ್ಥವು ಶ್ರುತ್ಯರ್ಥಷಟ್ಪದಿ ಯಲ್ಲಿ ಹೀಗೆ :

*ಹರಿಯ ನೋಡುತ ನಯನಯುಗಲವು,*
*ಹರಿಯ ಸಂಸ್ತುತಿ ಕೇಳಿ ಕಿವಿಗಳು,*
*ಪರಮಧನ್ಯತೆ ಪಡೆಯೆ ಮುಕುತರು ವಿಗತಲಂಪಟರು,*
*ಪರಮಸತ್ಯದ ತಾರತಮ್ಯದಿ*
*ಅರಿಯರೀರ್ಷ್ಯಾದಿಗಳ ಮನದೊಳು*
*ನಿರುತ ಸಖ್ಯದ ಭಾವಯುತರಾಗಿಹರು ಮುಕುತಿಯೊಳು.* //

*ಪಾಲಗಡಲೊಳು ಕ್ರೀಡೆಗೈವರು,*
*ಭಾಳ ತರುಗಳ ವನದೊಳಾಟದಿ*
*ಭಾಳ ಹಿಗ್ಗಿನೊಳಿಹರು ಮುಕುತರು ತಮ್ಮ ಲೋಕದೊಳು,*
*ಆಳವಾಗಿಹ ಮಡುವಿನಂದದಿ*
*ಭಾಳ ಗಂಭೀರಾಂತರಂಗರು*
*ಭಾಳಮಜ್ಜನ ಗೈವರಮರೋತ್ತಮನ ನೋಡುವರು* //

Rarest Archiver

**೭೦. ಅಹಮಿತ್ಯೇವ ಯೋ ವೇದ್ಯಃ ಸ ಜೀವ ಇತಿ ಕೀರ್ತಿತಃ । ಸ ದುಃಖೀ ಸ ಸುಖೀ ಚೈವ ಸ ಪಾತ್ರಂ ಬಂಧಮೋಕ್ಷಯೋಃ ॥ –*ಪರಮಶ್ರುತಿಃ* (?)**

**ವಿಷ್ಣುತತ್ವವಿನಿರ್ಣಯದಲ್ಲಿ ಈ ವಾಕ್ಯಕ್ಕೆ ಹಿನ್ನೆಲೆ:–** ಈ ಹಿಂದೆ ವಿವರಿಸಿದ *ಬೃಹದಾರಣ್ಯಕೋಪನಿಷತ್ತಿನಲ್ಲಿಯ* ಮೈತ್ರೇಯೀ ಬ್ರಾಹ್ಮಣದ ವಾಕ್ಯಗಳಿಂದ ಐಕ್ಯವಾದಿಯನ್ನು ಕುರಿತು ಯದಾ ದ್ವೈತಸದ್ಭಾವಃ ತದಾ ಏವ ದರ್ಶನಾದಿಭೋಗಃ– ಯಾವಾಗ ಎರಡು ವಿಭಿನ್ನ ಚೇತನಗಳಿವೆಯೋ ಆಗ ಮಾತ್ರ ದರ್ಶನಾಘ್ರಾಣನಾದಿ– ಭೋಗವನ್ನು ಹೇಳಬಹುದು ಎಂಬ ವ್ಯತಿರೇಕವ್ಯಾಪ್ತಿಯನ್ನು (ಶ್ರೀನಿವಾಸತೀರ್ಥರ ಟಿಪ್ಪಣಿ) ಹೇಳಿ ಆ ಮೇಲೆ **ಯತ್ರತ್ವಸ್ಯ..**ಇತ್ಯಾದಿವಾಕ್ಯದಿಂದ ದ್ವೈತವಿರದಿದ್ದರೆ ದರ್ಶನಾಘ್ರಾಣನಸ್ಪರ್ಶನಾದಿ ಭೋಗವನ್ನು ಯಾರಿಗೂ ಹೇಳಲು ಬರುವದಿಲ್ಲ ಎಂದು ಆಪಾದನಾತ್ಮಕವಾದ ಅನಿಷ್ಟ ಪ್ರಸಂಗವನ್ನು ಹೇಳಿದರು. ಇದರ ಮೇಲೆ ಅದ್ವೈತಿಗಳು ಹೀಗೆ ಆಕ್ಷೇಪಿಸುತ್ತಾರೆ. ಆಪಾದನೆ ಮಾಡುವಾಗ ಅನಿಷ್ಟವನ್ನು ಆಪಾದಿಸಬೇಕೇ ಹೊರತು ಇಷ್ಟವಾದುದನ್ನಲ್ಲ. ಭೋಗವಿರದಿರು–ವದನ್ನು ಅನಿಷ್ಟಾಪಾದನೆಯೆಂದು ಏಕೆ ಹೇಳಬೇಕು, ಕಾರಣ ಹೀಗೆ ವಾಕ್ಯಗಳಿಗೆ ಆಪಾದನಾತ್ಮಕವಾಗಿ ಮಾಡಿದ ಅರ್ಥವು *ಪ್ರಸಂಗಾಭಾಸವು,* ನಿಜವಾಗಿಯೂ ಅನಿಷ್ಟಪ್ರಸಂಗವಲ್ಲ ಹೀಗೆ ಆಕ್ಷೇಪಿಸಿದರೆ ಶ್ರೀ ಟೀಕಾಕೃತ್ಪಾದರು ಈ ವಿಷಯವನ್ನು ಹೀಗೆ ವಿಶ್ಲೇಷಿಸುತ್ತಾರೆ. ಅನಿಷ್ಟವೆಂಬುದು ಎರಡು ಪ್ರಕಾರದ್ದಿರುವದು. ಒಂದು, ನಾವು ಪ್ರತಿಪಾದಿಸಿದುದಕ್ಕೆ ಪ್ರಮಾಣವಿಲ್ಲದಿರುವದು; ಇನ್ನೊಂದು– ಅಪ್ರಾಮಾಣಿಕವಾದುದರ ಸ್ವೀಕಾರವು. ಪ್ರಸ್ತುತ ವಿಷಯದಲ್ಲಿ ದರ್ಶನಸ್ಪರ್ಶನ–ಶ್ರವಣಾಘ್ರಾಣನಾದಿಭೋಗವು ಹಾಗೂ ಜ್ಞಾನವು ಜೀವನಿಗೆ ಇದೆ ಎಂದು ನಾವು ಹೇಳಿದುದಕ್ಕೆ ಪ್ರಮಾಣವಿರದಿದ್ದರೆ ಅದು ಅನಿಷ್ಟವು. ಅಥವಾ ಇದು ಪ್ರಮಾಣ–ವಿರುದ್ಧವಿದ್ದರೂ ಕೂಡ ಅದು ಅನಿಷ್ಟವೇ ಆಗುವದು. ಜೀವನಿಗೆ ಭೋಗ ಜ್ಞಾನಗಳು ಪ್ರಮಾಣಪ್ರಮಿತವೇ ಆಗಿವೆ. ಇದಕ್ಕೆ ಪ್ರಸ್ತುತ ಉದಾಹರಿಸಲ್ಪಟ್ಟ ಪರಮಶ್ರುತಿಯೇ ಪ್ರಮಾಣವು ಎಂದು ಹೇಳಿದ್ದಾರೆ. ಆದಕಾರಣ ದ್ವೈತವಿರದಿದ್ದರೆ ದರ್ಶನಾದಿಭೋಗವು ಕೂಡುವದಿಲ್ಲ, ಪ್ರಮಾಣಪ್ರಮಿತವಾದ ದರ್ಶನಾದಿಭೋಗವನ್ನು ಇಲ್ಲವೆಂದು ಹೇಳಬೇಕಾದ ಪ್ರಸಂಗ ಬಂದೀತೆಂದು ಅನಿಷ್ಟ ಪ್ರಸಂಗವನ್ನು ಹೇಳಿದ್ದಾರೆಂದು ತಿಳಿಯಬೇಕು. (ದರ್ಶನಾದಿಭೋಗವಿದೆ, ಆದ್ದರಿಂದ ದ್ವೈತವಿರಲೇಬೇಕು, ಮುಕ್ತಿಯಲ್ಲಿ ದ್ವೈತವು ಪ್ರಾಮಾಣಿಕ ಎಂದು ಮುಕ್ತಿಯಲ್ಲಿ ಭೇದವನ್ನು ಅನಿಷ್ಟಪ್ರಸಂಗವನ್ನು ಹೇಳುವ ಮುಖಾಂತರ ಸಾಧಿಸಿದ್ದಾರೆ.)

**ಅನ್ವಯ ಮತ್ತು ಅರ್ಥ :– ಯಃ ಸಃ ದುಃಖೀ ಸಃ ಸುಖೀ ಬಂಧಮೋಕ್ಷ– ಯೋಃ ಪಾತ್ರಂ ಚ ಸಃ ಜೀವಃ ಇತಿ ಕೀರ್ತಿತಃ । ಸಃ (ಸರ್ವಾಸು ಅವಸ್ಥಾಸು)**

Rarest Archiver

**ಅಹಮ್ ಇತಿ ಸ್ವೇನ ವೇದ್ಯಃ ಏವ ॥ (ಇಲ್ಲಿ ತತ್ ಶಬ್ದದ ನಾಲ್ಕು ಸಲ ಪ್ರಯೋಗ-ವಿರುವದರಿಂದ ನಾಲ್ಕು ವಾಕ್ಯಗಳಿವೆ ಎಂದು ತಿಳಿಯಬೇಕು. ಆ ನಾಲ್ಕು ವಾಕ್ಯಗಳೆಂದರೆ ಯಃ ದುಃಖೀ ಸಃ ಜೀವಃ। ಯಃ ಪ್ರಾಕೃತಸುಖೀ ಸಃ ಜೀವಃ । ಯಃ ಬಂಧಮೋಕ್ಷಯೋಃ ಪಾತ್ರಂ ಸಃ ಜೀವಃ ಇತಿ ಕೀರ್ತಿತಃ । ಸರ್ವಾಸು ಅವಸ್ಥಾಸು ಅಹಂ ಇತಿ ಸ್ವೇನ ವೇದ್ಯಃ ಏವ ।** ಎಂದು ನಾಲ್ಕು ವಾಕ್ಯಗಳನ್ನು ಮಾಡಬೇಕೇಂದು ಶ್ರೀ ರಾಯರು *ಭಾವದೀಪದಲ್ಲಿ* ಬಿಡಿಸಿ ವಿವರಿಸಿದ್ದಾರೆ.

ಯಾರು ದುಃಖಿಯು ಅವನು ಜೀವನು, ಯಾರು ಪ್ರಾಕೃತಸುಖವುಳ್ಳವನೋ ಅವನು ಜೀವನು, ಯಾರು ಬಂಧ ಮೋಕ್ಷಗಳಿಗೆ ಪಾತ್ರನಾದವನೋ ಅವನು ಜೀವನು, ಎಲ್ಲ ಅವಸ್ಥೆಗಳಲ್ಲಿ ಅಹಮ್ ಎಂದು -ತಾನೇ ಅವನು ಎಂದು- ತಿಳಿಯಲ್ಪಟ್ಟಿರುತ್ತಾನೆ. (ಎಲ್ಲ ಅವಸ್ಥೆಗಳಲ್ಲಿ ತನ್ನನ್ನು ತಿಳಿದುಕೊಂಡವನು ಜೀವನು ಎಂದು ಅರ್ಥ ಮಾಡಬಾರದು, ಹಾಗೆ ಮಾಡುವದರಿಂದ ತ್ರಿಕಾಲದಲ್ಲಿಯೂ ತನ್ನನ್ನು ತಿಳಿದುಕೊಂಡ ಪರಮಾತ್ಮನಲ್ಲಿ ದುಃಖಿಯಾದವನು ಜೀವನು, ಸುಖಿಯಾದವನು ಜೀವನು ಇತ್ಯಾದಿ ಲಕ್ಷಣವು ಬಂದು ಅತಿವ್ಯಾಪ್ತಿರೂಪದೋಷ ಬರುವದು. ಪರಮಾತ್ಮನು ಜೀವನಲ್ಲ, ಕಾರಣ ಮೇಲೆ ಹೇಳಿದಂತೆಯೇ ಅನ್ವಯ ಹಚ್ಚಿ ಅರ್ಥ ಮಾಡಬೇಕೆಂದು ಶ್ರೀ ಟೀಕಾಕೃತ್ಪಾದರು ಸೂಚಿಸಿದ ವಿಷಯವನ್ನು ಶ್ರೀ ರಾಯರು *ಭಾವದೀಪದಲ್ಲಿ* ಬಿಡಿಸಿ ಹೇಳಿದ್ದಾರೆ.)

**ವಿಶೇಷ ವಿಷಯಗಳು:-** ಪರಮಶ್ರುತಿಯ ಈ ವಾಕ್ಯದಿಂದ ಜೀವನಿಗೆ ತನ್ನ ಬಗ್ಗೆ ಎಲ್ಲ ಅವಸ್ಥೆಗಳಲ್ಲಿಯೂ ಜ್ಞಾನವಿದೆಯೆಂದು ಹೇಳಿದಂತೆ ಆಯಿತು. ಮುಕ್ತಿಯಲ್ಲಿಯೂ ಕೂಡ ತನ್ನ ಬಗ್ಗೆ ಹಾಗೂ ಪರಮಾತ್ಮನ ಬಗ್ಗೆ ಜೀವನಿಗೆ ಜ್ಞಾನವಿದ್ದೇ ಇರುವದು ಆದರಿಂದ ಈ ಪ್ರಮಾಣದ ಆಧಾರದ ಮೇಲೆ *ಬೃಹದಾರಣ್ಯಕೋಪನಿಷತ್ತಿನಲ್ಲಿ* ಮೈತ್ರೇಯಿ-ಯಾಜ್ಞವಲ್ಕ್ಯರ ನಡುವಿನ ಸಂವಾದದಲ್ಲಿ ಆಪಾದಿಸಲ್ಪಡುವ ಮುಕ್ತ್ಯ-ವಸ್ಥೆಯಲ್ಲಿಯ ಸಂಜ್ಞಾನಾಶವು ಅಪ್ರಮಾಣಿಕವೆಂದು ಎಂದು ಹೇಳಿದಂತಾಯಿತು. ಈ ವಾಕ್ಯಗಳಿಂದ ಶ್ರೀಮದಾಚಾರ್ಯರು ನಿರ್ವಿಶೇಷಿತಚೈತನ್ಯಮಾತ್ರಾವಸ್ಥಾನವೇ ಮೋಕ್ಷ ಎಂಬ ಕೆಲವರು ಹೇಳುವ ಮೋಕ್ಷದ ಲಕ್ಷಣವನ್ನು ವಿಮರ್ಶಿಸಿ ಅದು ಅಪ್ರಾಮಾಣಿಕವೆಂದು ತೋರಿಸಿದ್ದಾರೆ. ಮೂಲದಲ್ಲಿ ಇಲ್ಲಿಯೇ ಮುಂದೆ ಉದಾಹರಿಸಲ್ಪಟ್ಟ *ಮಹಾಭಾರತ ಮೋಕ್ಷಧರ್ಮದ* **ಮಗ್ನಸ್ಯ ಹಿ ಪರೇಽಜ್ಞಾನೇ ಕಿಂ ನ ದುಃಖತರಂ ಭವೇತ್ -** ಮುಕ್ತ್ಯವಸ್ಥೆಯಲ್ಲಿ ಜೀವನು ಸಂಪೂರ್ಣಜ್ಞಾನವನ್ನೇ ಕಳೆದುಕೊಂಡಿದ್ದರೆ ಜ್ಞಾನಶೂನ್ಯವಾದ ಆ ಅವಸ್ಥೆಗಿಂತ ದುಃಖಕರವಾದ ಅವಸ್ಥೆ ಇನ್ನೊಂದಿಲ್ಲ ಎಂದು ಹೇಳುವ ವಾಕ್ಯದಿಂದ ಮುಕ್ತಿಯಲ್ಲಿ ಜ್ಞಾನವಿಲ್ಲವೆಂದು ಹೇಳುವದು ಅತೀವ ಅಯುಕ್ತವಾಗುವದು, ಆದರೆ ಜ್ಞಾನವಿದ್ದೇ ಇರುವದು, ಆದಕಾರಣ

Rarest Archiver

ಮುಕ್ತಿಯೆಂದರೆ ನಿರ್ವಿಶೇಷಿತಚೈತನ್ಯಮಾತ್ರಾವಸ್ಥೆಯಲ್ಲ ಎಂದು ಸಿದ್ಧಮಾಡಿದ್ದಾರೆ.

**೭೧. ನ ತು ತದ್ದ್ವಿತೀಯಮಸ್ತಿ॥**

– *ಬೃಹದಾರಣ್ಯಕೋಪನಿಷತ್ +೪–೩–೩೦,* (*ಉಪನಿಷದ್ವಾಕ್ಯಕೋಷಃ* ದ ಪ್ರಕಾರ; ಅಖಿಲಭಾರತಮಾಧ್ವಮಹಾಮಂಡಲದ *ಸರ್ವಮೂಲಗ್ರಂಥಗಳು–ಸಂಪುಟ ೪– ಉಪನಿಷತ್ಪ್ರಸ್ಥಾನ, ಬೃಹದಾರಣ್ಯಕೋಪನಿಷದ್ಭಾಷ್ಯಮ್ ಎಂಬ ೧೯೯೧ರ ಪ್ರಕಾಶನದ* ಪ್ರಕಾರವೂ ಕೂಡ ಈ ವಾಕ್ಯವಿರುವ ೮ ಮಂತ್ರಗಳು ಚತುರ್ಥಾಧ್ಯಾಯದ ಜ್ಯೋತಿರ್ಬ್ರಾಹ್ಮಣದಲ್ಲಿ ಬರುವವೆಂದು ತೋರಿಸಲಾಗಿದೆ. ಶ್ರೀಮದ್ ವಿಜಯೀಂದ್ರತೀರ್ಥಕೃತ*ಲಘ್ವಾಮೋದಸಹಿತಮ್ ಶ್ರೀಮದ್ವ್ಯಾಸತೀರ್ಥವಿರಚಿತ ಶ್ರೀಮನ್ನ್ಯಾಯಾಮೃತಮ್* ಎಂಬ ೧೯೯೧ರಲ್ಲಿ ಶ್ರೀ ಬೃಂದಾವನಸಂಸ್ಥಾ ಮಂತ್ರಾಲಯದಿಂದ ಪ್ರಹಾಶಿತವಾದ ಗ್ರಂಥದಲ್ಲಿಯೂ ಕೂಡ ಹೀಗೆಯೇ ತೋರಿಸಲ್ಪಟ್ಟಿದೆ. ಆದರೆ, ಅಖಿಲ ಭಾರತ ಮಾಧ್ವಮಹಾಮಂಡಲದಿಂದಲೇ ೧೯೬೯ರಲ್ಲಿ ಪ್ರಕಾಶಿತವಾದ *ಸರ್ವಮೂಲಮ್ ಸಂ. ೧* ರ ಪ್ರಕಾರ ಈ ವಾಕ್ಯವು ಇದೇ ಉಪನಿಷತ್ತಿನ ಅಧ್ಯಾಯ ೬ ರಲ್ಲಿ ೩ನೆಯ ಜ್ಯೋತಿರ್ಬ್ರಾಹ್ಮಣದ ೨೩ ರಿಂದ ೩೦ ನೆಯ ಮಂತ್ರಗಳಲ್ಲಿ ಬರುವದು. ಅದರಂತೆಯೇ ಸವಣೂರು ಗೋವಿಂದರಾಯರು ಜಿ ಆರ್ ಸವಣೂರ್ ಇವರಿಂದ ಪುಣೆಯ ಚಿತ್ರಶಾಲಾ ಪ್ರೆಸ್ಸ್ ನಿಂದ ಬಹಳ ಹಿಂದೆ ಸಂಸ್ಕೃತದಲ್ಲಿ ಪ್ರಕಾಶಿತವಾದ *ಶ್ರೀರಾಘವೇಂದ್ರಯತಿಕೃತ ಬೃಹದಾರಣ್ಯಕೋಪನಿಷತ್ ಖಂಡಾರ್ಥಃ* ಎಂಬ ವಾಲೀ ರೂಪದ ಪ್ರತಿಯಲ್ಲಿಯೂ ಕೂಡ ಇದು ೬ನೆಯ ಅಧ್ಯಾಯದ ೨೩ರಿಂದ ೩೦–ನೆಯ ಮಂತ್ರದ ವರೆಗಿನ ಭಾಗದಲ್ಲಿ ಬಂದಿರುವದಾಗಿ ತೋರಿಸಲಾಗಿದೆ. ಅಂತೂ ಈ ಮೊದಲು ಉಪನಿಷತ್ತುಗಳ ಪ್ರಕಾಶನದ ಬಗ್ಗೆ ಹೇಳಿದಂತೆ ಉಪನಿಷತ್ತುಗಳ ಪಾಠದ ಬಗೆಗೂ ಕೂಡ ಕೂಲಂಕಷವಾದ ಸಂಶೋಧನೆ ಮಾಡುವದವಶ್ಯವಿದೆಯೆಂದು ತೋರುವದು.)

***ಶ್ರೀಮದ್ ವಿಷ್ಣುತತ್ತ್ವವಿನಿರ್ಣಯದಲ್ಲಿ*** ಉದಾಹೃತವಾದ ಜ್ಯೋತಿರ್ಬ್ರಾಹ್ಮಣದ ೨೩ನೆಯ ಈ ಮಂತ್ರದ ಸಂಪೂರ್ಣ ಪಾಠವು ಇಂತಿದೆ : **ಯದ್ ದ್ವೈತಂ ನ ಪಶ್ಯತಿ ಪಶ್ಯನ್ ವೈ ತನ್ನ ಪಶ್ಯತಿ ನ ಹಿ ದ್ರಷ್ಟುಃ ದೃಷ್ಟೇಃ ವಿಪರಿಲೋಪೋ ವಿದ್ಯತೇಽವಿನಾಶಿತ್ವಾತ್ *ನ ತು ತದ್ ದ್ವಿತೀಯಮ್ ಅಸ್ತಿ* ತತೋಽನ್ಯದ್ ವಿಭಕ್ತಂ ಯತ್ ಪಶ್ಯೇತ್ ॥ ೬–೩–೨೩**

**ಅನ್ವಯ ಹಾಗೂ ಅರ್ಥ** (ಶ್ರೀ ರಾಯರ *ಖಂಡಾರ್ಥ*ವನ್ನನುಸರಿಸಿ) **:– ಯದ್–** ಯಾವ ಬ್ರಹ್ಮವು **ದ್ವೈತಂ– (ದ್ವೈತತ್ವೇನ ಸಮಾಭ್ಯಧಿಕತ್ವೇನ –** ಶ್ರೀ ರಾಯರ ***ಖಂಡಾರ್ಥ***) ತನಗೆ ಸಮವಾದ ಅಥವಾ ತನಗಿಂತ ಉತ್ತಮವಾದ ಇನ್ನೊಂದು ವಸ್ತುವನ್ನು **ನ ಪಶ್ಯತಿ–** ನೋಡುವದಿಲ್ಲ. (ಆದ್ದರಿಂದ ಬ್ರಹ್ಮನಿಗೆ ಸಮಾನವಾದ ಅಥವಾ ಬ್ರಹ್ಮನಿಗಿಂತ ಉತ್ತಮವಾದ ಇನ್ನೊಂದು ವಸ್ತುವಿಲ್ಲ.) ಬ್ರಹ್ಮನು ಕಂಡಿರದಿದ್ದರೆ ಅವನಿಗೆ ಸಮವಾದ ಅಥವಾ ಅವನಿಗಿಂತ ಉತ್ತಮವಾದ ವಸ್ತುವೇ ಇಲ್ಲವೆಂದು ಹೇಗೆ ಹೇಳಲು ಬರುವದು? ಹೀಗೆ ಶಂಕೆ ಮಾಡಿದರೆ ಅದಕ್ಕೆ ಉತ್ತರ– **ಪಶ್ಯನ್ ವೈ ತತ್ ನ ಪಶ್ಯತಿ** – ಇರುವಂಥಹದನ್ನೆಲ್ಲ ನೋಡುತ್ತಿರುವ ಅಂದರೆ ಸರ್ವಜ್ಞನಾದ ಬ್ರಹ್ಮನು ತನಗೆ ಸಮವಾದ ಅಥವಾ ತನಗಿಂತ ಉತ್ತಮವಾದುದನ್ನು ನೋಡುವದಿಲ್ಲ, ಎಂದರೆ ಅಂಥ ವಸ್ತು ಇಲ್ಲವೇ ಇಲ್ಲ ಎಂದೇ ಅರ್ಥ. ಸರ್ವಜ್ಞನಾದ ಬ್ರಹ್ಮನು

Rarest Archiver

ಭ್ರಾಂತಿಯಿಂದ ಎಲ್ಲವನ್ನು ತಿಳಿದುಕೊಂಡು ಸರ್ವಜ್ಞನೆಂದು ಕರೆಯಲ್ಪಡುತ್ತಾನೆ ಎಂದು ಹೇಳಬಹುದಲ್ಲ ಎಂದು ಶಂಕೆ ಮಾಡಿದರೆ ಅದಕ್ಕೆ ಉತ್ತರ– **ನ ಹಿ ದ್ರಷ್ಟುಃ ದೃಷ್ಟೇಃ ವಿಪರಿಲೋಪಃ ವಿದ್ಯತೇ –** ಸರ್ವಜ್ಞನಾದ ಬ್ರಹ್ಮನಿಗೆ ಜ್ಞಾನದಲ್ಲಿ **ವಿಪರಿಲೋಪಃ** ಎಂದರೆ ವೈಪರೀತ್ಯವು ಇರುವದಿಲ್ಲ. ಆದ ಕಾರಣ ಅವನು ನೋಡದಿರುವ ವಸ್ತುವು ಇಲ್ಲವೆಂದೇ ತಾತ್ಪರ್ಯವು. ಇದು ಏಕೆ ಎಂದರೆ **ಅವಿನಾಶಿತ್ವಾತ್–** (ನಾಶವೆಂದರೆ ದೋಷ. **ದುಷ್ಟೇಷು ನಷ್ಟಶಬ್ದಪ್ರಯೋಗದರ್ಶನಾತ್–** ಶ್ರೀ ರಾಯರ ***ಖಂಡಾರ್ಥ***) ಬ್ರಹ್ಮನಿಗೆ ಯಾವ ದೋಷವೂ ಇಲ್ಲದಿರುವದರಿಂದ, (ಅವನ ಜ್ಞಾನದಲ್ಲಿ ಅಯಥಾರ್ಥತೆಯು ಇರುವದಿಲ್ಲ. ಆದ್ದರಿಂದ ಅವನು ತನಗಿಂತ ಉತ್ತಮವಾದ ಅಥವಾ ತನಗೆ ಸಮಾನವಾದ ವಸ್ತುವನ್ನು ಕಂಡಿರಲಿಲ್ಲವಾದರೆ ಯಥಾರ್ಥವಾಗಿಯೇ ಅಂಥ ವಸ್ತು ಇಲ್ಲವೆಂದೇ ಆಯಿತು. ಬ್ರಹ್ಮನು ಹಾಗೆ ಕಂಡಿರದಿರಬಹುದು, ಆದರೆ ಮತ್ತೆ ಬೇರೆ ಯಾರಾದರೂ ಕಂಡಿರಬಹುದೇ ಎಂದರೆ ಅದಕ್ಕೆ ಉತ್ತರ–**ನ ತು ತದ್ವಿತೀಯಂ ಅಸ್ತಿ ತತೋ ಅನ್ಯದ್ ವಿಭಕ್ತಂ ಯತ್ ಪಶ್ಯೇತ್** – ತಾನು ನೋಡುವದಕ್ಕಿಂತ ಬೇರೆಯಾಗಿ (**ತತೋಽನ್ಯದ್ವಿಭಕ್ತಂ**) ಕಾಣುವ ಬೇರೆ ಯಾವುದೂ ಕೂಡ (**ತದ್ವಿತೀಯಂ ತು ನ ಅಸ್ತಿ**) ಇಲ್ಲ. ಹೀಗೆಂದ ಮೇಲೆ ಬ್ರಹ್ಮನೊಬ್ಬನೇ ಸರ್ವಜ್ಞನು, ಅಲ್ಲದೆ ಅವನು ಯಥಾರ್ಥ ಜ್ಞಾನಿಯು, ಅವನು ತನಗೆ ಸಮಾನವಾದುದನ್ನಾಗಲೀ ಅಥವಾ ತನಗಿಂತ ಉತ್ತಮವಾದುದನ್ನಾಗಲೀ ಕಂಡಿಲ್ಲ. ಆದ್ದರಿಂದ ಅವನೇ ಸರ್ವೋತ್ತಮನು ಎಂದು ಈ ಉಪನಿಷದ್ವಾಕ್ಯವು ಹೇಳುವದು. ಶ್ರೀ ರಾಯರು ಖಂಡಾರ್ಥದಲ್ಲಿ ಈ ವಾಕ್ಯದ ವಿವರಣೆಗೆ ಮೊದಲು ಅವತಾರಿಕೆಯನ್ನು ಹೀಗೆ ಕೊಟ್ಟಿದ್ದಾರೆ– **ದೇಶಕಾಲಾಂತರೇ ಭಗವಾನ್ ಇವ ಅನ್ಯೋಽಪ್ಯವಸ್ಥಾಪ್ರೇರಕಃ ಅಸ್ತಿ ಕಿಮ್ ಇತ್ಯಾಶಂಕಾಂ ಸಂಯುಕ್ತಿಕಂ ನಿರಾಹ.** ಆದ್ದರಿಂದ, ಇದು ಪರಮಾತ್ಮನು ಸರ್ವೋತ್ತಮನೆಂದು ಯುಕ್ತಿಪುರಸ್ಸರವಾಗಿ ಸಾಧಿಸುವಂಥ ವಾಕ್ಯವೆಂದು ಶ್ರೀ ರಾಯರು ವಿವರಿಸಿದ್ದಾರೆ. (ಮುಕ್ತಿಯಲ್ಲಿಯೂ ಕೂಡ ಪರಮಾತ್ಮನೇ ಸರ್ವೋತ್ತಮನು ಎಂದು ಹೇಳುವದರಿಂದ ಮುಕ್ತಜೀವ ಹಾಗೂ ಪರಮಾತ್ಮರಲ್ಲಿ ಭೇದವಿದ್ದೇ ಇದೆ, ಹಾಗೂ ಈ ಭೇದವು ಸತ್ಯವಾದ ಭೇದವು ಎಂದೇ ಹೇಳಿದಂತಾಯಿತು).

ಶ್ರೀ ರಾಯರು ***ಬೃಹದಾರಣ್ಯಕೋಪನಿಷತ್ಖಂಡಾರ್ಥ***ದಲ್ಲಿ ಈವಾಕ್ಯಕ್ಕೆ ಮೇಲಿನಂತೆ ಅರ್ಥವನ್ನು ವಿವರಿಸಿದ ಬಳಿಕ ***ಶ್ರೀಮದ್ವಿಷ್ಣುತತ್ತ್ವವಿನಿರ್ಣಯಟೀಕೆ***ಯಲ್ಲಿ ***(ತತ್ತ್ವನಿರ್ಣಯಟೀಕಾಯಾಂ ತು)*** ಶ್ರೀಮಟ್ಟೀಕಾಕೃತ್ಪಾದರು ಪ್ರತಿಪಾದಿಸಿದ ಅರ್ಥವನ್ನೂ ಹಾಗೂ ಶ್ರೀ ವ್ಯಾಸತೀರ್ಥರು ***(ವ್ಯಾಸತೀರ್ಥಟೀಕಾಯಾಂ ತು) ಶ್ರೀ–ಮನ್ನ್ಯಾಯಾಮೃತದಲ್ಲಿ (?)*** ವಿವರಿಸಿದುದನ್ನೂ ಪ್ರತ್ಯೇಕವಾಗಿ ಉಲ್ಲೇಖಿಸಿದ್ದಾರೆ. ಉಪನಿಷದ್ಭಾಷ್ಯದಲ್ಲಿ ಶ್ರೀಮದಾಚಾರ್ಯರು **ಯದವತಾರಾದಿಕಂ ದ್ವೈತತ್ವೇನ ನ ಪಶ್ಯತಿ ನ ತು ತತ್ ತತಃ ದ್ವಿತೀಯಮ್** ಎಂದು ಪರಮಾತ್ಮನ ಅವತಾರಾದಿಗಳಲ್ಲಿ

Rarest Archiver

ಭೇದವಿಲ್ಲವೆಂಬ ತತ್ತ್ವವನ್ನು ತಿಳಿಸಲು ಈ ವಾಕ್ಯ ಹೊರಟಿದೆ ಎಂದು ಹೇಳಿದ್ದನ್ನೂ ಸಂಗ್ರಹಿಸಿದ್ದಾರೆ. **ವ್ಯಾಸತೀರ್ಥಟೀಕಾಯಾಂ ತು, ತತ್ತ್ವನಿರ್ಣಯಟೀಕಾಯಾಂ ತು** ಎಂದು **ತು** ಎಂಬ ಪದವಿರುವದರಿಂದ *ಖಂಡಾರ್ಥ* ದಲ್ಲಿ **ಹೊಸರೀತಿ**ಯಿಂದ ಪರಮಾತ್ಮಮಹಿಮಾಪರವಾದ ಅರ್ಥವು ಹೇಳಲ್ಪಟ್ಟಿದೆ ಎಂದು ತಿಳಿಯುವದು. ಆದರೆ ಎಲ್ಲ ವಿವರಣೆಗಳೂ ಕೂಡ ಪರಮಾತ್ಮನ ಮಹಿಮೆಯನ್ನು ವಿವರಿಸುವ ವಿವರಣೆಗಳೇ ಆಗಿವೆ ಎಂಬುದನ್ನು ಗಮನಿಸಬೇಕು. *ತತ್ತ್ವನಿರ್ಣಯಟೀಕಾ-ಭಾವದೀಪದಲ್ಲಿ* ಶ್ರೀ ರಾಯರು ಟೀಕೆಯಲ್ಲಿಯ ವಿವರಣೆಯನ್ನೇ ಬಿಡಿಸಿ ಹೇಳಿದ್ದನ್ನೂ ಗಮನಿಸಬೇಕು. ಶ್ರೀಮದಾಚಾರ್ಯರ ಸಿದ್ಧಾಂತದ ಪ್ರಮೇಯಗಳನ್ನು ಹೊಸ ಹೊಸ ರೀತಿಯಲ್ಲಿ ಪ್ರತಿಪಾದಿಸುವದು ಶ್ರೀ ರಾಯರ ಟಿಪ್ಪಣಿಗಳ ವೈಶಿಷ್ಟ್ಯ.

***ಶ್ರೀಮದ್ವಿಷ್ಣುತತ್ತ್ವವಿನಿರ್ಣಯದಲ್ಲಿ*** ಈ ವಾಕ್ಯವನ್ನು ಶ್ರೀಮದಾಚಾರ್ಯರು ಮೋಕ್ಷದಲ್ಲಿಯೂ ಕೂಡ ಭೇದವಿರುವದೆಂಬುದನ್ನು ತಿಳಿಸುವ ಸಂದರ್ಭದಲ್ಲಿ ಬರುವ ಆಕ್ಷೇಪಗಳನ್ನು ವಿಮರ್ಶಿಸುವಾಗ ಉದಾಹರಿಸಿದ್ದಾರೆ. ಇದನ್ನು ಟೀಕೆಯಲ್ಲಿ ಅದ್ವೈತಿಗಳು ಈ ವಾಕ್ಯಕ್ಕೆ ಮಾಡುವ ಅರ್ಥವನ್ನು ವಿಮರ್ಶಿಸಿ ವಿಸ್ತಾರವಾಗಿ ವಿವರಿಸಲಾಗಿದೆ.

**ಅದ್ವೈತಿಗಳ ಪ್ರಕಾರ** ಈ ವಾಕ್ಯವು ಕೈಮುತ್ಯನ್ಯಾಯದಿಂದ ಭೇದಾಭಾವ-ವನ್ನು ಸಾಧಿಸುವ ವಾಕ್ಯವು (ಶ್ರೀನಿವಾಸತೀರ್ಥರ ಟಿಪ್ಪಣೀ). **ಯದ್ವೈತನ್ನ ಪಶ್ಯತಿ ಪಶ್ಯನ್ವೈ ತನ್ನ ಪಶ್ಯತಿ । ನ ಹಿ ದ್ರಷ್ಟುಃ ದೃಷ್ಟೇಃ ವಿಪರಿಲೋಪೋ ವಿದ್ಯತೇ ಅವಿನಾಶಿತ್ವಾತ್....** ಇತ್ಯಾದಿ ವಾಕ್ಯದಲ್ಲಿ ಅವಿದ್ಯೆಯು ವಿಲಯವಾಗದಿದ್ದರೂ ಅದರ ಕಾರ್ಯಗಳಾದ ಕ್ರಿಯಾ (ಜ್ಞಾನ), ಕಾರಕ (ಇಂದ್ರಿಯಗಳು) ಹಾಗೂ ಫಲ (ವ್ಯವಹಾರಾದಿಗಳು) ಮಾತ್ರ ವಿಲಯವಾಗಿರುವ ಸಂದರ್ಭವಾದ ಸುಷ್ಟಿಯಲ್ಲಿಯೇ ದ್ವಿತೀಯ ಭಾವ (ಭೇದ) ವನ್ನು ಕಾಣದ ***ಜೀವನು*** ಅವಿದ್ಯೆಯೇ ವಿಲಯವಾಗಿರುವ ಮುಕ್ತಿಯಲ್ಲಿ ಭೇದವನ್ನು ಕಾಣುವದಿಲ್ಲವೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲವೆಂಬ ವಿಷಯವು ಹೇಳಲ್ಪಟ್ಟಿದೆ, ಕಾರಣ, ಮುಕ್ತಿಯಲ್ಲಿಯೂ ಭೇದವಿದೆಯೆಂದು ಹೇಗೆ ಸಾಧಿಸುವಿರಿ ಎಂದು ಪೂರ್ವಪಕ್ಷಿಗಳ ಆಕ್ಷೇಪ.

ಶ್ರೀಮದಾಚಾರ್ಯರು ಈ ಪೂರ್ವಪಕ್ಷವನ್ನು ವಿಮರ್ಶಿಸಿ ಈ ವಾಕ್ಯವು ಪರಮಾತ್ಮನ ರೂಪಗಳಲ್ಲಿಯ ಅಭೇದವನ್ನು ಹೇಳುತ್ತಿದೆಯೇ ಹೊರತು ಮುಕ್ತಿಯಲ್ಲಿ ಜೀವ-ಪರಮಾತ್ಮರಲ್ಲಿಯ ಅಭೇದವನ್ನು ಹೇಳುತ್ತಿಲ್ಲ. ಈ ಮೊದಲು **ಶುಕ್ಲಸ್ಯ ನೀಲಸ್ಯ ಪಿಂಗಲಸ್ಯ ಹರಿತಸ್ಯ ಲೋಹಿತಸ್ಯ ಪೂರ್ಣಾಃ** ಎಂದು ನಾಡಿಗಳು ಬಿಳಿ, ನೀಲ, ಕಂದು ಹಳದೀ, ಹಸಿರು ಹಾಗೂ ಕೆಂಪು ವರ್ಣದ ಭಗವದ್ರೂಪಗಳಿಂದ ವ್ಯಾಪ್ತವಾಗಿರುವವು ಎಂದು ಹೇಳಿದೆ. ಇದರಿಂದ ಭಗವದ್ರೂಪಗಳಿಗೆ ಭೇದವಿದೆಯೇ ಎಂಬ ಶಂಕೆ ಪ್ರಾಪ್ತವಾಗುವದು. ಹೀಗೆ ಪ್ರಾಪ್ತವಾದ ಶಂಕೆಯನ್ನು ನಿವಾರಿಸಲು **ನ**

Rarest Archiver

**ತು ತದ್ದ್ವಿತೀಯಂ ಅಸ್ತಿ** ಎಂಬ ಸ್ಪಷ್ಟವಾದ ವಾಕ್ಯವುಹೊರಟಿದ್ದು ಆ ರೂಪಗಳಲ್ಲಿ ಭೇದವಿಲ್ಲವೆಂದು ಸಾರಿ ಆ ವಿಷಯಕ್ಕೆ ಬರುವ ಶಂಕೆಯನ್ನು ಹೇತುಪುರಸ್ಸರವಾಗಿ ನಿರಾಕರಿಸಿ ಪರಮಾತ್ಮನ ಸ್ವಗತಭೇದವಿವರ್ಜಿತತ್ವಸಿದ್ಧಾಂತವನ್ನು ಸ್ಥಾಪಿಸುತ್ತಿದೆಯೆಂದು ಶ್ರೀಮದಾಚಾರ್ಯರು ವಿವರಿಸಿದ್ದಾರೆ. ಶ್ರೀ ಜಯತೀರ್ಥರ ಟೀಕೆಯಲ್ಲಿ ಇದು ಪೂರ್ವಪಕ್ಷಖಂಡನಪೂರ್ವಕ ವಿವರಿಸಲ್ಪಟ್ಟಿದೆ. ಇದನ್ನೇ ಶ್ರೀ ವ್ಯಾಸರಾಜರು *ಶ್ರೀಮನ್ನ್ಯಾಯಾಮೃತದಲ್ಲಿ* ಪ್ರಥಮ ಪರಿಚ್ಛೇದದಲ್ಲಿ ೩೧ ನೆಯ ಪ್ರಕರಣವಾದ **ಅಥ ನ ತು ತದ್ದ್ವಿತೀಯಮಸ್ತೀತಿ ಶ್ರುತ್ಯರ್ಥವಿಚಾರಃ** ಎಂಬ ಪ್ರತ್ಯೇಕ ಪ್ರಕರಣವನ್ನೇ ರಚಿಸಿ ಸ್ಪಷ್ಟಪಡಿಸಿದ್ದಾರೆ. ಅಂತು ಶ್ರೀಮದಾಚಾರ್ಯರ ಉಪನಿಷದ್ಭಾಷ್ಯ, ಶ್ರೀಮದ್ವಿಷ್ಣುತತ್ವವಿನಿರ್ಣಯದಲ್ಲಿ ಅವರು ಈ ವಾಕ್ಯಕ್ಕೆ ಕೊಟ್ಟ ವಿವರಣೆ, ಅದರ ಮೇಲಿನ ಟೀಕಾ ಟಿಪ್ಪಣಿಗಳ ಪ್ರಕಾರ ಹಾಗೂ *ನ್ಯಾಯಾಮೃತ, ಖಂಡಾರ್ಥ*ಗಳಲ್ಲಿಯ ವಿವರಣೆಯ ಪ್ರಕಾರ **ಈ ವಾಕ್ಯವು ಪರಮಾತ್ಮನ ಮಹಿಮೆ, ಗುಣಗಳನ್ನು ಹೇಳುವ ವಾಕ್ಯವಾಗಿದೆಯೇ ಹೊರತು ಮುಕ್ತಜೀವ–ಪರಮಾತ್ಮರಲ್ಲಿ ಅಭೇದವನ್ನು ಹೇಳುವ ವಾಕ್ಯವಲ್ಲವೆಂಬುದು ಸ್ಪಷ್ಟವಾಗುವದು.**

ಶ್ರೀಮದಾಚಾರ್ಯರು ಉಪನಿಷತ್ತಿನ ಈ ಹಾರ್ದವನ್ನು ಹೇಗೆ ಪ್ರತಿಪಾದಿಸಿದರು ಹಾಗೂ ಈ ವಿಷಯವನ್ನು ಶ್ರೀಮಟ್ಟೀಕಾಕೃತ್ಪಾದರು ಹೇಗೆ ವಿವರಿಸಿದ್ದಾರೆಂಬುದು ಉಪನಿಷತ್ತಿನಲ್ಲಿ ಈ ವಾಕ್ಯಕ್ಕಿರುವ ಹಿನ್ನೆಲೆಯನ್ನು ಸರಿಯಾಗಿ ಗಮನಿಸಿದಾಗ ಸ್ಪಷ್ಟವಾಗುವದು.

**ಈ ವಾಕ್ಯಕ್ಕೆ ಉಪನಿಷತ್ತಿನಲ್ಲಿ ಹಿನ್ನೆಲೆ :–** *ಬೃಹದಾರಣ್ಯಕೋಪನಿಷತ್ತಿನಲ್ಲಿ* ಬರುವ ವಾಕ್ಯವಿದು. ಈ ಉಪನಿಷತ್ತು ಶುಕ್ಲಯಜುರ್ವೇದದ ಕಾಣ್ವಶಾಖೆಗೆ ಸಂಬಂಧಿಸಿದುದಾಗಿದ್ದು ಇದು *ದಶೋಪನಿಷತ್ತು*ಗಳಲ್ಲಿಯೇ ಅತಿ ದೊಡ್ಡದಾದ ಉಪನಿಷತ್ ಆಗಿದೆ. ಲಕ್ಷ್ಮೀಪತಿ ನಾರಾಯಣನೇ ಇದಕ್ಕೆ ದೇವತೆ, ಚತುರ್ಮುಖಬ್ರಹ್ಮ ಸೂರ್ಯ, ಯಾಜ್ಞವಲ್ಕ್ಯ ಮತ್ತು ಕಣ್ವ ಋಷಿಗಳೇ ಇದಕ್ಕೆ ಋಷಿಗಳು. ಅಲ್ಲಲ್ಲಿ ವಿವಿಧವೃತ್ತಗಳಲ್ಲಿ ಶ್ಲೋಕಗಳಿದ್ದರೂ ಈ ಉಪನಿಷತ್ತು ಬಹುತೇಕ ಗದ್ಯಮಯವಾಗಿದೆ. ಇಲ್ಲಿ ೮ ಅಧ್ಯಾಯಗಳಿದ್ದು ಪ್ರತಿಯೊಂದು ಅಧ್ಯಾಯದಲ್ಲಿಯೂ ಬೇರೆ ಬೇರೆ ಹೆಸರಿನ ಬ್ರಾಹ್ಮಣಗಳೆಂಬ ವಿಭಾಗಗಳಿವೆ. ಅಲ್ಲಲ್ಲಿ ಬೇರೆ ಬೇರೆ ವಿಷಯಗಳ ಬಗ್ಗೆ ವಿಮರ್ಶಾತ್ಮಕವಾದ ಪ್ರತಿಪಾದನೆ ಇದ್ದರೂ ವಿಷ್ಣುಸರ್ವೋತ್ತಮತ್ವವೇ ಸಮಸ್ತ ಉಪನಿಷತ್ತಿನ ಪ್ರತಿಪಾದ್ಯ ವಿಷಯವು. ಪ್ರಸಕ್ತ ವಾಕ್ಯವು ೪ನೆಯ ಅಧ್ಯಾಯದ ೩ನೆಯ ಬ್ರಾಹ್ಮಣವಾದ ಜ್ಯೋತಿರ್ಬ್ರಾಹ್ಮಣದಲ್ಲಿ ಬರುವದು.

ಇಲ್ಲಿ ಜನಕರಾಜ ಹಾಗೂ ಯಾಜ್ಞವಲ್ಕ್ಯಋಷಿಗಳ ನಡುವೆ ಘಟಿಸಿದ ಸಂವಾದವು ವರ್ಣಿಸಲ್ಪಟ್ಟಿದೆ. **ಕರ್ಮಣೈವ ಹಿ ಸಂಸಿದ್ಧಿಂ ಆಸ್ಥಿತಾಃ ಜನಕಾದಯಃ**

Rarest Archiver

ಎಂದು ಹೇಳಿದಂತೆ ಜ್ಞಾನವಿಶಿಷ್ಟವಾದ ಕರ್ಮಮಾರ್ಗದಿಂದ ಕೃತಾರ್ಥನಾದ ಜನಕರಾಜನಿಗೆ ಯಾಜ್ಞವಲ್ಕ್ಯರು ಅನೇಕರೀತಿಯಿಂದ ಪರಮಪುರುಷಾರ್ಥದ ತತ್ತ್ವವನ್ನು ಉಪದೇಶಿಸಿದರು. ಸಂಸಾರಿಜೀವನಿಗೆ ಜ್ಞಾನಸಾಧನವಾವುದೆಂದು **(ಯಾಜ್ಞವಲ್ಕ್ಯ ಕಿಂಜ್ಯೋತಿರಯಂ ಪುರುಷಃ** ಎಂದು) ಜನಕರಾಜನು ಪ್ರಶ್ನಿಸಿದ್ದಕ್ಕೆ ಬಲುವಿಸ್ತಾರವಾಗಿ ಮತ್ತು ತರ್ಕಬದ್ಧವಾದ ರೀತಿಯಲ್ಲಿ ಪ್ರಶ್ನೋತ್ತರಗಳು ನಡೆದವು. ಸೂರ್ಯ, ಚಂದ್ರ, ಅಗ್ನಿ, ವಾಕ್ ಇವೇ ಜ್ಞಾನಕ್ಕೆ ಸಾಧನವೆಂದು ಹೇಳುತ್ತ ಆತ್ಮನೇ-ಸರ್ವೋತ್ತಮನಾದ ವಿಷ್ಣುವೇ ಪರಮಜ್ಞಾನಪ್ರದನೆಂದು ಯಾಜ್ಞವಲ್ಕ್ಯರು ಹೇಳಿದಾಗ ಪುನಃ ಜನಕರಾಜನ ಪ್ರಶ್ನೆ; **ಕತಮಃ ಆತ್ಮಾ –** ಸೂರ್ಯ ಚಂದ್ರರು ಅಸ್ತರಾದಾಗಲೂ, ಅಗ್ನಿಯು ಶಾಂತವಾದಾಗಲೂ ಹಾಗೂ ಯಾರೂ ಮಾತನಾಡದಿದ್ದಾಗಲೂ ಕೂಡ ಜೀವನಿಗೆ ಜ್ಞಾನವು ಇರುವದರಿಂದ ಈ ಜ್ಞಾನವು ಯಾರಿಂದ ಬರುವದು ಎಂದು ಕೇಳಿದಾಗ ಅದು ಆತ್ಮನಿಂದಲೇ ಬರುವದೆಂದು ಯಾಜ್ಞವಲ್ಕ್ಯರು ಹೇಳಿದರು. ಹಾಗಾದರೆ ಈ ಆತ್ಮನೆಂದರೆ ಯಾರು ಎಂದು ಜಿಜ್ಞಾಸುವಿಗೆ ಬರುವ ಪ್ರಶ್ನೆ. ಅವನೇ ಪರಮಾತ್ಮ, ಅವನು ಜೀವನ ಎಲ್ಲ ವ್ಯಾಪಾರಗಳನ್ನೂ ಮಾಡಿಸುವನು, ಅವನಿಗೆ ಎರಡೇ ಸ್ಥಾನಗಳು; ಭೂಲೋಕ ಮತ್ತು ಪರಲೋಕ ( ಸ್ವರ್ಗಲೋಕ ); ಜಾಗ್ರತ್ ಸ್ಥಾನ ಮತ್ತು ಸುಷುಪ್ತಿಸ್ಥಾನ; ಅಲ್ಲದೆ, ಸಂಸಾರ ಮತ್ತು ಮೋಕ್ಷ, ಭೂಲೋಕ ಹಾಗೂ ಪರಲೋಕಗಳ ಸಂಧಿಸ್ಥಾನವಾದ ಅಂತರಿಕ್ಷವೂ ಕೂಡ ಇನ್ನೊಂದು ಸ್ಥಾನವು; ಆದರೆ ಅದು ಭೂಲೋಕ ಪರಲೋಕಗಳ ಸಂಧಿಸ್ಥಾನವಾದ್ದರಿಂದ ಪ್ರತ್ಯೇಕವಾಗಿ ಹೇಳಲ್ಪಟ್ಟಿಲ್ಲ. ಅದೇ ರೀತಿ ಜಾಗ್ರತ್ ಸ್ಥಾನ ಹಾಗೂ ಸುಷುಪ್ತಿಸ್ಥಾನ ಇವುಗಳ ಸಂಧಿಸ್ಥಾನದಲ್ಲಿದ್ದ ಸ್ವಪ್ನಸ್ಥಾನವೂ ಮತ್ತು ಸಂಸಾರ ಮೋಕ್ಷಗಳ ಸಂಧಿಸ್ಥಾನವಾದ ಜೀವನ್ಮುಕ್ತ್ಯವಸ್ಥೆಯೂ ಕೂಡ ಪ್ರತ್ಯೇಕವಾಗಿ ಹೇಳಲ್ಪಟ್ಟಿಲ್ಲ. ಪರಮಾತ್ಮನು ಆ ಆ ಸಂಧಿ ಸ್ಥಾನಗಳಲ್ಲಿ ನಿಂತುಕೊಂಡು ಆ ಆ ಎರಡೂ ಸ್ಥಾನಗಳನ್ನು ನೋಡುತ್ತ ಜೀವನ ಆ ಆ ಕ್ರಿಯೆಗಳಿಗೆ ನಿಯಾಮಕನಾಗುವನು ಮತ್ತು ಅದಕ್ಕನುಗುಣವಾದ ಫಲಗಳನ್ನು ನೀಡುವನು. ಪರಮಾತ್ಮನು ಜೀವನಿಗೆ ಸುಷುಪ್ತಿ-ನಿದ್ರೆಯನ್ನು ಕೊಟ್ಟು ಸುಷುಪ್ತಿ ಕಾಲದಲ್ಲಿ ತಾನು ವಿಹರಿಸಿ ಸ್ವಪ್ನಸ್ಥಾನಕ್ಕೆ ಹೋಗಿ ಜೀವನಿಗೆ ಸ್ವಪ್ನದಲ್ಲಿ ವಾಸನಾ-ಮಯಸೃಷ್ಟಿಯನ್ನು ನಿರ್ಮಿಸಿ ಅದನ್ನು ತೋರಿಸುವನು. ಸ್ವಪ್ನವೂ ಸತ್ಯ. ಜಾಗ್ರದ-ವಸ್ಥೆಯಲ್ಲಿ ಜೀವನ ಎಲ್ಲ ವ್ಯಾಪಾರಗಳನ್ನೂ ಮಾಡಿಸಿ ಜೀವನ ಪುಣ್ಯಪಾಪಗಳನ್ನು ನೋಡುತ್ತಿರುವನು. ಇಷ್ಟೆಲ್ಲ ಮಾಡಿದರೂ ಕೂಡ ಈ ಪರಮಾತ್ಮನಿಗೆ ಜೀವನ ಪುಣ್ಯಪಾಪಗಳ ಲೇಪವಿರುವದಿಲ್ಲ. **ಅಸಂಗೋ ಹಿ ಅಯಂ ಪುರುಷಃ,** ಆಕಾಶದಲ್ಲಿ ಗಾಳಿಯು *ಗಂಧವಹ* ವಷ್ಟೇ; ಆದರೆ ಗಂಧದ ಲೇಪವುಳ್ಳದ್ದಾಗಿರುವದಿಲ್ಲ. ಅದರಂತೆಯೆ ಪರಮಾತ್ಮನೂ ಸಂಗರಹಿತನು. ಪರಮಾತ್ಮನು ಜೀವನ ಜಾಗ್ರತ್

Rarest Archiver

ಸ್ವಪ್ನ ಸುಷುಪ್ತಿ, ಜೀವನ ಸಂಸಾರ, ಜೀವನ್ಮುಕ್ತ್ಯವಸ್ಥೆ, ಮೋಕ್ಷ, ಜೀವನು ಸಂಚರಿಸುವ ಭೂಲೋಕ, ಅಂತರಿಕ್ಷ, ಪರಲೋಕ ಈ ಪ್ರಕಾರದ ಎಲ್ಲವನ್ನೂ ನೋಡುತ್ತಿರುತ್ತಾನೆ.

ಯಾಜ್ಞವಲ್ಕ್ಯರು ಪರಮಾತ್ಮನ ಮಹಿಮೆಯನ್ನು ಹೀಗೆ ಹೇಳುತ್ತಿರುವ ಸಂದರ್ಭದಲ್ಲಿ ಉಪನಿಷತ್ತಿನ ಪ್ರಸ್ತುತ ವಾಕ್ಯವು ಬಂದಿದೆ. **ಯದ್ ವೈ ತತ್ ನ ಪಶ್ಯತಿ,.....ನ ತು ತದ್ ದ್ವಿತೀಯಂ ಅಸ್ತಿ....** ಅವನು ನೋಡದಿರುವಂತಹದೇ ಇಲ್ಲ. ಅವನು ಅವಿನಾಶಿಯಾದ್ದರಿಂದ ಯಾವಾಗಲೂ ಎಲ್ಲವನ್ನೂ ನೋಡುತ್ತಿರುತ್ತಾನೆ. ಅವನಿಗೆ ಭ್ರಾಂತಿ ಎಂಬುದು ಇಲ್ಲವೇ ಇಲ್ಲ. ಆದಕಾರಣ ಅವನು ನೋಡುವದೆಲ್ಲವೂ ಪಾರಮಾರ್ಥಿಕವಾಗಿ ಸತ್ಯವೇ ಆಗಿರುವದು. ಆವನು ನೋಡಿದ್ದಕ್ಕೆ ಭಿನ್ನವಾಗಿಯಾಗಲಿ, ತದ್ವಿರುದ್ಧವಾಗಿಯಾಗಲಿ ನೋಡುವಂಥ ಜ್ಞಾನಿಯು ಮತ್ತಾರೂ ಇರುವದಿಲ್ಲ.

ಹೀಗೆ, ಈ ವಾಕ್ಯಕ್ಕೆ ಶ್ರೀಮದಾಚಾರ್ಯರು ಈ ಉಪನಿಷತ್ತಿನ ಭಾಷ್ಯದಲ್ಲಿ ಹೇಳಿದ ಈ ಅರ್ಥವು ಉಪನಿಷತ್ತಿನಲ್ಲಿರುವ ಸಂದರ್ಭಕ್ಕೆ ಸಮರ್ಪಕವಾಗಿದೆ ಎಂದು ಇದರಿಂದ ತಿಳಿಯುವದು.

ಈ ಶ್ರುತಿವಾಕ್ಯದ ಅರ್ಥವನ್ನು ***ಶ್ರುತ್ಯರ್ಥಷಟ್ಪದಿಯು*** ಹೀಗೆ ಸಂಗ್ರಹಿಸುತ್ತಿದೆ;

*ತನಗೆ ಸಮರುತ್ತಮರ ಕಾಣನು*
*ಅನಘ ಘನ ಸರ್ವಜ್ಞ ಸಿರಿಹರಿ,*
*ಅನವರತ ತಾನಿದ್ದ ತೆರನೊಳು ಕಾಂಬನೆನ್ನುತಲಿ,*
*ಮುನಿಗಣೇರಿತ ಹರಿಯ ತುತಿಸುತ*
*ಗುಣದಿ ರೂಪದೊಳಿವಗೆ ಭೇದವ*
*ಮನದಿ ತಾರದೆ ಭಜಿಪುದೆಂದಿತು ವೇದ ಕರುಣೆಯಲಿ. ॥*

**೭೨. ಕರ್ಮಾಣಿ ವಿಜ್ಞಾನಮಯಶ್ಚ ಆತ್ಮಾ ಪರೇಽವ್ಯಯೇ ಸರ್ವ ಏಕೀಭವಂತಿ।**
**– *(ಮುಂಡಕೋಪನಿಷತ್ ೩-೨-೭), ಆಥರ್ವಣೋಪನಿಷತ್ ಖಂಡ ೬ ಶ್ಲೋ. ೭***

*ಉಪನಿಷದ್ವಾಕ್ಯಮಹಾಕೋಶಃ* ದಲ್ಲಿ ಈ ವಾಕ್ಯವು *ಮುಂಡಕೋಪನಿಷತ್* ನಲ್ಲಿ ಬರುವ ವಾಕ್ಯವೆಂದು ತೋರಿಸಲಾಗಿದೆ. ಶ್ರೀಮದಾಚಾರ್ಯರು ಈ ಉಪನಿಷತ್ತನ್ನು *ಆಥರ್ವಣೋಪನಿಷತ್* ಎಂದು ಕರೆದಿದ್ದಾರೆ. ಚತುರ್ಮುಖ ಬ್ರಹ್ಮನು ತನ್ನ ಜ್ಯೇಷ್ಠ-ಪುತ್ರನಾದ ಅಥರ್ವನಿಗೆ ಬ್ರಹ್ಮವಿದ್ಯೆಯನ್ನು ಉಪದೇಶಿಸಿದನು. ಅಥರ್ವನು ಮುಂದೆ ಅಂಗಿರನೆಂಬ ಮುನಿಗೆ ಅದನ್ನು ಉಪದೇಶಿಸಿದನು. ಅಂಗಿರನು ಮುಂದೆ ಭರದ್ವಾಜನ ಮಗನಾದ ಸತ್ಯವಹನಿಗೆ ಅದನ್ನು ಉಪದೇಶಿಸಿದನು. ಶುನಕನ ಮಗನಾದ ಪ್ರತಿವರ್ಷವೂ ಯಜ್ಞಗಳನ್ನು ಮಾಡುವ ಮಹಾಶಾಲನು ಅಂಗಿರಮುನಿಯನ್ನು ವಿಜ್ಞಾಪಿಸಿಕೊಂಡಾಗ ಇದೇ ಬ್ರಹ್ಮವಿದ್ಯೆಯನ್ನು ಅವನಿಗೂ ಆ ಮುನಿಯು ಉಪದೇಶಿಸಿದನು. ಹೀಗೆ

Rarest Archiver

ಅಥರ್ವನಿಂದ ಪ್ರಾರಂಭವಾದ ಪರಂಪರೆಯಿಂದ ಬ್ರಹ್ಮವಿದ್ಯೆಯು ಈ ಉಪನಿಷತ್ತಿನಲ್ಲಿ ಉಪದೇಶಿಸಿಲ್ಪಟ್ಟಿರುವದರಿಂದ ಇದಕ್ಕೆ ***ಆಥರ್ವಣೋಪನಿಷತ್*** ಎಂದು ಶ್ರೀಮನ್ಮ- ಧ್ವಾಚಾರ್ಯರು ಸೂಚಿಸಿದ್ದು ಸಾರ್ಥಕವಾಗಿದೆ.

ಈ ಉಪನಿಷತ್ತಿನ ಮೊದಲಿನ ಖಂಡದಲ್ಲಿ ಋಷಿ ದೇವತಾ ಛಂದಸ್ಸುಗಳನ್ನು ವಿವರಿಸುವ ಉಪೋದ್ಘಾತವಿದ್ದು ಆ ಬಳಿಕ ಪರಾಪರವಿದ್ಯೆಯ ವಿವರಣೆ ಇದೆ. **ಅಥ ಪರಾ ಯಯಾ ತದಕ್ಷರಂ ಅಧಿಗಮ್ಯತೇ.** ಅಕ್ಷರಾಧಿಗತಿಕರಣತ್ವವು ಯಾವ ವಿದ್ಯೆಗೆ ಇರುವದೋ ಅದೇ ಪರವಿದ್ಯೆಯು ಎಂದು ಹೇಳಿದಮೇಲೆ ಅಕ್ಷರವೆಂಬುದು ಯಾವುದು ಎಂದು ಅದರ ಮಹಿಮೆಯು ವರ್ಣಿತವಾಗಿದೆ. ಎರಡನೆಯ ಖಂಡದಲ್ಲಿ ಕರ್ಮ- ದೇವತಾದಿಜ್ಞಾನವನ್ನು ಅಂಗಿರ ಮುನಿಗಳು ಶೌನಕರಿಗೆ ಉಪದೇಶಿಸುತ್ತಾರೆ. ಮೂರನೆಯ ಖಂಡದಲ್ಲಿ ಋಗಾದಿವೇದಗಳು ಅಕ್ಷರ-ಪರಮಾತ್ಮನನ್ನು ಪ್ರತಿಪಾದಿಸುವದರಿಂದ ಅವುಗಳಿಗೆ ಪರವಿದ್ಯಾತ್ವವು ಇರುವದೆಂದು ಈ ಮೊದಲು ಹೇಳಿದ ವಿಷಯವನ್ನು ಗ್ರಹಿಸಿ ಆ ಅಕ್ಷರತತ್ವವಾದ ಪರಮಾತ್ಮನ ಜಗತ್ಸ್ರಷ್ಟೃತ್ವಾದಿ ಗುಣಗಳನ್ನು ವಿವರಿಸಿದ್ದಾರೆ. ನಾಲ್ಕನೆಯ ಖಂಡದಲ್ಲಿ ಪರಮಾತ್ಮನು ಸ್ವಗತಭೇದವಿವರ್ಜಿತನು, ಅವನಿಗೆ ಹಾಗೂ ಅವನ ಧರ್ಮಗಳಿಗೆ ಭೇದವಿಲ್ಲವೆಂಬ ತತ್ವವು ವಿವರಿಸಲ್ಪಟ್ಟಿದೆ. ಬ್ರಹ್ಮನು- ಪರಮಾತ್ಮನು ಜೀವರಿಂದ ಅಭಿನ್ನನಾಗಿದ್ದಾನೆಂಬ ಭ್ರಮವನ್ನು ನಿವಾರಿಸಲು ಐದನೆಯ ಖಂಡವು ಪ್ರವೃತ್ತವಾಗಿದೆ. ಆರನೆಯ ಖಂಡದಲ್ಲಿ ಈ ಮೊದಲು ವಿವರಿಸಲ್ಪಟ್ಟ ಮಹಿಮೆಯುಳ್ಳ ಪರಮಾತ್ಮನ ಉಪಾಸನೆಯ ಫಲವಾವುದು ಎಂಬುದನ್ನು ವಿವರಿಸಿದ್ದಾರೆ. **ಉಪನಿಷತ್ತಿನ ಈ ಆರನೆಯ ಖಂಡದಲ್ಲಿ ಬರುವ ಶ್ಲೋಕವಿದು.**

ಈ ವಾಕ್ಯವು ೭ನೆಯ ಶ್ಲೋಕದ ಎರಡನೆಯ ಚರಣವಾಗಿದೆ. ಶ್ಲೋಕದ ಸಂಪೂರ್ಣ ಪಾಠವು ಹೀಗಿದೆ:

**ಗತಾಃ ಕಲಾಃ ಪಂಚದಶ ಪ್ರತಿಷ್ಠಾಃ ದೇವಾಶ್ಚ ಸರ್ವೇ ಪ್ರತಿದೇವತಾಸು ।**
**ಕರ್ಮಾಣಿ ವಿಜ್ಞಾನಮಯಶ್ಚ ಆತ್ಮಾ ಪರೇಽವ್ಯಯೇ ಸರ್ವ ಏಕೀಭವಂತಿ ॥**

**ಶ್ರೀಮದ್ವಿಷ್ಣುತತ್ವವಿನಿರ್ಣಯದಲ್ಲಿ ಈ ವಾಕ್ಯಕ್ಕೆ ಪ್ರಸಕ್ತಿ:-** ಮುಕ್ತಿಯಲ್ಲಿಯೂ ಭೇದವಿದೆ ಎಂದು ವಿವರಿಸುವ ಸಂದರ್ಭದಲ್ಲಿ ಶ್ರೀಮದಾಚಾರ್ಯರು ಈ ವಾಕ್ಯವನ್ನು ಉದಾಹರಿಸಿದ್ದಾರೆ. ಮುಕ್ತಿಕಾಲದಲ್ಲಿ ಜ್ಞಾನಿಯಾದವನಿಗೆ (ಜನ್ಮಾಂತರದಲ್ಲಿ ಮತ್ತೆ ದೇಹವನ್ನು ಒದಗಿಸುವ) ಪ್ರಾಣಾದಿ ಹದಿನೈದು ಕಲೆಗಳು ತಮಗೆ ನಿಯಾಮಕವಾದ ಕಾರಣಗಳಲ್ಲಿ ಲೀನವಾಗಿರುತ್ತವೆ. ಹಾಗೂ ಆ ಕಲಾಭಿಮಾನಿ ದೇವತೆಗಳೆಲ್ಲರೂ ಕೂಡ ತಮ್ಮ ತಮ್ಮ ಮೂಲರೂಪವಾದ ಪ್ರತಿದೇವತೆಗಳಲ್ಲಿ ಲಯಹೊಂದಿರುತ್ತಾರೆ. ಕಾರಣ ಜೀವನು ಬ್ರಹ್ಮನಲ್ಲಿ ಒಂದಾಗುತ್ತಾನೆ ಎಂದಿದೆ. ಹೀಗಿದ್ದಾಗ ಮುಕ್ತ್ಯನಂತರವೂ

Rarest Archiver

ಭೇದವಿದೆಯೆಂದು ಹೇಗೆ ಒಪ್ಪಲು ಬರುವದು ಎಂದು ಅದ್ವೈತಿಗಳು ಶಂಕೆ ಮಾಡಿದಾಗ **ಶ್ರೀಮದಾಚಾರ್ಯರು** ಈ ವಾಕ್ಯವನ್ನು ಉದಾಹರಿಸಿ **ಏಕೀಭಾವ– ಒಂದಾಗು–ವದೆಂದರೆ ಏನೆಂಬುದನ್ನು ಸ್ಪಷ್ಟವಾಗಿ ವಿವರಿಸಿದ್ದಾರೆ.**

**ಅನ್ವಯ ಮತ್ತು ಅರ್ಥ :–**(ಶ್ರೀ ರಾಯರು ಈ ಉಪನಿಷತ್ತಿನ ಖಂಡಾರ್ಥದಲ್ಲಿ ವಿವರಿಸಿದಂತೆ); **ಪ್ರತಿಷ್ಠಾಃ** – ಸಂಸಾರಿಗಳಿಗೆ ನಿಯಾಮಕವಾದ **ಕಲಾಃ** ಪ್ರಾಣ, ಶ್ರದ್ಧಾ, ಆಕಾಶ, ವಾಯು, ಜ್ಯೋತಿ, ಜಲ, ಪೃಥಿವೀ, ಇಂದ್ರಿಯ, ಮನಸ್ಸು, ಅನ್ನ, ವೀರ್ಯ, ತಪ, ಮಂತ್ರ, ಕರ್ಮ, ಲೋಕ ಹಾಗೂ ಲೋಕದಲ್ಲಿಯ ನಾಮ ಎಂಬ ಕಲೆಗಳು, **ಸರ್ವೇ ಪಂಚದಶ ದೇವಾಃ ಚ** ಕ್ರಮವಾಗಿ ಪ್ರಾಣ, ವಾಣೀ, ವಿನಾಯಕ, ಪ್ರಾಣಸುತ ಮರುತ್, ಪಾವಕ ಬುಧ, ಶನಿ, ಇಂದ್ರ, ರುದ್ರ, ಚಂದ್ರ, ವರುಣ, ವಹ್ನಿ, ಸ್ವಾಹಾ, ಪರ್ಜನ್ಯ, ಯೋಷಾ ಎಂಬ (ಪ್ರಾಣವನ್ನು ಪುನಃ ಹೇಳಿರುವದರಿಂದ ಪ್ರಾಣವೊಂದನ್ನು ಬಿಟ್ಟು) ಹದಿನೈದು ದೇವತೆಗಳು, **ಪ್ರತಿದೇವತಾಸು** ದೇವತೆಗಳ ಪ್ರತಿಬಿಂಬವಾಗಿರುವ ಜೀವರಲ್ಲಿ ಪ್ರತಿಷ್ಠಿತರಾಗಿರುವ ಉಳಿದೆಲ್ಲ ದೇವತೆಗಳು **ಗತಾಃ** ಸ್ಥಿತರಾಗಿರುತ್ತಾರೆ. **ಕರ್ಮಾಣಿ** ಕರ್ಮಾಭಿಮಾನಿಯಾದ ಪುಷ್ಕರನು **ವಿಜ್ಞಾನಮಯಃ ಆತ್ಮಾ ಚ** ಹಾಗೂ ವಿಜ್ಞಾನರೂಪಿಯಾದ ಜೀವನು **ಅವ್ಯಯೇ ಪರೇ** ನಾಶರಹಿತನಾದ ಪರಮಾತ್ಮನಲ್ಲಿ **ಸರ್ವೇ** ಎಲ್ಲ ಷೋಡಶಕಲಾದೇವತೆಗಳು ಹಾಗೂ ಜೀವರು ಹೀಗೆ ಎಲ್ಲರೂ ಮುಕ್ತರಾಗಿ **ಏಕೀಭವಂತಿ** ಪರಮಾತ್ಮನಲ್ಲಿ ಪ್ರವೇಶಮಾಡಿ ಪರಮಾತ್ಮನ ಜತೆಗೆ ಒಂದೇ ಸ್ಥಾನದಲ್ಲಿ ಇರುವಂಥವರಾಗುತ್ತಾರೆ, ಅಥವಾ ಪರಮಾತ್ಮನ ಚಿತ್ತಕ್ಕೆ ತಕ್ಕಂತೆ ಚಿತ್ತವುಳ್ಳವರಾಗುತ್ತಾರೆ. (ಅವನ ಸಂಕಲ್ಪಕ್ಕೆ ತಕ್ಕಂತೆ ವರ್ತಿಸುವಂಥವರೂ ಹಾಗೂ ಅವನಿಗೆ ವಿರುದ್ಧವಾದುದರ ಬಗ್ಗೆ ಎಳ್ಳಷ್ಟೂ ಮನದಲ್ಲಿ ತಾರದವರೂ ಆಗುತ್ತಾರೆ; ಅನ್ಯಥಾ ಬಯಕೆಯಿಲ್ಲದವರು ಆಗುತ್ತಾರೆ).

**ವಿವರಣೆ:–** ಕಲೆಗಳಾವವೆಂಬುದನ್ನು *ಷಟ್ಪ್ರಶ್ನೋಪನಿಷತ್*ನಲ್ಲಿ ಸ ಪ್ರಾಣಮಸೃಜತ್ ಪ್ರಾಣಾತ್ ಶ್ರದ್ಧಾಂ ಇತ್ಯಾದಿ ವಿವರಿಸಿದ್ದಾರೆ. ತದಭಿಮಾನಿದೇವತೆಗಳಾರೆಂಬುದನ್ನು *ಷಟ್ಪ್ರಶ್ನಭಾಷ್ಯ*ದಲ್ಲಿ ಶ್ರೀಮದಾಚಾರ್ಯರು ವಿವರಿದ್ದಾರೆ. ಇಲ್ಲಿ ಪ್ರತಿದೇವತೆಗಳೆಂದರೆ ಕಲಾಭಿಮಾನಿದೇವತೆಗಳಿಗೆ ಪ್ರತಿಬಿಂಬಭೂತರಾದ ಜೀವರಲ್ಲಿ ಸನ್ನಿಹಿತರಾದ ದೇವತೆಗಳು ಎಂದು ಬಹಳ ಮುಖ್ಯವಾದ ಅರ್ಥವನ್ನು ಗಮನಿಸಬೇಕು.

*ಆಥರ್ವಣೋಪನಿಷತ್ತಿ*ನಲ್ಲಿಯ ಈ ವಾಕ್ಯದಲ್ಲಿ ಹದಿನೈದು ಕಲೆಗಳ ಬಗ್ಗೆ ಮೊದಲು ಹೇಳಿ ಕರ್ಮವೂ ಒಂದು ಕಲೆಯಾದರೂ ಪ್ರತ್ಯೇಕವಾಗಿ ಹೇಳಲ್ಪಟ್ಟಿದೆ. ಇದಕ್ಕೆ ಕಾರಣವನ್ನು **ಕಲಾಭ್ಯಶ್ಚಾನ್ಯದೇವೇಭ್ಯಃ ಕರ್ಮ ಪ್ರತ್ಯವರಂ ಯತಃ । ಕಲಾಭ್ಯಃ ಪೃಥಗುಕ್ತಂ ತತ್ ಪುಷ್ಕರಃ ಕರ್ಮ ಚೋಚ್ಯತೇ ॥ – (ವಿ.ತ.ವಿ**

Rarest Archiver

**ಟೀಕೋಕ್ತಂ ಪ್ರಮಾಣಮ್)–*ಮುಕ್ತ(ಕ್ತಿ)ವಿವೇಕವೆಂಬ*** ಗ್ರಂಥ(?)ದಲ್ಲಿಯ ಈ ಶ್ಲೋಕದಿಂದ ತಿಳಿಯಬಹುದೆಂದು ಶ್ರೀಮದಾಚಾರ್ಯರು ***ಆಥರ್ವಣೋಪ–ನಿಷದ್ಭಾಷ್ಯದಲ್ಲಿ*** ಉದಾಹರಿಸಿದ್ದಾರೆ. ಶ್ರೀಮಟ್ಟೀಕಾಕೃತ್ಪಾದರು *ವಿ.ತ.ವಿ.ಟೀಕೆಯಲ್ಲಿ* ಈ ಸಂದರ್ಭದಲ್ಲಿ ಈ ಶ್ಲೋಕವನ್ನು ಉದ್ಧರಿಸಿದ್ದಾರೆ. ಶ್ರೀಮದಾಚಾರ್ಯರೇ ಸ್ವತಃ *ಆಥರ್ವಣಭಾಷ್ಯದಲ್ಲಿ* ಈ ಪ್ರಮಾಣವನ್ನು ಉದಾಹರಿಸಿದ್ದರೂ (ಇದು ಶ್ರೀ ರಾಯರ *ಭಾವದೀಪದಿಂದ ತಿಳಿಯುವದು)* ಅವರು *ವಿ.ತ.ವಿ.ದಲ್ಲಿ* ಈ ಸಂದರ್ಭದಲ್ಲಿ ಈ ಪ್ರಮಾಣವನ್ನು ಉದಾಹರಿಸಲಿಲ್ಲ. **ಉಕ್ತಂ ನೋ ವಕ್ತಿ ಭೂಯಃ** –ಒಂದು ಸಲ ಹೇಳಿದ್ದನ್ನು ಪುನಃ ಹೇಳುವದಿಲ್ಲ–ಎಂಬುದು ಶ್ರೀಮದಾಚಾರ್ಯರ ಶೈಲಿಯ ವೈಶಿಷ್ಟ್ಯವು ಆಗಿದೆಯೆಂದು ಹೇಳಬಹುದು. (ಶ್ರೀಮದಾಚಾರ್ಯರ ವಿಶೇಷಾನುಗ್ರಹಕ್ಕೆ ಪಾತ್ರರಾದ ಶ್ರೀ ರಾಯರು ಈ ಶೈಲಿಯನ್ನನುಸರಿಸಿಯೇ ಗ್ರಂಥರಚನೆ ಮಾಡಿರುವದ–ರಿಂದಲೇ ಶ್ರೀಮದ್ವಾದೀಂದ್ರತೀರ್ಥರು ತಮ್ಮ *ಗುರುಗುಣಸ್ತವನದಲ್ಲಿ* ಶ್ರೀ ರಾಯರನ್ನು ಉಕ್ತಂ ನೋ ವಕ್ತಿ ಭೂಯಃ ಎಂದು ವರ್ಣಿಸಿದ್ದನ್ನು ಗಮನಿಸಬೇಕು.}

*ಮುಕ್ತವಿವೇಕದ* ಈ ಶ್ಲೋಕದ ತಾತ್ಪರ್ಯವಿಷ್ಟು– ಕರ್ಮವು ಒಂದು ಕಲೆಯಾದರೂ ಉಳಿದ ಹದಿನೈದು ಕಲೆಗಳಲ್ಲಿ ಅದು ಸೇರಿಸಲ್ಪಟ್ಟಿಲ್ಲ. ಏಕೆಂದರೆ ಕರ್ಮವು ಜಡ. ತದಭಿಮಾನಿ ದೇವತೆಯು ಪುಷ್ಕರ. ಅನ್ಯಕಲಾಭಿಮಾನಿದೇವ–ತೆಗಳಿಗಿಂತಲೂ ಕರ್ಮಾಭಿಮಾನಿ ಪುಷ್ಕರನು ಅವರನು, ಕಡಿಮೆ ಯೋಗ್ಯತೆಯುಳ್ಳವನು. ಆದ ಕಾರಣ ಕರ್ಮವನ್ನು ಹದಿನೈದು ಕಲೆಗಳ ಜೊತೆಗೆ ಸೇರಿಸಲಿಲ್ಲ. ಅದನ್ನು ಪ್ರತ್ಯೇಕವಾಗಿ ಹೇಳಿದರು.

ಅದ್ವೈತಿಗಳೂ ಕೂಡ ಮುಕ್ತಿಯಲ್ಲಿ ಬ್ರಹ್ಮನೊಡನೆ ಕರ್ಮವೂ ಐಕ್ಯ ಹೊಂದುವದೆಂದು ಹೇಳುವದಿಲ್ಲ. ಅವರು ಕರ್ಮ ಪದದಿಂದ ಕರ್ಮಾಭಿಮಾನಿ ದೇವತೆ ಎಂದು ಅರ್ಥ ಮಾಡುವದಿಲ್ಲ. ಹದಿನೈದು ಕಲಾಭಿಮಾನಿ ದೇವತೆಗಳು (ಗತಾಃ ಕಲಾಃ) ತಮ್ಮ ಮೂಲರೂಪಗಳಲ್ಲಿ ಸೇರಿಕೊಳ್ಳುವರು. ಜೀವನು ಮಾಡಿದ ಕರ್ಮವು ನಿವೃತ್ತವಾಗುತ್ತದೆ, (ಕರ್ಮಾಣಿ ಏಕೀಭವಂತಿ), ವಿಜ್ಞಾನಮಯನಾದ ಆತ್ಮನು ಬ್ರಹ್ಮನಲ್ಲಿ ಐಕ್ಯ ಹೊಂದುವನು ಎಂದು ಈ ಶ್ಲೋಕದ ಅರ್ಥ ಮಾಡುವರು. ಕರ್ಮದ ಏಕೀಭಾವವೆಂದರೆ ನಿವೃತ್ತಿ, ಜೀವನ ಏಕೀಭಾವವೆಂದರೆ ಸ್ವರೂಪೈಕ್ಯ ಎಂದು ಏಕೀಭಾವ ಪದಕ್ಕೆ ಅರ್ಥಭೇದವನ್ನು ಕಲ್ಪನೆ ಮಾಡುವರು. ಕರ್ಮವನ್ನು ಪ್ರತ್ಯೇಕವಾಗಿ ಹೇಳಿದುದರ ಔಚಿತ್ಯವನ್ನು ಅವರ ಪ್ರಕ್ರಿಯೆಯ ಪ್ರಕಾರ ವಿವರಿಸಲು ಸಾಧ್ಯವಾಗುವದಿಲ್ಲ. ಆದರೆ ಆಚಾರ್ಯರು ವಿವರಿಸುವ ರೀತಿಯಿಂದ ಕರ್ಮವನ್ನು ಪ್ರತ್ಯೇಕವಾಗಿ ಹೇಳುವದರ ಔಚಿತ್ಯವು ತಿಳಿಯುವದು.

Rarest Archiver

**ಏಕೀಭವಂತಿ ಎಂದರೆ ಸ್ಥಾನೈಕ್ಯ, ಮತ್ಯೈಕ್ಯವೆಂದರ್ಥವೇ ಹೊರತು ಸ್ವರೂಪೈಕ್ಯವೆಂದಲ್ಲ.** ಪರಮಾತ್ಮನೊಡನೆ ಜೀವನು ಯಾವಾಗಲೂ ಇದ್ದೇ ಇರುವದರಿಂದ ಸ್ಥಾನೈಕ್ಯವು ಯಾವಾಗಲೂ ಇದ್ದಂತಾಯಿತು. ಕಾರಣ, ಏಕೀಭವಂತಿ ಎಂದರೆ ಸ್ಥಾನೈಕ್ಯವೆಂದು ಏಕೆ ಅರ್ಥಮಾಡಬೇಕು ಎಂದರೆ ಜೀವನಿದ್ದಲ್ಲಿ ಪರಮಾತ್ಮನು ನಿಯಾಮಕನಾಗಿ ಯಾವಾಗಲೂ ಇದ್ದರೂ ಕೂಡ ಮುಕ್ತನಾದಮೇಲೆ ಜೀವನು ಕ್ಷೀರಾಬ್ಧಿಯಲ್ಲಿಯ ಪರಮಾತ್ಮನ ಪ್ರಕಟರೂಪದ ಜತೆಗೆ ಇರುವಂಥ ಭಾಗ್ಯವು ದೊರೆಯುವದರಿಂದ ಈ ರೀತಿ ಪ್ರತ್ಯೇಕವಾಗಿ ಹೇಳಿದ್ದಾರೆಂದು ತಿಳಿಯಬೇಕು. ವ್ಯವಹಾರದಲ್ಲಿ ಎಲ್ಲ ಒಂದುಗೂಡಿಸುವದು ಎಂದರೆ ಎಲ್ಲವನ್ನು ಒಂದೇ ಸ್ಥಳದಲ್ಲಿ ತಂದು ಇಡುವದೆಂಬರ್ಥದಲ್ಲಿ ಇದ್ದುದನ್ನು ಗಮನಿಸಬೇಕು. ಏಕೀಭಾವವೆಂದರೆ ಒಂದಭಿಪ್ರಾಯ- ಐಕಮತ್ಯ- ಹೊಂದುವದೆಂಬರ್ಥವೂ ಕೂಡ ಲೋಕದ ವ್ಯವಹಾರದಲ್ಲಿ ಕಂಡುಬಂದಿದೆ. ಬ್ರಾಹ್ಮಣರೆಲ್ಲ ಒಂದಾಗಬೇಕು ಎಂದಾಗ ಎಲ್ಲರಲ್ಲಿಯೂ ಐಕಮತ್ಯವಿರಬೇಕೆಂಬ ಅರ್ಥವೇ ಹೊರತು ಎಲ್ಲರ ಸ್ವರೂಪೈಕ್ಯವೆಂಬರ್ಥವಲ್ಲ. ಇಲ್ಲಿ **ಅಭೂತತದ್ಭಾವೇ ಕೃಭ್ವಸ್ತಿಯೋಗೇ ಸಂಪದ್ಯಕರ್ತರಿ ಚ್ವಿಃ (೫-೪-೫೦)** ಎಂಬ ವಾರ್ತಿಕದಲ್ಲಿ ಹೇಳಲ್ಪಟ್ಟ ಚ್ವಿ ಪ್ರಯೋಗವಿದೆ. ಮುಕ್ತಿಯನ್ನು ಹೊಂದುವ ಮೊದಲು ವಿವಿಧ ಜನ್ಮ ಪಡೆಯುತ್ತಿರುವ ಜೀವನಿಗೆ ಮೇಲೆ ಹೇಳಿದ ಸ್ಥಾನೈಕ್ಯವು ಇರದಿರುವದು ಸ್ಪಷ್ಟವಿದ್ದು ಮುಕ್ತಿಪಡೆದ ಮೇಲೆ ಕ್ಷೀರಾಬ್ಧಿ ಇತ್ಯಾದಿಸ್ಥಾನಗಳಲ್ಲಿ ಸ್ಥಿತವಾದ ಪರಮಾತ್ಮನ ರೂಪದೊಡನೆ ಜೀವನು ಇರುವನು ಎಂದು ಹೇಳಿದಾಗ ಅಭೂತತದ್ಭಾವವು ಹಾಗೂ ಅಭೂತತದ್ಭಾವದ ಮುಖ್ಯಾರ್ಥವು ಸ್ಪಷ್ಟವಾಗುವದು. ಅದ್ವೈತಿಗಳು ಜೀವನಿಗೆ ಎಲ್ಲ ಅವಸ್ಥೆಗಳಲ್ಲಿಯೂ ಐಕ್ಯವನ್ನು ಹೇಳುವದರಿಂದ ಅಭೂತತದ್ಭಾವವನ್ನು ಹೇಳುವ ಚ್ವಿ ಪ್ರಯೋಗವು ಕೂಡುವದಿಲ್ಲ. ಅದೇ ರೀತಿ ಸಂಸಾರಾವಸ್ಥೆಯಲ್ಲಿ ಜೀವನಿಗೆ ಪರಮಾತ್ಮನ ಸಂಕಲ್ಪವೇನಿರಬಹುದೆಂಬುದು ತಿಳಿಯದೆ ಅವನು ತದ್ವಿರುದ್ಧವಾಗಿಯೂ ವರ್ತಿಸುವನು. ಆದರೆ ಮುಕ್ತನಾದಮೇಲೆ ಮಾತ್ರ ಅವನ ಸಂಕಲ್ಪಕ್ಕೆ ತಕ್ಕಂತೆಯೇ ವರ್ತಿಸುವದರಿಂದ ಮೊದಲಿರದ ಮತ್ಯೈಕ್ಯವು ಬಂದಿತೆಂದಾಯಿತು. ಆಗಲೂ ಕೂಡ ಚ್ವಿಪ್ರಯೋಗದ ಸಾರ್ಥಕ್ಯವು ಸ್ಪಷ್ಟವಾಗುವದು.

ಮುಕ್ತಿಯಲ್ಲಿ ಸ್ವರೂಪೈಕ್ಯವು ಕೂಡುವದಿಲ್ಲವೆಂಬುದು ಈ ಪ್ರಮಾಣದಲ್ಲಿ ಪರೇಽವ್ಯಯೇ ಎಂದು ಸಪ್ತಮೀ ವಿಭಕ್ತಿಯ ಪ್ರಯೋಗದಿಂದ ಸ್ಪಷ್ಟವಾಗುವದು. ಅಧಿಷ್ಠಾನವಾದ ಪರಮಾತ್ಮ ಹಾಗೂ *ಅಧಿಕರ್ತವ್ಯ* ಇವುಗಳಲ್ಲಿ ಭೇದವೇ ಲೋಕದಲ್ಲಿ ಕಾಣುವದೇ ಹೊರತು ಐಕ್ಯವಲ್ಲ. ಭೂತಲೇ ಘಟಃ ಎಂಬುವಲ್ಲಿ ಭೂತಲ ಹಾಗೂ ಘಟ ಇವುಗಳಲ್ಲಿ ಐಕ್ಯಕೂಡದು. ಭ್ರಮಸ್ಥಳದಲ್ಲಿ ಕೂಡ ಅದಿಷ್ಠಾನವಾದ ಶುಕ್ತಿ ಹಾಗೂ ಆರೋಪಿತವಾದ ರಜತ ಇವುಗಳಲ್ಲಿ ಭೇದವನ್ನು ಹೇಳಬೇಕೇ ಹೊರತು

Rarest Archiver

ಐಕ್ಯವನ್ನಲ್ಲ. ಆದಕಾರಣ ಸ್ಥಾನೈಕ್ಯ ಮತ್ಯೈಕ್ಯವೆಂದೇ ಏಕೀಭಾವವೆಂಬ ಪದಕ್ಕೆ ಅರ್ಥಮಾಡಬೇಕೆಂಬುದು ಸ್ಪಷ್ಟವಾಗುವದು.

ಮುಕ್ತರಿಗೆ ಪರಮಾತ್ಮನ ಜತೆಗೆ ಮತ್ಯೈಕ್ಯವು ಇರುವದು ಎಂಬ ಬಗ್ಗೆ ಎರಡು ವಾಕ್ಯಗಳ ಪ್ರಮಾಣವನ್ನು ಶ್ರೀಮದಾಚಾರ್ಯರೇ ಈ ಸಂದರ್ಭದಲ್ಲಿ ಕೊಟ್ಟಿದ್ದಾರೆ. ಆ ಪ್ರಮಾಣ ವಾಕ್ಯಗಳನ್ನು ಈ ಕೆಳಗೆ ಕೊಡಲಾಗಿದೆ.

**೭೩. ಕಾಮೇನ ಮೇ ಕಾಮ ಅಗಾತ್ ಹೃದಯಾತ್ ಹೃದಯಂ ಮೃತ್ಯೋಃ।**
**ಯತ್ ಅಮೀಷಾಂ ಅದಃ ಪ್ರಿಯಂ ತದ್ಯೈ(ದೇ)(?)ತೂಪಮಾಮಭಿ॥**

*– ಚಿತ್ಯುಪನಿಷತ್ ೧೫, ೨+ , ತೈತ್ತಿರೀಯ ಆರಣ್ಯಕ ೩, ೧೫, ೨+, ಅಥರ್ವವೇದ ಸಂಹಿತಾ ೩, ೫೨, ೪.*

**ಪದಚ್ಛೇದ, ಅನ್ವಯ ಮತ್ತು ಅರ್ಥ :– ಮೃತ್ಯೋಃ (ಸಂಹರ್ತುಃ ಈಶ್ವರಸ್ಯ) ಕಾಮೇನ (ಇಚ್ಛಾನುಸಾರೇಣ ಏವ) ಮೇ ಕಾಮಃ ಆಗಾತ್ (ಮುಕ್ತೌ ಆಗಚ್ಛತು) । ಮೃತ್ಯೋಃ ಹೃದಯಾತ್ ಹೃದಯಂ (ಸಂಕಲ್ಪಂ ಅನುಸೃತ್ಯ ಏವ) ಮೇ ಹೃದಯಂ (ಸಂಕಲ್ಪಃ) ಆಗಾತ್ (ಆಗಚ್ಛತು)। ಅಮೀಷಾಂ (ಅಮುಷ್ಯ ಮೃತ್ಯೋಃ) ಯತ್ ಅದಃ ಪ್ರಿಯಂ ತತ್ ಏವ ಮಾಂ ಅಭಿ ಆ (ಸಮ್ಯಕ್) ಏತು (ಮಮ ಅಪಿ ಪ್ರಿಯಂ ಭವತು)। (ಇತಿ ಮುಮುಕ್ಷುಣಾ ಪ್ರಾರ್ಥ್ಯತೇ ।)**

**ಅರ್ಥ:–** ಪರಮಾತ್ಮನ ಇಚ್ಛೆಗನುಗುಣವಾಗಿಯೇ ನನಗೆ ಮುಕ್ತಿಯ ವಿಷಯದಲ್ಲಿ ಇಚ್ಛೆ ಬರಲಿ. ನನ್ನ ಸಂಕಲ್ಪವು ಆ ಪರಮಾತ್ಮನ ಸಂಕಲ್ಪವನ್ನನುಸರಿಸಿಯೇ ಇರಲಿ. (ನಿನ್ನ ಚಿತ್ತಕೆ ಬಂದುದು ಎನ್ನ ಚಿತ್ತಕೆ ಬರಲಿ ಶ್ರೀನಿವಾಸ ದಯಾನಿಧೇ ಎಂದು ದಾಸರು ಮಾಡಿದ ಪ್ರಾರ್ಥನೆಯನ್ನು ಇಲ್ಲಿ ಸ್ಮರಿಸಬೇಕು). ಪರಮಾತ್ಮನಿಗೆ ಯಾವದು ಪ್ರಿಯವೋ ಅದೇ ನನಗೂ ಪ್ರಿಯವಾಗಲಿ.

ಹೀಗೆಯೇ ಮೋಕ್ಷಾಪೇಕ್ಷಿಯಾದ ಸಾಧಕನು ಪ್ರಾರ್ಥಿಸುತ್ತಾನೆ. ಇದರಿಂದ ಮೋಕ್ಷಪೂರ್ವದಲ್ಲಿ ಅಪೇಕ್ಷಿಸಿ ಪ್ರಾರ್ಥಿಸಲ್ಪಟ್ಟ ಮತ್ಯೈಕ್ಯವು ಮೋಕ್ಷದಲ್ಲಿ ಇರುವದೆಂದು ಸಿದ್ಧವಾಗುವದು. ಏಕೀಭಾವವೆಂಬುದು ಸ್ವರೂಪೈಕೀಭಾವವಾಗಿರದೇ ಮತ್ಯೈಕೀಭಾವವೆಂಬುದು ಇದರ ತಾತ್ಪರ್ಯ.

*ಶ್ರುತ್ಯರ್ಥಷಟ್ಪದಿ*ಯಲ್ಲಿ ಈ ಶ್ರುತಿಯ ಅರ್ಥ ಹೀಗೆ ;

*ಸರುವಸಂಹೃತ್ಯಾದಿಕಾರಣ*
*ಹರಿಯೆ, ನಿನ್ನಯ ಇಚ್ಛೆಗನುಗುಣ–*
*ವಿರಲಿ ಎನ್ನಯ ಇಚ್ಛೆ ಸತತವು ಮುಕುತಿಸುಖದಾತ,*

Rarest Archiver

*ಸರುವದಾ ತ್ವಚ್ಚಿತ್ತಕನುಗುಣ–*
*ವಿರಲಿ ಮನ್ಮನ ಭವದಭೀಷ್ಟಕೆ*
*ಸರಿಯಗಾಣಲಿ ಎನ್ನಭೀಷ್ಟವು, ಕರುಣೆದೋರು, ಹರಿ !!*

**೭೪. ವಿಭೇದಜನಕೇಽಜ್ಞಾನೇ ನಾಶಂ ಆತ್ಯಂತಿಕಂ ಗತೇ ।ಆತ್ಮನೋ ಬ್ರಹ್ಮಣೋ ಭೇದಂ ಅಸಂತಂ ಕಃ ಕರಿಷ್ಯತಿ ॥ ಯಾವನ್ಮೋಕ್ಷಂ ತು ಭೇದಃ ಸ್ಯಾತ್ ಜೀವಸ್ಯ ಪರಮಸ್ಯ ಚ । ತತಃಪರಂ ನ ಭೇದೋಽಸ್ತಿ ಭೇದಹೇತೋಃ ಅಭಾವತಃ ॥**

– *ಜಾಬಾಲದರ್ಶನೋಪನಿಷತ್ ೪–೬೩, ? (ಉಪನಿಷದ್ವಾಕ್ಯಮಹಾಕೋಷಃ* ಇದರ ಪ್ರಕಾರ. ಆದರೆ, ಇವೇ ಶ್ಲೋಕಗಳು ನಮಗೆ ಉಪಲಬ್ಧವಿದ್ದ *ಜಾಬಾಲೋಪನಿಷತ್ತಿನ* ಎಲ್ಲ ಪ್ರತಿಗಳಲ್ಲಿ ಕಂಡುಬರಲಿಲ್ಲ. ಈ ಶ್ಲೋಕದ ಕೆಲಭಾಗಗಳು ಮಾತ್ರ ಒಂದು ಪ್ರತಿಯಲ್ಲಿ ಕಂಡು ಬಂದಿವೆ. ಇದು ಶ್ರೀಮಟ್ಟೀಕಾಕೃತ್ಪಾದರಿಂದ ಉದಾಹರಿಸಲ್ಪಟ್ಟ ಶ್ಲೋಕವು, ಇದು ಮತ್ತೆ ಬೇರೆ ಯಾವುದಾದರೂ ಗ್ರಂಥದಿಂದ ಉದ್ಧೃತವಾಗಿದೆಯೋ ಎಂಬ ಪ್ರಶ್ನೆಯೂ ಇದೆ. ಆಕರಗಳ ವಿಷಯಕ್ಕೆ ಸಂಪೂರ್ಣ ಸಂಶೋಧನೆಯಾಗಬೇಕಾದುದು ಅಗತ್ಯವಿದೆ. ಟೀಕೆಯ ಉಪಲಬ್ಧ ಟಿಪ್ಪಣಿಗಳಲ್ಲಿ ಈ ಶ್ಲೋಕಗಳ ಆಕರವನ್ನು ಸೂಚಿಸಿದಂತೆ ಕಂಡು ಬರಲಿಲ್ಲ. ಈ ಉಪನಿಷತ್ತನ್ನು ಪ್ರಕಟಿಸಿದ ಒಂದು ಪ್ರಕಾಶನದಲ್ಲಿ ಜಾಬಾಲೋಪನಿಷತ್ ಇದು ಅಥರ್ವವೇದಾಂತರ್ಗತ ಎಂದು ಸೂಚಿಸಲಾಗಿದೆ).

**ಈ ಶ್ಲೋಕಗಳು ಶ್ರೀಮಟ್ಟೀಕಾಕೃತ್ಪಾದರ ಶ್ರೀಮದ್ವಿಷ್ಣುತತ್ತ್ವವಿನಿರ್ಣಯ ಟೀಕೆಯಲ್ಲಿ ಉದಾಹರಿಸಲ್ಪಟ್ಟಿವೆ.** ಉದಾಹೃತ ಶ್ಲೋಕಗಳ ಕೆಲಭಾಗಗಳಿರುವ *ಜಾಬಾಲದರ್ಶನೋಪನಿಷತ್* ಇದು– *೧೦೮ ಉಪನಿಷದೇ* –ಸಂಸ್ಕೃತಿ ಸಂಸ್ಥಾನ್ ಬರೇಲಿ ಇವರಿಂದ ೧೯೬೭ ರಲ್ಲಿ ಪ್ರಕಾಶಿತವಾದ ಉಪನಿಷತ್ಪ್ರಕಾಶನಮಾಲೆಯ ಬ್ರಹ್ಮವಿದ್ಯಾಖಂಡದಲ್ಲಿ ೩೦ನೆಯ ಉಪನಿಷತ್ತಾಗಿ ಪ್ರಕಾಶಿತವಾಗಿದೆ. ಈ ಉಪನಿಷತ್ತಿನ ಚತುರ್ಥಖಂಡದಲ್ಲಿ ೬೩ನೆಯ ಶ್ಲೋಕವಾಗಿ ಈ ಮೇಲೆ ಉಲ್ಲೇಖಿಸಲ್ಪಟ್ಟ ಶ್ಲೋಕವು ಕಂಡುಬರುವದು. ಆದರೆ ಇಲ್ಲಿ ಮೇಲೆ ಉದಾಹರಿಸಲ್ಪಟ್ಟ ಶ್ಲೋಕ ಸಂಪೂರ್ಣವಾಗಿ ಉಪಲಬ್ಧವಿಲ್ಲ. ಅಲ್ಲದೆ ಪಾಠಾಂತರವೂ ಕಂಡುಬರುವದು. ಈ ಪ್ರಕಾಶನದಲ್ಲಿ ಪ್ರಕಾಶಿತವಾಗಿದ್ದ ಶ್ಲೋಕವು ಹೀಗೆ ಇದೆ : **ವಿಭೇದಜನಕೇ ಜ್ಞಾನೇ ನಷ್ಟೇ ಜ್ಞಾನಬಲಾತ್ ಮುನೇ । ಆತ್ಮನೋ ಬ್ರಹ್ಮಣೋ ಭೇದಂ ಅಸಂತಂ ಕಿಂ ಕರಿಷ್ಯತಿ॥**

ಇದರ ಹಿಂದೀ ಭಾಷಾಂತರವನ್ನು ಅಲ್ಲಿ ಹೀಗೆ ಕೊಟ್ಟಿದ್ದಾರೆ; ಹೇ ಮಹಾಮುನೇ, ಜ್ಞಾನರೂಪೀಬಲಸೇ ಜಬ್ ಭೇದ ಉತ್ಪನ್ನಕರನೇವಾಲಾ ಅಜ್ಞಾನ ನಷ್ಟ ಹೋ ಜಾಯಗಾ, ತಬ್ ಐಸಾ ಕೌನ್ ಮೂರ್ಖ ಹೈ ಜೋ ಆತ್ಮಾ ಔರ್ ಬ್ರಹ್ಮ ಮೇ ಮಿಥ್ಯಾ ಭೇದ ಕೀ ಬಾತ್ ಕಹೇಗಾ । ಇದರರ್ಥ ಹೀಗೆ; ಮಹಾಮುನಿಯೆ, ಯಾವಾಗ ಭೇದವನ್ನು ಹುಟ್ಟಿಸುವ ಅಜ್ಞಾನವು ಜ್ಞಾನರೂಪಬಲದಿಂದ ನಶಿಸಿಬಿಡುವದೋ ಆಗ ಆತ್ಮ ಹಾಗೂ ಬ್ರಹ್ಮರಲ್ಲಿ ಮಿಥ್ಯಾಭೇದವಿರುವದೆಂದು ಯಾವ

Rarest Archiver

ಮೂರ್ಖನು ವಾದಿಸುವನು? (ಇದರಿಂದ ಸತ್ಯಭೇದವಿರುವದೆಂದು ಹೇಳಬೇಕೆಂದು ತಾತ್ಪರ್ಯವೋ?)

ಶ್ರೀ ಟೀಕಾಕೃತ್ಪಾದರು ಉದಾಹರಿಸಿದ ಶ್ಲೋಕದ ಅನ್ವಯ ಸ್ಪಷ್ಟವಿದೆ. ಈ ಶ್ಲೋಕಕ್ಕೆ ಮತ್ತೈಕ್ಯಪರವಾದ ಅರ್ಥವನ್ನು ಶ್ರೀ ಟೀಕಾಕೃತ್ಪಾದರೇ ಸೂಚಿಸಿದ್ದಾರೆ. ಕೆಲ ಪದಗಳ ಅರ್ಥ ಕೆಲ ಟಿಪ್ಪಣಿಗಳಿಂದ ಸ್ಪಷ್ಟವಾಗುವದು;

ಇಲ್ಲಿ **ವಿಭೇದಜನಕೇ** ಪದದ ಅರ್ಥವನ್ನು ಟಿಪ್ಪಣೀಕಾರರು ಬಹಳ ಸ್ವಾರಸ್ಯವಾಗಿ ಹೇಳಿದ್ದಾರೆ. ಉದಾಹರಣೆಗೆ ಶ್ರೀ ರಾಯರು **ಮಿತ್ರಭೇದಃ ಇತ್ಯಾದೌ ಇವ ಅತ್ರ ಭೇದಶಬ್ದಃ ಭಗವನ್ಮತಿವಿಷಯವಿರುದ್ಧಾರ್ಥವಿಷಯಕಜ್ಞಾನಪರಃ। ತಜ್ಜನಕೇ ಅಜ್ಞಾನೇ ಸಂಸಾರಹೇತುಭೂತೇ।** *(ಭಾವದೀಪ)* / ಶ್ರೀನಿವಾಸತೀರ್ಥರ ಟಿಪ್ಪಣಿಯಲ್ಲಿಯೂ ಕೂಡ ಇದೇ ರೀತಿಯ ಅರ್ಥ ಹೇಳಲ್ಪಟ್ಟಿದೆ; **ಅತ್ರ ಭೇದಶಬ್ದಃ ವಿರೋಧವಾಚೀ । ಮಿತ್ರಭೇದ ಇತಿ ದರ್ಶನಾತ್)** ಮಿತ್ರಭೇದ ಇತ್ಯಾದಿ ಪದಗಳ ಪ್ರಯೋಗ *ಪಂಚತಂತ್ರ, ಹಿತೋಪದೇಶ,* ಅಥವಾ *ಅರ್ಥಶಾಸ್ತ್ರ*ಗಳಲ್ಲಿ ಮಿತ್ರರಲ್ಲಿ ವಿರುದ್ಧಬುದ್ಧಿ –ತಪ್ಪುತಿಳುವಳಿಕೆಯನ್ನು ಹುಟ್ಟಿಸುವ ಬುದ್ಧಿ ಎಂಬರ್ಥದಲ್ಲಿ ಕಂಡುಬರುವದು. ಅಲ್ಲಿಯಂತೆ ಇಲ್ಲಿಯೂ ಕೂಡ ಪರಮಾತ್ಮನ ಸಂಕಲ್ಪದ ವಿರುದ್ಧವಾಗಿರುವ ವಿಷಯಗಳ ಜ್ಞಾನವೆಂಬರ್ಥದಲ್ಲಿ ವಿಭೇದಜನಕ ಎಂಬ ಪದವು ಪ್ರಯೋಗಿಸಲ್ಪಟ್ಟಿದೆ. ಇಂಥ ಜ್ಞಾನವು ಜೀವನಿಗೆ ಅಜ್ಞಾನದ ಕಾರಣದಿಂದಲೇ ಇರುವದರಿಂದ ಹಾಗೂ ಈ ಅಜ್ಞಾನವು ಸಂಸಾರಾವಸ್ಥೆಯಲ್ಲಿಯೇ ಇರುವದರಿಂದ ಸಂಸಾರಾವಸ್ಥೆಗೆ ಕಾರಣೀಭೂತವಾದದ್ದೇ ಈ ವಿಭೇದಜನಕವಾದ ಅಜ್ಞಾನವು. ಅದು ಸಂಪೂರ್ಣವಾಗಿ ನಾಶ ಹೊಂದಿದಾಗ **ಆತ್ಮನಃ ಸ್ವಸ್ಯ ಭೇದಂ** ಎಂದರೆ ಪರಮಾತ್ಮನ ಸಂಕಲ್ಪದ ವಿರುದ್ಧವಾಗಿ ವಿಚಾರಿಸುವ ಪ್ರವೃತ್ತಿ ಎಂದರ್ಥ. ಅಸಂತಮ್ ಎಂದರೆ ಇಲ್ಲದಿದ್ದುದು ಅಥವಾ ಸುಳ್ಳಾದದ್ದು ಎಂದಲ್ಲ. ಅಸತ್ ಎಂದರೆ ನ ಸತ್ ಅಸತ್, ಸತ್ ಎಂದರೆ ಒಳ್ಳೆಯದು, ಅಸತ್ ಎಂದರೆ ಒಳ್ಳೆಯದು ಆಗದಿದ್ದುದು ಅಂದರೆ ದುಷ್ಟವಾದದ್ದು ಅಥವಾ ಕಲ್ಯಾಣಕಾರಿಯಲ್ಲದಿರುವದು, ಅನರ್ಥಕ್ಕೆ ಕಾರಣ–ವಾದದ್ದು ಎಂದರ್ಥ. (ಸದ್ಭಾವೇ ಸಾಧುಭಾವೇ ಚ ಸದಿತ್ಯೇತತ್ಪ್ರಯುಜ್ಯತೇ) ಪರಮಾತ್ಮನ ಸಂಕಲ್ಪಕ್ಕೆ ವಿರುದ್ಧವಾಗಿ ವಿಚಾರಿಸುವದು ಹಾಗೂ ವರ್ತಿಸುವದು ಅನರ್ಥಕಾರಕವೆಂಬುದು ಸ್ಪಷ್ಟ.

**ಈ ಶ್ಲೋಕಗಳ ಒಟ್ಟರ್ಥ:–** ಪರಮಾತ್ಮನ ಸಂಕಲ್ಪದ ವಿರುದ್ಧವಾಗಿ ವಿಚಾರ ಮಾಡುವ ಪ್ರವೃತ್ತಿಗೆ ಕಾರಣವಾದ ಅಜ್ಞಾನವೇ ಸಂಪೂರ್ಣವಾಗಿ ನಾಶವಾದಾಗ (ಪರಮಾತ್ಮ–ಜೀವರಲ್ಲಿ) ಅನರ್ಥಕಾರಕವಾದ ಮತಭೇದವು ಇರುವದು ಎಂದು ಯಾವನು ವಾದಿಸಬಹುದು? ಮೋಕ್ಷವಾಗುವ ವರೆಗೆ ಮಾತ್ರ ಜೀವನಿಗೆ ಪರಮಾತ್ಮನ ಸಂಕಲ್ಪಕ್ಕೆ

Rarest Archiver

ವಿರುದ್ಧವಾದ ವಿಚಾರವಿರಬಹುದು. ಮುಂದೆ ಮೋಕ್ಷವಾದ ಬಳಿಕ ಮಾತ್ರ ಈ ವಿಚಾರಕ್ಕೆ ಕಾರಣವಾದ ಅಜ್ಞಾನವೇ ಇಲ್ಲದಿರುವದರಿಂದ ಜೀವನ ವಿಚಾರವು ಪರಮಾತ್ಮನ ಸಂಕಲ್ಪವನ್ನನುಸರಿಸಿಯೇ ಇರುವದು. ಅಂದರೆ ಆಗ ಮತ್ಯೈಕ್ಯವಿರುವದು.

*ಶ್ರುತ್ಯರ್ಥಷಟ್ಪದಿ*ಯಲ್ಲಿ ಈ ಶ್ಲೋಕದ ಭಾವಸಂಗ್ರಹ ಹೀಗೆ :–

*ಪರಮಪುರುಷನ ಮತಿಯನರಿಯದ–*
*ಲಿರುವ ಜೀವನು ತದ್ವಿರೋಧದಿ*
*ಕೊರಗುತಿರುವನು ಭವದಿ ಮತಿಭೇದಗಳ ಕಾರಣದಿ,*
*ಕರಗಿ ನಶಿಸಲು ಭವದ ಕಾರಣ–*
*ವಿರದು ಮತಿವೈಷಮ್ಯ ಜೀವಗೆ*
*ಪರಮಪುರುಷನ ಮನಕೆ ತಪ್ಪನು ಜೀವ ಮುಕುತಿಯೊಳು.* ॥

**೭೫. ಬ್ರಹ್ಮಮತ್ಯನುಕೂಲಾ ಮೇ ಮತಿರ್ಮುಕ್ತೌ ಭವಿಷ್ಯತಿ।ಅತಃ ಪ್ರಾಯೋಽನುಕೂಲತ್ವಂ ಇದಾನೀಂ ಅಪಿ ಮೇ ಸ್ಥಿತಮ್ ॥(?)**

**ಅನ್ವಯ :– ಮೇ ಮತಿಃ ಮುಕ್ತೌ ಬ್ರಹ್ಮಮತ್ಯನುಕೂಲಾ ಭವಿಷ್ಯತಿ । ಅತಃ ಇದಾನೀಂ ಅಪಿ ಮೇ ಪ್ರಾಯಃ (ಮತೇಃ) ಅನುಕೂಲತ್ವಂ ಸ್ಥಿತಮ್ ॥**

ಇದು ಜೀವನ್ಮುಕ್ತನು ಹೇಳುವ ವಾಕ್ಯವೆಂದು ಶ್ರೀ ಟೀಕಾಕೃತ್ಪಾದರ ಅವತಾರಿಕಾ ವಾಕ್ಯದಿಂದ ತಿಳಿಯುವದು. **ಅರ್ಥ–** ಮುಕ್ತಿಯಲ್ಲಿ ನನ್ನ ಮನಸ್ಸಿನ ವಿಚಾರಗಳು ಪರಮಾತ್ಮನ ಸಂಕಲ್ಪವನ್ನನುಸರಿಸಿಯೇ ಇರುವಂಥವು ಆಗುವವಿವೆ. ಆದ್ದರಿಂದ ಈಗಲೂ ಕೂಡ (ಜೀವನ್ಮುಕ್ತ್ಯವಸ್ಥೆಯಲ್ಲಿಯೂ ಕೂಡ) ನನ್ನ ವಿಚಾರವು ಬಹುತೇಕವಾಗಿ ಪರಮಾತ್ಮನ ಸಂಕಲ್ಪಕ್ಕೆ ಅನುಕೂಲವಾಗಿಯೇ ಇದೆ. (ನಮ್ಮಲ್ಲಿ ಮತ್ಯೈಕ್ಯವಿದೆ.)

**ವಿವರಣೆ:–**ಜೀವನು ಕೇವಲ ಸಂಸಾರಿಯಾಗಿರಬಹುದು. ಮುಮುಕ್ಷುವಾಗಿರಬಹುದು. ಜೀವನ್ಮುಕ್ತನಾಗಿರಬಹುದು. ಅಥವಾ ಸಂಪೂರ್ಣ ಮುಕ್ತನಾಗಿರಬಹುದು. *ಸಂಪೂರ್ಣ ಮುಕ್ತ್ಯವಸ್ಥೆ*ಯಲ್ಲಿ ಮತ್ಯೈಕ್ಯವಿದೆ ಎಂದು **ಕರ್ಮಾಣಿ ವಿಜ್ಞಾನಮಯಶ್ಚ ಆತ್ಮಾ ..** ಇತ್ಯಾದಿ ವಾಕ್ಯದಿಂದ ವಿವರಿಸಿದರು. **ಕಾಮೇನ ಮೇ ಕಾಮ ಅಗಾತ್..**ಇತ್ಯಾದಿ ವಾಕ್ಯದಿಂದ ಮುಮುಕ್ಷು ಜೀವನು ನಿನ್ನ ಚಿತ್ತಕೆ ಬಂದುದೆನ್ನ ಚಿತ್ತಕೆ ಬರಲಿ ಎಂದು ಪ್ರಾರ್ಥಿಸುವನೆಂದು ಹೇಳಿದರು. ಈಗ ಜೀವನ್ಮುಕ್ತ್ಯವಸ್ಥೆಯಲ್ಲಿ ಜೀವಪರಮಾತ್ಮರಲ್ಲಿಯ ಮತಿಸಾಮರಸ್ಯದ ವಿಷಯಕ್ಕೆ ಹೇಳುವರೆಂಬುದು ಕೂಡುವದು. ಈ ವಾಕ್ಯದಲ್ಲಿ ಮುಂದೆ ಮತ್ಯೈಕ್ಯ ಬರುವದು ಹಾಗೂ ಈಗ ಬಹುಶಃ ವಿಚಾರಗಳಲ್ಲಿ ಸಾಮರಸ್ಯವಿರುವದು ಎಂದು ಹೇಳಿದ್ದರಿಂದ ಈಗ ಎಂದರೆ ಸಂಸಾರಾವಸ್ಥೆಯೋ ಎಂದು ಸಂಶಯ ಬರಬಹುದೆಂದು ಊಹಿಸಿಯೇ ಶ್ರೀಮಟ್ಟೀಕಾ–

Rarest Archiver

ಕೃತ್ಪಾದರು ಆ ರೀತಿಯ ಅವತಾರಿಕೆಯನ್ನು ಕೊಟ್ಟಿದ್ದಾರೆಂದು ಶ್ರೀ ರಾಯರು ಭಾವದೀಪದಲ್ಲಿ ವಿವರಿಸಿದ್ದಾರೆ. ಈ ವಿಷಯಕ್ಕೆ ಶ್ರೀ ವ್ಯಾಸತತ್ವಜ್ಞರ ಟಿಪ್ಪಣಿಯಲ್ಲಿ ಇನ್ನಿತರ ಪ್ರಮಾಣಗಳನ್ನು ಕೊಟ್ಟು **ಈಗ** ಎಂಬುದು ಗೌಣಮುಕ್ತಿಯನ್ನು ಸೂಚಿಸುವದೆಂದು ವಿವರಿಸಲಾಗಿದೆ. **ಪ್ರಾಯಃ ಅನುಕೂಲತ್ವಮ್–** ಬಹುತೇಕ–ವಾಗಿ ಮತ್ಯೈಲಕ್ಯವು ಎಂದು ಹೇಳಿದುದರಿಂದ ಜೀವನ್ಮುಕ್ತ್ಯವಸ್ಥೆಯ ವಿಷಯಕ್ಕೆ ಈ ಶ್ಲೋಕ ಪ್ರವೃತ್ತವಾಗಿದೆ ಎಂದು ತಿಳಿಯುವದು. ಜೀವನ್ಮುಕ್ತ್ಯವಸ್ಥೆಯಲ್ಲಿರದ ಜೀವನಿಗೆ ಬಹುತೇಕ ಮತ್ಯೈಲಕ್ಯವೂ ಇರುವದಿಲ್ಲ. ಯಾವಾಗೊಮ್ಮೆ ಪರಮಾತ್ಮನ ಸಂಕಲ್ಪದಂತೆ ಆಗಿದೆ ಎಂಬ ಮನವರಿಕೆ ಜೀವನಿಗೆ ಬರಬಹುದು.

ಇನ್ನು, ಇಲ್ಲಿ ಇನ್ನೊಂದು ವಿಷಯವನ್ನು ಗಮನಿಸಬೇಕಾದುದು ಅವಶ್ಯವೆಂದೆನಿಸುವದು. ಪರಮಾತ್ಮನ ಸಂಕಲ್ಪವು ಜೀವನಿಗೆ (ಯಾವುದೇ ಅವಸ್ಥೆಯಲ್ಲಾದರೂ) ತಿಳಿಯಲಾರದು. ಹೀಗಿದ್ದಾಗ ಮತ್ಯೈಲಕ್ಯವಿರುವ ವಿಷಯ ಯಾರಿಗೇ ಆಗಲಿ ಹೇಗೆ ಗೊತ್ತಾಗುವದು ಎಂಬ ಪ್ರಶ್ನೆ ಉಳಿಯುವದು. ಅದಕ್ಕೆ ಹೀಗೆ ಸಮಾಧಾನ ಹೇಳಬಹುದೆಂದು ತೋರುವದು; ಸಂಸಾರಾವಸ್ಥೆಯಲ್ಲಿ ಜೀವನಿಗೆ ಪರಮಾತ್ಮನ ಸಂಕಲ್ಪದಂತೆ ಎಲ್ಲ ನಡೆಯುವದೆಂಬ ದೃಢವಾದ ಜ್ಞಾನವಿರುವದಿಲ್ಲ. ನಾನೇ ಎಲ್ಲ ಮಾಡುವವನು ಎಂಬ ಕಲ್ಪನೆ ಇರುವದು. ಜೀವನ್ಮುಕ್ತ್ಯವಸ್ಥೆಯಲ್ಲಿ ಎಲ್ಲ ಘಟನೆಗಳನ್ನೂ ಪರಮಾತ್ಮನೇ ಮಾಡಿಸುವವನು ಎಂಬ ಜ್ಞಾನವಿರುವದಲ್ಲದೆ ಅದರಲ್ಲಿ ಸಾಕಷ್ಟು ದಾರ್ಢ್ಯವೂ ಇರುವದು. ಮುಕ್ತ್ಯವಸ್ಥೆಯಲ್ಲಿ ಜೀವರಿಗೆ ಈ ವಿಷಯಕ್ಕೆ ನಿರಂತರ–ವಾಗಿಯೂ ಬಹಳ ದೃಢವಾದ ಜ್ಞಾನವಿರುವದು. ಹೀಗೆ ದಾರ್ಢ್ಯವಿರುವ (ಮುಕ್ತ) ಜೀವರ ಪರಿಸರವೇ ಅಲ್ಲಿರುವದರಿಂದ ಪ್ರಾಯಃ ಅನುಕೂಲತ್ವ ವಿರುವದೆಂದಲ್ಲ. ನಿರಂತರವೂ ಸಾಮರಸ್ಯವಿದ್ದು ಅದರ ಅನುಭವವೂ ಮುಕ್ತರಿಗೆ ನಿರಂತರವಾಗಿಯೇ ಇರುವದೆಂದು ಇಲ್ಲಿ ತಾತ್ಪರ್ಯವು. **ಓಂ ಅವಿಭಾಗೋ ವಚನಾತ್ ಓಂ** (ಬ್ರ. ಸೂ. ೪–೨–೮–೧) ಎಂಬ ಸೂತ್ರದಲ್ಲಿ ಪರಮಾತ್ಮನೊಡನೆ ಮುಕ್ತರಿಗೆ ಈ ರೀತಿಯ ತಾದಾತ್ಮ್ಯವಿರುವದನ್ನು ಶ್ರೀ ವೇದವ್ಯಾಸರು ಸ್ಪಷ್ಟವಾಗಿ ತಿಳಿಸಿದ್ದಾರೆ.

ಈ ಶ್ರುತಿಯ ತಾತ್ಪರ್ಯವು ***ಶ್ರುತ್ಯರ್ಥಷಟ್ಪದಿ***ಯಲ್ಲಿ ಹೀಗೆ:–

*ಪರಮಪುರುಷನ ಚಿತ್ತಕನುಗುಣ–*
*ವಿರುವದಿದೆ ಮನವೆನ್ನ ಮುಕುತಿಲಿ*
*ನಿರುತವೆನ್ನುತಲೀಗಳೆನ್ನಯ ಮನವು ಬಹುತೇಕ,*
*ಹರಿಯ ಚಿತ್ತಕೆ ಬಂದುದಾಯಿತು,*
*ಹರಿಯಧೀನವು ಜಗವು ತಾನೆಂ–*
*ದರಿದು ಜೀವನ್ಮುಕ್ತಿದೆಶೆಯೊಳು ಪಡೆಯಿತಾಸರೆಯ.* // //

Rarest Archiver

**೭೬. ಯೇನಾಕ್ರಮಂತ್ಯೃಷಯೋ ಹ್ಯಾಪ್ತಕಾಮಾ ಯತ್ರ ತತ್ಸತ್ಯಸ್ಯ ಪರಮಂ ನಿಧಾನಮ್ ॥** – *ಆಥರ್ವಣೋಪನಿಷತ್ ೫–೬; (ಮುಂಡಕೋಪನಿಷತ್ ೩–೧–೬)*

ಈ ವಾಕ್ಯವು ಆಥರ್ವಣೋಪನಿಷತ್ತಿನ ಪಂಚಮ ಖಂಡದಲ್ಲಿಯ ೬ನೆಯ ಮಂತ್ರದ ೩ ಮತ್ತು ೪ ಪಾದಗಳನ್ನೊಳಗೊಂಡಿದೆ. ಈ ಮಂತ್ರದ ಸಂಪೂರ್ಣ ಪಾಠವು ಹೀಗಿದೆ:– **ಸತ್ಯಮೇವ ಜಯತಿ ನಾನೃತಂ ಸತ್ಯೇನ ಪಂಥಾ ವಿತತೋ ದೇವಯಾನಃ । ಯೇನಾಕ್ರಮಂತ್ಯೃಷಯೋ ಹ್ಯಾಪ್ತಕಾಮಾ ಯತ್ರ ತತ್ಸತ್ಯಸ್ಯ ಪರಮಂ ನಿಧಾನಮ್॥**

**ಅನ್ವಯ ಹಾಗೂ ಅರ್ಥ:–** (ಶ್ರೀ ರಾಯರ ಖಂಡಾರ್ಥವನ್ನನುಸರಿಸಿ)– **ಸತ್ಯಂ** ಸತ್ಯಾಖ್ಯಭಗವನ್ನಿಷ್ಠಾಯುಕ್ತಂ ಅಧಿಕಾರಿಜೀವಜಾತಂ **ಏವ ಜಯತಿ** ಪ್ರಾಪ್ನೋತಿ ಆತ್ಮಾನಂ ಇತಿ ವಿಪರಿಣಾಮೇನ ಅನ್ವಯಃ । **ನ ಅನೃತಂ।** ಋತಾಖ್ಯಹರಿವಿರುದ್ಧ–ತ್ವಹೇತುನಾ ಅನೃತಪದಾಭಿಧೇಯಂ ಅಸುರಜಾತಂ ನ ಜಯತಿ ಆತ್ಮಾನಮ್ । ಕುತಃ । ತತ್ಪ್ರಾಪ್ತಿಮಾರ್ಗಸ್ಯ ತದಧೀನತ್ವಾತ್ ಇತ್ಯಾಹ । **ಯತ್ರ** ಲೋಕೇ **ಸತ್ಯಸ್ಯ** ಸದ್ಗುಣಸ್ಯ ಹರೇಃ **ಪರಮಂ ತತ್ ನಿಧಾನಂ** ಪ್ರತ್ಯಕ್ಷತಯಾ ಸನ್ನಿಧಾನಂ ತಂ ವೈಕುಂಠಲೋಕಂ **ಯೇನ** ಪಥಾ ಮಾರ್ಗೇಣ **ಆಪ್ತಕಾಮಾಃ ಋಷಯಃ** ಜ್ಞಾನಿನಃ **ಆಕ್ರಮಂತಿ** ಗಚ್ಛಂತಿ ಅಯಂ **ದೇವಯಾನಃ** ದೇವಯಾನಾಖ್ಯಃ **ಪಂಥಾಃ ಸತ್ಯೇನ** ಹರಿಣಾ **ವಿತತಃ** ವಿಸ್ತೃತಃ ತದಧೀನಃ ಇತಿ ಯಾವತ್ ।

**ಅರ್ಥ:–**ಮುಮುಕ್ಷುಗಳಾದ ಮತ್ತು ಶಮದಮಾದಿ ಅಧಿಕಾರ ಸಂಪತ್ತಿನಿಂದ ಕೂಡಿದ ಜೀವರುಗಳು ಮಾತ್ರ ಪರಮಾತ್ಮನ ಸನ್ನಿಧಾನವನ್ನು ಪಡೆಯಲು ಸಮರ್ಥರಾಗುತ್ತಾರೆ. ಅಸುರರಿಗೆ ಪರಮಾತ್ಮನ ಸನ್ನಿಧಿಯನ್ನು ಪಡೆಯಲು ಸಾಧ್ಯವಾಗಲಾರದು. ಏಕೆಂದರೆ ಸತ್ಯನಿಷ್ಠರಾದವರು ಮಾತ್ರ ಅವನನ್ನು ಪಡೆಯಲು ಸಾಧ್ಯ. ಯಾವ ಲೋಕದಲ್ಲಿ ಸತ್ಯನಾದ ಅಂದರೆ ಸದ್ಗುಣಗಣಪರಿಪೂರ್ಣನಾದ ಹರಿಯ ಪ್ರಕಟವಾದ ಸನ್ನಿಧಾನವಿದೆಯೋ ಆ ವೈಕುಂಠ ಲೋಕಕ್ಕೆ ಆಪ್ತಕಾಮರಾದ ಅಂದರೆ ಕೃತಾರ್ಥರಾದ ಋಷಿಗಳು ದೇವಯಾನವೆಂಬ ಮಾರ್ಗದಿಂದ ಹೋಗುವರು. ಅಂದರೆ ಅವರಿಗೆ ಅಲ್ಲಿ ಪರಮಾತ್ಮನ ಸ್ಥಾನೈಕ್ಯವು ಲಭಿಸುವದು.

**ವಿಷ್ಣುತತ್ವವಿನಿರ್ಣಯದಲ್ಲಿ ಈವಾಕ್ಯಕ್ಕೆ ಸಂಗತಿ:–**

ಈ ವಾಕ್ಯವನ್ನು ಶ್ರೀಮದಾಚಾರ್ಯರು ಮುಕ್ತಿಯಲ್ಲಿಯೂ ಜೀವಪರಮಾ–ತ್ಮೈಕ್ಯವಿಲ್ಲ, ಭೇದವೇ ಇದೆ ಎಂದು ಪ್ರಮಾಣಪುರಸ್ಸರವಾಗಿ ತಿಳಿಸುವ ಸಂದ–ರ್ಭದಲ್ಲಿ ಉದಾಹರಿಸಿದ್ದಾರೆ. ಆಥರ್ವಣೋಪನಿಷತ್ತಿನಲ್ಲಿಯ **ಕರ್ಮಾಣಿ ವಿ–ಜ್ಞಾನಮಯಶ್ಚ ಆತ್ಮಾ ಪರೇಽವ್ಯಯೇ ಸರ್ವ ಏಕೀಭವಂತಿ।**(ಖಂ ೬, ಶ್ಲೋ ೭)

Rarest Archiver

ಎಂಬಲ್ಲಿ ಏಕೀಭವಂತಿ ಎಂಬ ಪದದಿಂದ ಸ್ಪಷ್ಟವಾಗಿ ಐಕ್ಯವನ್ನು ಹೇಳುತ್ತಿದ್ದಾಗ ಭೇದವನ್ನು ಹೇಗೆ ಹೇಳುವುದು ಎಂದು ಆಕ್ಷೇಪವನ್ನು ವಿವರಿಸುತ್ತ ಶ್ರೀಮದಾಚಾರ್ಯರು ಏಕೀಭಾವವೆಂದರೆ ಸ್ವರೂಪೈಕ್ಯವೆಂಬರ್ಥವಲ್ಲ, ಮತ್ಯೈಕ್ಯ ಹಾಗೂ ಸ್ಥಾನೈಕ್ಯವೆಂಬರ್ಥ ಎಂದು ವಿವರಿಸಿದರು. ಹೀಗೆಯೇ ಏಕೆ ಅರ್ಥಮಾಡಬೇಕು ಮತ್ಯೈಕ್ಯ ಸ್ಥಾನೈಕ್ಯವೆಂಬುದು ಎಲ್ಲಿಯಾದರೂ ಹೇಳಲ್ಪಟ್ಟಿದ್ದರೆ ಈ ವಾಕ್ಯಕ್ಕೆ ಹೀಗೆ ಅರ್ಥ ಮಾಡಬಹುದು, ಅದೇ ಎಲ್ಲಿದೆ ಎಂದು ಶಂಕೆ ಬಂದರೆ **ಕಾಮೇನ ಮೇ ಕಾಮ ಅಗಾತ್ ಹೃದಯಾತ್ ಹೃದಯಂ ಮೃತ್ಯೋಃ। ಯತ್ ಅಮೀಷಾಂ ಅದಃ ಪ್ರಿಯಂ ತದ್ಯೈ(ದೇ)–(?)ತೂಪಮಾಮಭಿ ॥** ( *ಚಿತ್ಯುಪನಿಷತ್ ೧೫, ೨+ , ತೈತ್ತಿರೀಯ ಆರಣ್ಯಕ ೩, ೧೫, ೨+, ಅಥರ್ವವೇದಸಂಹಿತಾ ೩, ೫೨, ೪.)* ಎಂಬ ವಾಕ್ಯದಿಂದ ಮುಮುಕ್ಷುವಾದವನು ಮತ್ಯೈಕ್ಯವನ್ನೇ ಅಪೇಕ್ಷಿಸುವನೆಂದು ಹೇಳುವ ಶ್ರುತಿ–ಪ್ರಮಾಣವನ್ನೂ, **ಬ್ರಹ್ಮಮತ್ಯನುಕೂಲಾ ಮೇ ಮತಿರ್ಮುಕ್ತೌ ಭವಿಷ್ಯತಿ।ಅತಃ ಪ್ರಾಯೋಽನುಕೂಲತ್ವಂ ಇದಾನೀಂ ಅಪಿ ಮೇ ಸ್ಥಿತಮ್** ಎಂದು ಜೀವನ್ಮುಕ್ತನು ತನಗೆ ಪರಮಾತ್ಮನೊಡನೆ ಈಗ ಪ್ರಾಯಃ ಹಾಗೂ ಮುಂದೆ ಮುಕ್ತಿಯಲ್ಲಿ ಸಂಪೂರ್ಣ–ವಾಗಿ ಮತ್ಯೈಕ್ಯವಾಗುವದೆಂದು ಹೇಳುವ ಪ್ರಮಾಣವನ್ನೂ ಉದಾಹರಿಸಿದರು. ಮತ್ಯೈಕ್ಯವಿದ್ದರೂ ಜೀವನ್ಮುಕ್ತರಿಗೂ ಕೂಡ ಸ್ಥಾನೈಕ್ಯವಿರುವದೆಂದು ಎಲ್ಲಿ ಹೇಳಿದೆ ಎಂಬ ಶಂಕೆಗೆ ಸಮಾಧಾನ ಹೇಳಲು ಶ್ರೀಮದಾಚಾರ್ಯರು ಪ್ರಸ್ತುತವಾಕ್ಯವನ್ನು ಉದಾಹರಿಸಿದ್ದಾರೆ.

*ಶ್ರುತ್ಯರ್ಥಷಟ್ಪದಿಯಲ್ಲಿ* ಈ ಶ್ರುತಿಯ ಭಾವವು ಹೀಗೆ :

*ದೇವದೇವನ ಸನ್ನಿಧಾನದ*
*ಪಾವನದ ವೈಕುಂಠಲೋಕವ*
*ದೇವಯಾನದಿ ಮುಕುತಿಯೋಗ್ಯರು ಮಾತ್ರ ಪೋಗುವರು,*
*ಆವಗಾಗದು ತಾಣದೈಕ್ಯವು*
*ದೇವರಿಪುಗಳಿಗೆಂದು ಪೇಳಿತು*
*ಕೋವಿದರು ತಿಳಿವಂಥ ತತ್ತ್ವವ ನಿಗಮವಾಥರ್ವ.* ॥

೭೭. ಏತಮಾನಂದಮಯಮಾತ್ಮಾನಂ ಉಪಸಂಕ್ರಾಮತಿ ॥ – *ತೈತ್ತಿರೀ–ಯೋಪನಿಷತ್, (ಬ್ರಹ್ಮವಲ್ಲೀ), ೨–೨೧,* (೨೭ ನೆಯ ಮಂತ್ರವೆಂದು *ಉಪನಿಷತ್ ಪ್ರಸ್ಥಾನ ಭಾಗ ೨* ರಲ್ಲಿ ತೋರಿಸಲಾಗಿದೆ).

ಇದು *ಕೃಷ್ಣಯಜುರ್ವೇದಕ್ಕೆ* ಸಂಬಂಧಿಸಿದ *ತೈತ್ತಿರೀಯ ಆರಣ್ಯಕದ* ೭,೮,೯ ನೆಯ ಭಾಗಗಳಲ್ಲಿ ಬರುವ *ತೈತ್ತಿರೀಯೋಪನಿಷತ್ತಿನಲ್ಲಿ* ಸಿಕ್ಕುವ ಮಂತ್ರದ ಭಾಗವಾಗಿದೆ. ಈ ಉಪನಿಷತ್ತಿನಲ್ಲಿ ಮೂರು ವಲ್ಲಿಗಳು ಪ್ರಕಾಶಿತವಾಗಿದ್ದು ಪ್ರಸ್ತುತ ಮಂತ್ರವು

Rarest Archiver

ಎರಡನೆಯ ಬ್ರಹ್ಮವಲ್ಲಿಯಲ್ಲಿ ೨೭ನೆಯ ಮಂತ್ರದ ಭಾಗವಾಗಿದೆ. ೨೭ನೆಯ ಮಂತ್ರದ ಸಂಪೂರ್ಣ ಪಾಠವು ಹೀಗಿದೆ;

**ಸ ಯಶ್ಚಾಯಂ ಪುರುಷೇ । ಯಶ್ಚಾಸಾವಾದಿತ್ಯೇ । ಸ ಏಕಃ } ಸ ಯ ಏವಂ ವಿತ್ । ಅಸ್ಮಾತ್ ಲೋಕಾತ್ ಪ್ರೇತ್ಯ । ಏತಂ ಅನ್ನಮಯಂ ಆತ್ಮಾನಂ ಉಪಸಂಕ್ರಾಮತಿ । ಏತಂ ಪ್ರಾಣಮಯಂ ಆತ್ಮಾನಂ ಉಪಸಂಕ್ರಾಮತಿ । ಏತಂ ಮನೋಮಯಂ ಆತ್ಮಾನಂ ಉಪಸಂಕ್ರಾಮತಿ । ಏತಂ ವಿಜ್ಞಾನಮಯಂ ಆತ್ಮಾನಂ ಉಪಸಂಕ್ರಾಮತಿ । ಏತಂ ಆನಂದಮಯಂ ಆತ್ಮಾನಂ ಉಪಸಂಕ್ರಾಮತಿ ।**

*– ಬ್ರಹ್ಮವಲ್ಲೀ, ೨–೨೧*

**ಅರ್ಥ** (ಶ್ರೀ ರಾಯರ ಖಂಡಾರ್ಥವನ್ನನುಸರಿಸಿ) **:–** ಬ್ರಹ್ಮಾದಿಗಳಿಗೆ ಯಾರ ಅನುಗ್ರಹದಿಂದ ಸ್ವರೂಪಾನಂದಾವಿರ್ಭಾವವು ಆಗುವದೋ ಆ ಪ್ರಸಿದ್ಧನಾದ ಸರ್ವೋತ್ತಮನಾದ ಶ್ರೀ ಹರಿಯು ಎಲ್ಲ ಜೀವಸಮೂಹದಲ್ಲಿಯೂ (ಪುರುಷೇ) ಇರುವಂಥವನು. ಅವನೇ ಆದಿತ್ಯಪದೋಪಲಕ್ಷಿತರಾದ ಸಮಸ್ತ ದೇವತೆಗಳಲ್ಲಿಯೂ ಇರುವಂಥವನು. ಇವನೇ ಸಮಸ್ತ ಸ್ವಾತಂತ್ರ್ಯಾದಿಗುಣವಿಶಿಷ್ಟನಾದ ಪರಮಾತ್ಮನು, ಹಾಗೂ ಜೀವರು ಅವನ ಅಧೀನರು ಎಂದು ಯಾವ ಅಧಿಕಾರಿಯು ತಾರತಮ್ಯಜ್ಞಾನವನ್ನು ಪಡೆದಿರುವನೋ ಆ ಅಧಿಕಾರಿಯು ತನ್ನ ಭೌತಿಕದೇಹವನ್ನು ತೊರೆದು ಈ ಅನ್ನಮಯನಾದ ಅನಿರುದ್ಧರೂಪೀ ಪರಮಾತ್ಮನ ಸಮೀಪಕ್ಕೆ ಹೋಗುವನು, ಅವನು ಪ್ರಾಣಮಯ ಪ್ರದ್ಯುಮ್ನರೂಪೀ ಪರಮಾತ್ಮನ ಸಮೀಪಕ್ಕೆ ಹೋಗುವನು, ಮನೋಮಯನಾದ ಸಂಕರ್ಷಣರೂಪೀ ಪರಮಾತ್ಮನ ಸಾಮೀಪ್ಯವನ್ನು ಪಡೆಯುವನು, ವಿಜ್ಞಾನಮಯನಾದ ವಾಸುದೇವರೂಪೀ ಪರಮಾತ್ಮನ ಸಾನ್ನಿಧ್ಯವನ್ನು ಪಡೆಯುವನು, ಹಾಗೂ ಆನಂದಮಯನಾದ ನಾರಾಯಣನ ಸಾಮೀಪ್ಯವನ್ನು ಪಡೆಯುವನು. (ಅಂದರೆ ಸಾಮೀಪ್ಯರೂಪ ಮುಕ್ತಿಯನ್ನು ಪಡೆಯುವನು). ಇದಲ್ಲದೆ ಭಗವಂತನ ಆ ಆ ರೂಪಗಳಂತಿರುವ ರೂಪಗಳನ್ನು ಪಡೆದು ಸಾರೂಪ್ಯರೂಪ ಮುಕ್ತಿಯನ್ನೂ ಪಡೆಯುವನು.

ಹೀಗೆ ಈ ಶ್ರುತಿಯು ಮುಕ್ತರು ಸ್ಥಾನೈಕ್ಯವನ್ನು ಪಡೆಯುವರು ಎಂದು ಸ್ಪಷ್ಟವಾಗಿ ತಿಳಿಸುವದು.

*ಶ್ರುತ್ಯರ್ಥಷಟ್ಪದಿಯಲ್ಲಿ* ಇದರ ಭಾವವು ಹೀಗೆ :–

*ನೀರಜೋದ್ಭವರಾದಿ ವಿಬುಧರು*
*ಆರ ಕೃಪೆಯಿಂ ನಿತ್ಯಸುಖಿಗಳು*
*ಆರು ಜೀವರೊಳಿಪ್ಪ ದೇವತೆಯೊಳಗೆ ನೆಲಸಿಪ್ಪ*

Rarest Archiver

*ಆರು ಈ ಪರಿ ತಿಳಿವರೀತನ*
*ಘೋರಭವದಿಂ ದೇಹ ತೊರೆಯುತ*
*ಸಾರಸಾಕ್ಷನ ಲೋಕಕೈವರು ತಾಣದೈಕ್ಯವನು ॥ ॥*

**೭೮. ಜೀವಸ್ಯ ಪರಮೈಕ್ಯಂ ತು ಬುದ್ಧಿಸಾರೂಪ್ಯಮೇವ ತು। ಏಕಸ್ಥಾನನಿವಾಸೋ ವಾ ವ್ಯಕ್ತಿಸ್ಥಾನಂ ಅಪೇಕ್ಷ್ಯ ಸಃ ॥ ನ ಸ್ವರೂಪೈಕತಾ ತಸ್ಯ ಮುಕ್ತಸ್ಯಾಪಿ ವಿರೂಪತಃ । ಸ್ವಾತಂತ್ರ್ಯಪೂರ್ಣತೇಽಲ್ಪತ್ವಪಾರತಂತ್ರ್ಯೇ ವಿರೂಪತೇ ॥** *–ಪರಮಶ್ರುತಿಃ (?)*

ಇಲ್ಲಿ ಅನ್ವಯ ಮತ್ತು ಪ್ರತಿಪದಾರ್ಥವು ಸ್ಪಷ್ಟವಿದೆ. **ವಿರೂಪತಃ** ಎಂದರೆ **ವಿರುದ್ಧಧರ್ಮತ್ವತಃ** ಎಂದು ಟೀಕೆಯು ಸ್ಪಷ್ಟಪಡಿಸುವದು. **ಬುದ್ಧಿಸಾರೂಪ್ಯ**ವೆಂದರೆ **ಏಕವಿಷಯಬುದ್ಧಿತ್ವ** ಅಂದರೆ ಪರಮಾತ್ಮನು ಯಾವ ವಿಷಯಕ್ಕೆ ಸಂಕಲ್ಪ ಮಾಡುವನೋ ಜೀವನೂ ಕೂಡ ಅದೇ ವಿಷಯಕ್ಕೆ ಪರಮಾತ್ಮನ ಸಂಕಲ್ಪಕ್ಕನುಗುಣವಾಗಿಯೇ ವಿಚಾರ ಮಾಡುವನು ಎಂದರ್ಥ. ಹೀಗೆಂದರೆ ಪರಮಾತ್ಮನಿಗೆ ತಿಳಿದುದೆಲ್ಲವೂ ಜೀವನಿಗೆ ತಿಳಿಯುವದೆಂಬರ್ಥವಲ್ಲ. ಅದಕ್ಕೇನೇ ಸಾರೂಪ್ಯಮ್ ಏವ ತು ಎಂದು ತು ಮತ್ತು ಏವ ಶಬ್ದಗಳನ್ನು ಈ ಶ್ಲೋಕದಲ್ಲಿ ಕಾಣಬಹುದು. **ನಿಯಮೇನ ಯಥಾರ್ಥಂ ಅನಾದಿನಿತ್ಯಂ ಸರ್ವಾರ್ಥವಿಷಯಕಂ ಜ್ಞಾನಂ ಈಶ್ವರಜ್ಞಾನಮ್** ಎಂದು ಈಶ್ವರಜ್ಞಾನದ ಲಕ್ಷಣವಾದರೆ ಅಜ್ಞಾನಪ್ರಚುರವಾದುದು ಜೀವರ ಜ್ಞಾನವು. ಹೀಗಾಗಿ ಪರಮಾತ್ಮನ ಸಂಕಲ್ಪವನ್ನನುಸರಿಸುತ್ತಿದ್ದರೆ ಜೀವನಿಗೆ ಮತ್ಯೈಕ್ಯವಿದೆ ಎಂದು ಹೇಳುತ್ತೇವೆ.

**ಶ್ಲೋಕಗಳ ಅರ್ಥ :–** ಜೀವನು ಪರಮಾತ್ಮನೊಡನೆ ಐಕ್ಯ ಹೊಂದುವನೆಂದು ಹೇಳಿದುದರ ಅರ್ಥವನ್ನು ಜೀವಪರಮಾತ್ಮರಲ್ಲಿ ಮತ್ಯೈಕ್ಯವೆಂದಾಗಲಿ ಸ್ಥಾನೈಕ್ಯವೆಂದಾಗಲಿ ತಿಳಿದುಕೊಳ್ಳಬೇಕು. ಜೀವ ಹಾಗೂ ಪರಮಾತ್ಮರಲ್ಲಿ ಸಾಮಾನ್ಯವಾಗಿ ಹಾಗೂ ಮುಕ್ತಿಯಲ್ಲಿಯೂ ಕೂಡ ಪರಸ್ಪರ ವಿರುದ್ಧಧರ್ಮಗಳಿರುವದರಿಂದ ಸ್ವರೂಪೈಕ್ಯವು ಎಂದಿಗೂ ಕೂಡುವದಿಲ್ಲ. ಜೀವನಲ್ಲಿ ಅಲ್ಪತ್ವ ಹಾಗೂ ಪಾರತಂತ್ರ್ಯಗಳಿದ್ದರೆ ಪರಮಾತ್ಮನಲ್ಲಿ ಮಾತ್ರ ಪೂರ್ಣತ್ವ ಸ್ವಾತಂತ್ರ್ಯ ಎಂಬ ಗುಣಗಳು ಇರುವವು.

ಈ ಶ್ರುತಿಯ ಭಾವವು *ಶ್ರುತ್ಯರ್ಥಷಟ್ಪದಿ*ಯಲ್ಲಿ ಹೀಗೆ :–

*ಪರಮಪೂರ್ವಶ್ರುತಿಯು ಪೇಳಿತು*
*ಪರಮಪುರುಷನ ಜತೆಗೆ ವಾಸವು*
*ಪರಮಪುರುಷನ ಜತೆಗೆ ಮತಿಸಾರೂಪ್ಯ ಜೀವನದು,*

Rarest Archiver

*ಪರಮಜೀವೈಕತ್ವವಿದುವೆ,*
*ನರಗದೆಂದಿಗು ಹರಿಯೊಡೈಕ್ಯವೆ?*
*ಹರಿ ಸ್ವತಂತ್ರನು ಪೂರ್ಣನಿಹ, ನರನಧಮನಿರುತಿಹನು. // //*

**೭೯. ಪರಮಂ ಬ್ರಹ್ಮ ವೇದ ಬ್ರಹ್ಮೈವ ಭವತಿ ।**

– *ಆಥರ್ವಣೋಪನಿಷತ್, (ಖಂಡ ೬–ಶ್ಲೋಕ ೯)*

ಈ ಮಂತ್ರದ ಸಂಪೂರ್ಣ ಪಾಠವು ಇಂತಿದೆ; **ಸ ಯೋ ಹ ವೈ ತತ್ ಪರಮಂ ಬ್ರಹ್ಮ ವೇದ ಬ್ರಹ್ಮೈವ ಭವತಿ । ನ ಅಸ್ಯ ಅಬ್ರಹ್ಮವಿತ್ ಕುಲೇ ಭವತಿ । ತರತಿ ಶೋಕಂ ತರತಿ ಪಾಪ್ಮಾನಂ ಗುಹಾಗ್ರಂಥಿಭ್ಯಃ ವಿಮುಕ್ತಃ ಅಮೃತೋ ಭವತಿ ॥**

**ಅನ್ವಯ:– (ಯಃ) ಪರಮಂ ಬ್ರಹ್ಮ ವೇದ (ಸಃ) ಬ್ರಹ್ಮ ಏವ ಭವತಿ । (ಅಸ್ಯ ಕುಲೇ ಅಬ್ರಹ್ಮವಿತ್ ನ ಭವತಿ । ಸಃ ಶೋಕಂ ತರತಿ । ಸಃ ಪಾಪ್ಮಾನಂ ತರತಿ । ಸಃ ಗುಹಾಗ್ರಂಥಿಭ್ಯಃ ವಿಮುಕ್ತಃ ಸನ್ ಅಮೃತಃ ಭವತಿ ।)**

**ಅರ್ಥ:–** ಯಾರು ಅಧಿಕಾರಿಯಾದವನು ಶ್ರೇಷ್ಠವಾದ ಬ್ರಹ್ಮನನ್ನು ತಿಳಿದುಕೊಳ್ಳು-ವನೋ ಅವನು ಬ್ರಹ್ಮನೇ ಆಗುವನು. ಅಂದರೆ ಜ್ಞಾನಾನಂದಾದಿಸ್ವೋಚಿತಗುಣಗಳಿಂದ ಕೂಡಿದವನಾಗಿ ದೊಡ್ಡವನಾಗುತ್ತಾನೆ, ( ಬ್ರಹ್ಮನೇ ಆಗುವನೆಂದರ್ಥವಲ್ಲ). ( ಹೀಗೆ ಬ್ರಹ್ಮಜ್ಞಾನಿಯಾದವನ ಕುಲದಲ್ಲಿ ಬ್ರಹ್ಮಜ್ಞಾನಿಯಾಗದವನು ಹುಟ್ಟುವದಿಲ್ಲ. ಇಂಥ ಸಾಧಕನು ದುಃಖರಹಿತನಾಗುತ್ತಾನೆ. ಪಾಪದಿಂದ ದೂರ ದಾಟುತ್ತಾನೆ. ಹೃದಯದಲ್ಲಿಯ ಅವಿದ್ಯಾ, ಕಾಮ, ಕರ್ಮಾದಿ ಬಂಧಕಜಾಲಗಳನ್ನು ಹರಿದು ಮುಕ್ತನಾಗುತ್ತಾನೆ.)

**ವಿವರಣೆ:–** ಈ ಮೇಲಿನ ವಾಕ್ಯವು *ಆಥರ್ವಣೋಪನಿಷತ್ತಿನಿಂದ* ಉದ್ಧೃತವಾ-ಗಿದ್ದು ಇದೇ ತೆರನಾದ ವಾಕ್ಯಗಳು ಭಿನ್ನ ಭಿನ್ನ ಉಪನಿಷತ್ತುಗಳಲ್ಲಿಯೂ ಕಂಡು ಬರುವವು. ಉದಾಹರಣೆಗೆ, **ಬ್ರಹ್ಮವೇದನಮಾತ್ರೇಣ ಬ್ರಹ್ಮಾಪ್ನೋತ್ಯೇವ ಮಾನವಃ** (*ಕಠರುದ್ರೋಪನಿಷತ್ ೧೨ ಉಪನಿಷದ್ವಾಕ್ಯಮಹಾಕೋಷಃ* ದಲ್ಲಿ ಸೂಚಿಸಿದ ಪ್ರಕಾರ), **ಯಸ್ತ್ವೇತದ್ವಾಽಧೀತೇ ಸೋಽಪ್ಯೇವಮೇವ ಭವತೀತ್ಯೋಂ ಸತ್ಯಮಿತ್ಯುಪನಿಷತ್** (*ಕಾಲಾಗ್ನಿರುದ್ರೋಪನಿಷತ್ ೧೦*), **ಬ್ರಹ್ಮವಿತ್ ಆಪ್ನೋತಿ ಪರವ್** (*ತೈತ್ತಿರೀಯೋಪನಿಷತ್*) ಇತ್ಯಾದಿ. ಶ್ರೀ ರಾಯರು ವಿ.ತ.ವಿ.ದ *ಭಾವದೀಪದಲ್ಲಿ* ಇದೇ ಸಂದರ್ಭದಲ್ಲಿ **ಕಿಂ ಚ** ಎಂಬ ಟೀಕಾಪ್ರತೀಕವನ್ನು ಹಿಡಿದುಕೊಂಡು ಇನ್ನೊಂದು ಪಾಠವನ್ನು ಸೂಚಿಸಿದ್ದಾರೆ. **ಸ ಯೋ ಹ ವೈ ತತ್ಪರಂ ಬ್ರಹ್ಮ ವೇದ ಬ್ರಹ್ಮ ಭವತಿ** ಎಂದು. ಇದು *ಮುಂಡಕೋಪನಿಷತ್ ೩–೨–೯.* ದಲ್ಲಿಯ ವಾಕ್ಯ ಎಂದು *ಉಪನಿಷ-ದ್ವಾಕ್ಯಮಹಾಕೋಶಃ* ದಲ್ಲಿ ಸೂಚಿಸಲ್ಪಟ್ಟಿದೆ. (**ಸ ಯೊ ಹ ವೈ ಪರಮಂ ಬ್ರಹ್ಮ**

Rarest Archiver

**ವೇದ ಬ್ರಹ್ಮೈವ ಭವತಿ** ಎಂದು ಪಾಠವಿದೆ). ಪ್ರಬಲಪ್ರತ್ಯಕ್ಷಪ್ರಮಿತಾರ್ಥವಿರುದ್ಧ-ವಾದ ಪ್ರಮೇಯಕಲ್ಪನೆ ಮಾಡಿ ಈ ಎಲ್ಲ ವಾಕ್ಯಗಳಿಗೆ ಅರ್ಥ ಹೇಳಬಾರದು. **ಅಗ್ನಿಃ ಮಾಣವಕಃ, ಸಿಂಹೋ ಮಾಣವಕಃ** ಹೀಗೆಲ್ಲ ಹೇಳಿದಾಗ ಬಾಲಕನು ಅಗ್ನಿಯೇ ಆಗಲಿ ಸಿಂಹವೇ ಆಗಲಿ ಆಗುವದಿಲ್ಲ. ಅಗ್ನಿಯಂತೆ ತೇಜಸ್ವಿಯೂ, ಸಿಂಹದಂತೆ ಶೂರನೂ ಆಗಿರುವನೆಂಬುದೇ ತಾತ್ಪರ್ಯವು, ಏಕೆಂದರೆ ಇಲ್ಲಿ ಮೊದಲಿನಂತೆ ಅರ್ಥ ಮಾಡಿದರೆ ಪ್ರಬಲಪ್ರತ್ಯಕ್ಷದ ವಿರೋಧವಿದೆ. ಅದರಂತೆಯೇ ಇಲ್ಲಿಯೂ ಕೂಡ ಶ್ರುತಿಯ ವಾಕ್ಯವನ್ನು **ಬ್ರಹ್ಮವಿತ್ ಆಪ್ನೋತಿ ಪರಮ್, ನಿರಂಜನಃ ಪರಮಂ ಸಾಮ್ಯಂ ಉಪೈತಿ, ಯತ್ರ ಅಮೃತಃ ಸಃ ಪುರುಷೋ ಹಿ ಅವ್ಯಯಾತ್ಮಾ,** ಇತ್ಯಾದಿ ಸಮಾಖ್ಯಾಶ್ರುತಿಗಳ ಬಲದಿಂದಲೂ ಮತ್ತು ಪ್ರಬಲಪ್ರತ್ಯಕ್ಷದ ವಿರೋಧವಾಗದಂತೆಯೂ ಪ್ರಸಕ್ತ-ಶ್ರುತಿವಾಕ್ಯದ ಅರ್ಥ ಹೇಳಬೇಕು. ಅದಕ್ಕೇನೇ ಆಚಾರ್ಯರು **ಬ್ರಹ್ಮೈವ ಭವತಿ** ಎಂಬುದನ್ನು **ಬೃಂಹಿತಃ ಭವತಿ** ಹೆಚ್ಚಿನ ಸ್ಥಾನವನ್ನು ಪಡೆಯುತ್ತಾನೆ ಎಂದು ಅರ್ಥ ವಿವರಿಸಿದರು. ಇದಕ್ಕೆ ಪುರಾಣವಾಕ್ಯಗಳ ಆಧಾರವನ್ನೂ ಅವರು ಕೊಟ್ಟಿದ್ದಾರೆ. **ಪರಂ ಬ್ರಹ್ಮ ವಿದಿತ್ವಾ ತು ಬೃಂಹಿತಃ ಸ್ಯಾತ್ ಸ್ವಯೋಗ್ಯತಃ । ನಾಯೋಗ್ಯಂ ಕಿಂಚಿದಾಪ್ನೋತಿ ಕುತ ಏವ ಹರೇರ್ಗುಣಾನ್ ॥** ಮತ್ತು ಇನ್ನೂ ಹೆಚ್ಚು ಸ್ಪಷ್ಟವಾಗಿ ಅರ್ಥವನ್ನು ವಿವರಿಸುವ **ಬ್ರಹ್ಮತ್ವಂ ಬೃಂಹಿತತ್ವಂ ಸ್ಯಾತ್ ಜೀವಾನಾಂ ನ ಪರಾತ್ಮತಾ । ಅಸ್ವತಂತ್ರಸ್ಯ ಜೀವಸ್ಯ ಕುತೋ ನಿತ್ಯಸ್ವತಂತ್ರತಾ ॥** ಎಂಬ ಸ್ಕಾಂದವಚನವನ್ನೂ ಆಥರ್ವಣಭಾಷ್ಯದಲ್ಲಿ ಉದಾಹರಿಸಿದ್ದಾರೆ. ***ವಿ. ತ. ವಿ*** ದಲ್ಲಿ ಇದಕ್ಕೆ ಒಂದು ದೃಷ್ಟಾಂತವನ್ನೂ ಕೊಟ್ಟು ಅರ್ಥ ವಿವರಿಸಿದ್ದಾರೆ. **ಸಂಪೂಜ್ಯ ಬ್ರಾಹ್ಮಣಂ ಭಕ್ತ್ಯಾ ಶೂದ್ರೋಽಪಿ ಬ್ರಾಹ್ಮಣೋ ಭವೇತ್–** (ಭಕ್ತಿಯಿಂದ ಬ್ರಾಹ್ಮಣನನ್ನು ಪೂಜಿಸುವ ಶೂದ್ರನೂ ಕೂಡ ಬ್ರಾಹ್ಮಣನಾಗುತ್ತಾನೆಂದರೆ ಬ್ರಾಹ್ಮಣನಂತೆ ಯಥಾಯೋಗ್ಯವಾಗಿ ಗೌರವಾರ್ಹನಾಗುತ್ತಾನೆ ಎಂದರ್ಥ; ಯಾರನ್ನು ಪೂಜಿಸಿದನೋ ಆ ಬ್ರಾಹ್ಮಣನೇ ಆಗುತ್ತಾನೆಂದು ಅರ್ಥ ಬರುವದಿಲ್ಲವಷ್ಟೆ !) ಎಂಬಲ್ಲಿಯಂತೆ ಇಲ್ಲಿಯೂ ಕೂಡ ಬ್ರಹ್ಮಜ್ಞಾನದಿಂದ ತನ್ನ ಯೋಗ್ಯತೆಗನುಗುಣವಾದ ಆನಂದಾದಿಗಳನ್ನು ಪಡೆದು ಉತ್ತಮನಾಗುತ್ತಾನೆ. ಬ್ರಹ್ಮನ ಜ್ಞಾನಮಾಡಿಕೊಳ್ಳುವ ಜೀವನು ಜ್ಞಾನಕ್ಕೆ ಕರ್ತೃವು, ಈ ಜ್ಞಾನಕ್ಕೆ ವಿಷಯವಾದ ಬ್ರಹ್ಮನು ಕರ್ಮವು. ಮುಕ್ತನಾದ ಮೇಲೆ ಕರ್ತೃ ಹಾಗೂ ಕರ್ಮಗಳು ಒಂದೇ ಹೇಗೆ ಆಗುವವು? ಜ್ಞಾತೃವು ತನಗೆ ಜ್ಞಾನವಾದ ಬಳಿಕ ತನ್ನ ಜ್ಞಾನಕ್ಕೆ ವಿಷಯವಾದುದರ ಜೊತೆಗೆ ಐಕ್ಯ ಹೊಂದುತ್ತಾನೆಂಬುದು ಹೇಗೆ ಕೂಡುವದು? ಹೀಗೆ ಐಕ್ಯ ಹೊಂದುವದು ಲೋಕದಲ್ಲಿ ಎಲ್ಲಿಯೂ ಕಂಡುಬಂದಿಲ್ಲ. ಕೀಟವು ತನಗೆ ಬಂಧಕವಾದ ಭ್ರಮರವನ್ನು ನೆನಸುತ್ತ ನೆನಸುತ್ತ ಕೊನೆಗೆ ಭ್ರಮರವೇ ಆಗುವದು ಕಂಡು ಬಂದಿದೆಯಲ್ಲ ಎಂದರೆ ಆ ಕೀಟವು ಕೊನೆಗೆ **ಅದೇ** ಭ್ರಮರವೇ ಆಗುವದಿಲ್ಲ, ಭ್ರಮರಾಂತರವಾಗಬಹುದು. (ಶ್ರೀ ವಾದಿರಾಜರ *ಉಪನಿಷದ್ಭಾಷ್ಯಪ್ರಕಾಶಿಕಾ*).

Rarest Archiver

ಅದ್ವೈತಿಗಳೂ ಕೂಡ ಈ ರೀತಿ ಕರ್ತೃಕರ್ಮಗಳ ಐಕ್ಯವನ್ನು ಒಪ್ಪುವದಿಲ್ಲ. ಹಾಗೆಯೇ ಇಲ್ಲಿಯೂ ಕೂಡ ಬ್ರಹ್ಮಜ್ಞಾನಿಯಾದವನು ಬ್ರಹ್ಮಾಂತರನಾಗುವನೆಂದು ಅದ್ವೈತಿಗಳು ಹೇಳುವದಿಲ್ಲ. ಅನೇಕ ಬ್ರಹ್ಮರು ಇರುವರೆಂಬ ಬಗ್ಗೆ ಪ್ರಮಾಣವಿಲ್ಲ. ಹೀಗೆ ಐಕ್ಯಪರ ಅರ್ಥ ಮಾಡಿದಲ್ಲಿ ಅನೇಕ ಅನುಪಪತ್ತಿಗಳಿರುವದಂದ ಬ್ರಹ್ಮಜ್ಞಾನಿಯಾದವನು ಬ್ರಹ್ಮನೊಡನೆ ಐಕ್ಯ ಹೊಂದುತ್ತಾನೆಂದು ಅರ್ಥ ಮಾಡದೆ ಬ್ರಹ್ಮಸದೃಶನಾಗುತ್ತಾನೆ, ಆದರೂ ಬ್ರಹ್ಮ ಬ್ರಹ್ಮನೇ, ಅಸ್ವತಂತ್ರನಾದ ಜೀವ ಮುಕ್ತನಾದಮೇಲೂ ಕೂಡ ಅಸ್ವತಂತ್ರನಾದ ಜೀವನೇ ಎಂದು ತಿಳಿಯಬೇಕು. ಅದಕ್ಕೇನೇ ಈ ವಾಕ್ಯಕ್ಕೆ ಶ್ರೀಮನ್ಮಧ್ವಾಚಾರ್ಯರು ಹೇಳಿದ ಅರ್ಥವೇ ಸರಿಯಾಗಿದೆಯೆಂದು ಸ್ಪಷ್ಟವಾಗುವದು.

**ಈ ವಾಕ್ಯಕ್ಕೆ ಶ್ರೀ ಟೀಕಾರಾಯರು ಇನ್ನೊಂದು ಸ್ವಾರಸ್ಯವಾದ ರೀತಿಯಲ್ಲಿ ಅರ್ಥ ಹೇಳಿದ್ದಾರೆ.** ಶ್ರೀಮದಾಚಾರ್ಯರು ವಿ.ತ.ವಿ.ದಲ್ಲಿ ಇಲ್ಲಿಯೇ ಮುಂದೆ ಸೂಚಿಸಿದ ಪರಮಶ್ರುತಿಯ ವಾಕ್ಯವು (**ಬ್ರಹ್ಮಾಣಿ ಜೀವಾಃ ಸರ್ವೇಽಪಿ...** ಎಂಬ ಈ ಕೆಳಗೆ ಕೊಟ್ಟ ವಾಕ್ಯವು) ಈ ಅರ್ಥಕ್ಕೆ ಆಧಾರವೆಂದು ಸೂಚಿಸಲ್ಪಟ್ಟಿದೆ. **ಬ್ರಹ್ಮ ವೇದ ಬ್ರಹ್ಮೈವ ಭವತಿ** ಎಂಬ ವಾಕ್ಯದಲ್ಲಿ ಎರಡು **ಬ್ರಹ್ಮ** ಪದಗಳಿದ್ದು ಮೊದಲನೆಯದನ್ನು ಪರಮಾತ್ಮಪರವಾಗಿ ಹಾಗೂ ಎರಡನೆಯದನ್ನು ಜೀವಪರವಾಗಿ ಅರ್ಥಮಾಡಬೇಕು. ಆಗ ಈ ವಾಕ್ಯಕ್ಕೆ ಹೀಗೆ ಅರ್ಥ ಬರುವದು; **(ಯದ್ಯಪಿ) ಬ್ರಹ್ಮ ಬ್ರಹ್ಮ ವೇದ (ತಥಾಪಿ) ಬ್ರಹ್ಮ ಏವ ಭವತಿ.** ಜೀವನು ಬ್ರಹ್ಮನನ್ನು ತಿಳಿದುಕೊಂಡರೂ ಕೂಡ ಅವನೆಂದಿಗೂ ಬ್ರಹ್ಮ- ಪರಮಾತ್ಮನಾಗುವದಿಲ್ಲ. ಜೀವನೇ ಆಗಿರುತ್ತಾನೆ. ಮುಕ್ತನಾದರೂ ಕೂಡ ಅವನ ಪರಮಾತ್ಮಾಪೇಕ್ಷಯಾ ಅಲ್ಪತ್ವ ಪಾರತಂತ್ರ್ಯಾದಿ-ಗುಣಗಳು ಹೋಗಿಬಿಡುವದಿಲ್ಲ ಅವು ಯಾವಾಗಲೂ ಇದ್ದೇ ಇರುತ್ತವೆ.

***ಶ್ರುತ್ಯರ್ಥಪಟ್ಟದಿ***ಯಲ್ಲಿ ಈ ಪ್ರಮಾಣದ ಭಾವವು ಹೀಗೆ;

*ಹರಿಯನರಿತವ ಹರಿಯೆ ಆದರೆ*
*ನರಿಯ ಕಂಡವ ನರಿಯು ತಿಳಿ, ಭೂ*
*ಸುರನ ಪೂಜಿಪ ಶೂದ್ರನಾದರು ಪಡೆವ ಮಹತಿಯನು*
*ಧರೆಯ ಸುರರಂದದಲಿ, ಎಂಬುದ*
*ಮರೆತು ಬಾಯ್ಬಂದಂತೆ ನುಡಿದರೆ*
*ಸುರನರೋರಗಜಗದ ಧಣಿ ತಾ ಮುನಿವನೆಚ್ಚರಿಕೆ !* // //

೮೦. ಬ್ರಹ್ಮಾಣಿ ಜೀವಾಃ ಸರ್ವೇಽಪಿ ಪರಬ್ರಹ್ಮಾಣಿ ಮುಕ್ತಿಗಾಃ । ಪ್ರಕೃತಿಃ ಪರಮಂ ಬ್ರಹ್ಮ ಪರಮಂ ಮಹದಚ್ಯುತಃ ॥ ತಸ್ಮಾನ್ನ ಮುಕ್ತಾ (ಕ್ತೋ) ನ ಚ ಸಾ ನ ಕ್ವಚಿದ್ವಿಷ್ಣುವೈಭವಮ್ । ಪ್ರಾಪ್ನುವಂತಿ ಸ ಏವೈಕಃ ಸ್ವತಂತ್ರಃ ಪೂರ್ಣಷಡ್ಗುಣಃ ॥ – ಪರಮಶ್ರುತಿಃ (?)

Rarest Archiver

**ಅನ್ವಯ:– ಸರ್ವೇಽಪಿ ಜೀವಾಃ ಬ್ರಹ್ಮಾಣಿ । ಮುಕ್ತಿಗಾಃ (ತು) ಪರಬ್ರಹ್ಮಾಣಿ । ಅಪಿ ಪ್ರಕೃತಿಃ** (ಮಹಾಲಕ್ಷ್ಮೀಃ) **ಪರಮಂ ಬ್ರಹ್ಮ** (ಮಹದ್ ಬ್ರಹ್ಮ) **। ಅಚ್ಯುತಃ ಪರಮಂ ಮಹದ್ ಬ್ರಹ್ಮ ।** (ಯಸ್ಮಾತ್ ಏವಂ ಏತೇಷಾಂ ಸ್ವಾಭಾವಿಕಂ ತಾರತಮ್ಯಂ) **ತಸ್ಮಾತ್ ಮುಕ್ತಿಗಾಃ ಸಾ ಪ್ರಕೃತಿಃ ಅಪಿ ನ ಕ್ವಚಿತ್** (ಕಾಲೇ ದೇಶೇ ವಾ) **ವಿಷ್ಣುವೈಭವಂ ಪ್ರಾಪ್ನುವಂತಿ । ಸಃ ಏಕಃ ಏವ ಸ್ವತಂತ್ರಃ ಪೂರ್ಣಷಡ್ಗುಣಃ ।**

**ಅರ್ಥ:–** ಎಲ್ಲ ಜೀವರೂ ಮುಕ್ತ–ಅಮುಕ್ತರೆಲ್ಲರೂ ಕೂಡ ಬ್ರಹ್ಮರೇ ( ರೂಢ್ಯರ್ಥವೂ ಹಾಗೆಯೇ ಇದೆ). ಮುಕ್ತಜೀವರು (ಅಮುಕ್ತರಿಗಿಂತ ಉತ್ತಮರಾಗಿರುವ ಕಾರಣ) ಪರಬ್ರಹ್ಮರೆಂದು ಕರೆಯಿಸಲ್ಪಡುತ್ತಾರೆ. ಪ್ರಕೃತಿ ಅಥವಾ ಮಹಾಲಕ್ಷ್ಮಿಯು ಪರಮಬ್ರಹ್ಮ ಅಥವಾ ಮಹದ್ ಬ್ರಹ್ಮ ಎಂದು ಕರೆಯಲ್ಪಡುತ್ತಾಳೆ. ಅಚ್ಯುತನು –ವಿಷ್ಣುವು ಪರಮ ಮಹದ್ ಬ್ರಹ್ಮನು. ಹೀಗಿರುವದರಿಂದ ಮುಕ್ತರಾಗಲಿ, ಮಹಾಲಕ್ಷ್ಮಿಯಾಗಲಿ ಆ ವಿಷ್ಣುವಿನ ವೈಭವವನ್ನು ಯಾವ ದೇಶದಲ್ಲಿಯೂ ಹಾಗೂ ಯಾವ ಕಾಲದಲ್ಲಿಯೂ ಪಡೆಯಲಾರರು. (ಹೀಗಿದ್ದಾಗ ಸಂಸಾರಿಜೀವರು ವಿಷ್ಣುವಿನೊಡನೆ ಐಕ್ಯವನ್ನು ಹೊಂದುವದಿಲ್ಲವೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಅದು ಕೈಮುತ್ಯನ್ಯಾಯ–ದಿಂದ ಸಿದ್ಧವು). ಆ ವಿಷ್ಣು ಒಬ್ಬನೇ ಸರ್ವತಂತ್ರಸ್ವತಂತ್ರನೂ ಷಡ್ಗುಣೈಶ್ವರ್ಯ–ಸಂಪನ್ನನೂ ಆಗಿದ್ದಾನೆ.

**ವಿಶೇಷ ವಿಷಯಗಳು :–** ಜೀವರು ಬ್ರಹ್ಮರೆಂದು ರೂಢ್ಯರ್ಥವಿದೆ– **ಬೃಹಜಾತಿ–ಜೀವಕಮಲಾಸನಶಬ್ದರಾಶಿಷು** (ಜನ್ಮಾಧಿಕರಣ *ತತ್ವಪ್ರಕಾಶಿಕಾ* ನೋಡಿರಿ) ಎಂದು. **ಪರಮ** ಹಾಗೂ **ಪರ** ಶಬ್ದಗಳು ಏಕಾರ್ಥಕವಲ್ಲ. **ಪರಶಬ್ದಾತ್ ಅತಿಶಯೇ ಮ ಪ್ರತ್ಯಯ ಇತಿ ಭಾವಃ** ಎಂಬುದು ವಿ.ತ.ವಿ. ಟೀಕೆ. **ಪರ** ಎಂದರೆ ಉತ್ತಮ. **ಪರಮ** ಎಂದರೆ ಅತಿಶಯವಾಗಿ ಉತ್ತಮ ಎಂದರ್ಥ. ಇಲ್ಲಿ ಶ್ರೀ ರಾಯರು **ಔಣಾದಿಕಃ ಮಪ್ರತ್ಯಯಃ ಇತಿ ಭಾವಃ** ಎಂದು ಹೇಳಿದ್ದಾರೆ. ಇದನ್ನು ಉಲ್ಲೇಖಿಸಿ ಶ್ರೀವ್ಯಾಸತತ್ವಜ್ಞ ತೀರ್ಥರ *ಲಘುಪ್ರಭಾ ಟಿಪ್ಪಣಿ*ಯಲ್ಲಿ **ತದ್ಧಿತಾ ಇತಿ ಬಹುವಚನಾತ್ ಅತಿಶಯೇ ಮಪ್ರತ್ಯಯಃ ತದ್ಧಿತಃ ಇತಿ ಭಾವಃ । ಸ್ವಾಮಿನಸ್ತು ಔಣಾದಿಕ ಇತ್ಯಾಹುರಿತಿ ಭ್ರಾಮ್ಯಂತಿ । ವಸ್ತುತಸ್ತ್ವಣಾದಿಕ ಇತಿ ಪಾಠಃ ।** ಎಂದು ವಿಶೇಷ ವಿಷಯವನ್ನು ಹೇಳಿದ್ದಾರೆ. ಪರಮ ಎಂಬುದರಲ್ಲಿ ಮ ಪ್ರತ್ಯಯವು ಅಣಾದಿಕ ತದ್ಧಿತ ಪ್ರತ್ಯಯವು. ಇದರಿಂದ ಅತಿಶಯಾರ್ಥವು ಲಭಿಸುವದೆಂದು ಇಲ್ಲಿ ಸೂಚನೆ ಇದೆ. ಪ್ರಕಾಶಿತವಾದ ಉಳಿದ ಯಾವ ಟಿಪ್ಪಣಿಯಲ್ಲಿಯೂ ಶ್ರೀ ಟೀಕಾಕೃತ್ಪಾದರು ಹೇಳಿದ ಮ ಪ್ರತ್ಯಯದ ಬಗ್ಗೆ ವಿವರಣೆ ಕಂಡು ಬರಲಿಲ್ಲ.

**ನ ಮುಕ್ತಾಃ ನ ಚ ಸಾ ನ ಕ್ವಚಿದ್ ವಿಷ್ಣುವೈಭವಂ ಪ್ರಾಪ್ನುವಂತಿ** ಎಂಬಲ್ಲಿ ನ

Rarest Archiver

ಎಂಬ ನಿಷೇಧಪರಪದವು ಮೂರುಸಲ ಬಂದಿದೆ. **ಮುಕ್ತಾಃ ನ ಆಪ್ನುವಂತಿ, ಸಾ (ಪ್ರಕೃತಿಃ ಚ) ನ (ಆಪ್ನೋತಿ)** ಎಂದು ಅನ್ವಯ ಮಾಡಿದಾಗ ಒಂದು ನ ಕಾರವು ಹೆಚ್ಚಿನದಾಗುತ್ತದೆ. **ಮುಕ್ತಾಃ ಸಾ ಚ ನ ಆಪ್ನುವಂತಿ** ಎಂದು ಒಂದೇ ನ ಕಾರವನ್ನು ಇಟ್ಟುಕೊಂಡಾಗ ಎರಡು ನ ಕಾರಗಳು ಹೆಚ್ಚಿನವಾಗುತ್ತವೆ. ಕಾರಣ, ಮೂರು ನ ಕಾರಗಳನ್ನು ಏಕೆ ಪ್ರಯೋಗಿಸಿದರು ಎಂಬ ಶಂಕೆಗೆ *ಶ್ರೀ ವಿ.ತ.ವಿ. ಟೀಕೆಯ* ಟಿಪ್ಪಣಿಗಳಾದ ಶ್ರೀ ರಘೂತ್ತಮರ *ಭಾವಬೋಧದಲ್ಲಿ* ಹಾಗೂ ಶ್ರೀ ಶ್ರೀನಿವಾಸತೀರ್ಥರ *ವಾಕ್ಯಾರ್ಥ-ದೀಪಿಕಾ* ಟಿಪ್ಪಣಿಯಲ್ಲಿ ವಿವರಣೆ ಸಿಕ್ಕುವದು. **ನ ಆಪ್ನುವಂತೀತಿ ನ, ಕಿಂತು ನಾಪ್ನುವಂತ್ಯೇವ** (?) ಎಂದು ಯೋಜನೆ ಮಾಡಿಕೊಂಡಾಗ ಮೂರೂ ನ ಕಾರಗಳ ಸಾರ್ಥಕ್ಯ ಸ್ಪಷ್ಟವಾಗುವದು. ಶ್ರೀ ವ್ಯಾಸತತ್ವಜ್ಞರ ಟಿಪ್ಪಣಿಯಲ್ಲಿ ಶ್ರೀ ವಿಜಯೀಂದ್ರ-ಸ್ವಾಮಿಗಳ ಟಿಪ್ಪಣಿಯಲ್ಲಿಯ ಇನ್ನೂ ಹೊಸತಾದ ಯೋಜನೆಯನ್ನೂ ವಿಶ್ಲೇಷಿಸಿ ವಿವರಣೆ ಕೊಟ್ಟಿದ್ದಾರೆ.

ಅಂತು, ***ಶ್ರುತ್ಯರ್ಥಷಟ್ಪದಿಯಲ್ಲಿ*** ಈ ಶ್ರುತಿಯ ಭಾವವು ಹೀಗೆ.

*ಜೀವರೆಲ್ಲ ಬ್ರಹ್ಮರೆಂಬರು*
*ಕೋವಿದರು, ಕರೆದಿಹರು ಮುಕುತರ*
*ಜೀವಕೋಟಿಯು ಪರಬ್ರಹ್ಮರು ನಾಮಮಾತ್ರದಲಿ,*
*ದೇವಕೋಟಿಯು ಲಕುಮಿಗಿಪ್ಪುದು*
*ಪಾವನದ ಪರಬ್ರಹ್ಮನಾಮವು*
*ಕಾವನಯ್ಯನು ಪರಮಮಹದ್ಬ್ರಹ್ಮನಾಗಿಹನು.* ॥

*ಪರಮ ಸರ್ವೋತ್ತಮನೆ ವಿಷ್ಣುವು,*
*ಹರಿಯ ವೈಭವವೆಂದೆಗೆಂದಿಗು*
*ಬರದು ಲಕುಮಿಗೆ ಮತ್ತೆ ಮುಕುತರಿಗಿಂತು ತಾನಿರಲು,*
*ಹರಿಯ ವೈಭವವಿಹುದೆ? ಸಂಸೃತಿ-*
*ಭರದ ಜೀವರಿಗಂತು ವಿಷ್ಣುವೆ*
*ಸರುವತಂತ್ರ ಸ್ವತಂತ್ರ ಷಡ್ಗುಣ ಪೂರ್ಣನಾಗಿಹನು.* ॥

೮೧. ಪರೋ ಮಾತ್ರಯಾ ತನ್ವಾ ವೃಧಾನ ನ ತೇ ಮಹಿತ್ವಂ ಅನ್ವಶ್ನುವಂತಿ।–

*ಶ್ರುತಿಃ (?)*

**ಅನ್ವಯ:– ವಿಷ್ಣೋ, (ತ್ವಂ) ಮಾತ್ರಯಾ (ಮಾತ್ರಾಯಾಃ=ಮಿತೇಃ)(ಪರಃ ಅಸಿ)। ತನ್ವಾ ವೃಧಾನ (ನ ತು ಕೀರ್ತಿಮಾತ್ರೇಣ)। (ಏವಂಭೂತಸ್ಯ) ತೇ ಮಹಿತ್ವಂ (ಮಹಿಮಾನಂ) (ಕೇಽಪಿ) ನ ಅಶ್ನುವಂತಿ (ನ ಆಪ್ನುವಂತಿ)।**

Rarest Archiver

**ಅರ್ಥ:-** ವಿಷ್ಣುವೇ, ನೀನು ಎಲ್ಲ ಅಳತೆಗೋಲನ್ನೂ ಮೀರಿರುವಿ. ನೀನು ಕೇವಲ ನಿನ್ನ ಕೀರ್ತಿಯಿಂದಷ್ಟೇ ಅಲ್ಲ, ಸ್ವತಃ ನಿನ್ನ ರೂಪ, ಗುಣಗಳಿಂದಲೂ ಕೂಡ ಪೂರ್ಣ-ನಾಗಿರುವಿ. (ಅಪರಿಮಿತನಾಗಿರುವಿ). ಹೀಗಿರುವ ನಿನ್ನ ಮಹಿಮೆಯನ್ನು ಹೊಂದಲು ಬೇರೆ ಯಾರಿಗೂ ಕೂಡ ಸಾಧ್ಯವಾಗುವದಿಲ್ಲ.

**ವಿಶೇಷ ವಿಷಯಗಳು:-** ೧. **ಪರೋ ಮಾತ್ರಯಾ** ಎಂಬ ಶ್ರುತಿವಾಕ್ಯದ ಸಂದರ್ಭದಲ್ಲಿ ಶ್ರೀಟೀಕಾಕೃತ್ಪಾದರು **ಮಾತ್ರಾಯಾಃ ಮಿತೇಃ ಪರಃ ಅಸಿ** ಎಂದು ಬರೆದಿದ್ದಾರೆ. ಇಲ್ಲಿ ಮಾತ್ರಾಯಾಃ ಇದು ಪಂಚಮೀ ವಿಭಕ್ತಿಯ ಪದವೋ ಷಷ್ಠೀ-ವಿಭಕ್ತಿಯ ಪದವೋ ಎಂಬ ಬಗ್ಗೆ ಶಂಕೆ ಬರುವದು. ಶ್ರೀ ಪಾಂಡುರಂಗೀ ಆಚಾರ್ಯರ ಟಿಪ್ಪಣಿಯಲ್ಲಿ **ಶ್ರುತೌ 'ಸುಲುಗ್' ಇತಿ ಸ್ಮರಣಾತ್ ಮಾತ್ರಯಾ ಇತಿ ಷಷ್ಠ್ಯರ್ಥೇ ತೃತೀಯಾ ಇತಿ ಭಾವಃ** ಎಂದು ಹೇಳಿದರೆ ಶ್ರೀ **ವ್ಯಾಸತತ್ವಜ್ಞತೀರ್ಥರು** *ಲಘುಪ್ರಭಾ* **ಟಿಪ್ಪಣಿಯಲ್ಲಿ ತೃತೀಯಾ ಪಂಚಮ್ಯರ್ಥೇ** ಎಂದು ಹೇಳಿದ್ದಾರೆ. ಇದು ವಿಚಾರಣೀಯ ವಿಷಯವು. **(ಪಂಚಮೀ ವಿಭಕ್ತೇ ಪಾಣಿನೀ ಸೂತ್ರ- ೨/೩/೪೨ ವಿಭಾಗೋ ವಿಭಕ್ತಮ್, ಭೇದ ಇತ್ಯರ್ಥಃ। ಯತ್ರ ನಿರ್ಧಾರಣಾವಧಿಃ ನಿರ್ಧಾರ್ಯಮಾಣಂ ಚ ಭಿನ್ನಂ ವಸ್ತುದ್ವಯಂ ತತ್ರ ಪಂಚಮೀ ಏವ। ಎಂಬ ಸೂತ್ರದಿಂದ ಇಲ್ಲಿ ಪಂಚಮೀ ವಿಭಕ್ತಿಯು ಅಭಿಪ್ರೇತವೋ ಎಂಬ ಶಂಕೆ. ಪರ ಪದ ಪ್ರಯೋಗದ ಉದಾಹರಣೆಗಳಲ್ಲಿ ಕೆಲವು ಇಂದ್ರಿಯೇಭ್ಯಃ ಪರಾ ಹ್ಯರ್ಥಾ ಅರ್ಥೇಭ್ಯಶ್ಚ ಪರಂ ಮನಃ। .......ಅವ್ಯಕ್ತಾತ್ ಪುರುಷಃ ಪರಃ। ಪುರುಷಾತ್ ನ ಪರಂ ಕಿಂಚಿತ್.... ॥ ಕಾಠಕೋಪನಿಷತ್ ೧-೩-೧೦,೧೧, ಪರಸ್ತಸ್ಮಾತ್ ತು ಭಾವೋಽನ್ಯೋ.... ಭಗವದ್ಗೀತಾ ೮-೨೦).** ೨. ತನ್ವಾ ವೃಧಾನ ಎಂಬುದಕ್ಕೆ ಕೇವಲ ಕೀರ್ತಿಯಿಂದಷ್ಟೇ ಅಲ್ಲ, ನಿನ್ನ ಗುಣದಿಂದಲೂ ಪೂರ್ಣನಾಗಿರುವಿ ಎಂದು ಶ್ರೀ ಟೀಕೆಯಲ್ಲಿ ಹೇಳಿದುದಕ್ಕೆ ಶ್ರೀ ವ್ಯಾಸತತ್ವಜ್ಞರು **ಮಹಾನ್ ಭವತಿ ಪ್ರಜಯಾ ಪಶುಭಿಃ ಬ್ರಹ್ಮವರ್ಚಸೇನ ಮಹಾನ್ ಕೀರ್ತ್ಯಾ** ಎಂಬ ಶ್ರುತಿಯನ್ನು ಪ್ರಮಾಣವಾಗಿ ಕೊಟ್ಟಿದ್ದಾರೆ.

ಅಂತು ಈ ಶ್ರುತಿಯ ಭಾವವು *ಶ್ರುತ್ಯರ್ಥಷಟ್ಪದಿಯಲ್ಲಿ* ಹೀಗೆ :

*ಅಳತೆಗೋಲನು ಮೀರಿ ನಿಂತಿಹೆ,*
*ಜಲದಪಾರದ ಮಧ್ಯ ನೆಲಸಿಹ*
*ಅಲವಗುಣಗಣಮಹಿತ ವಿಷ್ಣುವೆ ನಿನಗೆ ಸಮರಿಲ್ಲ.*
*ಬಲದಿ ತೇಜದಿ ಗುಣದಿ ಪೂರ್ಣನೆ*
*ಅಲವ ಕೀರುತಿವೆತ್ತ ವಿಭುವೆ*
*ತಿಲವು ಸಮರನು ನಿನಗೆ ಕಾಣೆನು, ಅಧಿಕರೆಂತಿಹರು ? ॥ ॥*

Rarest Archiver

## ೮೨. ಬ್ರಹ್ಮೈವ ಸನ್ ಬ್ರಹ್ಮಾಪ್ಯೇತಿ ।

*–ಬೃಹದಾರಣ್ಯಕೋಪನಿಷತ್ ೪–೪–೬+, ನೃಸಿಂಹೋತ್ತರತಾಪಿನ್ಯುಪನಿಷತ್ ೫–೨, ೫–೫, ೫–೮ +*

ಶ್ರೀಮದಾಚಾರ್ಯರು ಉದಾಹರಿಸಿದ **ಯಥಾऽऽಪಿಯಂತಿ.... ಇತ್ಯಾದಿ** ***ನಾರಾಯಣಶ್ರುತಿಯ*** ವಾಕ್ಯದ (ಇಲ್ಲಿ ಮುಂದೆ ಕೊಡಲಾಗಿದೆ) ವಿವರಣೆ ಕೊಡುವ ಪೂರ್ವದಲ್ಲಿ ಈ ಶ್ರುತಿವಾಕ್ಯವನ್ನು ಶ್ರೀ ಟೀಕಾಕೃತ್ಪಾದರು ಉದಾಹರಿಸಿದ್ದಾರೆ. ಮೋಕ್ಷಾನಂತರ ಜೀವಬ್ರಹ್ಮೈಕ್ಯವೇ ಶ್ರುತಿಗಳಲ್ಲಿ ಪ್ರತಿಪಾದಿತವಾಗಿದೆ ಎಂದು ಪೂರ್ವಪಕ್ಷವನ್ನು ವಿವರಿಸುವ ಸಂದರ್ಭದಲ್ಲಿ **ಅವರು *ಬೃಹದಾರಣ್ಯಕೋಪನಿಷತ್ತಿನ* ಈ ವಾಕ್ಯವನ್ನು ಉದಾಹರಿಸಿದ್ದಾರೆ. *ನೃಸಿಂಹೋತ್ತರತಾಪನೀಯೋಪನಿಷತ್ತಿ*–** ನಲ್ಲಿಯೂ ಈ ವಾಕ್ಯ ಉಪಲಬ್ಧವಿದೆಯೆಂದು *ಉಪನಿಷದ್ವಾಕ್ಯಮಹಾಕೋಷಃ* ದಲ್ಲಿ ಉಲ್ಲಿಖಿತವಾಗಿದೆ.

*ಬೃಹದಾರಣ್ಯಕೋಪನಿಷತ್ತಿನಲ್ಲಿ* ಈ ಪ್ರಮಾಣದ ಸಂಪೂರ್ಣ ಪಾಠವು ಇಂತಿದೆ; **ತದೇಷ ಶ್ಲೋಕೋ ಭವತಿ ॥ ತದೇವ ಸಕ್ತಃ ಸಹ ಕರ್ಮಣಾ ಏತಿ ಲಿಂಗಂ ಮನೋ ಯತ್ರ ನಿಷಕ್ತಂ ಅಸ್ಯ । ಪ್ರಾಪ್ಯ ಅಂತಂ ಕರ್ಮಣಃ ತಸ್ಯ ಯತ್ಕಿಂಚ ಇಹ ಕರೋತ್ಯಯಮ್ ॥ ತಸ್ಮಾತ್ ಲೋಕಾತ್ ಪುನಃ ಏತಿ ಅಸ್ಮೈ ಲೋಕಾಯ ಕರ್ಮಣೇ ಇತಿ ನು ಕಾಮಯಮಾನಃ ಅಥ ಅಕಾಮಯಮಾನಃ ಯಃ ಅಕಾಮಃ ನಿಷ್ಕಾಮಃ ಆಪ್ತಕಾಮಃ ಆತ್ಮಕಾಮಃ ನ ತಸ್ಯ ಪ್ರಾಣಾಃ ಉತ್ಕ್ರಾಮಂತಿ ಬ್ರಹ್ಮ ಏವ ಸನ್ ಬ್ರಹ್ಮ ಅಪ್ಯೇತಿ ॥**

**ಅನ್ವಯ ಹಾಗೂ ಅರ್ಥ (ಶ್ರೀ ರಾಯರ ಖಂಡಾರ್ಥವನ್ನನುಸರಿಸಿ):– ಭಗವತ್ಪ್ರೇರಿತಃ ಜೀವಃ ಕರ್ಮ ಕುರ್ವನ್ ತತ್ಫಲಂ ಅಭಿಸಂಪದ್ಯತೇ ಇತ್ಯುಕ್ತಾರ್ಥೇ ಮಂತ್ರಃ ಅಸ್ತಿ ಇತ್ಯಾಹ ॥ ತದೇಷ ಇತಿ ॥** ಪರಮಾತ್ಮನಿಂದ ಪ್ರೇರಿತನಾದ ಜೀವನು ಕರ್ಮ ಮಾಡುತ್ತ ಆ ಕರ್ಮದ ಫಲವನ್ನು ಹೊಂದುತ್ತಾನೆ ಎಂಬ ವಿಷಯಕ್ಕೆ ವೇದಮಂತ್ರವು ಪ್ರಮಾಣವಾಗಿದೆ ಎಂದು ಆ ಮಂತ್ರವನ್ನು ಉದಾಹರಿಸುತ್ತಿದ್ದಾರೆ.

**ಅಸ್ಯ** (ಸಂಸಾರಿಣಃ) **ಲಿಂಗಂ** (ಶರೀರಂ) **ಮನಃ ಚ ಯತ್ರ** (ಯಸ್ಮಿನ್ ಫಲೇ) **ನಿಷಕ್ತಂ** (ನಿತರಾಂ ಸಕ್ತಂ) (ತತ್ರ ಫಲೇ) **ಸಕ್ತಃ** (ಪುರುಷಃ) **ತತ್ ಏವ** (ಫಲಂ) (ತತ್ಸಾಧನೀಭೂತಸ್ವಕೃತ)**ಕರ್ಮಣಾ ಸಹ ಏತಿ** (ಗಚ್ಛತಿ) । **(ಅರ್ಥ:–** ಸಂಸಾರಿಯಾದ ಜೀವನು ತನ್ನ ಶರೀರ ಹಾಗೂ ಮನಸ್ಸುಗಳನ್ನು ಯಾವ ಫಲವನ್ನು ಕುರಿತು ಸಂಪೂರ್ಣವಾಗಿ ತೊಡಗಿಸುತ್ತಾನೋ ಆ ಫಲಕ್ಕೆ ಸಾಧನೀಭೂತವಾದ ತನ್ನ ಕರ್ಮ–ದೊಡನೆ ಅದೇ ಫಲವನ್ನೇ ಪಡೆಯುತ್ತಾನೆ.) **ಅಯಂ** (ಪುರುಷಃ) **ಯತ್ಕಿಂಚ ಇಹ** (ಲೋಕೇ) (ಕರ್ಮ) **ಕರೋತಿ ತಸ್ಯ ಕರ್ಮಣಃ ಅಂತಂ** (ಅವಸಾನಂ ) **ಪ್ರಾಪ್ಯ**

Rarest Archiver

**ತಸ್ಮಾತ್ ಲೋಕಾತ್** (ಕರ್ಮಫಲಭೂತಾತ್ ಸ್ವರ್ಗಾದೇಃ) **ಪುನಃ ಅಸ್ಮೈ ಲೋಕಾಯ** (ಭೂಲೋಕಾಯ) **ಕರ್ಮಣೇ** (ಕರ್ಮ ಕರ್ತುಂ) **ಏತಿ** (ಆಗಚ್ಛತಿ) ॥ **(ಅರ್ಥ:–** ಈ ಜೀವನು ಈ ಲೋಕದಲ್ಲಿ ಯಾವ ಕರ್ಮ ಮಾಡುತ್ತಾನೋ ಆ ಕರ್ಮದಿಂದ ಪ್ರಾಪ್ತವಾದ ಪುಣ್ಯವನ್ನು ಹೊಂದಿ ಆ ಪುಣ್ಯದ ಫಲವಾದ ಸ್ವರ್ಗ–ಲೋಕವೇ ಆದಿ ಫಲಗಳನ್ನು ಹೊಂದಿ ಆ ಲೋಕಗಳಿಂದ ಪುನಃ ಭೂಲೋಕಕ್ಕೆ ಕರ್ಮಗಳನ್ನು ಮಾಡುವದಕ್ಕೋಸ್ಕರ ಬರುತ್ತಾನೆ**).** (ಮುಕ್ತಾಮುಕ್ತಯೋಃ ದ್ವಯೋಃ ಅಪಿ ಪ್ರಕೃತತ್ವಾತ್ ಕಿಂಪರಃ ಅಯಂ ಮಂತ್ರಃ ಇತ್ಯತಃ ಉಪನಿಷತ್ ಸ್ವಯಂ ಏವ ಆಹ ಇತಿ ನು ಅಕಾಮಯಮಾನಃ ಇತಿ ॥) **(ಅರ್ಥ:–** ಪ್ರಸ್ತುತ ಮುಕ್ತರೂ ಹಾಗೂ ಮುಕ್ತರಾಗದವರೂ ಕೂಡ ಪ್ರಸಕ್ತರಿರುವದರಿಂದ ಈ ಮಂತ್ರವು ಯಾರನ್ನು ಕುರಿತು ಹೇಳುತ್ತಿದೆಯೆಂಬುದರ ಬಗ್ಗೆ ಸ್ವತಃ ಉಪನಿಷತ್ತೇ ಈ ವಿಷಯವನ್ನು ಸ್ಪಷ್ಟಪಡಿಸುತ್ತಿದೆ) **ಇತಿ ನು ಕಾಮಯಮಾನಃ** (ಸಂಸಾರೀ ಇತ್ಯರ್ಥಃ ಉಕ್ತಃ ಇತಿ ಶೇಷಃ । ಸಂಸಾರಿಣಂ ನಿರೂಪ್ಯ ಮುಕ್ತಸ್ವರೂಪಂ ಆಹ ಅಕಾಮಯಮಾನಃ ಇತಿ) **(ಅರ್ಥ:–** ಹೀಗೆ ಕಾಮನೆಗಳುಳ್ಳ ಸಂಸಾರಿಯ ಬಗ್ಗೆ ನಿರೂಪಣೆ ಮಾಡಿ ಈಗ ಕಾಮನೆಗಳಿಂದ ದೂರ–ನಾದಂಥವನ ಸ್ವರೂಪದ ಬಗ್ಗೆ ಅಂದರೆ ಮುಕ್ತ ಜೀವನ ಸ್ವರೂಪದ ಬಗ್ಗೆ ವಿವ–ರಿಸುವರು) **ಅಥ** (ಇತಿ ಅರ್ಥಾಂತರೇ) **ಯಃ ಅಕಾಮಃ** (ಅಕಾರವಾಚ್ಯವಿಷ್ಣುಕಾಮಃ) **ನಿಷ್ಕಾಮಃ** (ಅಯೋಗ್ಯಕಾಮನಾರಹಿತಃ) **ಅಕಾಮಯಮಾನಃ** (ಯೋಗ್ಯಕಾಮಸ್ಯ ಅಪಿ ಕದಾಚಿತ್ ಏವ ಉದ್ಭೂತತ್ವೇನ ಅಸಾರ್ವಕಾಲೀನತ್ವಾತ್ ಅಕಾಮಯಮಾನಃ) (ಕಾಮಿತಾಶೇಷಪ್ರಾಪ್ತೇಃ) **ಆಪ್ತಕಾಮಃ** (ಚಿದಾನಂದಸ್ವರೂಪಃ ಆತ್ಮಾ ಏವ ಕಾಮಃ ಕಾಮ್ಯಃ ಯಸ್ಯ ಇತಿ ) **ಆತ್ಮಕಾಮಃ । ತಸ್ಯ** (ಏವಂಭೂತಸ್ಯ ಮುಕ್ತಸ್ಯ) **ಪ್ರಾಣಾಃ ನ ಉತ್ಕ್ರಾಮಂತಿ** (ನ ಮ್ರಿಯಂತೇ ಇತ್ಯರ್ಥಃ) (ಪ್ರಲಯೇ ಕಥಂ ಇತ್ಯತಃ ಆಹ ಸಃ ಮುಕ್ತಃ) **ಬ್ರಹ್ಮ ಏವ ಸನ್** ( ಜೀವಃ ಏವ ಸನ್) ಜೀವಭಾವಾಪರಿತ್ಯಾಗೇನ ಏವ) (ಪರಂ) **ಬ್ರಹ್ಮ ಅಪ್ಯೇತಿ** } (ಪ್ರಲಯೇ ಭಗವದುದರಂ ಪ್ರವಿಶತಿ ಇತ್ಯರ್ಥಃ) **(ಅರ್ಥ:–** ಇನ್ನು, ವಿಷ್ಣುವಿನ ದರ್ಶನಾನುಗ್ರಹಗಳನ್ನಪೇಕ್ಷಿಸುವಂಥ, ಅಯೋಗ್ಯವಾದ ಕಾಮನೆಗಳನ್ನು ತೊರೆದ ಹಾಗೂ ಯೋಗ್ಯಕಾಮನೆಗಳುಳ್ಳ ಜೀವನೂ ಒಮ್ಮೊಮ್ಮೆ ಹುಟ್ಟುವದರಿಂದ ಯೋಗ್ಯಕಾಮನೆಗಳುಳ್ಳಂಥ, ಸರ್ವಕಾಮನೆಗಳನ್ನು ಹೊಂದಿದಂಥ ಅತ ಏವ ಚಿದಾನಂದಸ್ವರೂಪನಾದ, ಆತ್ಮಕಾಮನಾದ ಅಂದರೆ ತನ್ನ ಚಿದಾನಂದಸ್ವರೂಪದ ಬಗ್ಗೆ ಮಾತ್ರ ಕಾಮನೆಯುಳ್ಳ ಜೀವನ ಪ್ರಾಣವು ಮುಕ್ತಿಯಲ್ಲಿ ನಶಿಸಿ ಹೋಗುವದಿಲ್ಲ. ಅಂದರೆ ಆ ಜೀವನೂ ನಿತ್ಯನಾಗಿಯೇ ಇರುತ್ತಾನೆ. ಅವನು ತನ್ನ ಜೀವ ಸ್ವರೂಪವನ್ನು ಇಟ್ಟುಕೊಂಡೇ ಪ್ರಲಯದಲ್ಲಿ ಬ್ರಹ್ಮನ ಅಂದರೆ ಪರಮಾತ್ಮನ ಉದರವನ್ನು ಪ್ರವೇಶಿಸುತ್ತಾನೆ. (ಶ್ರೀಮದಾಚಾರ್ಯರ *ಉಪನಿಷದ್ಭಾಷ್ಯದಲ್ಲಿ* ಈ ಪ್ರಕಾರದ ವಿವರಣೆಯೇ ಇರುವದನ್ನು ಗಮನಿಸಬೇಕು.)

Rarest Archiver

**ಉಪನಿಷತ್ತಿನಲ್ಲಿ ಈ ವಾಕ್ಯಕ್ಕೆ ಹಿನ್ನೆಲೆ:–** *ಬೃಹದಾರಣ್ಯಕೋಪನಿಷತ್ತಿನ* ೪ನೆಯ ಅಧ್ಯಾಯದ ***ಶಾರೀರಬ್ರಾಹ್ಮಣ***ದಲ್ಲಿ ಬರುವ ವಾಕ್ಯವಿದು. ನಾಲ್ಕನೆಯ ಅಧ್ಯಾಯದ ***ಜ್ಯೋತಿಬ್ರಾಹ್ಮಣ*** ಹಾಗೂ ***ಶಾರೀರಬ್ರಾಹ್ಮಣ***ಗಳಲ್ಲಿ ಜನಕರಾಜ ಹಾಗೂ ಯಾಜ್ಞ–ವಲ್ಕ್ಯ ಋಷಿಗಳ ನಡುವೆ ಘಟಿಸಿದ ಸಂವಾದವು ವರ್ಣಿಸಲ್ಪಟ್ಟಿದೆ. **ಕರ್ಮಣ್ಯೈವ ಹಿ ಸಂಸಿದ್ಧಿಂ ಆಸ್ಥಿತಾಃ ಜನಕಾದಯಃ** ಎಂದು ಹೇಳಿದಂತೆ ಜ್ಞಾನವಿಶಿಷ್ಟವಾದ ಕರ್ಮ–ಮಾರ್ಗದಿಂದ ಕೃತಾರ್ಥನಾದ ಜನಕರಾಜನಿಗೆ ಯಾಜ್ಞವಲ್ಕ್ಯರು ಅನೇಕರೀತಿಯಿಂದ ಪರಮಪುರುಷಾರ್ಥದ ತತ್ವವನ್ನು ಉಪದೇಶಿಸಿದರು. ಸಂಸಾರಿಜೀವನಿಗೆ ಜ್ಞಾನ–ಸಾಧನವಾವುದೆಂದು **(ಯಾಜ್ಞವಲ್ಕ್ಯ ಕಿಂಜ್ಯೋತಿರಯಂ ಪುರುಷಃ** ಎಂದು**)** ಜನಕರಾಜನು ಪ್ರಶ್ನಿಸಿದ್ದಕ್ಕೆ ಬಲುವಿಸ್ತಾರವಾಗಿ ಮತ್ತು ತರ್ಕಬದ್ಧವಾದ ರೀತಿಯಲ್ಲಿ ಪ್ರಶ್ನೋತ್ತರಗಳು ನಡೆದವು. **ಈ ಪ್ರಶ್ನೋತ್ತರಗಳು ಉಪನಿಷತ್ತಿನ ಎರಡು ಬ್ರಾಹ್ಮಣಗಳಲ್ಲಿ ವರ್ಣಿಸಲ್ಪಡುವಷ್ಟು ವಿಸ್ತಾರವಾಗಿರುವದನ್ನು ಗಮನಿಸಬೇಕು.** ಸೂರ್ಯ, ಚಂದ್ರ, ಅಗ್ನಿ, ವಾಕ್ ಇವೇ ಜ್ಞಾನಕ್ಕೆ ಸಾಧನವೆಂದು ಹೇಳುತ್ತ ಆತ್ಮನೇ–ಸರ್ವೋತ್ತಮನಾದ ವಿಷ್ಣುವೇ ಪರಮಜ್ಞಾನಪ್ರದನೆಂದು ಯಾಜ್ಞವಲ್ಕ್ಯರು ಹೇಳಿದಾಗ ಪುನಃ ಜನಕರಾಜನ ಪ್ರಶ್ನೆ; **ಕತಮಃ ಆತ್ಮಾ –** ಸೂರ್ಯ ಚಂದ್ರರು ಅಸ್ತರಾದಾಗಲೂ, ಅಗ್ನಿಯು ಶಾಂತವಾದಾಗಲೂ ಹಾಗೂ ಯಾರೂ ಮಾತನಾಡದಿದ್ದಾಗಲೂ ಕೂಡ ಜೀವನಿಗೆ ಜ್ಞಾನವು ಇರುವದರಿಂದ ಈ ಜ್ಞಾನವು ಯಾರಿಂದ ಬರುವದು ಎಂದು ಕೇಳಿದಾಗ ಅದು ಆತ್ಮನಿಂದಲೇ ಬರುವದೆಂದು ಯಾಜ್ಞವಲ್ಕ್ಯರು ಹೇಳಿದರು. ಹಾಗಾದರೆ ಈ ಆತ್ಮನೆಂದರೆ ಯಾರು ಎಂದು ಜಿಜ್ಞಾಸುವಿಗೆ ಬರುವ ಪ್ರಶ್ನೆ. ಅವನೇ ಪರಮಾತ್ಮ, ಅವನು ಜೀವನ ಎಲ್ಲ ವ್ಯಾಪಾರಗಳನ್ನೂ ಮಾಡಿಸುವನು, ಪರಮಾತ್ಮನು ಸಂಗರಹಿತನು. ಅವನು ಜೀವನ ಜಾಗ್ರತ್ ಸ್ವಪ್ನ ಸುಷುಪ್ತಿ, ಜೀವನ ಸಂಸಾರ, ಜೀವನ್ಮುಕ್ತ್ಯವಸ್ಥೆ, ಮೋಕ್ಷ, ಜೀವನು ಸಂಚರಿಸುವ ಭೂಲೋಕ, ಅಂತರಿಕ್ಷ, ಪರಲೋಕ ಈ ಪ್ರಕಾರದ ಎಲ್ಲವನ್ನೂ ನೋಡುತ್ತಿರುತ್ತಾನೆ ಹಾಗೂ ಎಲ್ಲವನ್ನು ನಿಯಮನ ಮಾಡುತ್ತಿರುತ್ತಾನೆ. ಎಲ್ಲವನ್ನೂ ಸೃಷ್ಟಿಸುತ್ತಾನೆ. ಜೀವರಿಗೆ ಅವರವರ ಯೋಗ್ಯತೆಗನುಗುಣವಾಗಿ ಮುಕ್ತಿಯನ್ನು ದಯಪಾಲಿಸುತ್ತಾನೆ. ಮುಕ್ತರಿಗೆ ಯಾವ ಅನುಭವವಿರುವದೆಂಬುದನ್ನೂ ಯಾಜ್ಞವಲ್ಕ್ಯರು ಜನಕರಾಜನಿಗೆ ಈ ಸಂದರ್ಭದಲ್ಲಿ ತಿಳಿಸಿಕೊಡುತ್ತಾರೆ. ಅವರ ಆನಂದದಲ್ಲಿ ತಾರತಮ್ಯ, ಅವರು ಪರಮಾತ್ಮಾಧೀನ–ರಾಗಿಯೇ ಮುಕ್ತಿಯಲ್ಲಿ ಆನಂದವನ್ನನುಭವಿಸುವದು, ಜೀವನ ಪ್ರಾಣೋತ್ಕ್ರಮಣವನ್ನು ಪರಮಾತ್ಮನು ಹೇಗೆ ಮಾಡಿಸುವನು, ಆಗ ಪರಮಾತ್ಮನು ಹಾಗೂ ದೇವತೆಗಳು ಎಲ್ಲಿ ಹೋಗುವರು ಇತ್ಯಾದಿ ವಿಷಯಗಳು ಉಪನಿಷತ್ತಿನ ***ಜ್ಯೋತಿಬ್ರಾಹ್ಮಣ***ದಲ್ಲಿ ವರ್ಣಿತವಾಗಿವೆ.

ಮುಂದಿನ ***ಶಾರೀರಬ್ರಾಹ್ಮಣ***ದಲ್ಲಿ ಯಾಜ್ಞವಲ್ಕ್ಯರು ಜನಕರಾಜನಿಗೆ

Rarest Archiver

ಜೀವನ ಮರಣವೆಂದರೇನು? ಮರಣದ ಅನಂತರ ಜೀವನು ಪರಮಾತ್ಮನೊಡನೆ ಏಕೀಭಾವವನ್ನು ಹೊಂದುವನೆಂದು ಹೇಳಿದುದರ ತಾತ್ಪರ್ಯವೇನು? ಜೀವನು ಮುಕ್ತನಾಗುವನೆಂದರೆ ತನ್ನ ಜೀವತ್ವವನ್ನು ಕಳೆದುಕೊಳ್ಳುವನೋ ಹೇಗೆ? ಇವೇ ಮುಂತಾದ ಸೂಕ್ಷ್ಮ ಪ್ರಶ್ನೆಗಳಿಗೆ ಸಮಾಧಾನ ಹೇಳಿದ್ದಾರೆ. ಆ ಸಂದರ್ಭದಲ್ಲಿಯೇ ಉಪನಿಷತ್ತಿನ ಪ್ರಸ್ತುತ ವಾಕ್ಯವು ಬಂದಿದೆ.

***ವಿಷ್ಣುತತ್ವವಿನಿರ್ಣಯದಲ್ಲಿ* ಈ ವಾಕ್ಯಕ್ಕೆ ಪ್ರಸಕ್ತಿ:–** ಈ ಮೊದಲು ತಿಳಿಸಿದಂತೆ, ಪೂರ್ವಪಕ್ಷಿಗಳು ಜೀವಬ್ರಹ್ಮೈಕ್ಯವನ್ನು ಪ್ರತಿಪಾದಿಸಲು ಪ್ರಸಕ್ತವಾಕ್ಯವನ್ನು ಉದಾಹರಿಸ ಬಹುದೆಂದು ಶ್ರೀಮಟ್ಟೀಕಾಕೃತ್ಪಾದರು ಸೂಚಿಸಿದ್ದಾರೆ. ಶ್ರೀಮದಾಚಾರ್ಯರು **ಯಥಾಽಪಿಯಂತಿ ತೇಜಾಂಸಿ ಮಹಾತೇಜಸಿ ಭಾಸ್ಕರೇ । .....ಅಪ್ಯಯೋಽಯಂ ಸಮುದ್ದಿಷ್ಟೋ ನ ಸ್ವರೂಪೈಕತಾ ಕ್ವಚಿತ್ ॥** ಎಂಬ ***ನಾರಾಯಣಶ್ರುತಿ***ಯ ವಾಕ್ಯವನ್ನು ಉದಾಹರಿಸಿ ಜೀವೇಶ್ವರ ಐಕ್ಯವನ್ನು ಯಾವ ಆಗಮವೂ ಹೇಳುವದಿಲ್ಲ ಎಂದು ಸಮರ್ಥಿಸುತ್ತಿರುವ ಸಂದರ್ಭದಲ್ಲಿ **ಬ್ರಹ್ಮೈವ ಸನ್ ಬ್ರಹ್ಮಾಪ್ಯೇತಿ** ಎಂಬ ***ಬೃಹದಾರಣ್ಯಕೋಪನಿಷತ್ತಿ***ನ ವಾಕ್ಯದಲ್ಲಿ ಐಕ್ಯವನ್ನು ಹೇಳಿದೆಯಲ್ಲ ಎಂದು ಪೂರ್ವಪಕ್ಷಿಗಳು ಹೇಳಬಹುದು, ಆದರೆ ಈ ವಾಕ್ಯದ ಅರ್ಥವು ***ನಾರಾಯಣಶ್ರುತಿಯ*** ಸ್ಪಷ್ಟವಾದ ವಾಕ್ಯವನ್ನು ನೋಡಿದಾಗ ತಿಳಿಯುವದು. ಉಪನಿಷತ್ತಿನಲ್ಲಿಯ ಸಂದರ್ಭ–ವನ್ನು ಗಮನಿಸಿದಾಗಲೂ ಕೂಡ **ಅಪ್ಯೇತಿ** ಎಂಬ ಪದವು ಐಕ್ಯಪರವಾಗಿಲ್ಲ ಎಂದು ವಿವರಿಸಿದ್ದಾರೆ.

**ವಿಶೇಷ ವಿಷಯಗಳು:–** ಈ ಶ್ರುತಿಯು ತಮ್ಮ ಐಕ್ಯವಾದವನ್ನು ಸಮರ್ಥಿಸುವ ಆಗಮಪ್ರಮಾಣವಾಗಿದೆಯೆಂದು ಐಕ್ಯವಾದಿಗಳು (ಅದ್ವೈತಿಗಳು ಹಾಗೂ ವಿಶಿಷ್ಟಾದ್ವೈತಿಗಳು) ಭಾವಿಸುತ್ತಾರೆ. ಆದರೆ ಇದರಲ್ಲಿಯ ಪದಗಳನ್ನು ಗಮನಿಸಿದಾಗ ಅದು ಸರಿಯಲ್ಲವೆಂಬುದು ಸ್ಪಷ್ಟವಾಗುವದು. **ಬ್ರಹ್ಮ ಏವ ಸನ್ ಬ್ರಹ್ಮ ಅಪ್ಯೇತಿ** ಎಂಬುವಲ್ಲಿ ಬ್ರಹ್ಮನಾಗಿದ್ದುಕೊಂಡೇ ಬ್ರಹ್ಮನನ್ನು ಸೇರುವನು ಎಂಬುದು ಹೇಗೆ ಕೂಡುವದು? ಜೀವನಾಗಿದ್ದುಕೊಂಡೇ ಬ್ರಹ್ಮನನ್ನು ಸೇರುವನು ಎಂದು ಅರ್ಥ ಮಾಡುವದೇ ಸಮರ್ಪಕವಾಗುವದು. ಅಂದರೆ ಜೀವನು ತನ್ನ ಜೀವತ್ವವನ್ನು ತೊರೆಯುವದಿಲ್ಲ ಎಂದಾಗ ಜೀವಬ್ರಹ್ಮೈಕ್ಯವೆಂಬ ವಾದವು ನಿಲ್ಲಲಾರದು. **ಅಪ್ಯೇತಿ** ಎಂಬ ಕ್ರಿಯಾಪದವೂ ಕೂಡ ಸ್ವರೂಪೈಕ್ಯವನ್ನು ಹೇಳಲಾರದು; ಏಕೆಂದರೆ ಜೀವನು ತನ್ನ ಸ್ವರೂಪವನ್ನು ತೊರೆಯದೇ ಬ್ರಹ್ಮನನ್ನು ಸೇರುವನೆಂದು ಹೇಳಿದೆ. ಕಾರಣ, ಅಪ್ಯೇತಿ ಎಂಬ ಪದಕ್ಕೆ ಅಪಿಹಿತಃ ಭವತಿ–ಅದರ್ಶನವನ್ನು ಹೊಂದುತ್ತಾನೆ ಅಂದರೆ ಕಾಣದಂತೆ ಆಗುತ್ತಾನೆ ಎಂದು ಅರ್ಥ ಮಾಡಬೇಕೆಂದು ಶ್ರೀಮದಾಚಾರ್ಯರು ಮಾಡಿದ ಅರ್ಥವೇ ಸಮರ್ಪಕವೆಂದು ಮನದಟ್ಟಾಗುವದು. ಇದಕ್ಕೆ ಶ್ರೀಮದಾಚಾರ್ಯರೇ

Rarest Archiver

ಮುಂದೆ ನಾರಾಯಣಶ್ರುತಿಯ ಸಮಾಖ್ಯೆಯನ್ನೂ ಕೊಟ್ಟಿರುತ್ತಾರೆ. ಈ ಉಪನಿಷದ್ವಾಕ್ಯದ ಸಂಪೂರ್ಣಪಾಠವನ್ನು ಗಮನಿಸಿದಾಗ ಮುಕ್ತಿಯಲ್ಲಿ ಜೀವಬ್ರಹ್ಮಭೇದವು ಇರುವ ವಿಷಯವೇ ಸ್ಪಷ್ಟವಾಗುವದು. ಜೀವನಿಗೆ ಮರಣವಿಲ್ಲ ಎಂದು ಅಲ್ಲಿ ಹೇಳಿದೆ. ಅಂದರೆ ಜೀವತತ್ವವು ನಶಿಸುವದಿಲ್ಲವೆಂದು ಹೇಳಿದಂತಾಯಿತು. ಹೀಗೆ, **ನ ಚ ಅಭೇದೇ ಕಶ್ಚಿದಾಗಮಃ ಸಂತಿ ಚ ಭೇದೇ ಸರ್ವಾಗಮಾಃ** – ಐಕ್ಯದ ವಿಷಯಕ್ಕೆ ಒಂದು ಆಗಮವಾಕ್ಯವೂ ಇರುವದಿಲ್ಲ, ಆದರೆ ಎಲ್ಲ ಆಗಮಗಳೂ ಕೂಡ ಭೇದವನ್ನೇ ಪ್ರತಿಪಾದಿಸುತ್ತವೆ ಎಂದು ತಾವು ಪ್ರತಿಜ್ಞೆ ಮಾಡಿದುದನ್ನು ಐಕ್ಯವಾದಿಗಳು ಉದಾಹರಿಸುವ ಅನೇಕ ಶ್ರುತಿಗಳನ್ನು ವಿಮರ್ಶಿಸಿಯೂ ಶ್ರೀಮದಾಚಾರ್ಯರು ವಿವರಿಸಿದ್ದಾರೆ.

ಶ್ರೀವ್ಯಾಸತತ್ವಜ್ಞತೀರ್ಥರು **ಬ್ರಹ್ಮೈವ ಸನ್ ಬ್ರಹ್ಮಾಪ್ಯೇತಿ** ಎಂಬ ವಾಕ್ಯವು ಯಜುರ್ವೇದಾರಣ್ಯಕದಲ್ಲಿಯದು ಎಂದು ಬೇರೆ ಆಕರವನ್ನು ಸೂಚಿಸಿದ್ದಾರೆ. ಅದರ ಸಂಪೂರ್ಣ ಪಾಠವು ಇಂತಿದೆ. **ಅಸಾವಾದಿತ್ಯೋ ಬ್ರಹ್ಮೇತಿ ಬ್ರಹ್ಮೈವ ಸನ್ ಬ್ರಹ್ಮಾಪ್ಯೇತಿ ಯ ಏವಂ ವೇದ ॥ – ಯಜುರ್ವೇದಾರಣ್ಯಕೇ (ವಿ.ತ.ವಿ ಟೀಕೋಕ್ತ ಶ್ರುತಿಃ, ಆಕರ–ಸೂಚನಂ ವ್ಯಾಸತತ್ವಜ್ಞತೀರ್ಥೀಯ ಲಘುಪ್ರಭಾಯಾಮ್) ।**

ಈ ವಾಕ್ಯದ ಅರ್ಥವನ್ನೂ ಕೂಡ ಮೇಲೆ ಹೇಳಿದಂತೆಯೇ ಮಾಡಬೇಕು.

ಅಂತು, *ಶ್ರುತ್ಯರ್ಥಷಟ್ಪದಿಂಯಲ್ಲಿ* ಈ ವಾಕ್ಯದ ತಾತ್ಪರ್ಯವನ್ನು ಹೀಗೆ ಸಂಗ್ರಹಿಸಬಹುದು;

*ಆವ ಫಲ ಬೇಕೆಂದು ಕರ್ಮವ*
*ಜೀವ ಗೈಯುವ ಸರುವ ತೊಡಗಿಸಿ,*
*ಸೇವಿಸುವನಾ ಫಲವನಾತನು ಸ್ವರ್ಗಲೋಕದೊಳು,*
*ಜೀವ ಮತ್ತೆಯೆ ಜನುಮ ಪಡೆಯುತ*
*ಗೈವ ಕರ್ಮವ ಕಾಮಿ ಭುವಿಯೊಳು*
*ಕೋವಿದರು ತಾವರಿವುದೊಳಗಣ ತತ್ವಗೌಪ್ಯವನು.* // //

*ಮುಕುತನಾಗಿಹ ಜೀವ ಕಾಮನೆ*
*ಯುಕುತಿಯಿಂದಲಿ ತೊರೆದು ಹರಿಯೊಳು*
*ಭಕುತಿ ಮಾಡುತಲಿರುವ ಚಿತ್ಸುಖರೂಪ ತಾನಾಗಿ,*
*ಸಕಲ ತೊರೆದರು ಪ್ರಾಣ ತೊರೆಯನು*
*ನಿಖಿಲಲಯದೊಳು ಹರಿಯ ಪೊಟ್ಟೆಯ*
*ವಿಕೃತನಾಗದೆ ಸೇರಿ ನಿಶ್ಚಿಂತೆಯೊಳು ತಾನಿಪ್ಪ* // //

೮೩. ಯಥಾऽऽಪಿಯಂತಿ ತೇಜಾಂಸಿ ಮಹಾತೇಜಸಿ ಭಾಸ್ಕರೇ । ಪೃಥಕ್

Rarest Archiver

**ಪೃಥಕ್ ಸ್ಥಿತಾನ್ಯನ್ಹಿ ಸ್ವರೂಪೈಃ ಅಪಿ ಸರ್ವಶಃ ॥ ಪರೇ ಬ್ರಹ್ಮಣಿ ಜೀವಾಖ್ಯಬ್ರಹ್ಮಾಣ್ಯಪ್ಯಪಿಯಂತಿ ಹಿ । ಮುಕ್ತೌ ಪೃಥಕ್ ಸ್ಥಿತಾನ್ಯೇವ ತದನ್ಯೇಷಾಂ ಅದರ್ಶನಮ್ । ಅಪ್ಯಯೋಽಯಂ ಸಮುದ್ದಿಷ್ಟೋ ನ ಸ್ವರೂಪೈಕತಾ ಕ್ವಚಿತ್॥** – *ನಾರಾಯಣಶ್ರುತಿಃ (?)*

ಈ ಶ್ರುತಿವಾಕ್ಯಗಳಲ್ಲಿ ಅನ್ವಯವು ಸ್ಪಷ್ಟವಿದೆ.

**ಅರ್ಥ:–** ಹಗಲು ಹೊತ್ತಿನಲ್ಲಿ ಪ್ರಖರ ತೇಜಸ್ಸಿನ ಸೂರ್ಯನ ತೇಜಸ್ಸಿನಲ್ಲಿ ಮೊದಲು ಮಿನುಗುತ್ತಿರುವ ತಾರೆಗಳು ಸೂರ್ಯನಿಂದ ಬೇರೆ ಸ್ಥಳದಲ್ಲಿ ಇರುತ್ತಿದ್ದರೂ ಕೂಡ ಹೇಗೆ ಸಂಪೂರ್ಣವಾಗಿ ಅಡಗಿ ಬಿಡುವವೋ ಹಾಗೆಯೇ ಜೀವರೆಂಬ ಬ್ರಹ್ಮರು ಮುಕ್ತರಾದಾಗ ಬೇರೆ ಇದ್ದರೂ ಕೂಡ ಪರಬ್ರಹ್ಮನಲ್ಲಿ ಅಡಗಿ ಬಿಡುವರು. ಇದಕ್ಕೇನೇ ಬ್ರಹ್ಮನನ್ನು ಸೇರುವುದು ಎಂದು ಹೇಳುವರು. ಮುಕ್ತ ಜೀವರಿಗೆ ಯಾವ ಕಾಲದಲ್ಲಿಯೂ ಪರಮಾತ್ಮನೊಡನೆ ಸ್ವರೂಪೈಕ್ಯವಿಲ್ಲ.

**ವಿಶೇಷ ವಿಷಯಗಳು :–**

ಇದು *ನಾರಾಯಣಶ್ರುತಿಯ* ವಾಕ್ಯವೆಂದು ಶ್ರೀಮದಾಚಾರ್ಯರು ಸೂಚಿಸಿದ್ದಾರೆ. ಈ *ನಾರಾಯಣಶ್ರುತಿಯು* ಯಾವದೆಂದು ಸ್ಪಷ್ಟವಿಲ್ಲ. *೧೦೮ ಉಪನಿಷದೇ* ಎಂಬ ಸಂಸ್ಕೃತಿ ಸಂಸ್ಥಾನ ಬರೇಲಿ, ಇವರ ಪ್ರಕಾಶನದಲ್ಲಿ ಮುದ್ರಿತವಾದ *ನಾರಾಯಣೋಪನಿಷತ್ತಿನಲ್ಲಿ* ಈ ವಾಕ್ಯ ಕಂಡುಬರಲಿಲ್ಲ. ಆಕರಗಳ ಬಗ್ಗೆ ಸಂಶೋಧನೆಯಾಗಬೇಕು.

ಶ್ರೀಮದಾಚಾರ್ಯರು ಉದಾಹರಿಸಿದ ಈ ಶ್ಲೋಕಗಳು ಮುಕ್ತಿಯಲ್ಲಿ ಜೀವ ಹಾಗೂ ಪರಮಾತ್ಮರು ಭಿನ್ನರಾಗಿಯೇ ಇರುವರು ಎಂಬುದಕ್ಕೆ ಸ್ಪಷ್ಟವಾದ ಪ್ರಮಾಣವು. ಶ್ರುತಿಗಳಲ್ಲಿ ಬರುವ ಏಕೀಭಾವ, ಅಪ್ಯಯ ಇತ್ಯಾದಿ ಪದಗಳಿಗೆ ಹೇಗೆ ತಾತ್ಪರ್ಯವನ್ನು ಹೇಳಬೇಕು ಎಂಬುದರ ಬಗ್ಗೆ ಈ ಪ್ರಮಾಣದಲ್ಲಿ ಬಹಳ ಸ್ವಾರಸ್ಯಕರವಾದ ದೃಷ್ಟಾಂತವನ್ನು ಕೊಟ್ಟಿದ್ದಾರೆ. ತಾರೆಗಳು ಸೂರ್ಯನಲ್ಲಿ ಲೀನವಾಗುವವು ಎಂದರೆ ಅವನ ತೇಜದಲ್ಲಿ ಅಡಗುವವು ಎಂದು ಹೇಳಬೇಕೇ ಹೊರತು ತಮ್ಮ ಸ್ವರೂಪದ ಸಹಿತ ಅವನಲ್ಲಿ ಬೆರೆಯುವವು ಎಂಬರ್ಥವಲ್ಲ. ಹಾಗೆ ಬೆರೆತರೆ ಅವು ಸೂರ್ಯನ ಉರಿಯಲ್ಲಿ ಸುಟ್ಟು ಭಸ್ಮವಾಗಿ ಬಿಡಬಹುದು. ಅದೇ ರೀತಿ ಅಮುಕ್ತ ಜೀವರೂ ಕೂಡ (**ಅಮುಕ್ತಾನಾಂ ಅದರ್ಶನವಿಶಿಷ್ಟಾ ಪ್ರಾಪ್ತಿಃ।** – *ವಿ. ತ. ವಿ ಟೀಕಾ*) ಮುಕ್ತಿಯಲ್ಲಿ ಪರಮಾತ್ಮನಲ್ಲಿ ಲೀನರಾಗುವರು ಎಂದರೆ ಅವನಲ್ಲಿ ಅವನ ಪ್ರಸ್ಫುರಿಸುವ ಪ್ರಭಾವದಲ್ಲಿ ಅಡಗಿ ಬಿಡುವರು ಎಂದು ತಾತ್ಪರ್ಯವನ್ನು ತಿಳಿಯಬೇಕು. ಇಲ್ಲಿ, ಪರೇ ಬ್ರಹ್ಮಣಿ ಅಪಿಯಂತಿ ಎಂದು ಸಪ್ತಮೀ ವಿಭಕ್ತಿಯ ಪ್ರಯೋಗವಿದೆಯೇ ಹೊರತು

Rarest Archiver

ಬ್ರಹ್ಮಣಾ ಅಪಿಯಂತಿ ಎಂದು ತೃತೀಯಾ ವಿಭಕ್ತಿಯ ಪ್ರಯೋಗವಿಲ್ಲ. ಸ್ವರೂಪತಃ ಏಕೀಭಾವವೆಂದು ಹೇಳುವ ಅಭಿಪ್ರಾಯವಿದ್ದುದಾದರೆ ತೃತೀಯಾ ವಿಭಕ್ತಿಯ ಪ್ರಯೋಗವಿರಬೇಕಾಗಿತ್ತು. ಈ ಸೂಕ್ಷ್ಮ ವಿಷಯವನ್ನು ಶ್ರೀ ರಾಯರು ತಮ್ಮ ಭಾವದೀಪ ಟಿಪ್ಪಣಿಯಲ್ಲಿ ಸೂಚಿಸಿದ್ದಾರೆ. ಅದೇ ರೀತಿ **ಬ್ರಹ್ಮೈವ ಸನ್ ಬ್ರಹ್ಮ ಅಪ್ಯೇತಿ** ಎಂಬಲ್ಲಿಯೂ ಕೂಡ ಬ್ರಹ್ಮ ಅಪ್ಯೇತಿ ಎಂದು ದ್ವಿತೀಯಾ ವಿಭಕ್ತಿಯ ಪ್ರಯೋಗವಿದೆ. ಕಾರಣ ಅಪ್ಯಯ ಎಂದರೆ **ಅದರ್ಶನವಿಶಿಷ್ಟಾ ಪ್ರಾಪ್ತಿಃ** ಎಂದು ಶ್ರೀ ಟೀಕಾಕೃತ್ಪಾದರು ಶ್ರುತಿವಾಕ್ಯವನ್ನನುಸರಿಸಿ ವ್ಯಾಖ್ಯೆ ಮಾಡಿದ್ದಾರೆ.

*ಶ್ರುತ್ಯರ್ಥಷಟ್ಪದಿಯಲ್ಲಿ* ಈ ಪ್ರಮಾಣದ ಭಾವವನ್ನು ಹೀಗೆ ಸಂಗ್ರಹಿಸಬಹುದು:–

*ರವಿಯ ಹುಕ್ಕುವ ತೇಜದೊಳು ತಾ*
*ಛವಿಯು ಕುಂದಿರೆ ತಾರೆ ನಭದೊಳು*
*ಅವಿತು ಸೇರುವ ತೆರದಿ ಜೀವನು ಮುಕುತಿಯೊಳಗಿಹನು,*
*ಕವಿಗಳರಿವರು ಜೀವನೆಂದಿಗು*
*ಭವವಿಮೋಚಕನಾಗನೆಂಬುದ–*
*ನವನು ಜೀವನೆ ಹರಿಯ ಪೊಟ್ಟೆಯಲಿಹನು ಪ್ರಲಯದೊಳು. ॥*

೮೪. **ಅಸಾವಾದಿತ್ಯೋ ಬ್ರಹ್ಮೇತಿ ಬ್ರಹ್ಮೈವ ಸನ್ ಬ್ರಹ್ಮಾಪ್ಯೇತಿ ಯ ಏವಂ ವೇದ ॥** – *ಯಜುರ್ವೇದಾರಣ್ಯಕೇ (ವಿ.ತ.ವಿ ಟೀಕೋಕ್ತ ಶ್ರುತಿಃ, ಆಕರ–ಸೂಚನಂ ವ್ಯಾಸತತ್ತ್ವಜ್ಞತೀರ್ಥೀಯ ಲಘುಪ್ರಭಾಯಾಮ್) ।*

ಈ ವಾಕ್ಯದ ಬಗ್ಗೆ ವಿವರಣೆಯನ್ನು **ಬ್ರಹ್ಮೈವ ಸನ್ ಬ್ರಹ್ಮಾಪ್ಯೇತಿ** ಎಂಬ ವಾಕ್ಯದ ವಿವರಣೆಯ ಸಂದರ್ಭದಲ್ಲಿ ಮೇಲೆ ಕೊಡಲಾಗಿದೆ.

೮೫. ಪ್ರಪಂಚೋ ಯದಿ ವಿದ್ಯೇತ ನಿವರ್ತೇತ ನ ಸಂಶಯಃ ।
ಮಾಯಾಮಾತ್ರಂ ಇದಂ ದ್ವೈತಂ ಅದ್ವೈತಂ ಪರಮಾರ್ಥತಃ ॥–
*ಮಾಂಡೂಕೋಪನಿಷತ್, ಖಂಡ ೨–ಶ್ಲೋಕ ೯. ಮಹಾವಾಕ್ಯರತ್ನಾವಲಿಃ ೪. (ಉಪನಿಷದ್ವಾಕ್ಯಮಹಾಕೋಶೇ ಸೂಚಿತಾನುಸಾರೇಣ)*

ಅನ್ವಯ:– ಪ್ರಪಂಚಃ (ಪ್ರಕೃಷ್ಟಃ ಪಂಚವಿಧಃ ಭೇದಃ) ಯದಿ ವಿದ್ಯೇತ (ಭವೇತ ಉತ್ಪದ್ಯೇತ ತರ್ಹಿ) ನಿವರ್ತೇತ । (ಅತ್ರ ವಿಷಯೇ) ನ ಸಂಶಯಃ । (ನ ಚ ನಿವರ್ತತೇ । ತಸ್ಮಾತ್ ಅನಾದಿಃ ಏವ ಅಯಮ್ ।) ಇದಂ ದ್ವೈತಂ (ಪ್ರಪಂಚಃ ಪಂಚವಿಧಃ ಭೇದಃ) ಮಾಯಾಮಾತ್ರಮ್ (ಮಾಯಾ ಭಗವತ್ಪ್ರಜ್ಞಾ । ಮಾಯಯಾ ಮಾನಂ ತ್ರಾಣಂ ಯಸ್ಯ ತತ್ । ಅಥವಾ ಮಾಯಾ ಮಾತ್ರೀ ಮಾನತ್ರಾಣಕರ್ತ್ರೀ ಯಸ್ಯ ತತ್ ।) ಪರಮಾರ್ಥತಃ (ಪರಮಾರ್ಥಾಪೇಕ್ಷಯಾ

Rarest Archiver

**ಹ) ಅದ್ವೈತಮ್ (ಅದ್ವೈತತ್ವಮ್) (ಸರ್ವಸ್ಮಾತ್ ಉತ್ತಮಃ ಅರ್ಥಃ ಸಃ ಏಕಃ ಏವ) ।**

**ಅರ್ಥ:–** ಪ್ರಕೃಷ್ಟವಾದ ಅಂದರೆ ಮೋಕ್ಷಾಂಗ ಜ್ಞಾನವಾಗಿರುವ ಕಾರಣ ಶ್ರೇಷ್ಠವಾದ ಐದು ಪ್ರಕಾರದ ಭೇದವು (ಜೀವ–ಈಶ ಭೇದ, ಜಡ–ಈಶ ಭೇದ, ಜೀವ–ಜೀವ ಭೇದ, ಜಡ–ಜಡ ಭೇದ, ಮತ್ತು ಜೀವ–ಜಡ ಭೇದ ಈ ಪ್ರಕಾರದ ಪಂಚಭೇದವು) ಉತ್ಪನ್ನವಾದುದಾಗಿದ್ದರೆ ಅದು ನಿವೃತ್ತಿಯನ್ನು ಹೊಂದಬಹುದಾಗಿತ್ತು. ಆದರೆ ಅದು ಹುಟ್ಟಿರದೆ ಯಾವಾಗಲೂ ಇರುವಂಥದಾಗಿರುತ್ತದೆ. ಆದ ಕಾರಣ ಅದು ಹೋಗುವದಿಲ್ಲ, ಯಾವಾಗಲೂ ಇದ್ದೇ ಇರುವಂತಹದು, ಅನಾದಿಯಾಗಿರುತ್ತದೆ. ಈ ಪಂಚವಿಧಾತ್ಮಕವಾದ ಭೇದವು ಭಗವತ್ಪ್ರಜ್ಞೆಯಿಂದ ತಿಳಿಯಲ್ಪಡುವಂಥದು. ಹಾಗೂ ಭಗವಂತನಿಂದ ರಕ್ಷಿಸಲ್ಪಡುವಂಥದು; (ಭಗವಂತನು ಅನಾದಿನಿತ್ಯನಾಗಿ–ರುವದರಿಂದ ಹಾಗೂ ಅವನಿಗೆ ಮಿಥ್ಯಾಜ್ಞಾನ, ವಿಪರೀತಜ್ಞಾನಗಳು ಇರದಿರುವದರಿಂದ ಅವನ ಪ್ರಜ್ಞೆಯಿಂದ ತಿಳಿಯಲ್ಪಡುವಂತಹ ಯಾವದೂ ಭ್ರಾಂತಿಕಲ್ಪಿತವಲ್ಲ. ಆದ ಕಾರಣ ಜಗತ್ತು ಹಾಗೂ ಪಂಚ ಭೇದಗಳು ಅನಾದಿನಿತ್ಯವೇ ಆಗಿವೆ.) ಪರಮ ಅಂದರೆ ಅತ್ಯಂತ ಶ್ರೇಷ್ಠವಾದ ಅರ್ಥ ಎಂದರೆ ವಸ್ತುವು. ಇಂಥ ಸರ್ವೋತ್ತಮ ತತ್ತ್ವವಾದ ಪರಮಾತ್ಮನ ವಿಷಯಕ್ಕೇನೇ ಅದ್ವೈತತ್ವವು (ಪಾಂಡುರಂಗೀ ಟಿಪ್ಪಣೀ) ಅಂದರೆ ಅದ್ವಿತೀಯತ್ವವು ಹೇಳಲ್ಪಟ್ಟಿದೆ. ಅಂದರೆ ಪರಮಾತ್ಮನೊಬ್ಬನೇ ಅದ್ವಿತೀಯನು, ಅವನಿಗೆ ಸಮರಾಗಲಿ, ಅವನಿಗಿಂತ ಉತ್ತಮರಾಗಲಿ ಇನ್ನೊಬ್ಬರಿಲ್ಲ. ಅವನೇ ಸರ್ವೋತ್ತಮನು.

ಅಂತು, ಈ ಶ್ರುತಿಯಲ್ಲಿ ಪಂಚಭೇದಗಳು ಸತ್ಯ ಹಾಗೂ ನಿತ್ಯವೆಂದೂ ಮತ್ತು ಪರಮಾತ್ಮನೊಬ್ಬನೇ ಸರ್ವೋತ್ತಮನೆಂದೂ ಪ್ರತಿಪಾದಿತವಾಗಿದೆ.

(ಅಥವಾ, ಅದ್ವೈತಂ ಪರಮಾರ್ಥತಃ ಎಂಬುದಕ್ಕೆ ಪರಮಾರ್ಥಾಪೇಕ್ಷಯಾ– ಪರಮಾರ್ಥಂ ಅಧಿಕೃತ್ಯ –ಅದ್ವೈತಮ್– ಅದ್ವೈತತ್ವಮ್–ಭೇದಶೂನ್ಯತ್ವಮ್–, ಎಂದರೆ ಪರಮಾತ್ಮನ ವಿಷಯಕ್ಕೆ ಅದ್ವೈತತ್ವವು ಎಂದರೆ ಭೇದಶೂನ್ಯತೆಯು ಹೇಳಲ್ಪಟ್ಟಿದೆ; ಅಂದರೆ ಪರಮಾತ್ಮನು ಸ್ವಗತಭೇದವಿವರ್ಜಿತನು ಎಂಬ ತಾತ್ಪರ್ಯದ ವಿವಕ್ಷೆ. ಈ ಮೊದಲು ಪಂಚಭೇದಗಳನ್ನು ಅನಾದಿನಿತ್ಯ ಎಂದು ಹೇಳಿ ಪರಮಾತ್ಮನ ವಿಷಯಕ್ಕೆ ಮಾತ್ರ ಆ ಭೇದವಿಲ್ಲ, ಅವನು ಸ್ವಗತಭೇದವಿವರ್ಜಿತನು ಎಂದು ಹೇಳುವದೂ ಕೂಡ ಪ್ರಸಕ್ತವೆಂದೆನಿಸುವದು. ಆದರೆ, ಈ ಪ್ರಕಾರದ ವಿವರಣೆಯು ಯಾವ ಟಿಪ್ಪಣಿಯಲ್ಲಿಯೂ ಕಾಣಲಿಲ್ಲ, ಈ ವಿಷಯವು ವಿಚಾರಣೀಯವೆಂದು ಅನಿಸಿ ಅದನ್ನು ಇಲ್ಲಿ ಸೂಚಿಸಿದ್ದೇವೆ).

**ವಿಶೇಷ ವಿಷಯಗಳು :–** i. ಈ ಶ್ಲೋಕದಲ್ಲಿಯ **ವಿದ್ಯೇತ** = ಇರುವುದಾದರೆ ಎಂಬ ಪದಕ್ಕೆ ಶ್ರೀಮದಾಚಾರ್ಯರು **ಭವೇತ ಉತ್ಪದ್ಯೇತ** ಎಂದು ಅರ್ಥ ಹೇಳಿದ್ದಾರೆ.

Rarest Archiver

**ಕ್ರಿಯಾವಾಚಿತ್ವಮಾಖ್ಯಾತುಮ್ ಏಕೈಕೋऽರ್ಥಃ ಪ್ರದರ್ಶ್ಯತೇ । ಪ್ರಯೋಗ-ತೋऽನುಗಂತವ್ಯಾಃ ಅನೇಕಾರ್ಥಾ ಹಿ ಧಾತವಃ ॥** – 'ಧಾತುಗಳ ಅರ್ಥವನ್ನು ಪ್ರಯೋಗಗಳಿಂದ ತಿಳಿದುಕೊಳ್ಳಬೇಕು', ಎಂದು ವ್ಯಾಕರಣಶಾಸ್ತ್ರದಲ್ಲಿಯ ನಿಯಮವನ್ನು ಶ್ರೀ ವ್ಯಾಸತತ್ವಜ್ಞರು ***ಲಘುಪ್ರಭಾ*** ಟಿಪ್ಪಣಿಯಲ್ಲಿ ಉಲ್ಲೇಖಿಸಿ ವಿದ್ ಧಾತುವಿನ ಅರ್ಥವನ್ನು ವಿವರಿಸಿದ್ದಾರೆ. ವಿದ್ ಜ್ಞಾನೇ ವೇತ್ತಿ (೨ನೆಯ ಗಣ) ಅಥವಾ ವಿದ್ ಸತ್ತಾಯಾಮ್ ವಿದ್ಯತೇ (೪ನೆಯ ಗಣ), ವಿದ್ ಉತ್ಪತ್ತೌ (೪ನೆಯ ಗಣ) ವಿದ್ಯತೇ **'ವಿದುತ್ಪತ್ತಾವಿತಿಹ್ಯಸ್ಮಾದ್ ಧಾತೋಃ .....(ಅನುವ್ಯಾ. )ಇತ್ಯನುವ್ಯಾಖ್ಯಾನಂ ಮನಸಿ ನಿಧಾಯ** ಎಂಬ ***ಅನುವ್ಯಾಖ್ಯಾನದ*** ಉಕ್ತಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಎಂದು ಶ್ರೀ ಟೀಕಾಕೃತ್ಪಾದರ **ಯದ್ವಾ .... ಅಧುನಾ ತು ಅನೇಕಾರ್ಥತ್ವಾತ್ ಧಾತೂನಾಂ ವಿದ್ಯತಿಃ ಏವ ಉತ್ಪತ್ತಿವಾಚೀ ಇತ್ಯಾಹ** = ಧಾತುಗಳಿಗೆ ಅನೇಕಾರ್ಥವಿರುವದರಿಂದ ಇಲ್ಲಿ ವಿದ್ ಧಾತುವೇ ಹುಟ್ಟು ಎಂಬರ್ಥದಲ್ಲಿದೆ ಎಂಬ ವಿವರಣೆಗೆ ವ್ಯಾಕರಣಶಾಸ್ತ್ರದ ನಿಯಮವನ್ನೂ ಅನುವ್ಯಾಖ್ಯಾನದ ಆಧಾರವನ್ನೂ ಕೊಟ್ಟಿದ್ದಾರೆ. ವಿದ್ ಧಾತುವಿಗೆ ಇಲ್ಲಿ ಸೂಚಿಸಿದ ಮೂರು ಅರ್ಥಗಳಲ್ಲಿ ಎರಡನೆಯ ಹಾಗೂ ಮೂರನೆಯ ಅರ್ಥವನ್ನು ಸ್ವೀಕರಿಸಿ ಬರೆದ ಅರ್ಥವಿದು.

ii. ಒಂದು ವೇಳೆ ಹುಟ್ಟಿದುದಾದರೆ ನಾಶ ಹೊಂದುತ್ತಿತ್ತು ಎಂಬ ಯದಿ ತರ್ಹಿ ರೂಪವನ್ನು ಗಮನಿಸಿ ***ಹುಟ್ಟಿದ್ದೇ ನಾಶ ಹೊಂದುವದು, ಹುಟ್ಟದಿದ್ದುದು ನಾಶ ಹೊಂದುವದಿಲ್ಲ*** ಎಂಬ ಒಂದು ನಿಯಮವನ್ನೇ ಶ್ರೀಮದಾಚಾರ್ಯರು ಇಲ್ಲಿ ಸೂಚಿಸಿದ್ದನ್ನು ಗಮನಿಸಬೇಕು. (ಈ ಸಂದರ್ಭದಲ್ಲಿ ಇನ್ನೊಂದು ಇದಕ್ಕೆ ಸಂಬಂಧಿಸಿದ ವಿಷಯ ಗಮನಾರ್ಹ. ಬಂಧವು ಅನಾದಿಯಾದರೂ ಕೂಡ ಅದು ಭಗವತ್ಪ್ರಸಾ-ದದಿಂದ ನಾಶ ಹೊಂದುವದು ಎಂಬುದು ಶ್ರೀಮದಾಚಾರ್ಯರ ಸಿದ್ಧಾಂತ. **ದ್ರವ್ಯಂ ಕರ್ಮ ಚ ಕಾಲಶ್ಚ ಸ್ವಭಾವೋ ಜೀವ ಏವ ಚ । ಯದನುಗ್ರಹತಃ ಸಂತಿ ನ ಸಂತಿ ಯದುಪೇಕ್ಷಯಾ ॥** ಎಂಬಲ್ಲಿ ಪರಮಾತ್ಮನ ಸರ್ವತಂತ್ರಸ್ವಾತಂತ್ರ್ಯವನ್ನು ಪ್ರತಿಪಾದಿಸಿ ನಿತ್ಯವಾದ ತತ್ವಗಳಿಗೇ ಅವುಗಳ ನಿತ್ಯತ್ವವನ್ನು ಕೊಡಲು ಅದು ಇಲ್ಲದಂತೆ ಮಾಡಲು ಪರಮಾತ್ಮನಿಗೇ ಸಾಮರ್ಥ್ಯವಿದೆ ಎಂದು ಹೇಳಲಾಗಿದೆ. ಅನಾದಿಯಾದುದಕ್ಕೆ ನಾಶವಿರಬಹುದೆಂಬ ವಿಷಯವನ್ನು ಶ್ರೀಮದಾಚಾರ್ಯರು ಅನುವ್ಯಾಖ್ಯಾನದಲ್ಲಿ ವಿವರಿಸಿದುದನ್ನು ಅನಾದಿಬಂಧನಿವೃತ್ತಿವಾದ ಎಂಬ ಘಟ್ಟದಲ್ಲಿ ಶ್ರೀಮನ್ನ್ಯಾಯ-ಸುಧಾಕಾರರು ವಿಸ್ತೃತವಾಗಿ ವಿಮರ್ಶಿಸಿದ್ದಾರೆ. ಈ ವಿಷಯವನ್ನು ಕನ್ನಡ ಭಾಮಿನೀ-ಷಟ್ಪದಿಯಲ್ಲಿ ಪ್ರಸ್ತುತಪಡಿಸಲು *ಕರ್ನಾಟಕ ಅನಾದಿಬಂಧನಿವೃತ್ತಿವಾದ ಷಟ್ಪದಿ* ಎಂಬ ಚಿಕ್ಕ ಪುಸ್ತಿಕೆಯಲ್ಲಿ ಈ ಲೇಖಕನಿಂದ ಪ್ರಯತ್ನಿಸಲ್ಪಟ್ಟಿದೆ. ಪರಮಾತ್ಮನಿಗೆ ಅಘಟಿತ-ವಾದುದನ್ನು ಘಟಿಸುವ ಸಾಮರ್ಥ್ಯವಿದೆ ಎಂದು ಹೇಳುವದೇ ಈ ಘಟ್ಟದ ತಾತ್ಪರ್ಯ. ಹುಟ್ಟದೇ ಇದ್ದ ಅಂದರೆ ಅನಾದಿಯಾದ ಪಂಚಭೇದವು ನಶಿಸಬೇಕೆಂದು ಪರಮಾತ್ಮನು

Rarest Archiver

ಎಂದೂ ಸಂಕಲ್ಪಿಸುವದಿಲ್ಲವಾದ ಕಾರಣ ಈ ಭೇದವು ನಿತ್ಯವಾಗಿರುವದು) ಈ ಹಿನ್ನೆಲೆಯಲ್ಲಿ ಪಂಚಭೇದವು ನಿತ್ಯನಾದ ಹಾಗೂ ಅಜ್ಞಾನ ವಿಪರೀತಜ್ಞಾನಗಳಿರದ ದೋಷದೂರನಾದ ಪರಮಾತ್ಮನಿಂದ ತಿಳಿಯಲ್ಪಟ್ಟಂಥದು ಹಾಗೂ ರಕ್ಷಿಸಲ್ಪಟ್ಟಂಥದು, **(ಮಾಯಾಮಾತ್ರಮ್),** ಕಾರಣ ಅನಾದಿಯಾಗಿದೆ ಎಂದು ***ಮಾಂಡೂಕೋಪನಿಷತ್ತಿನ*** ಈ ವಾಕ್ಯದ ಅರ್ಥವನ್ನು ವಿವರಿಸಿದ್ದಾರೆ.

iii. **ಪ್ರಪಂಚಃ=** ಈ ಪದಕ್ಕೆ ಶ್ರೀಮದಾಚಾರ್ಯರು ಉಪನಿಷತ್ತಿನಲ್ಲಿಯ ಸಂದರ್ಭಕ್ಕೆ ಸಮರ್ಪಕವಾದ ಬಹಳ ಸ್ವಾರಸ್ಯವಾದ ಅರ್ಥವನ್ನು ಹೇಳಿದ್ದಾರೆ. ಪ್ರಪಂಚ ಎಂದರೆ ವಿಶ್ವವಿಸ್ತಾರ ಎಂಬ ಅರ್ಥವಲ್ಲ. ಆದರೆ (ಮೋಕ್ಷೋಪಯೋಗಿಜ್ಞಾನ-ವಾದುದರಿಂದ) ಪ್ರಕೃಷ್ಟವಾದ ಪಂಚವಿಧಭೇದ ಎಂಬ ಅರ್ಥ. **(ಪಂಚವಿಧಃ ಪಂಚಃ, ಪ್ರಕೃಷ್ಟಃ ಪಂಚಃ ಪ್ರಪಂಚಃ)** ಎಂದು ಶ್ರೀ ಟೀಕಾಕೃತ್ಪಾದರು ಬಿಡಿಸಿ ಆಚಾರ್ಯರು ಹೇಳಿದ ಅರ್ಥವನ್ನು ವ್ಯಾಕರಣದ ನಿಯಮಗಳಿಂದ ಸಮರ್ಥಿಸಿದ್ದಾರೆ. ಶ್ರೀ ರಾಯರ ***ಭಾವದೀಪದಲ್ಲಿ*** ಈ ವಿಷಯಕ್ಕೆ ವ್ಯಾಕರಣದ ಚರ್ಚೆ ಇದೆ.

iv. **ಅದ್ವೈತಮ್=** ಇದಕ್ಕೆ ಅದ್ವೈತತತ್ವಮ್ ಅದ್ವಿತೀಯತ್ವಮ್ ಎಂದು ವಿವರಣೆ ಕೊಟ್ಟಿದ್ದಾರೆ.

v. **ಮಾಯಾಮಾತ್ರಮ್=** ಮಾಯಾ=ಭಗವತ್ಪ್ರಜ್ಞೆ. ಇದಕ್ಕೆ ಪ್ರಮಾಣ- **ಮಾಯೇತ್ಯುಕ್ತಾ ಪ್ರಕೃಷ್ಟತ್ವಾತ್ ಪ್ರಕೃಷ್ಟಂ ಹಿ ಮಯಾಬಿಧಮ್ । *ವಿಷ್ಣೋಃ ಪ್ರಜ್ಞಪ್ತಿರೇವೈಕಾ ಶಬ್ದೈರೇತೈಃ* ಉದೀರ್ಯತೇ ॥**

vi. **ದ್ವೈತಮ್ =** ಈ ಪದವನ್ನು ಶ್ರೀಮಟ್ಟೀಕಾಕೃತ್ಪಾದರು ವಿಷ್ಣುತತ್ವವಿ-ನಿರ್ಣಯದಲ್ಲಿ ಈ ಮೊದಲು **(ಅವಿನಾಶೀ ವಾ ಅರೇಽಯಮಾತ್ಮಾಽನುಚ್ಛಿತ್ತಿ-ಧರ್ಮಾ** ಎಂಬ ಪ್ರಮಾಣದ ವಿವರಣೆಯನ್ನು ಕೊಡುವ ಸಂದರ್ಭದಲ್ಲಿ **ಯತ್ರ ಹಿ ದ್ವೈತಂ ಇವ ಭವತಿ ತದಿತರಃ ಇತರಂ ಪಶ್ಯತಿ** ಎಂಬ ವಾಕ್ಯಕ್ಕೆ ಪೂರ್ವಪಕ್ಷಿಗಳು ಹೇಳುವ ವಿವರಣೆಯನ್ನು ವಿಮರ್ಶಿಸುವಾಗ) ಐದು ಪ್ರಕಾರದಿಂದ ಬಿಡಿಸಿದ್ದಾರೆ.

ಅ. ದ್ವಯೋಃ ಭಾವಃ ದ್ವಿತಾ ಭೇದಃ ಇತಿಯಾವತ್, ತಸ್ಯಾಃ ಇದಂ ಧರ್ಮಿ ದ್ವೈತಂ ಭಿನ್ನಂ ವಸ್ತು ಇತ್ಯರ್ಥಃ । = ಭಿನ್ನವಾದ ವಸ್ತು ಎಂಬರ್ಥ.

ಆ. ದ್ವೀತಿ ಭಾವಪ್ರಧಾನಂ ದ್ವಿತ್ವೇನ ಇತಂ ಪ್ರಾಪ್ತಂ ದ್ವೀತಂ ತತಃ ಸ್ವಾರ್ಥಿಕಃ ಅಣ್ ದ್ವೈತಂ ಭೇದವತ್= ಭೇದವುಳ್ಳಂಥದು ಎಂದರ್ಥ.

ಇ. ದ್ವಾಭ್ಯಾಂ ವಿರುದ್ಧಧರ್ಮಾಭ್ಯಾಂ ಇತಂ ದ್ವೀತಂ ತತ್ರ ಭವಂ ದ್ವೈತಂ ಭೇದಃ ಇತಿ ಯಾವತ್ = ಭೇದ ಎಂದರ್ಥ.

Rarest Archiver

ಈ. ದ್ವಿತಾ ಇತಿ ಅನೇಕಸಂಖ್ಯಾ ಉಚ್ಯತೇ । ತತ್ರ ಭವಂ ದ್ವೈತಂ ಭೇದಹ್ ಏವ ।= ಈ ರೀತಿಯ ವಿವರಣೆಯಿಂದಲೂ ಭೇದವೆಂಬರ್ಥವೇ ಲಭಿಸುವದು.

ಉ. ದ್ವಿತ್ವೇನ ಸಂಖ್ಯಯಾ ಇತಂ ತತ್ರ ಭವಂ, ದ್ವಿತ್ವಸಂಖ್ಯಯಾ ಯುತೇ ಭವಂ = ಭೇದವೆಂಬರ್ಥ.

ಈ ವಾಕ್ಯಕ್ಕೆ ತಮ್ಮ ಉಪನಿಷದ್ಭಾಷ್ಯ***ಪ್ರಕಾಶಿಕಾ***ದಲ್ಲಿ ಶ್ರೀ ವಾದಿರಾಜರು ಶ್ರೀಮದಾಚಾರ್ಯರ ಭಾಷ್ಯದ ಆಧಾರದ ಮೇಲೆ ಸ್ವಾರಸ್ಯಕರವಾದ ವಿವರಣೆಯನ್ನು ಕೊಟ್ಟಿದ್ದಾರೆ. ಶ್ರೀ ರಾಯರೂ ಕೂಡ ಖಂಡಾರ್ಥದಲ್ಲಿ ಭಾಷ್ಯವನ್ನು ಆಧರಿಸಿ ಈ ವಾಕ್ಯದ ಅರ್ಥವನ್ನು ಅಚ್ಚುಕಟ್ಟಾಗಿ ವಿವರಿಸಿದ್ದಾರೆ. ಈ ವಿವರಣೆಗಳ ಅಧಾರದ ಮೇಲೆ ಉಪನಿಷತ್ತಿನ ಈ ಶ್ಲೋಕದಲ್ಲಿಯ ಪದಗಳ ಅರ್ಥವು ಈ ಕೆಳಗಿನಂತೆ ಇದೆ;

vii. **ಪ್ರಪಂಚಃ= ತನ್ವಾ ಸ್ವಸ್ವಾಮಿಸಂಬಂಧಃ ಪ್ರಪಂಚೋಽಸ್ಯ ಶರೀರಿಣಃ** ಎಂಬ *ಬ್ರಹ್ಮತರ್ಕದ* ಪ್ರಮಾಣವನ್ನು ಶ್ರೀಮದಾಚಾರ್ಯರು ಉದಾಹರಿಸಿದ್ದಾರೆ. ಪಂಚ-ಭೂತಾತ್ಮಕದೇಹವನ್ನು ಕುರಿತು ಅದು ತನ್ನದೆಂದೂ, ಅದರ ಒಡೆಯನು ತಾನು ಎಂದೂ ತಿಳಿಯುವ ಅಭಿಮಾನದ ಸಂಬಂಧವೇ ಪ್ರಪಂಚ.

viii. **ಮಾಯಾಮಾತ್ರಮ್**=ಭಗವದಿಚ್ಛೆ. **ಮಹಾಮಾಯೇತ್ಯವಿದ್ಯೇತಿ ತಮೇಚ್ಛಾನಂತ ಕಥ್ಯತೇ** ಎಂಬ ಉಕ್ತಿಗನುಗುಣವಾಗಿ ಮಾಯಾ ಎಂದರೆ ಭಗವಂತನ ಸಂಕಲ್ಪ ಅಥವಾ ಇಚ್ಛೆ ಎಂದರ್ಥ. ಕೇವಲ ಭಗವಂತನ ಸಂಕಲ್ಪದಂತೆ ನಿರ್ಮಿತವಾದಂಥದು. ಕೇವಲ ಭಗವಂತನ ಇಚ್ಛೆ. ಪ್ರಪಂಚವು ಕೇವಲ ಭಗವದಿಚ್ಛೆ. ಇಲ್ಲಿ ಭಗವದಿಚ್ಛೆಯು ಕಾರಣವೂ ಪ್ರಪಂಚವು ತತ್ಕಾರ್ಯವೂ ಆದರೂ ಕೂಡ ಪ್ರಪಂಚವು ಭಗವದಿಚ್ಛೆಯೇ ಎಂದು ಕಾರ್ಯಕಾರಣಗಳ ಅಭೇದವ್ಯಪದೇಶವಿದೆ. ಕಾರ್ಯಕಾರಣಗಳ ಅಭೇದವ್ಯಪ-ದೇಶಕ್ಕೆ ಲೋಕದಲ್ಲಿ ಅನೇಕ ದೃಷ್ಟಾಂತಗಳು ಸಿಕ್ಕುವವು. ನೇಗಿಲೇ ಜೀವನ-**ಲಾಂಗಲೇನ ಜೀವನಮ್** ಎಂಬಲ್ಲಿ ಕಾರ್ಯಕಾರಣಗಳಲ್ಲಿ ಅಭೇದವ್ಯವಹಾರವಿದೆ.

**ಉಪನಿಷತ್ತಿನಲ್ಲಿ ಈ ವಾಕ್ಯಕ್ಕೆ ಹಿನ್ನೆಲೆ :-** ಪ್ರಸ್ತುತ ವಾಕ್ಯಕ್ಕೆ ಆಕರವಾದ *ಮಾಂಡೂ-ಕೋಪನಿಷತ್ತು ಅಥರ್ವವೇದದ* ಭಾಗವಾಗಿದೆ. *ಮಾಂಡೂಕೋಪನಿಷತ್ತಿಗೆ* ಮಂಡೂಕರೂಪೀ ವರುಣನೇ ಋಷಿಯು, ವಿಶ್ವ ತೈಜಸ ಪ್ರಾಜ್ಞ ತುರೀಯ ಎಂಬ ನಾಲ್ಕು ರೂಪಗಳ ಶ್ರೀ ಹರಿಯೇ ದೇವತೆಯು. ಇಲ್ಲಿ ಅನುಷ್ಟುಭ್ ಆದಿ ಛಂದಸ್‌ನ ಶ್ಲೋಕಗಳು ಇರುವವು.

ಇಲ್ಲಿ ಬರುವ ಶ್ಲೋಕಗಳನ್ನು ಗಮನಿಸಿ ಅವು *ಗೌಡಪಾದ-ಕಾರಿಕಾದ*

Rarest Archiver

ಭಾಗಗಳೆಂದೂ ಅವು ಉಪನಿಷತ್ತಿನ ಭಾಗವಾಗಿಲ್ಲವೆಂದೂ ಅದ್ವೈತಿಗಳು ಭಾವಿಸುತ್ತಾರೆ. ಆದರೆ ಈವಿಷಯಕ್ಕೆ ಸಂಶೋಧನೆ ಮಾಡಿದ ಅನೇಕ ವಿದ್ವಾಂಸರ ಅಭಿಪ್ರಾಯದಂತೆ ಶ್ಲೋಕಗಳು ಪ್ರಕ್ಷಿಪ್ತವಲ್ಲ, ಉಪನಿಷತ್ತಿನ ಅವಿಭಾಜ್ಯವಾದ ಭಾಗವಾಗಿವೆ ಎಂಬುದನ್ನು ಗಮನಿಸಬೇಕು. ಪ್ರೊ. ಕೆ.ಟಿ. ಪಾಂಡುರಂಗಿಯವರು ಈ ವಿಷಯವನ್ನು ಕೂಲಂಕಷವಾಗಿ ವಿಮರ್ಶಿಸಿದ್ದಾರೆ. (ನೋಡಿರಿ ಅವರ– *ಎಸ್ಸೆನ್ಶಿಯಲ್ಸ್ ಆಫ್ ಉಪನಿಷದ್ಸ್*). ಈ ವಿಷಯಕ್ಕೆ ಅವರು ಮುಖ್ಯವಾಗಿ ನಾಲ್ಕು ಕಾರಣಗಳನ್ನು ಕೊಡುತ್ತಾರೆ; ೧. ಕೇವಲ ಶ್ರೀ ಮಧ್ವಾಚಾರ್ಯರಲ್ಲದೆ ಶ್ರೀ ರಾಮಾನುಜಾಚಾರ್ಯರೂ ಕೂಡ ಇವು ಶ್ರುತಿಯ ಭಾಗವೆಂದು ಒಪ್ಪಿಕೊಂಡಿರುತ್ತಾರೆ. ಶ್ರೀ ರಾಮಾನುಜಾಚಾರ್ಯರು ಇವುಗಳಲ್ಲಿಯ ಕೆಲ ಶ್ಲೋಕಗಳನ್ನು ಶ್ರುತಿಯೆಂದು ಉದಾಹರಿಸಿದ್ದಾರೆ. ೨. ಅದ್ವೈತ ಸಂಪ್ರದಾಯದ ಆನಂದಗಿರಿ, ಬ್ರಹ್ಮಾನಂದ, ಅಪ್ಪಯ್ಯ ದೀಕ್ಷಿತ ಇವರೇ ಆದಿಯಾದ ಅನೇಕ ಗ್ರಂಥಕರ್ತರು ಇವುಗಳನ್ನು ಶ್ರುತಿಯೆಂದೇ ಗ್ರಹಿಸಿದ್ದಾರೆ. ೩. ಶ್ರೀ ಶಂಕರಾಚಾರ್ಯರೇ ತಮ್ಮ ಗ್ರಂಥಗಳಲ್ಲಿ ಇವುಗಳನ್ನು ಆಗಮಗಳೆಂದು ಉದಾಹರಿಸಿದ್ದಾರೆ. ೪. ಸ್ವತಃ ಗೌಡಪಾದರೇ ಈ ಶ್ಲೋಕಗಳನ್ನು ತಮ್ಮ *ಕಾರಿಕಾ* ದಲ್ಲಿ ಆಗಮಪ್ರಕರಣದಲ್ಲಿ ಸೇರಿಸಿದ್ದಾರೆ.

ಶ್ರೀ ಗುರುಸಾರ್ವಭೌಮರು ಈ ಶ್ಲೋಕಗಳು **ಬ್ರಹ್ಮದೃಷ್ಟ**ವಾದವುಗಳು ಎಂದು ತಮ್ಮ ಈ ಉಪನಿಷತ್ತಿನ ಖಂಡಾರ್ಥದಲ್ಲಿ ಪ್ರಥಮ ಖಂಡದ ೭ನೆಯ ಶ್ಲೋಕದ ವಿವರಣೆಯ ಅವತಾರಿಕೆಯಲ್ಲಿ **ಉಪನಿಷತ್ ಸ್ವಯಂ ಪ್ರಮಾಣತ್ವೇಽಪಿ ದಾರ್ಢ್ಯಾಯ ಸ್ವೋಕ್ತಾರ್ಥೇ ಬ್ರಹ್ಮದೃಷ್ಟಾನ್ ಶ್ಲೋಕಾನ್ ಉದಾಹರತಿ– ಅತ್ರೈತೇ ಶ್ಲೋಕಾಃ ಭವಂತೀತಿ ।** ಎಂದು ಹೇಳಿ ಬ್ರಹ್ಮದೃಷ್ಟಾನ್ ಎಂಬ ಒಂದೇ ಪದದಿಂದ ವರ್ಣಿಸಿ ಈ ಶ್ಲೋಕಗಳ ಬಗೆಗಿರುವ ವಿವಿಧ ಅಭಿಪ್ರಾಯಗಳ ಕೋಲಾಹಲಕ್ಕೆ ತೆರೆ ಎಳೆದಿದ್ದಾರೆ. ಪ್ರಸ್ತುತ ಶ್ಲೋಕವು ಇಂಥ ಬ್ರಹ್ಮದೃಷ್ಟವಾದ ಶ್ಲೋಕಗಳಲ್ಲಿ ಒಂದಾಗಿದೆ. ಇಂಥ ಶ್ಲೋಕಗಳು ಮೇಲ್ನೋಟಕ್ಕೆ ಬೇರೆ ಅರ್ಥವನ್ನು ಕೊಡುವದರಿಂದ ಶ್ರೀಮದಾಚಾರ್ಯರು ಸ್ವತಃ ಇವುಗಳ ಅರ್ಥವನ್ನು ಪ್ರಕರಣವನ್ನು ಗಮನಿಸಿ ಬಿಡಿಸಿ ಬರೆದಿದ್ದಾರೆಂಬುದನ್ನು ಗಮನಿಸಬೇಕು.

ಈ ಉಪನಿಷತ್ತು ಮುಖ್ಯವಾಗಿ ಅಧಿಕಾರಿಗಳಿಗೆ ಅಖಿಲಕ್ಲೇಶನಿವೃತ್ತಿವಿಶಿಷ್ಟವಾದ ಪರಮಾನಂದವನ್ನು ಪಡೆಯುವದಕ್ಕೆ ಪ್ರಣವಪ್ರತಿಪಾದ್ಯನಾದ ಪರಮಾತ್ಮನ ಉಪಾಸನೆಯನ್ನು ಪ್ರತಿಪಾದಿಸುವದಕ್ಕೋಸ್ಕರವೇ ಪ್ರವೃತ್ತವಾಗಿದೆ.ಈ ಉಪನಿಷತ್ತಿನಲ್ಲಿ **ನಾಲ್ಕು ಖಂಡ**ಗಳಿವೆ. **ಮೊದಲನೆಯ ಖಂಡದಲ್ಲಿ** ಅಕಾರ, ಉಕಾರ, ಮಕಾರ ನಾದಗಳಿಂದ ಕೂಡಿದ ಪ್ರಣವವು–ಓಂಕಾರವು– ವಿಶ್ವ, ತೈಜಸ, ಪ್ರಾಜ್ಞ, ತುರೀಯವೆಂಬ ಪರಮಾತ್ಮನ ರೂಪಗಳನ್ನೇ ಪ್ರತಿಪಾದಿಸುವದಾದ ಕಾರಣ ಆ

Rarest Archiver

ರೂಪಗಳೆಂತಹವು, ಪರಮಾತ್ಮನ ಮಹಿಮೆ ಏನು ಎಂಬುದನ್ನು ವಿವರಿಸುವದು. **ದ್ವಿತೀಯಖಂಡದಲ್ಲಿ** ಆತ್ಮನ ತುರೀಯ ರೂಪದ ವರ್ಣನೆ ಇದ್ದು ಆ ರೂಪದ ವೈಶಿಷ್ಟ್ಯವು ಬ್ರಹ್ಮದೃಷ್ಟವಾದ ಮಂತ್ರಗಳಿಂದ ವರ್ಣಿಸಲ್ಪಟ್ಟಿದೆ. ಈ ಪ್ರಕಾರದ ವಿಶಿಷ್ಟರೂಪದ ಸಾಕ್ಷಾತ್ಕಾರವು ನಿದ್ರಾಭ್ರಮಗಳ ಕ್ಷಯವಾದಾಗಲೇ ಆಗುವದು, ನಿದ್ರಾಭ್ರಮಗಳ ಕ್ಷಯವು ಪರಮಾತ್ಮನ ಅನುಗ್ರಹದಿಂದಲೇ ಸಾಧ್ಯ, ಅಹಂಕಾರ ಮಮಕಾರಗಳ ಬಂಧವನ್ನು ತೊಲಗಿಸುವವನು ಪರಮಾತ್ಮನೇ, ಅಹಂಕಾರ ಮಮಕಾರದ ಸಂಸಾರವು ಸ್ವತಂತ್ರವಾಗಿ ಇರದೆ ಪರಮಾತ್ಮನ ಸಂಕಲ್ಪದಿಂದಲೇ ಬಂದಿರುವದರಿಂದ ಅದು ಅವನ ಅನುಗ್ರಹದಿಂದಲೇ ನಿವೃತ್ತವಾಗುವದು, ಆಗ ಅವನ ಸಾಕ್ಷಾತ್ಕಾರವಾಗುವದು ಎಂದು ಹೇಳುವ ಸಂದರ್ಭದಲ್ಲಿ **ಅನಾದಿಮಾಯಯಾ ...**ಇತ್ಯಾದಿ ಮುಂದೆ ಉದಾಹರಿಸಲ್ಪಟ್ಟ ಶ್ಲೋಕವೂ ಹಾಗೂ ಪ್ರಸ್ತುತ **ಪ್ರಪಂಚೋ ಯದಿ...**ಇತ್ಯಾದಿ ಶ್ಲೋಕವೂ ಪ್ರವೃತ್ತವಾಗಿವೆ. **ಉಪನಿಷತ್ತಿನ ೩ನೆಯ ಖಂಡವು** ಪ್ರಣವಪ್ರತಿಪಾದ್ಯ ಪರಮಾತ್ಮನ ಮಹಿಮೆಯನ್ನು ಪುನಃ ಅನುವಾದ ಮಾಡುತ್ತದೆ. **ಚತುರ್ಥಖಂಡದಲ್ಲಿ** ಪರಮಾತ್ಮನು ನಾದಪ್ರತಿಪಾದ್ಯನೆಂಬುದನ್ನು ವಿವರಿಸಲಾಗಿದೆ. ಹೀಗೆ ಶ್ರೀ ರಾಯರ ಖಂಡಾರ್ಥದ ಅವತಾರಿಕಾ ವಾಕ್ಯಗಳಿಂದ ಉಪನಿಷತ್ತಿನ ಎಲ್ಲ ಖಂಡಗಳ ವಿಷಯವನ್ನು ಸಂಗ್ರಹಿಸಬಹುದು.

**ಪ್ರಪಂಚೋ ಯದಿ ವಿದ್ಯೇತ .....** ಈ ಶ್ಲೋಕದ ಅನಂತರದಲ್ಲಿರುವ **ವಿಕಲ್ಪೋ ವಿನಿವರ್ತೇತ ಕಲ್ಪಿತೋ ಯದಿ ಕೇನಚಿತ್ । ಉಪದೇಶಾತ್ ಅಯಂ ವಾದೋಽಜ್ಞಾತೇ ದ್ವೈತಂ ನ ವಿದ್ಯತೇ ॥ ೨-೧೦** ಎಂಬ ಇನ್ನೊಂದು ಶ್ಲೋಕವೂ ಇದೇ ಅರ್ಥವನ್ನೇ ವಿಶದ ಮಾಡಿ ಉಪಸಂಹಾರ ಮಾಡುತ್ತದೆ. (ಶ್ರೀ ರಾಯರು ತಮ್ಮ ಖಂಡಾರ್ಥದಲ್ಲಿ **ಉಕ್ತಮೇವ ಪೂರ್ವವಾಕ್ಯಾರ್ಥಂ ವಿಶದಯನ್ ಉಪ-ಸಂಹರತಿ ವಿಕಲ್ಪ ಇತಿ-** ಎಂದು ಈ ಶ್ಲೋಕಕ್ಕೆ ಕೊಟ್ಟ ಅವತಾರಿಕೆಯನ್ನು ಗಮನಿಸಬೇಕು). **ಈ ಶ್ಲೋಕದ ಅರ್ಥ ಹೀಗೆ** (ಶ್ರೀ ರಾಯರ ಖಂಡಾರ್ಥವನ್ನನುಸರಿಸಿ); ದೇಹಗೇಹಾದಿಗಳಲ್ಲಿಯ ನಾನಾವಿಧವಾದ ಮಮತೆ, ಅಭಿಮಾನ ಸ್ವಾತಂತ್ರ್ಯಾದಿಗಳು, ದೇಹಗೇಹಾದಿಗಳೆಲ್ಲ ಸ್ವಾಭಾವಿಕವಾಗಿ ನನ್ನವೇ ಇವೆ ಎಂಬ ಭ್ರಮವು ಯಾವುದೋ ಅಜ್ಞಾನದಿಂದ ಉಂಟಾಗಿರುವದರಿಂದ ಸಜ್ಜನರ ಉಪದೇಶದಿಂದ ಆ ಭ್ರಮವು ನಾಶವನ್ನು ಹೊಂದಿಯೇ ಹೊಂದುವದು. ಸಜ್ಜನರ ಉಪದೇಶವು ಹೀಗಿರುವದು; ಬ್ರಹ್ಮನ ಯಥಾವತ್ತಾದ ಜ್ಞಾನವಾದರೆ ಭ್ರಮವು ಇರುವದಿಲ್ಲ. (ಎಂದು ಬ್ರಹ್ಮ-ದೃಷ್ಟವಾದ ಶ್ಲೋಕಗಳಿವೆ.)

ಹೀಗೆ, ಉಪನಿಷತ್ತಿನಲ್ಲಿ ಪರಮಾತ್ಮನ ತುರೀಯ ರೂಪದ ವರ್ಣನೆ

Rarest Archiver

ಮಾಡುತ್ತ ಪ್ರಸ್ತುತ ಶ್ಲೋಕದಲ್ಲಿ ಅವನ ಮಹಿಮೆಯನ್ನು ಹೇಳಿ ಅವನಿಂದ ಜ್ಞಾತವಾದ ಹಾಗೂ ರಕ್ಷಿತವಾದ ಪಂಚಭೇದಗಳು ಅನಾದಿಯಾಗಿವೆ, ಸತ್ಯವಾಗಿವೆ; ಇಂಥ ಮಹಿಮೆಯ ಪರಮಾತ್ಮನ ಯಥಾರ್ಥಜ್ಞಾನದಿಂದ ಹಾಗೂ ತದ್ದ್ವಾರಾ ಪ್ರಾಪ್ತವಾಗುವ ಅವನ ಅನುಗ್ರಹದಿಂದಲೇ ಈ ಪ್ರಪಂಚದ ಬಗೆಗಿರುವ ನಾನು ನನ್ನದೆಂಬ ಭ್ರಮವು ನಶಿಸುವದು ಎಂದು ಹೇಳಿದ್ದು ಉಪನಿಷತ್ತಿನಲ್ಲಿಯ ಸಂದರ್ಭಕ್ಕೆ ಹೊಂದುವ ಅರ್ಥವಾಗಿದ್ದು ಇದನ್ನೇ ಶ್ರೀಮದಾಚಾರ್ಯರು ವಿವರಿಸಿದ್ದಾರೆಂಬುದನ್ನು ಗಮನಿಸ-ಬೇಕು.

**ಶ್ರೀಮದ್ ವಿಷ್ಣುತತ್ತ್ವವಿನಿರ್ಣಯದಲ್ಲಿ ಈ ವಾಕ್ಯಕ್ಕಿರುವ ಪ್ರಸಕ್ತಿ:–** ಜೀವೇಶ್ವರ ಐಕ್ಯವು ಯಾವುದೊಂದು ಆಗಮವಾಕ್ಯದಿಂದಲೂ ಸಿದ್ಧವಿಲ್ಲ. ಇಷ್ಟೇ ಅಲ್ಲ, ಐಕ್ಯವು ಎಲ್ಲ ಆಗಮಗಳಿಗೂ ವಿರುದ್ಧವಾಗಿದೆ, ಹೀಗೆ ಸಿದ್ಧಮಾಡುವ ಉದ್ದೇಶದಿಂದ ಶ್ರೀಮದಾಚಾರ್ಯರು **ನ ಚ ಅಭೇದೇ ಕಶ್ಚಿದಾಗಮಃ, ಸಂತಿ ಚ ಭೇದೇ ಸರ್ವಾ-ಗಮಾಃ** ಎಂದು ಪ್ರತಿಜ್ಞೆ ಮಾಡಿ ಅನೇಕ ಆಗಮ ವಾಕ್ಯಗಳನ್ನು ಉದ್ಧರಿಸಿ ಅವುಗಳ ವಿಮರ್ಶೆ ಮಾಡಿ ತಾತ್ಪರ್ಯವನ್ನು ಇಲ್ಲಿಯವರೆಗೆ ವಿವರಿಸಿದರು. ಅವರು ವಿಮರ್ಶೆ ಮಾಡಿದ ಶ್ರುತಿವಾಕ್ಯಗಳು ಬಹುಶಃ ಐಕ್ಯವಾದಿಗಳಿಂದ ತಮ್ಮ ಐಕ್ಯವಾದವನ್ನು ಸಮರ್ಥಿಸುವ ದೃಷ್ಟಿಯಿಂದ ಉದಾಹರಿಸಲ್ಪಟ್ಟ ವಾಕ್ಯಗಳೇ ಆಗಿದ್ದುದನ್ನು ಇಲ್ಲಿ ಗಮನಿಸಬೇಕು. ಐಕ್ಯವಾದಿಗಳು ತಾವು ಉದಾಹರಿಸಿದ ಶ್ರುತಿಗಳ ಅರ್ಥ ಮಾಡುವಾಗ ಶ್ರೀ ವೇದವ್ಯಾಸರು **ಓಂ ತತ್ತು ಸಮನ್ವಯಾತ್ ಓಂ** ಎಂಬ ಬ್ರಹ್ಮಸೂತ್ರದಲ್ಲಿ ಸೂಚಿಸಿದ **ಉಪಕ್ರಮೋಪಸಂಹಾರಾವಭ್ಯಾಸೋಽಪೂರ್ವತಾ ಫಲಮ್ । ಅರ್ಥವಾದೋಪಪತ್ತೀ ಚ ಲಿಂಗಂ ತಾತ್ಪರ್ಯನಿರ್ಣಯೇ ॥** ಎಂಬ ತಾತ್ಪರ್ಯ-ನಿರ್ಣಾಯಕ ಲಿಂಗಗಳನ್ನು ಗಮನಿಸಿ ಅರ್ಥ ಮಾಡದ ಕಾರಣದಿಂದ ಆಪಾತತಃ ಐಕ್ಯಪರವಾದ ಅರ್ಥವು ಲಭಿಸಿದ್ದು ಶ್ರೀ ವೇದವ್ಯಾಸರು ಸೂಚಿಸಿದ ನಿಯಮಗಳನ್ನು ಗಮನಿಸಿ ಅರ್ಥ ಮಾಡಿದಾಗ ಭೇದಪರವಾದ ಅರ್ಥವೇ ಲಭಿಸುವುದೆಂಬುದನ್ನು ಪ್ರತಿ ವಾಕ್ಯದ ಅರ್ಥ ಮಾಡುವಾಗಲೂ ತೋರಿಸಿ ಕೊಟ್ಟಿದ್ದಾರೆ. ಐಕ್ಯವಾದಿಗಳಲ್ಲಿ ಕೆಲವರು ಮುಕ್ತಿಯಲ್ಲಿ ಮಾತ್ರ ಐಕ್ಯವನ್ನು ಹೇಳುವ ವಿಶಿಷ್ಟಾದ್ವೈತಿಗಳೂ ಸೇರಿದ್ದಾರೆ. ಅವರು ಉದಾಹರಿಸುವ ಶ್ರುತಿಗಳನ್ನೂ ಕೂಡ ಶ್ರೀಮದಾಚಾರ್ಯರು ಆಳವಾಗಿ ವಿಮರ್ಶಿಸಿ ಅವು ಹೇಗೆ ಐಕ್ಯಪರವಾಗಿಲ್ಲವೆಂಬುದನ್ನು ಬಹಳ ಸ್ವಾರಸ್ಯವಾಗಿ ವಿವರಿಸಿದ್ದಾರೆ. ಆಗಮವಾಕ್ಯಗಳು ಐಕ್ಯಪರವಾಗಿ ಇರುವದಿಲ್ಲವೆಂಬುದು ಸಿದ್ಧವಾಗ-ಬೇಕಾದರೆ ಐಕ್ಯದ ವಿರುದ್ಧವಾದ ಭೇದವು ಎಲ್ಲ ಆಗಮಗಳಿಂದ ಸಿದ್ಧವೂ ಸಮ್ಮತವೂ ಆಗಿರಬೇಕು; ಐಕ್ಯವಾದಿಗಳು ಉದಾಹರಿಸುವ ಆಗಮವಾಕ್ಯಗಳೆಲ್ಲವೂ ಕೂಡ ಭೇದಪರವಾಗಿವೆ ಎಂಬುದನ್ನೂ ಕೂಡ ಅವರು ಇಲ್ಲಿಯ ವರೆಗೆ ತೋರಿಸಿ ಕೊಟ್ಟಿದ್ದಾರೆ.

Rarest Archiver

ಇಷ್ಟೆಲ್ಲ ವಿವರಿಸಿದ ಬಳಿಕ ಕೊನೆಗೆ ಅವರು **ಅತಃ ಸರ್ವಾಗಮವಿರುದ್ಧಮೇವ ಜೀವೇಶ್ವರೈಕ್ಯಮ್** ಎಂದು ಉಪಸಂಹಾರ ಮಾಡಿದ್ದಾರೆ.

ಇದರ ಮೇಲೆ ಅದ್ವೈತಿಗಳು ಯುಕ್ತಿಗಳ ಸಹಾಯದಿಂದ ಐಕ್ಯವಾದವನ್ನು ಸಮರ್ಥಿಸಲು ಹೊರಟಾಗ ಶ್ರೀಮದಾಚಾರ್ಯರು **ತಥೈವ ಸರ್ವಯುಕ್ತಿವಿರುದ್ಧಂ ಚ** ಎಂದು ಐಕ್ಯವಾದವು ಯಾವ ಯುಕ್ತಿಗಳಿಂದಲೂ ಸಿದ್ಧವಿಲ್ಲ ಇಷ್ಟೇ ಅಲ್ಲ ಎಲ್ಲ ಯುಕ್ತಿಗಳಿಗೂ ವಿರುದ್ಧವಾಗಿದೆ ಎಂದು ಘೋಷಿಸಿ ಹೇಗೆ ಯುಕ್ತಿವಿರುದ್ಧವಾಗಿದೆ ಎಂದು ವಿವರಿಸಿದ್ದಾರೆ. ಐಕ್ಯವಾದಿಗಳಲ್ಲಿಯ ಅನೇಕ ಪ್ರಭೇದಗಳನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಅವರಲ್ಲಿಯ ಏಕಜೀವವಾದಿಗಳ ಮತವನ್ನು ಮೊಟ್ಟಮೊದಲಿಗೆ ವಿಮರ್ಶಿಸಿ ಖಂಡಿಸುತ್ತಾರೆ. ಏಕಜೀವವಾದಿಗಳು ಈ ಜಗವೆಲ್ಲ ಒಬ್ಬ ಜೀವನ ಅಜ್ಞಾನದಿಂದ ಕಲ್ಪಿತವಾಗಿದೆ, ಆ ಅಜ್ಞಾನವು ಹೋಯಿತೆಂದರೆ ಜೀವಬ್ರಹ್ಮೈಕ್ಯವು ತಾನೇ ಸಿದ್ಧಿಸುವದು ಎಂದು ವಾದಿಸುತ್ತಾರೆ. ಅವರ ಈ ಪ್ರಕ್ರಿಯೆಯನ್ನು ಶ್ರೀಮದಾಚಾರ್ಯರು ಯುಕ್ತಿಯ ಚೌಕಟ್ಟಿನಲ್ಲಿಯೇ ವಿಮರ್ಶಿಸಿ ಖಂಡಿಸಿ ಏಕಜೀವವಾದವು ಯುಕ್ತಿಸಮ್ಮತವಲ್ಲ–ವೆಂಬುದನ್ನು ಸಿದ್ಧಪಡಿಸಿ ತೋರಿಸಿದ್ದಾರೆ. ಇದಕ್ಕೆ ಅದ್ವೈತಿಗಳು ಶ್ರುತಿಗಳಲ್ಲಿಯೇ ಏಕಜೀವವಾದವು ಪ್ರತಿಪಾದಿತವಾಗಿದೆಯಾದ್ದರಿಂದ ಕೇವಲ ಯುಕ್ತಿಯ ಆಧಾರದ ಮೇಲೆ ಈ ವಾದವನ್ನು ಖಂಡಿಸಬಾರದು ಎಂದು ಹೇಳಿ **ಪ್ರಪಂಚೊ ಯದಿ....**ಎಂಬ ಶ್ರುತಿಯು ಏಕಜೀವವಾದವನ್ನು ಸಮರ್ಥಿಸುವ ಶ್ರುತಿಯಾಗಿದೆ ಎಂದು ಅದನ್ನು ಉದಾಹರಿಸಿ ಸಮರ್ಥಿಸಿಕೊಂಡಿದ್ದಾರೆ. ಆ ಸಂದರ್ಭದಲ್ಲಿ ಶ್ರೀಮದಾಚಾರ್ಯರು ಈ ಶ್ರುತಿಯ ವಿವರಣೆಯನ್ನು ಬಹಳ ಮಾರ್ಮಿಕವಾಗಿ ಕೊಟ್ಟಿದ್ದಾರೆ. ಈ ವಾಕ್ಯವು ಯಾವ ಶ್ರುತಿಯಲ್ಲಿ ಬರುವದೋ ಆ ಶ್ರುತಿಯಲ್ಲಿ ಈ ವಾಕ್ಯಕ್ಕಿರುವ ಸಂದರ್ಭವನ್ನು ಗಮನಿಸಿದಾಗ ಪಂಚಭೇದಗಳು ಅನಾದಿನಿತ್ಯವಾಗಿವೆ ಎಂದು ಹೇಳುವದಕ್ಕೋಸ್ಕರವೇ ಈ ವಾಕ್ಯವು ಪ್ರವೃತ್ತವಾಗಿದೆ ಎಂಬುದು ಸ್ಪಷ್ಟವಾಗುವದೆಂದು ವಿವರಿಸಿದ್ದಾರೆ. ಈ ಶ್ಲೋಕಗಳಿಂದ ಭೇದ ಪಂಚಕವು ಸತ್ಯ ಹಾಗೂ ಅನಾದಿಯಾಗಿದೆ ಎಂದು ಹೇಳುವದಕ್ಕೋಸ್ಕರವೇ ಪ್ರವೃತ್ತವಾಗಿವೆ ಎಂದು ತತ್ವನಿರ್ಣಯ ಟೀಕೆ ಹಾಗೂ ಅನುವ್ಯಾಖ್ಯಾನ ಸುಧಾಗಳಲ್ಲಿ ವಿವರಿಸಲಾಗಿದೆ ಎಂದು ಶ್ರೀ ರಾಯರು ಮಾಂಡೂಕೋಪ–ನಿಷತ್ತಿನ ದ್ವಿತೀಯ ಖಂಡದ ಉಪಸಂಹಾರವಾಕ್ಯದಲ್ಲಿ ಸ್ಪಷ್ಟಪಡಿಸಿದ್ದಾರೆ.

ಈ ವಾಕ್ಯದ ಭಾವವನ್ನು ***ಶ್ರುತ್ಯರ್ಥಪಟ್ಟದಿಯಲ್ಲಿ*** ಈ ಕೆಳಗಿನಂತೆ ಸಂಗ್ರಹಿಸಲಾಗಿದೆ :–

*ನಿರುತವಿಹುದಿದು ಪಂಚಭೇದವು,*
*ಹರಿಯು ತಾನಿದ ನೋಡಿ ರಕ್ಷಿಪ,*
*ತರಿವ ಭೇದಜ್ಞಾನಿಗಿಹ ಭವಬಂಧ ಕರುಣೆಯಲಿ,*

Rarest Archiver

*ಹರಿಯೆ ತಾನಿಹನದ್ವಿತೀಯನು,*
*ಅರಿವರಿದ ಕೋವಿದರು ಸರುವದ,*
*ಅರಿಯದೆಯೆ ದುಷ್ಮಾನದಿಂ ಪಾಮರರು ಬಳಲುವರು.* // //

**೮೭. ಅದ್ವೈತಃ ಸರ್ವಭಾವಾನಾಮ್......** *(ಮಾಂಡೂಕೋಪನಿಷತ್, ಖಂಡ ೨, ಶ್ಲೋಕ ೨);* (ಅದ್ವೈತಃ ಸರ್ವಭಾವಾನಾಂ ದೇವಸ್ತುರ್ಯೋರ್ವಿಭುಃ)– ಆಗಮಃ ೧೧, *(ಉಪನಿಷ ದ್ವಾಕ್ಯಮಹಾಕೋಶೇ ಸೂಚಿತಾನುಸಾರೇಣ)*

ಈ ವಾಕ್ಯದ ಆಕರವನ್ನು *ವಿ.ತ.ವಿ. ಟೀಕಾ* ದ ಪ್ರಕಾಶಿತವಾದ ಟಿಪ್ಪಣಿಗಳಲ್ಲಿ ಕೇವಲ ಶ್ರೀ ರಾಯರ *ಭಾವದೀಪ* ದಲ್ಲಿ ಮಾತ್ರ ಸೂಚಿಸಲಾಗಿದೆ. ಇದು ಮಾಂಡೂ–ಕೋಪನಿಷತ್ತಿನ ೨ನೆಯ ಖಂಡದ ಎರಡನೆಯ ಶ್ಲೋಕದಲ್ಲಿ ಬಂದಿದ್ದು **ಇದರ ಸಂಪೂರ್ಣ ಪಾಠವು ಹೀಗಿದೆ;**

**ನಿವೃತ್ತೇಃ ಸರ್ವದುಃಖಾನಾಂ ಈಶಾನಃ ಪ್ರಭುರವ್ಯಯಃ । ಅದ್ವೈತಃ ಸರ್ವಭಾವಾನಾಂ ದೇವಸ್ತುರ್ಯೋ ವಿಭುಃ ಸ್ಮೃತಃ ॥೨॥ ಕಾರ್ಯಕಾರಣಬದ್ಧೌ ತಾವಿಷ್ಯೇತೇ ವಿಶ್ವತೈಜಸೌ । ಪ್ರಾಜ್ಞಃ ಕಾರಣಬದ್ಧಸ್ತು ದ್ವೌ ತು ತುರ್ಯೇ ನ ಸಿದ್ಧ್ಯತಃ ॥೩॥**

**ಅರ್ಥ (ಶ್ರೀ ರಾಯರ ಖಂಡಾರ್ಥವನ್ನನುಸರಿಸಿ):–** ವಿಶ್ವ, ತೈಜಸ, ಪ್ರಾಜ್ಞ, ತುರೀಯವೆಂಬ ಪರಮಾತ್ಮನ ನಾಲ್ಕು ರೂಪಗಳಲ್ಲಿ ತುರೀಯರೂಪದ ವೈಶಿಷ್ಟ್ಯವನ್ನು ೨ನೆಯ ಖಂಡದ ಈ ಎರಡು ಮಂತ್ರಗಳಲ್ಲಿ ವರ್ಣಿಸಲಾಗಿದೆ. ಮೊದಲನೆಯ ಮಂತ್ರದಲ್ಲಿ ತುರೀಯರೂಪವು ಸರ್ವಾನಿಷ್ಟನಿವರ್ತಕವಾಗಿದೆಯೆಂದು ಹಾಗೂ ಎರಡನೆಯ ಶ್ಲೋಕದಲ್ಲಿ ಈ ರೂಪವು ಉಳಿದ ಮೂರು ರೂಪಗಳಿಗಿಂತ ವೈಶಿಷ್ಟ್ಯ–ಪೂರ್ಣವಾಗಿದೆಯೆಂದೂ ವರ್ಣಿಸಲಾಗಿದೆ.

**ಅನ್ವಯ:– ಸರ್ವದುಃಖಾನಾಂ ನಿವೃತ್ತೇಃ (ಕಾರಣಂ ಇತಿ ಶೇಷಃ)** ಎಲ್ಲ ದುಃಖನಿವೃತ್ತಿಗೆ ಕಾರಣನಾದ **ಈಶಾನಃ (ಈಶಾನ್ ಮುಕ್ತಾನ್ ಅನತಿ ಪ್ರೇರಯತಿ ಇತಿ)** ಮುಕ್ತರ ಪ್ರೇರಕನಾದ **ಪ್ರಭುಃ** ಪ್ರಭುವು **ಅವ್ಯಯಃ** ಶಶ್ವತ್ ಏಕಪ್ರಕಾರಕ–ನಾಗಿದ್ದಂಥವನಾಗಿದ್ದು **ಅದ್ವೈತಃ** ಮಿಥ್ಯಾಜ್ಞಾನನಿವರ್ತಕನು, **ಸರ್ವಭಾವಾನಾಂ** ಎಲ್ಲಜೀವರಿಂದ **ದೇವಃ** ಪ್ರಾಪ್ಯನಾದಂಥವನು (ದಿವು ಗಮನೇ) **ತುರ್ಯಃ (ತುರೀಯಃ)** ನಾಲ್ಕನೆಯ ರೂಪದ **ವಿಭುಃ** ಸಮರ್ಥನಾದ ಪರಮಾತ್ಮನೆಂದು **ಸ್ಮೃತಃ** (ಈ ಮಂತ್ರದ್ರಷ್ಟಾರನಾದ ಬ್ರಹ್ಮನಿಂದ) ತಿಳಿಯಲ್ಪಡುತ್ತಾನೆ.

**ತೌ ವಿಶ್ವತೈಜಸೌ** ಆ ವಿಶ್ವತೈಜಸರೂಪಗಳು **ಕಾರ್ಯಕಾರಣಬದ್ಧೌ ಇಷ್ಯೇತೆ**

Rarest Archiver

ಜೀವನಲ್ಲಿರುವ ಅಜ್ಞಾನಕಾರ್ಯಭೂತವಾದ ನಾನು ನನ್ನದೆಂಬ ಪ್ರಕಾರದ ಭ್ರಮವಿರುವ ಜಾಗ್ರದವಸ್ಥೆ ಹಾಗೂ ಅದಕ್ಕೆ ಕಾರಣೀಭೂತವಾದ ಅವಿದ್ಯಾರೂಪಕಾರಣಬಂಧ ಇವುಗಳ ನಿಯಾಮಕನಾಗಿ ವಿಶ್ವನೂ, ಅವಿದ್ಯೆಯಕಾರ್ಯವಾದ ಸ್ವಾಪ್ನಪದಾರ್ಥದ ಭ್ರಮ ಹಾಗೂ ಆ ಭ್ರಮಕ್ಕೆ ಕಾರಣೀಭೂತವಾದ ಅಜ್ಞಾನಗಳಿಗೆ ನಿಯಾಮಕನಾಗಿ ಅಂದರೆ ಸ್ವಪ್ನಾವಸ್ಥೆಯ ನಿಯಾಮಕನಾಗಿ ತೈಜಸನೂ, ಹೀಗೆ ಜಾಗ್ರದವಸ್ಥೆ ಮತ್ತು ಸ್ವಪ್ನಾವಸ್ಥೆಗಳಿಗೆ ಆ ವಿಶ್ವತೈಜಸರೂಪಗಳು ನಿಯಾಮಕವಾಗಿ ಇರುವವು. (ಇಲ್ಲಿ ಬದ್ಧ ಎಂದರೆ ಬಂಧಕ್ಕೆ ನಿಯಾಮಕ ಎಂಬರ್ಥ. ಇದಕ್ಕೆ **ಓಂ ತದಧೀನತ್ವಾತ್ ಅರ್ಥವತ್ ಓಂ** ಬ್ರ. ಸೂ. ೨-೪-೩ ರಲ್ಲಿ ಹೇಳಿದ ನ್ಯಾಯವೇ ಆಧಾರ). **(ಅಜ್ಞಾನಕಾರ್ಯಭೂತಃ ಅಹಂಮಮತಾದಿಭ್ರಮಃ । ತದ್ರೂಪಜಾಗ್ರದ್ಬದ್ಧಃ, ತತ್ಕಾರಣಾವಿದ್ಯಾಬದ್ಧಃ । ಜೀವನಿಷ್ಠತಾದೃಶಭ್ರಮರೂಪಜಾಗ್ರತ್ಕಾರಣಬಂಧ-ಸ್ವಾಮೀ ವಿಶ್ವಃ ಇತ್ಯರ್ಥಃ । ತೈಜಸಃ ತು ಅವಿದ್ಯಾಕಾರ್ಯಭೂತೋಕ್ತರೂಪ-ಸ್ವಾಪ್ನಪದಾರ್ಥಭ್ರಮೇಣ ತತ್ಕಾರಣಾಜ್ಞಾನೇನ ಚ ಬದ್ಧಃ। ಜೀವನಿಷ್ಠತಾದೃಶ-ಬಂಧಸ್ವಾಮೀ ಇತ್ಯರ್ಥಃ ।) ಪ್ರಾಜ್ಞಃ ತು ಕಾರಣಬದ್ಧಃ ।** ಪ್ರಾಜ್ಞನು ಅವಿದ್ಯಾ-ರೂಪವಾದ ಸುಪ್ತಿಗೆ ಕಾರಣವಾದ ಅಜ್ಞಾನರೂಪಬಂಧಕ್ಕೆ ನಿಯಾಮಕನು. **ತುರ್ಯೇ (ರೂಪೇ) ತು ದ್ವೌ ನ ಸಿದ್ಧ್ಯತಃ ॥** ತುರೀಯರೂಪದಲ್ಲಿ ಕಾರ್ಯಕಾರಣಬಂಧ-ನಿಯಮನವ್ಯಾಪಾರಗಳಾಗಲಿ ಕೇವಲ ಕಾರಣಮಾತ್ರಬಂಧನಿಯಮನವ್ಯಾಪಾರವಾಗಲಿ ಇರುವದಿಲ್ಲ. ಮುಕ್ತರು ಅಜ್ಞಾನರೂಪಬಂಧದಿಂದ ಮುಕ್ತರಾಗಿರುವದರಿಂದ ಮೊದಲಿನ ಮೂರು ರೂಪಗಳ ವ್ಯಾಪಾರಗಳು ಇಲ್ಲಿ ಅವಶ್ಯಕವಾಗಿರದೆ ಕೇವಲ ಮುಕ್ತನಿಯಾ-ಮಕತ್ವವಷ್ಟೇ ಈ ನಾಲ್ಕನೆಯ ರೂಪದ ಲಕ್ಷಣವು ಎಂದರ್ಥ.

**ವಿಷ್ಣುತತ್ವವಿನಿರ್ಣಯದಲ್ಲಿ ಈ ಮಂತ್ರಗಳನ್ನು ಉದಾಹರಿಸಿದ್ದೇಕೆ ?:-** ಈ ಮಂತ್ರಗಳಿಂದ ಪರಮಾತ್ಮನು ಮುಕ್ತರಾದ ಜೀವರ ನಿಯಾಮಕನೂ ಆಗಿದ್ದಾನೆ ಎಂದು ಹೇಳಿ ಜೀವ ಪರಮಾತ್ಮಭೇದವು ಮುಕ್ತ್ಯವಸ್ಥೆಯಲ್ಲಿಯೂ ಇರುವಂಥದು, ಹಾಗೂ ಈ ಭೇದವು ಶ್ರುತಿಯಲ್ಲಿ ಹೇಳಲ್ಪಟ್ಟಿರುವದರಿಂದ ಪ್ರಾಮಾಣಿಕ ಹಾಗೂ ನಿತ್ಯವಾಗಿದೆ, ಅಜ್ಞಾನಕಲ್ಪಿತವೇ ಅಲ್ಲ, ಕಾರಣ ಭೇದವು ಏಕಜೀವಾಜ್ಞಾನಕಲ್ಪಿತವೆಂಬುದು ಕೂಡುವದೇ ಇಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಈ ಶ್ರುತಿಯ ಭಾವವು ***ಶ್ರುತ್ಯರ್ಥಷಟ್ಪದಿ***ಯಲ್ಲಿ ಹೀಗೆ;

*ಪರಮಪುರುಷನ ನಾಲ್ಕು ರೂಪಗ-*<br>
*ಳಿರಲು ಮೊದಲಿನ ವಿಶ್ವರೂಪವು*<br>
*ಭರದಿ ಜೀವನಿಗೆಚ್ಚರ ಭ್ರಮಗಳನೆ ನೀಡುವದು,*

Rarest Archiver

*ಎರಡನೆಯ ತಾ ರೂಪು ತೈಜಸ*
*ಭರದಿ ಸ್ವಪ್ನಕೆ ಹೇತುವಾಗುತ-*
*ಲಿರುವದದು ತಾ ಪ್ರಾಜ್ಞ ರೂಪವು ಸುಪ್ತಿಕಾರಣವು. ||*

*ಚರಮ ರೂಪವ ವೇದ ತಿಳಿಸಿತು*
*ಪರಮಪುರುಷನೆ ಮುಕುತ ಜೀವರ*
*ನಿರುತ ನಿಯಮನಗೈವ ರೂಪವು ತಿಳಿವುದೆನ್ನುತಲಿ,*
*ಸರುವಕಾಲದಿ ಹರಿ ನಿಯಾಮಕ-*
*ನಿರುವ, ತಿಳಿವುದು ಭೇದ ಸತ್ಯವು*
*ತೊರೆವುದೇಕಾಜ್ಞಾನಕಲ್ಪಿತವೆಂಬ ಹುಸಿ ಮತವ. ||*

**೮೭. ಅದ್ವೈತಂ ಪರಮಾರ್ಥತಃ ।** *ಮಾಂಡೂಕೋಪನಿಷತ್ ಖಂಡ ೨, ಮಂತ್ರ ೯. ಆಗಮಃ ೧೭. ( ಉ.ವಾ.ಮ.ಕೋ.ದ ಪ್ರಕಾರ)*

ಈ ವಾಕ್ಯದ ಅರ್ಥವನ್ನು ಈ ಮೊದಲು ಕೊಡಲಾಗಿದೆ.

**೮೮. ಅನಾದಿಮಾಯಯಾ ಸುಪ್ತಃ ಯದಾ ಜೀವಃ ಪ್ರಬುಧ್ಯತೇ।**
**ಬಿಅಜಂ ಅನಿದ್ರಂ ಅಸ್ವಪ್ನಂ ಅದ್ವೈತಂ ಬುಧ್ಯತೇ ತದಾ ॥**

*-(ವಿ.ತ.ವಿ.ಟೀಕಾಯಾಂ ನಿರ್ದಿಷ್ಟಃ) – ಮಾಂಡೂಕೋಪನಿಷತ್ ಖಂಡ ೨, ಮಂತ್ರ ೮, ಆಗಮಃ ೧೬. (ಉ.ವಾ.ಮ.ಕೋ.ದ ಪ್ರಕಾರ)*

ನಿದ್ರಾಭ್ರಮಾದಿಗಳ ಕ್ಷಯವಾದಾಗಲಷ್ಟೆ ಪರಮಾತ್ಮನ ಸಾಕ್ಷಾತ್ಕಾರವಾಗುವದು. ಈ ಬಂಧಕಗಳ ನಿವೃತ್ತಿ ಯಾರಿಂದ ಸಾಧ್ಯವೆಂದರೆ ಅದೂ ಕೂಡ ಪರಮಾತ್ಮನ ಅನುಗ್ರಹದಿಂದಲೇ ಎಂಬುದನ್ನು ಈ ಶ್ಲೋಕದಲ್ಲಿ ವಿವರಿಸುತ್ತಿದ್ದಾರೆ.

**ಅನ್ವಯ ಹಾಗೂ ಅರ್ಥ** (ಶ್ರೀ ರಾಯರ ಖಂಡಾರ್ಥವನ್ನನುಸರಿಸಿ):-

**ಅನಾದಿಮಾಯಯಾ (ಅನಾದೀತಿ ತಂತ್ರಮ್)** ಅನಾದಿಯಾದ ವಿಷ್ಣುವಿನ ಅಧೀನದಲ್ಲಿರುವ ಅನಾದಿಯಾದ ಅವಿದ್ಯೆಯಿಂದ **ಸುಪ್ತಃ (ಸ್ವಾಪಿತಃ)** ಜ್ಞಾನಾವರಣ-ಲಕ್ಷಣವಾದ ಸಂಸಾರದಲ್ಲಿ ಪ್ರವೇಶಿಸಲ್ಪಟ್ಟ ಜೀವನು ಯಾವಾಗ **ಅನಾದಿಮಾಯಯಾ ಪ್ರಬುಧ್ಯತೆ** ಅನಾದಿಯಾದ ಭಗವದಿಚ್ಛೆಯಿಂದಲೇ ಎಲ್ಲರೂ ಅಸ್ವತಂತ್ರರು, ಪರಮಾತ್ಮನೇ ಸರ್ವತಂತ್ರಸ್ವತಂತ್ರನು ಎಂಬ ಜ್ಞಾನವುಳ್ಳವನಾಗುವನೋ **ತದಾ** ಆಗ **ಅಜಂ** ಜನನಾದಿದೋಷರಹಿತನೂ **ಅನಿದ್ರಂ ಅಸ್ವಪ್ನಂ** ವಿಶ್ವ ತೈಜಸ ಪ್ರಾಜ್ಞರೆಂಬ ತನ್ನ ಮೂರು ರೂಪಗಳ ವ್ಯಾಪಾರವು ಆಗದಂತೆ ನೋಡಿಕೊಳ್ಳುವ **ಅದ್ವೈತಂ** ಮಿಥ್ಯಾಜ್ಞಾನನಿವರ್ತಕವಾದ ಅಂದರೆ ಸರ್ವಾನಿಷ್ಟನಿವರ್ತಕನಾದ ಪರಮಾತ್ಮನನ್ನು **ಬುದ್ಧ್ಯತೆ** ಸಾಕ್ಷಾತ್ಕರಿಸಿಕೊಳ್ಳುತ್ತಾನೆ. ಅಂದರೆ ಪರಮಾತ್ಮನ ಸರ್ವೋತ್ತಮತ್ವ-

Rarest Archiver

ಜ್ಞಾನವಾಗಿ ಅವನ ಅನುಗ್ರಹವಾದಾಗಲೇ ಅವನ ಸಾಕ್ಷಾತ್ಕಾರವಾಗಿ ಸಂಸಾರದ ಬಂಧದ ನಿವೃತ್ತಿಯಾಗುತ್ತದೆ.

**ವಿಷ್ಣುತತ್ತ್ವವಿನಿರ್ಣಯದಲ್ಲಿ ಈ ಶ್ರುತಿಯನ್ನು ಉದಾಹರಿಸಿದ್ದರ ವೈಶಿಷ್ಟ್ಯ:-**

ರಾಜನ ಇಚ್ಛೆಯಿಂದ ಯಾವನೊಬ್ಬನನ್ನು ಕಾರಾಗೃಹದಲ್ಲಿ ಸಂಕೋಲೆಗಳನ್ನು ಹಾಕಿ ಇಟ್ಟು ರಾಜನ ಇಚ್ಛೆಯಿಂದಲೇ ಆ ಸಂಕೋಲೆಗಳನ್ನು ಬಿಚ್ಚಿ ಅವನ ಮುಕ್ತಿ ಮಾಡಲಾಗುತ್ತದೆ ಎಂದರೆ ರಾಜ, ಬದ್ಧನಾದ ಮನುಷ್ಯ ಹಾಗೂ ಸಂಕೋಲೆಗಳು ಇವುಗಳಲ್ಲಿ ಭೇದ ಇರುವದೆಂದೇ ಹೇಳಿದಂತಾಗುತ್ತದೆ. ಅದೇ ರೀತಿ ಇಲ್ಲಿಯೂ ಕೂಡ ಪರಮಾತ್ಮನ ಸಂಕಲ್ಪದಂತೆ, ಜೀವನಿಗೆ ಜ್ಞಾನಾವರಣಲಕ್ಷಣವಾದ ನಿದ್ರೆ (ಪ್ರಕೃತಿಯ ಬಂಧ), ಅವನ ಸಂಕಲ್ಪದಂತೆ ತತ್ತ್ವಜ್ಞಾನಲಕ್ಷಣವಾದ ಎಚ್ಚರಿಕೆಯಾಗುವದು (ಅಂದರೆ ಆ ಬಂಧಮುಕ್ತಿ) ಎಂದು ಹೇಳಿದಾಗ ಪರಮಾತ್ಮ, ಜೀವ, ಜ್ಞಾನಾವರಣ ಹಾಗೂ ಜಡಪ್ರಕೃತಿಯ ಬಂಧ ಇವುಗಳಲ್ಲಿ ಪರಸ್ಪರಭೇದವನ್ನು ಹೇಳಿದಂತಾಯಿತು. ಹೀಗೆ, ಪರಮಾತ್ಮ-ಜೀವ ಭೇದ, ಪರಮಾತ್ಮ-ಜಡಭೇದ, ಜೀವ-ಜಡಭೇದ, ಜಡ-ಜಡಭೇದ ಮತ್ತು ಈ ಹಿಂದೆ ಇದೇ ಉಪನಿಷತ್ತಿನಲ್ಲಿ ಹೇಳಿದ **ಪ್ರಭವಃ ಸರ್ವಭಾವಾನಾಂ ಸತಾಂ ಇತಿ ವಿನಿಶ್ಚಯಃ (*ಮಾಂಡೂಕೋಪನಿಷತ್, ಖಂ.೧, ಶ್ಲೋ.೧೨*) ಹಾಗೂ ಅದ್ವೈತಃ ಸರ್ವಭಾವಾನಾಂ... (*ಮಾಂಡೂಕೋಪನಿಷತ್ ಖಂ. ೨, ಶ್ಲೋ. ೨*)** ಎಂಬಲ್ಲಿ ಸರ್ವಭಾವಾನಾಂ ಎಂದರೆ ಅಶೇಷವಸ್ತೂನಾಂ (ಶ್ರೀ ರಾಯರ *ಖಂಡಾರ್ಥ*) ಅಥವಾ ಸರ್ವಜೀವಾನಾಂ (*ವಿ.ತ.ವಿ.ಟೀಕಾ* ಹಾಗೂ ಭಾವ ಪದಕ್ಕೆ ಜೀವ ಎಂಬರ್ಥಮಾಡಲು ವ್ಯಾಕರಣದ ಆಧಾರಕ್ಕಾಗಿ ಶ್ರೀ ರಾಯರ *ಖಂಡಾರ್ಥ* ನೋಡಬಹುದು) ಎಂದು ಬಹುವಚನಪ್ರಯೋಗವಿರುವದರಿಂದ ಜೀವ-ಜೀವ ಭೇದ, ಹೀಗೆ ಪಂಚವಿಧಭೇದವು ಅನಾದಿಯಾದುದು ಪರಮಾತ್ಮನ ಅಧೀನವಾದುದು ಎಂದು ಈ ಶ್ರುತಿಯಲ್ಲಿ ಪ್ರತಿಪಾದಿಸಲ್ಪಟ್ಟಿದೆ.

***ಶ್ರುತಿಪಟ್ಟದಿಯಲ್ಲಿ*** ಈ ಶ್ರುತಿಯ ಭಾವ ಹೀಗೆ :-

*ಹರಿಯು ಇಚ್ಛಿಸೆ ಜೀವ ಬಂಧವು,*
*ಹರಿಯು ಇಚ್ಛಿಸೆ ಬಂಧ ಮೋಚನೆ,*
*ಹರಿಯ ಇಚ್ಛೆ ಅನಾದಿಯೆಂದಿತು ವೇದ ಮಾಂಡೂಕ.*
*ಅರಸ ಪಾಪಿಗೆ ಬೇಡಿ ತೊಡಿಸುವ,*
*ಪೊರೆವ ತಾನದ ಬಿಡಿಸುತಿದರಿಂ*
*ಅರಿವುದೀಪರಿ ಹರಿಯ ಸರ್ವೋತ್ತಮತೆ ಭೇದಗಳ.* ॥

Rarest Archiver

**೮೯. ಪ್ರಭವಃ ಸರ್ವಭಾವಾನಾಂ ಸತಾಂ ಇತಿ ವಿನಿಶ್ಚಯಃ।**
**ಸರ್ವಂ ಜನಯತಿ ಪ್ರಾಣಶ್ಚೇತೋಽಂಶೂನ್ ಪುರುಷಃ ಪೃಥಕ್ ॥**

*– ಮಾಂಡೂಕೋಪನಿಷತ್, ಖಂಡ ೧.೧೨. ಆಗಮಃ ೬.( ಉ.ವಾ.ಮ.ಕೋ.)*

**ಅನ್ವಯ ಮತ್ತು ಅರ್ಥ** (ಶ್ರೀ ರಾಯರ *ಖಂಡಾರ್ಥ*ವನ್ನನುಸರಿಸಿ):– **ಸರ್ವಭಾವಾನಾಂ** ಎಲ್ಲವಸ್ತುಗಳಿಗೆ **ಪ್ರಭವಃ** ಯಥಾಯೋಗ್ಯವಾದ (ಅಂದರೆ ಲಕ್ಷ್ಮೀ ದೇವಿಗೆ ಸಿಸೃಕ್ಷಾ, ಉಳಿದ ಚೇತನರಿಗೆ ದೇಹಯೋಗ, ಜಡಕ್ಕೆ ಅಭೂತ್ವಾಭಾವಿತ್ವ ಈ ಪ್ರಕಾರವಾಗಿ ಯಥಾಯೊಗ್ಯವಾದ) ಉತ್ಪತ್ತಿಕಾರಣನು (ಅಂದರೆ ಪರಿಣಾಮಿ ಕಾರಣನಲ್ಲ, ನಿಮಿತ್ತ ಕಾರಣನು) ಈ ನಾಲ್ಕು ರೂಪಗಳುಳ್ಳ ಆತ್ಮನೆಂದು ಸಜ್ಜನರ ಪ್ರಾಮಾಣಿಕವಾದ ಮತವು. (ಇದರಿಂದ ಇದಕ್ಕೆ ವ್ಯತಿರಿಕ್ತವಾದ ಮತವು ಅಸಜ್ಜನರ ಮತವೆಂದೂ ಅದು ಸಜ್ಜನರ ಮತವಲ್ಲವೆಂದೂ ತಿಳಿಯುವದು). ಆತ್ಮನೇ ಎಲ್ಲದಕ್ಕೂ ನಿಮಿತ್ತ ಕಾರಣನು ಹೇಗೆ ಎಂಬುದನ್ನು ಮುಂದಿನ ಪಾದದಲ್ಲಿ ವಿವರಿಸುತ್ತಾರೆ. **ಪ್ರಾಣಃ** ಎಲ್ಲವನ್ನು ಪ್ರಣಯನ (ನಿಯಮನ) ಮಾಡುವನೆಂಬ ಕಾರಣದಿಂದ ಪ್ರಾಣ ಎಂದು ಕರೆಯಿಸಿಕೊಳ್ಳಲ್ಪಡುವ ಇವನು **ಸರ್ವಂ** ಎಲ್ಲವನ್ನೂ **ಜನಯತಿ** ಹುಟ್ಟಿಸುತ್ತಾನೆ. (ಎಲ್ಲವನ್ನು ಹುಟ್ಟಿಸುತ್ತಾನೆ ಎನ್ನುವದರಿಂದ ಇವನು ತಂದೆಯು ಮಕ್ಕಳಿಗಿರುವಂತೆ ನಿಮಿತ್ತಕಾರಣನು, ಅದ್ವೈತಿಗಳು ಹೇಳುವಂತೆ ಕೊಡಕ್ಕೆ ಮಣ್ಣು ಇರುವರೀತಿಯಲ್ಲಿ ಪರಿಣಾಮಿಕಾರಣನಲ್ಲವೆಂದು ಹೇಳಿದಂತಾಗುತ್ತದೆ) **ಪುರುಷಃ** ಪೂರ್ಣಷಡ್ಗುಣನಾದ ಈ ಮೊದಲು ವರ್ಣಿಸಲ್ಪಟ್ಟ ನಾಲ್ಕುರೂಪಗಳ ಪರಮಪುರುಷನು **ಚೇತೋಽಂಶೂನ್** ಜ್ಞಾನಾಖ್ಯರಶ್ಮಿಯುಳ್ಳಂಥ– ವರನ್ನು (ಅಂದರೆ ಜೀವರನ್ನು) **ಪೃಥಕ್** ದೇವ, ದಾನವ, ಮಾನವ ಇತ್ಯಾದಿಭೇದದಿಂದ **ಜನಯತಿ** ಹುಟ್ಟಿಸುತ್ತಾನೆ.

**ವಿಶೇಷ ವಿಷಯಗಳು:–** ***ವಿಷ್ಣುತತ್ವವಿನಿರ್ಣಯದಲ್ಲಿ*** ಉದಾಹರಿಸಲ್ಪಟ್ಟ **ಪ್ರಪಂಚೋ ಯದಿ ವಿದ್ಯೇತ...** ಇತ್ಯಾದಿ ಶ್ಲೋಕದಲ್ಲಿಯ **ಪ್ರಪಂಚ** ಪದಕ್ಕೆ ಶ್ರೀಮದಾಚಾರ್ಯರು **ಪ್ರಕೃಷ್ಟಃ ಪಂಚವಿಧಃ ಭೇದಃ** ಎಂದು ಅರ್ಥ ಮಾಡಿದ್ದಾರೆ. ಶ್ರೀಮದಾಚಾರ್ಯರೇ ಈ ಸಂದರ್ಭದಲ್ಲಿ ಉದಾಹರಿಸಿದ **ಅನಾದಿಮಾಯಯಾ ಸುಪ್ತಃ ...** ಇತ್ಯಾದಿ ಇನ್ನೊಂದು ಶ್ರುತಿಯಿಂದ (ಈ ಶ್ರುತಿಯ ವಿವರಣೆಯನ್ನು ಈ ಹಿಂದೆ ಕೊಡಲಾಗಿದೆ) ಜೀವ ಈಶ ಭೇದ, ಜೀವ ಜಡ ಭೇದ ಹಾಗೂ ಈಶ ಜಡ ಭೇದ, ಹೀಗೆ ಮೂರು ಪ್ರಕಾರದ ಭೇದಗಳನ್ನು ತಿಳಿಯಬಹುದು. ಇನ್ನು ಜೀವ ಜೀವ ಭೇದ ಹಾಗೂ ಜಡ ಜಡ ಭೇದಗಳನ್ನು ಮಾಂಡೂಕೋಪನಿಷತ್ತಿನಲ್ಲಿ ಎಲ್ಲಿ ಹೇಳಿದೆ ಎಂಬ ಶಂಕೆಯ ಪರಿಹಾರಕ್ಕೆ ಶ್ರೀ ಟೀಕಾಕೃತ್ಪಾದರು **ಪ್ರಭವಃ ಸರ್ವಭಾವಾನಾಂ....** ಇತ್ಯಾದಿ ಶ್ಲೋಕವನ್ನು ಉದಾಹರಿಸಿ ಇಲ್ಲಿ ಸ್ಪಷ್ಟವಾಗಿ ಜೀವ ಜೀವ ಭೇದವನ್ನು ಹೇಳಿದ್ದಾರೆ, ಮತ್ತು ಜೀವರಿಗೆ ಆವರಣಭೂತವಾದ ದೇಹವು ಜಡವಾದ್ದರಿಂದ ಜಡ ಜಡ

Rarest Archiver

ಭೇದವು ಅರ್ಥತಃ ಲಭಿಸುವದು ಎಂದು ಹೇಳಿ **ಪ್ರಪಂಚ** ಎಂದರೆ ಪಂಚವಿಧ ಭೇದ ಎಂದು ಶ್ರೀಮದಾಚಾರ್ಯರು ವಿವರಿಸಿದ ಅರ್ಥವನ್ನು ಸಮರ್ಥಿಸಿದ್ದಾರೆ. **ಪ್ರಪಂಚೋ ಯದಿ ವಿದ್ಯೇತ...** ಇತ್ಯಾದಿ ಎರಡು ಶ್ಲೋಕಗಳಲ್ಲಿ ಪಂಚವಿಧ ಭೇದವು ಅನಾದಿ ಮತ್ತು ಸತ್ಯ ಎಂದು ವಿವರಿಸಿದ್ದಾರೆ ಎಂದು ಶ್ರೀಮದಾಚಾರ್ಯರ ಹಾರ್ದವನ್ನು ಸ್ಪಷ್ಟಪಡಿಸಿದ್ದಾರೆ.

ಈ ಶ್ಲೋಕದ ಭಾವವು *ಶ್ರುತಿಷಟ್ಪದಿಯಲ್ಲಿ* ಹೀಗೆ :-

*ಪರಮಪುರುಷನೆ ಸಕಲ ಜೀವರ*
*ನಿರುತ ಪುಟ್ಟಿಗೆ ಹೇತುವಾಗಿಹ,*
*ಪರಮತತ್ವವನಿದನ ಸಜ್ಜನರೆಲ್ಲರೊಪ್ಪಿಹರು.*
*ಪರಮಪುರುಷನೆ ಜೀವಗರಿವಿನ*
*ಕಿರಣ ಜೋಡಿಸಿ ದಿವಿಜ ದೈತ್ಯರು*
*ನರರು ಎಂಬೀ ಭೇದನ್ನೈಮಿತ್ತಕನು ತಾನಿಹನು. ॥*

*ಜೀವ ಜೀವರ ಭೇದ ನಿರುತವು*
*ಕಾವನಯ್ಯನು ಕಾಣುತಿಹನವ*
*ಜೀವಗಾವೃತಿ ಜಡದ ದೇಹದ ಬಾಹುವಿಧ್ಯವನು,*
*ಕೋವಿದರು ತಾವರಿವರಿದರಿಂ*
*ಜೀವಜಡಪರಮೇಶರೊಳಗಣ*
*ಪಾವನದ ಭಿತ್‌ಪಂಚಕಾಖ್ಯವನೆಂದಿತಾಗಮವು. ॥*

೬೦. ಅದ್ವೈತಃ ಸರ್ವಭಾವಾನಾಂ ದೇವಸ್ತುರ್ಯೋ ವಿಭುಃ ಸ್ಮೃತಃ ।
– *(ವಿ.ತ.ವಿ.ಟೀಕಾಯಾಂ ನಿರ್ದಿಷ್ಟಃ) – ಮಾಂಡೂಕೋಪನಿಷತ್ ಖಂ.೨.೨, ಆಗಮಃ ? (ಉ.ವಾ.ಮು.ಕೋ.)*

ಈ ಶ್ರುತಿಯ ಅರ್ಥವನ್ನು ಈ ಮೊದಲು ವಿವರಿಸಲಾಗಿದೆ.

೬೧. ಜೀವೇಶ್ವರಭಿದಾ ಚೈವ ಜಡೇಶ್ವರಭಿದಾ ತಥಾ । ಜೀವಭೇದೋ ಮಿಥಶ್ಚೈವ ಜಡಜೀವಭಿದಾ ತಥಾ ॥ ಮಿಥಶ್ಚ ಜಡಭೇದೋಽಯಂ ಪ್ರಪಂಚೋ ಭೇದಪಂಚಕಃ । ಸೋಽಯಂ ಸತ್ಯೋ ಹ್ಯನಾದಿಶ್ಚ ಸಾದಿಶ್ಚೇತ್ ನಾಶ–ಮಾಪ್ನುಯಾತ್ ॥ ನ ಚ ನಾಶಂ ಪ್ರಯಾತ್ಯೇಷಃ ನ ಚಾಸೌ ಭ್ರಾಂತಿಕಲ್ಪಿತಃ । ಕಲ್ಪಿತಶ್ಚೇತ್ ನಿವರ್ತೇತ ನ ಚಾಸೌ ವಿನಿವರ್ತತೇ ॥ ದ್ವೈತಂ ನ ವಿದ್ಯತ ಇತಿ ತಸ್ಮಾತ್ ಅಜ್ಞಾನಿನಾಂ ಮತಮ್ । ಮತಂ ಹಿ ಜ್ಞಾನಿನಾಂ ಏತತ್ ಮಿತಂ ತ್ರಾತಂ ಚ ವಿಷ್ಣುನಾ ॥ ತಸ್ಮಾತ್ ಸತ್ಯಮಿತಿ ಪ್ರೋಕ್ತಂ ಪರಮೋ ಹರಿರೇವ ತು ॥–
*ಪರಮಶ್ರುತಿಃ(?)*

Rarest Archiver

**ಅನ್ವಯ ಹಾಗೂ ಅರ್ಥವು ಸ್ಪಷ್ಟವಿದೆ.**

*ಶ್ರುತಿಷಟ್ಪದಿಯಲ್ಲಿ* ಈ ಶ್ರುತಿಯ ಭಾವವು ಹೀಗೆ :-

*ಭೇದಪಂಚಕವಿದುಪ್ರಪಂಚವ-*
*ನಾದಿಯಾಗಿಹುದಿದುವೆ ಸತ್ಯವು,*
*ಸಾದಿ ನಾಶವು, ನಿತ್ಯವಿಪ್ಪುದನಾದಿಯಾದುದಕೆ.*
*ಭೇದವಿದ್ದುದನೊಪ್ಪರಜ್ಞರ-*
*ನಾದಿ ಹರಿ ತಾ ಭೇದ ಕಾಂಬನು,*
*ಭೇದ ಸತ್ಯವು, ಹರಿಯೆ ಉತ್ತಮನೆಂದು ಪರಮೋಕ್ತಿ.* ॥

೯೨. ಅಥ ಜ್ಞಾನೋಪಸರ್ಗಾಃ । – *ಮೈತ್ರೇಯೀಶಾಖಾಯಾಮ್*

**ಅರ್ಥ :–** ಇನ್ನು ಸಮ್ಯಕ್ ಜ್ಞಾನಕ್ಕೆ ವಿಘ್ನಗಳ ಬಗ್ಗೆ ಹೇಳಲಾಗುತ್ತದೆ. ಹೀಗೆ ಹೇಳಿ ಮುಂದಿನ (ಇಲ್ಲಿ ಕೆಳಗೆ ಹೇಳಲ್ಪಟ್ಟ) ಮಂತ್ರವನ್ನು ಉದಾಹರಿಸಿದ್ದಾರೆ.

**೯೩. ಅಥ ಯೇ ಚ ಅನ್ಯೇ ಮಿಥ್ಯಾತರ್ಕೈಃ ದೃಷ್ಟಾಂತೈಃ ಕುಹಕೇಂದ್ರಜಾಲೈಃ ವೈದಿಕೇಷು ಪರಿಸ್ಥಾತುಂ ಇಚ್ಛಂತಿ ತೈಃ ಸಹ ನ ಸಂವಸೇತ್ ಪ್ರಾಕಾಶ್ಯಾಃ ಹಿ ಏತೇ ತಸ್ಕರಾಃ ಅಸ್ವರ್ಗ್ಯಾಃ ॥** – *ಮೈತ್ರೇಯೀಶಾಖಾಯಾಮ್*

ಈ ಎರಡು ವಾಕ್ಯಗಳು *ಮೈತ್ರೇಯೀ ಬ್ರಾಹ್ಮಣದಲ್ಲಿ (ಬೃಹದಾರಣ್ಯಕೋಪನಿಷತ್ತಿ*ನ ಮೈತ್ರೇಯೀ ಬ್ರಾಹ್ಮಣ ?)ದಲ್ಲಿ ಹೇಳಲ್ಪಟ್ಟಿವೆ ಎಂದು *ವಿಷ್ಣುತತ್ತ್ವವಿನಿರ್ಣಯ*ದ ಕೆಲ ಪ್ರಕಾಶನಗಳಲ್ಲಿ ವಿವರಿಸಲ್ಪಟ್ಟಿದೆ. (ಆದರೆ ನಮಗೆ ಉಪಲಬ್ಧವಿದ್ದ ಮಾಧ್ವಮಹಾ-ಮಂಡಲದಿಂದ ಪ್ರಕಾಶಿತವಾದ *ಬೃಹದಾರಣ್ಯಕೋಪನಿಷತ್ತಿ*ನ ಮೈತ್ರೇಯೀ ಬ್ರಾಹ್ಮಣದಲ್ಲಿ ಈ ವಾಕ್ಯವು ಕಾಣಲಿಲ್ಲ. *೧೦೮ ಉಪನಿಷದ್* ಎಂಬ ಪ್ರಕಾಶನದಲ್ಲಿ ಮುದ್ರಿತವಾದ *ಮೈತ್ರಾಯಣ್ಯುಪನಿಷತ್‌*ನಲ್ಲಿಯೂ ಈ ವಾಕ್ಯಗಳು ಸಿಕ್ಕಲಿಲ್ಲ. ಆದರೆ ಈ ಮುಂದೆ ಉದಾಹರಿಸಲ್ಪಡುವ **ನೈರಾತ್ಮ್ಯವಾದಕುಹಕೈಃ...** ಇತ್ಯಾದಿ ವಾಕ್ಯವು *ಮೈತ್ರಾಯಣ್ಯುಪನಿಷತ್*(೭/೮)ನಲ್ಲಿಯದು ಎಂದು *ಉಪನಿಷದ್ ವಾಕ್ಯಮಹಾಕೋಷ*ದಲ್ಲಿ ಸೂಚಿಸಲ್ಪಟ್ಟಿದೆ *೧೦೮ ಉಪನಿಷದ್* ಎಂಬ ಪ್ರಕಾಶನದಲ್ಲಿ ಮಾತ್ರ ಈ ಉಪನಿಷತ್ತಿನಲ್ಲಿ ೫ ಖಂಡಗಳಷ್ಟೇ ಇವೆ ಎಂದು ತೋರಿಸಲ್ಪಟ್ಟಿದ್ದು ಈ ಐದೂ ಖಂಡಗಳಲ್ಲಿ ಈ ವಾಕ್ಯ ಸಿಕ್ಕಲಿಲ್ಲ. ಇವೆಲ್ಲವನ್ನು ಗಮನಿಸಿದಾಗ *ಮೈತ್ರೇಯೀಶಾಖಾ* ಎಂದರೆ ಯಾವದು ಎಂಬ ಬಗ್ಗೆ ವಿವರಣೆ ಅಗತ್ಯವಿದೆಯೆಂದೆನಿಸುವದು).

**ಅರ್ಥ:–** ಕಾಪಾಲಿಕಾದಿಗಳಲ್ಲದೆ ಇನ್ನೂ ಬೇರೆ ಯಾರು ದೃಶ್ಯತ್ವಾದಿ ಹೇತುಗಳಿಂದ (ವಿಮತಂ ಮಿಥ್ಯಾ ದೃಶ್ಯತ್ವಾತ್ ಇತ್ಯಾದಿ ತರ್ಕಗಳಿಂದ) ಪ್ರಪಂಚವು ಮಿಥ್ಯೆ ಎಂದು ಸಾಧಿಸಲು ಪ್ರಯತ್ನಿಸುವರೋ ಅಥವಾ ಮೋಸದ ದೃಷ್ಟಾಂತಗಳನ್ನು ಕೊಡುತ್ತ

Rarest Archiver

ಪಂಚವಿಧಾತ್ಮಕವಾದ ಭೇದವು ಸುಳ್ಳು ಎಂದು ವಾದಿಸುತ್ತಲೇ ವೈದಿಕರೆಂದೇ ಹೇಳಿ-ಕೊಳ್ಳಲು ಇಚ್ಛಿಸುವರೋ (ಅವರೇ ಅದ್ವೈತಿಗಳು) ಅವರೊಡನೆ ಸಹವಾಸ ಮಾಡಬಾರದು. ಏಕೆಂದರೆ ಅವರು ಹಾಡೇ ಹಗಲಿನ ದರೋಡೆಖೋರರಿದ್ದಂತೆ; ಅಂದರೆ ಅವರು ವೇದಗಳ ಯಥಾವಸ್ಥಿತವಾದ ಅರ್ಥವನ್ನು ಮರೆಮಾಚಿ ಬೇರೆ ಅರ್ಥವನ್ನೇ ಹೇಳಿ ಜನರನ್ನು ಒತ್ತಾಯದಿಂದ ತಪ್ಪುದಾರಿಗೆ ಎಳೆಯುವಂಥವರು. ಅವರು ಹೇಳುವ ವಾದವು ಮೋಕ್ಷಸಾಧಕವಲ್ಲ.

**ವಿಶೇಷ ವಿಷಯಗಳು :–** ಇಲ್ಲಿ ನೈರಾತ್ಮ್ಯವಾದವೆಂದರೆ ಆತ್ಮವೇ ಇಲ್ಲವೆಂಬ ಬೌದ್ಧರ ವಾದವಲ್ಲ. ಶ್ರೀಮದಾಚಾರ್ಯರೇ ಈ ಪದದ ವಿವರಣೆಯನ್ನು **ಆತ್ಮಸಂಬಂಧಿ ಕಿಮಪಿ ನಾಸ್ತೀತಿವಾದಃ ನೈರಾತ್ಮವಾದಃ** ಎಂದು ಕೊಟ್ಟಿದ್ದಾರೆ. ಆತ್ಮನಿಗೆ ಸಂಬಂಧಿಸಿದ ಯಾವ ಗುಣಕ್ರಿಯೆಗಳು ಇಲ್ಲವೆಂದು ಹೇಳುವ ಮಾಯಾವಾದಿಗಳ ವಾದವೆಂದರ್ಥ.

*ವಿಷ್ಣುತತ್ತ್ವವಿನಿರ್ಣಯದ* ಎಲ್ಲ ಟೀಕಾಟಿಪ್ಪಣಿಗಳಲ್ಲಿ ನೈರಾತ್ಮ್ಯವಾದವೆಂದರೆ ಮಾಯಾವಾದವೆಂದು ತಿಳಿಸಿದ್ದರೂ ಶ್ರೀ ವ್ಯಾಸತತ್ತ್ವಜ್ಞರ *ಲಘುಪ್ರಭಾ* ಟಿಪ್ಪಣಿಯಲ್ಲಿ **ಆತ್ಮನಿರ್ಧರ್ಮತ್ವನಿಷ್ಕ್ರಿಯತ್ವವಾದಃ। ಮಾಯಾವಾದಿನಾಂ ಏವ ಏಷಾ ನಿಂದಾ ನ ಬೌದ್ಧಾದೀನಾಂ। ತೇಷಾಂ ಶೂನ್ಯವಾದಿತ್ವೇನ ಅನಿರಾತ್ಮವಾದಿತ್ವಾತ್।** ಎಂದು ಸ್ಪಷ್ಟವಾಗಿ ತಿಳಿಸಿದ್ದಾರೆ. ನೈರಾತ್ಮ್ಯವಾದ ಪದದ ನಿರ್ವಚನದ ಸಂದರ್ಭದಲ್ಲಿ ವ್ಯಾಕರಣದ ನಿಯಮಗಳನ್ನು ಶ್ರೀಮಟ್ಟೀಕಾಕೃತ್ಪಾದರು ವಿ.ತ.ವಿ.ದ ಟೀಕೆಯಲ್ಲಿ ಸೂಚಿಸಿದ್ದರ ವಿವರಣೆಯನ್ನು ಎಲ್ಲ ಟಿಪ್ಪಣಿಗಳಲ್ಲಿಯೂ ಕಾಣಬಹುದು.

***ವಿಷ್ಣುತತ್ತ್ವವಿನಿರ್ಣಯ* ದಲ್ಲಿ ಈ ಮಂತ್ರವನ್ನು ಉದಾಹರಿಸಿದ್ದರ ವೈಶಿಷ್ಟ್ಯ:–**

**ಪ್ರಪಂಚೋ ಯದಿ ವಿದ್ಯೇತ....** ಇತ್ಯಾದಿ ವಾಕ್ಯವು (ಈ ವಾಕ್ಯದ ವಿವರಣೆಯನ್ನು ಮೇಲೆ ಕೊಡಲಾಗಿದೆ) ಪ್ರಪಂಚವು ಏಕಜೀವಾಜ್ಞಾನ–ಪರಿಕಲ್ಪಿತವಾಗಿದೆ ಎಂಬ ಅದ್ವೈತಿಗಳ ಮತವನ್ನು ಸಮರ್ಥಿಸಲು ಹೊರಟ ಶ್ರುತಿಪ್ರಮಾಣವಾಗಿಲ್ಲ, ಪ್ರತ್ಯುತ ಭೇದಪಂಚಕವು ಸತ್ಯವೂ ನಿತ್ಯವೂ ಪರಮಾತ್ಮನಿಂದ ರಕ್ಷಿಸಲ್ಪಟ್ಟುದುದೂ ಆಗಿದೆ ಎಂಬ ತತ್ತ್ವವನ್ನು ಸಮರ್ಥಿಸುವ ಶ್ರುತಿಪ್ರಮಾಣವಾಗಿದೆ ಎಂದು ಶ್ರೀಮದಾಚಾರ್ಯರು ವಿವರಿಸಿದ್ದಾರೆ. ಇದನ್ನು ವಿವರಿಸುವ ಸಂದರ್ಭದಲ್ಲಿ ಅವರು ಈ ಮಂತ್ರವನ್ನೂ ಉದಾಹರಿಸಿದ್ದು ಇದರಲ್ಲಿ ಪ್ರಪಂಚವು ಏಕಜೀವಾಜ್ಞಾನಕಲ್ಪಿತವೆಂದು ಹೇಳುವವರನ್ನು ನಿಂದಿಸಲಾಗಿದೆ ಹಾಗೂ ಅವರೊಡನೆಯ ಸಹವಾಸವೂ ಕೂಡ ತತ್ತ್ವಜ್ಞಾನವನ್ನು ಪಡೆಯಲಿಚ್ಛಿಸುವವರಿಗೆ ಪ್ರತಿಬಂಧಕವಾಗುವದು ಎಂದು ಹೇಳಲಾಗಿದೆ.

Rarest Archiver

ಈ ಶ್ರುತಿಯ ಭಾವವು *ಶ್ರುತಿಷಟ್ಪದಿಯಲ್ಲಿ* ಹೀಗೆ :–

*ಕಪಟದೃಷ್ಟಾಂತಗಳ ತೋರಿಸಿ*
*ಅಪರಿಮಿತಗುಣರೂಪಿ ಆತ್ಮನ*
*ಅಪಲಪಿಸಿ ನಿರ್ಗುಣನು ನಿಷ್ಕ್ರಿಯನೆಂದು ವಾದಿಸುವ,*
*ಕಪಟಮಿಥ್ಯಾತರ್ಕ ಮಾಡುವ*
*ಗುಪಿತಬೌದ್ಧರು ಅಡ್ಡಿ ತಿಳುಹಿಗೆ,*
*ನೆಪದ ವೈದಿಕರೆಂದು ಪೇಳ್ವರ ಸಂಗ ತೊರೆಯುವುದು.* ॥

**೯೪. ನೈರಾತ್ಮ್ಯವಾದಕುಹಕೈಃ ಮಿಥ್ಯಾದೃಷ್ಟಾಂತಹೇತುಭಿಃ । ಭ್ರಾಮ್ಯನ್ ಲೋಕಃ ನ ಜಾನಾತಿ ವೇದವಿದ್ಯಾಂತರಂ ತು ಯತ್ ॥–**

ಮೈತ್ರಾಯಣ್ಯುಪನಿಷತ್ ೭/೮. (ಉಪಲಬ್ಧವಿದ್ದ ಪ್ರಕಟನೆಗಳಲ್ಲಿ ಐದು ಪ್ರಪಾಠಕಗಳು ಮಾತ್ರ ಪ್ರಕಾಶಿತವಿದ್ದು ಅವುಗಳಲ್ಲಿ ಈ ಶ್ಲೋಕ ಕಂಡುಬರಲಿಲ್ಲ. ಉಪನಿಷತ್ತುಗಳ ಸಂಪೂರ್ಣವಾದ ಹಾಗೂ ಸರಿಯಾದ ಪಾಠಗಳ ಸಂಶೋಧನೆಯಾಗಿ ಪ್ರಕಾಶನವಾಗುವ ದವಶ್ಯವಿದೆ).

**ಅರ್ಥ:–** ಆತ್ಮನು ನಿರ್ಧರ್ಮಿಕನು ನಿಷ್ಕ್ರಿಯನು ಎಂದು ಪ್ರತಿಪಾದಿಸುವ, ವಂಚನಾತ್ಮಕ–ವಾದ ಹೇತುಗಳಿಂದ ಹಾಗೂ ದೃಷ್ಟಾಂತಗಳಿಂದ ಪ್ರಪಂಚದ ಮಿಥ್ಯಾತ್ವವನ್ನು ಸಾಧಿಸಲು ಪ್ರಯತ್ನಿಸುತ್ತ ಭ್ರಮಕ್ಕೊಳಗಾದ ಜನರು ವೇದವಿದ್ಯೆಯ ರಹಸ್ಯವಾವು–ದಿದೆಯೋ ಅದನ್ನು ತಿಳಿಯಲಾರರು.

*ಶ್ರುತ್ಯರ್ಥಷಟ್ಪದಿಯಲ್ಲಿ* ಈ ಶ್ಲೋಕದ ಭಾವವು ಹೀಗೆ :–

*ಪರಮ ಪುರುಷನು ಧರ್ಮರಹಿತನು,*
*ಸರುವ ಜಗ ತಾ ಮಿಥ್ಯೆ ಎನ್ನುತ*
*ಭರದಿ ಮಿಥ್ಯಾಹೇತುದೃಷ್ಟಾಂತಗಳ ತರ್ಕಗಳಿಂ*
*ಬರಿಯೆ ವಾದಭ್ರಮದ ಜನ ತಾ*
*ಅರಿಯರೆಂದಿಗು ನಿಗಮ ತತಿಗಳ*
*ಪರಮತತ್ವವನೆಂದು ಮೈತ್ರೇಯ್ಯುಕ್ತ ನಿಖಿಲೋಕ್ತಿ.* ॥ ॥

**೯೫. ಅನಾಗತಾಃ ಅತೀತಾಶ್ಚ ಯಾವಂತಃ ಸಹಿತಾಃ ಕ್ಷಣಾಃ ।**
**ಅತೀತಾನಾಗತಾಶ್ಚೈವ ಯಾವಂತಃ ಪರಮಾಣವಃ ॥**
**ತತೋಽಪ್ಯನಂತಗುಣಿತಾಃ ಜೀವಾನಾಂ ರಾಶಯಃ ಪೃಥಕ್ ॥**

*–ವತ್ಸಶ್ರುತಿಃ(?)*

**ಅನ್ವಯ ಮತ್ತು ಅರ್ಥ :– ಅತೀತಾಃ ಅನಾಗತಾಃ ಕ್ಷಣಾಃ ಯಾವಂತಃ (ಸಂತಿ) ಅತೀತಾಃ ಅನಾಗತಾಃ ಚ ಪರಮಾಣವಃ ಯಾವಂತಃ ಏವ (ಸಂತಿ) ತತೋಽಪಿ**

Rarest Archiver

**ಅನಂತಗುಣಿತಾಃ ಪೃಥಕ್ ಜೀವಾನಾಂ ರಾಶಯಃ (ಸಂತಿ) ।**

ಆಗಿಹೋದ ಮತ್ತು ಇನ್ನೂ ಬರಬೇಕಾದ ಕ್ಷಣಗಳು ಎಷ್ಟು ಇವೆಯೋ ಮತ್ತು ಇಲ್ಲಿಯ ವರೆಗೆ ಆಗಿಹೋದ ಮತ್ತು ಇನ್ನು ಮೇಲೆ ಬರಬೇಕಾದ ಪರಮಾಣುಗಳು ಎಷ್ಟಾಗುವವೋ ಅವೆಲ್ಲವುಗಳ ಅನಂತ ಪಟ್ಟು ಪ್ರಮಾಣದಲ್ಲಿ ಬೇರೆ ಬೇರೆ ಜೀವರಾಶಿಗಳು ಇರುವವು. ಅಂದರೆ ಅನಂತ ಜೀವರಾಶಿಗಳಿರುವವು ಎಂದು ತಾತ್ಪರ್ಯ.

ಹೀಗೆ ವತ್ಸಶ್ರುತಿಯು ಇದೆ.

**ವಿಷ್ಣುತತ್ವವಿನಿರ್ಣಯದಲ್ಲಿ ಈ ಶ್ರುತಿವಾಕ್ಯಕ್ಕೆ ಪ್ರಸಕ್ತಿ:–** ಶ್ರೀಮದಾಚಾರ್ಯರು ಇಲ್ಲಿ ಏಕಜೀವವಾದಿಯ ಆಕ್ಷೇಪಕ್ಕೆ ಸಮಾಧಾನ ಹೇಳುತ್ತಾರೆ.

ಜೀವಬ್ರಹ್ಮೈಕ್ಯವಾದವು ಪ್ರತ್ಯಕ್ಷಕ್ಕೆ ವಿರುದ್ಧವಾಗಿದೆ, ಆಗಮಗಳಿಗೆ ವಿರುದ್ಧವಾಗಿದೆ ಮತ್ತು ಎಲ್ಲ ಯುಕ್ತಿಗೆ ಕೂಡ ವಿರುದ್ಧವಾಗಿದೆ ಎಂದು ವಿವರಿಸುತ್ತ ಅನೇಕ ಶ್ರುತಿ ಸ್ಮೃತಿ ಆಗಮಗಳನ್ನು ಉದಾಹರಿಸಿ ಅವುಗಳ ಅರ್ಥವನ್ನು ಶ್ರೀ ವೇದವ್ಯಾಸರು ಹಾಕಿಕೊಟ್ಟ ನಿಯಮಗಳಿಗನುಗುಣವಾಗಿ ವಿವರಿಸಿ ಶ್ರೀಮದಾಚಾರ್ಯರು ಅದ್ವೈತವಾದದ ಪ್ರಭೇದಗಳನ್ನೂ ವಿಮರ್ಶಿಸಿ ಅವುಗಳಲ್ಲಿಯ ದೋಷಗಳನ್ನು ತೋರಿಸಿ ಕೊಟ್ಟಿದ್ದಾರೆ. ಏಕಜೀವವಾದ ಮತ್ತು ಬಹುಜೀವವಾದಗಳು ಅದ್ವೈತವಾದದ ಪ್ರಭೇದಗಳು. ಒಬ್ಬ ಜೀವನ ಅಜ್ಞಾನದಿಂದ ಜಗತ್ತು ಕಲ್ಪಿತವಾಗಿದೆ, ಆ ಅಜ್ಞಾನದ ನಿವಾರಣೆಯಾದಾಗ ಜೀವಬ್ರಹ್ಮೈಕ್ಯವೆಂಬ ಏಕಜೀವವಾದವು ಹೇಗೆ ಯುಕ್ತಿ ವಿರುದ್ಧವೆಂಬುದನ್ನು ಆ ಒಬ್ಬ ಜೀವನು ಶಿಷ್ಯನಾಗಿದ್ದರೆ ಯಾವ ದೋಷಗಳು, ಗುರುವಾಗಿದ್ದರೆ ಯಾವ ದೋಷಗಳು, ಭೇದವಾದಿಯಾಗಿದ್ದರೆ ಹೇಗೆ ಅವರಿಗೆ ಅಪಸಿದ್ಧಾಂತ ಬರುವದು ಇತ್ಯಾದಿ ವಿಷಯುಗಳನ್ನು ವಿಮರ್ಶಿಸಿ ಅವರ ಮತವು ಹೇಗೆ ಯುಕ್ತಿವಿರುದ್ಧವಾಗಿದೆ ಎಂದು ವಿವರಿದ್ದಾರೆ. ಈ ಸಂದರ್ಭದಲ್ಲಿ ಏಕಜೀವವಾದಿಗಳು ಉದಾಹರಿಸುವ ಪ್ರಪಂಚೋ ಯದಿ ವಿದ್ಯೇತ... ಇತ್ಯಾದಿ ಶ್ರುತಿಯ ಸರಿಯಾದ ಅರ್ಥವನ್ನು ಹೇಳಿ ಇದು ಪಂಚಭೇದವು ನಿತ್ಯ, ಸತ್ಯವೆಂದು ಹೇಳುವ ಶ್ರುತಿಯು, ಪಂಚಭೇದಸತ್ಯವೆಂದು ಪರಮಶ್ರುತಿಯ ಸ್ಪಷ್ಟವಾದ ಪ್ರಮಾಣವೂ ಇದೆ, ಅಲ್ಲದೆ ಅದ್ವೈತವಾದವನ್ನು ಹೇಳುವವರ ನಿಂದೆಯೂ ಶ್ರುತಿಗಳಲ್ಲಿ ಉಕ್ತವಾಗಿದೆ ಎಂದು ಮೈತ್ರೇಯೀಶಾಖೆಯ ವಾಕ್ಯಗಳನ್ನು ಉದಾಹರಿಸಿ ಸ್ಪಷ್ಟಪಡಿಸಿದ್ದಾರೆ. ಜಗತ್ತು ಆ ಒಬ್ಬ ಜೀವನ ಅಜ್ಞಾನದಿಂದ ಕಲ್ಪಿತ ಅಂದರೆ ಅವನ ಭ್ರಾಂತಿಯಿಂದ ಕಲ್ಪಿತ ಎಂದು ಹೇಳುವವರ ಈ ಏಕಜೀವವಾದವನ್ನು ಅವರಿಗೆ ಅಧಿಷ್ಠಾನ, ಸದೃಶವಾದ ವಸ್ತು ಇವೆರಡರ ಸತ್ಯತ್ವನ್ನು ಹೇಳದಿದ್ದರೆ ಭ್ರಾಂತಿಯನ್ನೇ ಹೇಳಲು ಬರುವದಿಲ್ಲ ಎಂದು ವಿವರಿಸಿ ಮತ್ತೊಂದು ದೃಷ್ಟಿಯಿಂದಲೂ ಆ ವಾದವನ್ನು ಯುಕ್ತಿಯುತವಾಗಿ ವಿಮರ್ಶಿಸಿ

Rarest Archiver

ಅನಂತದೋಷದುಷ್ಟವಾದ ಅದನ್ನು ಒಪ್ಪಲು ಸಾಧ್ಯವಾಗುವದಿಲ್ಲವೆಂದು ಪ್ರತಿಪಾದಿಸಿ-ದ್ದಾರೆ.

**ಇನ್ನು, ಏಕಜೀವವಾದದಲ್ಲಿ ದೋಷಗಳಿವೆ ಎಂದರೆ ಬಹುಜೀವವಾದದ ವಿಷಯಕ್ಕೆ ದೋಷಗಳು ಇಲ್ಲವೆಂದಾಯಿತು.** ಈ ಬಹುಜೀವವಾದಿಗಳಲ್ಲಿಯೂ ಅನೇಕ ಪ್ರಭೇದಗಳುಂಟು. ಜೀವೇಶ್ವರರಲ್ಲಿ ಮತ್ತು ಬಹುಜೀವರಲ್ಲಿ ಸತ್ಯವಾದ ಭೇದವಿದೆ ಎಂದು ಹೇಳುವವರು ಒಂದು ಪ್ರಭೇದವಾದರೆ ಅವರಲ್ಲಿಯ ಭೇದವು ಮಿಥ್ಯೆ ಎಂದು ಹೇಳುವದು ಇನ್ನೊಂದು ಪ್ರಭೇದ. ಪ್ರಪಂಚ ಸತ್ಯ, ಪಂಚವಿಧವಾದ ಭೇದ ಸ್ವಾಭಾವಿಕವಾಗಿದೆ ಮತ್ತುಸತ್ಯವಾಗಿದೆ ಎಂದು ಹೇಳುವ ಬಹುಜೀವವಾದಿಗಳಾದ ಶ್ರೀಮದಾಚಾರ್ಯರ ಮತದಲ್ಲಿ ಯಾವ ದೋಷಗಳೂ ಬರಲಾರವು. (ನ ಚ ಸತ್ಯತ್ವಾಂಗೀಕಾರೇ ಕಶ್ಚಿದ್ ದೋಷಃ –ವಿ.ತ.ವಿ) ಬದ್ಧಮುಕ್ತವ್ಯವಸ್ಥೆಯನ್ನು ಸಮರ್ಪಕವಾದ ರೀತಿಯಲ್ಲಿ ಈ ಮತದಲ್ಲಿ ಕೂಡಿಸಲು ಬರುವದು. ಆದರೆ, ಪ್ರಪಂಚವು– ಪಂಚವಿಧವಾದ ಭೇದವು ಅಸ್ವಾಭಾವಿಕವಾದ ಕಾರಣದಿಂದ ಹುಟ್ಟಿದೆ ಎಂದು ಹೇಳುವವರು ಸತ್ಯನಾದ ಒಬ್ಬನೇ ಬ್ರಹ್ಮನು ಅನೇಕ ಉಪಾಧಿಗಳಿಂದ ಬಹುಜೀವರಾಗುವನು, ಒಬ್ಬೊಬ್ಬನೇ ಜೀವನು ಮುಕ್ತನಾಗಿ ಬ್ರಹ್ಮನಾಗುವನು ಎಂದು ಹೇಳುವ ಬಹುಜೀವವಾದಿಗಳು ಇವರು. ಹೀಗೆ ವಾದಿಸುವವರ ಮತವನ್ನೂ ಅದು ಯುಕ್ತಿವಿರುದ್ಧವೆಂದು ಶ್ರೀಮದಾಚಾರ್ಯರು ಖಂಡಿಸುವರು. ಈ ಪ್ರಕಾರದ ಬಹುಜೀವವಾದಿಗಳಲ್ಲಿಯ ಪ್ರಭೇದಗಳನ್ನು ವಿವರಿಸಿ ಅವರಲ್ಲಿ ಉಪಾಧಿಯು ಹಾಗೂ ಭೇದವು ಸತ್ಯವೆಂದು ಹೇಳುವ ಭಾಸ್ಕರಮತವನ್ನೂ, ಮಿಥ್ಯಾ ಎಂದು ಹೇಳುವ ಅದ್ವೈತವಾದವನ್ನೂ ಬ್ರಹ್ಮನಿಗೆ ಉಪಾಧಿಯನ್ನೇ ಹೇಳಲು ಸಾಧ್ಯವಿಲ್ಲ, ಉಪಾಧಿಯ ಸ್ವರೂಪವನ್ನೇ ಅವರ ಮತದಲ್ಲಿ ವಿವರಿಸಲು ಸಾಧ್ಯವಾಗುವದಿಲ್ಲವೆಂಬುದನ್ನು ತೋರಿಸಿಕೊಟ್ಟು ಆ ವಾದಗಳನ್ನು ಖಂಡಿಸುವರು. ಉಪಾಧಿಯು ಇದ್ದ ಭೇದವನ್ನೇ ಎತ್ತಿ ತೋರಿಸುವದೇ ಹೊರತು ಹೊಸದಾಗಿ ಭೇದವನ್ನು ಹುಟ್ಟಿಸುವದಿಲ್ಲ. ಅಲ್ಲದೆ ಈ ವಾದಗಳಲ್ಲಿ ಜೀವ, ಈಶಭೇದವನ್ನು ಮತ್ತು ಬದ್ಧ ಮುಕ್ತವ್ಯವಸ್ಥೆಯನ್ನು ವಿವರಿಸುವದೂ ಕೂಡ ಸಾಧ್ಯವಾಗುವದಿಲ್ಲ. ಏಕೆಂದರೆ ಯಾವಾಗಲೂ ಸಂಸಾರಿ ಜೀವರು ಇದ್ದೇ ಇರುವದರಿಂದ ತನ್ನನ್ನೇ ಸಂಸಾರಿಯನ್ನಾಗಿ ಮಾಡಿಕೊಂಡ ಸತ್ಯನಾದ ಆ ಒಬ್ಬ ಬ್ರಹ್ಮನಿಗೆ ಎಂದೂ ಮುಕ್ತಿಯೇ ಇಲ್ಲದಂತಾಗುವದು ! **ಸಂಸಾರಿಣಾಂ ಸರ್ವದಾ ವಿದ್ಯಮಾನತ್ವಾತ್** ಎಂದು ಶ್ರೀಮದಾಚಾರ್ಯರ ವಚನ. ಬಹುಜೀವ-ವಾದಿಗಳನ್ನು ಹೀಗೆ ಖಂಡಿಸಿದ್ದಕ್ಕೆ ಏಕಜೀವವಾದಿಯು ತನಗೆ ಈ ಪ್ರಕಾರದ ದೋಷವೇನೂ ಬರುವದಿಲ್ಲ, ಏಕೆಂದರೆ ಒಬ್ಬನೇ ಜೀವನು ಇದ್ದು ಅವನ ಅಜ್ಞಾನದಿಂದ ಈ ಜಗತ್ತು ಕಲ್ಪಿತವಾಗಿದೆ. ಯಾವನೂ ಮುಕ್ತನಾಗಿ ಇಲ್ಲವೇ ಇಲ್ಲ. ಶುಕನು

Rarest Archiver

ಮುಕ್ತನಾದನು ಇತ್ಯಾದಿವಾಕ್ಯಗಳು ಅರ್ಥವಾದ ಮಾತ್ರ. ಮುಕ್ತನಿದ್ದರಷ್ಟೆ ಅವನಿಗೆ ಅಜ್ಞಾನವನ್ನು ಹೇಳಬೇಕಾದೀತು ಎಂದು ಆಕ್ಷೇಪಿಸಬಹುದು. ಜೀವರು ಅಸಂಖ್ಯ-ರಾಗಿರುವರು, ಅವರು ಯಾವಾಗಲೂ ಇರುವರು ಎಂದು ಹೇಳಿ ಯಾರಿಗೂ ಮುಕ್ತಿಯನ್ನು ಹೇಳಲು ಬರುವದೇ ಇಲ್ಲ ಎಂದು ಆಕ್ಷೇಪಿಸಬೇಕಾದರೆ ಜೀವರು ಅನಂತರಾಗಿದ್ದು ಅವರು ಯಾವಾಗಲೂ ಇರುವರು ಎಂಬುದು ಸಿದ್ಧವಾಗಬೇಕಾಗುವದು. ಜೀವರು ಅನಂತರು ಎಂಬುದಕ್ಕೆ ಪ್ರಮಾಣವೇನು ಎಂಬ ಪ್ರಶ್ನೆ ಇದೆ. ಹೀಗೆಲ್ಲ ಅನೇಕ ಪ್ರಶ್ನೆಗಳು ಬರುವದರಿಂದ ಏಕಜೀವವಾದವನ್ನೇ ಒಪ್ಪಿ ಬಿಡಿರಿ ಎಂಬುದು ಏಕಜೀವವಾದಿಯ ಮತ. ಜೀವರ ಆನಂತ್ಯಕ್ಕೆ ಪ್ರಮಾಣವೇನು ಎಂಬ ಶಂಕೆಗೆ ಈ ಸಂದರ್ಭದಲ್ಲಿ ವತ್ಸಶ್ರುತಿಯ ಈ ವಾಕ್ಯವನ್ನು ಶ್ರೀಮದಾಚಾರ್ಯರು ಪ್ರಮಾಣವಾಗಿ ಹೇಳುವರು.

**ವಿಶೇಷ ವಿಷಯಗಳು :-** ಹಿಂದೆ ಇದ್ದ ಪರಮಾಣುಗಳು, ಮುಂದೆ ಬರುವ ಪರಮಾಣುಗಳು ಎಂದು ಹೇಳಿದ್ದಕ್ಕೆ ಪರಮಾಣುಗಳು ನಿತ್ಯವಾದ ಕಾರಣ ಹೀಗೆ ಹೇಳಿದ್ದು ಸರಿಯಲ್ಲ ಎಂದು ಆಕ್ಷೇಪವನ್ನು ಶ್ರೀಮಟ್ಟೀಕಾಕೃತ್ಪಾದರು ಓಂ ರೂಪಾದಿಮತ್ವಾಚ್ಚ ವಿಪರ್ಯಯೊ ದರ್ಶನಾತ್ ಓಂ (ಬ್ರ. ಸೂ.೨.೨.೬.೫) ಎಂಬ ಸೂತ್ರದಲ್ಲಿ ಪರಮಾಣುಗಳು ಅನಿತ್ಯವೆಂಬುದನ್ನು ಶ್ರೀ ವೇದವ್ಯಾಸರೇ ತಿಳಿಸಿದ್ದಾರೆ ಎಂದು ವಿವರಣೆ ಕೊಟ್ಟಿದ್ದಾರೆ. (ರೂಪಾದಿಗಳಿರುವದರಿಂದ ಪರಮಾಣುಗಳು ನಿತ್ಯತ್ವಕ್ಕೆ ವಿಪರೀತವಾದ ಅಂದರೆ ಅನಿತ್ಯತ್ವವುಳ್ಳವುಗಳು, ಘಟಾದಿಗಳಲ್ಲಿ ಈ ವಿಷಯವು ನೋಡಲು ಸಿಗುವದು. ಘಟಾದಿಗಳಿಗೆ ರೂಪಾದಿಗಳು ಇರುವದು, ಅವು ಅನಿತ್ಯವಾಗಿವೆ ಎಂಬುದು ಎಲ್ಲರಿಗೂ ಅನುಭವಕ್ಕೆ ಬರುವ ವಿಷಯ). ಪರಮಾಣುಗಳು ಅನಂತವಾಗಿವೆ, ಹಾಗೂ ಪರಮಾತ್ಮನ ಅಚಿಂತ್ಯಶಕ್ತಿಯಿಂದ ಅವು ಅತಿಸೂಕ್ಷ್ಮಪ್ರದೇಶದಲ್ಲಿಯೂ ಇರಬಹುದು ಎಂಬುದಕ್ಕೆ ಸ್ಕಾಂದಪುರಾಣದ ವಾಕ್ಯವನ್ನೂ ಶ್ರೀಮದಾಚಾರ್ಯರು ಪ್ರಮಾಣವಾಗಿ ಕೊಡುತ್ತಾರೆ.

*ಶ್ರುತ್ಯರ್ಥಷಟ್ಪದಿಯಲ್ಲಿ ಈ ಶ್ರುತಿಯ ಭಾವವು ಹೀಗೆ ;*

*ಮುಂದು ಕಾಲದ ಕ್ಷಣಗಳೆಲ್ಲವ*
*ಹಿಂದಕಿದ್ದಿಹ ಕ್ಷಣಗಳೊಟ್ಟಿಗೆ*
*ಒಂದುಗೂಡಿಸೆ ರಾಶಿ ಎಷ್ಟಾಗುವದ ಮನಗಂಡು,*
*ಹಿಂದು ಮುಂದಿನದೆಲ್ಲ ಪರಮಾ-*
*ಣೊಂದುಗೈಯಲನಂತಮಡಿಯಿಂ-*
*ದಿಂದಿರೇಶನ ದಯದಿ ಜೀವರು ಎಂದಿಗಿದ್ದಿಹರು.* ॥

Rarest Archiver

*ಇಂತು ವತ್ಸಶ್ರುತಿಯು ಪೇಳಿರೆ*
*ಎಂತು ಮುಕುತಿಯ ಪೇಳಿ ಜೀವರಿ–*
*ಗಂತ ಪೇಳುತ ಮುಕುತನಾಗುವನೊಬ್ಬ ಬೊಮ್ಮನವ?*
*ಕಂತುಪಿತ ತಾ ವಿವಿಧ ಜೀವರ–*
*ನಿಂತು ಸೃಜಿಸುವ, ಪಂಚಭೇದ–*
*ಕ್ಕಂತವೇ? ಬಹುಜೀವವಾದಕೆ ಅಂತವೆಂದಿಹರು ॥*

**೯೬. ಸರ್ವೋತ್ತಮಂ ಸರ್ವದೋಷವ್ಯಪೇತಂ ಗುಣೈರಶೇಷೈಃ ಪೂರ್ಣಮನ್ಯಂ ಸಮಸ್ತಾತ್ । ವೈಲಕ್ಷಣ್ಯಾತ್ ಜ್ಞಾಪಯಿತುಂ ಪ್ರವೃತ್ತಾಃ ಸರ್ವೇ ವೇದಾಃ ಮುಖ್ಯತೊ ನೈವ ಚಾನ್ಯತ್ ॥ – *ಮಹೋಪನಿಷತ್ (?)***

ಇದು ಶ್ರೀಮದಾಚಾರ್ಯರಿಂದ ವಿ.ತ.ವಿ ದ ಪ್ರಥಮ ಪರಿಚ್ಛೇದದಲ್ಲಿ ಉದಾಹರಿಸಲ್ಪಟ್ಟ ಕೊನೆಯ ಪ್ರಮಾಣವು. ಗ್ರಂಥದ ಆದಿಯಲ್ಲಿ ನಾರಾಯಣನಮಸ್ಕಾರ–ರೂಪವಾದ ಮಂಗಳಾಚರಣಶ್ಲೋಕದಲ್ಲಿ ನಾರಾಯಣನಿಗೆ ಹೇಳಿದ ಮೂರು ವಿಶೇಷಣಗಳಲ್ಲಿ ಸದಾಗಮೈಕವಿಜ್ಞೇಯಂ ಎಂಬ ವಿಶೇಷಣದ ವಿವರಣೆಯೇ ಪ್ರಥಮಪರಿ–ಚ್ಛೇದದ ಉದ್ದೇಶವಾಗಿದೆ ಎಂದು ಎರಡನೆಯ ಶ್ಲೋಕದಲ್ಲಿ ಸ್ವತಃ ಶ್ರೀಮದಾಚಾರ್ಯರೇ ಹೇಳಿದ್ದರು. ಅದರಂತೆಯೆ ಪ್ರಥಮ ಪರಿಚ್ಛೇದದಲ್ಲಿ ಈ ವಿಷಯವನ್ನು ಸವಿಸ್ತಾರವಾಗಿ ವಿವರಿಸಿ ಈಗ ಆ ಎಲ್ಲ ವಿಷಯಗಳ ಸಂಗ್ರಹವನ್ನು ಮಹೋಪನಿಷತ್ತಿನ ಈ ವಾಕ್ಯದಿಂದ ಮಾಡಿ ಪ್ರಥಮ ಪರಿಚ್ಛೇದದ ಉಪಸಂಹಾರ ಮಾಡುತ್ತಾರೆ.

**ಅರ್ಥ:–** ಎಲ್ಲ ವೇದಗಳು ಸರ್ವದೋಷದೂರವೂ ಸಕಲಗುಣಗಣಪೂರ್ಣವೂ, ಎಲ್ಲದರಗಿಂತ ಭಿನ್ನವೂ ಅಲ್ಲದೆ ಸರ್ವೋತ್ತಮವೂ ಆಗಿರುವ (ಪರಮಪುರುಷ ತತ್ವವು) ಸಕಲ ವಿಲಕ್ಷಣವಾಗಿದೆ ಎಂದು ಪರಮಮುಖ್ಯವೃತ್ತಿಯಿಂದ ಮಹಾತಾತ್ಪರ್ಯವೆಂದು ಪ್ರತಿಪಾದಿಸಲೆಂದೇ ಪ್ರವೃತ್ತವಾಗಿವೆ. ಅವು ಅಭೇದಾದಿಗಳನ್ನು ತಾತ್ಪರ್ಯವೆಂದು ಪ್ರತಿಪಾದಿಸಲು ಪ್ರವೃತ್ತವಾಗಿಲ್ಲ.

***ಶ್ರುತ್ಯರ್ಥಪಟ್ಪದಿಯಲ್ಲಿ*** ಪ್ರಥಮ ಪರಿಚ್ಛೇದದಲ್ಲಿಯ ಕೊನೆಯಲ್ಲಿ ಉದಾಹೃತವಾದ ಈ ಶ್ರುತಿಯ ಭಾವವು ಹೀಗೆ ;

*ಸರುವವೇದಗಳೊಂದೆ ದನಿಯಲಿ*
*ಭರದಿ ನುಡಿವವು; ಮುಖ್ಯವೃತ್ತಿಲಿ*
*ಹರಿಯೆ ಸರ್ವೋತ್ತಮನು ದೂರನು ಸರುವದೋಷಗಳಿಂ,*
*ಸರುವಗುಣದಿಂ ಪೂರ್ಣನಿವ ಹರಿ*
*ಪರಮ ವೈಲಕ್ಷಣ್ಯಯುಕ್ತನು*
*ಸರುವ ಜಗದಿಂ ಭಿನ್ನನೆಂದೆಂದಂದಿತಾ ನಿಗಮ. ॥*

Rarest Archiver

೯೭. ಬ್ರಹ್ಮಾ ಶಿವಃ ಸುರಾದ್ಯಾಶ್ಚ ಶರೀರಕ್ಷರಣಾತ್ ಕ್ಷರಾಃ । ಲಕ್ಷ್ಮೀಃ ಅಕ್ಷರ-
ದೇಹತ್ವಾತ್ ಅಕ್ಷರಾ ತತ್ಪರೋ ಹರಿಃ ॥
ಸ್ವಾತಂತ್ರ್ಯಶಕ್ತಿವಿಜ್ಞಾನಸುಖಾದ್ಯೈಃ ಅಖಿಲೈಃ ಗುಣೈಃ ।ನಿಸ್ಸೀಮತ್ವೇನ
ತೇ ಸರ್ವೇ ತದ್ವಶಾಃ ಸರ್ವದೈವ ಚ ॥ ಸರ್ಗಸ್ಥಿತಿಕ್ಷಯಯತಿ-
ಪ್ರಕಾಶಾವೃತಿಬಂಧನಮ್ । ಸರ್ವಕ್ಷರಾಣಾಂ ಏಕಃ ಸಃ ಕುರ್ಯಾತ್
ಸಾತ್ವಿಕಮೋಕ್ಷಣಮ್ । ಸರ್ಗಸ್ಥಿತಿಯತಿಜ್ಯೋತಿಃ ನಿತ್ಯಾನಂದ-ಪ್ರದೋ
ಹರಿಃ । ತಸ್ಯ ನಾನ್ಯೋऽಸ್ತಿ ಸರ್ಗಾದಿಕರ್ತಾ ನಿರ್ದೋಷಕಶ್ಚ ಸಃ ॥

*-ಪರಮಶ್ರುತಿಃ.*

**ಅರ್ಥ:-** ಚತುರ್ಮುಖಬ್ರಹ್ಮ, ಶಿವ, ದೇವತೆಗಳೇ ಆದಿಯಾದ ಎಲ್ಲ ಜೀವರು ನಾಶ (ಕ್ಷರಣ) ಹೊಂದುವ ಶರೀರವುಳ್ಳವರಾದ್ದರಿಂದ ಕ್ಷರ ಎಂದು ಕರೆಸಿಕೊಳ್ಳಲ್ಪಡು-ತ್ತಾರೆ. ನಾಶ ಹೊಂದದ ದೇಹವುಳ್ಳವಳಾದ್ದರಿಂದ ಲಕ್ಷ್ಮೀದೇವಿಯು ಅಕ್ಷರಳು. ಈ ಎರಡರಗಿಂತಲೂ ಉತ್ತಮನಾದವನು ಶ್ರೀ ಹರಿಯು. ಶ್ರೀ ಹರಿಯು ಸ್ವಾತಂತ್ರ್ಯ, ಶಕ್ತಿ, ಜ್ಞಾನ, ಸುಖ, ಇತ್ಯಾದಿಯಾದ ಎಲ್ಲ ಗುಣಗಳಿಂದಲೂ ನಿಸ್ಸೀಮನಾಗಿರುವದರಿಂದ ಈ ಎಲ್ಲರೂ ಯಾವಾಗಲೂ ಅವನ ವಶದಲ್ಲಿರುತ್ತಾರೆ. ಜೀವರು ಅವನ ವಶದಲ್ಲಿ-ರುವರೆಂದು ಏಕೆ ಹೇಳುವುದೆಂದರೆ ನಾಶಹೊಂದುವ ದೇಹವುಳ್ಳ ಅವರೆಲ್ಲರಿಗೆ ಉತ್ಪತ್ತಿ, ಪಾಲನೆ, ನಾಶ ನಿಯಮನ, ಜ್ಞಾನ, ಅಜ್ಞಾನ, ಬಂಧನ ಇವೆಲ್ಲವುಗಳನ್ನು ಅವನೊಬ್ಬನೇ ಕೊಡುವನು. ಸಾತ್ವಿಕ ಜೀವರಿಗೆ ಬಂಧದಿಂದ ಮುಕ್ತಿ ಕೊಡುವನು. ಅಕ್ಷರತತ್ವಳಾದ ಲಕ್ಷ್ಮೀದೇವಿಗೆ ಸೃಷ್ಟಿಯೆಂದರೆ ಪ್ರಾದುರ್ಭಾವ ಅಥವಾ ಸಿಸೃಕ್ಷಾ, ಸ್ಥಿತಿ ಎಂದರೆ ಎಂದಿಗೂ ದೇಹನಾಶವಿರದಿರುವದು, ಪರಮಾತ್ಮನ ಆಜ್ಞಾಪಾಲನರೂಪವಾದ ನಿಯಮನದಲ್ಲಿರುವದು, ಜ್ಯೋತಿ ಎಂದರೆ ಪರಮಾತ್ಮನ ವಿಷಯಕ್ಕೆ ಸಂಪೂರ್ಣವಾಗಿ ಇರದಿದ್ದರೂ ನಿತ್ಯವೂ ಇರುವ ಮತ್ತು ಪರಮಾತ್ಮೇತರ ಎಲ್ಲ ವಿಷಯಗಳ ಬಗ್ಗೆ ಆಲೋಚನೆ ಮಾಡದಿದ್ದರೂ ಸಂಪೂರ್ಣವಾಗಿ ಇರುವ ಜ್ಞಾನ, ನಿತ್ಯವಾದ ಆನಂದ ಇವೆಲ್ಲವುಗಳನ್ನು ಅವನೇ ಕೊಡುವನು. ಎಲ್ಲರಿಗೂ ಚೇಷ್ಟಾಪ್ರದನು ಸರ್ವೋತ್ತಮ-ನಾದ ಅವನೊಬ್ಬನೇ. ಅವನ ಸೃಷ್ಟ್ಯಾದಿಗಳನ್ನು ಮಾಡುವವರು ಮತ್ತಾರೂ ಇಲ್ಲ. ಅವನೇ ದೋಷದೂರನು. ಉಳಿದವರೆಲ್ಲ ಒಂದಿಲ್ಲ ಒಂದು ದೃಷ್ಟಿಯಿಂದನ್ಯೂನತೆ ಇರುವಂಥವರೇ ಆಗಿರುವರು. ಆದಕ್ಕೇನೇ ಅವನೊಬ್ಬನೇ ಸರ್ವೋತ್ತಮನು ಎಂದು ತಾತ್ಪರ್ಯ.

*ಶ್ರುತ್ಯರ್ಥಷಟ್ಪದಿಯಲ್ಲಿ ಪರಮಶ್ರುತಿಯ* ಈ ವಾಕ್ಯಗಳ ಭಾವವು ಹೀಗೆ :-

*ಬೊಮ್ಮ ಶಿವನಮರಾದಿ ಜೀವರು*
*ತಮ್ಮ ದೇಹಕ್ಷರಣದಿಂ ಕ್ಷರ-*
*ರಮ್ಮ ಲಕುಮಿಯು ಕ್ಷರಣರಹಿತಳು ಅಕ್ಷರಳು ತಾನೆ.*

Rarest Archiver

*ಎಮ್ಮ ಹರಿ ಸಚ್ಛಕ್ತಿ, ಸತ್ಸುಖ,*
*ನಿಮ್ಮಳದ ಸ್ವಾತಂತ್ರ್ಯಪೂರ್ಣನು,*
*ಉಮ್ಮಳದಿ ಬಲು ದೂರ, ಸರ್ವೋತ್ತುಮನು ಸರ್ವಜ್ಞ. ॥*

*ಧಮ್ಮಪಾಲಕ ನಿತ್ಯನಾಗಿಹ*
*ಅಮ್ಮೆಯರಸನು ದೋಷದೂರನು,*
*ಬೊಮ್ಮ ಶಿವ ಸುರ ದಿತಿಜ ನರರಾದಿಗಳು ವಶರಿವಗೆ,*
*ಸುಮ್ಮನಿರದಲೆ ಸೃಷ್ಟಿ ಎಲ್ಲವ-*
*ನುಮ್ಮಹದೊಳಿವನೊಬ್ಬ ಮಾಡುವ*
*ನಮ್ಮ ಹರಿಗಾರಿಲ್ಲ ಸೃಷ್ಟ್ಯಾದಿಗಳ ಕರ್ತೃಗಳು. ॥*
*(ಉಮ್ಮಳ=ದುಃಖ) (ಉಮ್ಮಹ= ಉತ್ಸಾಹ)*

**೯೮. ಯಂ ಕಾಮಯೇ ತಂ ತಂ ಉಗ್ರಂ ಕೃಣೋಮಿ ತಂ ಬ್ರಹ್ಮಾಣಂ ತಂ ಋಷಿಂ ತಂ ಸುಮೇಧಾಂ ।ಅಹಂ ರುದ್ರಾಯ ಧನುರಾತನೋಮಿ ಬ್ರಹ್ಮದ್ವಿಷೇ ಶರವೇ ಹಂತ ವಾ ಉ ।ಅಹಂ ಜನಾಯ ಸಮದಂ ಕೃಣೋಮಿ ಅಹಂ ದ್ಯಾವಾ ಪೃಥಿವೀ ಆವಿವೇಶ ।ಅಹಂ ಸುವೇ ಪಿತರಮಸ್ಯ ಮೂರ್ಧನ್ ಮಮ ಯೋನಿಃ ಅಪ್ಸು ಅಂತಃಸಮುದ್ರೇ ॥**

**–ಅಂಭ್ರಣೀ ಸೂಕ್ತಮ್**

**ಅರ್ಥ:–** ಇದು ಮಹಾಲಕ್ಷ್ಮಿಯ ವಾಕ್ಯವು. ನಾನು ಯಾರನ್ನು ರುದ್ರನನ್ನಾಗಿ ಮಾಡಲಪೇಕ್ಷಿಸುವೆನೋ ಅವನನ್ನು ರುದ್ರನನ್ನಾಗಿ ಮಾಡುವೆನು. ಯಾರನ್ನು ಬ್ರಹ್ಮನನ್ನಾಗಿ ಮಾಡಲಿಚ್ಛಿಸುವೆನೋ ಅವನನ್ನು ಬ್ರಹ್ಮನನ್ನಾಗಿ ಮಾಡುವೆನು; ಯಾರನ್ನು ಋಷಿಯನ್ನಾಗಿ ಬುದ್ಧಿವಂತನನ್ನಾಗಿ ಮಾಡಲು ಬಯಸುವೆನೋ ಅವನನ್ನು ಋಷಿಯನ್ನಾಗಿ ಬುದ್ಧಿವಂತನನ್ನಾಗಿ ಮಾಡುವೆನು. ನಾನು ಬ್ರಹ್ಮನನ್ನು ದ್ವೇಷಿಸಿದ ರುದ್ರನನ್ನು ಸಂಹರಿಸಲೆಂದೇ ಬಿಲ್ಲಿಗೆ ಬಾಣವನ್ನೂ ಹೂಡುವೆನು. ನಾನು ಜನರಿಗೆ ಸಂತೋಷವನ್ನುಂಟು ಮಾಡುವೆನು. ನಾನು ಆಕಾಶ ಹಾಗೂ ಪೃಥಿವಿಯನ್ನು ಅವುಗಳಿಂದ ಉಪಲಕ್ಷಿತವಾದ ಎಲ್ಲ ಲೋಕಗಳನ್ನು (ಧಾರಣೆ ಮಾಡುವದಕ್ಕೋಸ್ಕರವಾಗಿ) ಪ್ರವೇಶಿಸುವೆನು. ನಾನು ಈ ಜಗತ್ತಿಗೆ ತಂದೆಯಾದ ಬ್ರಹ್ಮನಿಗೆ ಸರ್ವೋತ್ಕೃಷ್ಟನಾಗು–ವಂತೆ ಜನ್ಮ ಕೊಡುವೆನು. ಈ ರೀತಿ ಸರ್ವಸಮರ್ಥಳಾದ ನನಗೆ ಕಾರಣನಾಗಿದ್ದವನು ಮಾತ್ರ ಸಮುದ್ರದ ಮಧ್ಯದಲ್ಲಿ ಇರುವನು. (ನನ್ನ ಪತಿಯು ನಾರಾಯಣನು; ಸ್ತ್ರೀಯರು ತಮ್ಮ ಪತಿಯನ್ನು ಹೆಸರುಗೊಂಡು ಕರೆಯಬಾರದೆಂಬ ಕಾರಣದಿಂದ ಲಕ್ಷ್ಮೀದೇವಿಯು ತನ್ನ ಪತಿಯಾದ ನಾರಾಯಣನೆಂದು ಎಂದು ಹೆಸರು ಹೇಳದೆ ನಾರಾಯಣ ಪದದ ಅರ್ಥದ ವಿವರಣೆಯ ಪದಗಳನ್ನೇ ಪ್ರಯೋಗಿಸಿದ್ದಾಳೆ. ಸ್ತ್ರೀಯರು ತಮ್ಮ ಪತಿಯ

Rarest Archiver

ಹೆಸರನ್ನು ಒಗಟಿನಿಂದ ಹೇಳುವ ಪದ್ಧತಿಯು ಕೆಲ ಸಾಂಪ್ರದಾಯಿಕ ಮನೆಗಳಲ್ಲಿ ಈಗಲೂ ಪ್ರಚಲಿತವಿರುವದನ್ನು ಗಮನಿಸಬೇಕು)

ಈ ಸೂಕ್ತದ ಭಾವವು ಕನ್ನಡದ *ಶ್ರುತ್ಯರ್ಥಷಟ್ಪದಿ*ಯಲ್ಲಿ ಹೀಗೆ :–

*ನಾನು ರುದ್ರನ ಗೈವೆ ಮೆಚ್ಚಲು,*
*ನಾನು ಬೊಮ್ಮನ ಪಟ್ಟ ನೀಡುವೆ,*
*ನಾನು ಮೆಚ್ಚಲು ಒಬ್ಬನಂ ಮೇಧಾವಿ ಋಷಿ ಗೈವೆ.*
*ನಾನು ಬೊಮ್ಮನ ಶತ್ರು ರುದ್ರನ*
*ಗೋಣ ತರಿಯಲು ಬಾಣ ಹೂಡುವೆ,*
*ನಾನೆ ಸರ್ವೋತ್ಕೃಷ್ಟ ಬೊಮ್ಮಗೆ ಜನುಮ ನೀಡುವೆನು.* ॥

*ನಾನೆ ಸೊಗವನು ಜಗಕೆ ನೀಡುವೆ,*
*ನಾನೆ ಮೇಲಿನ ಕೆಳಗು ಜಗಗಳ*
*ಮಾನದಿಂದೊಳಗಿದ್ದು ಸರುವವ ನಿರುತ ಪಾಲಿಸುವೆ,*
*ನಾನೆ ಈ ಜಗ ಸೃಜಿಪ ಬೊಮ್ಮನ*
*ತಾನೆ ಹಡೆಯುವೆ ಜ್ಯೇಷ್ಠನಾಗಲು*
*ನಾನು ಇಂತಿರೆ ಎನಗೆ ಕಾರಣನಿಹನು ಜಲಧಿಯೊಳು.* ॥

೯೯. ಯಮಂತಃಸಮುದ್ರೇ ಕವಯೋ ವಯಂತಿ ಯದಕ್ಷರೇ ಪರಮೇ ಪ್ರಜಾಃ । ಯತಃ ಪ್ರಸೂತಾ ಜಗತಃ ಪ್ರಸೂತೀ ತೋಯೇನ ಜೀವಾನ್ ವ್ಯಸಸರ್ಜ ಭೂಮ್ಯಾಮ್ ॥ ಯದೋಷಧೀಭಿಃ ಪುರುಷಾನ್ ಪಶೂಂಶ್ಚ ವಿವೇಶ ಭೂತಾನಿ ಚರಾಚರಾಣಿ । ಅತಃಪರಂ ನಾನ್ಯದ್ ಅಣೀಯಸಂ ಹಿ ಪರಾತ್ಪರಂ ಯತ್ ಮಹತೋ ಮಹಾಂತಮ್ ।ಯದೇಕಂ ಅವ್ಯಕ್ತಂ ಅನಂತರೂಪಂ ವಿಶ್ವಂ ಪುರಾಣಂ ತಮಸಃ ಪರಸ್ತಾತ್ ॥ ತದೇವರ್ತಂ ತದು ಸತ್ಯಮಾಹುಃ ತದೇವ ಬ್ರಹ್ಮ ಪರಮಂ ಕವೀನಾಮ್ ॥–

*ಮಹಾನಾರಾಯಣೋಪನಿಷತ್ ೧–೩*

ಅನ್ವಯ :– (ಅಂತಃಸಮುದ್ರೇ ಸ್ಥಿತಂ) ಯಂ ಕವಯಃ ವಯಂತಿ ಯದಕ್ಷರೇ ಪರಮೇ ಪ್ರಜಾಃ (ಅಧೀನಾಃ), ಜಗತಃ ಪ್ರಸೂತೀ ಯತಃ ಪ್ರಸೂತಾ , (ಯಃ) ತೋಯೇನ ಜೀವಾನ್ ಭೂಮ್ಯಾಂ ವ್ಯಸಸರ್ಜ, ಯತ್ ಓಷಧೀಭಿಃ ಪುರುಷಾನ್ ಪಶೂನ್ ಚರಾಚರಾಣಿ ಚ ಭೂತಾನಿ ವಿವೇಶ, ಅತಃ ಪರಂ ನ ಅನ್ಯತ್, ಯತ್ ಪರಾತ್ ಪರಂ ಅಣೀಯಸಂ (ಅಸ್ತಿ), ಯತ್ ಮಹತಃ ಮಹಾಂತಂ (ಅಸ್ತಿ), ಯತ್ ಏಕಂ ಅವ್ಯಕ್ತಂ (ಅತೀಂದ್ರಿಯಂ) ಅನಂತರೂಪಂ ವಿಶ್ವಂ ಪುರಾಣಂ ತಮಸಃ ಪರಸ್ತಾತ್ ಅಸ್ತಿ ತತ್ ಏವ ಋತಂ, ತತ್ ಉ ಸತ್ಯಂ (ಇತಿ ಜ್ಞಾನಿನಃ) ಆಹುಃ ತತ್ ಏವ ಕವೀನಾಂ ಪರಮಂ ಬ್ರಹ್ಮ ।

Rarest Archiver

**ಅರ್ಥ :–** ಸಮುದ್ರದ ಮಧ್ಯದಲ್ಲಿರುವ ಯಾರನ್ನು ಕವಿಗಳು (ಜ್ಞಾನಿಗಳು) ಸ್ವಲ್ಪ ಮಾತ್ರ ತಿಳಿದುಕೊಂಡಿರುವರೋ, ನಿತ್ಯನಾದ ಯಾರಲ್ಲಿ ಎಲ್ಲ ಪ್ರಜೆಗಳು ಅಧೀನರಾಗಿರುವರೋ, ಜಗತ್ತನ್ನೇ ಹಡೆಯುವ ಸ್ವತಃ ಲಕ್ಷ್ಮೀ ದೇವಿಯೇ ಯಾರಿಂದ ಹುಟ್ಟಿರುವಳೋ, ( ನಿತ್ಯಳಾದ ಲಕ್ಷ್ಮೀ ದೇವಿಗೆ ಯಾರು ಜಗತ್ತನ್ನು ಸೃಷ್ಟಿಸುವ ಇಚ್ಛೆ ಹಾಗೂ ಸಾಮರ್ಥ್ಯಗಳನ್ನು ಅನುಗ್ರಹಿಸುವನೋ) ಯಾರು ತನ್ನ ಅಪ್ರತಿಮ ಸಾಮರ್ಥ್ಯದಿಂದ (ತೋಯೇನ) ಅವರವರ ಕರ್ಮ ಯೋಗ್ಯತೆಗಳಿಗನುಗುಣವಾಗಿ (ತೋಯೇನ) ಜೀವರನ್ನು ಭೂಮ್ಯಾದಿಲೋಕಗಳಲ್ಲಿ ಸೃಷ್ಟಿ ಮಾಡಿರುವನೋ, ಯಾರು ಸಸ್ಯಜೀವಿಗಳಲ್ಲಿ, ಮನುಷ್ಯಜೀವಿಗಳಲ್ಲಿ ಪಶುಜೀವಿಗಳಲ್ಲಿ ಹಾಗೂ ಎಲ್ಲ ಚರ ಅಚರ ಭೂತಗಳಲ್ಲಿ ಅವುಗಳನ್ನು ನಿಯಮನ ಮಾಡುವದಕ್ಕೋಸ್ಕರ ಪ್ರವೇಶಿಸುವನೋ, ಯಾರಿಗಿಂತ ಉತ್ತಮವಾದದ್ದು ಇನ್ನೊಂದಿಲ್ಲವೋ, ಯಾರಿಗಿಂತ ಪರಮಸೂಕ್ಷ್ಮ-ವಾದದ್ದು ಇನ್ನೊಂದಿಲ್ಲವೆಂದು ಕವಿಗಳು (ಜ್ಞಾನಿಗಳು) ಹೇಳುವರೋ, ಯಾರು ಸರ್ವೋತ್ಕೃಷ್ಟನೂ, ಮಹತ್ತಿಗಿಂತಲೂ ಮಹತ್ತರನಾದವನೆಂದು ಕವಿಗಳು ಹೇಳುವರೋ, ಯಾರು ಕೇವಲ ಅತೀಂದ್ರಿಯನು, ವಿಶ್ವವ್ಯಾಪಿಯೂ, ಪೂರ್ಣನೂ, ಅನಾದಿನಿತ್ಯನೂ ಅಗಿರುವನೋ, ಯಾರು ಪ್ರಕೃತಿಯನ್ನು ಮೀರಿದವನೋ, ಯಾರು ಅಜ್ಞಾನವನ್ನು ಮೀರಿದವನಿರುವನೋ, ಯಾರು ಯಥಾರ್ಥಜ್ಞಾನರೂಪನು ಹಾಗೂ ಜ್ಞಾನಪೂರ್ವಕ ಕ್ರಿಯಾವಿಶಿಷ್ಟನು ಎಂದು ಜ್ಞಾನಿಗಳು ಹೇಳುವರೋ ಅವನೇ ಜ್ಞಾನಿಗಳು ಹೇಳುವ ಪರಮ ಬ್ರಹ್ಮವು.

*ಶ್ರುತ್ಯರ್ಥಷಟ್ಪದಿ*ಯಲ್ಲಿ ಈ ಶ್ರುತಿಯ ಭಾವವು ಹೀಗೆ ;

*ಉದಧಿಯೊಳಗಿಹನರಿಯುರಿಯುದಿಪ್ಪರು*
*ಮೊದಲ ತುದಿವರೆಗಾವ ಜ್ಞಾನಿಗ–*
*ಳಿದಿರು ನಿಲ್ಲದಲಿವಗಧೀನರು ಪ್ರಜೆಗಳಕ್ಷರಗೆ,*
*ಉದಧಿಸುತೆ ಜಗದಮ್ಮನಾವನ*
*ಮುದದಿ ಜಾತಳು, ಸಕಲ ಜೀವರ–*
*ನುದರದಿಂದಲಿ ತೆಗೆದು ಭುವಿಯೊಳಗಾವನಿಟ್ಟಿಹನು,* ॥

*ಆವ ಪೊಕ್ಕಿಹ ಸಸ್ಯಪಶುನರ–*
*ಜೀವರಾದಿಗಳೊಳಗೆ ನಿಯಮಿಪ*
*ಭಾವದಿಂದಿವಗಿಹುದು ವಶದೊಳ್ ಜಗ ಚರಾಚರವು;*
*ಆವ ಸೂಕ್ಷ್ಮರೊಳಗತಿಯೆ ಸೂಕ್ಷ್ಮನು,*
*ಆವನೆಲ್ಲರಿಗಿಂತ ದೊಡ್ಡವ–*
*ನಾವ ಗೋಚರನಲ್ಲನಿಂದ್ರಿಯಕಾವ ಪೂರ್ಣನಿಹ,* ॥

Rarest Archiver

*ಆವ ವಿಶ್ವವ್ಯಾಪಿಯಾಗಿಹ–*
*ನಾವ ನಿತ್ಯನನಾದಿಯಿಪ್ಪನು,*
*ಆವನಪ್ರಾಕೃತನು, ಮೀರಿಹನಜ್ಞಭಾವನೆಗೆ,*
*ಆವನಿಹ ಸುಜ್ಞಾನರೂಪನು,*
*ಆವನಿಹ ಸುಜ್ಞಾನಸತ್ಕ್ರಿಯೆ–*
*ಕೋವಿದನು ತಾನಿವನೆ ಸಜ್ಜನವೇದ್ಯ ಪೂರುಷನು.* ॥

**೧೦೦. ಅಸ್ಯ ದೇವಸ್ಯ ಮೀಳ್ ಢುಷೋ ವಯಾ ವಿಷ್ಣೋರೇಷಸ್ಯ ಪ್ರಭೃಥೇ ಹವಿರ್ಭಿಃ ।ವಿದೇಹಿ ರುದ್ರೋ ರುದ್ರಿಯಂ ಮಹಿತ್ವಂ ಯಾಸಿಷ್ಟಂ ವರ್ತಿಃ ಅಶ್ವಿನಾವಿರಾವತ್॥**

**ಅನ್ವಯ ಮತ್ತು ಅರ್ಥ:–**

**ಮೀಳ್ಹುಷಃ** ಭಕ್ತಾಭೀಷ್ಟಪ್ರದನಾದ **ಏಷಸ್ಯ** ಸತ್ಯಕಾಮನಾದ **ಅಸ್ಯ** ಈ ಸರ್ವ ವಿದಿತನಾದ **ದೇವಸ್ಯ** ದ್ಯೋತನಾದಿಗುಣವಿಶಿಷ್ಟನಾದ (ಪ್ರಕಾಶಮಾನನಾದ) **ವಿಷ್ಣೋಃ** ವಿಷ್ಣುವಿನ **ಹವಿರ್ಭಿಃ** ಹವಿಸ್ಸುಗಳಿಂದ **ಪ್ರಭೃಥೇ** ಆರಾಧನೆ ಮಾಡಿದ ಮೇಲೆಯೇ **ವಯಾ** ಬಂಧಕನಾದ **ರುದ್ರಃ** ರುದ್ರನು **ರುದ್ರಿಯಂ** ರುದ್ರನಿಗಿರುವ **ಮಹಿತ್ವಂ** ಮಹಿಮೆಯನ್ನು **ವಿದೇಹಿ** ಪಡೆದಿರುವನು. **ಅಶ್ವಿನೌ** ಅಶ್ವಿನೀದೇವತೆಗಳೇ, ನೀವೂ ಕೂಡ **ಇರಾವತ್** ಅನ್ನವಿರುವ **ವರ್ತಿಃ** ಸ್ಥಾನವನ್ನು (ವಿಷ್ಣೋಃ ಹವಿರ್ಭಿಃ ವಿಷ್ಣುವಿಗೆ ಹವಿಸ್ಸುಗಳನ್ನು ಸಮರ್ಪಿಸಿ ಆರಾಧನೆ ಮಾಡುವದರಿಂದಲೇ) **ಯಾಸಿಷ್ಟಮ್ (ಅಯಾಸಿಷ್ಟಮ್ ಸ್ಥ)** ಪಡೆದಿರುವಿರಿ.

**ಒಟ್ಟು ತಾತ್ಪರ್ಯ:** ರುದ್ರನು ರುದ್ರಪದವಿಯನ್ನೂ ಹಾಗೂ ಅಶ್ವಿನೀದೇವತೆಗಳು ತಮ್ಮ ಸಮೃದ್ಧಿ ಇರುವ ಸ್ಥಾನವನ್ನೂ (ಮತ್ತು ಉಳಿದ ಎಲ್ಲರೂ ತಮ್ಮ ತಮ್ಮ ಸ್ಥಾನಗಳನ್ನೂ ಕೂಡ) ವಿಷ್ಣುವಿನ ಅನುಗ್ರಹದಿಂದಲೇ ಪಡೆದಿರುವರು. ಶಕ್ರಾದಿ–ದೇವತೆಗಳೆಲ್ಲರೂ ವಿಷ್ಣುವಿನ ಅನುಗ್ರಹದಿಂದಲೇ ತಮ್ಮ ತಮ್ಮ ಪದವಿಗಳನ್ನೂ ಹಾಗೂ ಆ ಆ ಪದವಿಗಳಲ್ಲಿ ಸಮೃದ್ಧಿಯನ್ನೂ ಪಡೆದಿರುವರೆಂದಮೇಲೆ ವಿಷ್ಣುವೇ ಸರ್ವೋತ್ತಮನು ಎಂದು ಹೇಳಿದಂತಾಯಿತು.

ಈ ಶ್ರುತಿಯ ಭಾವವು *ಶ್ರುತ್ಯರ್ಥಷಟ್ಪದಿಯಲ್ಲಿ* ಹೀಗೆ;

*ಲಕುಮಿಪತಿಯನು ತೋಷಪಡಿಸಲು*
*ನಿಖಿಲ ದೇವತೆಗಳನು ತೊರೆಯುತ*
*ಮಖದೊಳಾಹುತಿಗಳನು ರುದ್ರನು ವಿಷ್ಣುಗೆನ್ನುತಲಿ,*

Rarest Archiver

*ವಿಕಲವಿಲ್ಲದೆ ಹಾಕಿ ಆತನ*
*ಸುಕೃಪೆ ಪಡೆಯುತ ರುದ್ರಪದವಿಯ*
*ಮುಖದಿ ಮಹಿಮೆಯ ಪಡೆದನೆಂಬುದನರಿವುದೆಂದಿಹರು. ॥*

*ಭಕುತಜನಕಾಮನೆಯ ಸುರಿಸುವ*
*ಅಖಿಲಕಾಮನೆಪೂರ್ಣ ವಿಷ್ಣುವು*
*ನಿಖಿಲಜಗದೊಳು ಸತ್ಯಕಾಮನು ವಿದಿತವೈಭವನು,*
*ವಿಕಲವಾಗದಲಿಂಥ ದೇವನ*
*ಸುಕೃಪೆ ಪಡೆದಿಹಿರೆಂದೆ ಅಶ್ವಿನಿ-*
*ಮುಖರೆ, ಸದ್ವೈಭವದ ತಾಣವ ಪಡೆದು ಸುಖಿಸುವಿರಿ. ॥*

*ಸಕಲರೀ ಶಕ್ರ್ಯಾದಿದಿವಿಜರು*
*ವಿಖನಸಾರ್ಚಿತನಾದ ಹರಿಯನು*
*ಸಕಲವಿಧದಿಂದರ್ಚನಾರಾಧನೆಯ ಗೈದುದರಿಂ*
*ವಿಕಲವಾಗದ ತಾಣ ಪಡೆದರು,*
*ಸುಖವ ಭೋಗಿಸುತಿಹರು ತಾಣದಿ,*
*ಸಕಲರೊಳಗುತ್ತಮನು ಹರಿಯೆಂದಿವರು ತಿಳಿಸಿಹರು. ॥*

೧೦೧. ಚಂದ್ರಮಾ ಮನಸೋ ಜಾತಃ ಚಕ್ಷೋಃ ಸೂರ್ಯೋ ಅಜಾಯತ ।
ಮುಖಾತ್ ಇಂದ್ರಶ್ಚಾಗ್ನಿಶ್ಚ ಪ್ರಾಣಾದ್ವಾಯುರಜಾಯತ ॥ ಪುರುಷಸೂಕ್ತ.

**ಅನ್ವಯ:–** (ಪರಮಪುರುಷಸ್ಯ) ಮನಸಃ ಚಂದ್ರಮಾಃ ಜಾತಃ । (ಪರಮಪುರುಷಸ್ಯ) ಚಕ್ಷೋಃ ಸೂರ್ಯಃ ಅಜಾಯತ । (ಪರಮಪುರುಷಸ್ಯ) ಮುಖಾತ್ ಇಂದ್ರಃ ಚ ಅಗ್ನಿಃ ಚ (ಅಜಾಯೇತಾವ್)।(ಪರಮಪುರುಷಸ್ಯ) ಪ್ರಾಣಾತ್ ವಾಯುಃ ಅಜಾಯತ॥

**ಅರ್ಥ:–** ಪರಮಪುರುಷನ ಮನಸ್ಸಿನಿಂದ ಚಂದ್ರನು ಹುಟ್ಟಿದನು. ಪರಮಪುರುಷನ ಕಣ್ಣಿನಿಂದ ಸೂರ್ಯನು ಹುಟ್ಟಿದನು. ಪರಮಪುರುಷನ ಮುಖದಿಂದ ಇಂದ್ರ ಮತ್ತು ಅಗ್ನಿ ಇವರು ಹುಟ್ಟಿದರು. ಆತನ ಪ್ರಾಣದಿಂದ ವಾಯುವು ಹುಟ್ಟಿದನು.

*ಶ್ರುತ್ಯರ್ಥಷಟ್ಪದಿಯಲ್ಲಿ* ಈ ಮಂತ್ರದ ಭಾವವು ಹೀಗೆ ;

*ಪರಮಪುರುಷನ ಚಿತ್ತಜಾತನು*
*ಪರಮಸುಂದರ ಕುಮುದಬಾಂಧವ,*
*ಪರಮಪುರುಷನ ಕಣ್ಣಿನಿಂದಲಿ ಸೂರ್ಯ ಪುಟ್ಟಿಹನು,*

Rarest Archiver

*ಸುರರ ಪತಿಯೂ ಜಾತವೇದನು*
*ಹರಿಯ ಮುಖದಿಂ ಜಾತರನಿಲನು*
*ಪರಮಪುರುಷಪ್ರಾಣಜಾತನು, ಪುರುಷಸೂಕ್ತವಿದು. ॥*

**೧೦೨. ಏಕೋ ನಾರಾಯಣ ಆಸೀತ್ ನ ಬ್ರಹ್ಮಾ ನೇಶಾನಃ ನಾಗ್ನೀಷೋಮೌ ನೇಮೇ ದ್ಯಾವಾಪೃಥಿವೀ ॥ (?)**

**ಅರ್ಥ:–** ಮಹಾಪ್ರಳಯದ ಕಾಲದಲ್ಲಿ ನಾರಾಯಣನೊಬ್ಬನೇ ಇದ್ದನು, ಬ್ರಹ್ಮನಿರಲಿಲ್ಲ, ರುದ್ರನಿರಲಿಲ್ಲ, ಅಗ್ನಿ ಇರಲಿಲ್ಲ, ಸೋಮನಿರಲಿಲ್ಲ, ಈ ಆಕಾಶ ಹಾಗೂ ಪೃಥಿವಿಗಳು ಇರಲಿಲ್ಲ.

ಟಿಪ್ಪಣಿ :– ಅಗ್ನೀಷೋಮೌ– ಅಗ್ನಿಶ್ಚ ಸೋಮಶ್ಚ ಅಗ್ನೀಷೋಮೌ (ದ್ವಂದ್ವ ಸಮಾಸ) ಎಂದು ವಿಗ್ರಹ. (ಸೂತ್ರ ಈತ್ ೬–೩–೨೭).

***ಶ್ರುತ್ಯರ್ಥಷಟ್ಪದಿ***ಯಲ್ಲಿ ಇದರ ಭಾವವು ಹೀಗೆ;

*ಪರಮಪುರುಷನೆ ಒಬ್ಬನಿದ್ದನು*
*ಸರುವಸೃಷ್ಟಿಗೆ ಮೊದಲು ಪ್ರಳಯದಿ,*
*ಸರುವಸೃಷ್ಟಿಗೆ ಕರ್ತನೆನ್ನುವ ಬೊಮ್ಮನೆಲ್ಲಿಹನು?*
*ಹರನು ಇಲ್ಲವು, ಅಗ್ನಿ ಇಲ್ಲವು,*
*ಪರಮಸುಂದರ ಸೋಮನೆಲ್ಲಿಹ?*
*ಇರವು ನಭಭುವಿ ಆವವಾಗಳೆ ಎಂದಿತಾಗಮವು. ॥*

**೧೦೩. ಏಕೋ ನಾರಾಯಣ ಆಸೀತ್ ನ ಬ್ರಹ್ಮಾ ನ ಚ ಶಂಕರಃ । ಸ ಮುನಿರ್ಭೂತ್ವಾ ಸಮಚಿಂತಯತ್ ತತ ಏತೇ ವ್ಯಜಾಯಂತ । ವಿಶ್ವೋ ಹಿರಣ್ಯಗರ್ಭೋಽಗ್ನಿಃ ಯಮೋ ವರುಣರುದ್ರೇಂದ್ರಾಃ ॥– ಶ್ರುತಿ (?)**

**ಅರ್ಥ:–** ಪ್ರಳಯಕಾಲದಲ್ಲಿ ನಾರಾಯಣನೊಬ್ಬನೇ ಇದ್ದನು. ಬ್ರಹ್ಮನಾಗಲಿ, ಶಂಕರನಾಗಲಿ ಇರಲಿಲ್ಲ. ಆ ನಾರಾಯಣನು ಮೌನದಿಂದ ಕುಳಿತು (ಸೃಷ್ಟಿ ಮಾಡ–ಬೇಕೆಂದು) ಆಲೋಚನೆ ಮಾಡಿದನು. ಆ ಬಳಿಕ ಈ ವಾಯುವು (ವಿಶ್ವಃ), ಬ್ರಹ್ಮನು, ಅಗ್ನಿಯು, ಯಮನು, ವರುಣನು, ರುದ್ರನು, ಇಂದ್ರನು ಹುಟ್ಟಿದರು.

**ವಿಶೇಷ ವಿಷಯಗಳು :–** ಮುನಿ ಎಂದರೆ ಮನನಶೀಲನೆಂಬರ್ಥವಲ್ಲ. ಮುನಿಃ ಮೌನೀ ಎಂದು ಟೀಕೆ. **ಹಿರಣ್ಯಗರ್ಭ= ಹಿರಣ್ಯಂ ಹೇಮಮಯಾಂಡಂ ಗರ್ಭಃ ಉತ್ಪತ್ತಿಸ್ಥಾನಂ ಅಸ್ಯ ।** ಇದಕ್ಕೆ ಪ್ರಮಾಣ– **ಸೋಽಭಿಧ್ಯಾಯ ಶರೀರಾತ್ ಸ್ವಾತ್**

Rarest Archiver

**ಸಿಸೃಕ್ಷುಃ ವಿವಿಧಾಃ ಪ್ರಜಾಃ । ಅಪ ಏವ ಸಸರ್ಜಾದೌ ತಾಸು ವೀರ್ಯಂ ಅವಾಸೃಜತ್ ॥ ತದಂಡಂ ಅಭವತ್ ಹೈಮಂ ಸಹಸ್ರಾಂಶುಸಮಪ್ರಭಮ್ । ತಸ್ಮಿನ್ ಜಜ್ಞೇ ಸ್ವಯಂ ಬ್ರಹ್ಮಾ ಸರ್ವಲೋಕಪಿತಾಮಹಃ ॥– *(ಮನುಸ್ಮೃತಿ ೧–೮,೯).*** ಆ ಪರಮಪುರುಷನು ಮೌನದಿಂದ ವಿಚಾರ ಮಾಡಿ ತನ್ನ ಶರೀರದಿಂದಲೇ ವಿವಿಧ ಪ್ರಜೆಗಳನ್ನು ಸೃಷ್ಟಿಸಬೇಕೆಂಬ ಅಪೇಕ್ಷೆಯುಳ್ಳವನಾಗಿ ಮೊಟ್ಟಮೊದಲಿಗೆ ಜಲವನ್ನು ಸೃಷ್ಟಿಸಿದನು. ಆ ಜಲರಾಶಿಯಲ್ಲಿ ತನ್ನ ವೀರ್ಯವನ್ನು ಇಟ್ಟನು. ಅದರಿಂದ ಸೂರ್ಯನಂತೆ ಹೊಳೆಯುವ ಬಂಗಾರದ ಅಂಡವು ಆಯಿತು. ಅದರಿಂದ ಲೋಕವನ್ನು ಸೃಷ್ಟಿಸುವ ಬ್ರಹ್ಮನು ಹುಟ್ಟಿ ಬಂದನು.

ಈ ಶ್ರುತಿಯ ಭಾವವು ***ಶ್ರುತ್ಯರ್ಥಷಟ್ಪದಿ***ಯಲ್ಲಿ ಹೀಗೆ:–

*ಜಗದ ಸೃಷ್ಟಿಗೆ ಮೊದಲು ಒಬ್ಬನೆ*
*ಸುಗುಣ ನಾರಾಯಣನು ಇರೆ ನಾ–*
*ಲ್ಮೊಗನು ಶಂಕರರಾರು ತಾವಿರದಿರಲು ಮೌನದೊಳು*
*ಜಗವ ಸೃಜಿಸುವ ಮನವ ಮಾಡಲು*
*ಮಗುಳೆ ತಾವೀ ವಾಯು ಬೊಮ್ಮರು*
*ಜಗದಿ ಜಾತರು ಯಮನು, ವರುಣೇಶ್ವರರು, ಸಗ್ಗೇಶ . ॥*

**೧೦೪. ವಾಸುದೇವೋ ವಾ ಇದಮಗ್ರ ಆಸೀತ್ ನ ಬ್ರಹ್ಮಾ ನ ಚ ಶಂಕರಃ ।**
**ನೇಂದ್ರಸೂರ್ಯೌ ನ ಚ ಗುಹೋ ನ ಸೋಮೋ ನ ವಿನಾಯಕಃ ॥**
**–*(ಶ್ರುತಿ)***

**ಅರ್ಥ:–** ಈ ಜಗದ ಸೃಷ್ಟಿಗೆ ಮೊದಲು (ಇದಮಗ್ರೇ) ವಾಸುದೇವನೊಬ್ಬನೇ ಇದ್ದನು; ಬ್ರಹ್ಮನಾಗಲಿ, ಶಂಕರನಾಗಲಿ, ಇಂದ್ರ ಸೂರ್ಯರಾಗಲಿ, ಗುಹನಾಗಲಿ (ಗುಹತಿ ದೇವಸೇನಾಂ ಇತಿ ಗುಹಃ ಷಣ್ಮುಖಃ, ಗುಹ್ ಸಂವರಣೇ), ಸೋಮನಾಗಲಿ, ವಿನಾಯಕನಾಗಲಿ ಯಾರೂ ಇರಲಿಲ್ಲ.

***ಶ್ರುತ್ಯರ್ಥಷಟ್ಪದಿ***ಯಲ್ಲಿ ಇದರ ಭಾವವು ಹೀಗೆ;

*ವಾಸುದೇವನು ಒಬ್ಬನಿದ್ದನು*
*ಈ ಸಮಸ್ತದ ಜಗದ ಮೊದಲಿಗೆ*
*ಸೂಸಿ ನೋಡಲು ಬೊಮ್ಮ ಶಂಕರರಾರು ತಾವಿಲ್ಲ,*
*ವಾಸವನು ತಾನಿಲ್ಲ ರವಿ ಗುಹ*
*ಓಷಧೀಶನು ಸೋಮನಿಲ್ಲವು*
*ಈಶಸುತ ವಿಘ್ನಾಧಿರಾಜನು ಮೊದಲು ತಾನಿಲ್ಲ. ॥*

Rarest Archiver

**೧೦೫. ಯಸ್ಮಾತ್ ಪರಂ ನಾಪರಮಸ್ತಿ ಕಿಂಚಿತ್ ಯಸ್ಮಾನ್ನಾಣೀಯೋ ನ ಜ್ಯಾಯೋಽಸ್ತಿ ಕಿಂಚಿತ್ । ವೃಕ್ಷ ಇವ ಸ್ತಬ್ಧೋ ದಿವಿ ತಿಷ್ಠತ್ಯೇಕಃ ತೇನೇದಂ ಪೂರ್ಣಂ ಪುರುಷೇಣ ಸರ್ವಮ್ ॥–**

**ಶ್ವೇತಾಶ್ವತರೋಪನಿಷತ್ ೩–೯, ಮಹಾನಾರಾಯಣೋಪನಿಷತ್ ೮–೧೩**

**ಅನ್ವಯ :–ಯಸ್ಮಾತ್ ಪರಂ (ವಸ್ತು) ನ ಅಸ್ತಿ ಯಸ್ಮಾತ್ ಅಪರಂ (ವಸ್ತು) ಅಸ್ತಿ ಯಸ್ಮಾತ್ ಅಣೀಯಃ ಕಿಂಚಿತ್ ನ, ಯಸ್ಮಾತ್ ಜ್ಯಾಯಃ ಕಿಂಚಿತ್ ನ , (ಯಃ ಪುರುಷಃ) ಏಕಃ ಏವ ವೃಕ್ಷಃ ಇವ ಸ್ತಬ್ಧಃ ದಿವಿ ತಿಷ್ಠತಿ ತೇನ ಪುರುಷೇಣ ಇದಂ ಸರ್ವಂ ಪೂರ್ಣಮ್ ।**

**ಅರ್ಥ:–** ಯಾವುದಕ್ಕಿಂತ ಉತ್ತಮವಾದುದು ಇನ್ನೊಂದು ಇಲ್ಲವೋ, ಯಾವುದಕ್ಕಿಂತ ಕನಿಷ್ಠವಾದುದು ಇನ್ನೊಂದು ಇದೆಯೋ, ಯಾವುದಕ್ಕಿಂತ ಸೂಕ್ಷ್ಮವಾದುದು ಯಾವದೂ ಇಲ್ಲವೋ, ಯಾವುದಕ್ಕಿಂತ ದೊಡ್ಡದಾದುದು ಯಾವದೂ ಇಲ್ಲವೋ, ಯಾವ ಪುರುಷನು ಗಿಡದಂತೆ ಸ್ತಬ್ಧವಾಗಿ ಒಬ್ಬನೇ ಆಕಾಶದಲ್ಲಿ ಪ್ರಕಾಶಮಾನನಾಗಿ ಇರುವನೋ, ಅಂಥ ಆ ಪುರುಷನಿಂದ **ಇದು** (ಈ ಸಮಸ್ತ ವಿಶ್ವವು) ವ್ಯಾಪಿಸಲ್ಪಟ್ಟಿದೆ.

**ವಿಶೇಷ ವಿಷಯಗಳು :–** ಬ್ರಹ್ಮ ಒಂದೇ ಸತ್ಯ, ಉಳಿದುದೆಲ್ಲವೂ ಮಿಥ್ಯೆ ಎಂದು ಹೇಳುವ ಪ್ರತಿವಾದಿಗಳು ಈ ಉಪನಿಷದ್ವಾಕ್ಯದಿಂದ (ಯಸ್ಮಾತ್ ಪರಂ ಅಪರಂ ನ ಕಿಂಚಿತ್ ಅಸ್ತಿ ಎಂದು ಅನ್ವಯ ಮಾಡಿ) ಯಾರಿಗಿಂತಲೂ ಶ್ರೇಷ್ಠವಾದುದು ಮತ್ತು ಕನಿಷ್ಠವಾದುದು ಯಾವದೂ ಇಲ್ಲವೋ ಎಂದು ಅರ್ಥ ಮಾಡಿ ತಮ್ಮ ಮತಕ್ಕೆ ಇದು ಆಧಾರವಾಗಿದೆ ಎಂದು ವಾದಿಸುತ್ತಾರೆ. ಆದರೆ ಇದು ಅಸಂಗತ. ಏಕೆಂದರೆ ಇದೇ ಮಂತ್ರದಲ್ಲಿ ಮುಂದೆಯೇ **ಎಲ್ಲವೂ** ಆ ಪುರುಷನಿಂದ ಪೂರ್ಣವಾಗಿದೆ ಎಂದು ಹೇಳಿರುವದರಿಂದ ಅವನಿಂದ ಬೇರೆಯದಾದ ಇನ್ನೊಂದು ವಸ್ತುವು ಇದೆ ಎಂದೇ ಹೇಳಿದಂತಾಯಿತು. ಇನ್ನೊಂದು ವಸ್ತುವೇ ಇರದಿದ್ದರೆ ಪುರುಷನಿಂದ ಯಾವದು ವ್ಯಾಪಿಸಲ್ಪಡಬೇಕು ? ಆ ಇನ್ನೊಂದು ವಸ್ತುವು ಇವನಿಂದ ವ್ಯಾಪಿಸಲ್ಪಟ್ಟು ಅವನ ಅಧೀನದಲ್ಲಿ ಇದೆ ಎಂಬ ಅರ್ಥವು ಲಭಿಸುವದು. (ಒಬ್ಬ ರಾಜನು ಆ ಎಲ್ಲ ಪ್ರದೇಶದಲ್ಲಿ ಸಂಪೂರ್ಣವಾಗಿ ವ್ಯಾಪಿಸಿದ್ದಾನೆ ಎಂದರೆ ಆ ಪ್ರದೇಶದಲ್ಲಿ ಅವನ ನಿರಂಕುಶ ಪ್ರಭುತ್ವವಿದೆ ಮತ್ತು ಆ ಪ್ರದೇಶವು ಅವನ ಅಧೀನದಲ್ಲಿದೆ ಎಂಬರ್ಥವೇ ಬರುವಂತೆ). ಇದಂ ಪೂರ್ಣಂ ಎಂದು ಇದಂ ಎಂದು ನಿರ್ದೇಶಿಸಿದ್ದರಿಂದ ಈ ಪದದಿಂದ ನಿರ್ದೇಶಿಸಲ್ಪಟ್ಟ ವಿಶ್ವವು ಪ್ರಮಾಣಪ್ರಮಿತವೆಂದು ಹೇಳಿದಂತಾಯಿತು. ಆದ ಕಾರಣ ಈ ಮಂತ್ರವು ಪ್ರತಿವಾದಿಗಳ ಮತಕ್ಕೆ ಆಧಾರವಾಗದೇ ಬ್ರಹ್ಮ ಸತ್ಯ, ವಿಶ್ವ ಸತ್ಯ, ಬ್ರಹ್ಮ ಸರ್ವೋತ್ತಮ ತತ್ವ, ಉಳಿದುದೆಲ್ಲವೂ ಸರ್ವೋತ್ತಮವಾದ ಬ್ರಹ್ಮನ ಅಧೀನವಾಗಿದೆ ಎಂಬ ಶ್ರೀಮದಾಚಾರ್ಯರ ಮತಕ್ಕೆ ಆಧಾರವಾಗಿದೆ ಎಂದು

Rarest Archiver

ಸ್ಪಷ್ಟವಾಗುವದು. ಈ ಕೆಳಗೆ ಕೊಡಲ್ಪಟ್ಟ ಉಪನಿಷತ್ತಿನ ಮುಂದಿನ ಮಂತ್ರವೂ ಕೂಡ ಇದನ್ನೇ ಸಮರ್ಥಿಸುವದು.

*ಶ್ರುತ್ಯರ್ಥಷಟ್ಪದಿಯಲ್ಲಿ* ಈ ಶ್ರುತಿಯ ಭಾವವು ಹೀಗೆ :–

*ಪರಮಪುರುಷನಗಿಂತ ಉತ್ತಮ–*
*ವಿರದು ಯಾವುದು, ಅಧಮವೆಲ್ಲವು,*
*ಪರಮಪುರುಷನಿಗಿಂತ ದೊಡ್ಡದು ಸೂಕ್ಷ್ಮ ಬೇರಿಲ್ಲ.*
*ಪರಮಪುರುಷನು ನಿತ್ಯನಿಪ್ಪನು*
*ತರುವಿನಂತೆಯೆ ನಿಂತು ಪೊಳೆವನು,*
*ಸರುವವನ್ನವು ಈತನಿಂದಲೆ ಪೂರ್ಣವಾಗಿಹುದು. ॥*

೧೦೬. ತತೋ ಯದುತ್ತರತರಂ ತದರೂಪಂ ಅನಾಮಯಮ್ । ಯ ಏತದ್ವಿದುಃ ಅಮೃತಾಃ ತೇ ಭವಂತಿ ಅಥ ಇತರೇ ದುಃಖಂ ಏವ ಆಪಿಯಂತಿ ॥

*–ಶ್ವೇತಾಶ್ವತರೋಪನಿಷತ್ –೩.೧೦*

**ಅರ್ಥ:–** (ತತಃ = ) ಇದಂ ಎಂದು ಹಿಂದಿನ ಮಂತ್ರದಲ್ಲಿ ನಿರ್ದೇಶಿಸಲ್ಪಟ್ಟ ವಿಶ್ವದಕಿಂತ ಯಾವದು (ಉತ್ತರತರಂ) ಅತ್ಯಂತ ಶ್ರೇಷ್ಠವಾಗಿದೆಯೋ ಅದು ಪ್ರಾಕೃತರೂಪರಹಿತ–ವಾಗಿದೆ ಹಾಗೂ ದೋಷದೂರವಾಗಿದೆ. ಯಾರು ಈ ಅಲೌಕಿಕವಾದ ಬ್ರಹ್ಮನನ್ನು ತಿಳಿದುಕೊಳ್ಳುವರೋ ಅವರು ಮೃತ್ಯುವನ್ನು (ಭವಬಂಧನವನ್ನು) ದಾಟುತ್ತಾರೆ. ಉಳಿದವರು ಮಾತ್ರ ಸಂಸಾರದ ದುಃಖವನ್ನೇ ಹೊಂದುತ್ತಾರೆ.

*ಶ್ರುತ್ಯರ್ಥಷಟ್ಪದಿಯಲ್ಲಿ* ಈ ಶ್ರುತಿಯ ಭಾವವು ಹೀಗೆ :–

*ಸರುವ ವಿಶ್ವದಗಿಂತ ಉತ್ತಮ*
*ಪರಮಪುರುಷನೆ ಜಗವಿಲಕ್ಷಣ,*
*ನಿರುತ ನಿರ್ಮಲ ರೂಪಿ, ಈತನನರಿದು ಸುಖಿಸುವುದು.*
*ಪರಮ ಪುರುಷನನರಿತ ಮನುಜರು*
*ಪರಮ ಧನ್ಯರು, ಮುಕುತಿ ಪಡೆವರು,*
*ಅರಿಯದಿಪ್ಪರು ನಿರುತ ದುಃಖಿಗಳೆಂದು ನಿಗಮೋಕ್ತಿ. ॥*

೧೦೭. ತೇನೇದಂ ಪೂರ್ಣಂ ಪುರುಷೇಣ ಸರ್ವಂ ॥

*ಉದಾಹೃತವಾದ ಈ ಶ್ರುತಿಯ ಸಂಪೂರ್ಣಪಾಠ ಹೀಗೆ:* ಯಸ್ಮಾತ್ ಪರಂ ನಾಪರಮಸ್ತಿ ಕಿಂಚಿತ್ ಯಸ್ಮಾನ್ನಾಣೀಯೋ ನ ಜ್ಯಾಯೋಽಸ್ತಿ ಕಿಂಚಿತ್ । ವೃಕ್ಷ ಇವ ಸ್ತಬ್ಧೋ ದಿವಿ ತಿಷ್ಠತ್ಯೇಕಃ ತೇನೇದಂ ಪೂರ್ಣಂ ಪುರುಷೇಣ ಸರ್ವಮ್ ॥ ತೇನೇದಂ ಪೂರ್ಣಂ ಪುರುಷೇಣ ಸರ್ವಂ ॥– *ಶ್ವೇತಾಶ್ವತರೋಪನಿಷತ್ ೩–*

Rarest Archiver

*೯,ಮಹಾನಾರಾಯಣೋಪನಿಷತ್ ೮–೧೩*

ಅನ್ವಯ ಹಾಗೂ ಅರ್ಥಗಳು ಮೇಲೆಯೇ ಹೇಳಲ್ಪಟ್ಟಿವೆ.

**೧೦೮. ನಾಮಾನಿ ಸರ್ವಾಣಿ ಯಮಾವಿಶಂತಿ ತಂ ವೈ ವಿಷ್ಣುಂ ಪರಮಂ ಉದಾಹರಂತಿ ॥ –ಶ್ರುತಿಃ(?)**

**ಅರ್ಥ:–** ಎಲ್ಲ ವೈದಿಕ ಪದಗಳೂ ಯಾರನ್ನು ಪರಮಮುಖ್ಯವೃತ್ತಿಯಿಂದ ಬೋಧಿಸುತ್ತವೆಯೋ ಅವನನ್ನೇ ಸರ್ವೋತ್ತಮನಾದ ವಿಷ್ಣುವು ಎಂದು ಹೇಳುತ್ತಾರೆ.

**ವಿಶೇಷ ವಿಷಯಗಳು :–** ವೈದಿಕ ಶಬ್ದಗಳು ನಾಲ್ಕು ವಿಧವಾಗಿವೆ. ತತ್ರಪ್ರಸಿದ್ಧ (ಪರಮಾತ್ಮನಲ್ಲಿಯೇ ಪ್ರಸಿದ್ಧವಾದವುಗಳು), ಅನ್ಯತ್ರಪ್ರಸಿದ್ಧ (ಪರಮಾತ್ಮನನ್ನು ಬಿಟ್ಟು ಬೇರೆಯವರಲ್ಲಿ ಪ್ರಸಿದ್ಧವಾದವುಗಳು), ಉಭಯತ್ರಪ್ರಸಿದ್ಧ (ಪರಮಾತ್ಮನಲ್ಲಿಯೂ ಹಾಗೂ ಬೇರೆಯವರಲ್ಲಿಯೂ ಪ್ರಸಿದ್ಧವಾದವುಗಳು) ಹಾಗೂ ಅನ್ಯತ್ರೈವಪ್ರಸಿದ್ಧ (ಪರಮಾತ್ಮನನ್ನು ಬಿಟ್ಟು ಬೇರೆಯವರಲ್ಲಿಯೇ ಪ್ರಸಿದ್ಧವಾದವುಗಳು) ಎಂಬವೇ ಆ ನಾಲ್ಕು ವಿಧ. ಈ ಪ್ರತಿಯೊಂದು ಪ್ರಕಾರದ ಶಬ್ದಗಳೂ ಕೂಡ ನಾಮಾತ್ಮಕ ಹಾಗೂ ಲಿಙ್ಗಾತ್ಮಕ ಎಂದು ಎರಡುವಿಧದವುಗಳಾಗಿರುತ್ತವೆ. ಇವುಗಳಲ್ಲಿ ತತ್ರಪ್ರಸಿದ್ಧಶಬ್ದಗಳು ಪರಮಾತ್ಮನನ್ನು ಬೋಧಿಸುತ್ತವೆ ಎಂಬುದನ್ನು ಪ್ರತ್ಯೇಕವಾಗಿ ಹೇಳುವ ಅವಶ್ಯಕತೆ ಇಲ್ಲ. ಆದರೆ ಉಳಿದ ಮೂರು ಪ್ರಕಾರದ ಶಬ್ದಗಳೂ ಕೂಡ ಪರಮಮುಖ್ಯವೃತ್ತಿಯಿಂದ ಪರಮಾತ್ಮನನ್ನೇ ಬೋಧಿಸುತ್ತವೆ ಎಂಬುದನ್ನು ಶ್ರೀ ವೇದವ್ಯಾಸರೇ ಬ್ರಹ್ಮಸೂತ್ರದಲ್ಲಿ ಮೊದಲನೆಯ ಅಧ್ಯಾಯದಲ್ಲಿ ವಿವರಿಸಿದ್ದಾರೆ. ಪ್ರಸ್ತುತ ಶ್ರುತಿ ವಾಕ್ಯವು ಈ ವಿಷಯವನ್ನೇ ಪ್ರತಿಪಾದಿಸುತ್ತದೆ. ಈ ಎಲ್ಲ ಪದಗಳಿಂದ ವಿಷ್ಣುವೇ ಸರ್ವೋತ್ತಮನೆಂದು ಹೇಳಲ್ಪಟ್ಟಿದೆ ಎಂದು ತಾತ್ಪರ್ಯವು.

ಈ ಶ್ರುತಿಯ ಭಾವವು ***ಶ್ರುತ್ಯರ್ಥಷಟ್ಪದಿ*** ಯಲ್ಲಿ ಹೀಗೆ:–

*ಸರುವ ವೈದಿಕ ಶಬ್ದರಾಶಿಯು*
*ಪರಮಮುಖ್ಯವೃತ್ತಿಯಿಂದಲಿ*
*ಪರಮಪುರುಷನು ವಿಷ್ಣು ಎಂತಲೆ ನಿಗಮ ತಿಳಿಸುತಿವೆ.*
*ಸರುವ ಕಾಲದಿ ಸರುವ ದೇಶದಿ*
*ಸರುವ ಗುಣದಿಂ ವ್ಯಾಪ್ತನೆಂತಲೆ*
*ಸರುವರೊಳಗುತ್ತಮನು ವಿಷ್ಣುವೆ ಎಂದು ನಿಗಮಾರ್ಥ. ॥*

**೧೦೯. ಅಸ್ಯೈವ ಸರ್ವನಾಮಾನಿ ವ್ಯತಿರಿಕ್ತಸ್ಯ ಸರ್ವತಃ । ಯಃ ಸ್ವತಂತ್ರಃ ಸದೈವೇಕಃ ಸ ವಿಷ್ಣುಃ ಪರಮೋ ಮತಃ ॥ –*ಶ್ರುತಿಃ(?)***

Rarest Archiver

**ಅರ್ಥ:–** ಎಲ್ಲದರಕಿಂತಲೂ ಪರಮ ವಿಲಕ್ಷಣನಾದ ಈತನನ್ನೇ ಎಲ್ಲ ನಾಮಗಳು ಪರಮಮುಖ್ಯವೃತ್ತಿಯಿಂದ ಬೋಧಿಸುವವು. ಇಂಥ ಈ ಯಾರು ಒಬ್ಬನೇ ಯಾವಾಗಲೂ ಒಂದೇ ರೀತಿಯಿಂದ ಇರುವವನೂ, ಸ್ವತಂತ್ರನೂ ಆಗಿರುವನೋ ಅವನೇ ಸರ್ವೋತ್ತಮನಾದ ವಿಷ್ಣುವು ಎಂದು ತಿಳಿಯಲ್ಪಡುವನು.

ಈ ಶ್ರುತಿಯ ಭಾವವು ***ಶ್ರುತ್ಯರ್ಥಷಟ್ಪದಿ*** ಯಲ್ಲಿ ಹೀಗೆ:–

*ಎಲ್ಲ ಪದಗಳು ಜಗವಿಲಕ್ಷಣ–*
*ಗೆಲ್ಲ ಕಾಲದಲೇಕರೀತಿಯ–*
*ಲೆಲ್ಲರನು ತಾ ತನ್ನ ತಂತ್ರದೊಳಿಟ್ಟುಕೊಂಡಿಹನು,*
*ಎಲ್ಲ ಗುಣಗಳಿಗಿವನೆಯಾಗರ,*
*ಎಲ್ಲ ದೇಶದಲಿಪ್ಪ, ನಿತ್ಯನು*
*ಎಲ್ಲರೊಳಗುತ್ತಮನೆ ಈತನು ವಿಷ್ಣು ಪರಮಾತ್ಮ.* ॥

**೧೧೦. ಉತ್ಪತ್ತಿಃ ವಾಸುದೇವಸ್ಯ ಪ್ರಾದುರ್ಭಾವೋ ನ ಚಾಪರಃ ।**
**ದೇಹೋತ್ಪತ್ತಿಃ ತದನ್ಯೇಷಾಂ ಬ್ರಹ್ಮಾದೀನಾಂ ತದೀರಣಾತ್ ॥**
**ದೇಹೋಽನಾದಿಃ ಹರೇರ್ನಿತ್ಯೋ ಬ್ರಹ್ಮಾದೀನಾಮನಿತ್ಯಕಾಃ ।**
**ಮುಖ್ಯೋತ್ಪತ್ತಿಃ ತದನ್ಯೇಷಾಂ ಪ್ರಾದುರ್ಭಾವೋ ಹರೇಃ ಜನಿಃ ॥**

*–ಪರಮಶ್ರುತಿಃ (?)*

**ಅರ್ಥ:–** ವಾಸುದೇವನಿಗೆ (ವಿಷ್ಣುವಿಗೆ) ಪ್ರಾದುರ್ಭಾವವೆಂಬುದೇ ಉತ್ಪತ್ತಿಯೇ ಹೊರತು ದೇಹದ ಉತ್ಪತ್ತಿಯೆಂಬ ಬೇರೆ ರೀತಿಯ ಉತ್ಪತ್ತಿಯಲ್ಲ. ವೇದಗಳಲ್ಲಿ ಅವನನ್ನು ಹೊರತು ಪಡಿಸಿ ಬ್ರಹ್ಮಾದಿಗಳಿಗೆ ದೇಹೋತ್ಪತ್ತಿಯೆಂದು ಹೇಳಿದೆ. ಶ್ರೀ ಹರಿಯ ದೇಹವು ಅನಾದಿಯೂ ನಿತ್ಯವೂ ಆಗಿರುವದು. ಬ್ರಹ್ಮಾದಿಗಳ ದೇಹ ಮಾತ್ರ ಅನಿತ್ಯವಾಗಿರುವವು. ಶ್ರೀ ಹರಿಯನ್ನು ಬಿಟ್ಟು ಉಳಿದವರಿಗೆ ದೇಹಯೋಗವೆಂಬ ಮುಖ್ಯ ಉತ್ಪತ್ತಿಯು ಹೇಳಲ್ಪಟ್ಟಿರುವದು. ಶ್ರೀ ಹರಿಗೆ ಮಾತ್ರ ಪ್ರಾದುರ್ಭಾವವೇ ಉತ್ಪತ್ತಿಯು. ಹೀಗೆ ಪರಮಶ್ರುತಿಯು ಹೇಳುವದು.

ಈ ಶ್ರುತಿಯ ಭಾವವು ***ಶ್ರುತ್ಯರ್ಥಷಟ್ಪದಿ*** ಯಲ್ಲಿ ಹೀಗೆ:–

*ಸರುವರೊಳಗವತರಣಕೆಂಬರು*
*ಹರಿಗೆ ಜನುಮವು, ಬೇರೆಯಲ್ಲವು,*
*ಸರಸಿಜೋದ್ಭವನಾದಿ ಜೀವರ ತೆರದಿ ಜನಿಯಲ್ಲ.*
*ಹರಿಯ ದೇಹವನಾದಿನಿತ್ಯವು,*
*ನಿರುತ ಸುಖಸುಜ್ಞಾನರೂಪವು,*
*ನರಸುರಾಸುರದೇಹ ಯೋಗವು ಜನಿಯು ಇತರರಿಗೆ.* ॥

Rarest Archiver

**೧೧೧. ಗುಣಕ್ರಿಯಾದಯೋ ವಿಷ್ಣೋಃ ಸ್ವರೂಪಂ ನಾನ್ಯದಿಷ್ಯತೇ । ಅತೋ ಮಿಥೋऽಪಿ ಭೇದೋ ನ ತೇಷಾಂ ಕಶ್ಚಿತ್ಕದಾಚನ ॥ ಸ್ವರೂಪೇऽಪಿ ವಿಶೇಷೋऽಸ್ತಿ ಸ್ವರೂಪತ್ವವದೇವ ತು । ಭೇದಾಭಾವೇऽಪಿ ತೇನೈವ ವ್ಯವಹಾರಶ್ಚ ಸರ್ವತಃ ॥– *ಪರಮೋಪನಿಷತ್.***

**ಅರ್ಥ:–** ವಿಷ್ಣುವಿನ ಗುಣ ಕ್ರಿಯೆ ಜಾತ್ಯಾದಿಗಳು ಅವನ ಸ್ವರೂಪಭೂತವಾದವುಗಳೇ ಹೊರತು ಅವನಿಂದ ಬೇರೆಯಾಗಿಲ್ಲ.ಆದಕಾರಣ, ವಿಷ್ಣುವು, ಅವನ ಗುಣಕ್ರಿಯೆಜಾತ್ಯಾ–ದಿಗಳು – ಇವುಗಳಲ್ಲಿ ಯಾವ ಪ್ರಕಾರದ ಭೇದವಾಗಲಿ ಪರಸ್ಪರ ಭೇದವಾಗಲಿ ಯಾವ ಸಂದರ್ಭದಲ್ಲಿಯೂ ಎಂದೂ ಇರುವದಿಲ್ಲ. ಹೀಗೆ ಗುಣಕ್ರಿಯಾಜಾತಿಗಳು ಪರಮಾತ್ಮನ ಸ್ವರೂಪವೇ ಆಗಿ ಪರಸ್ಪರ ಭೇದವಿಲ್ಲದವುಗಳಾಗಿದ್ದರೂ ಕೂಡ ವ್ಯವಹಾರಕ್ಕಾಗಿ ಭೇದವನ್ನು ಹೇಳಲು ವಿಶೇಷವೆಂಬುದನ್ನು ಒಪ್ಪಿಕೊಳ್ಳುತ್ತೇವೆ. ಇದೂ ಕೂಡ ವಸ್ತುಸ್ವರೂಪವೇ ಆಗಿದೆ. ಸ್ವರೂಪ ಸ್ವರೂಪತ್ವವೆಂಬ ವ್ಯವಹಾರದಂತೆ (ಸ್ವರೂಪದಲ್ಲಿ ಸ್ವರೂಪತ್ವವು ಇದ್ದು ಅವೆರಡಲ್ಲಿಯೂ ಅಭೇದವೇ ಇರುವದು. ಹಾಗೆ ಇದ್ದರೂ ಕೂಡ ಸ್ವರೂಪ ಸ್ವರೂಪತ್ವ ಎಂದು ಎರಡು ಬೇರೆ ಬೇರೆ ಪದಗಳನ್ನು ಪ್ರಯೋಗಿಸಿ ಅಭೇದದಲ್ಲಿ ಭೇದವನ್ನು ಹೇಳುವಂತೆ) ಗುಣಕ್ರಿಯಾಜಾತ್ಯಾದಿಗಳು, ಪರಮಾತ್ಮ, ಇವರಲ್ಲಿ ಅಭೇದವೂ ಉಂಟು ಹಾಗೂ ಭೇದವೂ ಉಂಟು. ಭೇದ–ವಿರದಿದ್ದರೂ ಕೂಡ ವಿಶೇಷದ ಬಲದಿಂದ ಭೇದವ್ಯವಹಾರವನ್ನು ಮಾಡಬಹುದೆಂದು *ಪರಮೋಪನಿಷತ್ತಿನಲ್ಲಿ* ಹೇಳಲ್ಪಟ್ಟಿದೆ.

**ವಿಶೇಷ ವಿಷಯಗಳು :–** ಶ್ರೀಮದಾಚಾರ್ಯರು ಈಶ, ಜೀವ, ಜಡ ಈ ಮೂರುತತ್ವಗಳ ವಿಷಯದಲ್ಲಿ (ಗಣಿತಶಾಸ್ತ್ರದ ನಿಯಮದ ಪ್ರಕಾರ ಮೂರರಲ್ಲಿ ಎರಡೆರಡರಂತೆ ಒಟ್ಟು ಆರು ಯುನೀಕ್ ಆದ ಗುಂಪುಗಳನ್ನು ಮಾಡಬಹುದು. ಭೇದದ ವಿಷಯದಲ್ಲಿ ಈ ಮೂರು ತತ್ವಗಳಲ್ಲಿ ಎರಡೆರಡರಂತೆ ಹೀಗೆ ಗುಂಪುಗಳು ಆಗುವವು; ೧. ಜೀವ ಜೀವದ ಗುಂಪು, ೨. *ಜೀವ ಜಡದ ಗುಂಪು,* ೩. ಜೀವ ಈಶದ ಗುಂಪು, ೪. ಜಡ ಜಡದ ಗುಂಪು, ೫. *ಜಡ ಜೀವದ ಗುಂಪು,* ೬. ಜಡ ಈಶದ ಗುಂಪು, ಮತ್ತು, ೭. ಈಶ ಜೀವದ ಗುಂಪು, ೮. ಈಶ ಜಡದ ಗುಂಪು, ೯. ಈಶ ಈಶದ ಗುಂಪು. ಇವುಗಳಲ್ಲಿ ೬ ಮತ್ತು ೭ರ ಗುಂಪುಗಳು ೩ ಮತ್ತು ೬ರಲ್ಲಿ ಪರಿಗಣಿತವಾಗಿವೆ. ಮತ್ತು ಈಶನೊಬ್ಬನೇ ಇರುವದರಿಂದ ೯ನೆಯ ಗುಂಪನ್ನು ಪರಿಗಣಿಸುವದು ಅಸಾಧ್ಯ. ಹೀಗೆ ೯ ರಲ್ಲಿ ಮೂರು ಗುಂಪುಗಳು ಅಪ್ರಸ್ತುತ. ೨ ಮತ್ತು ೫ ಎರಡೂ ಒಂದೇ ಇರುವದರಿಂದ ಅವುಗಳಲ್ಲಿ ಒಂದೇ ಗುಂಪನ್ನು ಪರಿಗಣಿಸಬೇಕು ಹೀಗೆ ೯ ಗುಂಪುಗಳಲ್ಲಿ ೪ ಗುಂಪುಗಳನ್ನು ಕಳೆಯಲು ಐದೇ ಗುಂಪುಗಳಲ್ಲಿಯ ಭೇದವನ್ನು

Rarest Archiver

ಗಣಿಸಬೇಕಾದುದರಿಂದ) ಪಂಚ ಭೇದಗಳನ್ನು ಪ್ರತಿಪಾದನೆ ಮಾಡಿದ್ದಾರೆ. ಈ ಸಂದರ್ಭದಲ್ಲಿ ನಾಲ್ಕು ವಿಧವಾದ ಮತಗಳಿದ್ದುದನ್ನು ಗಮನಿಸಬೇಕು; ೧. ಈ ಮೂರು ತತ್ವಗಳಲ್ಲಿ ಈಶತತ್ವವು ನಿರ್ಗುಣ ಎಂದು ಕೆಲವರು ಹೇಳುತ್ತಾರೆ. ೨. ಇನ್ನು ಕೆಲರು ಅದು ಸಗುಣವಾಗಿದ್ದರೂ ಕೂಡ ಪರಮಾತ್ಮ ಹಾಗೂ ಆ ಗುಣಗಳಲ್ಲಿ ಪರಸ್ಪರವಾಗಿಯೂ ಮತ್ತು ಅತ್ಯಂತವಾಗಿಯೂ ಭೇದವಿರುವದೆಂದು ವಾದಿಸುತ್ತಾರೆ. ೩. ಇನ್ನೂ ಬೇರೆಯವರು ಪರಮಾತ್ಮ ಮತ್ತು ಆ ಎಲ್ಲ ಗುಣಗಳಲ್ಲಿ ಭೇದಾಭೇದವನ್ನು ಹೇಳುತ್ತಾರೆ. ೪. ಇನ್ನೂ ಬೇರೆಯವರು ಅವನ ಆನಂದಾದಿಗುಣಗಳು ಎರಡು ಪ್ರಕಾರದವಿದ್ದು ಕೆಲವು ಸ್ವರೂಪಭೂತವೂ ಮತ್ತೆ ಕೆಲವು ಭಿನ್ನವೂ ಆಗಿವೆ ಎಂದು ಹೇಳುತ್ತಾರೆ. ಈ ನಲ್ಕೂ ಮತಗಳು ಸಮರ್ಪಕವಲ್ಲವೆಂಬುದನ್ನು ತಿಳಿಸಿ ತಾವು ಹೇಳುವ ಸವಿಶೇಷಾಭೇದಕ್ಕೆ ಶ್ರುತಿಯ ಆಧಾರವನ್ನು ಶ್ರೀಮದಾಚಾರ್ಯರು ಇಲ್ಲಿ ಕೊಟ್ಟಿದ್ದಾರೆ.

ವಿಶೇಷವೆಂಬುದು ಪ್ರತಿಯೊಂದು ವಸ್ತುವಿನಲ್ಲಿದ್ದ ಒಂದು ಪ್ರಕಾರದ ಶಕ್ತಿಯು. ಈ ಶಕ್ತಿಯು ಸಂಭಾವಿತವೆಂದು ತಿಳಿಸಲೆಂದೇ ಸ್ವರೂಪ ಸ್ವರೂಪತ್ವ ಇವುಗಳ ದೃಷ್ಟಾಂತವನ್ನು ಈ ಶ್ರುತಿಯು ತಿಳಿಸುವದು. ಆ ದೃಷ್ಟಾಂತದಿಂದ ಗುಣ ಗುಣಿಗಳಿಗೆ ಹಾಗೂ ಗುಣಗಳಲ್ಲಿ ಸವಿಶೇಷಾಭೇದವನ್ನು ಊಪಬೇಕೆಂದು ವಿವರಿಸಿದ್ದಾರೆ. ***ಅನುವ್ಯಾಖ್ಯಾನದಲ್ಲಿ*** ಶ್ರೀಮದಾಚಾರ್ಯರು ಹೀಗೆ ಹೇಳಿದ್ದಾರೆ; **ಯೇನ ಪ್ರತ್ಯಕ್ಷಸಿದ್ಧೇನ ವ್ಯವಹಾರೋಽಖಿಲೋ ಭವೇತ್ । ಭಾವಾಭಾವಾದಿ-ಭಾಗೇನ ಯಂ ವಿನಾ ನ ಕಥಂ ಚ ನ ॥ ಏತಾದೃಶೇ ವಿಶೇಷೇಽಸ್ಮಿನ್ ಕೋ ದ್ವೇಷೋ ವಾದಿನಾಂ ಭವೇತ್ ॥** ಇದರಿಂದ ಎಲ್ಲರೂ ವಿಶೇಷವನ್ನು ಒಪ್ಪಲೇಬೇಕಾಗುವದೆಂದು ಸೂಚಿಸಿದ್ದಾರೆ.

ಈ ಶ್ರುತಿಯ ಭಾವವು ***ಶ್ರುತ್ಯರ್ಥಷಟ್ಪದಿ*** ಯಲ್ಲಿ ಹೀಗೆ:-

*ಭಿನ್ನನಲ್ಲವು ಪರಮಪುರುಷನು*
*ತನ್ನ ಗುಣಗಳ ರಾಶಿಯಿಂದಲಿ,*
*ಭಿನ್ನವಲ್ಲವು ಗುಣಗಳೆಲ್ಲವು ತಮ್ಮ ತಮ್ಮೊಳಗೆ,*
*ಭಿನ್ನವಿರದಿಹ ತಾಣದೊಳು ತಾ*
*ಭಿನ್ನವೆಂದೇ ಕರೆವಗೋಸುಗ*
*ಮುನ್ನ ವಸ್ತುವಿಗನ್ಯವಲ್ಲದ ಶಕುತಿಬಲವಿಹುದು.* // //

*ಮಾವು ರಸದಿಂ ಭಿನ್ನವಲ್ಲವೆ?*
*ಮಾವು ರಸದಿಂ ಭಿನ್ನವಿಪ್ಪುದೆ?*
*ಆವ ಭೇದವು ಇರದೆ ಭೇದವ ಜನರು ಪೇಳುವರು;*

Rarest Archiver

*ಪೂವಿನೊಳಗಿಹ ಗಂಧ ಬಣ್ಣವು*
*ಪೂವು ತಾನಾಗಿರಲು ಬೇರೆಯೆ*
*ತಾವಿಹವು ಸರಿ ಕಾಂಬುದೆನ್ನರೆ ಜನರು ಲೋಕದಲಿ? ॥ ॥*

*ಇದುವೆ ವಸ್ತುಗ ಶಕುತಿಯಾಗಿದೆ*
*ಇದಕೆ ತಾ ವಿಶೇಷವೆಂಬರು*
*ಇದುವೆ ಸಿರಿಹರಿ ಕರುಣೆಯಿಂದಲಿ ಜಗದೊಳಿದ್ದಿಹುದು.*
*ಪದುಮನಾಭನ ಮಹಿಮೆಯರಿಯುತ*
*ಮುದವ ಪಡೆವುದು ಜಗದೊಳೆನ್ನುತ*
*ಸದಯದುಪದೇಶವನೆ ಕೊಟ್ಟರು ಮಧ್ವಮುನಿವರರು. ॥ ॥*

**೧೧೨. ಏಕಮೇವಾದ್ವಿತೀಯಂ ತತ್ ।**– *ಛಾಂದೋಗ್ಯೋಪನಿಷತ್* (೬–೨–೧)

ಈ ವಾಕ್ಯದ ಮತ್ತು ಮುಂದಿನ ಶ್ರುತಿವಾಕ್ಯದ ಅರ್ಥವನ್ನು ಈ ಕೆಳಗೆ ಒಟ್ಟು ವಿವರಿಸಲಾಗಿದೆ.

**೧೧೩. ನೇಹ ನಾನಾಸ್ತಿ ಕಿಂಚನ । ಮೃತ್ಯೋಃ ಸ ಮೃತ್ಯುಮಾಪ್ನೋತಿ ಯ ಇಹ ನಾನೇವ ಪಶ್ಯತಿ ॥ ಯಥೋದಕಂ ದುರ್ಗೇ ವೃಷ್ಟಂ ಪರ್ವತೇಷು ವಿಧಾವತಿ । ಏವಂ ಧರ್ಮಾನ್ ಪೃಥಕ್ಪಶ್ಯನ್ ತಾನೇವಾನುವಿಧಾವತಿ॥**

*–ಕಾಠಕೋಪನಿಷತ್ ೨–೧–೧೪.*

**ಅರ್ಥ:–** ಬ್ರಹ್ಮನ ವಿಷಯಕ್ಕೆ ಅವನ ಅವಯುವಗಳಲ್ಲಿಯಾಗಲಿ, ಅವಯುವ ಅವಯುವಿಗಳಲ್ಲಿಯಾಗಲಿ ಭೇದವಿರುವದಿಲ್ಲ ಈ ಬ್ರಹ್ಮನ ವಿಷಯದಲ್ಲಿ ಗುಣ ಗುಣಿಗಳಲ್ಲಿ ಭೇದವಿಲ್ಲ, ಗುಣಗಳಲ್ಲಿಯೂ ಭೇದವಿಲ್ಲ. ಯಾರು ಇವನ ಗುಣ–ಗಳಲ್ಲಿಯಾಗಲಿ, ಅವಯುವಗಳಲ್ಲಿಯಾಗಲಿ ಭೇದವನ್ನು ಹೇಳುವನೋ ಅವನು ಮೃತ್ಯುವಿನ ಅನಂತರದಲ್ಲಿ (**ಮೃತ್ಯೋಃ – ಮೃತ್ಯೋಃ ಅನಂತರಂ** – *ವಿ.ತ.–ವಿ.ಟೀಕಾ)* ನರಕವನ್ನು (**ಮೃತ್ಯುಂ**) ಹೊಂದುವನು. ಯಾವ ರೀತಿ ಪರ್ವತದಲ್ಲಿ ಬಿದ್ದ ನೀರು ಮೇಲಿನಿಂದ ಕೆಳಕ್ಕೆ ಉರುಳುತ್ತ ಕೆಳ ಕೆಳಕ್ಕೆ ಹೋಗುತ್ತ ಹೋಗುವದೋ ಅದೆ ರೀತಿ ಪರಮಾತ್ಮನ ಗುಣಗಳಲ್ಲಿ, ಅವಯುವಗಳಲ್ಲಿ ಭೇದವನ್ನು ಹೇಳುವವನೂ ಕೂಡ ಆ ರೀತಿಯ ಜ್ಞಾನ ಪಡೆದುಕೊಂಡ ತಕ್ಷಣವೇ (**ತಾನ್ ಅನು ಏವ ತದ್ದರ್ಶನಂ ಅನು ಏವ** –*ವಿ.ತ.ವಿ.ಟೀಕಾ* ) ಕೆಳ ಕೆಳಕ್ಕೆ ಉರುಳುತ್ತ ಅಧಃಪತನವನ್ನು ಹೊಂದುವನು.

**ವಿಶೇಷ ವಿಷಯಗಳು :–** **ಏಹಮೇವಾದ್ವಿತೀಯಂ ತತ್** ಇದು *ಛಾಂದೋಗ್ಯೋಪ–ನಿಷತ್*‌ನಲ್ಲಿ (೬–೨–೧) ಬರುವ ವಾಕ್ಯವು. **ನೇಹ ನಾನಾಸ್ತಿ ಕಿಂಚನ । ಮೃತ್ಯೋಃ ಸ ...** ಇತ್ಯಾದಿ ವಾಕ್ಯವು *ಕಾಠಕೋಪನಿಷತ್ತಿ*ನಲ್ಲಿ ಯಮ ನಚಿಕೇತರ ಸಂವಾದದಲ್ಲಿ

Rarest Archiver

ಬರುವ ವಾಕ್ಯವು. ಶ್ರೀಮದಾಚಾರ್ಯರು ಈ ಸಂದರ್ಭಕ್ಕೆ ಉಚಿತವಾದ ಎರಡೂ ವಾಕ್ಯಗಳನ್ನು ಉದಾಹರಿಸಿ ಪರಮಾತ್ಮನು ಸ್ವಗತಭೇದವಿವರ್ಜಿತನೆಂಬ ತತ್ವವನ್ನು ಸ್ಪಷ್ಟಪಡಿಸಿದ್ದಾರೆ.

ಈ ಶ್ರುತಿಯ ಭಾವವು *ಶ್ರುತ್ಯರ್ಥಷಟ್ಪದಿ* ಯಲ್ಲಿ ಹೀಗೆ:–

*ಹರಿಯ ಗುಣಗಳ ಮಧ್ಯೆ ಭೇದವು*
*ಹರಿಯ ತಾನಂಗಗಳ ಭೇದವು*
*ಇರದು, ಹರಿ ತಾ ಸ್ವಗತಭೇದವಿವರ್ಜಿತನು ನಿರುತ.*
*ಹರಿಯೊಳೆಂದಿಗು ಭೇದ ಕಾಂಬನು*
*ಗಿರಿಯ ತುದಿಮೇಲ್ಬಿದ್ದ ನೀರಿನ*
*ಝರಿಯ ತೆರನಧಪತನ ಕಾಂಬನು ಸಾವು ಪೊಂದುತಲಿ. ॥*

**೧೧೪. ವಿಷ್ಣುಂ ಸರ್ವಗುಣೈಃ ಪೂರ್ಣಂ ಜ್ಞಾತ್ವಾ ಸಂಸಾರವರ್ಜಿತಃ । ನಿರ್ದುಃಖಾನಂದಭುಕ್ ನಿತ್ಯಂ ತತ್ಸಮೀಪೇ ಸ ಮೋದತೇ ॥ ಮುಕ್ತಾನಾಂ ಚಾಶ್ರಯೋ ವಿಷ್ಣುಃ ಅಧಿಕೋಽಧಿಪತಿಸ್ತಥಾ । ತದ್ವಶಾ ಏವ ತೇ ಸರ್ವೇ ಸರ್ವದೈವ ಸ ಈಶ್ವರಃ ॥–ಪರಮಶ್ರುತಿಃ**

**ಅರ್ಥ:–** ಯಾರು ವಿಷ್ಣುವಿನನ್ನು ಸರ್ವಗುಣಪರಿಪೂರ್ಣನೆಂದು ತಿಳಿದು ಆರಾಧಿಸುವನೋ ಅವನು ಸಂಸಾರಬಂಧನದಿಂದ ಮುಕ್ತನಾಗಿ ದುಃಖಾಸಂಭಿನ್ನವಾದ ಸುಖರೂಫವಾದ ಮುಕ್ತಿಯನ್ನು ಹೊಂದುವನು. ವಿಷ್ಣುವಿನ ಸಮೀಪದಲ್ಲಿಯೇ ಇದ್ದು ಸುಖವನ್ನು ಅನುಭವಿಸುವನು. ವಿಷ್ಣುವು ಮುಕ್ತರಿಗೂ ಆಶ್ರಯನಾಗಿದ್ದು ಅವರಿಗಿಂತ ಉತ್ತಮನೂ ಅವರ ನಿಯಾಮಕನೂ ಆಗಿದ್ದಾನೆ. ಅವರೆಲ್ಲರೂ ಅವನ ವಶದಲ್ಲಿಯೇ ಇರುವರು, ಅಲ್ಲದೆ ಅವನು ಯಾವಾಗಲೂ ಸರ್ವೋತ್ತಮನೇ ಆಗಿರುವನು. ಹೀಗೆ ಪರಮಶ್ರುತಿಯು ಹೇಳುವದು.

**ವಿಶೇಷ ವಿಷಯಗಳು:–** ಮುಕ್ತನೂ ದುಃಖಾಸಂಭಿನ್ನಸುಖವನ್ನನುಭವಿಸುವದರಿಂದ ಪರಮಾತ್ಮನಿಗೆ ಮತ್ತು ಮುಕ್ತರಿಗೆ ಅಂತರವೇ ಇರುವದಿಲ್ಲವೆಂಬ ಸಂಶಯ ಬಂದೀತೆಂದು ಮುಕ್ತರಿಗೂ ಇವನು ಆಶ್ರಯನು ಎಂಬ ಮುಂತಾದ ಉಕ್ತಿಗಳಿಂದ ಇಂಥ ಸಂಶಯವನ್ನು ಈ ಶ್ರುತಿಯು ಪರಿಹರಿಸುತ್ತಿದೆ.

ಈ ಶ್ರುತಿಯ ಭಾವವು *ಶ್ರುತ್ಯರ್ಥಷಟ್ಪದಿ* ಯಲ್ಲಿ ಹೀಗೆ:–

ಸಕಲಗುಣಪರಿಪೂರ್ಣ ವಿಷ್ಣುವ
ವಿಕಲವಾಗದೆ ತಿಳಿವ ಮನುಜನು
ಸುಖವ ಪಡೆವನು ದುಃಖಲೇಶದ ಲೇಪವಿರದಂತೆ,

Rarest Archiver

ಸುಖಮಯಶ್ರೀಹರಿಯ ಸಾಮೀ–
ಪ್ಯಕೆಯೆ ಮುಕುತನು ಬಂದು ಆತನ
ಸುಖದ ಆಶ್ರಯ ಪಡೆದು ಮುಕ್ತಾಧಿಪನ ಭಜಿಸುವನು. ॥

**೧೧೫. ಸೋಽಶ್ನುತೇ ಸರ್ವಾನ್ ಕಾಮಾನ್ ಸಹ ಬ್ರಹ್ಮಣಾ ವಿಪಶ್ಚಿತಾ ।–**

*ತೈತ್ತಿರೀಯೋಪನಿಷತ್ ೨–೧–೧*

ಇದರ ಸಂಪೂರ್ಣ ಪಾಠವು ಹೀಗಿದೆ; **ಓಂ ಬ್ರಹ್ಮವಿತ್ ಆಪ್ನೋತಿ ಪರಮ್ । ತದೇಷಾ–ಭ್ಯುಕ್ತಾ । ಸತ್ಯಂ ಜ್ಞಾನಂ ಅನಂತಂ ಬ್ರಹ್ಮ । ಯೋ ವೇದ ನಿಹಿತಂ ಗುಹಾಯಾಮ್ ಪರಮೇ ವ್ಯೋಮನ್ ।** ಸೋಽಶ್ನುತೇ ಸರ್ವಾನ್ ಕಾಮಾನ್ । ಸಹ ಬ್ರಹ್ಮಣಾ ವಿಪಶ್ಚಿತಾ॥

**ಅರ್ಥ:–** (ಶ್ರೀ ರಾಯರ ಖಂಡಾರ್ಥವನ್ನನುಸರಿಸಿ) ಬ್ರಹ್ಮಜ್ಞಾನಿಯಾದವನು ಸರ್ವೋತ್ತಮನಾದ ಬ್ರಹ್ಮನನ್ನು ಹೊಂದುತ್ತಾನೆ. (ಸತ್ಯಂ) ಜಗತ್ತಿನ ಸೃಷ್ಟಿ, ಸೃಷ್ಟವಾದ ಜಗತ್ತಿನ ಸ್ಥಿತಿ, ಅದರ ಸಕಲ ಪ್ರಕಾರದ ವ್ಯಾಪಾರಗಳು ಹಾಗೂ ಜಗತ್ತಿನ ಲಯ, ಇವೆಲ್ಲವುಗಳಿಗೆ ಕಾರಣನಾದ, ಜ್ಞಾನಸ್ವರೂಪನಾದ, (ಅನಂತಂ) ದೇಶ ಕಾಲ ಗುಣಗಳಿಂದ ಅಪರಿಚ್ಛಿನ್ನನಾದದ್ದೇ ಬ್ರಹ್ಮವು. ಯಾರು ಇಂಥ ಲೋಕವಿಲಕ್ಷಣವಾದ, ಸರ್ವತ್ರ ವ್ಯಾಪ್ತವಾಗಿದ್ದರೂ ಹೃದಯಗುಹೆಯ ಅಲ್ಪಪ್ರದೇಶದಲ್ಲಿ ಸಕಲ ನಿಯಾಮಕತ್ವೇನ ಇರುವ ಬ್ರಹ್ಮನನ್ನು ತಿಳಿದುಕೊಳ್ಳುವನೋ ಅವನು ಮುಕ್ತನಾದವನು; ಅವನು ಪರಮಾತ್ಮನ ಮಹಿಮೆಯನ್ನು ಬಲ್ಲ ಬ್ರಹ್ಮನೊಡನೆ (ವಿರಿಂಚಿಯೊಡನೆ) ಅಥವಾ ಸರ್ವಜ್ಞನಾದ ಪರಮಾತ್ಮನೊಡನೆ ಇದ್ದು ಅವನ ಅಧೀನದಲ್ಲಿದ್ದು ಅವನ ಸಂಕಲ್ಪದಂತೆ ತನಗೆ ಯೋಗ್ಯವಾದ ಎಲ್ಲ ಕಾಮನೆಗಳನ್ನು ಪೂರ್ತಿಮಾಡಿಕೊಳ್ಳುತ್ತಾನೆ. (ಇದೇ ಮುಕ್ತಿಯು ಅಥವಾ ಪರ–ಮಾತ್ಮನನ್ನು ಹೊಂದುವದು ಎಂಬುದರ ಅರ್ಥವು)

**ವಿಶೇಷ ವಿಷಯಗಳು :–** ಜೀವನಿಗೆ ಸರ್ವಕಾಲದಲ್ಲಿಯೂ ಪರಮಾತ್ಮನ ಸಂಬಂಧವು ಇದ್ದೇ ಇರುವದಾದರೂ ಹಾಗೂ ಜೀವನು ನಿತ್ಯವೂ ಸುಖಸ್ವರೂಪನಾಗಿದ್ದರೂ ಮುಕ್ತಿಯಲ್ಲಿ ಪರಮಾತ್ಮನ ಗುಣಾನುಸಂಧಾನಪೂರ್ವಕವಾಗಿ ಅವನ ಅಧೀನದಲ್ಲಿದ್ದು ತನಗೆ ಯೋಗ್ಯವಾದ ಸುಖವನ್ನು ಅನುಭವಿಸುವನು. ಮುಕ್ತಿಯು ಇಂಥ ಅವಸ್ಥೆಯೇ ಆಗಿದೆಯೇ ಹೊರತು ಕೇವಲ ಪರಮಾತ್ಮನ ಸಂಬಂಧವನ್ನು ಹೊಂದುವ ಅವಸ್ಥೆಯೆಂದು ಹೇಳಬಾರದು.

ಬ್ರಹ್ಮಣಾ ಸಹ ಎಂದು ಹೇಳಿದಾಗ ಸಹಯುಕ್ತೇ ಅಪ್ರಧಾನೇ ಎಂಬ ಪಾಣಿನೀ ಸೂತ್ರದಿಂದ ಬ್ರಹ್ಮನಿಗೆ ಅಪ್ರಾಧಾನ್ಯ ಬಂದಿತಲ್ಲ ಎಂದರೆ ಇಲ್ಲಿ ಆ ಅಪ್ರಾಧಾನ್ಯತಾಶಂಕೆಗೆ ಅವಕಾಶವಿಲ್ಲ. ಏಕೆಂದರೆ ಜೀವನು ಬ್ರಹ್ಮನ ಜ್ಞಾನ ಮಾಡಿಕೊಂಡ ಮೇಲೆಯೆ ಹಾಗೂ

Rarest Archiver

ಅವನ ಅಧೀನನಾಗಿಯೇ ಈ ಅವಸ್ಥೆಯನ್ನು ಪಡೆಯುವದರಿಂದ ಬ್ರಹ್ಮನು ಅಪ್ರಧಾನನಾಗಲಾರನು. **ಸ್ವಯೋಗ್ಯಂ ಬ್ರಹ್ಮವಿದ್ ಭುಂಕ್ತೇ ವಿರಿಂಚೇನ ಪರೇಣ ಚ । ಬ್ರಹ್ಮಣಾ ಸಹ ತದ್ವಶ್ಯಃ ಸುಖಮೇವ ನ ದುಷ್ಕೃತಮ್ ॥** ಎಂಬ ಪ್ರಮಾಣ ಕೊಟ್ಟು ತಮ್ಮ ತೈತ್ತಿರೀಯಭಾಷ್ಯದಲ್ಲಿ ಶ್ರೀಮದಾಚಾರ್ಯರು ತದ್ವಶ್ಯನಾಗಿ ಜೀವನು ಈ ಸುಖವನ್ನು ಪಡೆಯುವನು ಎಂದು ಹೇಳಿದುದರಿಂದ ಪರಮಾತ್ಮನಿಗೆ ಅಪ್ರಾಧಾನ್ಯ ಬರಲಾರದು. ( ಶ್ರೀ ವಾದಿರಾಜತೀರ್ಥರ ಪ್ರಕಾಶಿಕಾ ಟಿಪ್ಪಣಿಯನ್ನು ನೋಡಬೇಕು)

ಈ ಶ್ರುತಿಯ ಭಾವವು ***ಶ್ರುತ್ಯರ್ಥಪಟ್ಪದಿ*** ಯಲ್ಲಿ ಹೀಗೆ:-

*ಹರಿಯೆ ಉತ್ಪತ್ತ್ಯಾದಿಕಾರಣ,*
*ಹರಿಯೆ ಸರ್ವವ್ಯಾಪ್ತ, ಹೃದಯದ*
*ಪರಮಸೂಕ್ಷ್ಮಸ್ಥಾನದೊಳು ತಾನಿರುವ ಕೃಪೆಯಿಂದ,*
*ಪರಮಪುರುಷನನಿಂತು ತಿಳಿದವ*
*ಹರಿ ವಿರಿಂಚರರೊಡನೆ ಯೋಗ್ಯದ*
*ಪರಮಸೌಖ್ಯದ ಭೋಗದಿಂದಲಿ ನಿರುತವಿರುತಿಹನು.* ॥

ಅಂತು, ಶ್ರೀಮದಾಚಾರ್ಯರು ಅನೇಕ ಶ್ರುತಿಗಳ ಬಲವಾದ ಆಧಾರದ ಮೇಲೆ ಜಗತ್ಸತ್ಯತ್ವ, ಪಂಚಭೇದಗಳು, ಭೇದಸತ್ಯತ್ವ, ಮುಕ್ತಿಯಲ್ಲಿಯೂ ಭೇದವಿದೆ ಎಂಬ ಸಿದ್ಧಾಂತವನ್ನು ಎಷ್ಟು ಸೂಕ್ಷ್ಮವಾಗಿ ವಿಮರ್ಶಾತ್ಮಕವಾದ ದೃಷ್ಟಿಯಿಂದ ಪ್ರತಿಪಾದಿಸಿರುವರೆಂಬುದು ಈ ಸುದೀರ್ಘವಾದ ಪ್ರಕರಣದಿಂದ ತಿಳಿಯುವದು

***ಶ್ರೀಮದ್ವಿಷ್ಣುತತ್ತ್ವವಿನಿರ್ಣಯದಲ್ಲಿ ಉದಾಹೃತ ಶ್ರುತಿವಾಕ್ಯಗಳು; ಒಂದು ಅಧ್ಯಯನ*** ಎಂಬ ಈ ಗ್ರಂಥವು ಇಲ್ಲಿಗೆ ಸಂಪೂರ್ಣವಾಯಿತು.

ಶ್ರೀ ಕೃಷ್ಣಾರ್ಪಣಮಸ್ತು.

ಶ್ರೀ ತಾರಣನಾಮ ಸಂವತ್ಸರದ ಆಶ್ವೀನ ಶುದ್ಧ ನವಮೀ ದಶಮೀ – ವಿಜಯ ದಶಮೀ ಶುಕ್ರವಾರ. ೨೨ –೧೦– ೨೦೦೪ ರಾತ್ರಿ ೯–೫೫ ಗಂಟೆಗೆ ಸಮಾಪ್ತವಾಯಿತು

Rarest Archiver

# ಪರಿಶಿಷ್ಟ

## ಉದಾಹೃತ ಶ್ರುತಿಗಳ ಅಕ್ಷರಾನುಕ್ರಮಣಿಕಾ

### ಅ

ಪುಟ ಸಂಖ್ಯೆ


೧. ಅಥ ಜ್ಞಾನೋಪಸರ್ಗಾಃ । ೨೦೭

೨. ಅಥ ಯೇ ಚ ಅನ್ಯೇ ಮಿಥ್ಯಾತರ್ಕೈಃ ದೃಷ್ಟಾಂತೈಃ ಕುಹಕೇಂದ್ರಜಾಲೈಃ ವೈದಿಕೇಷು ಪರಿಸ್ಥಾತುಂ ಇಚ್ಛಂತಿ ತೈಃ ಸಹ ನ ಸಂವಸೇತ್ । ೨೦೭

೩. ಅಥ ಯೋಽನ್ಯಾಂ ದೇವತಾಂ ಉಪಾಸ್ತೇ ಅನ್ಯೋಽಸಾವನ್ಯೋಽಹಮಸ್ಮೀತಿ ನ ಸ ವೇದ ಯಥಾ ಪಶುರೇವಮ್ । ೧೨೪

೪. ಅದ್ವೈತಂ ಪರಮಾರ್ಥತಃ । ೨೩೦

೫. ಅದ್ವೈತಃ ಸರ್ವಭಾವಾನಾಂ ದೇವಸ್ತುರ್ಯೋ ವಿಭುಃ ಸ್ಮೃತಃ । ೨೦೬

೬. ಅದ್ವೈತಃ ಸರ್ವಭಾವಾನಾಮ್...... । ೨೦೧

೭. ಅನಾಗತಾಃ ಅತೀತಾಶ್ಚ ಯಾವಂತಃ ಸಹಿತಾಃ ಕ್ಷಣಾಃ । ೨೦೯

೮. ಅನಾದಿಮಾಯಯಾ ಸುಪ್ತಃ ಯದಾ ಜೀವಃ ಪ್ರಬುಧ್ಯತೇ । ೨೦೩

೯. ಅನಿತ್ಯತ್ವವಿಕಾರಿತ್ವಪಾರತಂತ್ರ್ಯಾದಿರೂಪತಃ । ಸ್ವಪ್ನಾದಿಸಾಮ್ಯಂ ಜಗತಃ । ೧೦೬

೧೦. ಅನೇನ ಜೀವೇನ ಆತ್ಮನಾಽನುಪ್ರವಿಶ್ಯ ನಾಮರೂಪೇ ವಾಕ್ಯರವಾಣಿ । ೬೧

೧೧. ಅಮೃತಸ್ಯೈಷ ಸೇತುಃ । ೧೫೧

೧೨. ಅಸಾವಾದಿತ್ಯೋ ಬ್ರಹ್ಮೇತಿ ಬ್ರಹ್ಮೈವ ಸನ್ ಬ್ರಹ್ಮಾಪ್ಯೇತಿ ಯ ಏವಂ ವೇದ ॥ ೧೯೨

೧೩. ಅಸ್ಯ ದೇವಸ್ಯ ಮೀಳ್ ಢುಷೋ ವಯಾ ವಿಷ್ಣೋರೇಷಸ್ಯ । ೨೧೮

೧೪. ಅಸ್ಯ ಸೋಮ್ಯ ಮಹತೋ ವೃಕ್ಷಸ್ಯ ಯಃ ಮೂಲೇ ಅಭ್ಯಾಹನ್ಯಾತ್ ಜೀವನ್ ಸ್ರವೇತ್ । ೪೩


Rarest Archiver

೧೫. ಅಸ್ಯೈವ ಸರ್ವನಾಮಾನಿ ವ್ಯತಿರಿಕ್ತಸ್ಯ ಸರ್ವತಃ । ೨೨೪

೧೬. ಅಹಂ ನಾಮಾ ಹರಿರ್ನಿತ್ಯಂ ಅಹೇಯತ್ವಾತ್ಪ್ರಕೀರ್ತಿತಃ । ೧೨೭

೧೭. ಅಹಂ ಬ್ರಹ್ಮಾಸ್ಮಿ । ೧೧೩

೧೮. ಅಹಮಿತ್ಯೇವ ಯೋ ವೇದ್ಯಃ ಸ ಜೀವ ಇತಿ ಕೀರ್ತಿತಃ । ೧೫೯

೧೯. ಅಕ್ಷಣ್ವಂತಃ ಕರ್ಣವಂತಃ ಸಖಾಯಃ ಮನೋಜವೇಷ್ವಸಮಾ ಬಭೂವುಃ । ೧೫೩

## ಆ

೨೦. ಆತತತ್ವಾಚ್ಚ ಮಾತೃತ್ವಾದಾತ್ಮೇತಿ ಪರಮೋ ಹರಿಃ । ೬೮

೨೧. ಆತತ್ವಮಸಿ । ೩೬

೨೨. ಆತ್ಮಾ ಹಿ ಪರಮಸ್ವತಂತ್ರಃ ಸರ್ವವಿತ್ ಸರ್ವಶಕ್ತಿಃ
ಪರಮಸುಖಃ ಪರಮೋ । ೧೩೧

## ಇ

೨೩. ಇಮಾಃ ಸೋಮ್ಯ ನದ್ಯಃ ಪುರಸ್ತಾತ್ ಪ್ರಾಚ್ಯಃ ಸ್ಯಂದಂತೆ । ೪೨

೨೪. ಇಷ್ಟಾಪೂರ್ತಂ ಮನ್ಯಮಾನಾಃ ವರಿಷ್ಠಂ ನ ಅನ್ಯತ್ ಶ್ರೇಯಃ
ವೇದಯಂತೇ। ೮೪

## ಉ

೨೫. ಉತ ತಮ್ ಆದೇಶಮ್ ಅಪ್ರಾಕ್ಷ್ಯೋ ಯೇನ ಅಶ್ರುತಂ
ಶ್ರುತಂ ಭವತಿ । ೯೩

೨೬. ಉತ್ಪತ್ತಿಃ ವಾಸುದೇವಸ್ಯ ಪ್ರಾದುರ್ಭಾವೋ ನ ಚಾಪರಃ । ೨೨೫

## ಋ

೨೭. ಋಚಾಂ ತ್ವಃ ಪೋಷಮ್ ಆಸ್ತೇ ಪುಪುಷ್ವಾನ್ ಗಾಯತ್ರಂ ತ್ವಃ ಗಾಯತಿ
ಶಕ್ವರೀಷು । ೧೩೬

Rarest Archiver

## ಏ

೨೮. ಏಕಮೇವಾದ್ವಿತೀಯಂ ತತ್ । ೨೨೮

೨೯. ಏಕೋ ನಾರಾಯಣ ಆಸೀತ್ ನ ಬ್ರಹ್ಮಾ ನ ಚ ಶಂಕರಃ । ೨೨೦

೩೦. ಏಕೋ ನಾರಾಯಣ ಆಸೀತ್ ನ ಬ್ರಹ್ಮಾ ನೇಶಾನಃ । ೨೨೦

೩೧. ಏತಮಾನಂದಮಯಂ ಆತ್ಮಾನಂ ಉಪಸಂಕ್ರಮ್ಯ । ೧೩೪

೩೨. ಏತಮಾನಂದಮಯಮಾತ್ಮಾನಂ ಉಪಸಂಕ್ರಾಮತಿ ॥ ೧೭೭

## ಐ

೩೩. ಐಕಾತ್ಮ್ಯಂ ನಾಮ ಯದಿದಂ ಕೇಚಿದ್ಬ್ರೂಯುರನ್ಯೈಪುಣಾಃ । ೮೮

೩೪. ಐಕಾತ್ಮ್ಯಂ ನಾಮ ಯದಿದಂ ಕೇಚಿದ್ಬ್ರೂಯುರನ್ಯೈಪುಣಾಃ ೮೮

## ಅಃ

೩೫. ಅಃ ಇತಿ ಬ್ರಹ್ಮ ತತ್ರಾಗತಮಹಮಿತಿ ತಸ್ಯೋಪನಿಷದಹಮ್ । ೧೨೬

## ಕ

೩೬. ಕರ್ಮಾಣಿ ವಿಜ್ಞಾನಮಯಶ್ಚ ಆತ್ಮಾ ಪರೇಽವ್ಯಯೇ ಸರ್ವ
ಏಕೀಭವಂತಿ । ೧೬೬

೩೭. ಕವಿರ್ಮನೀಷೀ ಪರಿಭೂಃ ಸ್ವಯಂಭೂಃ । ೧೦೨

೩೮. ಕಶ್ಛಂದಸಾಂ ಯೋಗಮಾವೇದ ಧೀರಃ । ೧೯

೩೯. ಕಾಮೇನ ಮೇ ಕಾಮ ಆಗಾತ್ । ೧೭೧

## ಗ

೪೦. ಗುಣಕ್ರಿಯಾದಯೋ ವಿಷ್ಣೋಃ ಸ್ವರೂಪಂ ನಾನ್ಯದಿಷ್ಯತೇ । ೨೨೬

## ಚ

೪೧. ಚಂದ್ರಮಾ ಮನಸೋ ಜಾತಃ ಚಕ್ಷೋಃ ಸುರ್ಯೋ ಅಜಾಯತ । ೨೧೯

Rarest Archiver

## ಜ

೪೨. ಜೀವಸ್ಯ ಪರಮೈಕ್ಯಂ ತು ಬುದ್ಧಿಸಾರೂಪ್ಯಮೇವ ತು । ೧೭೯

೪೩. ಜೀವೇಶ್ವರಭಿದಾ ಚೈವ ಜಡೇಶ್ವರಭಿದಾ ತಥಾ । ೨೦೬

## ತ

೪೪. ತತೋ ಯದುತ್ತರತರಂ ತದರೂಪಂ ಅನಾಮಯಮ್ । ೨೨೩

೪೫. ತದಾ ವಿದ್ವಾನ್ ಪುಣ್ಯಪಾಪೇ ವಿಧೂಯ ನಿರಂಜನಃ
ಪರಮಂಸಾಮ್ಯಂ ಉಪೈತಿ ॥ ೧೫೦

೪೬. ತದ್ಧೈಕ ಆಹುಃ ಅಸದ್ ಏವ ಇದಂ ಅಗ್ರೇ ಆಸೀತ್ । ೭೯

೪೭. ತದ್ಯೋಽಹಂ ಸೋಽಸೌ ಯೋಽಸೌ ಸೋಽಹಮ್ ॥ ೨೧೨

೪೮. ತಸ್ಯೋಪನಿಷತ್ ಸತ್ಯಸ್ಯ ಸತ್ಯಮ್ ಇತಿ । ೧೦೯

೪೯. ತೇನೇದಂ ಪೂರ್ಣಂ ಪುರುಷೇಣ ಸರ್ವಂ ॥ ೨೨೩

## ಧ

೫೦. ಧರ್ಮಾರ್ಥಕಾಮಾಃ ಸರ್ವೇಽಪಿ ನ ನಿತ್ಯಾ ಮೋಕ್ಷ ಏವ ಹಿ । ೨೪

## ನ

೫೧. ನ ತಾದೃಶೀ ಪ್ರೀತಿರೀಡಸ್ಯ ವಿಷ್ಣೋರ್ಗುಣೋತ್ಕರ್ಷಜ್ಞಾತರಿ
ಯಾದೃಶೀ ಸ್ಯಾತ್ । ೨೮

೫೨. ನ ತು ತದ್ದ್ವಿತೀಯಮಸ್ತಿ॥ ೧೬೧

೫೩. ನಾಮಾನಿ ಸರ್ವಾಣಿ ಯಮಾವಿಶಂತಿ ತಂ ವೈ ವಿಷ್ಣುಂ
ಪರಮಂ ಉದಾಹರಂತಿ ॥ ೨೨೪

೫೪. ನಾಯಮಾತ್ಮಾ ಪ್ರವಚನೇನ ಲಭ್ಯಃ ನ ಮೇಧಯಾ ನ ಬಹುನಾ
ಶ್ರುತೇನ । ಯಮೇವೈಷ ವೃಣುತೇ ತೇನ ಲಭ್ಯಃ। ೨೭

೫೫. ನಾವೇದವಿತ್ ಮನುತೇದಂ ಬೃಂಹಂತಂ ಸರ್ವಾನುಭುಂ
ಆತ್ಮಾನಂ ಸಾಂಪರಾಯೇ । ೭

Rarest Archiver

೫೬. ನಿತ್ಯಯಾಽನಿತ್ಯಯಾ ಸ್ತೌಮಿ ಬ್ರಹ್ಮ ತತ್ಪರಮಂ ಪದಮ್ । ೧೪

೫೭. ನಿಷ್ಕಲಂ ನಿಷ್ಕ್ರಿಯಂ ಶಾಂತಂ ಏಕಧೈವ ಅನುದ್ರಷ್ಟವ್ಯಮ್ । ೯೪

೫೮. ನೇಂದ್ರಿಯಾಣಿ ನಾನುಮಾನಂ ವೇದಾ ಹ್ಯೇವೈನಂ ವೇದಯಂತಿ
ತಸ್ಮಾದಾಹುಃ ವೇದಾಃ । ೧೧

೫೯. ನೇಹ ನಾನಾಸ್ತಿ ಕಿಂಚನ । ಮೃತ್ಯೋಃ ಸ ಮೃತ್ಯುಮಾಪ್ನೋತಿ
ಯ ಇಹ ನಾನೇವ ಪಶ್ಯತಿ ॥ ೨೨೮

೬೦. ನೈರಾತ್ಮ್ಯವಾದಕುಹಕೈಃ ಮಿಥ್ಯಾದೃಷ್ಟಾಂತಹೇತುಭಿಃ । ೨೦೯

೬೧. ನೈಷಾ ತರ್ಕೇಣ ಮತಿರಾಪನೇಯಾ ಪ್ರೋಕ್ತಾನ್ಯೇನೈವ
ಸುಜ್ಞಾನಾಯ ಪ್ರೇಷ್ಠ॥ ೮

೬೨. ನ್ಯಗ್ರೋಧಫಲಂ ಅತಃ ಆಹರ ಇತಿ । ೪೪

## ಪ

೬೩. ಪರಂಜ್ಯೋತಿರುಪಸಂಪದ್ಯ ಸ್ವೇನ ರೂಪೇಣಾಭಿನಿಷ್ಪದ್ಯತೇ । ೧೩೮

೬೪. ಪರಮಂ ಬ್ರಹ್ಮ ವೇದ ಬ್ರಹ್ಮೈವ ಭವತಿ । ೧೮೦

೬೫. ಪರೋ ಮಾತ್ರಯಾ ತನ್ವಾ ವೃಧಾನ ನ ತೇ ಮಹಿತ್ವಂ ಅನ್ವಶ್ನುವಂತಿ । ೧೮೪

೬೬. ಪುರುಷಂ ಸೋಮ್ಯ ಉತ ಹಸ್ತಗೃಹೀತಂ ಆನಯಂತಿ । ೪೯

೬೭. ಪುರುಷಂ ಸೋಮ್ಯ ಉಪತಾಪಿನಂ ಜ್ಞಾತಯಃ ಪರ್ಯುಪಾಸತೆ । ೪೮

೬೮. ಪ್ರಜ್ಞಾವಿನಿರ್ಮಿತಂ ಯಸ್ಮಾತ್ ಅತೋ ಮಾಯಾಮಯಂ ಜಗತ್ । ೧೦೮

೬೯. ಪ್ರಪಂಚೋ ಯದಿ ವಿದ್ಯೇತ ನಿವರ್ತೇತ ನ ಸಂಶಯಃ । ೧೯೨

೭೦. ಪ್ರಭವಃ ಸರ್ವಭಾವಾನಾಂ ಸತಾಂ ಇತಿ ವಿನಿಶ್ಚಯಃ । ೨೦೫

೭೧. ಪ್ರೇರಕ: ಸರ್ವ(ಭೂತಾನಾಂ)ಜೀವಾನಾಂ ಪ್ರಾಣಧೀಚೋದಿತಾ ಚ ಸ: । ೭೬

## ಬ

೭೨. ಬ್ರಹ್ಮಮತ್ಯನುಕೂಲಾ ಮೇ ಮತಿರ್ಮುಕ್ತೌ ಭವಿಷ್ಯತಿ । ೧೭೪

೭೩. ಬ್ರಹ್ಮಾ ಶಿವಃ ಸುರಾದ್ಯಾಶ್ಚ ಶರೀರಕ್ಷರಣಾತ್ ಕ್ಷರಾಃ । ೨೧೪


Rarest Archiver

೭೪. ಬ್ರಹ್ಮಣಿ ಜೀವಾಃ ಸರ್ವೇಽಪಿ ಪರಬ್ರಹ್ಮಣಿ ಮುಕ್ತಿಗಾಃ । ೧೮೨

೭೫. ಬ್ರಹ್ಮೈವ ಸನ್ ಬ್ರಹ್ಮಾಪ್ಯೇತಿ । ೧೮೬

## ಯ

೭೬. ಯಚ್ಚಿಕೇತ ಸತ್ಯಮಿತ್ತನ್ನ ಮೋಘಂ ವಸು ಸ್ಪಾರ್ಹಮುತ ಜೇತೋತ ದಾತಾ । ೧೦೩

೭೭. ಯತ್ರ ತ್ವಸ್ಯ ಸರ್ವಮಾತ್ಮೈವಾಭೂತ್ ತತ್ ಕೇನ ಕಂ ಪಶ್ಯೇತ್। ೧೩೯

೭೮. ಯಥಾ ಸೋಮ್ಯ ಮಧು ಮಧುಕೃತೋ ನಿಸ್ತಿಷ್ಠಂತಿ । ४೧

೭೯. ಯಥಾ ಸೋಮ್ಯ ಪುರುಷಂ ಗಂಧಾರೇಭ್ಯಃ ಅಭಿನದ್ಧಾಕ್ಷಂ ಆನೀಯ । ೪೭

೮೦. ಯಥಾ ಪಕ್ಷೀ ಚ ಸೂತ್ರಂ ಚ ನಾನಾವೃಕ್ಷರಸಾ ಯಥಾ । ೭೪

೮೧. ಯಥಾ ಸೋಮ್ಯ ಏಕೇನ ಮೃತ್ಪಿಂಡೇನ ಸರ್ವಂ ಮೃನ್ಮಯಂ ವಿಜ್ಞಾತಂ ಸ್ಯಾತ್ । ೯೬

೮೨. ಯಥಾಽಽಪಿಯಂತಿ ತೇಜಾಂಸಿ ಮಹಾತೇಜಸಿ ಭಾಸ್ಕರೇ । ೧೯೦

೮೩. ಯಥೋದಕಂ ಶುದ್ಧೇ ಶುದ್ಧಂ ಆಸಿಕ್ತಂ ತಾದೃಗ್ ಏವ ಭವತಿ । ೧೪೮

೮೪. ಯಮಂತಃಸಮುದ್ರೇ ಕವಯೋ ವಯಂತಿ ಯದಕ್ಷರೇ ಪರಮೇ ಪ್ರಜಾಃ । ೨೧೬

೮೫. ಯಸ್ಯ ಪ್ರಸಾದಾತ್ ಪರಮಾರ್ತಿರೂಪಾತ್ ಅಸ್ಮಾತ್ಸಂಸಾರಾತ್ ಮುಚ್ಯತೆ ನಾಪರೇಣ। ೨೬

೮೬. ಯಸ್ಮಾತ್ ಪರಂ ನಾಪರಮಸ್ತಿ ಕಿಂಚಿತ್ ಯಸ್ಮಾನ್ನಾಣೀಯೋ ನ ಜ್ಯಾಯೋಽಸ್ತಿ ಕಿಂಚಿತ್ । ೨೨೨

೮೭. ಯಂ ಕಾಮಯೇ ತಂ ತಂ ಉಗ್ರಂ ಕೃಣೋಮಿ ತಂ ಬ್ರಹ್ಮಾಣಂ ತಂ ಋಷಿಂ ತಂ ಸುಮೇಧಾಂ । ೨೧೫

೮೮. ಯೇನಾಕ್ರಮಂತ್ಯೃಷಯೋ ಹ್ಯಾಪ್ತಕಾಮಾ ಯತ್ರ ತತ್ಸತ್ಯಸ್ಯ ಪರಮಂ ನಿಧಾನಮ್ ॥ ೧೭೬

೮೯. ಯೋ ವೇದ ನಿಹಿತಂ ಗುಹಾಯಾಂ ಪರಮೇ ವ್ಯೋಮನ್ । ೧೩೨

Rarest Archiver

೯೦. ಯೋಽಸಾವಾದಿತ್ಯೇ ಪುರುಷಃ ಸೋಽಹಮಸ್ಮಿ ಸ ಏವಾಹಮಸ್ಮಿ ॥ ೧೨೩

## ಲ

೯೧. ಲವಣಂ ಏತತ್ ಉದಕೇ ದೋಷಾ ಅವಧಾಯ ಮಾ ಪ್ರಾತಃ
ಉಪಸೀದಥಾ: ಇತಿ । ೪೬

## ವ

೯೨. ವಾಚಾ ವಿರೂಪ ನಿತ್ಯಯಾ । ೧೩
೯೩. ವಾಸುದೇವೋ ವಾ ಇದಮಗ್ರ ಆಸೀತ್ ನ ಬ್ರಹ್ಮಾ ನ ಚ ಶಂಕರಃ । ೨೨೧
೯೪. ವಿಜ್ಞೇಯಂ ಪರಮಂ ಬ್ರಹ್ಮ ಜ್ಞಾಪಿಕಾ ಪರಮಾ ಶ್ರುತಿಃ । ೧೭
೯೫. ವಿಭೇದಜನಕೇಽಜ್ಞಾನೇ ನಾಶಂ ಆತ್ಯಂತಿಕಂ ಗತೇ । ೧೭೨
೯೬. ವಿಷ್ಣುಂ ಸರ್ವಗುಣೈಃ ಪೂರ್ಣಂ ಜ್ಞಾತ್ವಾ ಸಂಸಾರವರ್ಜಿತಃ । ೨೨೯

## ಶ

೯೭. ಶ್ರುತಿರ್ವಾವ ನಿತ್ಯಾ ಅನಿತ್ಯಾವಾವ ಸ್ಮೃತಯೋ ಯಾಶ್ಚಾನ್ಯಾ ವಾಚಃ । ೧೫

## ಸ

೯೮. ಸ ಏಷ ಜೀವೇನಾತ್ಮನಾಽನುಪ್ರಭೂತಃ ಪೇಪೀಯಮಾನಃ
ಮೋದಮಾನಃ ತಿಷ್ಠತಿ । ೬೭
೯೯. ಸ ಏಷ ನೇತಿ। ನೇತಿ । ಆತ್ಮಾಽಗೃಹ್ಯೋ ನ ಹಿ ಗೃಹ್ಯತೇ । ೩೩
೧೦೦. ಸ ಯಥಾ ಶಕುನಿ: ಸೂತ್ರೇಣ ಪ್ರಬದ್ಧೋ ದಿಶಂ ದಿಶಂ ಪತಿತ್ವಾ । ೪೧
೧೦೧. ಸ ಯಶ್ಚಾಯಂ ಪುರುಷೇ ಯಶ್ಚಾಸಾವಾದಿತ್ಯೇ ಸ ಏಕಃ । ೧೨೫
೧೦೨. ಸತ್ಯ ಆತ್ಮಾ ಸತ್ಯೋ ಜೀವಃ ಸತ್ಯಂ ಭಿದಾ ಸತ್ಯಂ ಭಿದಾ
ಸತ್ಯಂ ಭಿದಾ । ೧೩೧
೧೦೩. ಸತ್ಯಃ ಸೋಽಸ್ಯ ಮಹಿಮಾ ಗೃಣೇ ಶವೋ ಯಜ್ಞೇಷು ವಿಪ್ರರಾಜ್ಯೇ ॥ ೧೩೦
೧೦೪. ಸತ್ಯಮೇನಮನು ವಿಶ್ವೇ ಮದಂತಿ । ೧೨೮

Rarest Archiver

೧೦೫. ತಸ್ಯೋಪನಿಷತ್ ಸತ್ಯಸ್ಯ ಸತ್ಯಮ್ ಇತಿ । ೧೦೯

೧೦೬. ಸನ್ಮೂಲಾಃ ಸೋಮ್ಯೇಮಾಃ ಸರ್ವಾಃ ಪ್ರಜಾಃ ಸದಾಯತನಾಃ
ಸತ್ಪ್ರತಿಷ್ಠಾಃ ॥ ೫೭

೧೦೭. ಸರ್ವಂ ಖಲ್ವಿದಂ ಬ್ರಹ್ಮ ತಜ್ಜಲಾನಿತಿ ಶಾಂತ ಉಪಾಸೀತಾಥ । ೮೯

೧೦೮. ಸರ್ವಾನ್ ವೇದಾನ್ ಅಧೀತ್ಯ ಮಹಾಮನಾಃ ಅನೂಚಾನಮಾನೀ
ಸ್ತಬ್ಧಃ ಏಯಾಯ । ೭೯

೧೦೯. ಸರ್ವೇ ವೇದಾ ಹರೇರ್ಭೇದಂ ಸರ್ವಸ್ಮಾತ್ ಜ್ಞಾಪಯಂತಿ ಹಿ । ೧೧೧

೧೧೦. ಸರ್ವೋತ್ಕರ್ಷೇ ದೇವದೇವಸ್ಯ ವಿಷ್ಣೋಃ ಮಹಾತಾತ್ಪರ್ಯಂ । ೨೨

೧೧೧. ಸರ್ವೋತ್ತಮಂ ಸರ್ವದೋಷವ್ಯಪೇತಂ ಗುಣೈರಶೇಷೈಃ
ಪೂರ್ಣಮನ್ಯಂ ಸಮಸ್ತಾತ್ । ೨೧೩

೧೧೨. ಸಹಸ್ರಧಾ ಮಹಿಮಾನಃ ಸಹಸ್ರಂ ಯಾವದ್ ಬ್ರಹ್ಮವಿಷ್ಠಿತಂ
ತಾವತೀ ವಾಕ್। ೧೮

೧೧೩. ಸೋಽಶ್ನುತೇ ಸರ್ವಾನ್ ಕಾಮಾನ್ ಸಹ ಬ್ರಹ್ಮಣಾ ವಿಪಶ್ಚಿತಾ । ೨೩೦

೧೧೪. ಸ್ರಷ್ಟೃತ್ವಾತ್ ಆಶ್ರಯತ್ವಾತ್ ಚ ಮುಕ್ತಾನಾಂ ಚ ಪ್ರತಿ ಪ್ರತಿ । ೫೯

೧೧೫. ಸ್ವಮಪೀತೋ ಭವತಿ । ೫೩

Rarest Archiver

ಭಾರತೀಯ ಸಂಸ್ಕೃತಿಯು ಪ್ರಸ್ಥಾನತ್ರಯಗಳೆಂಬ ಬೇರನ್ನು ಆಶ್ರಯಿಸಿ ನಿಂತಿರುವ ಸನಾತನ ಪ್ರಜ್ಞೆಯುಳ್ಳ ಮಹಾ ವೃಕ್ಷ. ಈ ವೃಕ್ಷವನ್ನು ಆಧರಿಸಿಯೇ ಜಗದ್ವಿಖ್ಯಾತರಾದ ದಾರ್ಶನಿಕರು ತಮ್ಮ ಸಿದ್ಧಾಂತವನ್ನು ಪ್ರಸಾರಗೊಳಿಸುವ ಸಾಹಿತ್ಯಲತೆಯನ್ನು ಹಬ್ಬಿಸಿದ್ದು. ವೇದಾಂತ ಸಾಹಿತ್ಯಕೃಷಿ ಪ್ರಪಂಚದಲ್ಲಿ ಅತ್ಯಂತ ವಿಶಿಷ್ಟವಾದ ಮತ್ತು ವೈಜ್ಞಾನಿಕವಾದ ರೀತಿಯಲ್ಲಿ ಪ್ರಮೇಯಗಳನ್ನು ವಿವರಿಸುವ ಮೂಲಕ ಖ್ಯಾತರಾದವರು ಶ್ರೀಆನಂದತೀರ್ಥರು. ಅರ್ಥವಿವರಣೆಯಲ್ಲಿ ಅತ್ಯಂತ ವಿಸ್ತಾರವಾದ ಹರಹನ್ನು ಹೊಂದಿದ ಆನಂದತೀರ್ಥರ ಈ ಜ್ಞಾನಲತೆಯ ಕುಸುಮಗಳನ್ನು ಆಯ್ದು, ಅದರ ಸೌರಭವನ್ನು ಜನಸಾಮಾನ್ಯರೆಡೆಗೆ ತಂದಿದ್ದು ಶ್ರೀಜಯತೀರ್ಥರು-ಶ್ರೀವಿಜಯೀಂದ್ರತೀರ್ಥರು-ಶ್ರೀರಾಘವೇಂದ್ರತೀರ್ಥ ಗುರುಸಾರ್ವಭೌಮರಂತಹ ಮಹಾನ್ ಚೇತನರು ಹಾಗು ಶ್ರೀಪುರಂದರ-ಕನಕ-ವಿಜಯದಾಸರಾದಿಯಾದ ಅಸಂಖ್ಯ ಹರಿದಾಸರುಗಳು. ಇದಕ್ಕೆ ಪೂರಕವಾಗಿ ಜಗದ್ಗುರುಗಳ ಮೂಲಸಂಸ್ಥಾನವೇ ಆದ ಶ್ರೀರಾಘವೇಂದ್ರಸ್ವಾಮಿಗಳವರ ಮಠವಂತೂ ಜ್ಞಾನಕೃಷಿಗೆ ಪ್ರಾಚೀನಕಾಲದಿಂದಲೂ ಅವ್ಯಾಹತವಾದ ಪೋಷಣೆ ನೀಡುತ್ತಾ ಬಂದಿದೆ.

ಸರ್ವಜ್ಞಪೀಠದಲ್ಲಿ ಮಂಡಿಸಿ ವೇದಾಂತಪ್ರಪಂಚವನ್ನು ಬೆಳಗಿದ ಶ್ರೀರಘುನಂದನತೀರ್ಥರ 500ನೇ ವರ್ಷದ ಹಾಗೂ ಶ್ರೀರಾಘವೇಂದ್ರಸ್ವಾಮಿಗಳವರ 333ನೇ ಆರಾಧನಾ ಉತ್ಸವದ ಅಂಗವಾಗಿ 2003-2004ನೇ ವರ್ಷವನ್ನು ಶ್ರೀರಘುನಂದನ-ಶ್ರೀರಾಘವೇಂದ್ರವರ್ಷ ಎಂಬುದಾಗಿ ಶ್ರೀಮಠದ ಪ್ರಸ್ತುತ ಪೀಠಾಧಿಪತಿಗಳಾದ 108 ಶ್ರೀಮತ್ಸುಶಮೀಂದ್ರತೀರ್ಥ ಶ್ರೀಪಾದಂಗಳವರು ಘೋಷಿಸಿ ಹಲವಾರು ವೈವಿಧ್ಯಮಯವಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡರು. ಏಕೋತ್ತರಶತಗ್ರಂಥಮಾಲೆಯು ಈ ಕಾರ್ಯಕ್ರಮದ ಪ್ರಮುಖ ಅಂಗ. ದೇಶದೆಲ್ಲೆಡೆ ವಿವಿಧ ಭಾಗಗಳಲ್ಲಿ ಅರಳಿದ್ದ, ಅರಳಿದ್ದರೂ ಜನಮಾನಸಕ್ಕೆ ಗೋಚರವಾಗದೆ ಗುಪ್ತವಾಗುಳಿದಿದ್ದ ಹಲವಾರು ಅಪೂರ್ವ ಗ್ರಂಥಕುಸುಮಗಳನ್ನು ಆಯ್ದು ತಂದು ಈ ಮಾಲೆಯನ್ನು ಪೋಣಿಸಿದೆ. ಸಂಸ್ಕೃತ, ಕನ್ನಡ, ತೆಲುಗು ಹಾಗೂ ಆಂಗ್ಲಭಾಷೆಯ ಉತ್ಕೃಷ್ಟ ಕುಸುಮಗಳನ್ನೊಳಗೊಂಡು ಈ ಮಾಲೆಯು ವೈಜಯಂತಿಯೆಂದೇ ನಮ್ಮ ಭಾವನೆ. ಈ ವೈಜಯಂತಿಯ ಒಂದು ಉತ್ಕೃಷ್ಟ ಕುಸುಮವೇ ಈಗ ನಿಮ್ಮ ಕರಗ್ರಾಹಿಯಾಗಿದೆ.

ಒಟ್ಟಿನಲ್ಲಿ ಹೇಳುವುದಾದರೆ, ಈ ಸನಾತನವಾದ ಜ್ಞಾನವೃಕ್ಷವನ್ನು ಅಲುಗಾಡಿಸುವ ಕಿರು ಪ್ರಯತ್ನವನ್ನು ನಾವು ಮಾಡಿದ್ದೇವೆ. ಕೆಳಗೆ ಬಿದ್ದ ಫಲ ಹಾಗು ಪುಷ್ಪಗಳು ಜಿಜ್ಞಾಸುಗಳ ಹೃನ್ಮನೋಮಂದಿರಗಳನ್ನು ಅಲಂಕರಿಸಿದರೆ ಸಾಹಿತ್ಯಕೃಷಿಕರ ಶ್ರಮ ಸಾರ್ಥಕವಾಗಿ ಶ್ರೀಹರಿವಾಯುಗುರುಗಳ ಸಂಪ್ರೀತಿಗೆ ಪಾತ್ರವಾದೀತು.

ರಾಜಾ. ಎಸ್. ರಾಜಗೋಪಾಲಾಚಾರ್ಯ
ಶ್ರೀಪಾದಂಗಳವರ ಆಪ್ತಕಾರ್ಯದರ್ಶಿಗಳು